# ಚಾರಿತ್ರಿಕ ಜನಪದ ಕಥನ ಕಾವ್ಯಗಳು

ಸಂಗ್ರಹ : ನಾಡೋಜ ಎಚ್. ಎಲ್. ನಾಗೇಗೌಡ



ತ್ರೈವಾರ್ಷಿಕ ಜಾನಪದ ಯೋಜನೆ ಪುಸ್ತಕ ಮಾಲೆ - ೩.

# ಚಾರಿತ್ರಿಕ ಜನಪದ ಕಥನ ಕಾವ್ಯಗಳು

ಸಂಗ್ರಾಹಕರು :

**ನಾಡೋಜ ಎಚ್.ಎಲ್. ನಾಗೇಗೌಡ**

ಸಂಪಾದಕರು :

**ಪ್ರೊ|| ಡಿ. ಲಿಂಗಯ್ಯ**

**ಕರ್ನಾಟಕ ಜಾನಪದ ಪರಿಷತ್ತು**

ನಂ. ೧, ಕರ್ನಾಟಕ ಸರ್ಕಾರಿ ನೌಕರರ ವಸತಿ ಬಡಾವಣೆ
ಎಂ.ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು - ೫೬೦ ೦೫೪

**CHARITRIKA JANAPADA KATHANA KAVYAGALU**-A collection of Historical folk narrative poetries. Collected by **: H. L. Nage Gowda.** Edited by Prof. **D. Lingaiah.** Published by **: Karnataka Janapada Parishat,** No. 1, Karnataka Government Employee's Residential Layout, Near M. S. Ramaiah Hospital Gate, New BEL Road, Bangalore-560 054. Phone : 080-23605033, Janapada Loka . 7201143, 7271555

ಪ್ರಥಮ ಮುದ್ರಣ : ೨೦೦೮

ಪುಟಗಳು : ೨೮೮

ಪ್ರತಿಗಳು : ೧೦೦೦

ಬೆಲೆ : ರೂ. ೧೫೦ (ಒಂದು ನೂರ ಐವತ್ತು ರೂಪಾಯಿ)

ಹಕ್ಕುಗಳನ್ನು ಕಾಯ್ದಿರಿಸಿದೆ

**ಗ್ರಂಥ ಪ್ರಕಟಣಾ ಸಲಹಾ ಸಮಿತಿ**

| | |
|---|---|
| **ನಾಡೋಜ ಡಾ. ಜಿ. ನಾರಾಯಣ** | ಅಧ್ಯಕ್ಷರು |
| **ಶ್ರೀ ಟಿ. ತಿಮ್ಮೇಗೌಡ** | ಸದಸ್ಯರು |
| **ಶ್ರೀಮತಿ ಇಂದಿರಾ ಬಾಲಕೃಷ್ಣ** | ಸದಸ್ಯರು |
| **ಶ್ರೀ ಗೊ. ರು. ಚನ್ನಬಸಪ್ಪ** | ಸದಸ್ಯರು |
| **ನಾಡೋಜ ಡಾ. ಸಿದ್ಧಲಿಂಗಯ್ಯ** | ಸದಸ್ಯರು |
| **ಡಾ. ಎಂ. ಎ. ಜಯಚಂದ್ರ** | ಸದಸ್ಯರು |
| **ಪ್ರೊ. ಡಿ. ಲಿಂಗಯ್ಯ** | ಸಂಪಾದಕರು |
| **ಡಾ. ಚಕ್ಕೆರೆ ಶಿವಶಂಕರ್** | ಕಾರ್ಯದರ್ಶಿ–ಸಂಚಾಲಕರು |

ಮುದ್ರಕರು
**ಚಂದನ ಪ್ರಿಂಟರ್ಸ್**
ನಂ. ೫೭, ವಿನಾಯಕ ಕಾಂಪ್ಲೆಕ್ಸ್, ಸೆಲ್ಲರ್
೮೦ ಅಡಿ ರಸ್ತೆ, ೯ನೇ ಮುಖ್ಯರಸ್ತೆ
ಶ್ರೀನಿವಾಸನಗರ, ಬ್ಯಾಂಕ್ ಕಾಲೋನಿ
ಬೆಂಗಳೂರು–೫೬೦ ೦೫೦

# ಪರಿವಿಡಿ


ಅಧ್ಯಕ್ಷರ ಮಾತು
ಪ್ರಸ್ತಾವನೆ

೧. ಮಾಗಡಿ ಕೆಂಪೇಗೌಡನ ಕಥೆ ೧
೨. ಲಿಂಗರಾಜಮ್ಮನ ಕಥೆ ೧೧
೩. ಮಡಿಕೇರಿ ಲಿಂಗರಾಜ ೭೬
೪. ಲಕ್ಕಣ್ಣ ಈರಣ್ಣ ೧೦೭
೫. ಸರ್ಜಪ್ಪನಾಯಕ ೧೨೫
೬. ಬಸವರಾಯ ೧೬೬
೭. ಹರಳಯ್ಯ ೨೦೪
೮. ಚೆನ್ನಿಗರಾಮ ೨೦೯
೯. ಸಿಂಧೂರ ಲಕ್ಷ್ಮಣ ೨೧೯


## ಅನುಬಂಧ


ರಣಭೈರೇಗೌಡ ೨೩೦
ಪಿರಿಯಾಪಟ್ಟಣದ ವೀರರಾಜ ೨೩೧
ಕೆಂಪೇಗೌಡನ ಕಾಲುಚಿಟುಗು ಕೋಲುಪದ ೨೩೪
ಮಾಗಡಿ ಕೆಂಪೇಗೌಡನ ಜಂಪು ಕೋಲುಪದ ೨೩೫

ಅರ್ಥ ಕೋಶ ೨೩೭

# ಅಧ್ಯಕ್ಷರ ಮಾತು

ಭಾರತದ ಎಲ್ಲಾ ರಾಜ್ಯಗಳಲ್ಲಿರುವಂತೆ ಕರ್ನಾಟಕದಲ್ಲೂ ಸಮೃದ್ಧವಾದ, ವೈವಿಧ್ಯವಾದ ಜಾನಪದವಿದೆ. ಅದು ಗರಿಕೆಯ ಬೇರಿನಂತೆ ಬದುಕಿನ ಎಲ್ಲಾ ಮಜಲುಗಳಿಗೂ ಹರಡಿಕೊಂಡಿದೆ. ಜಾನಪದವಿಲ್ಲದೆ ಜನಜೀವನವಿಲ್ಲ ಎಂಬಂತೆ ಬದುಕಿನ ಅವಿಭಾಜ್ಯ ಅಂಗವಾಗಿದೆ. ಕರ್ನಾಟಕದ ಸಮಗ್ರ ಸಂಸ್ಕೃತಿ ಜಾನಪದ ಆಶಯದಿಂದ ಕೂಡಿದೆ. ಜನಪದ ಸಾಹಿತ್ಯ ಭಾಷೆ ಕಲೆ ವಿಜ್ಞಾನ ಆಚರಣೆ ಆರಾಧನೆ ಆಹಾರವಿಹಾರ ವೇಷ ಭೂಷಣ ಕಸಬು ಐತಿಹ್ಯ ಪುರಾಣ ಸಂಸ್ಕೃತಿ ಸಂವಹನ ಮೊದಲಾದವು ಬದುಕಿನ ನೆಲೆಯೊಡನೆ ಮಡುಗಟ್ಟಿ ಅಮೃತಪ್ರಾಯವಾಗಿ ಜೀವನೋತ್ಸಾಹ ತುಂಬುತ್ತಿವೆ. ಇವುಗಳ ಸಂಗ್ರಹ ಸಂಪಾದನೆ ಅಧ್ಯಯನ ಅಧ್ಯಾಪನ ಅನ್ವಯಿಕತೆ ಜಾಗತಿಕ ತುರ್ತಾಗಿದೆ. ಜಾನಪದದ ಅರಿವಿನಿಂದ ಶಿಷ್ಟಪದ ಸುಪುಷ್ಟವಾಗಿ ಸುಸಂಸ್ಕೃತವಾಗಿ ಬೆಳೆಯುವ ಸಾಧ್ಯತೆಯಿದೆ.

ಜಾನಪದ ರೂವಾರಿ, ಜಾನಪದ ಜಂಗಮ, ನಾಡೋಜ ಎಚ್.ಎಲ್. ನಾಗೇಗೌಡರು ಸಮಗ್ರ ಜಾನಪದದ ಅಭಿವೃದ್ಧಿಗಾಗಿ 'ಕರ್ನಾಟಕ ಜಾನಪದ ಪರಿಷತ್ತು' ಸಂಸ್ಥೆಯನ್ನು ಹುಟ್ಟುಹಾಕಿದರು. ಜಾನಪದದ ಪ್ರತ್ಯಕ್ಷ ದರ್ಶನಕ್ಕೆ 'ಜಾನಪದ ಲೋಕ'ವನ್ನು ಪ್ರಾರಂಭಿಸಿದರು. ಜಾನಪದದ ವೈಜ್ಞಾನಿಕ ಅಧ್ಯಯನಕ್ಕೆ 'ಜಾನಪದ ಸಿರಿಭುವನ'ವನ್ನು ಸ್ಥಾಪಿಸಿದರು. ತಮ್ಮ ಜೀವಿತದ ಬಹುಭಾಗವನ್ನು ಜಾನಪದಕ್ಕೆ ಮೀಸಲಿಟ್ಟು, ಕನ್ನಡ ನಾಡಿನಲ್ಲೆಲ್ಲಾ ಸಂಚರಿಸಿ ಅಪಾರವಾದ, ಅಪರೂಪವಾದ, ವೈವಿಧ್ಯಮಯವಾದ ಜನಪದ ಸಾಹಿತ್ಯವನ್ನು ಸಂಗ್ರಹಿಸಿದರು.

ಎಚ್.ಎಲ್. ನಾಗೇಗೌಡರ ಜಾನಪದದ ಕನಸನ್ನು ನನಸುಮಾಡಲು, ಕರ್ನಾಟಕ ಜಾನಪದ ಪರಿಷತ್ತು 'ತ್ರೈವಾರ್ಷಿಕ ಜಾನಪದ ಯೋಜನೆ'ಯನ್ನು ಹಮ್ಮಿಕೊಂಡು ಕಾರ್ಯೋನ್ಮುಖವಾಗಿದೆ. ಅದರ ಹಲವು ಬೃಹತ್ ಯೋಜನೆಗಳಲ್ಲಿ ನಾಗೇಗೌಡರು ಸಂಗ್ರಹಿಸಿದ ಜನಪದ ಸಾಹಿತ್ಯ ಪ್ರಕಟಣೆಯೂ ಒಂದು. ತ್ರೈವಾರ್ಷಿಕ ಜಾನಪದ ಯೋಜನೆಯ ಪುಸ್ತಕ ಮಾಲೆಯ ಮೂರನೆಯ ಕುಸುಮವಾಗಿ 'ಚಾರಿತ್ರಿಕ ಜನಪದ ಕಥನ ಕಾವ್ಯಗಳು' ಗ್ರಂಥ ಪ್ರಕಟವಾಗುತ್ತಿದೆ.

ಎಚ್.ಎಲ್. ನಾಗೇಗೌಡರು ಧ್ವನಿಮುದ್ರಣದ ಮೂಲಕ ಸಂಗ್ರಹಿಸಿದ್ದ ಚಾರಿತ್ರಿಕ ಜನಪದ ಕಥನ ಕಾವ್ಯಗಳನ್ನು ಲಿಪ್ಯಂತರ ಮಾಡಿಸಿ, ಸಂಯೋಜಿಸಿ, ಸಂಪಾದಿಸಲಾಗಿದೆ. ಈ ಕಾರ್ಯವನ್ನು ಪ್ರೊ ಡಿ. ಲಿಂಗಯ್ಯನವರು ಮುತುವರ್ಜಿಯಿಂದ ನಿರ್ವಹಿಸಿದ್ದಾರೆ. ಅಧ್ಯಯನ ಕಾರರಿಗೆ ಅನುಕೂಲವಾಗುವಂತೆ ಸುದೀರ್ಘವಾದ ಪ್ರಸ್ತಾವನೆಯನ್ನು ಬರೆದಿದ್ದಾರೆ; ಕಥಾ ಸಾರಾಂಶ, ಅರ್ಥಕೋಶ, ಗಾಯಕರ ಪರಿಚಯವನ್ನು ನೀಡಿದ್ದಾರೆ. ಕನ್ನಡ ಜನಪದ ಸಾಹಿತ್ಯಾಸಕ್ತರು ಈ ಗ್ರಂಥವನ್ನು ಓದಿ ಸದುಪಯೋಗ ಪಡಿಸಿಕೊಳ್ಳಬೇಕು, ಮುಂದಿನ ಪ್ರಕಟಣೆಗಳಿಗೆ ಪ್ರೋತ್ಸಾಹಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಬೆಂಗಳೂರು
೧-೮-೨೦೦೭

**ಜಿ. ನಾರಾಯಣ**
ಅಧ್ಯಕ್ಷ
ಕರ್ನಾಟಕ ಜಾನಪದ ಪರಿಷತ್ತು

# ಪ್ರಸ್ತಾವನೆ

## ೧

ವಿಶ್ವದ ಎಲ್ಲಾ ಭಾಗಗಳಲ್ಲೂ ಎಲ್ಲಾ ಜನಾಂಗಗಳಲ್ಲೂ ಚಾರಿತ್ರಿಕ ಜನಪದ ಕಥನ ಕಾವ್ಯಗಳುಂಟು. ಒಂದಾದರೂ ಚಾರಿತ್ರಿಕ ಜನಪದ ಕಥನಕಾವ್ಯವಿಲ್ಲದ ದೇಶವಿಲ್ಲ, ಜನರಿಲ್ಲ. ಕರ್ನಾಟಕವೂ ಕನ್ನಡಿಗರೂ ಇದಕ್ಕೆ ಹೊರತಲ್ಲ. ಕನ್ನಡ ಜನಪದ ಕಥನಕಾವ್ಯಗಳಲ್ಲಿ ಚಾರಿತ್ರಿಕ ಜನಪದ ಕಥನಕಾವ್ಯಗಳದು ಗಮನಾರ್ಹ ಪಾಲು. ಕನ್ನಡ ನಾಡಿನಲ್ಲಿ ವಿಪುಲವಾದ ಜನಪದ ಕಥನಕಾವ್ಯಗಳು ಇರಬಹುದಾದರೂ ಸಂಗ್ರಹವಾಗಿರುವುದು ಬಹಳ ಕಡಮೆ. ಕರ್ನಾಟಕದಲ್ಲಿ ಅನೇಕ ಚಾರಿತ್ರಿಕ ಘಟನೆಗಳು ಘಟಿಸಿವೆ; ಹಲವು ಚಾರಿತ್ರಿಕ ವ್ಯಕ್ತಿಗಳು ಆಗಿಹೋಗಿದ್ದಾರೆ. ಎಲ್ಲವೂ ಎಲ್ಲರೂ ಕಾವ್ಯರೂಪಕ್ಕೆ ದಕ್ಕುತ್ತಾರೆಂದು ಹೇಳಲಾಗದಿದ್ದರೂ ಇದ್ದಿರಬಹುದಾದದ್ದೂ ಸಂಗ್ರಹವಾಗಿಲ್ಲದಿರುವುದಕ್ಕೆ ಕಾರಣ ಸ್ಪಷ್ಟವಿಲ್ಲ.

ಜನಪದರು ಎಂಥ ಘಟನೆಗಳನ್ನು, ಎಂಥ ಚಾರಿತ್ರಿಕ ವ್ಯಕ್ತಿಗಳನ್ನು ತಮ್ಮ ಕಾವ್ಯಾಭಿವ್ಯಕ್ತಿಗೆ ಬಳಸಿಕೊಳ್ಳುತ್ತಾರೆ ಎಂಬುದು ಕುತೂಹಲಕಾರಿ ವಿಷಯವಾಗಿದೆ. ಆಳಿದವರೆಲ್ಲ ಹಾಡಿಸಿಕೊಳ್ಳುವುದಿಲ್ಲ. ಅದಕ್ಕೆ ಜನಪದರದೇ ಆದ ಮಾನದಂಡವಿದೆ. ಎಷ್ಟೋ ವೇಳೆ ರಾಜ ಮಹಾರಾಜರಿಗಿಂತ ಅಧೀನ ಸಾಮಂತರು ಪಾಳೆಯಗಾರರು ಜನಪದರ ವಸ್ತುವಾಗುತ್ತಾರೆ. ಕಣ್ಣಿಗೆ ಕಾಣದ ರಾಜಾಧಿರಾಜರಿಗಿಂತ, ತಮ್ಮ ಹತ್ತಿರವಿದ್ದು ತಮ್ಮ ಕಷ್ಟಸುಖಗಳಿಗೆ ಸ್ಪಂದಿಸಿದ ಸಾಮಂತರು ಜನಪದರ ಆರಾಧ್ಯಮಹನೀಯರಾಗುತ್ತಾರೆ. ಜನಹಿತ ಕಾರ್ಯ ಮಾಡುವವರಿಗೆ, ಮಾನವೀಯತೆ ಮೆರೆಯುವ ಮಹನೀಯರಿಗೆ ಮೊದಲ ಮನ್ನಣೆ.

ಚಾರಿತ್ರಿಕವ್ಯಕ್ತಿ ಮತ್ತು ಘಟನೆಯನ್ನು ಕುರಿತು ಜನಪದರು ಕಟ್ಟಿ ಪ್ರಚುರಪಡಿಸಿದ ಮೌಖಿಕ ಮತ್ತು ನವಮೌಖಿಕ ಕಥನವನ್ನು ಚಾರಿತ್ರಿಕ ಜನಪದ ಕಥನಕಾವ್ಯ ಎನ್ನಬಹುದು. ಇತಿಹಾಸದ ಯಾವುದೋ ಒಂದು ಎಳೆಯನ್ನು ಹಿಡಿದು ಕಾಲ್ಪನಿಕ ಅಂಶಗಳನ್ನು ಬೆರೆಸಿ ವಿಸ್ಮಯಕಾರಿಯಾದ ಆಕರ್ಷಕವಾದ ಅಂಬರವನ್ನು ನೇಯುವುದು ಜನಪದ ಗಾಯಕರ ಜಾಯಮಾನ. ಚಾರಿತ್ರಿಕ ಜನಪದ ಕಥನಕಾವ್ಯಗಳಲ್ಲಿ ಐತಿಹಾಸಿಕ ಸತ್ಯಕಥೆ ಕಾಲುಭಾಗವಿದ್ದರೆ, ಕಲ್ಪನೆ ಮುಕ್ಕಾಲುಭಾಗ ಇರುತ್ತದೆ. ಶುದ್ಧ ಇತಿಹಾಸಕಾರರು ಬಿಟ್ಟ ಅಥವ ಮರೆತ ಎಷ್ಟೋ ವಿಷಯಗಳನ್ನು ಜನಪದರು ಜೀವಂತವಾಗಿರಿಸುತ್ತಾರೆ. ಇತಿಹಾಸದ ಪುನಾಸೃಷ್ಟಿಗೆ ಜನಪದರ ಕಥೆ ಸಾಕಷ್ಟು ಮಾಹಿತಿ ಒದಗಿಸುತ್ತದೆ. ಅದರಲ್ಲೂ ಸಾಂಸ್ಕೃತಿಕ ಇತಿಹಾಸಕ್ಕೆ ಜನಪದದ ಕೊಡುಗೆ ಅಪಾರ. ಚಾರಿತ್ರಿಕ ವ್ಯಕ್ತಿಗಳ ಧೀರೋದಾತ್ತ ವ್ಯಕ್ತಿತ್ವದ ಕಂಡರಿಕೆಗೆ ಭೌತಿಕ ಇಹಾಸಕಾರರಿಗಿಂತ ಜನಪದರೇ ಹೆಚ್ಚು ಸಹಾಯಕರಾಗುತ್ತಾರೆ.

ಜನಸಾಮಾನ್ಯರ ದೃಷ್ಟಿಯಲ್ಲಿ ಇತಿಹಾಸ ಸೃಷ್ಟಿಸುವವರಿಗೆ ಜನಪದ ಕಥನ ಉತ್ತಮ ಆಕರವಾಗುತ್ತದೆ. ಮಾನವೀಯ ಔನ್ನತ್ಯವನ್ನು ಪ್ರಜ್ವಲಿಸಿದ ಚಾರಿತ್ರಿಕ ವ್ಯಕ್ತಿಗಳು, ಸಾಂಸ್ಕೃತಿಕ ವೀರರು, ಸಾಧು ಸತ್ಪುರುಷರು, ಪಾಳೆಯಗಾರರು, ಸ್ವಾತಂತ್ರ್ಯ ಹೋರಾಟಗಾರರು, ಸಮಾಜ ಸುಧಾರಕರು, ಜನೋಪಕಾರಿಗಳು ಸಾಮಾನ್ಯವಾಗಿ ಜನಪದ ಕಥನಗಳ ವಸ್ತುವಾಗುತ್ತಾರೆ.

ಯುದ್ಧ ಹೋರಾಟ, ಕೆರೆಕುಂಟೆ ಕಾಲುವೆ ನಿರ್ಮಾಣ, ಧರ್ಮ ದೇವರ ಪರಿಕಲ್ಪನೆ, ಪ್ರಕೃತಿವಿಕೋಪ ಮೊದಲಾದವೂ ಚಾರಿತ್ರಿಕ ಕಥನಗಳಿಗೆ ತಳಕುಹಾಕಿಕೊಳ್ಳುತ್ತವೆ. ಮನುಕುಲದ ಗತಕಾಲದ ಬದುಕಿನ ಸಂಕೇತವಾಗಿ ಇವು ಕಾಣಿಸಿಕೊಳ್ಳುವುದುಂಟು. ಇವುಗಳಲ್ಲಿ ಅಂಕಿ ಅಂಶಗಳಿಗಿಂತ ಪರಿಣಾಮಕ್ಕೆ, ಬದುಕಿನ ನಿರ್ಣಯಕ್ಕೆ, ಶಾಶ್ವತ ಮೌಲ್ಯಕ್ಕೆ ಹೆಚ್ಚು ಒತ್ತು ಇರುತ್ತದೆ. ಸಂಸ್ಕೃತಿ ಸಂವರ್ಧನೆಗೆ ಸ್ಫೂರ್ತಿಯಾಗಬಹುದಾದ ಇವು ಜನಪದ ಸೃಜನಶೀಲತೆಗೆ, ಕಲೆಗಾರಿಕೆಗೆ ಸ್ಫೂರ್ತಿಯಾಗಿವೆ. ಇವುಗಳಲ್ಲಿ ಸಾಹಿತ್ಯ ಪ್ರಯೋಜನವುಂಟು; ಸಂಶೋಧನ ಪ್ರಯೋಜನವುಂಟು; ಸಾಂಸ್ಕೃತಿಕ ಪ್ರಯೋಜನವೂ ಉಂಟು. ಮನೋರಂಜನೆಯ ಅಂಶವೂ ಇಲ್ಲದಿಲ್ಲ.

ಜಾಗತಿಕ ಇತಿಹಾಸಕಾರರು ಮಹಾಸಾಮ್ರಾಜ್ಯವನ್ನು, ಮಹಾಸಾಮ್ರಾಟರನ್ನು ತಮ್ಮ ಬರವಣಿಗೆಗೆ ವಿಶೇಷವಾಗಿ ಗಮನಿಸುತ್ತಾರೆ. ಪಾಳೆಯಪಟ್ಟುಗಳ, ಸಾಮಂತರ ವಿಷಯಗಳನ್ನು ನಿರ್ಲಕ್ಷಿಸುತ್ತಾರೆ. ಶಿಷ್ಟರು ನಿರ್ಲಕ್ಷಿಸಿದುದನ್ನು ಜನಪದರು ಕೈಗೆತ್ತಿಕೊಂಡು ಜೀವಂತವಾಗಿಸುತ್ತಾರೆ. ಜನಪದದಲ್ಲಿ ಇಂಥದ್ದೇ ಬಹುಪಾಲಿದೆ.

ಈಚೆಗೆ 'ಮೌಖಿಕ ಚರಿತ್ರೆ','ನವಮೌಖಿಕ ಚರಿತ್ರೆ' ಎಂಬ ಮಾತುಗಳು ಹೆಚ್ಚಾಗಿ ಕೇಳಿಬರುತ್ತಿವೆ. ಜನಪದರ ಬಾಯಿಮಾತಿನಲ್ಲಿರುವ ಚರಿತ್ರೆಯೇ ಮೌಖಿಕ ಚರಿತ್ರೆ. ಇದರ ಮಾಹಿತಿಯನ್ನು ಕಲೆಹಾಕಬೇಕು, ಇತಿಹಾಸದ ಪುನಾಸೃಷ್ಟಿಗೆ ಬಳಸಿಕೊಳ್ಳಬೇಕು ಎಂಬುದು ಉದ್ದೇಶ. ಜನಪದ ಐತಿಹ್ಯ, ಕಥೆ, ಹಾಡುಗಳಲ್ಲಿ ಎಷ್ಟೋ ಚಾರಿತ್ರಿಕಾಂಶಗಳು ಹುದುಗಿರುತ್ತವೆ. ಇವುಗಳ ಅಭ್ಯಾಸದಿಂದ ಉಪಯೋಗವಿದೆ. ಚರಿತ್ರೆ ಒಂದೇ ಅಲ್ಲ ಯಾವುದೇ ಅಧ್ಯಯನ ಶಿಸ್ತಿಗೂ ಮೌಖಿಕ ಚರಿತ್ರೆಯನ್ನು ಧಾರಾಳವಾಗಿ ಬಳಸಿಕೊಳ್ಳಬಹುದು. ಉದಾಹರಣೆಗೆ ಜನಪದ ವೈದ್ಯಕ್ಕೆ ಸಂಬಂಧಿಸಿದ ಮೌಖಿಕ ಚರಿತ್ರೆ ನೀಡುವ ಮಾಹಿತಿ ಬೆರಗುಹುಟ್ಟಿಸುತ್ತದೆ. ಜಾನಪದದ ವಿರಾಡ್ರೂಪದ ಮೀಮಾಂಸೆಯಿಂದ ಏನೆಲ್ಲ ಆಲೋಚನೆಗಳಿಗೆ ಅವಕಾಶವಾಗಿದೆ. ಚಾರಿತ್ರಿಕ ಜನಪದ ಕಥನಕಾವ್ಯಗಳಲ್ಲಿ ದಟ್ಟವಾದ ಮೌಖಿಕ ಚರಿತ್ರೆಯ ಅಂಶಗಳಿರುವುದನ್ನು ಮನಗಾಣಬಹುದು.

ಚಾರಿತ್ರಿಕ ಜನಪದ ಕಥನಕಾವ್ಯಗಳನ್ನು ಹಾಡುವ, ಸ್ಮರಿಸಿಕೇಳ್ಳುವ ಸಂದರ್ಭಗಳೂ ಇಲ್ಲದಿಲ್ಲ. ಚಾರಿತ್ರಿಕ ವ್ಯಕ್ತಿಗಳ ಪುಣ್ಯಸ್ಮರಣೆಯ ಸಂದರ್ಭದಲ್ಲಿ, ಆದರ್ಶದ ಅನುಸರಣೆಯ ಸಂದರ್ಭದಲ್ಲಿ, ನವಪೀಳಿಗೆಯ ಉದಾತ್ತ ಶಿಕ್ಷಣ ಸಂದರ್ಭದಲ್ಲಿ ಈ ಕಥನಗಳು ಉಪಯೋಗಕ್ಕೆ ಬರುತ್ತವೆ.

ಕನ್ನಡ ಜನಪದ ಕಥನಕಾವ್ಯಗಳನ್ನು ವೃತ್ತಿಗಾಯಕರೂ ಹವ್ಯಾಸಿ ಗಾಯಕರೂ ಪೋಷಿಸಿದ್ದಾರೆ. ಇವುಗಳಲ್ಲಿ ನವರಸಗಳುಂಟು. ವೀರ, ರೌದ್ರ, ಭಯಾನಕ, ಬೀಭತ್ಸ, ಅದ್ಭುತ ರಸಗಳ ಆರ್ಭಟ ಅಧಿಕ. ಕರುಣರಸವೂ ಮಡುಗಟ್ಟುವುದುಂಟು. ಯುದ್ಧ ವರ್ಣನೆ ಉತ್ಸಾಹಶಾಲಿಯಾಗಿರುತ್ತದೆ. ಜನಪದರಿಗೆ ಸಾಹಸ ಹೆಚ್ಚು ಪ್ರಿಯ. ರಸ ಯಾವುದೇ ಆಗಲಿ ಅದನ್ನು ಅನುಭವಿಸಿ ತನ್ಮಯವಾಗಿ ಹಾಡುವುದು ಎದ್ದುಕಾಣುತ್ತದೆ. ಧೀರೋದಾತ್ತ ವ್ಯಕ್ತಿತ್ವದ ದುರಂತ ನಾಯಕನಾಯಕಿಯರ ಪಾತ್ರಪೋಷಣೆಯಲ್ಲಿ ಜಾನಪದೀಯತೆ

ದಟ್ಟವಾಗಿರುತ್ತದೆ. ಜನಪದರಿಗೆ ಸುಖಾಂತ ಪ್ರಿಯವಾದರೂ ದುರಂತತೆಯನ್ನು ದಾರುಣವಾಗಿಯೇ ಚಿತ್ರಿಸುತ್ತಾರೆ. ಚಾರಿತ್ರಿಕ ಕಥನಕಾವ್ಯಗಳಲ್ಲಿ ದುರಂತ ವರ್ಣನೆಯೇ ಹೆಚ್ಚಾಗಿರುತ್ತದೆ.

ಚಾರಿತ್ರಿಕ ಜನಪದ ಕಥನಕಾವ್ಯಗಳಲ್ಲಿ ಸ್ತ್ರೀಯರೂ ಯುದ್ಧತಂತ್ರವನ್ನು ಬಳಸಿ, ಯುದ್ಧಕ್ಕಿಳಿಯುವುದು, ಯುದ್ಧೋತ್ಸಾಹ ಮೆರೆಯುವುದು ವಿಶೇಷವಾಗಿದೆ. ಬಾಲಕರೂ ಯುವಕರೂ ರಣರಂಗ ಪ್ರವೇಶಿಸುವುದು ವಿಸ್ಮಯಕಾರಿಯಾಗಿದೆ. ಬದುಕಿನ ಹೋರಾಟದಲ್ಲಿ ಜನಪದ ಮನಸ್ಸು ಲೀಲಾಜಾಲವಾಗಿ ವ್ಯವಹರಿಸುತ್ತದೆ.

೨

ದಿವಂಗತ ಎಚ್. ಎಲ್. ನಾಗೇಗೌಡರ ಜನಪದ ಗೀತಸಾಹಿತ್ಯ ಸಂಗ್ರಹದಲ್ಲಿ ಸಾಕಷ್ಟು ಕಥನ ಕಾವ್ಯಗಳಿವೆ. ಆದರೆ ಚಾರಿತ್ರಿಕ ಜನಪದ ಕಥನಕಾವ್ಯಗಳ ಸಂಗ್ರಹ ಕಡಮೆ. ನಾಗೇಗೌಡರ ಸಂಗ್ರಹದ ಸಂದರ್ಭದಲ್ಲಿ ಚಾರಿತ್ರಿಕ ಕಥನಕಾವ್ಯಗಳು ಹೆಚ್ಚಾಗಿ ಸಿಗಲಿಲ್ಲವೋ ಅಥವಾ ದೀರ್ಘ ಎನ್ನುವ ಕಾರಣದಿಂದ ಸಂಗ್ರಹ ಕಾರ್ಯ ಮಾಡಲಿಲ್ಲವೋ ಗೊತ್ತಿಲ್ಲ. ಇರುವಷ್ಟನ್ನು ಒಂದೆಡೆ ಕಲೆಹಾಕಿ ಪ್ರಸ್ತುತ ಸಂಗ್ರಹವನ್ನು ಸಿದ್ಧಪಡಿಸಿದೆ. ಗೌಡರೇ ಸಂಗ್ರಹಿಸಿರುವ ಒಂದೆರಡು ಚಾರಿತ್ರಿಕ ಕಥನಕಾವ್ಯಗಳು ಅವರ ಹಿಂದಿನ ಸಂಗ್ರಹಗಳಲ್ಲಿ ಪ್ರಕಟವಾಗಿವೆ. ಚಾರಿತ್ರಿಕ ಕಾವ್ಯಗಳಿಗೇ ಒಂದು ಗ್ರಂಥ ಮೀಸಲಾಗಿರುವುದು ಇದೇ ಮೊದಲು.

ಇಲ್ಲಿರುವ ಚಾರಿತ್ರಿಕ ಕಥನಕಾವ್ಯಗಳು ಕರ್ನಾಟಕದಲ್ಲೆಲ್ಲಾ ಪ್ರಚಾರದಲ್ಲಿವೆ. ಇವುಗಳನ್ನು ವೃತ್ತಿಗಾಯಕರು, ಹವ್ಯಾಸಿಗಾಯಕರು ತಲೆತಲಾಂತರದಿಂದ ಹಾಡುತ್ತಾ ಉಳಿಸಿಕೊಂಡು ಬಂದಿದ್ದಾರೆ. ಒಂದೆರಡು ಬೇರೆ ಬೇರೆ ಗಾಯಕರಿಂದ ಸಂಗ್ರಹಗೊಂಡು, ಇತರ ಸಂಗ್ರಾಹಕರ ಗ್ರಂಥಗಳಲ್ಲೂ ಪ್ರಕಟವಾಗಿವೆ. ಎಲ್ಲವೂ ಪ್ರತ್ಯೇಕತೆಯನ್ನು ಉಳಿಸಿಕೊಂಡಿರುವ ಭಿನ್ನಪಾಠಗಳಾಗಿವೆ. ತೌಲನಿಕ ಅಧ್ಯಯನಕ್ಕೆ ಇವೆಲ್ಲವೂ ಸಹಾಯಕವಾಗುತ್ತವೆ.

ಒಂದೆರಡು ಕಾವ್ಯಕಥೆಗಳು ಸಂಪೂರ್ಣವಾಗಿ ಪದ್ಯದಲ್ಲಿವೆ. ಉಳಿದವು ಚಂಪು ಶೈಲಿಯಲ್ಲಿವೆ. ಅಂದರೆ ಪದ್ಯಗದ್ಯ ಮಿಶ್ರವಾಗಿವೆ. ಇದರಿಂದಾಗಿ ಕಥೆಗಳು ವರ್ಣನಾತ್ಮಕವಾಗಿವೆ, ವ್ಯಾಪಕವಾಗಿವೆ. ಅಲ್ಪಸ್ವಲ್ಪ ಪುನರುಕ್ತಿಯೂ ಇದೆ.

ಗ್ರಾಮೀಣ ಪ್ರದೇಶದ ನುಡಿ ನುಡಿಗಟ್ಟು ಆಡುಭಾಷೆಯ ಪರಿಚಯವಿರುವವರಿಗೆ ಇಲ್ಲಿರುವ ಕಥೆಗಳನ್ನು ಮೂಲ ಪಠ್ಯದಲ್ಲಿ ಓದಿ ಅರ್ಥಮಾಡಿಕೊಳ್ಳಲು ಕಷ್ಟವಾಗುವುದಿಲ್ಲ. ಆದರೂ ಸಾಮಾನ್ಯ ಓದುಗರ ದೃಷ್ಟಿಯಿಂದ, ಕಾವ್ಯಕಥೆಗಳ ಸ್ಥೂಲ ಸಾರಾಂಶವನ್ನು ಮುಂದೆ ಕೊಟ್ಟಿದೆ.

## ೧. ಮಾಗಡಿ ಕೆಂಪೇಗೌಡನ ಕಥೆ

ಚಿಕ್ಕತಿಟ್ಟಿನ ಪಾಳೆಯಗಾರ ಭೈರಯ್ಯಗೌಡ (ಭೈರೇಗೌಡ). ಅವನ ಹೆಂಡತಿ ಕೆಂಪೋಜಮ್ಮ. ಅವರ ಸ್ಥಳ ಉತ್ತತ್ತಿ ನಾರಸಂದ್ರ. ಆ ಸ್ಥಳಬಿಟ್ಟು ಯಲಹಂಕಕ್ಕೆ ಬಂದರು. ಅಲ್ಲಿಂದ ಬೆಂಗಳೂರಿಗೆ ಬಂದು ಕೋಟೆ ಕಟ್ಟಿಸಿದರು. ಕಟ್ಟಿಸುವಾಗ ಕೋಟೆ ನಿಲ್ಲಲಿಲ್ಲ. ಕೋಟೆ ನಿಲ್ಲಲು ಭೈರೇಗೌಡ ತನ್ನ ತಂಗಿಯನ್ನು ಬಲಿಕೊಟ್ಟನು. ಕೋಟೆ ಕಟ್ಟಿಸಿದ ಮೇಲೆ ಮಾಗಡಿಗೆ ಹೋಗಿ ಒಂದು ಹಾಳುಚಾವಡಿಯಲ್ಲಿ ಕಾಲಕಳೆದರು.

ಬಹಳ ಬಡತನ ಬಂತು. ಮಾಗಡಿ ರಂಗನಾಥನನ್ನು ಪೂಜಿಸಿದರು. ದೇವರ ದಯದಿಂದ ಸಂಪತ್ತು ಸಿಕ್ಕಿತು. ಅದರಿಂದ ಚಾವಡಿ, ದೇವಸ್ಥಾನ ಕಟ್ಟಿಸಿದ. ದೀಪಾರಾಧನೆಗೆ ಏರ್ಪಾಡು ಮಾಡಿದ. ಅರವಂಟಿಗೆ ಇಡಿಸಿದ. ಅರಮನೆ ಕಟ್ಟಿಸಿದ. ಭೈರೇಗೌಡ, ಕೆಂಪೋಜಮ್ಮನಿಗೆ ಗಂಡು ಮಗುವಾಯಿತು. ಅವನೇ ಕೆಂಪೇಗೌಡ ಅಥವಾ ಮಾಗಡಿ ಕೆಂಪೇಗೌಡ.

ಮಗಹುಟ್ಟಿದ ಮೂರು ತಿಂಗಳಿಗೆ ತಂದೆ ತೀರಿಕೊಂಡ. ಆ ಊರಿನ ಹಾರುವಯ್ಯ ಅವರ ಆಸ್ತಿಯನ್ನು ಲಪಟಾಯಿಸಿ, ಅರಮನೆಯಿಂದ ಹೊರಗೆಹಾಕಿದ. ಮೂರು ತಿಂಗಳ ಮಗುವಾದ ಕೆಂಪೇಗೌಡನ ತಾಯಿ ಕೂಲಿನಾಲಿ ಮಾಡಬೇಕಾಯಿತು. ಬಡತನ ಕಳೆಯಲಿಲ್ಲ. ಹಳೆಯರಾಗಿ ಹುಳಿ ಮಜ್ಜಿಗೆ ಇಲ್ಲವಾಯಿತು. ಮಗುವನ್ನು ಎತ್ತಿಕೊಂಡು ಮಲೆಸೀಮೆಗೆ ಹೋದಳು.

ಅಲ್ಲಿ ಕುಟ್ಟುಕೂಲಿ ಕಟ್ಟುಚಾಕರಿ ಮಾಡಿದಳು. ಕಾಡಿನ ಸೊಪ್ಪು, ಕಾರೆಕಾಯಿ ತಿಂದು ಬದುಕಬೇಕಾಯಿತು. ಹೊಟ್ಟೆತುಂಬಿಸುವುದು ಕಷ್ಟವಾಯಿತು. ಮಲೆಸೀಮೆ ಬಿಟ್ಟು ಹುಲಕಲ್ಲಿಗೆ ಹೋದಳು. ಅಲ್ಲಿ ಹುಲ್ಲು ಸೌದೆ ಮಾರಿದಳು. ಕೆಂಪೇಗೌಡನಿಗೆ ಆರು ವರ್ಷವಾಯಿತು. ತನ್ನ ಪೂರ್ವಿಕರು ಮಾಡಿರುವ ದಾನಧರ್ಮ ರಕ್ಷಿಸುವುದೆಂದು ಮಾಗಡಿಗೆ ಹಿಂದಿರುಗಿದಳು. ಹಾಳುಚಾವಡಿಯಲ್ಲಿ ವಾಸ. ಕೂಲಿ ಜೀವನ. ಹರಿದ ಬಟ್ಟೆ ಧಾರಣೆ.

ತಾಯಿಯ ಕಷ್ಟವನ್ನು ನೋಡಿ ಮಗನಿಗೆ ದುಃಖವಾಯಿತು. ತಾನು ದುಡಿದು ತಾಯಿಯನ್ನು ಸಾಕಲು ನಿರ್ಧರಿಸಿದ. ತಮ್ಮ ಆಸ್ತಿಯನ್ನು ವಶಮಾಡಿಕೊಂಡಿದ್ದ ಬ್ರಾಹ್ಮಣನಲ್ಲಿ ಜೀತಮಾಡಲು ಬಯಸಿದ. ತನ್ನ ತಾಯಿಗೆ ಬಟ್ಟೆ ಕೊಡಿಸಿದರೆ ಜೀತ ಮಾಡುವುದಾಗಿ ಹೇಳಿದ. ಬ್ರಾಹ್ಮಣ ಕೊಡಿಸಿದ ಬಟ್ಟೆ ತಂದು ತಾಯಿಗೆ ಕೊಟ್ಟು, ಜೀತಕ್ಕೆ ಹೊರಟ. ಜೀತದ ಕೆಲಸ ಬೇಡವೆಂದರೂ ಕೇಳಲಿಲ್ಲ. ಬ್ರಾಹ್ಮಣನ ಮನೆಯಲ್ಲಿ ಎಮ್ಮೆ, ದನ, ಕುರಿ ಆಡು ಮೇಯಿಸಿದ. ತಗ್ಗಲು ಹುರುಳಿಸಾರು, ಮುಗ್ಗಲರಾಗಿ ಹಿಟ್ಟು ತಿಂದ. ಆದರೂ ದಷ್ಟಪುಷ್ಟವಾಗಿ ಬೆಳೆದ.

ಬ್ರಾಹ್ಮಣ ಕೆಂಪೇಗೌಡನಿಗೆ ಸಂಬಳ ಜಾಸ್ತಿ ಮಾಡಿ, ಸುರಹೊನ್ನೆ ತೋಟ, ಬಾಳೆ ತೋಟದ ಕೆಲಸಕ್ಕೆ ಹಾಕಿದ. ಒಪ್ಪಿಕೊಂಡು ದುಡಿಮೆ ಮಾಡಿದ. ಭಾರಿ ಗುಂಬದಲ್ಲಿ ನೀರು ಸೇದಿದ. ಆರು ಸೇರಿನ ಆರು ಗುದ್ದಲಿ, ಏಳು ಸೇರಿನ ಏಳು ಸನಕೆ, ಎಂಟೆಂಟು ಸೇರಿನ ಎಂಟು ಗಡಾರಿಗಳಲ್ಲಿ ಕೆಲಸಮಾಡಬೇಕಾಯಿತು. ದಿನಕ್ಕೆ ಇಷ್ಟೇ ಕೆಲಸ ಮಾಡಬೇಕೆಂದು ತಾಕೀತಾಯಿತು. ಮಾಗಡಿ ರಂಗನಾಥನನ್ನು ಪ್ರಾರ್ಥಿಸಿದ. ದೇವರ ದಯವಾಯಿತು. ಪವಾಡ

ಸದ್ಯಶವಾಗಿ ಕೆಲಸ ಮುಗಿಯಿತು. ಒಮ್ಮೆ ಆಯಾಸದಿಂದ ಬಾಳೆಗಿಡದ ನೆರಳಲ್ಲಿ ಮಲಗಿದ. ಸೂರ್ಯನ ನೆರಳು ಸರಿದು ಮುಖಕ್ಕೆ ಬಿಸಲುಬಿತ್ತು. ದೇವರದಯದಿಂದ ಏಳು ಹೆಡೆ ಸರ್ಪ ಮುಖಕ್ಕೆ ನೆರಳು ನೀಡಿತು. ಊಟ ತೆಗೆದುಕೊಂಡು ಬಂದ ಬ್ರಾಹ್ಮಣ ನೋಡಿದ. ಆಶ್ಚರ್ಯವಾಯಿತು. ಕೆಂಪೇಗೌಡನಿಗೆ ಅದೃಷ್ಟಪ್ರಾಪ್ತಿಯಾಗುತ್ತದೆ ಅನ್ನಿಸಿತು. ಗೌರವದಿಂದ ಕೂಗಿ ಎಬ್ಬಿಸಿ, ಮನೆಗೆ ಕರೆದುಕೊಂಡು ಬಂದು, ಸ್ನಾನ ಮಾಡಿಸಿ, ಒಳ್ಳೆ ಬಟ್ಟೆ ಕೊಟ್ಟು, ಒಳ್ಳೆ ಊಟ ಮಾಡಿಸಿ, ಇನ್ನು ಮೇಲೆ ಜೀತಮಾಡುವುದು ಬೇಡ ಮನೆಗೆ ಹೋಗು ಅಂದ. ಜೀತದಲ್ಲಿ ಮುಂದುವರಿಸಿದರೆ ಕೆಂಪೇಗೌಡನ ಬಡತನ ತಮಗೆ ಬರುತ್ತದೆಂಬ ಭಯ ಬ್ರಾಹ್ಮಣನಿಗೆ!

ನಿನಗೆ ದೌಲತ್ತು ಬಂದರೆ ನನಗೇನು ಕೊಡುತ್ತೀಯೆ ಎಂದ ಬ್ರಾಹ್ಮಣ. ಕೆಂಪೇಗೌಡ ಪ್ರಧಾನಿ ಪದವಿ ಕೊಡುತ್ತೀನಿ ಎಂದ. ಅದಕ್ಕೆ ಒಕ್ಕಣೆ ಬರೆದು ಬ್ರಾಹ್ಮಣ ಸಹಿಹಾಕಿಸಿಕೊಂಡ. ಇನ್ನು ಮೇಲೆ ಜೀತಮಾಡಬೇಡ, ನಿನ್ನ ಋಣ ಕಳೆಯಿತು. ಇನ್ನು ಮೇಲೆ ತಾಯಿಯ ಜೊತೆಯಲ್ಲಿರು ಎಂದು ಹೇಳಿ ಕಳುಹಿಸಿಕೊಟ್ಟ. ಹನ್ನೆರಡು ವರ್ಷದ ಜೀತ ಕಳೆದು ಕೆಂಪೇಗೌಡ ತಾಯಿಯ ಬಳಿಗೆ ಬಂದ. ತಾನು ಬರುವ ದಾರಿಯಲ್ಲಿ ಕಂಡ ಕೊಪ್ಪರಿಗೆ ದ್ರವ್ಯದ ವಿಷಯ ಹೇಳಿದ. ಏಳು ಗಾಡಿಯಲ್ಲಿ ಏಳು ಕೊಪ್ಪರಿಗೆ ಹಣವನ್ನು ಮನೆಗೆ ಸಾಗಿಸಿದ.

ಕೆಂಪೇಗೌಡನಿಗೆ ಸಂಪತ್ತು ದೊರಕಿದ ಮೇಲೆ ತನ್ನ ಪೂರ್ವಿಕರಿಗಿಂತ ಹೆಚ್ಚು ದಾನ ಧರ್ಮ ಮಾಡಿ ಕೋಟೆ ಪೇಟೆ ದೇವಾಲಯ ಕಟ್ಟಿಸುತ್ತಾನೆ. ರಂಗನಾಥನಿಗೆ ನಿತ್ಯ ಪೂಜೆ ಏರ್ಪಾಟು ಮಾಡುತ್ತಾನೆ. ಅದಕ್ಕಾಗಿ ಅಲ್ಲೇ ಉಳಿದು ನಿತ್ಯ ಪೂಜೆಮಾಡಲು ಪೂಜಾರಿ ನೇಮಿಸಿದ. ದೇವಾಲಯದಲ್ಲೇ ಇರಿಸಿದ. ಹೊರಗೆ ಹೋಗಲಾಗದುದಕ್ಕೆ ಪೂಜಾರಿಗೆ ಬೇಸರವಾಯಿತು. ಮನೆಗೆ ಹೋಗಿ ಹೆಂಡತಿ ಮಕ್ಕಳನ್ನು ನೋಡಲು ಬಯಸಿದ. ತಪ್ಪಿಸಿಕೊಂಡು ಹೋಗಲು ಉಪಾಯ ಹಾಡುಕಿದ.

ಬೆಳಗಿನ ಪೂಜೆಮಾಡಿ ಕೆಂಪೇಗೌಡನಿಗೆ ತೀರ್ಥ ಪ್ರಸಾದಕೊಟ್ಟಾಗ ಬಿಳಿಕೂದಲು ಸಿಕ್ಕಿತು. ಇದೇನೆಂದು ಕೇಳಿದಾಗ ರಂಗನಾಥ ಮುದಿಯಾದ. ಅವನ ಕೂದಲು ಇದು. ಇವನನ್ನು ಬಿಟ್ಟು ಸೋಮೇಶ್ವರ ಗುಡಿ ಕಟ್ಟಿಸು ಎಂದ. ಪೂಜಾರಿ ಮಾತನ್ನು ನಿಜವೆಂದು ನಂಬಿದ ಕೆಂಪೇಗೌಡ ರಂಗನಾಥನ ಪೂಜೆ ನಿಲ್ಲಿಸಿ, ಸೋಮೇಶ್ವರ ದೇವಾಲಯ ಕಟ್ಟಿಸಲು ಪ್ರಾರಂಭಿಸಿದ.

ಬೆಳಿಗ್ಗೆ ದೇವಾಲಯದ ಗೋಡೆ ಕಟ್ಟಿಸಿದರೆ, ರಾತ್ರಿ ರಂಗನಾಥನ ಆನೆ ಅದನ್ನು ಉರುಳಿಸುತ್ತಿತ್ತು. ರಂಗನಾಥ ಕೆಂಪೋಜಮ್ಮನ ಕನಸಿಗೆ ಬಂದು '' ನನ್ನನ್ನು ಕೈಬಿಟ್ಟು, ಸೋಮೇಶ್ವರನನ್ನು ಪೂಜಿಸಲು ಹೊರಟಿದ್ದಾನೆ. ನನ್ನನ್ನು ಮರೆತರೆ ಇನ್ನು ಇಪ್ಪತ್ತುನಾಲ್ಕು ದಿನದಲ್ಲಿ ಟಿಪ್ಪುಸುಲ್ತಾನ್ ದಂಡೆತ್ತಿ ಬಂದು ಸೆರೆಹಿಡಿಯುತ್ತಾನೆ. ನಿನ್ನ ಮಗನಿಗೆ ಬುದ್ಧಿ ಹೇಳು '' ಎಂದು ಹೇಳಿದ. ತಾಯಿ ಮಗನಿಗೆ ಬುದ್ಧಿ ಹೇಳಿದಳು: ''ಮನೆಗೆ ಕಳುಹಿಸದಿದ್ದುದಕ್ಕೆ ಪೂಜಾರಿ ರಂಗನಾಥ ಮುದಿಯಾದ ಎಂದು ಸುಳ್ಳು ಹೇಳಿದ್ದಾನೆ. ನಂಬ

ಬೇಡ''. ಕೆಂಪೇಗೌಡ ಕೇಳಲಿಲ್ಲ.

ರಂಗನಾಥ ಭವಿಷ್ಯ ಹೇಳಿದಂತೆ ಟಿಪ್ಪು ಸುಲ್ತಾನ್ ದಂಡೆತ್ತಿ ಬಂದು ಮಾಗಡಿ ಕೆಂಪೇಗೌಡನನ್ನು ಕೈಸೆರೆಮಾಡಿದ. ತಲೆಯ ಮೇಲೆ ಸಗಳಿ ಕಟ್ಟಿ ಶಿವಗಂಗೆ ಗಂಗಾಧರೇಶ್ವರನ ದೇವಸ್ಥಾನದಲ್ಲಿ ಇಟ್ಟ. ಮೇಲೆ ಕಕ್ಕಡ ಕಟ್ಟಿದ. ಆದರ ಎಣ್ಣೆ ಉರಿದು ಮುಖದ ಮೇಲೆ ಹರಿಯುತ್ತಿದೆ. ತಾಯಿಯ ಮಾತನ್ನು ಕೇಳದ ಮಗನಿಗೆ ಈ ಪಾಡು ಬಂತು.

ಬೆಂಗಳೂರು ವಿಶ್ವವಿದ್ಯಾಲಯ ಪ್ರಕಟಿಸಿರುವ ''ಯಲಹಂಕ ನಾಡಪ್ರಭುಗಳು: ಜಾನಪದ ಸಂಪುಟ'' ಗ್ರಂಥದಲ್ಲಿ ಮಾಗಡಿ ಕೆಂಪೇಗೌಡನಿಗೆ ಸಂಬಂಧಿಸಿದ ಏಳು ಕಾವ್ಯ ಕಥೆಗಳಿವೆ. ಈಗಿನದು ಇನ್ನೊಂದು ಪಾಠ. ಸಾಮಾನ್ಯವಾಗಿ ಕೆಂಪೇಗೌಡ ಕಾವ್ಯವನ್ನು ಹೆಳವರು ಮತ್ತು ದೊಂಬಿದಾಸರು ಹಾಡುವುದು ಪದ್ಧತಿ. ಇಲ್ಲಿರುವುದು ಚೌಡಿಕೆಯವರು ಹಾಡಿರುವ ಪಠ್ಯ. ಹಿಂದಿನವೆಲ್ಲ ಶುದ್ಧ ಪದ್ಯರೂಪದಲ್ಲಿವೆ. ಪ್ರಸ್ತುತ ಕಾವ್ಯ ಪದ್ಯಗದ್ಯ ಮಿಶ್ರವಾಗಿದೆ. ಎಲ್ಲಾ ಪಾಠಗಳಲ್ಲಿರುವ ಕಥೆಯ ಗಾಜುಗೋಜಲು ಇದರಲ್ಲೂ ಇದೆ. ಒಬ್ಬನ ಕಥೆಯ ಜೊತೆಗೆ ಬೇರೆಯವರ ಕಥೆಯೂ ಸೇರಿಕೊಂಡಂತಿದೆ.

ಯಲಹಂಕ ನಾಡಪ್ರಭುಗಳಲ್ಲಿ ಯಾರೂ ಬಡವರಾಗಿರಲಿಲ್ಲ. ಪ್ರಸ್ತುತ ಕೆಂಪೇಗೌಡ ಹುಟ್ಟಿದಾಗ ಬಡತನ ಬಂತೆಂಬ ಪ್ರಸ್ತಾಪವಿದೆ. ಇತಿಹಾಸದಲ್ಲಿ ಸಾಕ್ಷಿಯಿಲ್ಲದಿದ್ದರೂ ಕೆಂಪೇಗೌಡ ಬ್ರಾಹ್ಮಣನ ಮನೆಯಲ್ಲಿ ಜೀತಮಾಡಿದ ವಿಷಯವಿದೆ. ಹರಕು ಬಟ್ಟೆ ತೊಟ್ಟಿದ್ದ ತಾಯಿಗೆ ಹೊಸ ಬಟ್ಟೆ ತಂದುಕೊಡಲು, ಬಾಲಕ ಕೆಂಪೇಗೌಡ ಬ್ರಾಹ್ಮಣನ ಮನೆಗೆ ಜೀತಕ್ಕೆ ಸೇರಿದ ಎಂಬುದು ಹೊಸ ಸೇರ್ಪಡೆ. ಕೆಂಪೇಗೌಡನ ಮೈಮೇಲೆ ಕಂಡ ಸರ್ಪದರ್ಶನದಿಂದ, ಅವನನ್ನು ಜೀತದಲ್ಲಿ ಮುಂದುವರಿಸಿದರೆ, ಅವನಲ್ಲಿರುವ ಬಡತನ ತನಗೆ ಬರುವುದೆಂಬ ಬ್ರಾಹ್ಮಣನ ಭಯ ವಿಶೇಷವಾದದ್ದು. ರಾಜಯೋಗ ಬಂದರೆ ಮಂತ್ರಿ ಪದವಿ ಕೊಡುವುದಾಗಿ ಹೇಳಿದ್ದನ್ನು ಒಕ್ಕಣಿಕೆ ಮಾಡಿ ಕೆಂಪೇಗೌಡನಿಂದ ಸಹಿ ಪಡೆದ್ದು ಬ್ರಾಹ್ಮಣನ ಬುದ್ಧಿವಂತಿಕೆ.

ಬೆಂಗಳೂರು ಕೋಟೆ ಕಟ್ಟಿಸಿದಾಗ ನಿಲ್ಲದೆ ಕುಸಿದು ಬೀಳುತ್ತಿದ್ದುದಕ್ಕೆ ಭೈರೇಗೌಡ ತಂಗಿಯನ್ನು ಬಲಿಕೊಟ್ಟಿದ್ದು ಹೊಸ ಕಲ್ಪನೆ.

ರಂಗನಾಥ ಸ್ವಾಮಿಯ ನಿತ್ಯಪೂಜೆಗಾಗಿ ದೇವಾಲಯದಲ್ಲೇ ಕೂಡಿಟ್ಟ ಪೂಜಾರಿ, ಮನೆಗೆ ಹೋಗಲಾಗದ ಅಸಮಧಾನಕ್ಕೆ, ಕೂದಲು ಸಹಿತ ಪ್ರಸಾದವನ್ನು ರಾಜ ಕೆಂಪೇಗೌಡನಿಗೆ ಕೊಟ್ಟು, ಅದು ಮುದಿ ರಂಗನಾಥನ ಕೂದಲು, ದೇವರು ಮುದುಕನಾಗಿಬಿಟ್ಟ, ಸೋಮೇಶ್ವರನನ್ನ ಪೂಜಿಸು ಎಂದಿದ್ದು ಭಿನ್ನ ಚಿಂತನೆ. ( ಇಲ್ಲಿ ವೈಷ್ಣವ ಮತ್ತು ಶೈವ ಮನೋಧರ್ಮದ ತಿಕ್ಕಾಟವೂ ಇರಬಹುದು) ಹೊಸದಾಗಿ ಕಟ್ಟಿಸುತ್ತಿದ್ದ ಸೋಮನಾಥ ದೇವಾಲಯದ ಗೋಡೆಯನ್ನು ರಂಗನಾಥ ಸ್ವಾಮಿಯ ಆನೆ ಉರುಳಿಸುತ್ತಿತ್ತು ಎನ್ನುವುದು ದ್ವೇಷದ ಪ್ರತೀಕಾರ. ಹೊಸ ಕಲ್ಪನೆ ಕೂಡ.

ಚಾರಿತ್ರಿಕ ಕಾಲಘಟ್ಟವನ್ನು ಎಣಿಸಿದರೆ. ಮಾಗಡಿ ಕೆಂಪೇಗೌಡನಿಗೂ ಟಿಪ್ಪು ಸುಲ್ತಾನನಿಗೂ ಯಾವ ಸಂಬಂಧವೂ ಇಲ್ಲ. ಆದರೂ ಟಿಪ್ಪುಸುಲ್ತಾನನು ಮಾಗಡಿ

ಕೆಂಪೇಗೌಡನನ್ನು ಸೆರೆಹಿಡಿದ ಎನ್ನುವುದು ಈ ಗಾಯಕ ಮಾಡಿಕೊಂಡಿರುವ ಬದಲಾವಣೆ.

ಮಾಗಡಿ ಕೆಂಪೇಗೌಡ ಚಾರಿತ್ರೀಕ ಜನಪದ ಕಥನಕಾವ್ಯದಲ್ಲಿ ಧಾರ್ಮಿಕ ಹಾಗೂ ದೈವಿಕ ಅಂಶಗಳು ತುಂಬಿಕೊಂಡಿವೆ. ಕೆಲವೇ ಚಾರಿತ್ರಿಕ ಘಟನೆಗಳಿಗೆ ಹಲವು ಕಾಲ್ಪನಿಕ ರೆಕ್ಕೆ ಪುಕ್ಕಗಳು ಸೇರಿಕೊಂಡಿವೆ. ಚೌಡಿಕೆ ವಾದನದ ಹಿನ್ನೆಲೆಗೂ ಈ ಕಥನ ಕಾವ್ಯವನ್ನು ದುಡಿಸಿ ಕೊಂಡಿರುವುದು ಗಮನಾರ್ಹವಾಗಿದೆ. ಬೆಂಗಳೂರು ಮತ್ತು ಮಾಗಡಿ ಸುತ್ತಮುತ್ತಲ ವಿಷಯಗಳು ಕಥೆಯಲ್ಲಿ ಹೆಚ್ಚಾಗಿವೆ. ಕಾಯಕನಿಷ್ಠೆ ಮತ್ತು ದೈವಭಕ್ತಿಗೆ ಒತ್ತು ನೀಡಿದೆ. ದೈವ ಮುನಿದಾಗ ಆಗುವ ಅನಾಹುತವೂ ವರ್ಣನೆಯಾಗಿದೆ. ದುಃಖಾಂತ ಕಥೆಗೆ ಗಾಂಭೀರ್ಯ ತಂದಿದೆ. ಇದು ಚೌಡಿಕೆ ಸುಬ್ಬಯ್ಯ ವೃತ್ತಿಗಾಯಕ ಹಾಡಿರುವ ಕಾವ್ಯಕಥೆ.

## ೨. ಲಿಂಗರಾಜಮ್ಮನ ಕಥೆ

ಕೊಡಗಿನ ಪಿರಿಯಾಪಟ್ಟಣದ ದೊರೆ ವೀರರಾಜ. ಅವನ ಹೆಂಡತಿ ಲಿಂಗರಾಜಮ್ಮ. ಅವರ ಮೂರು ತಿಂಗಳ ಮಗು ವೀರಣ್ಣ. ಮಗು ಹುಟ್ಟಿದ ಸಮಯ ಪ್ರಶಸ್ತವಲ್ಲ. ಶನಿದೇವ ರಾಜನ ಹೆಗಲೇರಿದ. ಅಪಶಕುನ, ಅನಾಹುತ, ನಷ್ಟಪರಂಪರೆ ಪ್ರಾರಂಭವಾಯಿತು. ರಾಜ್ಯಕೋಶ ಪರರ ಸ್ವತ್ತಾಯಿತು. ಇಂಥ ಅನಿಷ್ಟ ಮಗ ಹುಟ್ಟುವನೆಂದು ತಿಳಿದಿರಲಿಲ್ಲ. ಗಂಡನ ಅಸಮಧಾನಕ್ಕೆ ದುಃಖಕ್ಕೆ ಹೆಂಡತಿ ಸಮಾಧಾನಮಾಡುವಳು. ರಾಜ್ಯಹೋದರೆ, ತಾನು ರಾಜ್ಯತರವುದಾಗಿ ಹೇಳುವಳು. ಹೆಂಗಸು ರಾಜ್ಯತರುವುದು ಹೇಗೆಂದು ಗಂಡನಿಗೆ ಅನುಮಾನ. ದೃಢಮನಸ್ಸಿನಿಂದ ವೀಳ್ಯಕೊಟ್ಟು ಕಳಿಸಿ, ನನ್ನ ಮೈಸೂರು ಅಣ್ಣನಿಂದ ಅರ್ಧರಾಜ್ಯ ತರುತ್ತೇವೆ ಎನ್ನುವಳು. ಬಡತನದಲ್ಲಿರುವಾಗ ತೌರಿಗೆ ಹೋಗಬಾರದೆಂಬುದು ಗಂಡನ ಅಂಬೋಣ. ಅಣ್ಣ ರಾಜ್ಯಕೊಡಬೇಕೆಂದರೂ ಅಣ್ಣನ ಹೆಂಡತಿ ರಾಜ್ಯ ಕೊಡಿಸುವುದಿಲ್ಲ ಎಂಬುದು ಗಂಡನ ಅನುಭವ. ತಾಯಿ ತಂದೆ ಇಲ್ಲದ ತೌರಿಗೆ ಹೋಗಲೇಬಾರದು ಎಂದ. ನನ್ನಣ್ಣ ಒಳ್ಳೆಯವನು. ತಾಯಿತಂದೆ ಇಲ್ಲ ಅಂತ ತೌರಿಗೆ ಬರದೇ ಇರಬೇಡ. ಬಡತನ ಬಂದರೆ ತೌರಿಗೆ ಬಾ. ಕೈಲಾದ ಸಹಾಯಮಾಡುತ್ತೀನಿ ಎಂದಿದ್ದಾನೆ ಎಂಬುದು ಹೆಂಡತಿಯ ಸಮಜಾಯಿಷಿ. ತೌರಿಗೆ ಹೋಗಲು ಒಪ್ಪಿಗೆ ಕೊಡದಿದ್ದರೆ ಪ್ರಾಣಬಿಡುತ್ತೇನೆ ಎಂದಳು. ಗಂಡನ ಮಾತುಮೀರಿ ಮಗನ ಜೊತೆಯಲ್ಲಿ ತೌರಿಗೆ ಹೋಗಲು ನಿರ್ಧರಿಸಿದಳು.

ಪುಟ್ಟ ಮಗನೂ ತಾಯಿಗೆ ಬುದ್ಧಿಮಾತು ಹೇಳುವನು, ಅಜ್ಜ ಅಜ್ಜಿ ಇಲ್ಲದ ಮನೆಗೆ ಹೋಗುವುದು ಬೇಡವೆಂದು. ಮಾವಯ್ಯ ರಾಜ್ಯಕೊಟ್ಟರೂ ಅತ್ತೆಮ್ಮ ಕೊಡಲಾರಳು ಎಂಬುದು ಬಾಲಕನ ಮಾತು. ಲಿಂಗರಾಜಮ್ಮ ಮಗನ ಮಾತನ್ನು ಮೀರಿದಳು. ಬಡತನದ ಅಲಂಕಾರ ಮಾಡಿಕೊಂಡಳು. ಇದ್ದುದರಲ್ಲಿ ಮಗನನ್ನು ಸಿಂಗರಿಸಿದಳು. ಗಂಡನ ಮನೆದೇವತೆ ಉರಿಮುಸಣಮ್ಮನನ್ನು ನೆನೆದುಕೊಂಡಳು. ಅಣ್ಣನ ಮನೆದೇವತೆ ಚಾಮುಂಡೇಶ್ವರಿಯನ್ನೂ ಸ್ಮರಿಸಿಕೊಂಡಳು. ಮಗನನ್ನು ಎತ್ತಿಕೊಂಡು ಅಣ್ಣನ ಮನೆಗೆ ಹೊರಟಳು. ಗಂಡನಿಗೆ ಹಿಡಿದಿದ್ದ ಶನಿ ಹೆಂಡತಿಗೆ ಹಿಡಿದುಕೊಂಡಿತು. ಅಪಶಕುನ ಕಾಣಿಸಿಕೊಂಡವು. ದೇವರಿದ್ದಾನೆ ಅಂದುಕೊಂಡು ಮುಂದಡಿಯಿಟ್ಟಳು. ಕಾಲುನಡಿಗೆಯಲ್ಲಿ ದೀರ್ಘಪ್ರಯಾಣಮಾಡಿದಳು. ಮೈಸೂರು ಅರಮನೆಗೆ ಬಂದಾಗ ಕೋಟೆಯ ಬಾಗಿಲ

ಬಂಟರು ತಡೆದರು. ತಾನು ಮೈಸೂರು ರಾಜ್ಯವನ್ನು ಆಳಿದ ಬಸಪ್ಪರಾಜನ ಮಗಳು. ದಳವಾಯಿ ಅರಸುವಿನ ತಂಗಿ ಎಂದು ಪರಿಚಯ ಹೇಳಿದಳು. ಸ್ವಂತ ಅಂಗರಕ್ಷರಿಲ್ಲದೆ ಬಂದವಳನ್ನು ಒಳಕ್ಕೆ ಬಿಡಲಿಲ್ಲ.

ದಳವಾಯಿ ಪುಟ್ಟರಸುವಿಗೆ ಸುದ್ದಿ ಹೋಯಿತು. ಬಡತನದಿಂದ ಬಂದಿದ್ದರೂ ಗೌರವದಿಂದ ತಂಗಿಯನ್ನು ಬರಮಾಡಿಕೊಂಡ. ಅಣ್ಣ ಕಳಿಸಿದ ಹೂವಿನ ಪಲ್ಲಕ್ಕಿ ಏರದೆ, ಅರಮನೆಗೆ ನಡದೇ ಬಂದಳು. ತಂಗಿಯ ಸ್ಥಿತಿಯಿಂದ ಅಣ್ಣನಿಗೆ ದುಃಖವಾಯಿತು. ಬಂದುದಕ್ಕೆ ಕಾರಣ ಕೇಳಿದ. ಬಡತನದ ವಿಷಯ ಪ್ರಸ್ತಾಪಿಸಿ, ಅರ್ಧರಾಜ್ಯ ಕೊಟ್ಟು ಬದುಕಿಸು, ನಿನ್ನ ಹೆಸರು ಹೇಳಿಕೊಂಡು ಜ್ಯೋತಿ ಎತ್ತುತ್ತೀನಿ ಎಂದಳು. ನೀನು ಬರದೆ ಒಂದು ಕಾಗದ ಕಳಿಸಿದ್ದರೂ ನಿನಗೆ ಅರ್ಧರಾಜ್ಯ ಕೊಡುತ್ತಿದ್ದೆ. ನೀನು ಒಡಹುಟ್ಟಿದವಳು. ರಾಜ್ಯ ಕೊಡದೇ ಇರುತ್ತೀನಾ? ರಾಜ್ಯ ಕೊಡುತ್ತೀನಿ ಎಂದ. ಅಣ್ಣನ ಹೆಂಡತಿ ಇವರ ಮಾತು ಕೇಳಿಸಿಕೊಂಡು ಅಸಮಧಾನಗೊಂಡಳು. ಕೋಪದ ಮಾತಾಡಿ, ಉಪಾಯವಾಗಿ ನಾದಿನಿಯನ್ನು ಓಡಿಸಲು ತೀರ್ಮಾನಿಸಿದಳು.

ಅತ್ತಿಗೆಯಾಡಿದ ಕೋಪದ ಮಾತಿಗೆ ಲಿಂಗರಾಜಮ್ಮ ಬೇಸರಪಟ್ಟುಕೊಂಡಳು. ತನಗೆ ತನ್ನ ಮಗನಿಗೆ ಆಹಾರ ಪಡೆದುಕೊಳ್ಳಲು ಅತ್ತಿಗೆ ಹೇಳಿದ ಕೆಲಸಗಳನ್ನೆಲ್ಲ ಮಾಡಿದಳು. ಇಂದು ಅಣ್ಣನ ಮುದ್ರೆ ಉಂಗುರ ಕೇಳಿದೆ; ನಾಳೆ ಮಲಗುವ ಮಂಚ ಕೇಳುತ್ತೀಯೆ ಎಂದು ಅತ್ತಿಗೆ ಬಿರುನುಡಿಯಾಡಿದಳು. ನಿನಗೆ ಅರ್ಧರಾಜ್ಯ ಬೇಕಾದರೆ, ನನ್ನ ಗಂಡನಿಗೆ ಕಿರಿ ಹೆಂಡತಿಯಾಗು ಎಂದಳು. ಗಂಡನ ಬಳಿಗೆ ಹೋಗಿ ಲಿಂಗರಾಜಮ್ಮನ ವಿರುದ್ಧ ಚಾಡಿ ಹೇಳಿದಳು. ನಿಮ್ಮ ತಂಗಿ ನಾಳೆ ತನ್ನ ಗಂಡನಿಗೆ ನಿಮ್ಮ ಹೆಂಡತಿ ಕಳಿಸು ಎಂದರೆ ಏನು ಮಾಡ್ತೀರಿ ? ಅವಳ ಮಾತಿಗೆ ಮರುಳಾಗಬೇಡಿ ಎಂದು ಮಾರ್ಮಿಕವಾಗಿ ಚುಚ್ಚಿ ನುಡಿದಳು. ಹೆಂಡತಿಯ ಮಾತು ನಿಜ ಅನ್ನಿಸಿತು.

ಪುಟ್ಟರಸು ತಂಗಿಯನ್ನು ಕುರಿತು ಕೊಟ್ಟ ಹೆಣ್ಣು ಕಾಲಕ್ಕೆ ಹೊರಗು. ನಿನಗೆ ಅರ್ಧರಾಜ್ಯ ಕೊಡಲ್ಲ. ಹೊರಟುಹೋಗು ಎಂದನು. ಆಡಿದ ಮಾತಿಗೆ ತಪ್ಪುತ್ತೀಯಾ ಅಣ್ಣಯ್ಯ ಎಂದು ಕೇಳಿದಳು. ಸಿಟ್ಟುಬರುವಂತೆ ಮಾತಾಡಿ ತಂಗಿಯನ್ನು ಹೊರಹಾಕಲು ನಿರ್ಧರಿಸಿದ ಅಣ್ಣ, ನನ್ನ ಮಂಚಕ್ಕೆ ಬಂದರೆ, ಹೆಂಡತಿಯಾದರೆ ರಾಜ್ಯಕೊಡುತ್ತೀನಿ ಎಂದುಬಿಟ್ಟ. ಸಿಟ್ಟುಬಂದ ಲಿಂಗರಾಜಮ್ಮ ಅಣ್ಣನ ಕಪಾಳಕ್ಕೆ ಎರಡೇಟು ಹೊಡೆದಳು. ಸಿಟ್ಟಿಗೆದ್ದ ಪುಟ್ಟರಸು ತಂಗಿಯ ಮಗುವನ್ನು ಕೀಳಿಸಿ ಮುಳ್ಳುಪಂಚರದಲ್ಲಿರಿಸಿ, ತಂಗಿಯನ್ನು ಆಚೆಗೆ ತಳ್ಳಿಸಿದನು. ಗಂಡನ ಮಾತುಮೀರಿ ಬಂದುದಕ್ಕೆ ಹೀಗಾಯಿತು ಎಂದುಕೊಂಡು, ಮಗುವನ್ನಾದರು ಕೊಡು, ಹೋಗುತ್ತೀನಿ ಎಂದಳು. ನಿನ್ನ ಗಂಡ ಬಂದು ಯುದ್ಧಮಾಡಿ ಗೆದ್ದುಕೊಂಡು ಹೋಗಲಿ ಎಂದ.

ಮುಳ್ಳುಪಂಚರದಲ್ಲಿದ್ದ ಮಗು ಸೋದರಮಾವನನ್ನು ಕುರಿತು ಮಾತಾಡಿತು: ತಾಯಿ ಮಗನನ್ನು ಬೇರೆಮಾಡಿದ್ದೀಯ. ನನ್ನ ತಂದೆಯನ್ನು ಅವಮಾನ ಮಾಡಿದ್ದೀಯ. ಈಗ ನಾನು ಚಿಕ್ಕವನು. ದೊಡ್ಡವನಾದ ಮೇಲೆ ನಾನೇ ಯುದ್ಧಮಾಡಿ ನಿನ್ನನ್ನು ಕತ್ತರಿಸುತ್ತೇನೆ.

ಮಾತು ಪ್ರತಿಮಾತು ನಡೆದವು. ಮಗುವನ್ನು ಕೊಡದ ಅಣ್ಣನಿಗೆ ತಂಗಿ ಶಾಪಕೊಟ್ಟು ಹಿಂದಿರುಗಿದಳು.

ಗಂಡನ ಬಳಿಗೆ ಬಂದು ಲಿಂಗರಾಜಮ್ಮ ಒಂದಕ್ಕೆರಡು ಸೇರಿಸಿ ಹೇಳಿ ಗಂಡ ಕೋಪಗೊಳ್ಳುವಂತೆ ಮಾಡಿದಳು. ಹೆಂಡತಿಗಾದ ಅವಮಾನ, ಮಗನ ಸೆರೆ, ಭಾವಮೈದುನನ ಸೊಕ್ಕಿನಮಾತು ಕೇಳಿ ವೀರರಾಜ ಸಿಟ್ಟುಗೊಂಡ. ಚಂದ್ರಾಯುಧ ಹಿಡಿದು ಯುದ್ಧಕ್ಕೆ ಹೋಗಲು ಸಿದ್ಧನಾದ. ಯುದ್ಧಕ್ಕೆ ಹೋಗುವ ಮೊದಲು ತನ್ನನ್ನು ಕೊಲ್ಲಿ ಎಂದು ಮುಂದಾದಳು. ಗಂಡನಿಗೆ ಸಿಟ್ಟು ಬರಿಸಲು, ನೀವು ನನ್ನನ್ನು ಕೊಲ್ಲದಿದ್ದರೆ ನಾನೇ ನಿಮ್ಮನ್ನು ಕೊಲ್ಲುತ್ತೇನೆ ಎಂದಳು.

ವೀರರಾಜ ಕೋಪಗೊಂಡ. ಕಿರಿಯ ಹೆಂಡತಿ ಲಿಂಗರಾಜಮ್ಮ, ಪಟ್ಟದ ಗೌರಮ್ಮ, ಕೆಂಪಾಜಿ ಮಲ್ಲಮ್ಮ ಮೂವರು ಹೆಂಡತಿಯರನ್ನೂ ಕೂರಿಸಿಕೊಂಡು ತನ್ನ ಪರಾಕ್ರಮವನ್ನು ವಿವರಿಸಿದ. ತನ್ನ ಜಟ್ಟಿಗಳ ಸಾಮರ್ಥ್ಯ ತಿಳಿಸಿದ. ಲಿಂಗರಾಜಮ್ಮ ಗಂಡನಲ್ಲಿ ಮತ್ತಷ್ಟು ಆವೇಶಹುಟ್ಟುವಂತೆ ಮಾತಾಡಿದಳು. ವೀರರಾಜ ನಾನು ಮೈಸೂರು ರಾಜ್ಯಕ್ಕೆ ದಂಡೆತ್ತಿ ಹೋಗಿ ಸರ್ವನಾಶಮಾಡಿ ಬರುತ್ತೀನಿ ಎಂದ. ದಳವಾಯಿಯ ತಂದೆಯ ತಲೆಕಡಿದಂತೆ ಪುಟ್ಟರಸುವನ್ನೂ ಕತ್ತರಿಸುತ್ತೇನೆ ಎಂದ. ಲಿಂಗರಾಜಮ್ಮ ಗಂಡನ ಕೈಗೆ ಚಂದ್ರಾಯುಧ ಕೊಟ್ಟು, ಇದರಿಂದಲೇ ನನ್ನಣ್ಣನ ಶಿರ ತೆಗೆಯಬೇಕೆಂದಳು.

ಯುದ್ಧಕ್ಕೆ ಹೊರಟ ಗಂಡನನ್ನು ನೋಡಿ ಉಳಿದಿಬ್ಬರು ಹೆಂಡತಿಯರು ದುಃಖಪಟ್ಟರು. ನಾವು ವಿಧವೆಯರಾಗಬಹುದು. ನಮ್ಮನ್ನು ಕೊಂದು ಹೋಗಿ ಎಂದರು. ಮೈಸೂರಿನವರೇ ದಂಡೆತ್ತಿ ಬರಲಿ. ಅವರೊಡನೆ ಯುದ್ಧಮಾಡಿ. ನೋಡಿ ಸಂತೋಷಪಡುತ್ತೇವೆ. ನೀವಾಗಿ ಹೋಗಬೇಡಿ ಎಂದರು. ಅದೇ ಸರಿಯೆಂದುಕೊಂಡು, ಮೈಸೂರು ದಳವಾಯಿಗೆ, ಪಿರಿಯಾ ಪಟ್ಟಣದಮ್ಮ ಉರಿಮಸಣಮ್ಮನ ಹಬ್ಬಮಾಡುತ್ತೇವೆ ನೀವು ಬನ್ನಿ ಎಂದು ಓಲೆ ಬರೆದ. ನಿಮ್ಮಪ್ಪನಿಗೆ ಗಂಡುಮಗನಾಗಿ ಹುಟ್ಟಿದ್ದರೆ ದಂಡೆತ್ತಿ ಯುದ್ಧಕ್ಕೆ ಬಾ. ಗೆದ್ದರೆ ಪಿರಿಯಾಪಟ್ಟಣ ನಿನ್ನದು. ನೀನು ಸೋತರೆ ಮೈಸೂರು ನನ್ನದು ಎಂದು ಇನ್ನೊಂದು ಓಲೆ ಬರೆದು ಕಳುಹಿಸಿದ. ಪತ್ರಗಳನ್ನು ಪಡೆದ ದಳವಾಯಿ ಕೂಡಲೇ ಗಮನಿಸಲಿಲ್ಲ.

ಪಿರಿಯಾಪಟ್ಟಣದ ವೀರರಾಜ ಮನೆದೇವತೆ ಗುಡಿಗೆ ಬಂದು ಪೂಜೆಮಾಡಿದ. ಯುದ್ಧದಲ್ಲಿ ಗೆಲ್ಲಿಸಲು ಕೇಳಿಕೊಂಡು, ಹರಕೆಕಟ್ಟಿಕೊಂಡ. ಮೈಸೂರನ್ನು ವಶಮಾಡಿಕೊಟ್ಟರೆ ನರಬಲಿ, ಪ್ರಾಣಿಬಲಿ ಕೊಡುವುದಾಗಿ ಹೇಳಿದ. ಪಿರಿಯಾಪಟ್ಟಣದಮ್ಮ ಪ್ರತ್ಯಕ್ಷಳಾಗಿ, ಪರದೇಶವನ್ನು ವಶಮಾಡಿಕೊಡುವುದಾಗಿ ಮಾತುಕೊಟ್ಟಳು.

ಪಿರಿಯಾಪಟ್ಟಣದಿಂದ ಓಲೆ ಬಂದ ಮೂರು ದಿನದ ಮೇಲೆ ಮೈಸೂರಿನ ದಳವಾಯಿ ಓಲೆಗಳನ್ನು ತೆರೆದು ಓದಿದ. ಕಲಿ ಮುಖ ಕೆಟ್ಟಿತು. ಕಣ್ಣೀರಿಟ್ಟ. ಸೋದರಮಾವ ಬಾಳೆ ಅರಸನಿಗೆ ಓದಲು ಓಲೆ ಕೊಟ್ಟ. ಬಾಳೆ ಅರಸು ಶೂರನೊಡನೆ ಯುದ್ಧ ಬೇಡ ಎಂದು ಬುದ್ಧಿ ಹೇಳಿದ. ಹೇಡಿಯಂತೆ ಬಾಳುವುದಕ್ಕಿಂತ ವೀರನಂತೆ ಬಾಳಬೇಕು, ಭಾವನಿಗೆ ತಕ್ಕ

ಉತ್ತರಕೊಡಬೇಕು, ನಾನು ಯುದ್ಧಕ್ಕೆ ಹೋಗುತ್ತೇನೆ, ಆಶೀರ್ವದಿಸಿ ಎಂದು ಕೇಳಿಕೊಂಡ. ಪಿರಿಯಾಪಟ್ಟಣದ ಮಾರಿ ಮಸಣಿಯರಿಗೆ ತುತ್ತಾಗಬೇಡವೆಂದು ಸೋದರಮಾವ ಪುನಃ ಬುದ್ಧಿ ಹೇಳಿದ. ದಳವಾಯಿ ತಾನು ಚಾಮುಂಡಿಯ ವರಪಡೆದುಕೊಳ್ಳುವೆ ಎಂದು, ಚಾಮುಂಡಿ ಬೆಟ್ಟಕ್ಕೆ ಹೋಗಿ ಪೂಜೆಮಾಡಿ, ವರಬೇಡಿದ; ಹರಕೆಹೊತ್ತ. ನೀನು ಯುದ್ಧಕ್ಕೆ ಹೋದರೆ ಪ್ರಾಣಬಿಡುತ್ತೀಯೆ, ಹೋಗಬೇಡ ಎಂದಳು ಚಾಮುಂಡಮ್ಮ. ದೇವತೆ ಎಡಗಡೆ ವರಕೊಟ್ಟರೂ ಬಲಗಡೆ ವರಕೊಟ್ಟಳೆಂದು ಭಾವಿಸಿದ. ನಂಜನಗೂಡಿಗೆ ಹೋಗಿ ನಂಜುಂಡೇಶ್ವರನ ಪೂಜೆಮಾಡಿದ. ಹರಕೆಹೊತ್ತುಕೊಂಡ. ವರಬೇಡಿದ. ನಂಜುಂಡೇಶ್ವರನು ಧೀರನಾದ ವೀರರಾಜನ ಮೇಲೆ ದಂಡೆತ್ತಿ ಹೋಗಬೇಡವೆಂದು ದಳವಾಯಿಗೆ ಹೇಳಿ ಎಡಗಡೆ ವರ ಕೊಟ್ಟನು. ಅದನ್ನೂ ಬಲಗಡೆಯ ವರವೆಂದೇ ಭಾವಿಸಿ ದಳವಾಯಿ ಅರಮನೆಗೆ ಬಂದ.

ದಳವಾಯಿ ಯುದ್ಧಕ್ಕೆ ಸಿದ್ಧತೆಮಾಡಿದ. ನಂಬಿಕಸ್ಥರನ್ನೂ ಶೂರರನ್ನೂ ಬರ ಮಾಡಿಕೊಂಡ. ಧೈರ್ಯಸ್ಥರು ಮುಂದೆ ಬರಲು ಹೇಳಿದ. ಕದನಮಾಡಲು ಕ್ರಮ ತಿಳಿಸಿದ. ಆನೆ ಕುದುರೆ ಕಾಲಾಳು ಸೈನಿಕರಿಗೆಲ್ಲ ತಿಳವಳಿಕೆ ಹೇಳಿದ. ಆನೆ ಅಂಬಾರಿಯ ಮೇಲೆ ಕುಳಿತು ಪಿರಿಯಾಪಟ್ಟಣಕ್ಕೆ ಹೊರಟ. ದಳವಾಯಿ ಹೋಗುತ್ತಿರುವುದನ್ನು ಕಂಡು ಜನರು ಕಣ್ಣೀರಿಟ್ಟರು. ಯುದ್ಧಕ್ಕೆ ಹೋಗುವಾಗ ದಳವಾಯಿ ಮನೆದೇವತೆ ಚಾಮುಂಡಿಯನ್ನು ನೆನೆಸಿಕೊಳ್ಳಲಿಲ್ಲ. ಚಾಮುಂಡಿಗೆ ದುಃಖವಾಯಿತು.

ಚಾಮುಂಡೇಶ್ವರಿ ಉರಿಗದ್ದಿಗೆ ಮೇಲೆ ಮುಹೂರ್ತಮಾಡಿಕೊಂಡು, ತಂಗಿ ಉತ್ತನಹಳ್ಳಿ ಉರಿಕಾತಮ್ಮನನ್ನು ಕರೆದು ಪಿರಿಯಾಪಟ್ಟಣದ ಮಾರಮ್ಮನನ್ನು ಉಪಾಯವಾಗಿ ಮೈಸೂರು ಕಡೆಗೆ ಕರೆದುಕೊಂಡು ಬಾ. ಸುತ್ತೇಳು ಮಾರಿಯರನ್ನು ನಾನು ಕಟ್ಟಿಕೋತೀನಿ, ಇಲ್ಲದಿದ್ದರೆ ದಳವಾಯಿಗೆ ಸರ್ವನಾಶವಾಗುತ್ತದೆ ಎಂದಳು.

ಯುದ್ಧ ಪ್ರಾರಂಭವಾಯಿತು. ತನ್ನನ್ನು ಮರೆತ ದಳವಾಯಿಗೆ ಬುದ್ಧಿಕಲಿಸಲು, ಚಾಮುಂಡಿ ವೀರರಾಜನ ಸಿಪಾಯಿ ವೇಷತಾಳಿ, ದಳವಾಯಿಯ ಸೈನ್ಯವನ್ನು ಸಂಹಾರ ಮಾಡಿದಳು. ತನ್ನನ್ನೂ ಕೊಲ್ಲು ಎಂದು ಮುಂದೆ ಬಂದ ದಳವಾಯಿಗೆ ನಿಜರೂಪ ತೋರಿ, ಇಂದು ಯುದ್ಧಮಾಡಬೇಡ, ನಾಳೆ ಯುದ್ಧಮಾಡು ಎಂದು ಹೇಳಿ ಚಾಮುಂಡಮ್ಮ ಮೈಸೂರಿಗೆ ಹಿಂದಿರುಗಿದಳು. ಉತ್ತನಹಳ್ಳಿ ಉರಿಕಾತಮ್ಮ ಉಳಿದ ಮಾರಿಯರನ್ನು ಕರೆದುಕೊಂಡು ಚಾಮುಂಡಿಯ ಬಳಿಗೆ ಬಂದಳು. ಪಿರಿಯಾಪಟ್ಟಣದ ಮಾರಿಯನ್ನು ಉಪಾಯವಾಗಿ ಬಂಧಿಸಿದಳು. ಉಳಿದ ಮಾರಿಯರು ಆಟಆಡಿಕೊಂಡಿರಲು ಹೇಳಿದಳು.

ಅನಂತರ ಚಾಮುಂಡಮ್ಮ ದಳವಾಯಿ ಬಳಿಗೆ ಬಂದು ಧೈರ್ಯವಾಗಿ ಯುದ್ಧಮಾಡಲು ಹುರಿದುಂಬಿಸಿದಳು. ಪಿರಿಯಾಪಟ್ಟಣದಲ್ಲಿ ಭಾರಿಯುದ್ಧ ನಡೆಯಿತು. ವೀರರಾಜನಿಗೆ ಗೊತ್ತಾಗುವಂತೆ ಮದ್ದುಗುಂಡು ಸಿಡಿದವು. ಅಪಾರ ಸಾವು ನೋವಾಯಿತು. ಚಾಮುಂಡಮ್ಮ ದಳವಾಯಿಯ ಸಹಾಯಕಳಾಗಿ ನಿಂತಳು. ವೀರರಾಜನ ಕಡೆಗೆ ದೇವತೆಯಿಲ್ಲ. ವಲ್ಲಿ ಸೈಜುನ ಎಂಬುವನು ವೀರಾವೇಶದಿಂದ ಹೋರಾಡಿದ. ಮೂರು ಸಾವಿರ ಶತ್ರುಸೈನ್ಯ ಕೊಂದ. ಚಾಮುಂಡಮ್ಮ ಪ್ರವೇಶಿಸಿ ವಲ್ಲಿ ಸೈಜುನನ್ನು ಸಂಹರಿಸಿದಳು.

ವೀರರಾಜನ ಬಳಿಗೆ ಮೂವರು ಹೆಂಡತಿಯರೂ ಬಂದರು. ಯುದ್ಧದ ಸ್ಥಿತಿ ಹೇಳಿದರು. ದಳವಾಯಿಯ ಮೇಲುಗೈ ತಿಳಿಸಿದರು. ಕೋಪಗೊಂಡ ವೀರರಾಜ ಯುದ್ಧಭೂಮಿಗೆ ತೆರಳಲು ಸಿದ್ಧನಾದ. ತಮ್ಮನ್ನು ಕೊಂದು ಹೋಗಲು ಹೆಂಡತಿಯರು ಪ್ರಾರ್ಥಿಸಿದರು. ಕೋಪಗೊಂಡ ವೀರರಾಜ ಆವೇಶದಿಂದ ಹೆಂಡತಿಯರನ್ನು ಕೊಂದು, ರಕ್ತ ಮೆತ್ತಿದ ಕತ್ತಿಯನ್ನು ಹಿಡಿದುಕೊಂಡು ಯುದ್ಧಭೂಮಿಗೆ ಬಂದ. ದಳವಾಯಿಯನ್ನು ಎದುರಿಸಿದ. ದಳವಾಯಿ ವೀರರಾಜನನ್ನು ಸೋಲಿಸಿ, ಕತ್ತರಿಸಿದ. ಮೈಸೂರು ದಂಡು ಪಿರಿಯಾಪಟ್ಟಣವನ್ನು ಆಕ್ರಮಿಸಿತು.

ದಳವಾಯಿ ಮೈಸೂರಿಗೆ ಹಿಂದಿರುಗಿದ. ಬೆಟ್ಟಕ್ಕೆ ಬಂದ ಚಾಮುಂಡಮ್ಮ ಬಂದನದಲ್ಲಿಟ್ಟಿದ್ದ ಪಿರಿಯಾಪಟ್ಟಣದಮ್ಮನಿಗೆ ಬಿಡುಗಡೆಮಾಡಿದಳು. ಪಿರಿಯಾಪಟ್ಟಣದ ಸೋಲುಕಂಡು ಮಾರಮ್ಮ ಆಘಾತಗೊಂಡಳು. ಪುನಃ ಚಾಮುಂಡಿಯ ಬಳಿಗೆ ಬಂದು, ನನ್ನನ್ನು ಮರೆಮಾಯಿಸಿ ಹೀಗೆ ಮಾಡಿದೆಯಲ್ಲ ಎಂದು ಕೇಳಿದಳು. ದಳವಾಯಿ ತಂದೆಯ ತಲೆಯನ್ನು ನಿನಗೆ ಕೊಡಿಸಿದ್ದೆ, ವೀರರಾಜನ ತಲೆಯನ್ನು ನಾನು ತಂದೆ. ಅಪ್ಪ ಮಗ ಇಬ್ಬರ ತಲೆಯೂ ಒಂದೇ ಪಟ್ಟಣದಲ್ಲಿ ಬಿದ್ದರೆ ಕರ್ಮಬರುತ್ತದೆಂದು ಹೀಗೆಮಾಡಿದೆ. ತಪ್ಪು ಮನ್ನಿಸು. ನಿನಗೆ ಮೊದಲ ಜಾತ್ರೆ, ಅನಂತರ ನನ್ನ ಜಾತ್ರೆ ನಡೆಸುತ್ತೇನೆ ಎಂದು ಹೇಳಿ ಚಾಮುಂಡಮ್ಮ ಅಕ್ಕ ಪಿರಿಯಾಪಟ್ಟಣದಮ್ಮನಿಗೆ ಶರಣುಮಾಡಿದಳು.

ದಳವಾಯಿ ಸೆರೆಹಿಡಿದಿದ್ದ ವೀರರಾಜನ ಮಗ ವೀರಣ್ಣನ ವಿಷಯವನ್ನು ತಿಳಿದ ಚಾಮುಂಡಮ್ಮ ಮಾಯದಬೂದಿ ಉರಿಬಿದಾಗ ಅವನು ಮಾಯವಾಗಿ ಪಿರಿಯಾಪಟ್ಟಣದಲ್ಲಿ ಒಡೆದುಮೂಡಿದ. ಈರಣ್ಣಸ್ವಾಮಿಯಾದ. ಪೂಜೆಗೆ ಪಾತ್ರನಾದ.

ಇದು ಮೈಸೂರು ಕೊಡಗಿನ ನಡುವೆ ಕ್ಷುಲ್ಲಕ ಕಾರಣಕ್ಕೆ ನಡೆದ ವೀರ ಸಾಹಸದ ಹೋರಾಟದ ಕಥೆ. ಯುದ್ಧಭೂಮಿಯ ತಂತ್ರದಲ್ಲಿ ದೇವತೆಗಳೂ ಪಾಲ್ಗೊಳ್ಳುವುದು ವಿಶೇಷ. ಅಪ್ರಾಕೃತಿಕ ಮಾಟ ಮಂತ್ರಗಳೂ ಸೇರಿವೆ. ಹೆಣ್ಣಿನ ದ್ವೇಷ ಸಿಟ್ಟು ಸಂಚು ಸಿಟ್ಟುಗಳೂ ಇವೆ. ಮಾನರಕ್ಷಣೆಯ ಹಿನ್ನೆಲೆಯಲ್ಲಿ ನಿಷ್ಠುರ ಬಲಿಯೂ ತಳಕುಹಾಕಿಕೊಂಡಿದೆ. ದೇವತೆಗಳು ಮತ್ತು ಮನುಷ್ಯರ ನಡುವೆ ಸಲೀಸಾದ ಒಡನಾಟವಿದೆ. ಸಾವಕಾಶವಾಗಿ ವಿವರವಾಗಿ ಕಥೆ ಸಾಗುತ್ತದೆ.

ಇದು ಹವ್ಯಾಸಿ ಗಾಯಕಿ ಯಾಚೇನಹಳ್ಳಿ ನಿಂಗಮ್ಮ ಹಾಡಿರುವ ಕಾವ್ಯಕಥೆ.

## ೩. ಮಡಿಕೇರಿ ಲಿಂಗರಾಜ

ಮಡಿಕೇರಿ ಲಿಂಗರಾಜ ಬಳ್ಳಾರಿಯಲ್ಲಿರುವ ತಂಗಿ ನಿಂಗವ್ವಳ ಮನೆಗೆ ಹೋಗಿ, ತೌರಿಗೆ ಬರಲು ಕರೆಯುತ್ತಾನೆ. ತಾಯಿ ತಂದೆ ತೀರಿಕೊಂಡಾಗಲೂ ತಂಗಿಗೆ ತಿಳಿಸಲಿಲ್ಲ; ಕರೆಯಲಿಲ್ಲ. ಆಕೆ ಮದುವೆಯಾಗಿ ತೌರುಬಿಟ್ಟು ಗಂಡನ ಮನೆ ಸೇರಿ ಹನ್ನೆರಡು ವರ್ಷವಾಗಿದೆ. ಹೆಣ್ಣು ಮಗಳಿಗೆ ತಾಯಿಯಿದ್ದರೆ ತೌರು; ತಂದೆಯಿದ್ದರೆ ಬಳಗ. ಗಂಡ ಬಸಪ್ಪ ವ್ಯಾಪಾರಕ್ಕಾಗಿ

ಊರಿಗೆ ಹೋಗಿದ್ದಾನೆ. ಅಂಥ ಸಮಯದಲ್ಲಿ ಅಣ್ಣ ತಂಗಿಯನ್ನು ಕರೆಯಲು ಬಂದಿದ್ದಾನೆ.

ಅಣ್ಣ ಲಿಂಗರಾಜ ತಂಗಿ ಬಡಿಸಿದ ಊಟಮಾಡುತ್ತಾ ತಾನು ಕಟ್ಟಿಸುತ್ತಿರುವ ಅರಮನೆಯ ಬಾಗಿಲು ಬೀಳುತ್ತಿರುವ ಸುದ್ದಿ ಧ್ಯಾನಮಾಡಿದನು. ಏಲಕ್ಕಿ ದೊರೆ ಭಾವನ ಬಲಿ ಬೇಕೆಂದು ಜೋಯಿಸರು ಹೇಳಿದ್ದಾರೆ. ತಂಗಿಯನ್ನು ತೌರಿಗೆ ಕರೆದುಕೊಂಡು ಹೋದರೆ, ಹೆಂಡತಿಯ ಆಸೆಗೆ ಬರುವ ಭಾವ ಬಸಪ್ಪನನ್ನು ಮೋಸದಿಂದ ಬಲಿಕೊಡಬಹುದೆಂಬುದು ಲಿಂಗರಾಜನ ತರ್ಕ.

ತೌರಿಗೆ ಬರಲು ತಂಗಿಯನ್ನು ಬಲವಂತಮಾಡಿದ. ಮಂಗಳವಾರ ಬರಲಾರೆ. ಮಗನಾಣೆ ಶನಿವಾರ ಬರುತ್ತೇನೆ ಎಂದಳು. ಶನಿವಾರದಂದು ಧೂಪಾರ್ತಿಕಂದಯ್ಯನನ್ನು ಕರೆದುಕೊಂಡು, ಅರಮನೆಗೆ ಬೀಗಹಾಕಿ, ಗಂಡನಿಗೆ ಪತ್ರ ಬರೆದಿಟ್ಟು, ತೌರಿಗೆ ಹೊರಡುತ್ತಾಳೆ. ಆಗ ಅಪಶಕುನಗಳಾಗುತ್ತವೆ. ಬಾಗಿಲ ಉತ್ತರಾಸ ಹಣೆಗೊಡೆದು ತಡೆಯುತ್ತದೆ. ಆದರೂ ಮುಂದೆ ಹೋಗುವಳು. ಅಲ್ಲೂ ಅಪಶಕುನ. ನದಿದಾಟುವಾಗ ಹೊರಗಾದಳು. ಆದರೂ ಅಣ್ಣ ಇದ್ದಾನೆಂಬ ಧೈರ್ಯದಿಂದ ಮುಂದೆ ಹೋಗಿ, ಅಣ್ಣನ ಅರಮನೆಯ ಹೊರಗೆ ಕುಳಿತಳು.

ಅತ್ತಿಗೆ ಮಲ್ಲಮ್ಮ ನಾದಿನಿ ನಿಂಗಮ್ಮನ ಕ್ಷೇಮವಿಚಾರಿಸುತ್ತಾಳೆ. ಹೊರಗಾಗಿರುವ ವಿಷಯ ತಿಳಿದು ಸ್ನಾನಕ್ಕೆ ನೀರುಕಾಯಿಸಲು ಅಣಿಯಾದಳು. ಅಷ್ಟರಲ್ಲಿ ಬಂದ ಅಣ್ಣ ಲಿಂಗರಾಜ ಒಟ್ಟಿಗೆ ಊಟಮಾಡಲು ತಂಗಿಯನ್ನು ಕರೆದ. ಮುಟ್ಟಾಗಿದ್ದ ತಂಗಿ ಒಟ್ಟಿಗೂಟ ಮಾಡಲು ಒಪ್ಪಲಿಲ್ಲ. ನಿನಗೆ ತೌರುಮನೆ ಆಸೆಯೋ ಗಂಡನ ಮನೆ ಆಸೆಯೋ ಎಂದು ಕೇಳಿದ. ಅಣ್ಣನ ಒಡಕುಮಾತು ವಿಚಿತ್ರವೆನಿಸಿತು. ಒಗಟಾಗಿ ಮಾತಾಡಬೇಡ, ಬಿಡಿಸಿ ಹೇಳು ಎಂದಳು. ಮನಸ್ಸುಬಿಚ್ಚಿ ಮಾತಾಡಬೇಕಾದರೆ ಕೈಭಾಷೆ ಕೊಡು ಎಂದ. ತನ್ನಿಂದ ಅಣ್ಣನಿಗೆ, ತೌರಿಗೆ ಒಳ್ಳೆಯದಾಗಲಿ ಎಂದು ಭಾಷೆಕೊಟ್ಟಳು.

ತಂಗಿಗೆ ಸ್ನಾನಮಾಡಿಸಿ, ಒಳ್ಳೆಯ ಊಟಮಾಡಿಸಿ, ಒಟ್ಟಿಗೆ ಕುಳಿತು ವಿಷಯ ಪ್ರಸ್ತಾಪಿಸಿದ. ಮಡಿಕೇರಿಯಲ್ಲಿ ನಾನು ಅರಮನೆ ಕಟ್ಟಿಸುತ್ತಿದ್ದೇನೆ. ಅದು ನಿಲ್ಲುತ್ತಿಲ್ಲ. ಕುಸಿದುಬೀಳುತ್ತಿದೆ. ನಿನ್ನ ಗಂಡನನ್ನು ಬಲಿಕೊಟ್ಟರೆ ಅರಮನೆ ನಿಲ್ಲುತ್ತದೆ. ನಿನ್ನ ತೌರು ಮನೆ ಉಳಿಯುತ್ತದೆ ಎಂದ. ಗಂಡನ ಬಲಿ ಬಯಸಿದ ಅಣ್ಣನ ಮಾತು ಕೇಳಿ ಲಿಂಗಮ್ಮ ಮೂರ್ಛೆಹೋದಳು. ಎಚ್ಚೆತ್ತು ನನ್ನನ್ನು ಮುಂಡೆಮಾಡಲು, ಮೋಸದಿಂದ ಕರೆದು ತಂದೆಯಾ ಎಂದು ಕೇಳಿದಳು. ಗಂಡನ ಮನೆ ಹಾಳುಮಾಡಬೇಡವೆಂದು ಕಣ್ಣೀರಿಟ್ಟಳು. ಅಣ್ಣನ ಮನಸ್ಸು ಕರಗಲಿಲ್ಲ. ಮಾತಿಗೆ ಮಾತು ಬೆಳೆಯಿತು. ಮನಸ್ತಾಪ ಬಂತು. ಭಾಷೆಕೊಟ್ಟು ಮಾತಿಗೆ ತಪ್ಪುತ್ತೀಯಾ ? ನನ್ನೆದುರಿಗೆ ಇರಬೇಡ. ಹೊರಟುಹೋಗು ಎಂದು ಆಚೆಗೆ ನೂಕುತ್ತಾನೆ. ಅವಳ ಹಣೆಗೆ ಏಟಾಯಿತು. ಮೂಗಿನಲ್ಲಿ ರಕ್ತಬಂತು. ಸಿಟ್ಟಿನಿಂದ ಅಣ್ಣನ ಮುಂದೆ ಸೆಟೆದುನಿಂತು ಎದೆತಟ್ಟಿ, 'ಹುಟ್ಟಿದ ಮನೆಯಲ್ಲಿ ನನ್ನನ್ನು ಹಟ್ಟಿಯಿಂದಾಚೆಗೆ ನೂಕುತ್ತೀಯಾ ? ನನ್ನ ಗಂಡನನ್ನು ನಾನು ಕೊಟ್ಟರೆ, ನನ್ನ ಎದೆಗಳು

ಎಕ್ಕದ ಕಾಯಾಗಲೀ ಎಂದು ಶಪಥಮಾಡಿದಳು. ನನ್ನಂಥ ಗಂಡಸಿನ ಮುಂದೆ ಹೀಗೆ ಹೇಳಿದಳಲ್ಲಾ ಅಂತ ತಂಗಿಯನ್ನು ಹಿಡಿಸಿ ಕಂಬಕ್ಕೆ ಕಟ್ಟಿ ಮುಳ್ಳುಕೊರಡಿನಿಂದ ಹೊಡೆಯಿಸಿದನು. ಏಟು ತಾಳಲಾರದೆ ಅತ್ತಳು. ಬಿಡುಗಡೆಗೆ ಬೇಡಿಕೊಂಡಳು. ಮುಂದಾಗಿ ಸಾಯಿಸಲು ಕೇಳಿಕೊಂಡಳು. ಮಗನನ್ನು ತೋರಿಸಲು ಪ್ರಾರ್ಥಿಸಿದಳು. ಆಡುತ್ತಿದ್ದ ಮಗ ಬಂದು ತಾಯಿಯನ್ನು ತಬ್ಬಿಕೊಂಡ.

ತಾಯಿ ಮಗ ಪರಸ್ಪರ ಶೋಕಾಡಿದರು. ಮಗ ವಿಷಯ ತಿಳಿದು ಮಾವನ ಬಳಿಗೆ ಹೋಗಿ ತನ್ನ ತಾಯಿಯನ್ನು ಬಿಟ್ಟುಬಿಡಲು ಕೇಳಿದ. ನನ್ನ ತಂದೆಯ ಬದಲು ತನ್ನನ್ನು ಕಡಿಯಲು ಹೇಳಿದ. ಮಾವನಿಗೆ ಕನಿಕರಬರಲಿಲ್ಲ. ಬಾಲಕ ಅತ್ತೆಯ ಬಳಿಗೆ ಹೋದ. ನನ್ನ ತಾಯಿ ನಿನ್ನಂತೆ ಹೆಣ್ಣು. ಅವಳ ಸ್ಥಿತಿ ನೋಡು ಬಾ ಎಂದು ಕರೆದ. ಮಲ್ಲಮ್ಮ ಬಂದು ನೋಡಿದಳು. ಲಿಂಗಮ್ಮನ ಸ್ಥಿತಿಗೆ ದುಃಖವಾಯಿತು. ಅವಳನ್ನು ಬಿಡುಗಡೆ ಮಾಡಲು ಗಂಡನಲ್ಲಿ ಕೇಳಿಕೊಂಡಳು. ಏಳುಸಾವಿರ ಸೈನ್ಯದ ಜೊತೆಯಲ್ಲಿ ಹೋಗಿ, ತಂಗಿಯ ಗಂಡನನ್ನು ಗೆದ್ದು, ಸೆರೆಹಿಡಿದು ತಂದು ಅರಮನೆಗೆ ಬಲಿಕೊಡಲು ನಿರ್ಧರಿಸಿ, ಲಿಂಗಮ್ಮನನ್ನು ಬಿಡುಗಡೆ ಮಾಡಿದ.

ಲಿಂಗಮ್ಮ ಮಗನೊಡನೆ ತನ್ನ ಅರಮನೆಗೆ ಬಂದಳು. ಕೂಡಲೆ ಬರಬೇಕೆಂದು ಗಂಡನಿಗೆ ಕಾಗದ ಕಳಿಸಿದಳು. ಗಂಡ ಬೇಗ ಬಂದ. ವಿಷಯ ತಿಳಿದು ಕಂಗಾಲಾದ. ಬಸಪ್ಪನಿಗೆ ನಂಬಲಾಗಲಿಲ್ಲ. ಭಾವ ಭಾವಮೈದುನರು ಆತ್ಮೀಯವಾಗಿದ್ದೇವೆ. ಹೀಗೆ ಮಾಡಲು ಸಾಧ್ಯವೆ? ನನ್ನನ್ನು ಬಲಿಕೇಳುತ್ತಾನೆಯೇ ? ನಾನೇ ಹೋಗಿ ನಿಜಾಂಶ ತಿಳಿದು ಬರುವುದಾಗಿ ಹೊರಟ. ಹೆಂಡತಿ ತಡೆದಳು. ತನ್ನ ಮೈ ಮೇಲಿನ ಗಾಯ ತೋರಿದಳು. ಮೂರುದಿನ ತಡೆದು ನೋಡೋಣ ಎನ್ನುವಷ್ಟರಲ್ಲಿ ಮಡಿಕೇರಿಯಿಂದ ಲಿಂಗರಾಜ ಸೈನ್ಯಸಮೇತ ದಂಡೆತ್ತಿ ಬರುತ್ತಾನೆ. ಮಲಗಿದ್ದ ನಿಂಗಮ್ಮನಿಗೆ ದುಸ್ವಪ್ನ ಬೀಳುತ್ತದೆ. ಗಂಡ ಹೆಂಡತಿ ಮಗು ಒಟ್ಟಿಗೆ ದೇಶಬಿಟ್ಟು ಹೋಗಲು ನಿರ್ಧರಿಸುತ್ತಾರೆ.

ಲಿಂಗಮ್ಮ ಹೆಣ್ಣುವೇಷ ತೊರೆದು ಗಂಡುವೇಷ ಧರಿಸುತ್ತಾಳೆ. ಆಯುಧ ಇಟ್ಟುಕೊಳ್ಳುತ್ತಾಳೆ. ಧೂಪಾರ್ತಿ ಮಗನನ್ನು ಬೆನ್ನಿಗೆ ಕಟ್ಟಿಕೊಳ್ಳುತ್ತಾಳೆ. ಮೂರು ಜನರೂ ಒಂದೇ ಕುದುರೆಯ ಮೇಲೆ ಕುಳಿತು ಮಧ್ಯರಾತ್ರಿಯಲ್ಲಿ ಊರುಬಿಟ್ಟು ಹೊರಡುತ್ತಾರೆ.

ದಂಡೆತ್ತಿ ಬಂದ ಲಿಂಗರಾಜ ಮುತ್ತಿಗೆ ಹಾಕಿ, ಮನೆಯಲ್ಲಿ ತಂಗಿ ಭಾವ ಇಲ್ಲದುದನ್ನು ಅರಿತು, ಹುಡುಕುತ್ತಾ ಬರುತ್ತಾರೆ. ಹುಡುಕಲು, ವಾಸನೆ ತಿಳಿಯಲು ಬೇಟೆನಾಯಿ ಬಿಡುತ್ತಾರೆ. ಮೂರು ಮೈಲಿದೂರದಲ್ಲಿ, ಅಡಿವಿಯಲ್ಲಿ, ಬಿದಿರುಮೆಳೆಯಲ್ಲಿ ಕುದುರೆ ಕಟ್ಟಿ ಒಂದು ಹಳ್ಳದಲ್ಲಿ ಕುಳಿತು ತರಗೆಲೆ ಹೊದ್ದುಕೊಂಡು ಬಚ್ಚಿಟ್ಟುಕೊಂಡಿದ್ದವರನ್ನು ಪತ್ತೆ ಹಚ್ಚುತ್ತಾರೆ. ಕೈಸೆರೆಹಿಡಿಯುತ್ತಾರೆ. ಬಿಟ್ಟುಬಿಡಲು ಅಣ್ಣನನ್ನು ಬೇಡಿಕೊಳ್ಳುತ್ತಾಳೆ. ಮಾರಿ ಮುಂದೆ ಕೋಣನನ್ನು ಕಡಿಯುವ ಹಾಗೆ ನಿನ್ನ ಗಂಡನನ್ನು ಕಡಿಯುತ್ತೇನೆ ಎನ್ನುತ್ತಾನೆ. ಗಂಡನ ಸಾವು ನೋಡುವುದಕ್ಕಿಂತ ತಾನೇ ಮೊದಲು ಸಾಯಬೇಕೆಂದು ನಿರ್ಧರಿಸಿ, ಅಣ್ಣನ

ಸೈನ್ಯದ ಮೇಲೆ ಯುದ್ಧಕ್ಕೆ ನಿಲ್ಲುತ್ತಾಳೆ. ಬಂದುದೆಲ್ಲಾ ಬರಲಿ, ಭಗವಂತನ ದಯವಿರಲಿ ಎಂದು ವೀರಾವೇಶದಿಂದ ಹೋರಾಡುತ್ತಾಳೆ. ಎಲ್ಲರೂ ಬೆರಗಾಗುತ್ತಾರೆ.

ಬಣ್ಣದ ಕತ್ತಿಯನ್ನು ಬಲಗೈಲಿ ಹಿಡಿದುಕೊಂಡು, ಹುಲ್ಲೆಮರಿಯಂತೆ ಅಣ್ಣನ ದಂಡಿನ ಮೇಲೆ ಎರಗುತ್ತಾಳೆ. ಭೂಮಿತಾಯಿ, ಭಗವಂತ ವೀರಮಹಿಳೆಗೆ ಸಹಕರಿಸುತ್ತಾರೆ. ಅಣ್ಣನ ಸೈನ್ಯವನ್ನು ನಾಶಮಾಡುತ್ತಾಳೆ. ಬೆನ್ನಿನಲ್ಲಿ ಮಗನನ್ನು ಕಟ್ಟಿಕೊಂಡು ಯುದ್ಧಮಾಡುವ ವೀರನಾರಿಯನ್ನು ಕಂಡು, ರಕ್ತದಕೋಡಿ ಹರಿದುದನ್ನು ಕಾಡು ದಿಗ್ಭ್ರಮೆಯಾಗುತ್ತದೆ. ಯುದ್ಧಮಾಡುವ ರಭಸದಲ್ಲಿ ಬೆನ್ನಿಗೆ ಕಟ್ಟಿಕೊಂಡಿದ್ದ ಮಗು ಬಿದ್ದುಹೋಗುತ್ತದೆ. ಅದು ತಾಯಿಗೆ ತಿಳಿಯುವುದಿಲ್ಲ. ಲಿಂಗರಾಜ ಸೋತೆನೆಂದು ಒಪ್ಪಿಕೊಳ್ಳುತ್ತಾನೆ. ಲಿಂಗಮ್ಮ ಯುದ್ಧ ನಿಲ್ಲಿಸಿ, ಗಂಡನ ನೆನಪಾಗಿ, ಗಂಡನನ್ನು ಹುಡುಕಿ, ಕಂಡು, ಕುದುರೆಯ ಮೇಲೆ ಕೂರಿಸಿಕೊಂಡು ಅರಮನೆಗೆ ಬಂದಳು.

ಯುದ್ಧದಲ್ಲಿ ಅಳಿದುಳಿದವರನ್ನು ಹುಡುಕುತ್ತಿದ್ದಾಗ ಲಿಂಗರಾಜನಿಗೆ, ಹೆಣದ ಮೇಲೆ ಆಯಾಸಗೊಂಡಿದ್ದ ತಂಗಿಯ ಮಗ ಕಾಣಿಸುತ್ತಾನೆ. ಮಗುವನ್ನು ಮಡಿಕೇರಿಗೆ ಸಾಗಿಸುವರು.

ಅರಮನೆಗೆ ಬಂದ ಲಿಂಗಮ್ಮ ಮತ್ತು ಬಸಪ್ಪ ಯುದ್ಧದ ಗಾಯವನ್ನು ತೊಳೆದು ಚಿಕಿತ್ಸೆ ಪಡೆದರು. ಆಗ ಮಗನ ನೆನಪಾಯಿತು. ಯುದ್ಧದ ಆರ್ಭಟದಲ್ಲಿ ಮಗನನ್ನು ಕಳೆದುಕೊಂಡುದರಿಂದ ದುಃಖವಾಯಿತು. ತಾನೇ ಮಗನನ್ನು ಸಾಯಿಸಿರಬಹುದೆಂದು ಪೇಚಾಡಿಕೊಳ್ಳುವಳು.

ಮಡಿಕೇರಿಯಲ್ಲಿ ಲಿಂಗರಾಜ ತಂಗಿಯ ಮಗನ ರೂಪು ಲಾವಣ್ಯ ನೋಡಿದ. ಅಪ್ಪ ಮಗನದು ಒಂದೇ ರಕ್ತ. ತಂದೆಗೆ ಬದಲಾಗಿ ಮಗನನ್ನು ಬಲಿಕೊಟ್ಟು ಅರಮನೆ ಉಳಿಸಿಕೊಳ್ಳೋಣವೆಂದು ತಂಗಿಯ ಮಗನನ್ನು ಆನೆ ಅಂಬಾರಿಯ ಮೇಲೆ ಮೆರವಣಿಗೆ ಮಾಡಿ, ಮಗುವನ್ನು ಬಲಿಕೊಡುತ್ತಾನೆ. ತಾಯಿ ತಂದೆಯರನ್ನು ನೆನೆಸಿಕೊಂಡರೂ ಅವರನ್ನು ನೋಡಲಾಗದೆ ಮಗು ಪ್ರಾಣಬಿಡುತ್ತದೆ.

ಮಗುವನ್ನು ಭಯಂಕರವಾಗಿ ಕೊಂದು, ತುಂಡು ತುಂಡು ಮಾಡಿ, ಬಂಗಾರದ ಪೆಟ್ಟಿಗೆಗೆ ತುಂಬಿ, ತಂಗಿಗೆ ಕಾಣಿಕೆಯಾಗಿ ಕಳಿಸುವನು. ತಂಗಿಯ ಮೇಲಿನ ಸಿಟ್ಟು ಹಾಗೆ ಮಾಡಿಸುವುದು.

ಬಂಗಾರದ ಪೆಟ್ಟಿಗೆ ಕಾಣಿಕೆ ಸಹಿತ ಬಂದ ದಂಡು ನೋಡಿ ನಿಂಗಮ್ಮ ಯುದ್ಧಕ್ಕೆ ನಿಲ್ಲುವಳು. ಸೈನಿಕರು ಕೈಮುಗಿದು, ಯುದ್ಧಕ್ಕೆ ಬಂದಿಲ್ಲ, ಕಾಣಿಕೆ ಕೊಡಲು ಬಂದಿದ್ದೇವೆ ಎಂದು ಹೇಳುವರು. ಅಣ್ಣ ಪ್ರೀತಿಯಿಂದ ಯಾವುದೋ ಕಾಣಿಕೆ ಕಳಿಸರಬಹುದೆಂದು ಲಿಂಗಮ್ಮ ಭಾವಿಸುವಳು.

ಬಂಗಾರದ ಪೆಟ್ಟಿಗೆಯನ್ನು ಗಂಗೆಸ್ಥಾನಕ್ಕೆ ತೆಗೆದುಕೊಂಡುಹೋಗಿ, ನಿಷ್ಠೆಯಿಂದ ಪೂಜೆ

ಮಾಡುವಳು. ಪೆಟ್ಟಿಗೆಯನ್ನು ತೆರೆದು ನೋಡುತ್ತಾಳೆ. ದೇವರದಯದಿಂದ ಸತ್ತಿದ್ದ ಮಗು ಜೀವತಾಳಿ ಏಳುತ್ತದೆ. ಮಗುವನ್ನು ಅಪ್ಪಿಕೊಳ್ಳುತ್ತಾಳೆ. ಅಣ್ಣನ ಕಡೆಯ ಸೈನಿಕರಿಗೆ ಕೈಮುಗಿಯುತ್ತಾಳೆ. ಅವರನ್ನೆಲ್ಲ ಅರಮನೆಗೆ ಕರೆದುಕೊಂಡು ಹೋಗಿ ಊಟ ಉಪಚಾರ ಮಾಡಿಸಿ ಸತ್ಕರಿಸುತ್ತಾಳೆ. ಅಣ್ಣ ಕಳುಹಿಸಿದ್ದ ಬಂಗಾರದ ಪೆಟ್ಟಿಗೆಗೆ ಒಂಬತ್ತು ಜಾತಿಯ ಹಣ್ಣು ತುಂಬಿ ಪ್ರತಿಯಾಗಿ ತಾನೂ ಕಾಣಿಕೆ ಕಳಿಸುತ್ತಾಳೆ.

ಲಿಂಗರಾಜನಿಗೆ ಸಂತೋಷವಾಯಿತು. ಮಗುವನ್ನು ಬಲಿಕೊಟ್ಟುದರಿಂದ ಅರಮನೆ ಉಳಿಯಿತು. ತನ್ನ ವಂಶ ಉಳಿಯಿತು. ತಂಗಿ ಮುಂಡೆಯಾಗುವುದು ತಪ್ಪಿ ಮುತ್ತೈದೆಯಾಗಿ ಉಳಿಯುವಂತಾಯಿತು. ಸತ್ತ ಮಗುವೂ ಬದುಕಿದ ಹಾಗಾಯಿತು. ಅಣ್ಣ ತಂಗಿ ಹೊಂದಿಕೊಂಡು ಬಾಳಲು ನಿರ್ಧರಿಸಿದರು.

ಈ ಕಥೆ ಮಡಿಕೇರಿ ಮತ್ತು ಬಳ್ಳಾರಿ ನಡುವಿನ ಪರಿಸರದಲ್ಲಿ ನಡೆದಿರುವಂತಿದೆ. ಇದರಲ್ಲಿ ರಾಜಮನೆತನದ ಸರ್ವಾಧಿಕಾರದ ಧೋರಣೆಗಳು ಹೇರಳವಾಗಿವೆ. ಪದ್ಯ ಗದ್ಯ ಮಿಶ್ರಿತ ಕಥನ ಕಾವ್ಯದಲ್ಲಿ ನಾನಾ ರೀತಿಯ ಹಾಡಿನ ಧಾಟಿಗಳಿವೆ. ಕಥೆ ವೇಗವಾಗಿ ಸಾಗುತ್ತದೆ. ವೀರ ಕರುಣ ರಸಗಳ ಮಿಶ್ರಣವಿದೆ. ಲಿಂಗಮ್ಮನ ವೀರಾವೇಶದ ಯುದ್ಧ ರುದ್ರಭಯಂಕರವಾಗಿದೆ. ಇತಿಹಾಸದಲ್ಲಿ ನಡೆದಿರಬಹುದಾದ ಘಟನೆ ಜನಪದರಲ್ಲಿ ಮಂಥನವಾಗಿ ಅಪರೂಪವಾದ ಕಥೆಯಾಗಿ ರೂಪುಗೊಂಡಿದೆ. ದುರಂತ ಕಥೆ ಆಕಸ್ಮಿಕವಾಗಿ ಸುಖಾಂತವಾಗಿದೆ.

ಇದು ಒಂದು ಕಾಲದಲ್ಲಿ ನಮ್ಮ ಸಮಾಜದ ರಾಜಮನೆತನಗಳಲ್ಲಿ ಸರ್ವಸಾಮಾನ್ಯವಾಗಿದ್ದ, ನರಬಲಿ ಆಶಯದ ಕಥೆ. ಈ ಮೌಢ್ಯಾಚರಣೆ ಮಾಡಿರುವ ಅನಾಹುತ ಅಷ್ಟಿಷ್ಟಲ್ಲ.

ಈ ಚಾರಿತ್ರೀಕ ಕಥನಕಾವ್ಯವನ್ನು ಹೊಳೆನರಸೀಪುರದ ಮರಿಯಪ್ಪ ಬಿನ್ ಸಿದ್ದಯ್ಯ ಪ್ರಧಾನ ಗಾಯಕನಾಗಿ ಹಾಡಿದ್ದಾನೆ. ಅರಕಲಗೂಡಿನ ಸಿದ್ದಯ್ಯ ಬಿನ್ ದಾಸಯ್ಯ ಮತ್ತು ಇಜಾಪುರ ಕಾಲೋನಿಯ ಜವರಯ್ಯ ಬಿನ್ ಪುಟ್ಟಯ್ಯ ಸಹಗಾಯಕರಾಗಿ ಹಾಡಿದ್ದಾರೆ.

## ೪. ಲಕ್ಕಣ್ಣ ಈರಣ್ಣ

ಹಳೆಯಬೀಡಿನ ಬಲ್ಲಾಳರಾಯನ ತಂಗಿ ಬಲ್ಲಾಳದೇವಿಯನ್ನು ಹೊಳಲಿಗೆ ಮದುವೆ ಮಾಡಿಕೊಟ್ಟಿದೆ. ಅವಳಿಗೆ ಇಬ್ಬರು ಗಂಡು ಮಕ್ಕಳು: ಲಕ್ಕಣ್ಣ ಮತ್ತು ಈರಣ್ಣ.

ಬಲ್ಲಾಳರಾಯನಿಗೆ ಇಬ್ಬರು ಹೆಣ್ಣು ಮಕ್ಕಳು: ಚಿಕ್ಕಹೊನ್ನಿ ಮತ್ತು ದೊಡ್ಡ ಹೊನ್ನಿ. ಬಲ್ಲಾಳರಾಯ ಒಂದು ಕಾಗದ ಬರೆದಿದ್ದಾನೆ: ಎಡೆಗಾರ ಬೈಲಿನಲ್ಲಿ ಹನ್ನೆರಡು ಮೆಟ್ಟಿನ ಹುಲಿ ಮಲಗಿದೆ. ಅದನ್ನು ಕೊಂದವರಿಗೆ ತನ್ನ ಹೆಣ್ಣು ಮಕ್ಕಳನ್ನು ಕೊಟ್ಟು ಮದುವೆ ಮಾಡುವೆ ಎಂದು. ಲಕ್ಕಣ್ಣ ಈರಣ್ಣ ಕಾಗದವನ್ನು ಓದಿಕೊಂಡು ಹುಲಿಬೇಟೆಯಾಡಲು ಹೋಗಲು ನಿರ್ಧರಿಸಿ ತಾಯಿಗೆ ತಿಳಿಸುವರು. ನಿಮ್ಮ ತಂದೆಯನ್ನು ಕೊಂದ ಮಾವನ ಊರಿಗೆ

ಹೋಗುವುದು ಬೇಡ, ಚಿಕ್ಕವರಾದ ನಿಮಗೆ ಹುಲಿಬೇಟೆಯೂ ಬೇಡ ಎನ್ನುವಳು. ಮಕ್ಕಳು ಕೇಳಲಿಲ್ಲ. ಒಂದು ಹೂವಿನ ಸಸಿಯನ್ನು ತಂದು ನೆಟ್ಟು ಈ ಹೂಗಿಡ ಚಿಗುರಿದರೆ ಮಕ್ಕಳು ಬದುಕಿದ್ದಾರೆ; ಇದು ಒಣಗಿಹೋದರೆ ಮಕ್ಕಳು ಸತ್ತಿದ್ದಾರೆ ಎಂದು ತಿಳಿದಿಕೋ ಎನ್ನುವರು. ಅವರು ಸ್ನಾನ, ಊಟ ಮಾಡಿ, ರೊಟ್ಟಿ ಬುತ್ತಿ ಸಹಿತ, ಕರಿಯ ಕುದುರೆ, ಬಿಳಿಯ ಕುದುರೆ ಹತ್ತಿ ಹಳೆಯ ಬೀಡಿಗೆ ಹೊರಟರು.

ಕುದುರೆಯಿಂದ ಜಾರಿಬಿದ್ದರು. ತಾಯಿ ತಡೆದಳು. ಆದರೂ ಮುಂದುವರಿದರು. ಹೆಜ್ಜೆ ಹೆಜ್ಜೆಗೂ ಅಪಶಕುನಗಳಾದವು. ಲೆಕ್ಕಿಸದೆ ಸಾಗಿದರು. ಯೌವನದ ಉತ್ಸಾಹ ಅವರದು. ಎಲಗಂದೂರು, ಕೆಲವತ್ತೂರು, ಕಂಬಕಲ್ಲು ಗುಡ್ಡ ದಾಟಿ ಸಾಣೆಹಳ್ಳಿಗೆ ಬಂದರು. ಅಲ್ಲಿ ಮುದಕಜ್ಜಿ ಸಿಕ್ಕಿ, ಪರಿಚಯ ಮಾಡಿಕೊಂಡು, ಬಂದಕಾರಣ ತಿಳಿದುಕೊಂಡು, ಅವರನ್ನು ತನ್ನ ಮನೆಗೆ ಕರೆದುಕೊಂಡು ಹೋದಳು. ಅಲ್ಲಿ ಊಟಮಾಡಿ, ತಾಂಬೂಲ ಸವಿದರು.

ಸಾಣೆಹಳ್ಳಿಯ ಕೇರಿಗೆ ಬಂದು ಮಲಗಿರುವ ಹುಲಿಯನ್ನು ನೋಡಿದರು. ಅವರು ಹೊಡೆದ ಗುಂಡಿನಿಂದ ಹುಲಿ ಸತ್ತಿತು. ಹುಲಿಯನ್ನು ಕೊಂದ ಸುದ್ದಿಯನ್ನು ಮಾವ ಬಲ್ಲಾಳರಾಯನಿಗೆ ಬರೆದು ಕಳಿಸಿದರು. ಬಲ್ಲಾಳರಾಯನಿಗೆ ಅಳಿಯಂದಿರ ಸಾಹಸದಿಂದ ಸಂತೋಷವಾಯಿತು. ಅರಮನೆಗೆ ಸ್ವಾಗತಿಸಿದ. ಅತ್ತೆ ಕಾಳಿಕಾದೇವಿ ಅಡಿಗೆಮಾಡಿ ಅಳಿಯಂದಿರಿಗೆ ಊಟಬಡಿಸಿ, ವಿಶ್ರಾಂತಿ ಪಡೆದುಕೊಳ್ಳಲು ಹೇಳಿದಳು. ಕೊಂದ ಹುಲಿಯನ್ನು ಮಾರಲು, ಅದರ ಚರ್ಮದ ಚಿತ್ರ ಮಾಡಿಸಲು ಬಲ್ಲಾಳರಾಯ ಬೇಲೂರಿಗೆ ಹೋದ. ಬಂದಮೇಲೆ ಮಾತಿನಂತೆ ಮದುವೆ ಮಾಡುವುದಾಗಿ ತಿಳಿಸಿದ.

ಲಕ್ಕಣ್ಣ ಈರಣ್ಣ ಬೇಸರಕಳೆಯಲು ಅತ್ತೆ ಕಾಳಿಕಾದೇವಿಯಿಂದ ಚಿನ್ನದ ಚೆಂಡು ಲಗ್ಗೆ ಪಡೆದು ಮೂಡಲ ಕೋಡಿಯಲ್ಲಿ ಚೆಂಡಾಟವಾಡಲು ಹೋದರು.

ಅಲ್ಲಿ ತಾಟಗಿತ್ತಿ ತಿರುಮಲ ದೇವಿ, ಬದನಾವತಿಯೆಂಬ ಸೂಳೆ ಏಳುನೆರಿಕೆ ಉಪ್ಪರಿಗೆ ಮೇಲೆ ಕುಳಿತಿದ್ದಾಳೆ. ಲಕ್ಕಣ್ಣ ಈರಣ್ಣರನ್ನು ಕಂಡು ಇಲ್ಲೇ ಆಡಿ ಅನ್ನುತ್ತಾಳೆ. ಅವಳ ಹತ್ತಿರ ಬೇಡವೆಂದು ಪಡಗಡೆ ಕೋಡಿಗೆ ಹೋಗಿ ಆಡುತ್ತಾರೆ. ಇವರು ಆಡುವ ಚಂಡು ತನ್ನ ಅರಮನೆಗೆ ಬೀಳಲಿ ಎಂದು ಸೂಳೆ ಹರಕೆ ಕಟ್ಟಿಕೊಳ್ಳುತ್ತಾಳೆ. ಆವಳ ಹರಿಕೆಯ ಫಲವೋ ಎನ್ನುವಂತೆ ಈರಣ್ಣ ಹೊಡೆದ ಚಂಡು ಸೂಳೆಯ ಅರಮನೆಗೆ ಬಿತ್ತು. ಚೆಂಡು ಸಿಗಲಿಲ್ಲ. ಹುಡುಕಿದರು.

ಚೆಂಡನ್ನು ಪಡೆಯಲು ಲಕ್ಕಣ್ಣ ಸೂಳೆಮನೆಗೆ ಹೋಗಿ ಅತ್ತೆಮ್ಮ ಚೆಂಡು ಕೊಡು ಎಂದ. ನಿನಗೆ ಕೊಡುವುದಿಲ್ಲ, ಈರಣ್ಣನನ್ನು ಕಳುಹಿಸು ಎನ್ನುವಳು. ಲಕ್ಕಣ್ಣ ಹಿಂದಿರುಗಿ ಈರಣ್ಣನನ್ನು ಕಳಿಸುತ್ತಾನೆ. ಬಂದ ಈರಣ್ಣನಿಗೆ ಅಡಿಗೆ ಮಾಡಿ ಊಟಕ್ಕಿಟ್ಟು ವೀಳ್ಯಕ್ಕೊಟ್ಟು ಮಂಚಕ್ಕೆ ಆಹ್ವಾನಿಸುವಳು. ಮಾವ ಬಲ್ಲಾಳರಾಯ ಏರುವ ಮಂಚ ಇದು, ನಾನು ಬರುವುದಿಲ್ಲ ಎನ್ನುವನು. ಅವಳು ಅವನ ಬಟ್ಟೆ ಎಳೆಯಲು ಮುಂದಾದಾಗ, ಇವನು ತನ್ನ ಬಾಕು ತೆಗೆದು ತೋರಿಸಿ, ಚೆಂಡನ್ನು ಕಿತ್ತುಕೊಂಡು ಓಡುತ್ತಾನೆ.

ತಾಟಗಿತ್ತಿ ಸೂಳೆಗೆ ಸಿಟ್ಟು ಬರುತ್ತದೆ, ಅವಮಾನವಾಗುತ್ತದೆ. ತನ್ನ ಅಲಂಕಾರವನ್ನು ಕೆದರಿಕೊಂಡು, ಬಾಗಿಲುಮುಚ್ಚಿ ಮಕಾಡೆ ಮಲಗುತ್ತಾಳೆ. ಹುಲಿ ಮಾರಿ ಬಂದ ಬಲ್ಲಾಳರಾಯನಿಗೆ ಬಾಗಿಲು ತೆಗೆಯಲಿಲ್ಲ. ಸೂಳೆಮನೆಯ ಸುತ್ತ ತಿರುಗುತ್ತಾನೆ. ಬಾಗಿಲು ಮುರಿದು ಒಳಗೆ ಹೋಗುವನು. ಕಾರಣ ಕೇಳಿದ. ನೀವು ಇಲ್ಲದಾಗ ಲಕ್ಕಣ್ಣ ಈರಣ್ಣ ನುಗ್ಗಿ ಬಂದು ತನಗೆ ಅವಮಾನ ಮಾಡಿದರೆಂದು, ಮಾನಕಳೆಯಲು ಪ್ರಯತ್ನಿಸಿದರೆಂದು ಚಾಡಿ ಹೇಳಿದಳು.

ಬಲ್ಲಾಳರಾಯ ಅಳಿಯಂದಿರನ್ನು ಶೂಲಕ್ಕೇರಿಸಲು ನಿರ್ಧರಿಸಿ, ಶೂಲ ತಯಾರು ಮಾಡಿಸುವನು. ತಂಗಿ ಬಲ್ಲಾಳದೇವಿಗೆ ಯಾರೂ ನೀರು ನೆರಳು ಕೊಡಬಾರದೆಂದು ಆಜ್ಞೆ ಮಾಡುವನು. ಲಕ್ಕಣ್ಣ ಈರಣ್ಣ ತಮ್ಮನ್ನು ಶೂಲಕ್ಕೆ ಹಾಕಿಸಬಾರದೆಂದು ಬೇಡುವರು. ಬಳ್ಳಾರಿ ಸೀಮೆಗೆ ಮದುವೆ ಮಾಡಿಕೊಟ್ಟಿರುವ ಅಕ್ಕ ಬನವಂತದೇವಿಗೆ ಶೂಲದ ವಿಷಯ ಬರೆದು ಕಾಗೆ ಮೂಲಕ ಕಳುಹಿಸುತ್ತಾರೆ. ಬನವಂತದೇವಿಗೆ ಪತ್ರ ಸಿಕ್ಕಿ, ಅಪಶಕುನವಾಗಿ, ಸ್ನಾನಮಾಡುತ್ತಿದ್ದವಳು ಬಟ್ಟೆ ಧರಿಸದೆ ಏಳುಮಾರಿನ ಜಡೆಯನ್ನೇ ಉಡುಪಾಗಿ ಧರಿಸಿ ಓಡೋಡಿ ಬರುತ್ತಾಳೆ. ಹುಟ್ಟಿದ ನಿರ್ವಾಣದಲ್ಲಿ ಬಂದಾಕೆಯನ್ನು ಬಲ್ಲಾಳರಾಯ ಒದ್ದು ಸೊಂಟ ಮುರಿಯುತ್ತಾನೆ.

ಬಲ್ಲಾಳದೇವಿಗೆ ಮಕ್ಕಳು ನೆಟ್ಟುಹೋಗಿದ್ದ ಹೂಗಿಡ ಒಣಗಿರುವುದು ಕಾಣುತ್ತದೆ. ಅವಳು ಹಳೇಬೀಡಿಗೆ ಓಡಿಬರುತ್ತಾಳೆ. ಶೂಲಕ್ಕೆ ಹೋಗುತ್ತಿರುವ ಮಕ್ಕಳನ್ನೂ ಸೊಂಟ ಮುರಿದಿರುವ ಮಗಳನ್ನೂ ನೋಡುತ್ತಾಳೆ. ಅವಳು ನೀರು ಬೇಡಿದ್ದಕ್ಕೆ ಯಾರೂ ಕೊಡುವುದಿಲ್ಲ. ಕುಂಬಾರಗೇರಿಯವರು ನೀರು ಕೊಡುತ್ತಾರೆ. ಆ ನೀರಿನ ಗಡಿಗೆಯನ್ನು ತಲೆಯ ಮೇಲೆ ಹೊತ್ತುಕೊಂಡು ಮೂಡುದಿಕ್ಕಿಗೆ ಮುಖಮಾಡಿ ನಿಂತುಕೊಂಡು, ಹಳೆಯಬೀಡು ಹಾಳಾಗಲಿ, ಕುಂಬಾರಗೇರಿ ಊರಾಗಲಿ, ಕೆಂಡದ ಮಳೆಯಾಗಲಿ, ಬಲ್ಲಾಳರಾಯನ ಮಂದಿ ಮಾರ್ಬಲ ಅಡಗಲಿ ಎಂದು ಶಾಪಕೊಡುತ್ತಾಳೆ. ಮಕ್ಕಳ ಜೊತೆಯಲ್ಲಿ ಶೂಲಕ್ಕೇರುತ್ತಾಳೆ. ಅವಳ ಶಾಪದಂತೆ ಎಲ್ಲವೂ ನಡೆಯುತ್ತದೆ.

ಅತೃಪ್ತ ಕಾಮದ ಹೆಣ್ಣಿನ ಸೇಡಿಗೆ ಬಲಿಯಾದ ನಿರಪರಾಧಿ ಯುವಕರ ಕಥೆ. ದ್ವೇಷದ ಕೊಲೆ, ವಿವೇಚನೆಯಿಲ್ಲದ ರಾಜನ ದುಡುಕಿನ ತೀರ್ಮಾನ, ಜನಪದ ಆಶಯಗಳ ಪ್ರಸ್ತಾಪ ಕಥೆಯಲ್ಲಿ ಅಡಗಿವೆ. ಹಳೆಯಬೀಡಿನ ಸುತ್ತಮುತ್ತ ಬಹಳ ಜನಪ್ರಿಯವಾಗಿರುವ ಕಥೆಯಿದು. ಈ ಕಥೆಯ ಸ್ಫೂರ್ತಿಯಿಂದ ಶಿಷ್ಟಕೃತಿಗಳೂ ಸೃಷ್ಟಿಯಾಗಿವೆ. ಎಲ್. ಗುಂಡಪ್ಪನವರು ಸಂಪಾದಿಸಿರುವ ''ನಾಡಪದಗಳು'' ಸಂಗ್ರಹದಲ್ಲಿ ಇದರ ಇನ್ನೊಂದು ಪಾಠವಿದೆ. ಇದು ಕೋಲಾಟದಲ್ಲೂ ಜನಪ್ರಿಯವಾಗಿದೆ.

ಸಂಪೂರ್ಣವಾಗಿ ಪದ್ಯದಲ್ಲಿರುವ ಈ ಕಥೆಯನ್ನು ಹಳೆಯಬೀಡು ಹೋಬಳಿ, ಹಾಸನ ಜಿಲ್ಲೆಯ ಸಿದ್ಧಾಪುರದ ತಿಮ್ಮಮ್ಮ ಹಾಡಿದ್ದಾಳೆ.

## ೫. ಸರ್ಜಪ್ಪ ನಾಯಕ

ನಾಯಕ ಕುಲದ ರಂಗಪ್ಪರಾಜ ಶಿವಭಕ್ತ. ತರೀಕೆರೆ ಪೇಟೆಯಲ್ಲಿ ನಾನಾರೀತಿಯ ಸಾಧನೆಮಾಡಿದವನು. ನೂರೊಂದು ಆಯುಧ ಇಟ್ಟುಕೊಂಡಿರುವವನು. ಕಾಮನ ದುರ್ಗದಲ್ಲಿ ರಂಗನಾಥನ ಪೂಜೆಮಾಡಿದ. ಮನೆದೇವರ ಪೂಜೆಮುಗಿಸಿ ಅರಮನೆಗೆ ಹಿಂದಿರುಗುವಾಗ, ಗುಟ್ಟಳ್ಳಿ ವನದಲ್ಲಿ, ತುರುಕರದಂಡು ಮದ್ದುಗುಂಡು ಹಾರಿಸುತ್ತದೆ. ರಂಗಪ್ಪರಾಜ ಮದ್ದಿನ ಹೊಗೆಯಲ್ಲಿ ಮರಣಹೊಂದಿದ.

ರಂಗಪ್ಪರಾಜನ ಹೆಂಡತಿ ದೊಡ್ಡಮ್ಮ ವಿಧವೆಯಾದಳು. ಎಂಟು ಜನ ಮಕ್ಕಳು. ಅರಮನೆಯ ಭಂಡಾರವೆಲ್ಲ ಶತ್ರುಗಳ ಪಾಲಾಯಿತು. ಬಡತನ ಬಂತು. ತರೀಕೆರೆ ಪೇಟೆಯಲ್ಲಿ ಭಿಕ್ಷೆಬೇಡಬೇಕಾಯಿತು. ಕಷ್ಟಪಟ್ಟು ಮಕ್ಕಳನ್ನು ಸಾಕಿದಳು.

ಸರ್ಜಪ್ಪನಾಯಕ ಧೀರ, ಘನ ಪಾಳೆಯಗಾರ. ಆರಡಿ ಅಡ್ಡಗಲದ ಎದೆ. ಮುಂಗೈ ಗಾತ್ರದ ಮೀಸೆ, ರೆಟ್ಟೆ ಗಾತ್ರ ಸೊಂಟ. ನೂರೊಂದು ಆಯುಧದ ಮೊನೆಗಾರ. ವಸ್ತಾದಿ ಸರ್ಜಪ್ಪ ನಾಯಕ, ತರೀಕೆರೆಪೇಟೆಯಲ್ಲಿ ಅವನ ತಂದೆ ಕಟ್ಟಿಸಿದ ಗರಡಿಯಲ್ಲಿ ಸಾಧನೆ ಮಾಡಿದ್ದಾನೆ. ಕತ್ತಿವರಸೆ, ಕುದುರೆ ಸವಾರಿ ಕಲಿತಿದ್ದಾನೆ. ಕಾಮನ ದುರ್ಗದಲ್ಲಿ ರಂಗನಾಥ ಸ್ವಾಮಿಯ ಪೂಜೆಮಾಡಿದ್ದಾನೆ. ತಾಯಿ, ಅತ್ತಿಗೆ, ತಂಗಿಯರು ಪಂಚಾಮೃತದ ಅಡಿಗೆ ಮಾಡಿ ಊಟಕ್ಕೆ ಕರೆಯುತ್ತಾರೆ. ಊಟ ಮುಗಿಸಿ ಹೋರಾಟಕ್ಕೆ ಹೋಗಲು ಅಪ್ಪಣೆ ಕೇಳುತ್ತಾನೆ. ಬೇಡವೆಂದು ತಡೆಯುತ್ತಾರೆ. ತನ್ನ ಶೌರ್ಯ ಸಾಹಸ ಪ್ರಸ್ತಾಪಿಸಿ ಧೈರ್ಯತುಂಬುತ್ತಾನೆ.

ವಸ್ತಾದಿ ಸರ್ಜಪ್ಪನಾಯಕ ದೇಶಕೋಶ ತಿರುಗಿ, ಮೈಸೂರು ಬ್ರಿಟಿಷ್ ರಾಜ್ಯಕ್ಕೆ ಬರುತ್ತಾನೆ. ಅಲ್ಲಿ ಬ್ರಿಟಿಷ್ ರಾಣಿ ರಾಜ್ಯಭಾರ ಮಾಡುತ್ತಿದ್ದಾಳೆ. ಅಲ್ಲಿ ಉದ್ಯಾನವನದಲ್ಲಿ ನೆಲಮಾಳಿಗೆ ತೋಡಿಸಿ, ಮದ್ದು ಗುಂಡು ತುಂಬಿ, ಕತ್ತಿ ಕಟಾರಿ ಹಿಡಿದು, ಬಂದೂಕು ಬಾರ್ ಮಾಡಿದ್ದಾನೆ. ಯಾರಿಗೂ ಕಾಣದಂತೆ ಮರೆಮಾಸಿ ಕುಳಿತಿದ್ದಾನೆ.

ಏಳು ಸಾವಿರ ಮೀಸಲು ಸೈನ್ಯ ಬರುತ್ತದೆ. ಸರ್ಜಪ್ಪನಾಯಕ ದಂಡಿನ ಮೇಲೆ ಎರಗಿ ಹೋರಾಟ ಮಾಡಿ, ಅಪಾರ ಸೈನ್ಯವನ್ನು ನಾಶಮಾಡುತ್ತಾನೆ. ಕೊಂದ ಸೈನಿಕರ ತಲೆಗಳನ್ನು ಗಾಡಿಗೆ ಭರ್ತಿಮಾಡಿ ನಮ್ಮ ಸೀಮೆಯ ದಪ್ಪ ಜೋಳ, ನಿಮ್ಮ ಖಜಾನೆಗೆ ಭರ್ತಿಮಾಡಿಕೊಳ್ಳಿ ಎಂದು ವಿಲಾಯಿತಿ ರಾಣಿಗೆ ಕಳುಹಿಸುತ್ತಾನೆ. ಸರ್ಜಪ್ಪನಾಯಕನನ್ನು ಮುಗಿಸಲು ವಿಲಾಯಿತಿ ರಾಣಿ ಮಸಲತ್ತು ಮಾಡುತ್ತಾಳೆ.

ಸರ್ಜಪ್ಪನಾಯಕ ಹೂನಳ್ಳಿ ಪಟ್ಟಣಕ್ಕೆ ಬರುತ್ತಾನೆ. ದೊಡ್ಡ ದೊಡ್ಡವರು ಹೂವಾಡಿಗರ ಬೀದಿಯಲ್ಲಿ ಮರ್ಯಾದೆ ಮಾಡುವರು. ಸೂಳೆಯರ ಬೀದಿಗೆ ಬಂದಾಗ ನಿಂಗನಾಯಕನ ಮಗಳು ಸುಪನಾತಿ ಸೂಳೆರಂಗಿ ಆರತಿ ಕಳಸದ ಸಹಿತ ಎದುರಾಗುತ್ತಾಳೆ. ಅರಮನೆಗೆ ಆಹ್ವಾನಿಸುತ್ತಾಳೆ. ಹೋಗುತ್ತಾನೆ. ಇಬ್ಬರೂ ಎಳ್ಳುಜೀರಿಗೆ ಬೆರತಂತೆ ಒಂದಾಗುತ್ತಾರೆ. ಇಬ್ಬರೂ ಸುಖವಾಗಿದ್ದಾರೆ.

ವಿಲಾಯಿತಿ ಪಟ್ಟಣದಲ್ಲಿ ರಾಣಿ ಏಳು ಸಾವಿರ ದಂಡು ಕೂಡಿಸಿದ್ದಾಳೆ. ಸೈನ್ಯಕ್ಕೆ ಧೈರ್ಯ ತುಂಬುತ್ತಾಳೆ. ಯಾರಿಗೂ ಸಿಕ್ಕದ ದಕ್ಕದ ಸರ್ಜಪ್ಪನಾಯಕನನ್ನು ಬೇಟೆಯಾಡಲು ಹುರಿದುಂಬಿಸುತ್ತಾಳೆ. ಹೋರಾಟಕ್ಕೆ ಸಿದ್ಧತೆಮಾಡುತ್ತಾಳೆ. ಹಿತ್ತಾಳೆ ಹಣಕ್ಕೆ ಚಿನ್ನದ ನೀರು ಲೇಪಿಸಿ, ಧಾರಾಳವಾಗಿ ಹಂಚಿದ್ದಾಳೆ. ಸುಪನಾತಿ ಸೂಳೆರಂಗಿಗೆ ಹಣದ ಆಸೆ ತೋರಿಸಿ, ಸರ್ಜಪ್ಪನಾಯಕನನ್ನು ಹಿಡಿದುಕೊಡಲು ಸಂಚುಹೂಡಿದ್ದಾಳೆ. ಸೂಳೆ ರಂಗಿ ನಾಯಕನನ್ನು ಹಿಡಿದುಕೊಡುವುದಾಗಿ ಹಾಲುಭಾಷೆ ನೀರುಭಾಷೆ ಮಾಡುವಳು.

ಸರ್ಜಪ್ಪನಾಯಕನನ್ನು ಶತ್ರುಗಳಿಗೆ ಹಿಡಿದುಕೊಡಬೇಡವೆಂದು ತಂದೆ ನಿಂಗನಾಯಕ ಹೇಳಿದರೂ ರಂಗಿ ಕೇಳುವುದಿಲ್ಲ. ಅಡ್ಡಿಮಾಡಿದರೆ ತಂದೆಯನ್ನೇ ಕಡಿಸುವುದಾಗಿ ಹೇಳುವಳು. ಮಗಳು ಹೇಳಿದಂತೆ ಕೇಳಲು ತಂದೆ ಒಪ್ಪಿಕೊಳ್ಳುವನು.

ಸುಖವಾಗಿ ಮಲಗಿದ್ದ ಸರ್ಜಪ್ಪನಾಯಕ ಎದ್ದು ತಾಯಿಯ ಪಾದಕ್ಕೆ ಶರಣುಮಾಡಿ, ಹೊರಗೆ ಹೋಗಲು ಬಯಸುತ್ತಾನೆ. ಹೊರಗೆ ಹೋದರೆ ಅಪಾಯವಿದೆ, ಹೋಗ ಬೇಡವೆಂದು ತಾಯಿ ತಡೆಯುತ್ತಾಳೆ. ತಾಯಿಯ ಮಾತನ್ನು ಮೀರಿ ಸೂಳೆಯಮನೆಗೆ ಹೋಗುತ್ತಾನೆ.

ರಂಗನಾಥ ಸ್ವಾಮಿ ದೇವಾಲಯಕ್ಕೆ ಹೋಗಿ ಪೂಜೆಮಾಡಿ ಬಲಗಡೆ ಪ್ರಸಾದ ನೀಡಲು ಕೇಳುತ್ತಾನೆ. ಶುಭಪ್ರಸಾದ ನೀಡದಿದ್ದರೆ ದೇವರನ್ನೇ ಕಿತ್ತುಹಾಕುವುದಾಗಿ ಹೆದರಿಸುತ್ತಾನೆ. ದೇವರು ಹೆದರಿಕೊಂಡು ಬಲಗಡೆ ಪ್ರಸಾದ ಕೊಡುವನು. ಅನಂತರ ಅಂಬಾದೇವಿಯ ಪೂಜೆಯನ್ನೂ ಮಾಡಿ, ಸರ್ಜಪ್ಪನಾಯಕ ಸೂಳೆಯ ಮನೆಗೆ ಹೋಗುವನು.

ಸೂಳೆರಂಗಿ ಸರ್ಜಪ್ಪನಾಯಕನಿಗೆ ಊಟಕ್ಕಿಡುವಳು. ಅದಕ್ಕೆ ನಾನಾ ರೀತಿಯ ವಿಷವನ್ನು ಬೆರಸಿರುವಳು. ನಾಯಕ ರಂಗನಾಥನ ಧ್ಯಾನವಮಾಡುವನು. ರಂಗನಾಥ ಬಂದು ಸೂಳೆರಂಗಿಯ ಅರಮನೆಯ ಮುಂದೆ ಹೊನ್ನರಳಿ ಮರ ಏರಿದ. ದೇವತೆಗಳು ವಿಷದ ಊಟಮಾಡಬೇಡವೆಂದು ಹೇಳಿದವು. ನಾಯಕ ಸಂಶಯಪಟ್ಟ. ರಂಗಿ ಉಪಾಯವಾಗಿ ಸಮಜಾಯಿಷಿ ಮಾಡಿದಳು. ರಂಗಿಯ ಮಾತಿಗೆ ಮರುಳಾಗಿ ಊಟಮಾಡಿದನು. ವಿಷದ ಆಹಾರ ಪರಿಣಾಮ ಬೀರಿತು. ಕಣ್ಣು ಕೆಟ್ಟುಹೋದವು, ಕೈಕಾಲು ತಣ್ಣಗಾದವು. ಭೂಮಿಗೆ ಬಿದ್ದು, ಮೂರ್ಛೆಹೋದ.

ಎಚ್ಚರ ತಪ್ಪಿದ ಸರ್ಜಪ್ಪನಾಯಕನಿಗೆ ಸೂಳೆ ಲಾಳಮುಂಡಿಗೆ ಹಾಕಿ ಒದ್ದಳು. ಅವನ ಮೈಮೇಲಿನ ಆಯುಧಗಳನ್ನು ತೆಗೆದು ಹಾಳುಬಾವಿಗೆ ತುಂಬಿದಳು. ದೇವರ ದಯೆಯಿಂದ ಬದುಕಬಹುದೆಂದು, ಅವನ ಕೈಗಳ ಉಗುರು ತೆಗೆದು ಎಸೆದಳು. ಏಳು ಸುತ್ತಿನ ಕೋಟೆ ಹತ್ತಿ ಸೆರಗು ಬೀಸಿ ದಂಡಿಗೆ ಸೂಚನೆ ನೀಡಿದಳು. ನಗಾರಿಬಡಿದು, ಕಹಳೆ ಊದಿ ಶಬ್ದ ಮಾಡಿದಳು.

ವಿಲಾಯಿತಿ ದಂಡು ಬಂದು ಸರ್ಜಪ್ಪನಾಯಕನಿದ್ದ ಸೂಳೆ ರಂಗಿಯ ಅರಮನೆಯ ಸುತ್ತ ನಿಂತಿತು. ನಾಯಕನನ್ನು ಸೆರೆಹಿಡಿದು ರಣಗಂಬಕೆ ಬಲಿಕೊಡಲು ನಿರ್ಧರಿಸಿತು. ಮದ್ದಿನ

ಮನೆಗೆ ಬೆಂಕಿ ಹಚ್ಚಿ ಹೊಗೆ ಎಬ್ಬಿಸಿದರು. ಮದ್ದು ಗುಂಡು ಹಾರಿದವು. ತನ್ನ ಭಕ್ತನಿಗಾದ ಗತಿಗೆ ಮರುಕಪಟ್ಟು ರಂಗನಾಥಸ್ವಾಮಿ, ಮನೆದೇವತೆ ಎಲ್ಲಮ್ಮ ಬಂದು ಸರ್ಜಪ್ಪನಾಯಕನ ದೇಹದಿಂದ ವಿಷವನ್ನು ಹೊರತೆಗೆದರು. ನಾಯಕ ಎಚ್ಚರಗೊಂಡ. ಮೋಸ ತಿಳಿಯಿತು. ತಾಯಿ ಮಾತು ಮೀರಿ ಸೂಳೆ ಮನೆಗೆ ಬಂದುದರ ತಪ್ಪಿನ ಅರಿವಾಯಿತು. ದೇವರನ್ನು ನೆನೆದು ಹೋರಾಟಕ್ಕೆ ನಿಂತ. ಗುಡುಗು ಸಿಡಿಲಿನಂತೆ ಎರಗಿದ. ಶತ್ರುಗಳನ್ನು ಕಡಿದುಹಾಕಿದ. ಸಾವಿರಾರು ಸೈನಿಕರನ್ನು ಕೊಂದ.

ಅರಮನೆಗೆ ಬಂದು ಸೂಳೆರಾಣಿಯನ್ನು ಹುಡುಕಿದ. ಅವಳು ಅರಮನೆಯ ಸುತ್ತ ಏಳು ಆಳು ಕಂದಕ ತೋಡಿಸಿ, ಉಕ್ಕಿನ ದಸಿ ನೆಡಿಸಿದ್ದಳು. ಅದರ ಮೇಲೆ ಚಾಪೆ ಹಾಸಿದೆ. ಮದ್ದಿನ ಮನೆ ಹೊಚ್ಚಿದೆ. ಸರ್ಜಪ್ಪನಾಯಕ ಬಂದ ಕೂಡಲೆ ಮದ್ದುಗುಂಡು ಸಿಡಿದವು. ಹೊಗೆ ಕವಿದುಕೊಂಡಿತು. ಸರ್ಜಪ್ಪನಾಯಕ ಹೊಗೆ ಒಳಗೆ ಸಿಕ್ಕಿಬಿದ್ದ. ಆದರೂ ವೀರಾವೇಶದಿಂದ ಆರ್ಭಟಿಸಿದ. ಕಾಲುಜಾರಿ ಅಗ್ನಿ ಕಂದಕಕ್ಕೆ ಬಿದ್ದ. ಉಕ್ಕಿನದಸಿ ದೇಹಕ್ಕೆ ನಾಟಿದವು. ರಕ್ತ ಹರಿಯಿತು. ತಾಯಿ ತಂದೆ ಅಣ್ಣ ತಮ್ಮ ದೇವರನ್ನು ನೆನೆಸಿಕೊಂಡ. ಶತ್ರುಗಳಿಗೆ ಕೈಸೆರೆ ಸಿಗಬಾರದೆಂದು ಕೈಯಾರೆ ಇರಿದುಕೊಂಡು ಪ್ರಾಣಕಳೆದುಕೊಂಡನು.

ಸರ್ಜಪ್ಪನಾಯಕನ ಶವವನ್ನು ತಂದು ಅವನ ತಂದೆಯ ಗೋರಿ ಪಕ್ಕದಲ್ಲಿ ಸಂಸ್ಕಾರ ಮಾಡಲಾಯಿತು. ಅವನ ಹೆಸರಿನಲ್ಲಿ ದಾನಧರ್ಮ ಮಾಡಲಾಯಿತು. ಅವನ ಅಣ್ಣ ತಮ್ಮಂದಿರು ಹೂನಳ್ಳಿ ಪಟ್ಟಣಕ್ಕೆ ಹೋಗಿ ಅರಮನೆ ಲೂಟಿಮಾಡಿ ಸೂಳೆರಂಗಿಯನ್ನು ಕೊಂದರು. ಲೂಟಿ ಮಾಡಿದ ಸಂಪತ್ತನ್ನು ದಾನಧರ್ಮ ಮಾಡುವರು.

ಮೈಸೂರು ಕುದುರೆ ದಂಡು ಅಥವಾ ಮೈಸೂರನ್ನು ಆಳುತ್ತಿದ್ದ ಬ್ರಿಟಿಷ್ ರಾಣಿಯ ದಂಡು ತರೀಕೆರೆಯ ಪಾಳೆಯಗಾರ ಸರ್ಜಪ್ಪನಾಯಕನನ್ನು ಸದೆಬಡಿದ ಪ್ರಸಂಗ ಈ ಕಥೆಯಲ್ಲಿದೆ. ಈ ನಾಯಕನಿಗೆ ಸರ್ಜಾ ಹನುಮಪ್ಪನಾಯಕ ಎಂದು ಹೆಸರಿದ್ದು, ಅದೇ ಜನರ ಬಾಯಿಯಲ್ಲಿ ಸರ್ಜಪ್ಪನಾಯಕ ಎಂದಾಗಿದೆ ಎಂದು ಹೇಳುತ್ತಾರೆ.

ತರೀಕೆರೆಯ ಸರ್ಜಪ್ಪನಾಯಕ ಪುಂಡು ಪಾಳೆಯಗಾರ. ಆಳುವ ಸರಕಾರವನ್ನು ಧಿಕ್ಕರಿಸಿ, ಶ್ರೀಮಂತರನ್ನು ಲೂಟಿಮಾಡಿ, ಬಡಬಗ್ಗರಿಗೆ ಹಂಚುತ್ತಿದ್ದ. ತಂದೆಯಂತೆ ವೀರ ಶೂರ ಪರಾಕ್ರಮಿ. ದೈವಭಕ್ತ. ವೇಶ್ಯೆಗೆ ಮಾರುಹೋಗಿ, ವೇಶ್ಯೆಯಿಂದ ಮೋಸಹೋಗಿ, ಶತ್ರುಗಳಿಗೆ ಸಿಕ್ಕಿದವನು. ಕೈಯಾರೆ ಪ್ರಾಣ ಕಳೆದುಕೊಂಡವನು. ಜನಪದರಿಗೆ ಬಹಳ ಪ್ರಿಯವಾದ ಕಥಾವಸ್ತು ಇವನದು. ಈ ಕಾವ್ಯಕಥೆಯ ಭಿನ್ನಪಾಠಗಳನ್ನು ಇತರರೂ ಸಂಗ್ರಹಿಸಿದ್ದಾರೆ.

ಈ ಕಾವ್ಯ ನಿರೂಪಕ ನುರಿತವನಾದರೂ ನೆನಪು ಕೈಕೊಟ್ಟು ಕಥೆಯ ಓಘದಲ್ಲಿ ಕಡಿತ ಉಂಟಾಗಿದೆ. ಕಥಾತಂತು ಅಲ್ಲಲ್ಲಿ ಹರಿದಿದೆ. ಅಸ್ಪಷ್ಟತೆ ತಲೆದೋರಿದೆ. ಧ್ವನಿಮುದ್ರಣದ ದೋಷವೂ ಸೇರಿಕೊಂಡಿದೆ. ಹಾಗಾಗಿ ಇದೊಂದು ಸಾಧಾರಣ ಪಾಠವಾಗಿದೆ. ಭಿನ್ನಪಾಠಕ್ಕೆ ಇದನ್ನು ಗಮನಿಸಬಹುದು.

ಈ ಕಾವ್ಯಕಥೆಯನ್ನು ವೃತ್ತಿಗಾಯಕ ಚಿಕ್ಕತುರುವೇಕೆರೆ ಚೌಡಿಕೆ ಎಲ್ಲಯ್ಯ ಹಾಡಿದ್ದಾನೆ. ಇವನಿಗೆ ಸಹಾಯಕನಾಗಿ ಅರಳುಗುಪ್ಪೆಯ ಚೌಡಿಕೆ ಎಲ್ಲಯ್ಯ ದನಿಗೂಡಿಸಿದ್ದಾನೆ.

## ೬. ಬಸವರಾಯ

ಬಸವರಾಯನ ಹೆಂಡತಿ ನೀಲಮ್ಮ. ಹಸುವಿನ ಹಾಲನ್ನು ಕಾಯಿಸಲು ಒಲೆಯ ಮೇಲಿಟ್ಟು, ಮಕ್ಕಳಿಲ್ಲದುದಕ್ಕೆ ದುಃಖಮಾಡುತ್ತಿದ್ದಾಳೆ. ಬಸವರಾಯ ಮತ್ತು ನೀಲಮ್ಮ ಭೂಲೋಕದಲ್ಲಿ ದೊಡ್ಡವರು, ಸಾತ್ವಿಕರು. ಆದರೇನು ಬಂತು ? ಅವರಿಗೆ ಸಂತಾನವಿಲ್ಲ. ಭೂಲೋಕದಲ್ಲಿರುವ ನರರೆಲ್ಲಾ ನಮ್ಮ ಮಕ್ಕಳೇ ಎಂದು ಬಸವರಾಯ ಹೆಂಡತಿಗೆ ಸಮಾಧಾನ ಮಾಡುತ್ತಾನೆ. ನಾವು ಹೆತ್ತು ಹೊತ್ತು ಸಾಕಿದ ಮಕ್ಕಳೇ ತಾಯಿ ತಂದೆ ಎಂದು ಪ್ರೀತಿಸುವುದು ಕಷ್ಟ. ಕಂಡವರ ಮಕ್ಕಳು ನಮ್ಮ ಮಕ್ಕಳಾಗುವುದುಂಟೇ ಎಂಬುದು ನೀಲಮ್ಮನ ಪ್ರಶ್ನೆ. ನೀವು ಏನು ಹೇಳಿದರೂ ಕೇಳಲಾರೆ. ಬ್ರಹ್ಮನ ಬಳಿಯಲ್ಲಿ ನಾವು ಮಕ್ಕಳ ಫಲ ಕೇಳಿಲ್ಲ. ನೀವು ನನಗೆ ಮಕ್ಕಳ ಫಲ ತರಬೇಕು. ನಾನು ಬಂಜೆ ಎಂಬ ಶಬ್ದವನ್ನು ತಪ್ಪಿಸಿ ಎಂದಳು. ನಾನು ಕೋರಣ್ಯಕ್ಕೆ ಹೋಗಿ ಬರುತ್ತೇನೆ. ಅಷ್ಟರಲ್ಲಿ ನೀನು ಕಲ್ಯಾಣವನ್ನೆಲ್ಲಾ ಶುಚಿಮಾಡಿ, ರಂಗೋಲಿ ಇಟ್ಟು ಅಲಂಕರಿಸು ಎಂದು ಹೇಳಿ, ಬಸವರಾಯ ಸ್ನಾನಮಾಡಿ ಮಡಿಯುಟ್ಟು, ಮೈಗೆ ಭಸ್ಮಾಂಗ ಧರಿಸಿ, ಮುತ್ತಿನ ಜೋಳಿಗೆಯನ್ನು ಮುಂಗೈಯಲ್ಲಿ, ಚಿನ್ನದ ಬೆತ್ತವನ್ನು ಬಲಗೈಯಲ್ಲಿ, ಹಿಡಿದುಕೊಂಡು, ಮೂರು ಮನೆಗಳಲ್ಲಿ ಕೋರಣ್ಯ ಮಾಡಿದನು.

ಹೆಂಡತಿಗಿರುವ ಮಕ್ಕಳ ಧ್ಯಾನವನ್ನು ಮರೆಯಿಸಲು ಜಳ್ಳುಬತ್ತ ತೆಗೆದುಕೊಂಡು ಮನೆಗೆ ಬರುತ್ತಾನೆ. ನಿನಗೆ ಮಕ್ಕಳ ಫಲಬೇಕಾದರೆ ನೀನು ಸತ್ಯವಂತೆಯಾದರೆ, ನಾನು ತಂದಿರುವ ಜಳ್ಳು ಬತ್ತದಲ್ಲಿ ಒಂದು ಅಕ್ಕಿಯ ಮೊನೆ ಮುರಿಯದಂತೆ ಅಕ್ಕಿಮಾಡಬೇಕು. ಒಂದು ಒಕ್ಕುಳ ಅಕ್ಕಿ, ಒಂದು ಬದನೆಕಾಯಿ ಹಾಕಿ ಅಡಿಗೆಮಾಡಿ, ಒಂದು ಲಕ್ಷದ ಮೇಲೆ ತೊಂಬತ್ತಾರು ಗಣಗಳಿಗೆ ಊಟವನ್ನು ಬಡಿಸಬೇಕು ಎಂದನು. ಗಟ್ಟಿಬತ್ತದಲ್ಲಿ ಮೊನೆ ಮುರಿಯದ ಅಕ್ಕಿ ಆಗುವುದೇ ಕಷ್ಟ. ಇನ್ನು ಜಳ್ಳುಬತ್ತದಲ್ಲಿ ಅಕ್ಕಿ ಆಗುವುದುಂಟಾ ? ಮನುಷ್ಯರಲ್ಲಿ ಮಕ್ಕಳಾಗುವುದೇ ಕಷ್ಟ; ಇನ್ನು ಸತ್ಯವಂತೆಯಲ್ಲಿ ಮಕ್ಕಳಾಗುವುದುಂಟಾ ? ಎಂದು ಹೇಳಿದ ನೀಲಮ್ಮ, ಜಳ್ಳುಬತ್ತ ತೆಗೆದುಕೊಂಡು, ನಾದಿನಿ (ಬಸವರಾಯನ ತಂಗಿ) ನಾಗಮ್ಮನ ಬಳಿಗೆ ಹೋಗುವಳು.

ಸತ್ಯವಂತೆ ನಾದಿನಿ ನಾಗಮ್ಮ ನಿನ್ನಣ್ಣ ಕೊಟ್ಟಿರುವ ಜಳ್ಳು ಬತ್ತದಿಂದ ಮೊನೆ ಮುರಿಯದಂತೆ ಅಕ್ಕಿಮಾಡಿಕೊಡು ಎಂದಳು. ನಾಗಮ್ಮ ತಣ್ಣೀರು ಸ್ನಾನಮಾಡಿ, ವಿಭೂತಿ ಧರಿಸಿ, ಬೆಳ್ಳಿಯ ಒರಳು ಕಲ್ಲಿಗೆ ಜಳ್ಳುಬತ್ತ ಸುರಿದು, ಚಿನ್ನದ ಒನಕೆಯನ್ನು ಹಿಡಿದುಕೊಂಡು ಅಣ್ಣ ಬಸವರಾಯನ ಪಾದ, ಶರಣರಪಾದ ನೆನೆದು ಒಂದು ಅಕ್ಕಿಯೂ ಮೊನೆಮುರಿಯದಂತೆ ಅಕ್ಕಿಮಾಡಿ, ಅತ್ತಿಗೆಗೆ ಒಪ್ಪಿಸಿದಳು.

ಸತ್ಯವಂತೆ ನಾದಿನಿ ಕೊಟ್ಟ ಅಕ್ಕಿಯಿಂದ ಸತ್ಯವಂತೆ ನೀಲಮ್ಮ ಒಕ್ಕಳ ಅಕ್ಕಿ ಹಾಕಿ ಅನ್ನ ಮಾಡಿದಳು. ಅದು ಬೆಟ್ಟದಂತೆ ಬೆಳೆಯಿತು. ಒಂದು ಬದನೆಕಾಯಿ ಹಾಕಿ ಸಾರುಮಾಡಿದಳು. ಅದರ ಗಮಲು ಏಳುಗಾವುದಕ್ಕೆ ಹರಿಯಿತು. ಗಂಡನ ಬಳಿಗೆ ಹೋಗಿ ಅಡುಗೆಯಾಗಿದೆ,

ಶಿವಪೂಜೆ ಮಾಡಬನ್ನಿ ಎಂದಳು. ಬಸವರಾಯ ಬಂದು ನೋಡಿ ಸಂತೋಷದಿಂದ ಶಿವಪೂಜೆ ಮಾಡಲು ಕುಳಿತನು. ನೂರೊಂದು ಪುಷ್ಪದಿಂದ ಪೂಜೆಮಾಡಿದನು. ಶರಣರಿಗೆ ಊಟಕ್ಕೆ ಬಡಿಸಲು ಹೇಳಿದನು. ಲಕ್ಷದ ಮೇಲೆ ತೊಂಬತ್ತಾರು ಗಣಗಳಿಗೆ ಊಟಕ್ಕೆ ಬಡಿಸಿದಳು. ಮಿಕ್ಕಿದ ಪ್ರಸಾದವನ್ನು ಕಲ್ಲುಬಂಡಿ ಕಟ್ಟಿ ಕೈಲಾಸಕ್ಕೆ ಕಳುಹಿಸಿದಳು. ನನ್ನ ಸತ್ಯವನ್ನು ಮೆಚ್ಚಿಕೊಂಡಿರಾ ಎಂದು ಗಂಡನನ್ನು ಕೇಳಿದಳು. ನೀನೇ ಸತ್ಯವಂತೆಯೆಂದು ಮೆರೆಯಬೇಡ, ನಿನಗಿಂತಲೂ ಸತ್ಯವಂತರುಂಟು. ಅಂಥವರ ಮನೆಗೆ ಬಿನ್ನಹಕ್ಕೆ ಹೋಗುತ್ತಿದ್ದೇನೆ ಎಂದು ಹೇಳಿಹೊರಟನು.

ಬಿನ್ನಹಕ್ಕೆ ಹೋಗುವಾಗ ಬಸವರಾಯ, ನನ್ನ ಹೆಂಡತಿಗೆ ಯಾವ ರೀತಿಯಲ್ಲಿ ಮಕ್ಕಳ ಫಲ ತರುವುದು ? ಎಂದು ಯೋಚಿಸಿದ. ಕಕ್ಕಯ್ಯನ ಮನೆಗೆ ಬಿನ್ನಹಕ್ಕೆ ಹೋಗುವಾಗ, ಕಟ್ಟಿರುವೆಗಳು ಸಾಲುಗಟ್ಟಿ ಹೋಗುವುದನ್ನು ನೋಡಿದ. ಹರಳಯ್ಯನ ಮನೆಗೆ ಬಿನ್ನಹಕ್ಕೆ ಹೋಗುವಾಗ ನಚ್ಚಿರುವೆಗಳು ಸಾಲಿಟ್ಟು ಹೊರಟಿರುವುದನ್ನು ಕಂಡ. ನನ್ನ ಹೆಂಡತಿಗೆ ಮಕ್ಕಳ ಫಲವನ್ನು ಕೊಡಬೇಕು, ನೀವು ಮಿಕ್ಕಿದ ಪ್ರಸಾದವನ್ನು ತಂದು ಕೊಡಿ ಎಂದು ಕೇಳಿಕೊಂಡ. ತಾನು ಕಕ್ಕಯ್ಯ ಮತ್ತು ಹರಳಯ್ಯನ ಮನೆಗೆ ಬಿನ್ನಹಕ್ಕೆ ಹೋಗಿ ಬಂದು, ಇರುವೆಗಳಿಗಾಗಿ ಕಾದುನಿಂತ. ಇರುವೆಗಳು ಬಂದಾಗ ತನ್ನ ಪಟ್ಟೆ ವಸ್ತ್ರಬಿಚ್ಚಿ ಹಾಸಿದ. ಚಿಕ್ಕಲ್ಲೂರು ಬೀದಿಯ ಮೂಡಲಲ್ಲಿ ಇರುವೆಗಳಿಗೆ ಕೈಮುಗಿದ. ಇರುವೆಗಳು ತಾವು ಕಕ್ಕಯ್ಯ ಮತ್ತು ಹರಳಯ್ಯನವರ ಮನೆಯಿಂದ ಕಚ್ಚಿಕೊಂಡುಬಂದ ಅನ್ನಪ್ರಸಾದವನ್ನು ಬಸವಣ್ಣನ ಬಟ್ಟೆಯ ಮೇಲೆ ಬಿಟ್ಟವು. ಆ ಪ್ರಸಾದವನ್ನು ಗಂಟುಕಟ್ಟಿಕೊಂಡು ಮನೆಗೆ ಬಂದ ಬಸವರಾಯ, ನಿನಗೆ ಮಕ್ಕಳ ಫಲವನ್ನು ತಂದಿದ್ದೇನೆ, ಕಪ್ಪಡಿ ಕಾವೇರಿಗೆ ಹೋಗಿ, ತಣ್ಣೀರು ಸ್ನಾನಮಾಡಿ ಬಂದು, ಈ ಪ್ರಸಾದವನ್ನು ಸೇವಿಸಿದರೆ ನಿನಗೆ ಮಕ್ಕಳ ಫಲವುಂಟು ಎಂದು ಹೇಳಿದ. ಪ್ರಸಾದವನ್ನು ಉರಿಗದ್ದುಗೆಯ ಮೇಲಿಟ್ಟ. ಗಂಡ ಹೆಂಡತಿ ಇಬ್ಬರೂ ತಣ್ಣೀರು ಸ್ನಾನಕ್ಕೆ ಹೋದರು.

ಬಸವರಾಯನ ತಂಗಿ, ನೀಲಮ್ಮನ ನಾದಿನಿ, ನಾಗಮ್ಮ ಗುರುಮಠಕ್ಕೆ ಬಂದು, ಉರಿಗದ್ದಿಗೆಯ ಮೇಲಿದ್ದ ಪ್ರಸಾದದ ಗಂಟನ್ನು ನೋಡಿದಳು. ಪ್ರಸಾದರ ಸುವಾಸನೆಗೆ ಮಾರುಹೋಗಿ, ತನಗೇ ತಂದಿರಬೇಕೆಂದು ಭಾವಿಸಿ, ಶಿವಪೂಜೆ ಮಾಡಿ, ಅನ್ನ ಪ್ರಸಾದವನ್ನು ಊಟಮಾಡಿ ಮೂರ್ಛೆಹೋದಳು.

ಮೂರ್ಛೆಯಿಂದ ತಿಳಿದೆದ್ದ ಮೇಲೆ ನಾಗಮ್ಮನಿಗೆ ದುಃಖವಾಯಿತು. ಅತ್ತಿಗೆಗೆ ತಂದಿರುವ ಪ್ರಸಾದ ಇರಬಹುದು. ತಾನು ಉಂಡೆನಲ್ಲಾ ಎಂದು ಪೇಚಾಡಿಕೊಂಡಳು. ಅಣ್ಣ ಬಂದರೆ ಆಕ್ಷೇಪಿಸಿಬಹುದೆಂದು ಗುರುಮಠ ಬಿಟ್ಟು ಹೊರಟಳು.

ಸ್ನಾನಮಾಡಿ ಒದ್ದೆಬಟ್ಟೆಯಲ್ಲಿ ಬಂದ ಬಸವರಾಯ ಮತ್ತು ನೀಲಮ್ಮ ಮಠಕ್ಕೆ ಬಂದು ಉರಿಗದ್ದಿಗೆಯ ಮೇಲಿದ್ದ ಪ್ರಸಾದ ಕಾಣದೆ ಹುಡುಕಾಡಿದರು. ಪ್ರಸಾದ ಕಾಣೆಯಾಗಿದೆ. ನಾವು ಸಾತ್ವಿಕರಾದರೂ ನಮಗೆ ಮಕ್ಕಳ ಫಲವಿಲ್ಲ. ನೀನು ಮಕ್ಕಳ ಯೋಚನೆ ಬಿಟ್ಟುಬಿಡು.

ನಾನು ಮೂರು ತಿಂಗಳಕಾಲ ಲೋಕಸಂಚಾರಕ್ಕೆ ಹೋಗಿ ಬರುತ್ತೇನೆ ಎಂದು ಹೊರಟನು.

ಲೋಕಸಂಚಾರ ಮುಗಿಸಿ ಹಿಂದಿರುಗಿದ ಬಸವರಾಯ ಗುರುಮಠದಲ್ಲೆಲ್ಲಾ ಕಣ್ಣಾಡಿಸಿದಾಗ, ಮಠದ ಮುಂದೆ ರಂಗೋಲಿ ಕಂಡು, ಇದನ್ನು ಬಿಟ್ಟವರಾರು ? ಇಲ್ಲಿಗೆ ಬಂದಿದ್ದವರು ಯಾರು ? ಎಂದು ಕೇಳಿದ. ಏನನ್ನೂ ಅನ್ನಬೇಡಿ, ಆಡಬೇಡಿ ನಾದಿನಿ ನಾಗಮ್ಮ ಬಂದಿದ್ದಳು ಎಂದಳು ನೀಲಮ್ಮ. ಸಿಟ್ಟುಗೊಂಡ ಬಸವರಾಯ, ನನ್ನ ಮಡದಿಗೆಂದು ತಂದಿದ್ದ ಪ್ರಸಾದವನ್ನು ಅವಳು ಊಟಮಾಡಿದ್ದಾಳೆ, ಫಲ ಧರಿಸಿದ್ದಾಳೆ, ಅವಳನ್ನು ಎಳೆದು ತನ್ನಿ ಎಂದನು. ಅವಳಿಗೆ ಫಲವಾದರಾಗಲಿ, ಜರಿಯಬೇಡಿ ಎಂದು ನೀಲಮ್ಮ ಬೇಡಿಕೊಂಡಳು. ಬಸಿರಿ ನಾದಿನಿಗೆ ಬಯಕೆ ತೀರಿಸಿದಳು. ಬಸಿರಿಗೆ ಸೀರೆ ಉಡಿಸಬೇಕು ಎಂದಳು. ಕಲ್ಯಾಣವನ್ನು ಶೃಂಗರಿಸಿ, ಏಳು ಜನ ಗೌಡಿಯರು, ಐದು ಜನ ಮುತ್ತೈದೆಯರನ್ನು ಕರೆಯಿಸಿದರು. ಅಲಂಕರಿಸಿ ಆರತಿ ಬೆಳಗಿ ಸಂತೋಷಿಸಿದರು.

ಮಂಡೆ ಮಾಸಿಲ್ಲದ, ಮೈನೆರೆದಿಲ್ಲದ, ಏಳು ವರ್ಷದ ಬಾಲೆ ನಾಗಮ್ಮ ಗರ್ಭಿಣಿ. ಅವಳನ್ನು ಕಲ್ಯಾಣದ ಬೀದಿಯಲ್ಲಿ ತಿರುಗಾಡಿಸಿದರು. ಬಸವರಾಯ ನೋಡಿ ಆನಂದ ಪಟ್ಟನು. ಆದರೆ ಮದುವೆಯಾಗದೆ ಬಸಿರಾದುದಕ್ಕೆ ಜನರು ಆಡಿಕೊಂಡರು. ಬಸವರಾಯನನ್ನು ಟೀಕಿಸಿದರು. ದೊರೆ ಬಿಜ್ಜಳನಿಗೆ ದೂರುಹೋಯಿತು ಕುಲದನ್ಯಾಯಕ್ಕೆ ಒತ್ತಾಯಿಸಿದರು. ನೂರೊಂದು ಹಳ್ಳಿಯವರು ನ್ಯಾಯಕ್ಕೆ ಸೇರಿದರು. ಬಸವರಾಯನಿಗೆ ಅವಮಾನವಾಯಿತು. ಹೆಂಡತಿಗಾಗಿ ತಂದಿದ್ದ ಪ್ರಸಾದವನ್ನು ತಂಗಿ ಸೇವಿಸಿ ಬಸಿರಾಗಿದ್ದಾಳೆ, ಅವಳು ತಪ್ಪುಮಾಡಿಲ್ಲ ಎಂದರೂ ಒಪ್ಪಲಿಲ್ಲ.

ಬಲವಂತವಾಗಿ ಬಸಿರಿ ನಾಗಮ್ಮನನ್ನು ಕುಲದವರ ಮುಂದಕ್ಕೆ ಬರಮಾಡಿದರು. ಅವಳ ಪ್ರಾಮಾಣಿಕ ಹೇಳಿಕೆಯನ್ನು ನಂಬಲಿಲ್ಲ. ಒನಕೆಯಲ್ಲಿ ನಾರುತೆಗೆಯಬೇಕು, ಸೂಜಿಯ ಕಣ್ಣಿನಲ್ಲಿ ನುಗ್ಗಬೇಕು, ಒಣ ಮರಳಿನಲ್ಲಿ ಗಡಿಗೆಮಾಡಿ, ನಾಗರಸಿಂಬಿಯ ಮೇಲಿಟ್ಟು, ನೀರಿಲ್ಲದ ಕೆರೆಯಲ್ಲಿ ನೀರುತರಬೇಕು, ಕಾಯಿಸಿದ ಎಣ್ಣೆ ಕೊಪ್ಪರಿಕೆಯಲ್ಲಿ ಮುಳುಗಿ ಬರಬೇಕು, ನಾಗಮ್ಮನ ಹೊಟ್ಟೆಯಲ್ಲಿರುವ ಮಗು ಮಾತಾಡಬೇಕು ಎಂಬ ದಿವ್ಯಗಳನ್ನು ಮುಂದಿಟ್ಟರು. ಸತ್ಯವಂತೆ ನಾಗಮ್ಮ ಶರಣರ ಅನುಗ್ರಹದಿಂದ ಎಲ್ಲಾ ದಿವ್ಯಗಳಲ್ಲೂ ಗೆದ್ದಳು.

ನಾಗಮ್ಮನ ಹೊಟ್ಟೆಯಲ್ಲಿದ್ದ ಮಗು ಪವಾಡಸದೃಶವಾಗಿ ಚಿಕ್ಕ ಚನ್ನಬಸವಣ್ಣನಾಗಿ ಹುಟ್ಟಿದ. ಅವನು ಕೆಂಡಗಣ್ಣಿನವನು, ಕೇಡುಗಣ್ಣಿನವನು, ಉರಿಗಣ್ಣಿನವನು. ಅವನು ಹುಟ್ಟಿದ ಗಳಿಗೆಯಲ್ಲಿ ಅನ್ಯಾಯ ಮಾಡಿದವರ ಕುಲ ಉರಿದುಹೋಯಿತು. ಬಿಜ್ಜಳನ ತಲೆ ಸಿಡಿದುಹೋಯಿತು. ಬಸವರಾಯ ಓಡಿ ಬಂದು ಶಿಶುವಾಗಿ ಹುಟ್ಟಿದ ಚನ್ನಬಸವಣ್ಣನನ್ನು ಎತ್ತಿ ಮುದ್ದಾಡಿದ. ನೀಲಮ್ಮನಿಗೂ ಸಂತೋಷವಾಯಿತು. ಶಿಶುವನ್ನು ತೊಟ್ಟಿಲಿಗೆ ಹಾಕಿ ಜೋಗುಳ ಹಾಡಿದರು.

ನಾಗಮ್ಮ ಸತ್ಯವಂತೆಯಾದರೆ, ಅವಳಿಗೆ ಹುಟ್ಟುವ ಮಗುವನ್ನು ಲೋಕಕ್ಕೆ ಕೊಡುವುದಾಗಿ

ಬಸವಣ್ಣ ಶರಣರಿಗೆ ಮಾತುಕೊಟ್ಟಿದ್ದ. ಅದರಂತೆ ಮಗುವನ್ನು ಶರಣರಿಗೆ ಕೊಡಲು ಮುಂದಾದ. ಹನ್ನೆರಡು ದಿನದ ಮಗುವನ್ನು ಶರಣ ಮುದ್ದೇಗೌಡನಿಗೆ ಕೊಟ್ಟ. ನೀಲಮ್ಮ ಮತ್ತು ನಾಗಮ್ಮ ದುಃಖಪಟ್ಟರು.

ನಾಗಮ್ಮನ ಮಗನಾಗಿ ಹೋದ ಚನ್ನಬಸವಣ್ಣ, ಲೋಕದಲ್ಲಿ ನಂದಿಬಸವಣ್ಣನಾದ. ಮುದ್ದೇಗೌಡನ ಹಟ್ಟಿಯನ್ನು ಸೇರಿದ.

ಕಲ್ಯಾಣದ ಚಾರಿತ್ರಿಕ ವ್ಯಕ್ತಿಗಳ ಹಿನ್ನೆಲೆಯಲ್ಲಿ ಹುಟ್ಟಿರುವ ಕಥೆ. ನಾಗಮ್ಮನ ಬದುಕಿನ ಯಾವುದೋ ನಿಗೂಢ ಘಟನೆ ಸೇರಿಕೊಂಡಂತಿದೆ. ಅನ್ನಪ್ರಸಾದ ಸಾಂಕೇತಿಕವಾಗಿದೆ. ಮನುಷ್ಯ ಶಿಶುವಾಗಿ ಹುಟ್ಟಿದ ಚನ್ನಬಸವಣ್ಣ ರೈತರ ಬಸವನಾಗಿ ಕಲ್ಪನೆಗೊಂಡಿರುವುದು ಜನಪದರ ಕಲ್ಪನೆಯ ತಂತ್ರವಾಗಿದೆ. ಇದು ಭಕ್ತಿಪ್ರಧಾನವಾದ ಚಾರಿತ್ರಿಕ ಕಥನ ಕಾವ್ಯ ಕಥೆ. ಜನಪದ ಹಾಡ್ಗತೆಯಲ್ಲೂ ಗದ್ಯಕಥೆಯಲ್ಲೂ ಈ ಕಥಾಭಾಗ ರೂಢಿಯಲ್ಲಿದೆ. ಅಂದಿನ ಸಮಾಜದ ರೀತಿ ನೀತಿ, ನಂಬಿಕೆ ನಡಾವಳಿ, ಸಾಮಾಜಿಕ, ಸಾಂಸ್ಕೃತಿಕ ಸ್ಥಿತಿಗತಿಗಳು ಕಥೆಯಲ್ಲಿ ದಟ್ಟವಾಗಿ ತಳಕುಹಾಕಿಕೊಂಡಿವೆ. ಶರಣಸಂಸ್ಕೃತಿಯಲ್ಲಿ ಬಸವರಾಯ, ನೀಲಮ್ಮ, ನಾಗಮ್ಮ, ಚನ್ನಬಸವಣ್ಣ ಹಿಂದಿನಂತೆ ಈಗಲೂ ಅತ್ಯುನ್ನತ ಸ್ಥಾನಮಾನಗಳಿಸಿದ್ದಾರೆ. ಅವರ ಸಾಧನೆ, ಬದುಕಿನ ಆದರ್ಶ ಜನಮನವನ್ನುಗೆದ್ದಿದೆ.

ಈ ಚಾರಿತ್ರಿಕ ಕಥನಕಾವ್ಯವನ್ನು ಮೈಸೂರು ಜಿಲ್ಲೆಯ ಹೊರೆಯಾಲದ ಹವ್ಯಾಸ ಗಾಯಕಿ ಮಹದೇವಮ್ಮ ಹಾಡಿದ್ದಾಳೆ. ಈ ಕಥೆ ಹೆಚ್ಚಾಗಿ ಹರಿಜನರಲ್ಲಿ ರೂಢಿಯಲ್ಲಿರುವುದು ವಿಶೇಷವಾಗಿದೆ.

## ೭. ಹರಳಯ್ಯ

ಜಗಜ್ಯೋತಿ ಬಸವಣ್ಣನ ಕಾಲದಲ್ಲಿ ಮೊಚ್ಚಿಗಾರ ಹರಳಯ್ಯ ಸ್ವಚ್ಛನಡತೆಗೆ ಹೆಸರಾದವನು. ಬಸವಣ್ಣನ ಸ್ಮರಣೆಯಲ್ಲಿ ಚಪ್ಪಲಿಕಾಯಕ ಮಾಡುತ್ತಾನೆ. ದೊರೆತ ಹಣದಿಂದ, ಜೋಳತಂದು ಅಡಿಗೆಮಾಡಿಸಿ, ಜಂಗಮರಿಗೆ ಉಣಬಡಿಸಿ, ಬಳಿಕ ಊಟ ಮಾಡುತ್ತಾನೆ.

ಒಂದು ದಿನ ಹರಳಯ್ಯ ದಾರಿಯಲ್ಲಿ ಸಿಕ್ಕಿದ ಬಸವಣ್ಣನಿಗೆ ನಮಸ್ಕಾರಮಾಡಿದ. ಬಸವಣ್ಣ ಪ್ರತಿಯಾಗಿ ಹರಳಯ್ಯನಿಗೆ ನಮಸ್ಕಾರಮಾಡಿದ. ಮಹಾತ್ಮ ನಮಸ್ಕಾರ ಮಾಡಿದುದರಿಂದ ಹರಳಯ್ಯನಿಗೆ ನೋವಾಯಿತು. ಹರಳಯ್ಯ ದಂಪತಿಗಳು ತಮ್ಮ ತೊಡೆಯ ಚರ್ಮ ಕೊಯ್ದು ಹೊಸ ಚಪ್ಪಲಿಮಾಡಿದರು.

ಹರಳಯ್ಯ ಮೊಚ್ಚೆ ತಂದು ಬಸವಣ್ಣನ ಮುಂದಿಟ್ಟು ಮೆಟ್ಟಿಕೊಳ್ಳಲು ಪ್ರಾರ್ಥಿಸಿದ. ಸಂದರ್ಭ ಗ್ರಹಿಸಿದ ಬಸವಣ್ಣ ಚಪ್ಪಲಿಗಳನ್ನು ಕಾಲುಗಳಿಗೆ ಹಾಕಿಕೊಳ್ಳದೆ, ತನ್ನ ತಲೆಯ

ಮೇಲಿಟ್ಟುಕೊಂಡ. ಇವು ಪೂಜಿಸಲು ಯೋಗ್ಯವಾದವು, ಜಗಲಿಯ ಮೇಲಿಡು ಎಂದನು. ತನ್ನ ಆಸೆ ನೆರವೇರದುದಕ್ಕೆ ಭಕ್ತ ಹರಳಯ್ಯನಿಗೆ ದುಃಖವಾಯಿತು. ಮನೆಗೆ ಹಿಂದಿರುಗಿದ.

ಚಪ್ಪಲಿಗಳ ಸಹಿತ ಬರುತ್ತಿದ್ದ ಹರಳಯ್ಯನನ್ನು ಕಂಡು, ಬ್ರಾಹ್ಮಣ ಮಧುವಯ್ಯ ಅವು ತನಗೆ ಬೇಕೆಂದ. ಅಹಂಕಾರದಿಂದ ಚಪ್ಪಲಿಗಳನ್ನು ಕಿತ್ತುಕೊಂಡು, ಕಾಲುಗಳಿಗೆ ಹಾಕಿಕೊಂಡ. ಬೇಡವೆಂದರೂ ಕೇಳಲಿಲ್ಲ. ಮಧುವಯ್ಯನಿಗೆ ಮೈಯೆಲ್ಲಾ ಉರಿ, ಬೊಬ್ಬೆ. ನೆಲಕ್ಕೆ ಬಿದ್ದು ಹೊರಳಾಡಿದ. ಸಹಾಯಕ್ಕೆ ಬೇಡಿಕೊಂಡ. ಏನು ಚಿಕಿತ್ಸೆ ಮಾಡಿದರೂ ಶಮನವಾಗಲಿಲ್ಲ.

ಒಬ್ಬಾಕೆ ಬೀದಿಯ ಬಚ್ಚಲ ನೀರು ತಂದು ಸುರಿದಳು. ಮಧುವಯ್ಯನ ಬೇಗೆ ತಣ್ಣಗಾಯಿತು. ಎಲ್ಲಿಂದ ತಂದ ನೀರೆಂದು ಕೇಳಿದ. ಸಮಗಾರ ಹರಳಯ್ಯ ಸ್ನಾನಮಾಡಿದ ನೀರು ಎಂದಳು. ಮಧುವಯ್ಯನಿಗೆ ತಪ್ಪು ಅರಿವಾಯಿತು. ಹರಳಯ್ಯನನ್ನು ಕರೆಯಿಸಿ, ಸತ್ಕರಿಸಿ, ಕ್ಷಮೆಯಾಚಿಸಿದ. ತನ್ನ ಮಗಳನ್ನು ಹರಳಯ್ಯನ ಮಗನಿಗೆ ಕೊಟ್ಟು ಲಗ್ನಮಾಡಿ ಸಂಬಂಧ ಬೆಳೆಸಿದ.

ಭಕ್ತಿಪ್ರಧಾನ ಕಥೆ. ಜಾತ್ಯಾತೀತ ಕಲ್ಪನೆಗೆ ಇಂಬು. ಅಂತರಜಾತಿ ವಿವಾಹಕ್ಕೆ ನಾಂದಿ. ಶರಣ ಚಳವಳಿಯ ಫಲ. ಇದು ಬಹಳ ಜನಪ್ರಿಯವಾಗಿರುವ ಪ್ರಸಂಗ. ಇದನ್ನು ಕಂಠಸ್ಥ ಮಾಡಿಕೊಂಡು ಹಾಡಿದ್ದು, ಬಸವಯ್ಯ ಸ್ವಾಮಿ ಮಠಪತಿ.

## ೮. ಚೆನ್ನಿಗರಾಮ

ಧರಣೇಂದ್ರ ಕಂಪಿಲರಾಯ ಹೊಸಮಲೆ ದುರ್ಗಕ್ಕೆ ಹೊರಟಿದ್ದಾನೆ. ಮಂತ್ರೀಶನನ್ನು ಕರೆದು, ಮಗ ಚೆನ್ನಿಗರಾಮನನ್ನು ಕರೆದುಕೊಂಡು ಬರಲು ಹೇಳುವನು. ಮಂತ್ರಿ ಚೆನ್ನಿಗರಾಮನ ಬಳಿಗೆ ಹೋಗಿ ಕರೆದಾಗ ಅವನು ತಂದೆಯ ಬಳಿಗೆ ಬಂದನು. ದಂಡಿನ ಜೊತೆಯಲ್ಲಿ ಹೊಸಮಲೆ ದುರ್ಗಕ್ಕೆ ಬರಬೇಕೆಂದು ತಂದೆ ಹೇಳಿದ. ನಾನು ಬರಬೇಕಾದರೆ ತನಗೆ ಉತ್ತಮ ಕುದುರೆ ಬೇಕೆಂದ. ಹಿಂಡಿನಲ್ಲಿ ಮೇಲಾದ ಕುದುರೆ ತರಿಸಿದ. ಅದು ಚೆನ್ನಿಗರಾಮನನ್ನು ಕಂಡು ಗಡಗಡನೆ ಒದರಿ ನಿಂತಿತು. ಒಳ್ಳೆಯ ಕುದುರೆಯಿಲ್ಲವೆಂದು ಮಗ ಆಕ್ಷೇಪಿಸಿದ.

ತಂದೆಗೆ ಸಿಟ್ಟು ಬಂತು. ಪ್ರತಾಪಪುರಿಯ ವೀರಬಲ್ಲಾಳನ ಕುದುರೆ ಬೇಕಾ ನಿನಗೆ ? ಅದನ್ನು ಗೆದ್ದು ತರಬಲ್ಲೆಯಾ ? ಪ್ರತಾಪಪುರಿಯ ರಾಜನ ಮಗಳು, ಮುಡಿಗಗೊಂಡರಾಯನ ಮಗಳು, ಜಗದೇಶ್ವರನ ಮಗಳು, ಮನ್ಮಥರಾಜನ ಮಗಳು, ನಾಲ್ಕು ಜನರೂ ಕುದುರೆ ಗೆದ್ದವನನ್ನು ಮದುವೆಯಾಗುವುದಾಗಿ ಶಪಥಮಾಡಿದ್ದಾರೆ. ಅವರನ್ನು ಗೆದ್ದು ಬರುತ್ತೀಯಾ ? ಅಂಥ ಮಗನಾ ನೀನು ? ನಾನು ಹೆದರಿಕೊಂಡು ಪ್ರತಾಪಪುರಿ ರಾಜನಿಗೆ ಮೂರು ಸಾವಿರ ವಾರ್ಷಿಕ ಪೌದಿಕೊಡುತ್ತಿದ್ದೇನೆ. ಅದನ್ನು ನೀನು ಕೊಡಬಲ್ಲೆಯಾ ? ಎಂದು ಪ್ರಶ್ನಿಸಿದ. ಚೆನ್ನಿಗರಾಮನಿಗೆ ಮುಖಕಂದಿತು. ಅರಮನೆಗೆ ಬಂದು ಪ್ರತಾಪಪುರಿಗೆ ಹೋಗಿಬರಲು ತಾಯಿ ಹರಿಯಮ್ಮಳ ಆಶೀರ್ವಾದ ಕೇಳಿದನು.

ಹನ್ನೆರಡು ವರ್ಷ ವನವಾಸಮಾಡಿ ಈಶ್ವರನ ವರದಿಂದ ಪಡೆದಿರುವ ಮಗನೀನು. ವೀರಬಲ್ಲಾಳನ ಕುದುರೆ ಸಾಮಾನ್ಯವಲ್ಲ. ಅದನ್ನು ಗೆಲ್ಲಲು ಹೋದವರು ಹಿಂದಿರುಗಿ ಬಂದಿಲ್ಲ. ಹೋಗಬೇಡ ಎಂದಳು. ತಾಯಿಯ ಮಾತನ್ನು ಮಗ ಕೇಳಲಿಲ್ಲ. ಆಚೆ ಬೀದಿಯಲ್ಲಿದ್ದ ಸೀತಾಳರಾಮನನ್ನು ಕರೆಸಿ, ಮಾದಿಗರ ಹಂಪಣ್ಣನನ್ನು ಕರೆದುಕೊಂಡು ಬರಲು ಹೇಳಿದಳು.

ಹಂಪಣ್ಣ ಬಂದು ಕರೆಸಿದ ಕಾರಣ ಕೇಳಿದ. ಚೆನ್ನಿಗರಾಮನಿಗೆ ಬುದ್ಧಿ ಹೇಳು ಎಂದಳು. ನಿನ್ನ ಮಗ ಹೋಗದಿದ್ದರೇನು, ನಾನೇ ಹೋಗಿ ಕುದುರೆಯನ್ನು ಗೆದ್ದುಬರುತ್ತೇನೆ ಎಂದ. ಹರಿಯಮ್ಮಳಿಗೆ ಮತ್ತಷ್ಟು ಆಘಾತವಾಯಿತು.

ಮನೆದೇವರ ಪೂಜೆಮಾಡಿ, ಮೂರು ತಿಂಗಳಿನಲ್ಲಿ ಹಿಂದಿರುಗುವುದಾಗಿ ತಾಯಿಗೆ ಧೈರ್ಯ ಹೇಳಿ, ಚೆನ್ನಿಗರಾಮ ಹಂಪಣ್ಣ ಇಬ್ಬರೂ ಕುಮುಟಕ್ಕೆ ಹೊರಡಲು ಸಿದ್ಧವಾದರು. ಹರಿಯಮ್ಮ ಇಬ್ಬರಿಗೂ ಸ್ನಾನಮಾಡಿಸಿ ಸಿಂಗಾರಮಾಡಿದಳು. ಹೆತ್ತ ತಾಯಿಯ ಅಪ್ಪಣೆ ಕೇಳಿ ಬರಲು ಹಂಪಣ್ಣನಿಗೆ ಹೇಳಿದಳು.

ಹಂಪಣ್ಣ ತಾಯಿಯ ಬಳಿಗೆ ಹೋಗಿ, ವಿಷಯ ತಿಳಿಸಿ, ಅಪ್ಪಣೆ ಕೊಡು ಎಂದಾಗ, ಅವಳು ಆಶೀರ್ವದಿಸಿ ಹೋಗಿ ಜಯಶೀಲರಾಗಿ ಬನ್ನಿ ಎಂದಳು. ರಾಹುತರಾಗಿ ಹೋಗಿ ಕುದುರೆ ಪಳಗಿಸಲು ಸೂಚನೆ ನೀಡಿದಳು. ಇಬ್ಬರೂ ಕುಮಟಕ್ಕೆ ಬಂದರು. ಕುದುರೆಗೆ ವಿದ್ಯೆ ಕಲಿಸುವ ರಾಹುತರೆಂದು ಹೇಳಿಕೊಂಡರು. ಈ ಸುದ್ದಿ ವೀರಬಲ್ಲಾಳನ ಮಗಳು ಕಮಲಿಗೆ ಹೋಯಿತು. ಆಕೆ ಸಿಂಗಾರವಾಗಿ ರಾಹುತರನ್ನು ನೋಡಲು ಬಂದಳು. ಆಕರ್ಷಿತಳಾದಳು.

ಕುದುರೆಯನ್ನು ಹೊರಕ್ಕೆ ಬಿಡಲಾಯಿತು. ಚೆನ್ನಿಗರಾಮ ಕುದುರೆಯ ಕತ್ತನ್ನು ತಬ್ಬಿ ಏರಿ ಕುಳಿತ. ಕುದುರೆ ಆಕಾಶಕ್ಕೆ ಹಾರಿತು. ಯುವರಾಣಿ ಕಮಲಿಗೆ ಆಘಾತವಾಯಿತು. ಲಗ್ನವಾಗಬೇಕೆಂದಿದ್ದವನು ಕುದುರೆಯೊಡನೆ ಮಾಯವಾದುದರಿಂದ ದುಃಖವಾಯಿತು. ತಂದೆ ಸಮಾಧಾನ ಮಾಡಿದ. ದಂಡು ಕಳುಹಿಸಿ ಚೆನ್ನಿಗರಾಮನನ್ನು ಕುದುರೆ ಸಹಿತ ಹಿಡಿದು ತರಿಸುವುದಾಗಿ ಹೇಳಿದ. ದಂಡು ಹಿಂಬಾಲಿಸಿತು. ಚೆನ್ನಿಗರಾಮ ಹಂಪಣ್ಣ ನೋಡಿದರು. ಚೆನ್ನಿಗರಾಮ ಏರಿದ್ದ ಕುದುರೆಯ ಕಡಿವಾಣ ಕಿತ್ತುಬಂತು. ಹಂಪಣ್ಣ ಕುದುರೆಗೆ ಕಡಿವಾಣ ಹಾಕಿದ. ಚೆನ್ನಿಗರಾಮ ಕುದುರೆಯನ್ನು ಭೂಮಿಗೆ ಇಳಿಸಿದ.

ಚೆನ್ನಿಗರಾಮ ಕುದುರೆಯನ್ನು ಕದ್ದುಹೋಗುತ್ತಿದ್ದನೆಂದು ವೀರಬಲ್ಲಾಳ ಆಕ್ಷೇಪಿಸಿದ. ಯುದ್ಧಮಾಡುತ್ತೀನಿ ಎಂದ. ನಿನ್ನ ಹೆಸರು ಕುಲ ಹೇಳು ಎಂದ. ಚೆನ್ನಿಗರಾಮ ತನ್ನ ನಿಜ ಸಂಗತಿ ತಿಳಿಸಿದ.

ವಿಷಯ ತಿಳಿದ ವೀರಬಲ್ಲಾಳ ವೀರಚೆನ್ನಿಗರಾಮನಿಗೆ ತನ್ನ ಮಗಳು ಕಮಲೆಯನ್ನು ಲಗ್ನಮಾಡಲು ಬಯಸಿದ. ತಾಯಿ ತಂದೆಯರಿಲ್ಲದೆ ಮದುವೆಯಾಗುವುದಿಲ್ಲವೆಂದ ಚೆನ್ನಿಗರಾಮ ಕುದುರೆಯೊಡನೆ ಬಂದು ತಾಯಿಯನ್ನು ನೋಡಿದ. ಕುದುರೆಯನ್ನು ಗೆದ್ದು ಬಂದ ವಿಷಯ ತಿಳಿಸಿದ.

ಹೊಸಮಲೆ ದುರ್ಗದಿಂದ ಕಂಪಿಲರಾಜ ಹಿಂದಿರುಗಿದ. ವಿಷಯ ತಿಳಿಯಿತು. ವೀರ ಬಲ್ಲಾಳನೂ ಬಂದ. ಕುದುರೆ ಪಳಗಿಸಿ ಗೆದ್ದವನನ್ನು ಮದುವೆಯಾಗಲು ಕಾದಿದ್ದ ನಾಲ್ಕು ಜನ ಯುವತಿಯರನ್ನೂ ಚೆನ್ನಿಗರಾಮ ಲಗ್ನವಾದ.

ಇತಿಹಾಸದ ಕುಮಾರರಾಮನೇ ಚೆನ್ನಿಗರಾಮ. ಅವನ ಸಾಹಸದ ಒಂದು ಮುಖದ ಕಥೆ ಇದು. ಚೆನ್ನಿಗರಾಮುನನ್ನು ಕುರಿತಂತೆ ಈಗಾಗಲೇ ಕನ್ನಡದಲ್ಲಿ ನಾಲ್ಕು ಪಾಠಗಳು ಪ್ರಕಟವಾಗಿವೆ. ಇದು ಮತ್ತೊಂದು ಪಾಠ.

ಇದನ್ನು ಹವ್ಯಾಸಿ ಹಾಡುಗಾರ್ತಿ ಯಾಚೇನಹಳ್ಳಿ ನಿಂಗಮ್ಮ ಹಾಡಿದ್ದಾಳೆ.

## ೯. ಸಿಂಧೂರ ಲಕ್ಷ್ಮಣ

ಜತ್ತಿ ಸಂಸ್ಥಾನದಲ್ಲಿ ಸಣ್ಣ ಹಳ್ಳಿ ಸಿಂಧೂರ. ಲಕ್ಷ್ಮಣ ಆ ಊರಿನಲ್ಲಿ ಹುಟ್ಟಿದ. ಅವನು ಬಂಟ. ಕೊಟ್ಟ ಮಾತಿಗೆ ತಪ್ಪಿದವನಲ್ಲ. ಹಿಡಿದ ಹಠ ಬಿಟ್ಟವನಲ್ಲ. ಅವನು ಪಾಂಡವರ ಭೀಮನಂಥವನು, ಚೆಲುವ ಚಂದ್ರಮ, ಅವನು ಹೋಳಿ ಕಾಮ, ಗೌರ ವರ್ಣದವನು, ಶೂರವಂಶದಲ್ಲಿ ಹುಟ್ಟಿ ಹುತಾತ್ಮನಾದವನು.

ಒಮ್ಮೆ ಊರಿನ ಐಯ್ಯನವರ ಮೇಲೆ ಲಕ್ಷ್ಮಣ ತಳ್ಳಿಮಾಡಿದ. ಪೋಲೀಸು ಇನ್‌ಸ್ಪೆಕ್ಟರ್‌ಗೆ ಸಿಟ್ಟು ಬಂತು. ಲಕ್ಷ್ಮಣನನ್ನು ಹಿಡಿಯಲು ಮುಂದಾದ. ವಿಫಲನಾದ. ಲಕ್ಷ್ಮಣ ಸ್ನೇಹಿತರೊಡನೆ ಸೇರಿ ಶ್ರೀಮಂತರನ್ನು ದೋಚಿ ಬಡವರಿಗೆ ಹಂಚುವ ಕೆಲಸವನ್ನು ಮುಂದುವರಿಸಿದ. ಸರಕಾರಕ್ಕೆ ಅವನನ್ನು ಹಿಡಿಯುವುದು ಕಷ್ಟವಾಯಿತು. ಸರಕಾರದ ಪೋಲೀಸರೇ ಮೋಸಹೋಗಬೇಕಾಯಿತು. ಸ್ಥಳೀಯನೊಬ್ಬನಿಂದ ಅವನು ಸಿಕ್ಕಿದ. ಗುಂಡೇಟು ಬಿತ್ತು. ಅವನನ್ನು ಗಲ್ಲಿಗೇರಿಸಿದರು.

ಈ ಗೀಗಿ ಪದದ ಲಾವಣಿ ಕಥನಗೀತೆಯಲ್ಲಿ ಬಹಳ ಅಸ್ಪಷ್ಟತೆಯಿದೆ. ಧ್ವನಿಮುದ್ರಣದಲ್ಲಿ ಹಾಡುಗಾರಿಕೆ ಸ್ಪಷ್ಟವಾಗಿ ಕೇಳದಿರುವುದು ಇದಕ್ಕೆ ಕಾರಣ.

ಇದನ್ನು ಹಾಡಿದ್ದು : ಸಂಗನ ಗೌಡ ಸಿದ್ಧನಗೌಡ ಮಗದುಂ, ಮರನೂರು, ಜಮಖಂಡಿ ತಾಲ್ಲೂಕು.

ಪ್ರಸ್ತುತ ಗ್ರಂಥದ ಅನುಬಂಧದಲ್ಲಿ ನಾಲ್ಕು ಕಿರುಗೀತೆಗಳನ್ನು ಕೊಟ್ಟಿದೆ. ಇವು ದೀರ್ಘ ಕಥನ ಕಾವ್ಯಗಳಲ್ಲ. ಒಂದು ಅಪೂರ್ಣ, ಮೂರು ಕೋಲಾಟದ ಪದಗಳು. ಚಾರಿತ್ರಿಕ ವ್ಯಕ್ತಿ ವಿಷಯಗಳಿಗೆ ಸಂಬಂಧಿಸಿದವು ಎನ್ನುವ ಕಾರಣಕ್ಕೆ ಅನುಬಂಧದಲ್ಲಿ ಅಚ್ಚಿಸಿದೆ. ಚರಿತ್ರೆಗೆ ಸಂಬಂಧಿಸಿದ ಹಾಡುಗಳು ಒಂದೆಡೆಯಲ್ಲಿರಲಿ ಎಂಬ ಉದ್ದೇಶವೂ ಸೇರಿಕೊಂಡಿದೆ.

## ೧. ರಣಭೈರೇಗೌಡ

ಯಲಹಂಕ ನಾಡಪ್ರಭುಗಳ ಬಗೆಗೆ ಬೇಕಾದಷ್ಟು ಐತಿಹ್ಯಗಳು ಹುಟ್ಟಿಕೊಂಡಿವೆ. ನೂರಾರು ವರ್ಷಗಳಿಂದ ಅವು ರೆಕ್ಕೆಪುಕ್ಕ ಕಟ್ಟಿಕೊಂಡು ಮೌಖಿಕವಾಗಿ ಜೀವಂತವಾಗಿವೆ. ಬರಹಗಾರರೂ ಅವುಗಳನ್ನು ಧಾರಳವಾಗಿ ಬಳಸಿಕೊಳ್ಳುತ್ತಿದ್ದಾರೆ. ಮಾಗಡಿ ಕೆಂಪೇಗೌಡನನ್ನು ಕುರಿತು ಐತಿಹ್ಯಗಳ ಜೊತೆಗೆ ದೀರ್ಘ ಕಥನಕಾವ್ಯಗಳು ಸೃಷ್ಟಿಯಾಗಿವೆ. ಉಳಿದವರ ಬಗೆಗೆ ಕಾವ್ಯಗಳಿಲ್ಲ. ಅವರ ಬಗ್ಗೆ ಕಾವ್ಯಗಳು ರೂಪುಗೊಳ್ಳಲೇ ಇಲ್ಲವೋ ಅಥವಾ ಇದ್ದಂಥವು ಸಂಗ್ರಹವಾಗಲಿಲ್ಲವೋ ಗೊತ್ತಿಲ್ಲ. ಅಪರೂಪಕ್ಕೆ ಮಾಗಡಿ ತಾಲ್ಲೂಕಿನ ಕನಸವಾಡಿಯ ಎಲ್ಲಮ್ಮ ಮತ್ತು ಹನುಮಕ್ಕ ಆವತಿ ನಾಡಪ್ರಭು ರಣಭೈರೇಗೌಡನ ಬಗೆಗೆ ಒಂದು ಕಥನ ಕಾವ್ಯವನ್ನು ಕಂಠಸ್ಥಮಾಡಿಕೊಂಡಿದ್ದರು. ಆದರೆ ಆ ಹಾಡಿನ ಕೆಲವು ಸಾಲುಗಳನ್ನು ಮಾತ್ರ ಎಚ್.ಎಲ್. ನಾಗೇಗೌಡರು 1980ರಲ್ಲಿ ಧ್ವನಿಮುದ್ರಿಸಿಕೊಂಡಿದ್ದಾರೆ. ದೀರ್ಘ ಕಾವ್ಯ ಎಂದೋ ಏನೋ ಅದನ್ನು ಪೂರ್ತಿಯಾಗಿ ಧ್ವನಿಮುದ್ರಿಸಿಕೊಂಡಿಲ್ಲ. ಇದರಿಂದಾಗಿ ಅಪರೂಪವಾಗಿದ್ದ ಚಾರಿತ್ರಿಕ ಕಥನಕಾವ್ಯವೊಂದು ಕೈತಪ್ಪಿಹೋಯಿತು.

ದೀರ್ಘಕಾವ್ಯದ ಪ್ರಾರಂಭದ ಹದಿನಾರು ಸಾಲುಗಳು ಮಾತ್ರ ಲಭ್ಯವಿದ್ದು ಅವುಗಳನ್ನು ಅಚ್ಚಿಸಿದೆ. ಈ ಅಪೂರ್ಣವಾದ ಕಾವ್ಯ ಯಾರಿಗಾದರೂ ಸಿಕ್ಕಿದರೆ, ಯಾರಾದರೂ ಹಾಡುವ ನಿರೂಪಕರು ದೊರೆತರೆ, ರಣಭೈರೇಗೌಡನ ಬಗೆಗೆ ಜನಪದರಿಗಿದ್ದ ಕಲ್ಪನೆ ತಿಳಿಯುವಂತಾಗುತ್ತದೆ.

ಪ್ರಸ್ತುತ ಕಾವ್ಯಭಾಗದಲ್ಲಿ ರಣಭೈರೇಗೌಡನ ಮನೆಯಲ್ಲಿ ಹೊನ್ನಿನ ಕಣಜ, ಚಿನ್ನದ ಸಿವುಡಿನ ಬಾನದ ಸೊಲಿಗೆ, ಕೋಣವನ್ನು ಕಟ್ಟಿಕೊಂಡು ಬೀಸುವ ರಾಗಿಕಲ್ಲು, ಸೇವೆಗಿದ್ದ ಏಳು ಮಂದಿ ದಾದಿಯರು, ಬೇಕಾದಂತಹ ಅನ್ನಛತ್ರ, ಅರವಂಟಿಗೆಗಳ ಪ್ರಸ್ತಾಪವಿದೆ. ಒಮ್ಮೆ ದೊರೆ ಭೈರೇಗೌಡ ಸಾಕ್ಷಾತ್ ಪರಮಾತ್ಮನ ಜೋಗಿ ಅವತಾರ ತಾಳಿ ಬೇಟೆಗೆ ಹೋದ ಸೂಚನೆಯಿದೆ.

## ೨. ಪಿರಿಯಾ ಪಟ್ಟಣದ ವೀರರಾಜ

ಹೆಬ್ಬಣಿ ಮಾದಯ್ಯ ಪ್ರಸಿದ್ಧ ವೃತ್ತಿಗಾಯಕ. ಮಲೆ ಮಾದೇಶ್ವರ ಜನಪದ ಮಹಾಕಾವ್ಯವನ್ನು ಕಂಠಸ್ಥಮಾಡಿಕೊಂಡು, ನಿರೂಪಿಸಿದ್ದಾನೆ. ಪ್ರಸ್ತುತ ಹಾಡಿರುವ ಕಥನ ಕಾವ್ಯ ಅಪೂರ್ಣ ಹಾಗೂ ಸಾಧಾರಣ ಪಾಠ.

ಮೈಸೂರು ಕೊಡಗು ನಡುವಿನ ರಾಜಮನೆತನದ ಕಾವ್ಯಗಳಲ್ಲಿ ಪಿರಿಯಾಪಟ್ಟಣದ ವೀರರಾಜನ ಕಥೆಯೂ ಒಂದು. ಇದರ ಉತ್ತಮ ಹಾಗೂ ವಿಸ್ತೃತ ಕಾವ್ಯವನ್ನು ಡಾ|| ಜೀ.ಶಂ. ಪರಮಶಿವಯ್ಯ, ಪ್ರೊ ಡಿ. ಲಿಂಗಯ್ಯ, ಡಾ|| ಪಿ.ಕೆ. ರಾಜಶೇಖರರು, ಈಗಾಗಲೇ ಸಂಗ್ರಹಿಸಿ ಪ್ರಕಟಿಸಿದ್ದಾರೆ.

ಅಪೂರ್ಣವಾದ ಪ್ರಸ್ತುತ ಕಥಾಭಾಗದಲ್ಲಿ ಶನಿಯಕಾಟದಿಂದ ರಾಜ್ಯ ಹೋಗಿ ಬಡತನ ಬಂದಿರುವ ವಿಷಯವನ್ನು ವೀರರಾಜ ಹೆಂಡತಿಗೆ ಹೇಳುವ ಅಂಶವಿದೆ.

## ೩. ಕೆಂಪೇಗೌಡನ ಕಾಲು ಚಿಟುಗು ಕೋಲುಪದ

ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು ಲಕ್ಷ್ಮೀಸಾಗರದ ಸೋಬಾನೆ ಕೃಷ್ಣೇಗೌಡ ಹಾಡಿರುವ ಒಂದು ವರಸೆಯ ಕೋಲಾಟದ ಪದ. ಮಾಗಡಿ ಕೆಂಪೇಗೌಡನ ದೀರ್ಘ ಕಥಾನಕವನ್ನು ಸಂಗ್ರಹಿಸಿಕೊಂಡು ಕೋಲಾಟಕ್ಕೆ ಅಳವಡಿಸಿಕೊಂಡಿದೆ. ಈ ಕೋಲಾಟಕ್ಕೆ ಕೆಂಪೇಗೌಡನ ಹೆಸರನ್ನೇ ಇಟ್ಟಿರುವುದು ವಿಶೇಷ. ದೀರ್ಘಕಾವ್ಯದಲ್ಲಿ ಜನಪ್ರಿಯವಾಗಿರುವ, ಮಾಗಡಿ ಕೆಂಪೇಗೌಡನ ಬಾಲ್ಯದ ಬಡತನದ ಚಿತ್ರ, ಅವನು ಹಾರುವರ ಮನೆಯಲ್ಲಿ ಜೀತ ಮಾಡಿದ ವರ್ಣನೆ ಇಲ್ಲಿದೆ.

ಮಾಗಡಿ ಕೆಂಪೇಗೌಡನಾಗಲೀ ಅಥವಾ ಯಲಹಂಕ ನಾಡಪ್ರಭುಗಳಲ್ಲಿ ಯಾರೇ ಕೆಂಪೇಗೌಡನಾಗಲೀ ಬಡತನದಲ್ಲಿ ಇರಲಿಲ್ಲ. ಆದರೂ ಬಡತನದ ವರ್ಣನೆಯನ್ನು ಜನಪದ ಹಾಡುಗಾರರು ಕಲ್ಪಿಸಿಕೊಂಡಿದ್ದಾರೆ. ಇದು ಜನಪದರ ಒಂದು ರೀತಿಯ ನಿರೂಪಣಾ ತಂತ್ರವೆನ್ನಬಹುದು. ಇದನ್ನು ಜನಪದ ಆಶಯ ಅಥವಾ ಜನಪದ ಕವಿಸಮಯ ಎನ್ನಬಹುದು.

## ೪. ಮಾಗಡಿ ಕೆಂಪೇಗೌಡನ ಜಂಪು ಕೋಲು ಪದ

ಕೆಮ್ಮನ ಹಳ್ಳಿಯ ಹನುಮೇಗೌಡ ಹಾಡಿರುವ ಕೋಲಾಟದ ಪದ. ಇದೂ ಒಂದು ಕೋಲಾಟದ ವಿಧಾನ. ಇಮ್ಮಡಿ ಕೆಂಪೇಗೌಡನ ಒಂದೆರಡು ಚಟುವಟಿಕೆಗಳು ಇಲ್ಲಿ ಪ್ರಸ್ತಾಪವಾಗಿವೆ.

ಮಾಗಡಿ ಕೆಂಪೇಗೌಡ ಆನೆಯ ಕಾವಲಿಗೆ ಬಿಡದಿ ಏರ್ಪಡಿಸಿ, ಬೆಂಗಳೂರು ಪೇಟೆಗೆ ಬಂದು ರಂಗನಾಥನ ಪೂಜೆಮಾಡಿಸಿದ್ದು, ಧರ್ಮದ ಕೊಳಕಟ್ಟಿಸಿದ್ದು, ಸೋಮೇಶ್ವರನ ಗುಡಿಗೆ ಬಂದು ಪೂಜೆಮಾಡಿಸಿದ್ದು, ಅನಂತರ ರಂಗನಾಥನ ಪೂಜೆ ನಿಲ್ಲಿಸಿದ್ದು ನಿರೂಪಣೆಯಾಗಿದೆ.

ಮಾಗಡಿ ಕೆಂಪೇಗೌಡನ ಕಾಲದಲ್ಲಿ ನಡೆಯಿತು ಎಂದು ಹೇಳಲಾದ ಮಾಗಡಿಯ ಶ್ರೀ ರಂಗನಾಥ ಮತ್ತು ಶ್ರೀ ಸೋಮೇಶ್ವರ ದೇವರ ಸಂಘರ್ಷ ಸಂದರ್ಭವನ್ನು ಈ ಕೋಲಾಟ ಪದದಲ್ಲಿ ಬಳಸಿಕೊಂಡಿದೆ. ಅದು ಶೈವ ಹಾಗೂ ವೈಷ್ಣವರಿಗೆ ಸಂಬಂಧಿಸಿದ ಧಾರ್ಮಿಕ ಅಥವಾ ಜಾತಿಯ ಸಂಘರ್ಷವೆಂದು ಕಾಣುತ್ತದೆ.

ಪ್ರಸ್ತುತ ಗ್ರಂಥದ ಕಾವ್ಯಕಥೆಗಳನ್ನು ಹಾಡಿದ ವೃತ್ತಿಗಾಯಕರ ಹಾಗೂ ಹವ್ಯಾಸಿ ಗಾಯಕರ ಸ್ಥೂಲವಾದ ಪರಿಚಯ ಹೀಗಿದೆ:

## ೧. ಚೌಡಿಕೆ ಸುಬ್ಬಯ್ಯ

ಆಸಾದಿ ಚೌಡಿಕೆ ಸುಬ್ಬಯ್ಯ ಕರ್ನಾಟಕ ಕಂಡ ಅಪರೂಪದ ವೃತ್ತಿಗಾಯಕರಲ್ಲಿ ಒಬ್ಬ. ಚೌಡಿಕೆ ಸಂಪ್ರದಾಯದ ಹಾಡುಗಾರರಲ್ಲಿ ನಾಡಿನಲ್ಲೇ ಹೆಸರಾದ ಕಲಾವಿದ. ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲದ ಪ್ರತಿಭಾವಂತ. ಚೌಡಿಕೆಯ ಟಿಂಗ್‌ಟಿಂಗ್, ಬಾರಿಕೆಯ ಲ್ಡೊಳಕ್ ಲ್ಡೊಳಕ್, ತಾಳ ಗೆಜ್ಜೆಗಳ ಗಲ್‌ಗಿಲ್ ನಾದದೊಡನೆ ಹಾಡಲು ಪ್ರಾರಂಭಿಸಿದರೆ ಕೇಳುವುದಕ್ಕೊಂದು ಆನಂದ. ಪದ್ಯಗದ್ಯ ಮಿಶ್ರ ಚಂಪು ಶೈಲಿಯಲ್ಲಿ ಹಾಡುವುದೆಂದರೆ ಅವನದೇ ಆದ ವರಸೆ. ಕಾವ್ಯಕಥೆ ಹಾಡುವಾಗ ಲಘುವಾದ ಹೆಜ್ಜೆಗತ್ತು, ಆಕರ್ಷಕ ಮಾತಿನ ಛಾಪು, ಸುಲಲಿತ ಕಥಾಧಾರೆ ಸುಬ್ಬಯ್ಯನ ವಿಶೇಷತೆ. ಎಪ್ಪತ್ತನಾಲ್ಕನೇ ವಯಸ್ಸಿನಲ್ಲಿ ಹಾಡುವಾಗಲೂ ಪ್ರಾಯದ ಉತ್ಸಾಹ, ಹುಮ್ಮಸ್ಸು. ಪ್ರಸ್ತುತ 'ಮಾಗಡಿ ಕೆಂಪೇಗೌಡನ ಕಥೆ' ಈ ಕಲಾವಿದನ ಕೊಡುಗೆ

ಚೌಡಿಕೆ ಸುಬ್ಬಯ್ಯ ಹಾಡಿರುವ ಗ್ರಾಮದೇವತೆ ಮಾರಮ್ಮನನ್ನು ಕುರಿತ ಗ್ರಂಥವನ್ನು ಈಗಾಗಲೇ ಕರ್ನಾಟಕದ ಜಾನಪದ ಪರಿಷತ್ತು ಪ್ರಕಟಿಸಿದೆ.

ಚೌಡಿಕೆ ಸುಬ್ಬಯ್ಯ ಕಂಠಸ್ಥಮಾಡಿಕೊಂಡಿರುವ ಕಾವ್ಯ ಕಥಾಭಂಡಾರ ದೊಡ್ಡದು. ಬಡತನವಿದ್ದರೂ ಹಾಡಿನ ಸಂಪತ್ತು ಮಿಗಿಲಾದುದು. ಜಗದಂಬೆ ಎಲ್ಲಮ್ಮ, ಚದುರಂಗ ಮಹಾರಾಜ, ಭುಜಂಗರಾಯ, ಕತ್ತಲರಾಯ, ಸುಲಪಲ್ಲರಾಯ, ಈರೋಬಮ್ಮ, ಬಂಜೆ ಹೊನ್ನಮ್ಮ, ಉತ್ತರದೇವಿ, ಅಜಮಿಳಮಾತಂಗಿ, ಸರ್ಜಪ್ಪನಾಯಕ ಮೊದಲಾದ ಕಾವ್ಯಕಥೆಗಳನ್ನು ಹಾಡಿ ಹೆಸರಾದ ಗ್ರಾಮಕೋಗಿಲೆ. ಈ ಕಲಾವಿದನ ಎಲ್ಲಾ ಹಾಡ್ಗತೆಗಳನ್ನು ಎಚ್.ಎಲ್. ನಾಗೇಗೌಡರು ಸಂಗ್ರಹಿಸಿದ್ದಾರೆ.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಚೌಡಿಕೆ ಸುಬ್ಬಯ್ಯನಿಗೆ ಪ್ರಶಸ್ತಿ ನೀಡಿ ಸನ್ಮಾನಿಸಿದೆ. ಕರ್ನಾಟಕ ಜಾನಪದ ಪರಿಷತ್ತು ಮತ್ತು ಇತರ ಸಂಘ ಸಂಸ್ಥೆಗಳೂ ಗುರುತಿಸಿ ಗೌರವಿಸಿವೆ.

## ೨. ಯಾಚೇನಹಳ್ಳಿ ನಿಂಗಮ್ಮ

ಜನಪದ ಸಂಗ್ರಾಹಕರಿಗೆ ಚಿರಪರಿಚಿತಳಾದ ಹವ್ಯಾಸಿ ಗಾಯಕಿ. ಕೂಲಿನಾಲಿ ಮಾಡುತ್ತಲೇ ಹಾಡುಗಾರಿಕೆಯಲ್ಲಿ ಮುಳುಗುವಾಕೆ. ಯಾರಾದರೂ ಒಮ್ಮೆ ಹಾಡಿದ್ದನ್ನು ಕೇಳಿದರೆ ತಟ್ಟನೆ ತನ್ನದಾಗಿಸಿಕೊಳ್ಳುವ ಗ್ರಹಣಶೀಲೆ. ಮೈಸೂರು ಜಿಲ್ಲೆ ತಿರುಮಕೂಡಲು ನರಸೀಪುರ ತಾಲ್ಲೂಕು ಯಾಚೇನಹಳ್ಳಿ ಕುರಿನಿಂಗಯ್ಯ ಮತ್ತು ನಿಂಗಮ್ಮ ದಂಪತಿಗಳ ಮಗಳು. ಹೆತ್ತ ತಾಯಿಯಿಂದ ಮೊದಲು ಹಾಡು ಕಲಿತದ್ದು. ಹುಟ್ಟೂರಿನಿಂದಲೇ ಹೆಸರುವಾಸಿ. ಇದೇ ಪ್ರದೇಶದ ಮೆಣಸಕ್ಯಾತನ ಹಳ್ಳಿಯ ಚಿಕ್ಕಮಾದಯ್ಯನ ಪತ್ನಿ. ಆದಿಕಾರ್ನಾಟಕ ಜನಾಂಗಕ್ಕೆ ಸೇರಿದವಳು.

ಮೈಸೂರು, ಬೆಂಗಳೂರು ಆಕಾಶವಾಣಿಯಲ್ಲಿ, ಸುತ್ತೂರು, ಆದಿಚುಂಚನಗಿರಿ,

ಕೈಲಾಸಾಶ್ರಮ, ಅರಮನೆ ಆವರಣದಲ್ಲಿ, ಆದಿವಾಸಿ ಕಲಾಮೇಳಗಳಲ್ಲಿ ಭಾಗವಹಿಸಿ, ಸುಶ್ರಾವ್ಯವಾಗಿ ಹಾಡಿ, ಜನರನ್ನು ಮೆಚ್ಚಿಸಿ ಹಲವು ಪ್ರಶಸ್ತಿಗಳನ್ನು ಪಡೆದ ಕಲಾವಿದೆ. ಪ್ರಸ್ತುತ ಲಿಂಗರಾಜಮ್ಮನ ಕಥೆಯನ್ನು ವೃತ್ತಿಗಾಯಕರಷ್ಟೇ ಚೆನ್ನಾಗಿ ಹಾಡಿದ್ದಾಳೆ.

ಯಾಚೇನಹಳ್ಳಿ ನಿಂಗಮ್ಮ ಚುಂಚನಗಿರಿ ಅಯ್ಯ, ಮಾದೇಶ್ವರ, ಪಟ್ಟಲದಮ್ಮ, ಎಳ್ಳೂರಮ್ಮ, ಹಿರಿಯಮ್ಮ, ವೆಂಕಟೇಶ್ವರ, ಮಲ್ಲೇಶ್ವರ, ನಂಜುಂಡೇಶ್ವರ, ಉತ್ತರದೇವಿ, ಬಳೆಗಾರ ಶೆಟ್ಟಿ, ಸಾರಂಗಧರ ಹಾಡುಗಳನ್ನು ಹಾಡಿದ್ದಾಳೆ. ಸೋಬಾನೆ ಪದ, ರಾಗಿಕಲ್ಲು ಪದಗಳ ಹಾಡುಗಾರಿಕೆಯಲ್ಲೂ ನಿಷ್ಣಾತೆ.

ಯಾಚೇನಹಳ್ಳಿ ನಿಂಗಮ್ಮನ ಜೊತೆಗಾರ್ತಿಯರು ಸಿದ್ಧಯ್ಯನ ಹೆಂಡತಿ ಮಾದಮ್ಮ ಮತ್ತು ನಿಂಗಯ್ಯನ ಹೆಂಡತಿ ಮಂಚಮ್ಮ. ಮೂವರೂ ಒಟ್ಟಿಗೆ ಹಾಡುವುದು ಪದ್ಧತಿ. ಮೂವರೂ ಆದಿಕರ್ನಾಟಕ ಜಾತಿಗೆ ಸೇರಿದವರು.

## ೩. ತಂಬೂರಿ ಮರಿಯಪ್ಪ

ಹಾಸನಜಿಲ್ಲೆ ಹೊಳೆನರಸೀಪುರದ ಆದಿದ್ರಾವಿಡ ಜನಾಂಗಕ್ಕೆ ಸೇರಿದ ಮರಿಯಪ್ಪ ಬಿನ್ ಸಿದ್ಧಯ್ಯ ಅತ್ಯುತ್ಕೃಷ್ಟ ವೃತ್ತಿಗಾಯಕ ಕಲಾವಿದ. ತಂಬೂರಿ ಸಂಪ್ರದಾಯಕ್ಕೆ ಸೇರಿದವನಾದುದರಿಂದ, ತಂಬೂರಿ ನುಡಿಸುವುದರಲ್ಲಿ ನಿಷ್ಣಾತನಾದುದರಿಂದ ತಂಬೂರಿ ಮರಿಯಪ್ಪನೆಂದೇ ಪ್ರಸಿದ್ಧಿ. ನಾಲ್ಕು ತಂತಿಯ ತಂಬೂರಿಯ ಮೇಲೆ ಮರಿಯಪ್ಪನ ಬೆರಳುಗಳು ಆಡಿದರೆ ದುಂಬಿಯ ಝೇಂಕಾರದ ಮೋಡಿ. ಕಡುಬಡವ. ಹಾದಿಬದಿಯ ಕಲ್ಲನ್ನೇ ತಲೆದಿಂಬಾಗಿ ಬಳಸಿ, ನಿಶ್ಚಿಂತೆಯಿಂದ ನಿದ್ದೆಮಾಡುವ ಸರಳಜೀವಿ. ಬಡತನವನ್ನು ಮರೆಯಿಸಿ ತನ್ಮಯಗೊಳಿಸುವ ಹಾಡುಗಾರಿಕೆ ಮರಿಯಪ್ಪನದು.

ಮರಿಯಪ್ಪ ದೀರ್ಘ ಕಾವ್ಯಗಳ ಕಣಜ. ಕೆಲವು ಲಘುಗೀತೆಗಳ ಗಾಯಕನೂ ಹೌದು. ಪ್ರಸ್ತುತ 'ಮಡಿಕೇರಿ ಲಿಂಗರಾಜ' ಕಾವ್ಯಕಥೆಯನ್ನು ಮರಿಯಪ್ಪ ಹಾಡಿದ್ದಾನೆ. ಇದನ್ನು ಹಾಡಿದಾಗ ಅರಕಲಗೂಡಿನ ಸಿದ್ದಯ್ಯ ಬಿನ್ ದಾಸಯ್ಯ, ಇಜಾಪುರ ಕಾಲೋನಿಯ ಜವರಯ್ಯ ಬಿನ್ ಪುಟ್ಟಯ್ಯ ಸಹಗಾಯಕರಾಗಿದ್ದರು. ಸಂಗ್ರಹ ೧೯೮೩.

ತಂಬೂರಿ ಮರಿಯಪ್ಪನು ತಿಮ್ಮಪ್ಪ ಸೋಲಿಗರ ಹೆಣ್ಣನ್ನು ಮದುವೆಯಾದದ್ದು, ನಂಜುಂಡ ದೇವೀರಿ, ಮಾಗಡಿ ಕೆಂಪೇಗೌಡ, ಗುರುಭಕ್ತರಾಯ, ಸೀತೆಯ ಸತ್ವಪರೀಕ್ಷೆ, ಸಾರಂಗಧರ, ಶೆಟಿಗಾರ ತಿಮ್ಮಪ್ಪ, ದೀರ್ಘ ಕಥಾನಕಗಳನ್ನೂ ಹೊಗಳುವ ಪದ, ನಕಲಿ ಪದಗಳನ್ನೂ ಹಾಡಿದ್ದಾನೆ.

ಎಚ್.ಎಲ್. ನಾಗೇಗೌಡರು ತಮ್ಮ ತಾಯಿ ತಂದೆಯರಾದ ಹೆರಗನಹಳ್ಳಿ ದೊಡ್ಡಮನೆ ಲಿಂಗೇಗೌಡ ಮತ್ತು ಮಾತೋಶ್ರೀ ಹುಚ್ಚಮ್ಮ ತಾಯಿಯವರ ನೆನಪಿನ 'ದೊಡ್ಡ ಮನೆ ಪ್ರಶಸ್ತಿ' ೧೯೯೯ರಲ್ಲಿ ತಂಬೂರಿ ಮರಿಯಪ್ಪನಿಗೆ ಲಭ್ಯವಾಗಿದೆ. ಯಾವುದೇ ಜಾನಪದ ಪ್ರಶಸ್ತಿಗೆ ಯೋಗ್ಯನಾದ ಗಾಯಕ ತಂಬೂರಿ ಮರಿಯಪ್ಪ.

## ೪. ತಿಮ್ಮಮ್ಮ

ಹಾಸನಜಿಲ್ಲೆ ಬೇಲೂರು ತಾಲ್ಲೂಕು ಹಳೇಬೀಡು ಹೋಬಳಿ ಸಿದ್ಧಾಪುರದ ತಿಮ್ಮಮ್ಮ ಕೋಂ ಪುಟ್ಟಯ್ಯ ಹರಿಜನ (ಬಲಗೈ) ಪಂಗಡಕ್ಕೆ ಸೇರಿದ ಹವ್ಯಾಸಿ ಗಾಯಕಿ. ತನ್ನ ಅರವತ್ತನೇ ವಯಸ್ಸಿನಲ್ಲಿ, ೧೩-೨-೧೯೮೬ರಲ್ಲಿ ಈಕೆ 'ಲಕ್ಕಣ್ಣ ಈರಣ್ಣ' ಕಥನ ಕಾವ್ಯವನ್ನು ಹಾಡಿದಳು. ಹಾಡುವ ಸಂದರ್ಭದಲ್ಲಿ ಮಂಗಮ್ಮ ಕೋಂ ರಾಮಯ್ಯ, ಮುದ್ದಮ್ಮ ಕೋಂ ವೀರಯ್ಯ, ಜವರಮ್ಮ ಕೋಂ ಮರಿಸಿದ್ಧಯ್ಯ ಸಹ ಗಾಯಕಿಯರಾಗಿದ್ದರು. ಧ್ವನಿ ಮುದ್ರಣ ಸಹಾಯ ಶ್ರೀ ವ.ನಂ. ಶಿವರಾಮು.

ತಿಮ್ಮಮ್ಮ ಕೆಲವು ದೀರ್ಘ ಕಾವ್ಯಗಳನ್ನು ಕಲಿತುಕೊಂಡಿದ್ದಾಳೆ ಉದಾಹರಣೆಗೆ ಮದಗದ ಹೊನ್ನಮ್ಮ ಅಥವಾ ಬಿಸ್ಟಮ್ಮ, ಕಾಳಿಂಗರಾಯ.

## ೫. ಚೌಡಿಕೆ ಎಲ್ಲಯ್ಯ

ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕು ಚಿಕ್ಕ ತುರುವೇಕೆರೆಯ ಚೌಡಿಕೆ ಎಲ್ಲಯ್ಯ ಚೌಡಿಕೆ ಸಂಪ್ರದಾಯದ ವೃತ್ತಿಗಾಯಕ. ಈ ಕಲಾವಿದನಿಗೆ ಅರವತ್ತು ವಯಸ್ಸಾಗಿದ್ದಾಗ, ೧೨-೦೬-೧೯೬೭ರಲ್ಲಿ ಡಾ|| ಜೀ. ಶಂ. ಪರಮಶಿವಯ್ಯನವರೊಡನೆ ಎಚ್.ಎಲ್. ನಾಗೇಗೌಡರು 'ಸರ್ಜಪ್ಪ ನಾಯಕ' ಕಥನ ಕಾವ್ಯವನ್ನು ಧ್ವನಿ ಮುದ್ರಿಸಿಕೊಂಡರು. ಆಗ ಅರಳಗುಪ್ಪೆಯ ಚೌಡಿಕೆ ಎಲ್ಲಪ್ಪ ಸಹಗಾಯಕನಾಗಿದ್ದನು. ಇಬ್ಬರೂ ಹರಿಜನರು.

ಚೌಡಿಕೆ ಎಲ್ಲಯ್ಯ ೧೯೮೧ರಲ್ಲಿ ಚುಂಚಿನಗಿರಿಯಲ್ಲಿ ನಡೆದ ವಿಶೇಷ ಜನಪದೋತ್ಸವದಲ್ಲಿ ಭಾಗವಹಿಸಿದ್ದನು. ಚೌಡಿಕೆ ಎಲ್ಲಯ್ಯ ಮನೆದೇವತೆ ಎಲ್ಲಮ್ಮ, ಪರಶುರಾಮ, ಬಿದಿರಮ್ಮನನ್ನು ಕುರಿತು ಹಾಡಿದ್ದಾನೆ. ಭಜನೆ ಪದಗಳ ಹಾಡುಗಾರಿಕೆಯೂ ಉಂಟು.

## ೬. ಮಹದೇವಮ್ಮ

ಮೈಸೂರು ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕು ಹೊರೆಯಾಲ ಗ್ರಾಮದ ಹರಿಜನ ಜಾತಿಯ ಮಹದೇವಮ್ಮ ಹವ್ಯಾಸಿ ಗಾಯಕಿ. ಈಕೆಯಿಂದ ೧೮-೦೫-೧೯೮೩ರಂದು 'ಬಸವರಾಯ' ಕಥನ ಕಾವ್ಯವನ್ನು ಧ್ವನಿಮುದ್ರಣ ಮಾಡಲಾಯಿತು. ಆಗ ಈಕೆಗೆ ಮೂವತ್ತು ವರ್ಷ ವಯಸ್ಸು. ಬೆಳ್ಳಮ್ಮ ಮತ್ತು ಬಸಮ್ಮ ಎನ್ನುವವರು ಸಹಗಾಯಕರಾಗಿದ್ದರು.

ಮಹದೇವಮ್ಮ ತವರಿನ ಮೇಲೆ, ತಮ್ಮಯ್ಯನ ಮೇಲೆ, ದೇವಮ್ಮನ ಮೇಲೆ ಗೀತೆಗಳನ್ನು ಹಾಡಿದ್ದಾಳೆ.

## ೭. ಬಸವಯ್ಯ ಸ್ವಾಮಿ ಮಠಪತಿ

ಇಂಡಿ ತಾಲ್ಲೂಕು ಸಾಲೋಟಗಿಯವರು. ಕಲ್ಲಿ ತುರಾ ಸಾಂಪ್ರದಾಯಿಕ ಗಾಯಕರಲ್ಲಿ ದೊಡ್ಡ ಹೆಸರು. ಹಲವು ತಲೆಮಾರುಗಳ ಗಾಯನ ಮನೆತನಕ್ಕೆ ಸೇರಿದವರು. ಲಿಂಗಾಯಿತರು. ಶ್ರೀ ಶಿವಪ್ಪ ಸೈದಪ್ಪ ಕಂಬಾರ ಮತ್ತು ಮೇಳದವರೊಡಗೂಡಿ (ರೇವಣಸಿದ್ಧ ಸೈದಪ್ಪ ಕಂಬಾರ, ಶಿವಪ್ಪ ನಿಂಗಪ್ಪ ಖೈರಾಟ) ಶಿಶುನಾಳರ ಪದ, ಗೀಗೀಪದ, ಬಿತ್ತುವ ನೇಮ ಪದ, ಸ್ತುತಿ ಗೀತೆಗಳನ್ನು ನಕಲಿ ಪದಗಳನ್ನು ಹಾಡಿದ್ದಾರೆ.

ಶ್ರೀ ಯಳಸಂಗಿ ಕಲ್ಲಣ್ಣನವರ ನೆರವಿನೊಂದಿಗೆ ೦೨-೧೧-೧೯೮೦ರಲ್ಲಿ ಬೆಂಗಳೂರಿನಲ್ಲಿ ಬಸವಯ್ಯಸ್ವಾಮಿ ಮಠಪತಿಯವರಿಂದ 'ಹರಳಯ್ಯ' ಕಥನ ಕಾವ್ಯವನ್ನು ಧ್ವನಿ ಮುದ್ರಿಸಿಕೊಳ್ಳಲಾಯಿತು. ಅನೇಕ ಕಲಾಮೇಳಗಳಲ್ಲಿ ಭಾಗವಹಿಸಿರುವ ಇವರು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪುರಸ್ಕೃತರೂ ಹೌದು. ಕರ್ನಾಟಕ ಜಾನಪದ ಪರಿಷತ್ತಿನ ಕಲಾಮೇಳಗಳಲ್ಲೂ ಇವರು ಭಾಗಬವಹಿಸಿದ್ದಾರೆ.

೩

ಮೌಖಿಕ ಪರಂಪರೆಯಲ್ಲಿ ತಲೆತಲಾಂತರದಿಂದ ಉಳಿದು ಬಂದಿದ್ದ ಕಾವ್ಯಕಥೆಗಳನ್ನು ಗುರು ಮುಖೇನವಾಗಿಯೋ ಕೇಳಿಕೆಯ ಗ್ರಹಿಕೆಯಿಂದಲೋ ಕಂಠಸ್ಥಮಾಡಿಕೊಂಡು, ತಮ್ಮ ಪ್ರತಿಭೆಯನ್ನು ಧಾರೆಯೆರೆದು, ನಮ್ಮ ಜನಪದ ವೃತ್ತಿಗಾಯಕರು ಹಾಗೂ ಹವ್ಯಾಸಿ ಗಾಯಕರು ಈ ಕಥೆಗಳನ್ನು ಹಾಡಿದ್ದಾರೆ. ಇವರ ಕೊಡುಗೆ ಸದಾ ಸ್ಮರಿಸಿಕೊಳ್ಳುವಂಥದ್ದು. ಗಾಯಕರ ಗಾಯನದಿಂದಾಗಿ ಈ ಹಾಡುಗಳು ಸಂಗ್ರಹವಾಗಲು, ಗ್ರಂಥ ರೂಪದಲ್ಲಿ ಪ್ರಕಟವಾಗಲು ಸಾಧ್ಯವಾಗಿದೆ. ಈ ಸ್ತ್ರೀ ಪುರುಷ ಗಾಯಕರಿಗೆ ಸಾರಸ್ವತ ಲೋಕ ಋಣಿಯಾಗಿದೆ.

ನಾಡೋಜ ಎಚ್.ಎಲ್. ನಾಗೇಗೌಡರು ೧೯೮೦ರ ದಶಕದಲ್ಲಿ, ಧ್ವನಿಮುದ್ರಣದಿಂದ, ಪುಸ್ತುತ ಗ್ರಂಥದ ಕಥನ ಕಾವ್ಯಗಳನ್ನು ಸಂಗ್ರಹಿಸಿದರು. ಕರ್ನಾಟಕ ಜಾನಪದ ಪರಿಷತ್ತಿನ ಸಿಬ್ಬಂದಿಯವರು ಸಂಗ್ರಹಕಾರ್ಯಕ್ಕೆ ನೆರವಾದರು. ಬಹಳ ವರ್ಷಗಳಾದ ಮೇಲೆ ಲಿಪ್ಯಂತರ ಕೆಲಸ ನಡೆದಿದೆ. ಈ ಗ್ರಂಥದ ಕಾವ್ಯಗಳನ್ನು ಡಾ|| ಎಸ್.ಪಿ. ಪದ್ಮಪ್ರಸಾದ್ ಮತ್ತು ಶ್ರೀಮತಿ ಸರ್ವಮಂಗಳ ಅವರು ಧ್ವನಿ ಮುದ್ರಣಗಳಿಂದ ಬರೆದುಕೊಟ್ಟಿದ್ದಾರೆ. ಶ್ರೀಮತಿ ಯಶೋದ ಅವರು ಬೆರಳಚ್ಚುಮಾಡಿದ್ದಾರೆ. ಪರಿಷತ್ತಿನ ಅಧ್ಯಕ್ಷರಾದ ಶ್ರೀ ಜಿ. ನಾರಾಯಣ, ಕಾರ್ಯಾಧ್ಯಕ್ಷರಾದ ಶ್ರೀ ಟಿ. ತಿಮ್ಮೇಗೌಡ, ಮೇನೇಜಿಂಗ್ ಟ್ರಸ್ಟಿ ಶ್ರೀಮತಿ ಇಂದಿರಾ ಬಾಲಕೃಷ್ಣ, ಕಾರ್ಯದರ್ಶಿ ಡಾ|| ಚಕ್ಕರೆ ಶಿವಶಂಕರ್ ಮತ್ತು ಇತರ ಪದಾಧಿಕಾರಿಗಳು ನನಗೆ ಗ್ರಂಥ ಸಂಪಾದನಾ ಜವಾಬ್ದಾರಿಯನ್ನು ವಹಿಸಿ, ಸಹಕರಿಸಿದ್ದಾರೆ. ಇವರಿಗೆಲ್ಲ ನಾನು ಆಭಾರಿಯಾಗಿದ್ದೇನೆ.

ಚಾರಿತ್ರಿಕ ಜನಪದ ಕಥಾಭ್ಯಾಸಿಗಳಿಗೆ ಈ ಗ್ರಂಥ ಉಪಯುಕ್ತವಾಗಲಿ ಎಂದು ಆಶಿಸುತ್ತೇನೆ.

ಬೆಂಗಳೂರು
೧-೮-೨೦೦೭

**ಪ್ರೊ|| ಡಿ. ಲಿಂಗಯ್ಯ**
ಸಂಪಾದಕ

# ೧. ಮಾಗಡಿ ಕೆಂಪೇಗೌಡನ ಕಥೆ

**ತಂದನ್ನ ತಾನ** **॥ ಪಲ್ಲವಿ ॥**

ಚಿಕ್ಕತಿಟ್ಟಿನ ಪಾಳೆಗಾರ್‍ರು ಹೆಚ್ಚುನ ಮೊನುಗಾರುರಂತೆ । ತಂದನ್ನ ತಾನ*
ಸ್ವಾಮಿ ಹೆಚ್ಚುನ ಮೊನುಗಾರುರಂತೆ ಮಾಗುಡಿ ಕಂಪೇಗೌಡ । ತಂದನ್ನ ತಾನ
ಸ್ವಾಮಿ ತಂದೆನೆ ಬೈರಯ್ಯಗೌಡ ತಾಯಿನೆ ಕೆಂಪೋಜವ್ವ । ತಂದನ್ನ ತಾನ
ಅವ್ರ ತಳವು ನೋಡಿ ಉತ್ತುತ್ತಿ ನಾರಸಂದ್ರವಂತೆ । ತಂದನ್ನ ತಾನ
ಅವರು ಉತ್ತುತ್ತಿ ನಾರಸಂದ್ರ ಬುಟ್ಟು ಯಾಲಂಕಕೆ ಬಂದುರಂತೆ । ತಂದನ್ನ ತಾನ
ಸ್ವಾಮಿ ಯಾಲಂಕ ಬುಟುಬುಟ್ಟು ಬೆಂಗಳೂರಿಗೆ ಬಂದರಂತೆ । ತಂದನ್ನ ತಾನ
ಅವ್ರು ಬೆಂಗಳೂರಿಗೆ ಬಂದಿನ್ನ ಕ್ವಾಟೇಯ ಕಟುಸವ್ರೆ । ತಂದನ್ನ ತಾನ

ಅವ್ರ ಸ್ಥಳ ಉತ್ತುತ್ತಿ ನಾರಸಂದ್ರ. ಉತ್ತುತ್ತಿ ನಾರಸಂದ್ರ ಬುಟುಬುಟ್ಟು ಯಲಂಕಕ್ಕೆ ಬಂದರಂತೆ. ಅಲ್ಲಿಂದ ಬೆಂಗಳೂರಿಗೆ ಬಂದರಂತೆ. ಬೆಂಗಳೂರಿಗೆ ಬಂದು ಕ್ವಾಟೆ ಕಟ್ಟುದರಂತೆ. ಕ್ವಾಟೆ ನಿಲ್ಲದಿದ್ದಕ್ಕೆ ತನ್ನ ತಂಗಿಯಾದವಳನ್ನು ಕಡಿದು ಆವತಿಯನ್ನ ಕೊಟ್ರಂತೆ. ಇಲ್ಲಿ ಕ್ವಾಟೆ ಕಟ್ಟಿಸಿ ಮಾಗಡಿಗೆ ಹೋಗಿ ಅಲ್ಲಿ ಒಂದ್ಹಾಳು ಚಾವಡಿ ಸೇರಿಕೊಂಡರಂತೆ -

ಅವ್ರು ಹಾಳುಚಾವಡಿ ಸೇರುಕೊಂಡು ಕಾಲುಚಾಪ ಮಾಡುತಾರೆ । ತಂದನ್ನ ತಾನ
ಮಾಗುಡಿನ ಸೇರುಕೊಂಡು ಹಾಳುಚಾವಡಿ ಸೇರುಕೊಂಡು । ತಂದನ್ನ ತಾನ
ಸ್ವಾಮಿ ಏನೇನು ಬಡುಸ್ತಾನ ತಂದೊ ಮಾಗುಡಿ ರಂಗುಸ್ವಾಮಿ । ತಂದನ್ನ ತಾನ

ಮಾಗಡಿ ರಂಗಸ್ವಾಮಿ ಸ್ತೋತ್ರವನ್ನ ಮಾಡುದರೆ ಪರಮಾತ್ಮನಾಗಿರತಕ್ಕಂಥವನು ಭಾಗ್ಯವನ್ನ ಕೊಡಬೋದು ಎಂದು ಬೆಳಿಗ್ಗೆ ಸಾಯಂಕಾಲ ರಂಗಸ್ವಾಮಿ ಸ್ತೋತ್ರ ಮಾಡುವುದಕ್ಕೆ ನಿಂತುಕೊಂಡ ಬೈರೇಗೌಡ. ರಂಗಸ್ವಾಮಿ ಈ ಮಾಗುಡಿ ಬೈರೇಗೌಡುರಿಗೆ ಐಸ್ವರ್ಯವನ್ನು ಕೊಟ್ರು.

ಅವ್ನ ಚಿನ್ನುದ ಪಾಪಾಸು ಎಲ್ಲ ರನ್ನುದಗೊಂಡೇದು ಮೊಗ್ಗು । ತಂದನ್ನತಾನ
ಅವ್ನು ಮೇಲು ಚಾವಡಿ ಕಟ್ಟುತಾನೆ ಸಾಲು ಅರುವಂಟಕಿಕ್ಕುತಾನೆ । ತಂದನ್ನತಾನ
ಅವ್ರು ಆರು ಕಂಡುಗದೆಣ್ಣೆ ಒಳುಗೆ ಲಾಲುಬತ್ತಿ ಎತ್ತುತಾರೆ । ತಂದನ್ನತಾನ
ಅವ್ರು ಮೂರು ಕಂಡುಗದೆಣ್ಣೆ ಒಳುಗೆ ಜಗಂಜೋತಿ ನಿಲ್ಲುಸ್ತಾರೆ । ತಂದನ್ನತಾನ

---

*ಪದ್ಯದ ಪ್ರತಿ ಸಾಲಿನ ಕೊನೆಯಲ್ಲಿ ಪಲ್ಲವಿಯನ್ನು ಹಾಡುವರು.

ಸ್ವಾಮಿ ಹೆಚುನ ಮಾಗುಡಂತೆ ಕಲಿರಂಬೊ ಮಾಗುಡಂತೆ । ತಂದನ್ನತಾನ
ಅವ್ನು ಕಲಿರಂಬೊ ಮಾಗುಡೀಗೆ ಗಜಮುತ್ತಿನರುಮಾನೆ ।ತಂದನ್ನತಾನ
ಅವ್ನು ಪಟಮುತ್ತಿನರುಮನೆಗೆ ನಿಲುನೆ ಗಾಜಿನುಕಂಬ । ತಂದನ್ನತಾನ
ನಿಲುನೆ ಗಾಜನುಕಂಬುದು ಮ್ಯಾಲೆ ಸರಿ ಬೋಜುಗಲ್ಲು । ತಂದನ್ನತಾನ
ಸ್ವಾಮಿ ಕೆಂಪೇಗೌಡ ಹುಟ್ಟುಲಾಗಿ ಬೈರೇಗೌಡ ಕಾಲುವಾದ । ತಂದನ್ನತಾನ
ಅಲ್ಲಿಗೆ ಮೂರು ತಿಂಗಳು ಮಗುವಂತೆ ಮಾಗುಡಿ ಕೆಂಪಯ್ಯಗೌಡ । ತಂದನ್ನತಾನ
ಅವ್ರ ಸೇತುನಾದ್ರು ಸೇತುನೆಲ್ಲ ಬ್ರಾಮ್ಮಣಯ್ಯ ಅಪರ್ಸಿಕೊಂಡ । ತಂದನ್ನತಾನ

ಮಾಗುಡಿ ಕೆಂಪೇಗೌಡ ಹುಟ್ಟಿದ ಮೂರು ತಿಂಗಳುಗೆ ತಂದೆಯಾದ ಬೈರೇಗೌಡ್ರು ಕಾಲವಾಗಿ ಹೋದ್ರು. ತಾಯಿ ಕೆಂಪೋಜಮ್ಮುನ್ನ ಆ ಊರಲ್ಲಿರುವಂತ ಶಾನುಭೋಗ ಕರಸಿ ಅಮ್ಮಾ ನೀನಿರುವಂತ ಅರಮನೆ ನನ್ನದು. ಈ ಸಂಪತ್ತು ನನ್ನದು. ನಿನ್ನ ಗಂಡ ಯಾವ ಥರವಾಗಿಯೂ ಸಂಪಾದ್ನೆ ಮಾಡಲಿಲ್ಲ. ಈ ಗ್ರಾಮದಲ್ಲಿ ನೀನಿರಬಾರದು. ಎಲ್ಲಾದ್ರು ಹೋಗಿ ಹಾಳುಚಾವಡಿ ಸೇರಕೊಮ್ಮ ಅಂತೇಳಬುಟ್ಟು ಕೆಂಪೋಜಮ್ಮುನ್ನ ಆಚುಗೆ ಕಳಸಬುಟ್ಟ ಶಾನುಭೋಗಯ್ಯ. ಅಲ್ಲಿಗೆ ಕೆಂಪೇಗೌಡ ಮೂರ ತಿಂಗಳು ಮಗು.

ಅವ್ನು ಕುಟ್ಟುಕೂಲಿ ಮಾಡುತಾಳೆ ಕಟ್ಟುಚಾಕರಿ ಮಾಡುತಾಳೆ । ತಂದನ್ನತಾನ
ಸ್ವಾಮಿ ಬಾಳಿ ಬದುಕಿದ ಮನುಸ್ತಾನಕೆ ಏನು ಬಡುಸ್ತಾನ ಬಂತೊ। ತಂದನ್ನತಾನ
ಹಳೆರಾಗಿ ಹುಳಿಮಜ್ಜಿಗೆ ಮಾಯವಾಗಿ ಹೋದುವಲ್ಲೊ । ತಂದನ್ನತಾನ
ಅವಳು ಕೆಂಪೇಗೌಡ್ನ ಎತ್ತುಕೊಂಡು ಮಲುಸೀಮಿಗೋಗುತಾಳೆ । ತಂದನ್ನತಾನ
ಮಲುಸೀಮಿಗೋಗಿನ್ನ ಹುಲುಸವುದೆ ಮಾರುತಾಳೆ । ತಂದನ್ನತಾನ
ಸ್ವಾಮಿ ಕುಟ್ಟುಕೂಲಿ ಮಾಡುತಾಳೆ ಕಟ್ಟುಚಾಕರಿ ಮಾಡುತ್ತಾಳೆ । ತಂದನ್ನತಾನ
ಅವಳು ಹಡದೀಯ ಸೊಪ್ಪುನೆಲ್ಲ ಮಡುಲಲ್ಲಿ ಕಟ್ಟುತಾಳೆ । ತಂದನ್ನತಾನ
ಅವಳು ಕಾರೆಕಾಯ ತಿನ್ನುತಾಳೆ ಕಾಲುಚಾಪ ಮಾಡುತ್ತಾಳೆ । ತಂದನ್ನತಾನ
ಸ್ವಾಮಿ ಏನೂವ ಮಾಡುದರೀನ ಹೊಟ್ಟೆಯು ತುಂಬುದಲ್ಲ । ತಂದನ್ನತಾನ
ಅವಳು ಮಲುಸೀಮೆ ಬುಟುಬುಟ್ಟು ಹುಲುಕಲ್ಲಿಗೋಗುತಾಳೆ । ತಂದನ್ನತಾನ
ಹುಲುಕಲ್ಲಿಗೋಗಿನ್ನ ಹುಲುಸವುದೆ ಮಾರುತಾಳೆ । ತಂದನ್ನತಾನ
ಅವಳು ಕುಟ್ಟುಕೂಲಿ ಮಾಡುತಾಳೆ ಕಟ್ಟುಚಾಕರಿ ಮಾಡುತಾಳೆ । ತಂದನ್ನತಾನ
ಅಲ್ಲಿಗಾರು ವರುಸದ ಮಗುವಾದ ಮಾಗುಡಿ ಕೆಂಪೇಗೌಡ. । ತಂದನ್ನತಾನ

ಮನೆಮನೆಗೋಗಿ ಕೂಲಿ ಮಾಡಿಕೊಂಡು, ರಾಗಿ ಬೀಸಕೊಂಡು, ಮೂರು ತಿಂಗಳ ಮಗನ ಎತ್ಕೊಂಡು ಊರೂರ ಅಲದು, ಊರೂರ ಭಿಕ್ಷೆಮಾಡಿ ತಿರಿದು, ಪುಣ್ಯಾತ್ಮರು ಕೊಟ್ಟಂಥ ಹರಕುಸೀರೆ ಬಟ್ಟೆತ್ಯಾಪೆ ಹಾಕೊಂಡು, ಹೆತ್ತ ಕಂದನನ್ನು ಆರು ವರ್ಸ್ದ ಮಗುನ ಮಾಡುದ್ಲು. ಇಲ್ಲೆಲ್ಲ ನನಗೆ ಜೀವ್ನ ಜರಗೋದಿಲ್ಲ. ನಾನು ನನ್ನ ಗ್ರಾಮುಕ ಹೋದ್ರೆ, ನಾನು ಬದುಕಿರುವಂಥದ್ದು ಎಲ್ರುಗು ಗೊತ್ತು. ಯಾರಾರು ಕಂಡ್ರೆ ಬದುಕಿದ ಮನುಸ್ತಾನ, ಸಾಲು ಅರವಂಟುಗೆ, ಮೋಲು ದೀವಟುಗೆ, ಇವ್ರು ಮಾಡಿರುವಂಥ ಅನ್ನದಾನ, ಹೊನ್ನುದಾನ, ಬೇಕಾದಷ್ಟು. ಈಗ ಕಾಲಸ್ಥಿತೀಲಿ ಬಡತನ ಬಂದದೆ ಎಂಬುದಾಗಿ ಯಾರಾದ್ರು

ಆದರಸತಾರೆ ಅಂತೇಳಿ ಅವಳು -

ಹುಲುಕಲ್ಲು ಬುಟಬುಟ್ಟು ಮಾಗುಡೀಗೆ ಬರುತಾಳೆ*
ಸ್ವಾಮಿ ಹಾಳುಚಾವಡಿ ಸೇರುಕೊಂಡು ಕಾಲುಚಾಪ ಮಾಡುತಾಳೆ
ಅವಳು ಅಡವೀಯ ಸೊಪುನೆಲ್ಲ ಮಡುಗಟ್ಟಿ ಕುಯ್ಯುತಾಳೆ
ಅವಳು ಕುಟ್ಟುಕೂಲಿ ಮಾಡುತಾಳೆ ಕಟ್ಟುಚಾಕರಿ ಮಾಡುತಾಳೆ

ಈ ಪ್ರಕಾರವಾಗಿ ಮಾಗಡಿ ಪ್ಯಾಟೆಗೆ ಬಂದು ಕೂಲಿನಾಲಿ ಮಾಡಿಕೊಂಡು, ಹಾಳುಚಾವಡಿ ಸೇರಿಕೊಂಡು ಕಾಲಹಾಕತಾವಳೆ. ಒಂದ್ಸಲ ಒಂದಿವಸ ಮುಂದಗಡೆ ಮಗುನ ಬುಟ್ಟುಕೊಂಡು ಹಿಂದಗಡೆ ಕೆಂಪೋಜಮ್ಮ ಹೋಗುವಂಥ ಪ್ಯಾಟೆ ಬೀದಿ ವಳಗೆ ಮಗ ಹಿಂದಿರಗಿ ತಾಯಿ ಕಡೆ ನೋಡಿದ-

ಯಮ್ಮ ಯಾಕ ನಾನು ಹುಟ್ಟಿದನ್ಹೇಳೆ ಪಾಪಿ ನಿನ್ನ ಗರುಬದಲ್ಲಿ
ನಾನು ಸಂಬಳ ಮಾಡುತೀನಿ ಕೂಲಿಯ ಮಾಡುತೀನಿ.
ಯಪ್ಪ ನಾನು ನಿನ್ನ ಮಾನುಭಂಗ ನೋಡುಲಾರೆ
ಯಪ್ಪ ಬ್ಯಾಸೀಗಿ ಬಿಸುಲಲ್ಲೊ ಬೆಂದೋದಿ ನನು ಕಂದ
ಅಯ್ಯೊ ವಯಸೋಗುದು ಕಾಲುವಲ್ಲೊ ಸುಳುಸುಟ್ಟಿ ಹೋಗುತೀಯ
ನನುಗೆ ಬಂದ ಕಷ್ಟ ಬರುಲವ್ವ ನಿನ್ನು ಮಾನ ಮುಚುಲವ್ವ.

ಅವ್ವ ನನಗೆ ಬಂದ ಕಷ್ಟ ಬರಲಿ. ನಿನ್ನ ರೂಪ ಸ್ವರೂಪ ನೋಡಿದ್ರೆ ನಾನು ತಡೀಲಾರೆ. ನಿನ್ನ ಪಾಪಿ ಗರಬದಲ್ಲಿ ನಾನ್ಯಾಕಾದರು ಜನಿಸಿದೆ ? ಈ ಕಣ್ಣಿಂದ ನಿನ್ನ ಮಾನಭಂಗವನ್ನು ನೋಡಲಾರೆ. ನನಗೆ ಯಾವ ಕಷ್ಟ ಬಂದರು ಬರಲಿ. ನಾನು ಬ್ರಾಮಣಯ್ನ ಮನೆಯಲ್ಲಿ ಸಂಬಳ ತರುವದು ನಿಶ್ಚಯವೇ ಸರಿ ಎಂಬುದಾಗಿ ಯೋಚನೆಮಾಡಿಕೊಂಡು ಇವ್ರ ಸ್ವತ್ತನ್ನೆಲ್ಲ ಅಪಹರಿಸಿಕೊಂಡಿರುವಂಥ ಬ್ರಾಹ್ಮಣಯ್ಯನ ಮನೆಗೋಗಿ -

ಸ್ವಾಮಿ ಸಂಬುಳಾವ ಮಾಡುತೀನಿ ಜೀತಾವ ಮಾಡುತೀನಿ.
ನನ್ನ ಆರುಗೂಡಿನ ದನುವಾರ ಕಾಯತಿ ಕೆಂಪ ನೀನು ?
ನನ್ನ ಏಳುದೊಡ್ಡಿ ಎಮ್ಮೆಗಾಳ ಕಾಯತಿ ಕೆಂಪ ನೀನು ?
ನನ್ನ ಎಂಟು ದೊಡ್ಡಿ ಆಡುಗಾಳ ಕಾಯತಿ ಕೆಂಪ ನೀನು
ನನ್ನ ಎಂಟು ದೊಡ್ಡಿ ಕುರಿ ಆಡುಗಾಳ ಕಾಯತಿ ಕೆಂಪ ನೀನು ?
ನನುಗೆ ಬಂದು ಕಷ್ಟ ಬರುಲೇಳಿ ತಾಯಿ ಮಾನ ಮುಚುಲಪ್ಪ
ನನ್ನ ತಾಯಿ ಕೆಂಪೋಜವ್ವಗೆ ಆರು ಗಜ ಬಟ್ಟೆ ಕೊಡುಸಿ

ಸ್ವಾಮಿ, ನೀವು ಏನು ಕಷ್ಟ ಹೇಳಿದ್ರು ನಾನು ಮಾಡುವದುಕೆ ಸಿದ್ಧ. ಆದ್ರೆ ನಂತಾಯಿ ಮಾನಭಂಗ ನೋಡಲಾರೆ. ನಿಂ ಮನೆ ವಳಗೆ ಜೀತಕ್ಕೆ ಬಂದಿದೀನಿ. ನನ್ನ ತಾಯಿಗೆ ಬಟ್ಟೆ ಕೊಡುಸಬುಟ್ರೆ ನೀವೇನೇಳಿದರೂ ನಾನು ಮಾಡೂದಕೆ ಸಿದ್ಧನಾಗಿದೀನಿ ಅಂತ

*ಪದ್ಯದ ಪ್ರತಿ ಸಾಲಿನ ಕೊನೆಯಲ್ಲಿ 'ತಂದನ್ನ ತಾನ' ಎಂದು ಸೊಲ್ಲು ಹೇಳುವರು

ಕೆಂಪೇಗೌಡ್ರು ಹೇಳಿಕೊಂಡ್ರು. ಅವ್ನು ಮಾಗುಡಿ ಪ್ಯಾಟೆಗೋಗಿ-

ನಮ್ಮ ಹಿಂದುನು ಕಾಲದು ರಂಗನಾಥ ಮುಂದನು ಕಾಲುದು ರಂಗನಾಥ
ನಮ್ಮ ತಂದೆ ಕಾಲದು ರಂಗನಾಥ ಕೈಬಿಟ್ಟು ಹೋದನಲ್ಲೊ

ನಮ್ಮ ತಂದೆ ಕಾಲದ ರಂಗನಾಥ ಕೈಬಿಟ್ಟು ಹೋದಂದಿನಿಂದ ನಂ ತಾಯಿಗೆ ಈ ಸ್ಥಿತಿ ಉಂಟಾಯ್ತು. ನೀವು ಆರಗಜ ಬಟ್ಟೆ ಕೊಡಸೂದಾದ್ರೆ ನೀವೇಳುದ ಕೆಲ್ಸ ಮಾಡತೀನಿ ಅಂದ. ಅವ್ನು ಮೂರು ಮೂರು ದುಡ್ಡ ಮೂರುಗಜ ಬಟ್ಟೆ ಕೊಡುಸಿದ. ಕೊಡಸಿದಂಥ ಬಟ್ಟೆ ಎತ್ಕೊಂಡು ತಾಯಿತಾಕೆ ಹೋಗತಿದಾನೆ. ತಾಯಿ ಬಟ್ಟೆ ನೋಡುದ್ಲು -

ಯಪ್ಪ ಎಲು ತಂದೊ ನನು ಕಂದ ಮಾಗುಡಿ ರಂಗಸ್ವಾಮಿ । ತಂದನ್ನ ತಾನ
ಯಪ್ಪ ಎಲು ತಂದೊ ನನು ಕಂದ ಮಾಗುಡಿ ಚಿನುಮಯ ರೂಪ । ತಂದನ್ನ ತಾನ
ನಾನು ಅಣ್ಣುಹೋಗಿ ಬ್ರಾಮಣಯ್ಯನ ಮನೆ ಜೀತುಕ ಹೋಗುತೀನಿ । ತಂದನ್ನ ತಾನ
ಯಪ್ಪ ಬ್ಯಾಸೀಗೆ ಬಿಸುಲಲ್ಲೆ ಬೆಂದೋದಿ ನನು ಕಂದ । ತಂದನ್ನ ತಾನ
ಅಯ್ಯ ವಯ್ಯೋಗದ ಕಾಲುವಲ್ಲೊ ಸುಟುಸುಡನೆ ಹೋಗುತೀಯೆ । ತಂದನ್ನ ತಾನ
ನನುಗೆ ಬಂದು ಕಷ್ಟ ಬರುಲವ್ವ ನಿನು ಮಾನ ಮುಚುಲವ್ವ । ತಂದನ್ನ ತಾನ.

ಅಮ್ಮ ಮಾಗಡಿ ರಂಗನಾಥ ನನಗೆ ಏನೆ ಕಷ್ಟ ಕೊಟ್ರೂ ಕೊಡಲಿ. ನಿನ್ನ ಮಾನ ಮುಚ್ಚುದರೆ ನನಗೆ ಬಹಳಷ್ಟು ಸುಕವಾಯ್ತು ಎಂಬುದಾಗಿ ತಾಯಿಗೆ ಬುದ್ಧಿಯನ್ನು ಹೇಳಿ, ಆತನ ರುಣ ತೀರುತನಕ ನಿನ್ನ ಮೊಕ ನೋಡೊದಿಲ್ಲ. ನನ್ನನ್ನು ನೀನು ಗ್ನಾಪಕ ಮಾಡುಬ್ಯಾಡ. ಎಂದುಗ ರುಣ ತೀರತದೋ ಅವತ್ತು, ನಿನ್ನ ಮನೆ ಬಾಕುಲಗೆ ಬರತೀನಿ. ಅಲ್ಲೀಗಂಟ ನಿನ್ನ ಮನೆ ಬಾಕುಲಗೆ ಬರೊದಿಲ್ಲ, ಅಂತೇಳಿ ತಾಯಿಗೆ ನಂಬಿಕೆಯನ್ನು ಹೇಳಿ ಅದೇ ಬ್ರಾಮಣಯ್ಯನ ಮನೆಗೆ ಜೀತುಕೋದ. ಏಳಗೂಡುನ ದನ, ಎಂಟ ಗೂಡುನ ಆಡು, ಇಲ್ಲಿ ಬುಟ್ರೆ ಒಂದ ಫಾರ್ಲಾಂಗ್ ದೂರದಲ್ಲಿ, ದನಕುರಿ ಮ್ಯಾಕೆ ಆಡು ಎಲ್ಲಾನು ತಿರುವಕೊಂಡು ಬರಬೇಕು. ಆದ್ರೆ, ಜೀತಮಾಡುವಂಥ ಕೆಂಪೇಗೌಡ್ರಗೆ ಏನು ಊಟ ಕೊಡತಾವನೆ ಅಂದ್ರೆ-

ಅವನಿಗೆ ತಗ್ಗಲುಹುಳ್ಳಿ ಸಾರು ಮುಗ್ಗಲರಾಗಿ ಹಿಟ್ಟು । ತಂದನ್ನತಾನ

ಬ್ರಾಮಣಯ್ಯ ಆ ಮಗೀಗೆ ತಗ್ಗುಲುಹುಳ್ಳಿ ಸಾರು ಮುಗ್ಗಲರಾಗಿ ಹಿಟ್ಟು ಊಟಾಕ್ತಾಕತಾವ್ನೆ. ಈತನಾದರೋ ಪಾಲಿಗೆ ಬಂದಿದ್ದು ಪಂಚಾಮೃತ ಅಂತ ಅವನ ಅಡಿಗೆ ಊಟ ಮಾಡಿತಾವ್ನೆ. ಮಾಗಡಿ ರಂಗನಾಥ ಇವನ ಕಷ್ಟ ಸುಖಾನೆಲ್ಲ ನೋಡತಾನೆ ಅವ್ನೆ. ಒಂದಲ್ಲದ ಒಂದಿವಸ ಸಾಯಂಕಾಲ ದನ, ಕುರಿ ಎಮ್ಮೆ, ಮ್ಯಾಕೆಗಳನ್ನೆಲ್ಲ ತಿರವಕೊಂಡು ಆವಾವಾ ದೊಡ್ಡಿಗೆ ದನ ಕುರಿ ಮ್ಯಾಕೆ ನೇಮುಸಿದ. ಬರೋವಾಗ ತಲೆ ಎತ್ತಿ ನೋಡಿದ. ಪಾಲು ಪಂಚಾಮೃತದೂಟ ನಾನು ಮಾಡತೀನಿ. ತಗ್ಗಲ್ಹುಳ್ಳಿ ಸಾರು, ಮುಗ್ಗಲರಾಗಿ ಹಿಟ್ಟು ಇವನು ತಿಂತಾವ್ನೆ. ಆದ್ರೂ ನನಗಿಂತ ತಾನು ತನ್ನ ಹಟವಾಗಿ ಬೆಳದೋದನಲ್ಲ. ಇವನಿಗೇನ ಮಾಡೊಣ ? ಯೋಚ್ನೆ ಮಾಡಿದ ಬ್ರಾಮಣಯ್ಯ-.

ನಿನಗೆ ಈ ಸಂಬಳ ಕಮ್ಮಿ ಕಾಣೊ ಹೆಚಿನ ಸಂಬಳ ಮಾಡುತೀನಿ
ನನ್ನ ಸುರುವನ್ನೆ ತ್ವಾಟುವನ್ನೆಲ್ಲ ಸುಟ್ಟುಸುಳದು ಹೋಯಿತಲ್ಲೊ
ನನ್ನ ಬಾಳೇಯ.ತ್ವಾಟುವೆಲ್ಲ ಬಾಡಿನ್ನು ಹೋಯಿತಲ್ಲೊ.
ನನಗೆ ಗುಂಬಾವ ಕೊಡಿ ಸ್ವಾಮಿ ನೀರುನಾರ ಹುಯ್ಯುತೀನಿ
ನನಗೆ ಗುದ್ದಲಿಯ ಕೊಡಿ ಸ್ವಾಮಿ ಅಗುತೇನ ಮಾಡುತೀನಿ

ಸ್ವಾಮಿ, ಸುರುವನ್ನೆತೋಟವೆಲ್ಲ ಒಣಗೋಗದೆ. ಗುಂಬ ಕೊಡಿ ನೀರು ಹುಯ್ಯತೀನಿ. ಅಗತೆ ಮಾಡತೀನಿ. ಗುದ್ದಲಿ ಕೊಡಿ ಅಂತ ಕೇಳಿದ ಮಾಗುಡಿ ಕೆಂಪೇಗೌಡ. ಬ್ರಾಮಣಯ್ಯ ಮಾಗಡಿ ಪ್ಯಾಟೆಗೋಗಿ ಆರಸೇರುನ ಆರು ಗುದ್ದಲಿ, ಏಳೇಳು ಸೇರಿನ ಏಳು ಸನಕೆ, ಎಂಟೆಂಟು ಸೇರಿನ ಎಂಟು ಗಡಾರಿ ಮಾಡುಸಕೊಂಡ. ಇವೆಲ್ಲಾನು ಎತ್ಕೊಂಡು ಬರೂಕಾಗದೆ ಒಂದು ಗಾಡಿ ಕಟ್ಸಕೊಂಡು ಬಂದು ಸುರುವನ್ನೆ ತ್ವಾಟುದಲ್ಲಿ ಸುರುದ. ಆರು ವರ್ಸದ ಮಗ ಆರ ಸೇರುನ ಗುದ್ದಲೀಲಿ ಅಗಿಯೂಕೆ ಸಾಧ್ಯ ಇಲ್ಲ. ಈ ಬ್ರಾಮಣಯ್ಯ ಪಕ್ಕದಲ್ಲಿ ಕೂತವ್ನೆ. ಇವ್ನು ಮ್ಯಾಲಕ್ಕೆತ್ತಿ ಗುದ್ದಲಿ ಹಾಕಿದರೆ, ಗುದ್ದಲಿ ಮಕಾಡೆ ಬೀಳತಾದೆ. ಇವನು ಹೇಳತಾನೆ-

ಅಯ್ಯ ನೀನುನಾದರೆ ಸೋಲುದಿಲ್ಲ ಗುದ್ದಲಿನಾದ್ರು ಸೋಲುತಲ್ಲೊ
ಅವ್ನು ಏನು ಬಡುಸ್ತಾನ ತಂದೊ ಮಾಗುಡಿ ರಂಗುಸ್ವಾಮಿ.

ಏನಯ್ಯ ಕೆಂಪೇಗೌಡ ನೀನು ಸೋಲೋದಿಲ್ಲ. ನಿನ್ನ ಕೈಲಿರುವಂಥ ಗುದ್ದಲಿ ಸೋಲತದಲ್ಲ? ಅಂತ ಮಗ್ಗಲಲ್ಲಿ ಕೂತಕೊಂಡು ಉಬ್ಬುಸತಾವ್ನೆ ಬ್ರಾಮಣಯ್ಯ. ಅಲ್ಲಿಗೆ ಹನ್ನೆರಡಗಂಟೆ ಮಧ್ಯಾನವಾಯ್ತು. ಹೆಬ್ಬೆಟ್ಟ ಗಾತ್ರ ಮಣ್ಣ ಅಗಿವತುಕೆ ಈ ಹುಡುಗನಿಂದ ಸಾಧ್ಯವಾಗಲಿಲ್ಲ. ಆದ್ರೆ ಈ ಬ್ರಾಮಣಯ್ಯ ಒಂದ ನೇಗಿಲ ಮೂರು ಅಳತೆ ಹಾಕಬುಟ್ಟು; ನಾನು ಮನೆಗೋಗಿ ಊಟ ತರುವತುಕೆ ನೀನು ಈ ಅಳತೆ ಅಗದಬುಟ್ರೆ ಸಮ. ಅಗಿದೆ ಹೋದ್ರೆ ನಿನ್ನ ಕತ್ತುರಸಿ ಈ ಬಾಳೆಗುಂಡಿಯಲ್ಲಿ ಮುಚ್ಚಬುಡತೀನಿ ಅಂತ ಹೆದುರಸಿ ಹೊಂಟೋದ. ಇವ್ನು ಮನೆಗೋದ ಮಾತ್ರದಲ್ಲಿ ನಾನು ಇಷ್ಟೊಂದು ಅಗೆದಿದ್ರೆ ಇವ್ನು ಬುಡೋದಿಲ್ಲ. ನಾನು ಹ್ಯಾಗಮಾಡಲಿ ಅಂತೇಳಿ ನಿಂತುಕೊಂಡು ಪರಮಾತ್ಮನಾಗಿರುವಂಥ ಮಾಗಡಿ ರಂಗುನಾಥನ ಸ್ತೋತ್ರ ಮಾಡತಾವ್ನೆ -

ಸ್ವಾಮಿ ಏನು ಬಡುಸ್ತಾನ ತಂದೊ ಮಾಗುಡಿ ರಂಗುಸ್ವಾಮಿ
ನಂ ತಂದಿ ಮಾಡುವ ದಾನಧರ್ಮ ಕಾಯದೋದ ನಮ್ಮನ್ನ ?

ಯಾಕಪ್ಪ ಪರಮಾತ್ಮ ರಂಗುಸ್ವಾಮಿ? ನಂ ತಂದೆ ಹಿಂದೆ ಮಾಡಿರುವಂಥ ಅನ್ನಕ್ಷೇತ್ರ ಅರವಂಟಿಗೆಯಿಂದ ಬೇಕಾಗಿರುವಂಥ ಬಡವ ಬಗ್ಗರನ್ನೆಲ್ಲ ಸಾಕಿದ್ದಾನೆ. ಮೇಲು ಮಹಡಿ ಕಟ್ಟಿದ್ದಾನೆ. ಮೇಲು ಅರವಂಟಿಗೆ ಇಟ್ಟಿದ್ದಾನೆ. ಅವ್ರು ಮಾಡಿರುವಂಥ ದಾನಧರ್ಮನಾದರು ನಮ್ಮನ್ನ ಕಾಯದೋದೆಯ ಈಗ ನಮ್ಮನ್ನ ಕೈಬಿಟ್ಟೆ. ಇವತ್ತುನ ದಿವ್ಸ ಇದನ್ನ ಅಗೀದೆ

ಹೋದ್ರೆ ಬ್ರಾಮಣಯ್ಯ ಬಂದು ನನ್ನ ಪ್ರಾಣಹತ್ಯೆ ಮಾಡತಾನೆ ಎಂಬುವದಾಗಿ ಕಣ್ಣಲ್ಲಿ ನೀರುಬುಟ್ಟುಕೊಂಡು ರಂಗನಾಥನ ಸ್ತೋತ್ರ ಮಾಡುವಾಗ ಮಾಗಡಿ ರಂಗನಾಥನಾಗಿದ್ದವನು ಈ ಹುಡುಗನ ಮ್ಯಾಲೆ ದಯವಾಗೋಗಬುಟ್ಟ. ಎರಡು ಕೈಗೂ ಎರಡು ಗುದ್ದಲಿ ತೆಗುದಕೊಂಡ. ಕಣ್ಣು ಮುಚ್ಚಿ ಕಣ್ಣು ತೆರಿಯಾದರೊಳಗೆ ನೇಗಿಲ ಮಾರು ಎಲ್ಲಾನು ತಿರುನಾಕಬುಟ್ಟ, ಪರಮಾತ್ಮನಾಗಿರತಕ್ಕಂಥ ರಂಗಸ್ವಾಮಿ. ಆವಾಗ ಆಯಾಸವಾಗಬುಡತು. ಪಕ್ಕದಲ್ಲಿರುವಂಥ ಬಾಳೆ ಮರುದ ನೆರುಳಲ್ಲಿ ಹೋಗಿ ಮನೀಕೊಂಡ. ಸೂರ್ಯನ ನೆರಳು ಆ ಕಡೆ ಹೋಯ್ತು. ಏಳತಲೆ ಸರಪ ಬಿಸಿಲು ಬಿಳದಂಗೆ ಮೊಕುದ ಮ್ಯಾಲೆ ಛತ್ರಿ ಒಡ್ಡಕೊಂಡು ಆಡತಿದಾನೆ. ಈ ಬ್ರಾಮಣಯ್ಯನಾಗಿರುವಂಥವನು ತಗ್ಗಲುಹುಳ್ಳಿ ಸಾರು ಮುಗ್ಗಲರಾಗಿ ಹಿಟ್ಟು ಅಡಿಗೆ ತಗಂಡು ಬಂದ. ನೋಡುತಾ ಇದಾನೆ. ಓಹೋ ಇದೇನಾಶ್ಚರ್ಯ ? ಏಳತಲೆ ಸರಪನಾಗಿರುವಂಥದ್ದು ಮೊಕುದಮ್ಯಾಲೆ ಹೆಡೆ ಆಡಿತಿದಾನಲ್ಲ ? ತಗ್ಗಲುಹುಳ್ಳಿ ಸಾರು ಮುಗ್ಗಲರಾಗಿ ಹಿಟ್ಟು ಅಲ್ಲಿ ಬಿಸಾಕಬುಟ್ಟು -

ಅವ್ನು ಚಿಕ್ಕಮನೆಗೆ ಓಡೋಗಿ ಚಿಕ್ಕಶಾಸ್ತ್ರ ನೋಡುತಾನೆ
ಅವ್ನು ದೊಡ್ಡಮನೆಗೆ ಓಡೋಗಿ ಪಂಚಂಗ ನೋಡುತಾನೆ
ಅವನೀಗೆ ಐಸ್ವುರ್ಯ ಬಂದೀತು ದವಲತ್ತೆ ಬಂದಿತ್ತು.

ಮಾಗಡಿ ಕೆಂಪೇಗೌಡುನಿಗೆ ಐಸ್ವರ್ಯ ಬಂದಬುಡತು. ಇವನ ಮನೆ ಒಳಗೆ ಕಾಲಗಳಿಗೆ ಇರುಸಲಾಗದು. ಈವತ್ತು ಸಾಯಂಕಾಲ ಐದಗಂಟೆ ಒಳಗಾಗಿ ಆಚುಗ ಕಳುಸಿದ್ರೆ ಸಮ. ಇಲ್ದೆ ಹೋದ್ರೆ ಕೆಂಪೇಗೌಡುನಿಗೆ ಬಂದಿರುವಂಥ ಬಡುಸ್ತಾನ ನಿನಗೆ ಬತ್ತದೆ ಅಂದಬುಟ್ಟು ಪಂಚಾಂಗದಲ್ಲಿ ಬಂದಬುಡತು. ಬ್ರಾಮಣಯ್ಯ ಏಳಜನ ಹೆಂಡತೀರ್ನು ಕರುಸದ. ಇಲ್ಲೀವರಗು ನಂ ಆಳಾಗಿದ್ದ ಮಾಗಡಿ ಕೆಂಪೇಗೌಡುನಗೆ ಈವತ್ತು ಐಸ್ವಿರಿ ದವಲತ್ತು ಬರತದಂತೆ. ಇನ್ನು ನಮ್ಮನೆ ಒಳಗೇನಾರ ಅವನ ಇರಿಸಕೊಂಡ್ರೆ ಮಾಗಡಿ ಕೆಂಪೇಗೌಡುನ ಬಡತನ ನಮಿಗೆ ಬರತದಂತೆ. ಆ ಮಾಗಡಿ ಕೆಂಪೇಗೌಡುನ ಕರಕೊಂಡು ಬಂದು ಎಣ್ಣೆ ಸೀಗೆಕಾಯಿ ಹಾಕಿ ಸ್ನಾನಮಾಡಿಸಿ, ಆತನಿಗೆ ಪಾಲು ಪಂಚಾಮೃತದಡಗೆ ಊಟಕ್ಕಿಕ್ಕಿ, ಸಾಯಂಕಾಲ ಐದು ಗಂಟೆ ಒಳಗೆ ಅವ್ನ ಆಚುಗ ಕಳುಸಬುಡಬೇಕು, ಅಂತೇಳಿ ಏಳಜನ ಹೆಂಡತೀರಿಗೆ ಹೇಳಬುಟ್ಟು ಹಿಂದಲೆ ಹೊರುಟೋದ. ಅಷ್ಟೊತ್ತಗಾಗಲೆ ಏಳತಲೆ ಸರುಪನಾಗಿದ್ದಂಥ ಮಾಗಡಿ ರಂಗಸ್ವಾಮಿ ವಾರೆಯಾಗಿ ಹೊಂಟೋಗಿದ್ದಾನೆ. ಬ್ರಾಮಣಯ್ಯ ಕೆಂಪ, ಕೆಂಪ ಅಂತ ಮಾತಾಡುಸುತ ಇದ್ದವನು ಆಗ ಹೋಗಿ -

ನೀನು ಏಳಯ್ಯ ಮಾಗುಡಿ ಕೆಂಪೇಗೌಡ
ನಿನಗೆ ದವಲತ್ತು ಬಂದೀತು ಐಸ್ವಿರಿ ಬಂದೀತು.

ಅಯ್ಯೊ ಸ್ವಾಮಿ ಆವತ್ನಿಂದ ಕೆಂಪ, ಕೆಂಪ ಅಂತ ಕೂಗತಿದ್ದೋರು ಈವತ್ತು ಸಾಕಾಗಿ ಮಲಗಿದ್ದಕ್ಕೆ, ಮನೀಕೊಬುಟ್ಟವ್ನೆ ಅಂತೇಳಿ ಕ್ವಾಪ ಬಂದಬುಟ್ಟು ಕೆಂಪೇಗೌಡ್ರು ಅಂತಾರೆ ಅಂತೇಳಿ ಕೆಂಪೇಗೌಡ -

ಹಂಗೆ ಅನುಬೇಡಿ ಸ್ವಾಮಿ ನಿಮ್ಮ ಕಾಲುಗಾದ್ರೆ ಬೀಳುತೀನಿ
ಹಂಗೆ ಅನುಬೇಡಿ ಸ್ವಾಮಿ ನಿಮ್ಮ ಪಾದುಕಾದ್ರೆ ಬೀಳುತೀನಿ.

ಅಯ್ಯಾ ಸುಳ್ಳಲ್ಲ. ನಿನಗೆ ಐಸ್ವಿರಿ ಬತ್ತದೆ ಅಂದ. ಮ್ಯಾಲಕ್ಕೆದ್ದೇಳು ಅಂತೇಳಿ ಉಪಾಯ ಮಾಡಿಕೊಂಡು ಕೆಂಪೇಗೌಡ್ರನ್ನ ಮನೇಗ ಕರಕೊಂಡು ಬಂದು ಜಟ್ಟಿಗಳನ್ನು ಬುಟ್ಟು ಎಣ್ಣೆ ಸೀಗೆಕಾಯಿ ಹಾಕಿ ಸ್ನಾನಮಾಡಿಸಿ, ಪಾಲುಪಂಚಾಮೃತದಡಿಗೆ ಊಟುಕ್ಕಿಕ್ಕಿ ಚಿಕ್ಕಮನೆಗೆ ಕರಕೊಂಡು ಬಂದು ಅವರೊಂಧು ಕುರ್ಚಿ ಹಾಕೊಂಡು ಕೆಂಪೇಗೌಡುರಗೊಂದು ಕುರ್ಚಿ ಹಾಕೊಟ್ರು. ಕುರ್ಚಿವ್ಯಾಲೆ ಕೂತಕೊ ಅಂತಾರೆ. ಆಳು ಧಣಿ ಸಮಸಮುಕ ಕೊತುಕೊಳುಕಾದದ ?

ಹಂಗನುಬ್ಯಾಡಿ ಸ್ವಾಮಿ ನಿಮ್ಮ ಕಾಲುಗಾದ್ರೆ ಬೀಳುತೀನಿ
ಹಂಗನುಬ್ಯಾಡಿ ಸ್ವಾಮಿ ನಿಮ್ಮ ಪಾದುಕಾದ್ರೆ ಬೀಳುತೀನಿ.

ಸ್ವಾಮಿ, ದಯವಿಟ್ಟು ಹಂಗನ್ನಬ್ಯಾಡಿ. ನಿಂ ಮನೇಲಿ ಜೀತಮಾಡುವಂಥ ಆಳು ನಾನು ಆಳಿಗೆ ಈ ಪ್ರಕಾರವಾಗಿ ಸ್ವಾಮಿ, ಬುದ್ದಿ ಅಂತ ಹೇಳತಾ ಇದ್ದೀರಲ್ಲ. ಇಲ್ಲಯ್ಯ ನೀನು ಕೂತುಕೋ ಅಂತೇಳಿ ಬಲಂತಮಾಡಿ ಕುರ್ಚಿಮ್ಯಾಲೆ ಕೂರಿಸಿಕೊಂಡು ಏನಯ್ಯ, ನಿನಗೆ ದವಲತ್ತು ಬಂದಬುಟ್ರೆ ನನಗೇನು ಕೊಡತೀಯ ?ಅಂದ. ಈತನು ಯೋಚ್ನೆ ಮಾಡಿದ. ಆದ್ರೂ ಆಗಲಿ ಇವರಿಷ್ಟು ಬಲಂತ ಮಾಡಿ ಕೇಳತಾವ್ರಲ್ಲ ಅಂದಬುಟ್ಟು -

ನನಗೆ ದವಲತ್ತು ಬಂದರೆ ಪರುಧಾನಕೆ ಕೊಡುತೀನಿ
ಊರುಊರಿಗೆ ನಿಮಗೆ ಹೊಲುಗದ್ದೆ ಮಾನ್ನೇವು

ಕೊಡ್ತೀನಿ ಅಂದ. ಹಂಗೆ ಅಂದುದ ಮಾತುನೆಲ್ಲ ಬ್ರಾಮುಣ ಬರದುಕೊಂಡ. ಈ ಮಾಗಡಿ ಕೆಂಪೇಗೌಡ ಯಾವ್ಯಾವ ವಾಗ್ದಾನ ಹೇಳುದರೊ ಆ ವಾಗ್ದಾನನೆಲ್ಲ ಬರುದುಕೊಂಡು ಇಲ್ಲಿ ಸೈನು ಮಾಡು ಅಂದ ಬ್ರಾಮಣಯ್ಯ. ಕೆಂಪೇಗೌಡ್ರು ಸೈನಿಕ್ಕಿದರು. ಅಯ್ಯಾ ಇಲ್ಲಿಗೆ ನನ್ನ ರುಣ ತೀರೋಯ್ತು. ನೀನು ರುಣಮುಕ್ತನಾದೆ. ಇನ್ನು ಮೇಲೆ ನನ್ನ ಮನೆಗೆ ಜೀತುಕ ಬರಬಾರದು ಅಂತೇಳಿ ಇಗೋ ನನ್ನ ಮನೆಯಲ್ಲಿ ಮಾಡಿರತಕ್ಕಂಥ ಪಾಲುಪಂಚಾಮೃತ ತಕ್ಕೊಂಡೋಗಿ ನಿಂ ತಾಯಿಗೆ ಕೊಟ್ಟು ಇನ್ನು ನೀನು ನಿಂ ತಾಯಿ ನೆರಳನಲ್ಲಿರು ಅಂತೇಳಿ ಆಚುಗೆ ಕಳುಸಬಿಟ್ಟ. ತಾಯಿ ಮೊಕ ನೋಡಿ ಹನ್ನೆರಡು ವರ್ಸ ಆಗಿತ್ತು. ಈಗ ಕೆಂಪೇಗೌಡುನಗೆ ಆಸೆ ಆಗಬುಟ್ಟು -

ಅವ್ನು ಓಡಿ ಓಡಿ ಬುರತಾನೆ ಮಾಗುಡಿ ಕೆಂಪೇಯಗೌಡ
ಸ್ವಾಮಿ ಎಡವುಗಲ್ಲ ಎಡವಿಯವ್ನೆ ಏಳು ಕೊಪ್ಪರಗೆ ದ್ರವ್ಯಕಂಡ.

ಓಡಿ ಬರುವಂಥ ದಾರೀಲಿ ಎಡವುಗಲ್ಲ ಎಡವಬುಟ್ಟು, ಏಳಕೊಪ್ಪುರಗೆ ದ್ರವ್ಯದ ಮ್ಯಾಲೆ ಆಸೆ ಮಾಡದೆ, ತಾಯಿ ಮೊಕ ನೋಡು ಆಸೆಗೆ ಓಡಿ ಬಂದ ತಾಯಿ ಹತ್ತುರ್ಕ. ಅಮ್ಮ ಇಲ್ಲಿಗೆ

ನಾನು ರುಣ ತೀರಸಿ ಬಂದಬುಟ್ಟೆ ಅಂತೇಳಿ ತಂದಿರುವಂಥ ಅಡಿಗೆಯನ್ನು ತಾಯಿ ಮಗ ಇಬ್ರು ಜತೇಲಿ ಕೂತುಕೊಂಡು ಊಟಮಾಡುವಂಥ ಕಾಲದಲ್ಲಿ ಅಮ್ಮ ಇಲ್ಲಿಗೆ ನಂ ಕಷ್ಟ ಪರಿಹಾರವಾದಂತೆ ಕಾಣತದೆ. ನಾನು ಬರುವಂಥ ದಾರಿ ಒಳಗೆ -

ನಾನು ಎಡವುಗಲ್ಲ ಎಡವಿದೀನಿ ಏಳ ಕೊಪುರಿಗೆ ದ್ರವ್ಯ ಕಂಡೆ.
ಯಪ್ಪ ಬ್ಯಾಡಪ್ಪ ನನು ಕಂದ ಕಂಡೋರ ಸತ್ತೊ ಕಾಣೊ
ಅಯ್ಯೊ ನಮು ಸ್ವತ್ತೆ ನಮುಗಿಲ್ಲ ಪರುರ ಸ್ವತ್ತು ಯಾಕೆಬೇಕು ?

ಅಪ್ಪಾ ನಿಂ ತಂದೆ ಸಂಪಾದನೆ ಮಾಡಿದಂಥ ಸ್ವತ್ತೇ ನಮುಗೆ ಸೇರಲಿಲ್ಲ. ಪರರ ಸ್ವತ್ತು ಪಾಷಾಣ. ಪರರ ಸ್ವತ್ತುಗಾಸೆ ಬಿದ್ದು ಮನೆಗೆ ತಂದಾಹಾಕೊಬಾರದು ದೈವನಿಯಮವಿದ್ದಂತಾಗಲಿ. ಪರಮಾತ್ಮನ ಕರುಣೆ ಕಟಾಕ್ಷ ಇದ್ರೆ ಆ ರಂಗಸ್ವಾಮಿ ದಯವಿದ್ರೆ ಆಗಬಹುದು ಅಂತೇಳಿ, ತಾಯಿ ಪರರ ಸ್ವತ್ತುಗೆ ಆಸೆ ಪಡಲಿಲ್ಲ. ಆಗ ಕೆಂಪೇಗೌಡ್ರು ಹೇಳತಾರೆ ಅಮ್ಮಾ ಹಿಂದೆ ನಂ ತಂದೆಯಾಗಿದ್ದವರು ಮಾಡಿದ್ದ ದಾನ ಧರ್ಮದಿಂದ ಆ ಸ್ವತ್ತು ನಮಗೆ ಸೇರಿತು. ಇಲ್ದೇ ಇದ್ರೆ ಆ ಸ್ವತ್ತು ನಮಗೆ ಸೇರತಾ ಇರಲಿಲ್ಲ ಅಂತೇಳಿ ತಾಯಿ ಬಾಯಿಯನ್ನು ಮುಚ್ಚಿ, ಏಳುಗಾಡಿ ಹೊಡಸಿ, ಏಳ ಕೊಪ್ಪರಿಗೆ ದ್ರವ್ಯವನ್ನು ತಂದು ಮನೆ ಸೇರಿಸಿ, ತಾಯಿಯನ್ನು ಕೂಡುಸ್ಕೊಂಡು ಕೇಳತಾವ್ನೆ -

ಅಮ್ಮ ನನ್ನ ಏಳು ಮಂದಿ ತಾಯದೀರು ಯ್ಯಾವ್ಯಾವ ಗಡಿಯರವ್ವ ?
ನನ್ನ ಅಂದವುಳ್ಳೆ ರಂಗರಾಮುನ ಚಂದುದಿಂದ ಮೆರುಸುಬೇಕು
ನನ್ನ ಹೊಂಬಾಳಮ್ಮನ ಪ್ಯಾಟೆ ಒಳುಗೆ ಗೊಂಬೆ ತೇರೊಂದ್ದರಿಸುಬೇಕು
ನನ್ನ ಮಾಗುಡಿ ಪ್ಯಾಟೆ ಒಳಗೆ ಗೊಂಬೆ ತೇರೊಂದ ಹರಿಸಬೇಕು
ಯಮ್ಮ ಅನ್ನದಾನ ಹೊನ್ನುದಾನ ತಿರುಮಲೆಲ್ಲಿ ತಿರುದಾನ
ನನ್ನ ಚಿತುರ ಕಡೆಯೋರು ನೋಡು ಚಿತುರುಕಲ್ಲು ದುರುಗದೋರು
ನನ್ನ ಪಣ್ಣವಾಹ ಬರುವರ ನೋಡು ಪಾಳುಗೊಂದಿ ಕಡೆಯರು
ನನ್ನ ಮಧುಗಿರಿ ಕಟಸೀದ ಮುದ್ದುಬೈರೇಗೌಡುನಂತೆ
ನನ್ನ ಬಡಿಗಾರ್‍ಕರೆ ಕಟುಸೀದ ರಣುಬೈರೇಗೌಡುನಂತೆ
ನನ್ನ ಬೆಂಗಳೂರು ಕಟುಸೀದ ರಣುಬೈರೇಗೌಡುನಂತೆ.

ಅಮ್ಮ ನಂ ತಂದೆ ಮಾಡಿರತಕ್ಕಂಥ ದಾನಧರ್ಮಕ್ಕಿಂತ ನಾನು ಹೆಚ್ಚಾದ ದಾನಧರ್ಮವನ್ನು ಮಾಡಿ ನಂ ತಂದೆಗಿನ್ನ ಹೆಚ್ಚು ಬಲವನ್ನು ಹೊಂದಬೇಕು -

ನಾನು ಸಾಲು ಆರುವಂಟಗಿಕ್ಕಬೇಕು ಮೇಲುಮಾಡಿ ಕಟ್ಟುಬೇಕು
ನಾನು ಮೇಲುಬೀದಿ ಕೆತ್ತಬೇಕು ಸಾಲುಬೀದಿ ಕೆತ್ತಬೇಕು
ನಾನು ಮಾಗುಡಿ ರಂಗಸ್ವಾಮಿ ಚಂದದಿಂದ ಪೂಜುಬೇಕು

ನಾನು ಮಾಗುಡಿ ರಂಗುಸ್ವಾಮಿ ಚಂದದಿಂದ ಮೆರುಸಬೇಕು.
ಬಡುಸ್ತಾನ ಬಯ್ಲುಮಾಡಿ ಸಿರಿತನ ಮಾಡಿದಂಥ, ಮಾಗುಡಿ ರಂಗುನಾಥನ ಸ್ತೋತ್ರ ಮಾಡಬೇಕು ಅಂತೇಳಿ -

ಅವ್ನ ಮೇಲುಮಾಡಿ ಕಟ್ಟುತಾನೆ ಸಾಲು ಅರವಂಟಿಗಿಕ್ಕುತಾನೆ
ಅವ್ನ ಚಿನ್ನುದು ಪಾಪಸೆಲ್ಲ ರನ್ನುದು ಗೊಂಡೇದು ಮುತ್ತು
ಅವ್ನ ವಜ್ರಾದ ಮಂಚಕ್ಕೆ ಭುಜಬೀಸುವ ತಲೆದಿಂಬು
ಅವ್ನ ಹುತ್ತುರಿ ಬೆಟ್ಟಾದು ಮ್ಯಾಲೆ ಕಂಚಿನು ಅರುಮನೆ
ಅವ್ನ ಚಿತುರ ಬೆಟ್ಟಾದು ಮ್ಯಾಲೆ ಹುಲಿಯ ಜಾಕಲ ಹಜಾರ.

ಕೆಂಪೇಗೌಡ ಚೋಳರನ್ನು ಜತೆಗ್ಹಾಕೊಂಡು ಯಾವ ಬೆಟ್ಟುದ ಮ್ಯಾಲ ನೋಡುದ್ರು, ಕೆಂಪೇಗೌಡ್ರ ಹಜಾರ ಕಟ್ಟಿಸಿ ತಂದೆ ಮಾಡಿದಕ್ಕಿಂತ ಹೆಚ್ಚಾಗಿ ಮಾಡತಾನೆ. ಮಾಗುಡಿ ರಂಗನಾಥುನಿಗೆ ಹೊತ್ಹುಟ್ಟಿ ಹೊತ್ತು ಮುಳಗೂವರಗೂ ಹಗಲು ರಾತ್ರಿ ಪೂಜೆ ನಡೀಬೇಕು ಅಂತೇಳಿ ಪೂಜಾರಿನ ಕರಕೊಂಡು ಬಂದು ದೇವಸ್ಥಾನದಲ್ಲಿರಿಸಬುಟ್ಟ. ಆದ್ರೆ ಆ ಪೂಜಾರಿ ಯೋಚ್ನೆ ಮಾಡುತ ಮಾಗುಡಿ ಕೆಂಪೇಗೌಡ್ರು ಕರಕೊಂಡು ಬಂದು ನನ್ನ ಸೆರೆ ಹಾಕೊಂಡಬುಟ್ರಲ್ಲ. ನಾನು ಮನೆಗೋಗಿ ಹೆಂಡ್ರು ಮಕ್ಕಳನ್ನು ನೋಡೂವಂಗಿಲ್ಲ. ಇಲ್ಲಿಂದ ತಪ್ಪುಸಕೊಂಡು ಹೋಗಬೇಕಲ್ಲ. ಏನು ಮಾಡಲಿ ಅಂತ ಯೋಚ್ನೆ ಮಾಡಿಕೊಂಡಿದ್ದಾಗ, ರಂಗಧಾಮನ ಬಳಿ ಆನೆ ಹೋಗಿ ಸುರುಸಾವಂತಗೆ ಗಿಡ ಮೇದು ಬಂದಿತ್ತು. ಬೆಳಿಗ್ಗೆ ಪುಷ್ಪವನ್ನು ಕೀಳುವಾಗ ಬಳೀಕೂದಲು ಅದರಲ್ಲಿ ಸಿಕ್ಕಿಕೊಂಡಿತ್ತು. ಅದನ್ನೆ ತಗೊಂಡು ಬಂದು ದೇವರಿಗೆ ಪೂಜೆಮಾಡಿದ. ಕೆಂಪೇಗೌಡ್ರು ಸ್ನಾನಮಾಡಿಕೊಂಡು ಪೂಜೆಗೆ ಬಂದ್ರು. ಪೂಜೆ ಆಗಿ ದೇವ್ರ ಪ್ರಸಾದ ಕೊಡುವಾಗ ಈ ಪುಷ್ಪವನ್ನು ಎತ್ತಿ ಪೂಜಾರಯ್ಯ ಕೈಗೆಕೊಟ್ಟ ಅರ್ಚಕರೆ ಇದೇನು? ಬಳೀಕೂದಲು ಸಿಕ್ಕಿತಲ್ಲ? ಏನಾಶ್ಚರ್ಯ ಅಂದಾಗ ಪೂಜಾರಯ್ಯ ಕೆಂಪೇಗೌಡ್ರುಗೆ ನಿಂ ರಂಗಸ್ವಾಮಿ ಮುದಿ ಆಗಬುಟ್ಟ. ಬುಟ್ಟುಬುಡಿ ಸ್ವಾಮಿ ಸೋಮೇಶ್ವರುನ ದೇವಸ್ಥಾನ ಕಟ್ಟುಸಿ ಅಂತೇಳಿಬುಟ್ಟ. ನಂ ರಂಗಸ್ವಾಮಿ ಮುದಿ ಆಗಬುಟ್ಟ ಅಂತೇಳಿ ಮೂಗಂಡಗ ಮೆಣಸಿನಕಾಯಿ ತರಿಸಿ ಅಂದು ರಂಗಸ್ವಾಮಿ ತಿಕ್ಕೆ ಮೊಕ್ಕೆಲ್ಲ ತಿಕ್ಕುಸಬುಟ್ರು ಕೆಂಪೇಗೌಡ್ರು. ಸೋಮೇಶ್ವರನ ದೇವಸ್ಥಾನ ಸುರುಮಾಡುಸಿದರು.

ಅವ್ನು ಆರ ಸಾವ್ರ ಹೊನ್ನ ಮುಟ್ಟಿಸಿ ಕಟ್ಟಿಸಿದರೂ ಏಳುಲಿಲ್ಲ ಮೇಲು ಕಳಶ. ಒಂದಿನಕ ಒಂದುಲಕ್ಷ ರೂಪಾಯಿ ಖರ್ಚುಮಾಡಿ ಬಂದ್ರೆ, ರಂಗಸ್ವಾಮಿ ಬಿಳಿ ಆನೆ ರಾತ್ರಿಗೋಗಿ ಅದನ್ನೆಲ್ಲ ಉಳ್ಳುಸಿಬಂದುಬುಡತಿತ್ತು. ಇಲ್ಲೀತಂಕ ಏನು ಮಾಡುದ್ರು ಸುದಾ ಸೋಮೇಶ್ವರುನ ದೇವಸ್ಥಾನ ಹಾಳಬಿದ್ದದೆ ಹೊರತು ಸರಿ ಆಗಲಿಲ್ಲ. ರಂಗಸ್ವಾಮಿ ಆಗಿದ್ದಂಥವನು ಕೆಂಪೋಜಮ್ಮುನ ಕನಸಿನಲ್ಲಿ ಬಂದ್ಹೇಳಿದ. ಅಮ್ಮ ನಿನ್ನ ಮಗ ನನ್ನ ಕೈಬುಟಬುಟ್ಟು ಸೋಮೇಸ್ವರನ ದೇವಸ್ಥಾನ ಸುರುಮಾಡಿಸವನೆ ? ನಾನು ಕೈಬಿಟ್ರೆ ಇಲ್ಲಿಗೆ ಇಪ್ಪತ್ತನಾಲ್ಕು ದಿನಕ್ಕೆ ಟಿಪ್ಪುಸುಲ್ತಾನ ನಿನ್ನ ಮಗುನ್ನ ಕೈಸೆರೆ ಹಿಡೀತಾನೆ. ನಿನ್ನ ಮಗುನಿಗೆ

ಹಿಂದೆ ಬಂದಿದ್ದಂಥ ವನುವಾಸ ತಿರಗಿ ಪ್ರಾಪ್ತಿ ಆಗತದೆ. ಇದು ಉಳಬಳಕೆ ಬರೂದಿಲ್ಲ ಎಂಬುವದಾಗಿ ತಾಯಿ ಸ್ವಪ್ನನದಲ್ಲಿ ಹೇಳಿದ. ತಾಯಿ ಕೆಂಪೋಜವ್ವ ಆಗ ಮಗುನ ಕುಂಡ್ರಸಕೊಂಡು ಬುದ್ಧಿವಾದ ಹೇಳತಾವಳೆ -

ಅಯ್ಯ ಬ್ಯಾಡಪ್ಪ ನನ್ನ ಕಂದ ಕೇಳೊ ನನ್ನ ಕಂದ
ನೀನು ರಂಗುಸ್ವಾಮಿ ಸ್ತೋತ್ರಾವ ಬಿಡುಬ್ಯಾಡ ನನ್ನ ಕಂದ
ಬಾಳಕಷ್ಟಾವು ನಿನಗೆ ಬರುತಾದೆ ನನು ಕಂದ
ನೀನು ರಂಗುಸ್ವಾಮಿ ಸ್ತೋತ್ರಾವ ಬಿಡುಬ್ಯಾಡ ನನ್ನ ಕಂದ.

ಅಪ್ಪ ಮಗನೆ, ರಂಗುಸ್ವಾಮಿ ಸ್ತೋತ್ರ ಬಿಡಬ್ಯಾಡ. ಅವನ ಗ್ಯಾನದಿಂದ ನಂ ಬಡತನ ಬಯ್ಲಾಗಿ ಸಿರಿತನ ಬಂತು ಅಂದಳು. ಅಮ್ಮ ಇದು ನಾನು ಮಾಡಿದ್ದಲ್ಲ. ನಂ ಅರ್ಚಕರು ರಂಗುಸ್ವಾಮಿ ಮುದಿ ಆಗೋಗಬುಟ್ಟ, ಅವನಲ್ಲಿ ಸತ್ಯವಿಲ್ಲ, ಅಂತೇಳಿದ್ರು. ಅದುಕೋಸ್ಕರವಾಗಿ ನಾನು ಸೋಮೇಸ್ವರುನ ದೇವಸ್ಥಾನ ಸುರುಮಾಡಿದ್ದೀನಮ್ಮ. ತಪ್ಪು ಕಾಣಪ್ಪ. ಅರ್ಚಕರನ್ನ ಮನೇಗ ಬುಡದೆ ದೇವಸ್ಥಾನದಲ್ಲಿ ಸೆರೆಹಾಕ್ಕೊಂಡುದರ ಸಲುವಾಗಿ ಮೋಸಮಾಡಿ ಆಚೆಗೋಗಬೇಕು ಅಂತ ಹೇಳುದ ಸುಳ್ಳುಮಾತನ್ನು ನೀನು ಗಟ್ಟಿಮಾಡಿಕೊಂಡಿದೀಯ. ತಪ್ಪು ಮಗನೆ ಎಂದು ಎಷ್ಟೇ ವಿಧವಾಗಿ ಬುದ್ಧಿವಾದ ಹೇಳುದ್ರು, ಕೆಂಪೇಗೌಡರು ತಾಯಿ ಮಾತ ಕೇಳಲಿಲ್ಲ. ಸರ್‍ಯಾಗಿ ಇಪ್ಪತ್ತನಾಲ್ಕು ದಿನಕೆ ಮಾಗಡಿ ಕೆಂಪೇಗೌಡ್ರನ್ನ ಟಿಪ್ಪು ಸುಲ್ತಾನ್ ಕೈಸೆರೆ ಹಿಡಿದು, ತಲೆಮ್ಯಾಲೆ ಸಗಳಿ ಕಟ್ಟೆಯನ್ನು ಕಟ್ಟಿ ಈವತ್ತು ಶಿವಗಂಗೆ ಗಂಗಾಧರೇಶ್ವರನ ದೇವಸ್ಥಾನದಲ್ಲಿ ಇಟ್ಟಿದ್ದಾರೆ. ಮ್ಯಾಲೆ ಕಕ್ಕಡ ಕಟ್ಟಿದ್ದಾರೆ. ಆ ಎಣ್ಣೆ ಉರುದು ಮೊಕುದ ಮ್ಯಾಲಿಂದ ಹರೀತಾದೆ. ತಾಯಿ ಮಾತನ್ನ ಕೇಳದವರಿಗೆ ನಾಯಿಪಾಡು ಬತ್ತು ಅಂತೇಳಿ ಮಾಗಡಿ ಕೆಂಪೇಗೌಡರನ್ನು ಟಿಪ್ಪುಸುಲ್ತಾನ್ ಕೈಸೆರೆ ಹಿಡಿದ.

ಮಂಗಾಳ ಜಯ ಮಂಗಾಳ
ಮಂಗಾಳ ಸುಬ ಮಂಗಾಳ.
ದೀಪ ಧೂಪಗಳೆಲ್ಲ ಈಬತ್ತಿ ಪನಿವಾರ
ಆ ನನ್ನಪ್ಪಾನ ಗರ್ಭದ ಗುಡಿಯೊಳಗೆ
ಧೂಪಾದಾರತಿ ಎತ್ತಿರೊ.
ಸುಬದಲ್ಲಿ ಎತ್ತೀರಿ ಮಂಗಳಾರುತಿಯ
ಸತ್ಯಾವಿದ್ದರೆ ನಮ್ಮ ಮಾ ತಾಯೀಗೆ
ಸತ್ಯಾವಿದ್ದರೆ ನಮ್ಮ ಅಮ್ಮಯ್ಯಾಗೆ
ಸತ್ಯಾದಾರತಿ ಎತ್ತೀರೋ.
ಮಂಗಾಳ ಜಯ ಮಂಗಾಳ
ಮಂಗಾಳ ಸುಬ ಮಂಗಾಳ.

★★★★★

# ೨. ಲಿಂಗರಾಜಮ್ಮನ ಕಥೆ

ತಂದನ್ನಾನ ತಂದನ್ನ ತಾನನ
ತಂದೇನೊ ತಂದನ್ನಾನ ತಂದನ ತಾನನ || ಮುಮ್ಮೇಳ ||
ತಂದನಾನ ತಂದನ್ನತಾನನ
ತಂದೇನಾನ ತಂದನ್ನಾನ ತಂದನ ತಾನನ || ಹಿಮ್ಮೇಳ ||

ಹೆಚ್ಚೀನ ಕೋಟೆ ಮುತ್ತೀನ ಬಾಸಿಂಗ
ಆ ಕ್ವಾಟೆ ಹೆಸರು ಪಿರಿಯಪಟ್ಟಣ || ತಂ ||

ಕೊಡಗೀನ ಹೆಸರ ಹೇಳಿದರೆ
ದಿರಳಿ ಮದರಂಗ ಮೈಯೆಲ್ಲ ರಾಮ
ಗಡಗಡನೆ ನಡಗೂದು || ತಂ ||

ಪಿರಿಯಪಟ್ಟಣದ ಹೆಸರ ಹೇಳಿದರೆ
ದಿರಳಿ ಮದರಂಗ ನಾಗರಾವು ಮೊರದಿದಪ್ಪಂದ || ತಂ ||
ಹಾಲು ಕಾಸುತ ಬಾಲನ ಕೂಗುತ್ತ
ಲಿಂಗರಾಜಮ್ಮ ಬಾಲುನಗೆ ಬುದ್ಧಿಯ ಹೇಳೂತ || ತಂ ||
ತುಪ್ಪ ಕಾಯಸುತ ಬಟ್ಟಾಲ ಬೆಳಗುತ್ತ
ಲಿಂಗರಾಜಮ್ಮ ಪುತ್ರುನಗೆ ಬುದ್ಧಿಯ ಹೇಳೂತ || ತಂ ||
ಮರದ ಮಂಚ ತಾಳಲಾರದೆ ವೀರ್ರಾಜಿ ಅರಸು
ಕಡಗರದ ಬೋಧೀಗೆ ಬಂದನಲ್ಲ || ತಂ ||
ಬಾರೆ ಬಾರೆ ಮಡದಿ ಲಿಂಗರಾಜಿ
ಅಯ್ಯೋ ಮಡದಿ ಬಾಳುಯೋಗ ನಿಮುಗೆ ಬರನಿಲ್ಲ || ತಂ ||

ಬಾರೆಲೆ ಪಟ್ಟಣರಾಣಿ ಎಳೆ ಲಿಂಗರಾಜಮ್ಮ, ಬಾಳುಯೋಗ ನಿಮುಗೆ ಬರನಿಲ್ಲ. ಬದಕು ಯೋಗ ನಾ ತರನಿಲ್ಲ, ಅಂತೇಳಿ ವೀರ್ರಾಜಿ ಅರಸು ಮಡದಿ ಲಿಂಗರಾಜಮ್ನ ಕೂಗುವಾಗ, ಗಂಡನಾಡುದ ಮಾತ ಕೇಳಕೊಂಡು ಗುಡುಗುಡನೆ ಓಡಿ ಬಂದು ಎಳೆ ಲಿಂಗರಾಜಮ್ಮ ಗಂಡುನ ಪಾದಕ ಶರಣಮಾಡಕೊಂಡು ರಾಜುನ ಕತ್ತ ರಾಣಿ ತಬಕೊಂಡು, ರಾಣಿ ಕತ್ತ ರಾಜ ತಬಕೊಂಡು, ಮೂರು ತಿಂಗಳ ಕಂದ ವೀರಣ್ಣನ ಕರೆದು ತೊಡೆಮ್ಯಾಲೆ ಕೂರುಸಕೊಂಡು, ಮಗನ ಮೊಕ ನೋಡಿಕೊಂಡು ಏನು ಸ್ವಾಮಿ, ಏನು ಕಾರಣ ಕರೆದಿರಿ ಅಂತ ಕೇಳುವಾಗ ಲಿಂಗರಾಜಮ್ಮ -

ಬಾಳೂವ ಬದುಕುವ ಕಾಲಕ್ಕೆ ಅಯ್ಯೋ ಮಡದಿ
ಹೆಚ್ಚಿನ ದೇವರು ಹೆಗಲಾನೇರಿದ ॥ ತಂ ॥
ಸನಿದೇವ್ರು ಹೆಗಲ ಏರುದ ಮ್ಯಾಲೆ
ಅಯ್ಯೋ ಮಡದಿ ಬಾಳ ಬಡುಸ್ತಾನ ಬರುತಲ್ಲ ॥ ತಂ ॥

ಏನಲೆ ಮಡದಿ ಲಿಂಗರಾಜಮ್ಮ? ಮಕ್ಕಳು ಹುಟ್ಟಿ ಹೆಚ್ಚಬೇಕು, ಬಾಳಬೇಕು, ಲಿಂಗರಾಜಮ್ಮ ಸಿರಿ ಸಂಪತ್ತು ಬರಬೇಕು. ಇಂಥ ದರಿದ್ರದ ಮಗ ನಿನ್ನ ಗರ್ಭದಲ್ಲಿ ಹುಡಲಾಗಿ ನನ್ನ ಪಿರಿಯಪಟ್ಟಣ ಎಲ್ಲ ಹಾಳಾಯ್ತು. ಲಿಂಗರಾಜಮ್ಮ, ಸಿಸು ಹುಟ್ಟಿ ಸಿರಿ ಬರಬೇಕು. ಪುತ್ರನ್ಹುಟ್ಟಿ ಪುಣ್ಯ ಬರಬೇಕು. ಬಾಲನಹುಟ್ಟಿ ಭಾಗ್ಯ ಬರಬೇಕು. ಭಾಗ್ಯವೆಲ್ಲ ಬರಿದಾಯ್ತು. ಲಿಂಗರಾಜಮ್ಮ ಇದರ ಮಧ್ಯದಲ್ಲಿ ಸೂರ್ಯದೇವನ ಸುಕುಮಾರ ಕಾಗೆ ವಾಹನ ಕಲಿಪುರುಷ ರವಿನಂದನ ಸನಿದೇವರು ಪರಮಾತ್ಮ ನನ್ನ ಜನ್ಮರಾಶಿಗೆ ಬರಲಾಗಿ ಏಳನೇ ರಾಶಿಗೆ, ಸ್ವಾಮಿ ಹೆಗಲೇರಿದ ಲಿಂಗರಾಜಮ್ಮ. ಎಡದ ಭುಜ ಕುಣೀತಾ ಇರುವದು. ಎಡದ ಹುಬ್ಬು ಹಾರತಾ ಇರುವುದು. ಲಿಂಗರಾಜಿ ವಾರ ವಾರ ಎಂಟು ದಿವ್ಸದಲ್ಲಿ ಪರಮಾತ್ಮ ನಮ್ಮ ಮ್ಯಾಲೆ ಕ್ರೂರ ದೃಷ್ಟಿ ಮಡಗಲಾಗಿ -

ಉಣ್ಣೊ ಅನ್ನ ಬೆಲ್ಲವಾಯ್ತಲ್ಲೋ ಅಯ್ಯೋ ಮಡದಿ
ಉಟಗೋಳೊ ಬಟ್ಟೆ ಕಾಗದವಾಯ್ತಲ್ಲೊ ॥ ತಂ ॥
ಕುಡಿಯೊ ಅಂಬಲಿ ಪಾಯ್ಸವಾಯ್ತಲ್ಲೊ ಲಿಂಗುರಾಜಮ್ಮ
ಪಟ್ಟಾದ ಕುದುರೆ ತಟ್ಟಾನೆ ಸಾಯ್ತಲ್ಲ ॥ ತಂ ॥
ಕಂಚೀನ ಗ್ವಾಡೆ ಕರಗಿ ಬೀಳತಲ್ಲ ನನ್ನ ಮಡದಿ
ಉಕ್ಕೀನ ಕ್ವಾಟೆ ಮುರಿದು ಬೀಳತಲ್ಲ ॥ ತಂ ॥

ದಂಡು ದಾಳೀ ಮುಂದಿ ಮಾರ್ಬಲವೆಲ್ಲ, ರಾಜ್ಯಕೋಶವೆಲ್ಲ ಪರ್‍ರಾಜರಿಗಾಯ್ತು ಲಿಂಗರಾಜಮ್ಮ, ಹೇಳುವೆನು ಕೇಳುವಳಾಗು. ಹುಳ್ಳಿ ಕೊಟ್ಟು ಮೂರ್‍ಹಳ್ಳಿ ಪಡದಿದ್ದಿ ಲಿಂಗರಾಜಿ, ಹಳ್ಳಿ ಎಲ್ಲ ಡಿಳ್ಳೀಗೆ ಸೇರೋಯ್ತು. ರಾಗಿ ಕೊಟ್ಟು ರಾಜ್ಯ ಪಡೆದಿದ್ನಲ್ಲ, ರಾಜ್ಯವೆಲ್ಲ ಪರ್‍ರಾಜರದಾಯ್ತು. ಲಿಂಗರಾಜಮ್ಮ ಕಾಸು ಕೊಟ್ಟು ದೇಸ ಪಡದಿದ್ದಿ, ದೇಸವೆಲ್ಲ ದಾಸಾಗೋಯ್ತು. ಲಿಂಗರಾಜಮ್ಮ ಹೊನ್ನು ಕೊಟ್ಟು ದಂಡು ಪಡೆದಿದ್ದಿ, ದಂಡೆಲ್ಲ ಲಯವಾಯ್ತು ಲಿಂಗರಾಜಿ ಎನುವಂಥ ಕಾಲದಲ್ಲಿ -

ಗಂಡನಾಡಿದ ಮಾತ ಕೇಳಿಕೊಂಡು ಲಿಂಗುರಾಜಮ್ಮ
ಕಡಗಣ್ಣಲ್ಲಿ ಕಣ್ಣೀರ ಕೆಡಗಿದಳು ॥ ತಂ ॥

ಗಂಡನಾಡದ ಮಾತ ಕೇಳಿಕೊಂಡು ಎಳೆ ಲಿಂಗರಾಜಮ್ಮ, ಕಣ್ಣೀರ ಕೆಡಗುತ ದುಕ್ಕವನ್ನು ಮಾಡಿಕೊಂಡು ಅಯ್ಯೋ ಸ್ವಾಮಿ, ಹೇಳುವೆನು ಕೇಳುವರಾಗಿ. ಈವತ್ತುನ ದಿವುಸದಲ್ಲಿ ಮಿಂಚುದು ಕಾರ್‍ಯಕ್ಕೆ ಚಿಂತೆ ಯಾಕೆ ಸ್ವಾಮಿ? ಹಣೇಲಿ ಬರದಂಗಾಗಲಿ. ದೇವಾ ದುಕ್ಕ ಯಾತುಕ್ಕೆ? ಸೋಕ ಯಾತುಕ್ಕೆ? ಚಿಂತೆ ಮಾಡುದ್ರೆ ಫಲವಿಲ್ಲ. ವೆಸನ ಮಾಡುದ್ರೆ ಪ್ರಯೋಜನವಿಲ್ಲ ಸ್ವಾಮಿ. ಪ್ರಪಂಚದಲ್ಲಿ ನರನಾಗಿ ಹುಟ್ಟುದ ಮ್ಯಾಲೆ ನಾಲಕ್ಕು ಕಾಲ ಸುಖ ನಾಲಕ್ಕಾಲ ಕಷ್ಟ ಸ್ವಾಮಿ. ಕಷ್ಟ ಸುಕ ಎರಡು ದುಂದವಾಗಿರುವಾಗ ದುಕ್ಕ ಮಾಡುದ್ರೆ

ಫಲವಿಲ್ಲ, ಗುರುದೇವಾ. ಆ ಪರಮಾತ್ಮ ಸನಿದೇವರು, ಹೆಚ್ಚಿನ ದೇವರು ಹೆಗಲೇರುದ ಮ್ಯಾಲೆ ಬಡುಸ್ತಾನ ಬತ್ತು ಅಂತೀರಲ್ಲ ಪರಮಾತ್ಮ ? ಅಂದ್ರೆ ಹೇಳುವೆನು ಕೇಳುವರಾಗಿ. ಏಳುಸಮುದ್ರ ಆಳುವಂಥ ನಳಚಕ್ರವರ್ತಿ ಬುಟ್ಟವರಲ್ಲ. ಹರಿಶ್ಚಂದ್ರ ಮಾರ್ರಾಜ್ರುನ್ನ ಬುಟ್ಟವರಲ್ಲ. ಪಾಂಡುಕುಮಾರ್ರ ಬುಟ್ಟವರಲ್ಲ. ಹುಟ್ಟುದ ತಂದೆ ಬುಟ್ಟವರಲ್ಲ. ಇದ್ಯ ಕಲಸು ಗುರೂನ ಬುಟ್ಟವರಲ್ಲ. ಬಟ್ಟಿ ವಿಕ್ರಮಾರ್ಜುನ ಬುಟ್ಟವರಲ್ಲ. ನಮ್ಮುನ ತಾನೇ ಬುಟ್ಟಾರೆ ಗುರುದೇವ? ಅವರ ಕ್ರೂರದೃಷ್ಟಿ ಯಾರ ಮೇಲಿರುವದೋ ಅವರ ಮನಸ ಸಾಂತಿ ಇರಲಾರದು. ಹೇಳುವೆನು ಕೇಳುವರಾಗಿ -

ರಾಜ್ಯ ಹೋಯ್ತು ವೆಸನ ಮಾಡಬ್ಯಾಡಿ ಗಂಡಯ್ಯನವರೆ
ದೇಸ ಹೋಯ್ತು ಚಿಂತೆ ಮಾಡಬ್ಯಾಡಿ ॥ ತಂ ॥
ರಾಜ್ಯ ಹೋದರೆ ರಾಜ್ಯ ತರುವೆನು ಗಂಡಯ್ಯನವರೆ
ದೇಸ ಹೋದರೆ ದೇಸಾ ತರುವೆನು ॥ ತಂ ॥

ಮಡದಿ ಲಿಂಗರಾಜಿ ರಾಜ್ಯ ಹೋದರೆ ರಾಜ್ಯ ತರುವೆನು, ದೇಸ ಹೋದರೆ ದೇಸ ತರುವೆನು ಅಂತ ಹೇಳತೀಯಲ್ಲ? ನೀ ನೋಡುದ್ರೆ ಮೂರಕಾಸುನ ಹೆಣ್ಣೆಂಗಸು. ನಾ ನೋಡುದ್ರೆ ಸಾವರೂಪಾಯ್ನ ತಲೆ. ಇಂಥ ರಾಜ್ಯಭಾರವೆಲ್ಲ ಹೋಯ್ತು ಅಂತ ದುಕ್ಕ ಮಾಡತ ಕೂತಿವ್ನಿ. ನೀ ನೋಡುದ್ರೆ ರಾಜ್ಯ ತರತೀನಿ ಅಂತ ಹೇಳತೀಯಲ್ಲ, ಎಲ್ಲಿಂದ ತಕೊಂಬರತಿ ಅಂತ ಕೇಳುವಾಗ, ಸ್ವಾಮಿ ಹೇಳುವೆನು ಕೇಳುವರಾಗಿ. ನಾನು ಕೂಲಿ ಕಂಬಳ ಮಾಡಿಕೊಂಡು ಗೇಯ್ಕೊಂಡು ಸಂಪಾದ್ನೆ ಮಾಡಿಕೊಂಡು ಮೂಟೆ ಕಟ್ಕೊಂಡು ಹೊತ್ಕೊಂಡು ಬರೂದಿಲ್ಲ. ಗಾಡಿ ಹೊಡಕೊಂಡು ಬರೂದಿಲ್ಲ ಸ್ವಾಮಿ. ನೀವು ಒಂದೇ ಮನಸ್ನಲ್ಲಿ ಒಂದೇ ದ್ರುಡದಲ್ಲಿ ಗುರುದೇವಾ ಕೈಗೆ ವೀಳ್ಯವನ್ನು ಕೊಟ್ಟು ಎದೆಗೆ ಧೈರ್ರವನ್ನು ಕೊಟ್ಟು ಬೆನ್ನಿಗೆ ಬಲವನ್ನ ಕೊಟ್ಟು ನೆಗನೆಗತ ಕಳುವುದುಂಟಾದ್ರೆ -

ಭಾರತ ದೇಸನಾಳುವ ನಮ್ಮಣ್ಣ ನಮ್ಮಣ್ಣಯ್ಯನವರು
ಹೋಗಿ ಬರುವೆ ಅಣ್ಣಯ್ಯನರುಮನೆಗೆ ॥ ತಂ ॥
ಹೋಗಿ ಬರುವೆ ಅಣ್ಣಯ್ಯನರುಮನೆಗೆ ಗಂಡಯ್ಯನವರೆ
ಕೇಳಿ ಬರುವೆ ಅರಧ ರಾಜ್ಯವ ॥ ತಂ ॥
ಅಪ್ಪ ಗಂಡಾಗವನ ಒಂದಗ್ಹುಟ್ಟಿದ್ದಿರೆ ನಮ್ಮಣ್ಣಯ್ಯನವರು
ತಲೆಗೆ ಸರಿಯಾಗಿ ಭಾಗ ಕೊಡುಬಾರದ ? ॥ ತಂ ॥

ಹೆಣ್ಣು ಮುಂಡೆಯಾಗಿ ನಾನ್ಹುಟ್ಟಿದ್ದಕೆ ಸ್ವಾಮಿ ನಿಮಗೆ ಕೊಟ್ಟು ಲಗ್ನಮಾಡುದ್ರು. ಗಂಡಾಗಿ ಅವರು ಅವರಪ್ಪನಗ್ಹುಟ್ಟಿದ್ರೆ ಹೆಣ್ಣಾಗಿ ನಾನು ಅವರಪ್ಪನಗ್ಹುಡಲಿಲ್ಲವ? ಅದೇ ಪ್ರಕಾರವಾಗಿ ಕೆಟ್ಟು ನಾ ತವುರಗೋಯ್ತೀನಿ. ಬಾಳುವೆಗೆಟ್ಟು ಬಾಕುಲಗ ಹೋಯ್ತೀನಿ ಅಂದ್ಲು. ಲಿಂಗರಾಜಿ ಏನಂದೆ? ನಮಗೆ ಬಡುಸ್ತಾನ ಬಂದಬುಡತು. ಕೆಟ್ಹೋಗಿದೀವಿ ಅಂತೇಳಿ ಈಗ ಬಾಳತಿದ್ಹೊ, ಬಡಸ್ತಾನ ಬಂತು ಅಂತೇಳಿ ನಿಮ್ಮಣ್ಣಯ್ಯ ಬಾಳತಾವ್ನೆ, ಬದಕತಾವ್ನೆ ಎಂದು ದಂಡುದಾಳಿ ಮಂದಿ ಮಾರ್ಬಲ ಕಟಿಕೊಂಡು ಆಸ್ಥಾನ ಅರಮನೆ ಕಟಿಗೊಂಡು ಅಣ್ಣಯ್ನವರ ಮನೆಗೋಯ್ತೀನಿ ಅಂತೇಳತೀಯಲ್ಲ ಹೇಳುವೆನು ಕೇಳು ಮಡದಿ -

ಬ್ಯಾಡ ಬ್ಯಾಡೆಲೆ ನನ್ನ ಮಡದಿಯೊ
ಅಯ್ಯೋ ಮಡದಿ ನನ್ನ ಮಾತ ನೀನು ಕೇಳ್ಹೆಣ್ಣೆ ॥ ತಂ ॥
ಕೆಟ್ಟು ನೀನು ತವರಿಗೋಗಬ್ಯಾಡ ಅಯ್ಯೋ ಮಡದಿ
ಬಾಳುವರ ಮನೆ ಬಾಕುಲಗೋಗಬ್ಯಾಡ ॥ ತಂ ॥

ಬಾಳತಿದ್ರೆ ಗಂಡನ ಮನೆಯೊ, ಕೆಟ್ಹೋದ್ರೆ ಅಣ್ಣನ ಮನೆಯೊ ಲಿಂಗರಾಜಮ್ಮ. ಕೆಟ್ಟು ತವುರಗೋಗಬ್ಯಾಡ. ಬಾಳುವರ ಮನೆ ಬಾಗುಲಗೋಗಬ್ಯಾಡ. ಹೇಳುವೆನು ಕೇಳು ಮಡದಿ ಲಿಂಗರಾಜಮ್ಮ -

ನಾವು ತಿರಕಾ ಬಂದು, ಮುರಕಂಡು ಉಂಡರೂವೆ
ಅಯ್ಯೋ ಮಡದಿ ಹುಟ್ಟಿದ ಮನೆಯ ಆಸೆ ಮಾಡಬ್ಯಾಡ ॥ ತಂ ॥
ಸೌದೆ ಹೊತ್ತು ಜೀವ್ನ ಕಳೆಯೋಣ ಗಂಡ ಹೆಂಡತೀರು
ಕತ್ತೆಕಾದು ಅನ್ನ ಉಣ್ಣೋವ ॥ ತಂ ॥
ಲೇ ಕೂಲಿ ಮಾಡಿ ಹೊಟ್ಟೆ ಸಾಕುವೆನು ಅಯ್ಯೊ ಮಡದಿ
ಕಂಬಾಳ ಗೇದೊಂದಂಬಾಲಿ ಬುಡುವೇನೊ ॥ ತಂ ॥

ಮನೆಮನೆ ಒಳಗೆ ಲಿಂಗರಾಜಮ್ಮ ಜೋಳಿಗೆ ಹಾಕೊಂಡು ಬೇಡಿಕಂಡು ತಿರಕಂಡು ಬಂದು ಉಂಡರೂ ಕೂಡಾ ಗಂಡ ಹೆಂಡತೀರು, ಹುಟ್ಟುದ ಮನೆ ಆಸೆ ಮಾಡಬ್ಯಾಡ ಲಿಂಗರಾಜಮ್ಮ. ಅಂಬಲಿ ಕುಡಿದು ಕಂಬಳಿ ಹೊದಕೊಂಡ್ರು ಲಿಂಗರಾಜಿ ಸೊಪ್ಪು ತಿಂದು ಒಪ್ಹೊತ್ತಿದ್ರು ಕೂಡಾ ಅಂಬಲಿ ಕುಡದು ವಾಸಮಾಡುದ್ರು ನಿಮ್ಮಪ್ಪುನ ಮನೆ ಆಸೆ ಮರತಬುಡು ಲಿಂಗರಾಜಮ್ಮ. ಅಣ್ಣಯ್ಯನವರ ಮನೆಗೋಗಿ ಲಿಂಗರಾಜಮ್ಮ ಅನ್ನ ತುಪ್ಪ ಊಟ ಮಾಡಿಕೊಂಡು ಆನಂದದಲ್ಲಿ ಸಂತೋಸದಿಂದ ಇರೂದಕಿಂತ ಲಿಂಗರಾಜಿ, ನಿನ್ನ ಗಂಡುನ ಮನೆ ಒಳಗೆ ಲಿಂಗರಾಜಮ್ಮ ಅಂಬಲಿ ಕುಡಕೊಂಡು ಕಂಬಳಿ ಹೊದ್ರು ಕೂಡಾ ನಿಮ್ಮಪ್ಪುನ ಮನೆ ಆಸೆ ಮಾಡಬ್ಯಾಡ ಲಿಂಗರಾಜಿ. ಅಪ್ಪನ ಮನೆ ಆಸೆ ಮರತಬುಡು, ಹೆಡ್ಡನಾಗಲಿ, ಹೆಳವನಾಗಲಿ, ಕುಂಟನಾಗಲಿ, ಕುರುಡನಾಗಲಿ, ಮೂಗನಾಗಲಿ, ನಿನ್ನ ಕೈಹಿಡುದ ಗಂಡನೆ ಹೆಚ್ಚು. ಹೇಳುವೆನು ಕೇಳು ಲಿಂಗರಾಜಮ್ಮ ಈವತ್ತುನ ದಿವಸದಲ್ಲಿ -

ಅಣ್ಣನ್ಯಾರಿಗೆ ತಮ್ಮನ್ಯಾರಿಗೊ ಕೆಟ್ಹೋದ ಮ್ಯಾಲೆ
ಬಂಧು ಯಾರಿಗೆ ಬಳಗ ಯಾರಿಗೊ ॥ ತಂ ॥
ಅಣ್ಣಯ್ಯ ನಿನ್ನವರು ಆದರೆ ಅಯ್ಯೋ ಮಡದಿ
ಅಣ್ಣಯ್ಯನೆಡತಿ ನಿನ್ನವಳಾಗುವಳ ? ॥ ತಂ ॥
ಅಣ್ಣಯ್ನವರು ರಾಜ್ಯ ಕೊಟ್ಟರೆ ಅಯ್ಯೋ ಮಡದಿ
ಅತಗಮ್ಮ ರಾಜ್ಯ ಕೊಡಿಸುವಳ ? ॥ ತಂ ॥
ಅಣ್ಣ ಬದುಕಿದರೆ ಅಣ್ಣುನ ಮಡದಿಗೆ
ತಮ್ಮ ಬದುಕಿದರೆ ತಮ್ಮುನ ಮಡದೀಗೆ ॥ ತಂ ॥
ಬಾಳುತ್ತಿದ್ದರೆ ಸರುನೂರು ಬಳಾ ಹೆಣ್ಣುಮಕ್ಕಾಳೀಗೆ
ಬಾಳಗೆಟ್ಟಮ್ಯಾಲೆ ಯಾರೂ ಇರುವಲ್ಲ ॥ ತಂ ॥
ಹತ್ತಗಾಲುಕೆ ಅಡವಿಲ್ಲಿ ನೆಂಟರು ಅಯ್ಯೋ ಮಡದಿ
ಕೆಟ್ಟಮೇಲೆ ಒಬ್ಬರು ಇಲುವಲ್ಲ ॥ ತಂ ॥

ಲಿಂಗರಾಜಿ, ಬಾಳುವಾಗ ಬದಕೂವಾಗ, ನಾವು ಒಬ್ಬುರಿಗೆ ಬನ್ನಿ ಊಟಮಾಡಿ ಅಂತೇಳಿ ಒಂದಿವ್ಸ ಊಟುಕ ಇಕ್ಕಲಿಲ್ವಲ್ಲ. ಈಗ ಕೆಟ್ಹೋಗಿರುವಾಗ ಲಿಂಗರಾಜಮ್ಮ ಇಕ್ರಿ ಅಂತ ಯಾರ್ನ ಕೇಳೂದು ? ಇಕ್ಕತಾರೆ ಅಂತ ಮತ್ತೊಬ್ರ ಮನೆ ಸೇರಬಾರದು. ಕೆಟ್ಟು ಒಬ್ಬುರ ದಂಡುಕ ಹೋಗಬಾರದು. ನೀ ಕೆಟ್ಟು ತವುರಗೋಗಬೇಕಾದ್ರೆ, ಬಳುಗೆಟ್ಟು ಬಾಗುಲಗ ಹೋಗಬೇಕಾದ್ರೆ ಪಟ್ಟಣ ಆಳೊ ತಂದೆ ಇರುವರ? ಕೊಟ್ಟಣ ಕುಟ್ಟು ತಾಯಿ ಇರುವರ ? ಲಿಂಗುರಾಜಮ್ಮ ತಾಯಿ ಸತ್ತಿ ಏಳೊರಸ, ತಂದೆಯವ್ರು ತಿರೋಗಿ ಹನ್ನೆರಡ ವರಸವಾಯ್ತು. ನೀ ನೋಡುದ್ರೆ ತಾಯಿ ತಿನಕೊಂಡೆ, ತಂದೆ ಕಳಕೊಂಡೆಲ್ಲ? ತಾಯಿತಂದೇರ ಸುಕವಿಲ್ಲ. ಕೆಟ್ಟು ಬಂದವಳೆ ಅಂತೇಳಿ ಬವಣಸೂರ್‍ರ್ಯಾರು ? ನೀ ಹೋಗುವಂಥ ಕಾಲದಲ್ಲಿ, ಹೋಗಿ ಬಂದೀಯ ಮಗ ಅಂತೇಳಿ ಸೌಕರಣೆ ಮಾಡಿ ಕಳಗೂರ್‍ರ್ಯಾರು ಲಿಂಗರಾಜಮ್ಮ? ಅದಕೋಸ್ಕರವಾಗಿ ಪ್ರಪಂಚದಲ್ಲಿ ಹೆಣ್ಣು ಮಕ್ಕಳಿಗೆ ಹೇಳುವೆನು ಕೇಳುವವಳಾಗು-

ಲೇ ಪಟ್ನ ಆಳೂವ ತಂದೆ ಇಲದಿದ್ರೂನೆ ಹೆಣ್ಣುಮಕ್ಕಳಗೆ
ಕೊಟ್ಟಣ ಕುಟ್ಟುವ ತಾಯಮ್ಮಿರಬೇಕು ॥ ತಂ ॥
ಲೇ ದೇಸನಾಳುವ ತಂದೆ ಇಲದಿದ್ರೂವೆ ಹೆಣ್ಣುಮಕ್ಕಳಗೆ
ಬೂಮಿ ಸಮಾನ ತಾಯಮ್ಮಿರಬೇಕು ॥ ತಂ ॥
ನಿನಗೆ ಸೌಕರಣೆ ಮಾಡೋ ತಂದೆ ಇಲ್ಲದಿದ್ರೂವೆ
ಕರಣ ಇಡುವ ತಾಯಮ್ಮಿರಬೇಕು ॥ ತಂ ॥

ಮಡದಿ ಲಿಂಗರಾಜಿ, ಕೆಟ್ಟು ನೀ ತೌರಗೋದ್ರೆ, ಬಾಳಗೆಟ್ಟವರ ಬಾಕಲಗೋದ್ರೆ ನವನಾಲ ಒಂಬತ್ತು ತಿಂಗಳು ಹೆತ್ತ ತಾಯಮ್ಮಿದ್ರೆ ನಿನ ಮೊಕ ನೋಡಬುಟ್ಟು ಪರಮಾತ್ಮ, ಒಬ್ಬ ಮಗಳಂತೇಳಿ, ಸಾಕಿ ಸಲವಿ ಭಗವಂತ ನನ್ನ ಕಣ್ಣೆದುರಿಗೆ ಬಾಳಲಿ ಬದುಕಲಿ ಅಂತೇಳಿ, ದೊಡ್ಡೋರ ಮನೆಗೆ ಕೊಟ್ಟು ಲಗ್ನ ಮಾಡುದರೆ, ನನ್ನ ಮಗಳುಗೆ ಏನ ಬಡಸ್ತಾನ ಬತ್ತೊ ಅಂತೇಳಿ, ಬಂದ್ಯವ್ವ ಮಗಳೆ ಅಂತೇಳಿ, ನಿನ್ನ ತಾಯಮ್ಮನವರು ಕತ್ತ ತಬಕೊಂಡು ಕಣ್ಣೀರ ಕೆಡಗುತ್ತ ಹೊಟ್ಟೆಉರಕೊಂಡು ಕಳ್ಳುಕರಕ್ ಅಂದಬುಟ್ಟು ನಿಂತಾಯಿ ಹೇಳುವೆನು ಕೇಳುವಳಾಗು ಲಿಂಗರಾಜಮ್ಮ -

ಕೊಟ್ವಾಣ ಕುಟ್ಟಿ ಕೂಲಿ ಮಾಡಿಕೊಂಡು
ನಿಂ ತಾಯಮ್ಮನವರು
ಹೊಟ್ಟೆ ನೋಡಿ ಊಟಕ್ಕೆ ಕೊಡತಿದ್ದ ॥ ತಂ ॥
ಹೊಟ್ಟೆ ನೋಡಿ ಅನ್ನ ಕೊಡತಿದ್ದಳೊ
ನಿಂ ತಾಯಮ್ಮನವರು
ಮೈಯ ನೋಡಿ ಬಟ್ಟೆ ಕೊಡತಿದ್ದ ॥ ತಂ ॥
ಉಟಗೋಳ ಸೀರೆ ನಿನಗೆ ಉಡಸತಿದ್ದಾಳೊ
ನಿಂ ತಾಯಮ್ಮನವರು
ನೀರ ಕಾಯ್ಸಿ ನೀರ ಹುಯ್ಯತಿದ್ದ ॥ ತಂ ॥

ಮಂಡೆ ನೋಡಿ ಎಣ್ಣೆ ಕೊಡತಿದ್ದ, ಕೈ ನೋಡಿ ಬಳೆ ತೊಡಸತಿದ್ದ ಲಿಂಗರಾಜಮ್ಮ ನಿಂ ತಾಯಮ್ಮ. ಪಟ್ನ ಆಳೂವ ತಂದೆ ಇದ್ರೆ ಏನವ್ವ ಮಗಳೆ, ನಿನಗೆ ಅಪ್ಪುನ ಮನೆ ತಾಯಿಮನೆ ಚಿರಂಜ ಅಲ್ಲವ್ಮ. ನಿನ್ನ ಗಂಡನ ಮನೆ ಚಿರಂಜಿ ಹೋಗು ಅಂತೇಳಿ ಕೈಲಿ

ಮೂರುಹಣವಾಗಲಿ, ದುಡ್ಡನಾಗಲಿ ಕೊಟ್ಟು ಕಳಗಸತ ಇದ್ರು. ತಾಯಿಲ್ದ ತವುರಿಗೆ ಹೋಗಬ್ಯಾಡ. ತಂದಿಲುದ ಪಟ್ನ ಸೇರಬ್ಯಾಡ. ಲಿಂಗರಾಜಮ್ಮ ಹೇಳುವೆನು ಕೇಳುವಳಾಗು. ನನ್ನ ಮಾತು ನೀ ಮೀರೋದ್ರೆ ಲಿಂಗರಾಜಮ್ಮ ನಿಮ್ಮಣ್ಣಯ್ಯನ ಮನೆ ಒಳಗೆ ಏನಂಥ ಕುಟುಕುಮಾತು ಬತ್ತಾದೆ ಅಂದ್ರೆ. ನನ್ನ ಪಾದುಕ ಅಪಮಾನ ತರತಿ ಅಂದ್ರೆ, ಎಂಥ ಕೆಟ್ಟಮಾತು ಪಾಪುದ ಮಾತು ಬರತಾದೆ ಅಂದ್ರೆ, ಲಿಂಗರಾಜಿ ನೀ ಕೆಟ್ಟು ತೌರಗೋದ್ರೆ ಬಾಳೋರ ಮನೆ ಬಾಕುಲಗೋದ್ರೆ ನಿಮ್ಮಣ್ಣಯ್ಯನ ಹೆಂಡತಿ ನಿಂ ಅತಕಮ್ಮನವರು, ನಿನ್ನ ತಲೆಮ್ಯಾಲೆ ಗಂಟು ಪೊಟ್ನ, ದುಡ್ಡು ಕಾಸ ಕಂಡೆ ಬಂದ್ಯ ಅತಕಮ್ಮ ಅಂತೇಳಿ ಕಿಲಕಿಲನ ನಗಾಡಕೊಂಡು ತಲೆತುಂಬ ಸರಗಾಕೊಂಡು ಪಾದಕ ನೀರ ಕೊಡುವಳು. ಲಿಂಗರಾಜಮ್ಮ ಪಾದತೊಳೆದು ಪಟ್ಟಾಭಿಷೇಕ ಮಾಡತಾಳೆ. ಒಂದಿವ್ಸ, ಎರಡ ದಿವ್ಸ, ಮೂರದಿವ್ಸ ಚೆನ್ನಾಗಿರತಾಳೆ. ಯಾರು ? ನಿಮ್ಮಣ್ಣಯ್ಯನ ಹೆಂಡತಿ. ನಿನ್ನ ತಲೆಮ್ಯಾಲೆ ಗಂಟುಪೊಟ್ನ ದುಡ್ಡು ಕಾಸಿಲ್ದೆ ಹೋದ್ರೆ ನಾಕ ದಿವ್ಸ ಆದಮ್ಯಾಲೆ ನಾಗರಾವು ವಿಸ ತುಂಬದಂಗೆ ತುಂಬಕೊಂಡು ಹೊಟ್ಟೆ ಒಳಗೆ ಲಿಂಗರಾಜಮ್ಮ ನೋಡದ್ಯ ಈ ನನ್ನ ಸವತಿಮುಗಳ ಕಾಸಿದ್ರೆ ಗಂಡುನ ಮನೆಯೋ ಕೆಟ್ರೆ ಅಣ್ಣುನ ಮನೆಯೊ, ಬಾಳಗೆಟ್ಟು ನನ್ನ ಮನೆ ಬಾಕುಲಗೆ ಬಂದವಳಲ್ಲ. ನನ್ನ ಬಾಳುಗ ಮಿತ್ತಾಗಿ ಬಂದವಳೆ ಅಂತೇಳಿ ಲಿಂಗರಾಜಮ್ಮ -

ಹೆಣ್ಣೆ ಗಂಡುಗಾತಿ ಗರುಗಾತಿಯು ನಿಮ್ಮಣ್ಣಯ್ಯನ ಹೆಂಡತಿ
ಸಿಣಕ ಪುಣಕನೆ ಮೇಲಕಾರುವಳು ॥ ತಂ ॥
ಕಂಡಗ ತಿಂದರು ಗಂಡ ತಡಿಬಲ್ಲ ನಿಮ್ಮಣ್ಣಯ್ನೆಡತಿ
ಒಕ್ಕಳ ರಾಗಿ ಲಕ್ಕಕೆ ಕರೀತಾಳೆ ॥ ತಂ ॥
ನಿನ್ನ ಮೊಕವ ನೋಡಿದ ಕೂಡಲೆ ನಿಮ್ಮಣ್ಣಯ್ನೆಡತಿ
ಅತಮೋರೆ ಇತಮೋರೆ ತಿರಿವಳೊ ॥ ತಂ ॥
ಜಡಜಡದಿ ಮೋರೆ ತಿರಿವಳೊ ನಿಮ್ಮತುಗಮ್ಮ
ಮೋರೆ ತಿರಗಿ ಕದವ ಹೊಚ್ಚುವಳೋ ॥ ತಂ ॥
ಕುಕ್ಕೆ ಮ್ಯಾಲೆ ಮೊರವ ಇಡುವಳೊ ನಿಮ್ಮತುಗಮ್ಮ
ತಣಗೆ ಮ್ಯಾಲೆ ಚಂಬ ಇಡುವಳೊ ॥ ತಂ ॥
ಹೆಣ್ಣೆ ಮಡಕೆ ಮ್ಯಾಲೆ ಸಟಗ ಬಡಿವಳೊ ನಿಮ್ಮಣ್ಣಯ್ನೆಡತಿ
ಕುಂಡಿ ಬಡಕೊಂಡು ಕ್ವಾಣೆಗೋಗುವಳೋ ॥ ತಂ ॥
ಹೆಣ್ಣೆ ಬಾಳುರು ಮನೆ ಬಾಕುಲಗೋದರೆ ನಿಮ್ಮತ್ತುಗಮ್ಮ
ಬಲದ ಕೈಗೆ ಬರಲ ಕೊಡುವಳೊ ॥ ತಂ ॥
ಅವಳು ಬಾಗಲ ಕಸವ ಗುಡಸು ಎನುವಳೊ ನಿಮ್ಮಣ್ಣಯ್ನೆಡತಿ
ಕಂಕಳಗೆ ಒಂದ ಮಕರಿ ಕೊಡುವಳೊ ॥ ತಂ ॥

ಹಳೆ ಹರಬಿ ಕಂಕಳಿಗೆ ಕೊಟ್ಟಬುಟ್ಟು ಬಾವಿಹಗ್ಗ ಬಲಗೈಗೆ ಕೊಡುವಳು. ಲಿಂಗರಾಜಿ ನನ್ನ ಕಂದನ ಎತ್ಕೊಂಡು ನಿಂ ತಾಯಿ ಮನೆಗೋದರೆ ನಿಮ್ಮಣ್ಣಯ್ನೆಡತಿ ಏನ ಹೇಳತಾಳೆ ಗೊತ್ತ? ಅತಗಮ್ಮ ನನ್ನ ಕಂದ ವೀರಣ್ಣ ಮೂರತಿಂಗಳ ಕಂದುನಿಗೆ ತುಪ್ಪನ್ನ ಕೊಡು ಅಂತ ಕೇಳದರೆ, ಏನಲೆ ಲಿಂಗರಾಜಮ್ಮ ನಿನ ಮಗುನಿಗೆ ತುಪ್ಪ ಅನ್ನ ಕೊಡಬೇಕಾದ್ರೆ ನನ್ನ ಮನೆ ಒಳಗೆ ಅಕ್ಕಿಬೇಳೆ ಏನೂ ಇಲ್ಲ ಲಿಂಗರಾಜಮ್ಮ ಎನುತೇಳಿ ಏನ ಮಾಡುತಾಳೆ ಗೊತ್ತಾ -

ಲೇ ಕುಟ್ಟೋ ಒನಕೆ ಬಲಗೈಗ ಕೊಡುವಳೊ ನಿಮ್ಮತುಗಮ್ಮ
ಕೊಟ್ಣ ಕುಟಸಿ ಕೂಲಿ ಮಾಡುಸುವಳೊ ॥ ತಂ ॥
ಅವ್ವ ಕೇರೂಕೊಂದ ಮೊರವ ಕೊಡುತಾಳೆ ನಿಮ್ಮತುಗಮ್ಮ
ಬೀಸೆಕಲ್ಲಿನ ಮುಂದಕೆ ಬುಡುವಳೊ ॥ ತಂ ॥
ಅವ್ವ ಹಜ್ಜಾರದ ಮ್ಯಾಲೆ ಹಾಳೆ ಹಾಕತಾಳೆ ನಿಮ್ಮಣ್ಣಯ್ನೆಡತಿ
ಹಾಳೆಮ್ಯಾಲೆ ಅಂಬಾರಿ ಹುಯ್ವಳೊ ॥ ತಂ ॥

ಬ್ಯಾಡ ಲಿಂಗರಾಜಮ್ಮ ನನ್ನ ಮಾತ ಕೇಳು. ನಿನ್ನನ್ನು ನೀನೆ ತಿಳೀಲಿಲ್ಲ. ಹೇಳೂರು ಮಾತ ಕೇಳಲಿಲ್ಲ. ಮೂರ್ಖ ಬುದ್ಧಿ ಬುಡಲಿಲ್ಲ. ಗಂಡನಾಡುವ ಮಾತ ಕೇಳಕೊಂಡು ಎಳೆ ಲಿಂಗರಾಜಮ್ಮ ದುಕ್ಕ ಮಾಡಿಕೊಂಡು ಸ್ವಾಮಿ, ಕೆಟ್ಟು ತವುರಗೋಗಬ್ಯಾಡ ಬಾಳಗೆಟ್ಟೋರ ಬಾಕುಲಗೋಗಬ್ಯಾಡ ಅಂತೇಳತೀರಲ್ಲ ಸ್ವಾಮಿ, ಬಾಳತಿದ್ರೆ ಗಂಡುನ ಮನೆ ಬಾಳಗೆಟ್ರೆ ಅಪ್ಪುನ ಮನೆ ಅಲ್ವ ಸ್ವಾಮಿ? ಕತ್ತೆ ಕೆಟ್ರೆ ಪಾಳುಗ್ವಾಡೆ, ಹೆಣ್ಣು ಕೆಟ್ರೆ ತಾಯಿತವರು ಗುರುದೇವಾ. ಚಿನ್ನ ಕೆಟ್ರೆ ವಾಜುರಮನೆ, ಬೆಳ್ಳಿ ಕೆಟ್ರೆ ಸೆಟ್ಟರ ಮನೆಯಲ್ವೆ ಗುರುದೇವಾ? ಬಟ್ಟೆ ಮಾಸುದರೆ ಅಗಸರ ಪಾಲು, ದೇಹ ಹೋದ್ರೆ ಮಸಣದ ಪಾಲಲ್ವೆ ಸ್ವಾಮಿ, ನನ್ನ ಕಂದ ವೀರಣ್ಣನ್ನ ಕಂಕಳಲ್ಲಿ ಎತ್ಕೊಂಡು ಹೋಗಿ ನನ್ನ ಬಂಗ ಬಡುಸ್ತಾನ ನಮ್ಮಣ್ಣಯ್ನವರ ಹತ್ರ ಹೇಳಕೊಂಡ್ರೆ, ನಮ್ಮಣ್ಣಯ್ಯನವರು ನಂ ತಾಯಿ ತೀರೋದಾಗ ಒಂದು ಮಾತು ಹೇಳುದ್ರು. ಲಿಂಗರಾಜಮ್ಮ ನೀನು ಕೆಟ್ಟಂಥ ಕಾಲದಲ್ಲಿ, ಬಡಸ್ತಾನ ಬಂದಂಥ ಕಾಲದಲ್ಲಿ, ಲಿಂಗರಾಜಮ್ಮ ತಾಯಿ ತಿನಕೊಂಡೆ, ತಂದೆ ಕಳಕೊಂಡೆ ಅಂತೇಳಿ ಅಪ್ಪುನ ಮನೆ ಮರೀಬ್ಯಾಡ. ತಾಯಿಮನೆ ತೊರಿಬ್ಯಾಡ ಕಣವ್ವ. ಅಣ್ಣನಾಸೆ ಮರೀಬ್ಯಾಡ ಕಣಮ್ಮ. ನಿನಗೆ ಬಂಗ ಬಡಸ್ತಾನ ಬಂದಂಥ ಕಾಲದಲ್ಲಿ ನನ್ನ ಮನೇಗಂಟ ಬಂದೋಗವ್ವ. ನನ್ನ ಕೈಲಾದಷ್ಟು ಸಹಾಯ ಮಾಡತೀನಿ ಅಂದ್ರು. ಅದೇ ಪ್ರಕಾರವಾಗಿ ನಮ್ಮಣ್ಣಯ್ನವರ ಹತ್ರ ಹೋಗಿ ನನ್ನ ಬಡಸ್ತಾನ, ಕಷ್ಟ ಸುಖ ಹೇಳಿಕೊಂಡ್ರೆ ಎಂದಿಗು ಮೋಸ ಮಾಡೂರಲ್ಲ. ಸ್ವಾಮಿ ಹೇಳುವೆನು ಕೇಳುವರಾಗಿ -

ಅಪ್ಪಾ ಆನೆಮ್ಯಾಗಳ ಹಣವ ಹೊಡಿವರೊ ನಮ್ಮಣ್ಣಯ್ನವರು
ಎತ್ತಿನ ಮ್ಯಾಗಳ ಮುತ್ತ ಹೊಡಿವರೊ ॥ ತಂ ॥
ಗಾಡಿ ಮ್ಯಾಗಳ ಜಾಡಿ ಹೊಡಿವರೊ ನಮ್ಮಣ್ಣಯ್ನವರು
ಒಂಟೆ ಮ್ಯಾಗಳ ಹೊನ್ನ ಹೊಡಿವರೊ ॥ ತಂ ॥

ನಮ್ಮಣ್ಣಯ್ಯ ದಳವಾಯಿ ಪುಟ್ಟರಸು ಅಂದರೆ ಭಾರತ ದೇಸವಾಳುವ ಮೈಸೂರು ರಾಜ್ಯದಲ್ಲಿ ಸ್ವಾಮಿ ಚಾಮುಂಡಮ್ಮ ನೀನೇ ಗತಿ ಅಂತೇಳಿ, ನಾಕುರಾಜ್ಯವನ್ನಾಳತಾವ್ರೆ. ಯಾವ್ಯಾವ ರಾಜ್ಯಭಾರ ಅಂದ್ರೆ ಗುರುದೇವಾ -

ಕುಸಿಗೆ ಒಂದು ಕುಸಲನಗರವೂ ನಮ್ಮಣ್ಣಯ್ಯನವರ
ಪ್ರೀತಿಗೆ ಒಂದು ಪಿರಿಯಪಟ್ಟಣ ॥ ತಂ ॥
ಬೆಡಗಿನಲ್ಲಿ ಕೊಡಗು ರಾಜ್ಯವು ನಮ್ಮಣ್ಣಯ್ನವರ
ಮಾತಿಗೆ ಒಂದ ಮೈಸೂರು ಜಿಲ್ಲೆಯು ॥ ತಂ ॥

ಐವತ್ತಲಕ್ಷ ಸಂಬಳೀಕರು, ಇಪ್ಪತ್ತಲಕ್ಷ ಕೂಲಿಯಾಳು, ದಂಡುದಾಳಿ ಮಂದಿ ಮಾರ್ಬಲ ಕಟಗೊಂಡು ರಾಜ್ಯಭಾರವಾಳತಾವ್ರೆ ಸ್ವಾಮಿ. ನಮ್ಮಣ್ಣಯ್ನವರು ಮೈಸೂರರಾಜ್ಯದಲ್ಲಿ ಏನೇನ ರಾಜ್ಯಭಾರ ನಡಸಕೊಂಡು ಏನೇನ ದಾನಧರ್ಮ ಮಾಡತಾವ್ರೆ ಅಂದ್ರೆ

ಬಡೂರಬಗ್ಗರನ್ನೆಲ್ಲ ಕರುದು ಕುಂಬಾರಗೇರಿ, ವಾಜರಗೇರಿ, ಸಂಬಳಗೇರಿ ಒಳಗ ಗುರುದೇವಾ ದಾನಕೊಡುವ ಪಟ್ಟಿ ಕೇಳಿವ್ನಿ. ಅನ್ನಸತ್ರ ಮಡಗಸವ್ರೆ. ಏನೇನ ದಾನ ಮಾಡತಾವ್ರೆ ಅಂದ್ರೆ -

ಅಪ್ಪಾ ಹೊಟ್ಟೆಗಿಲದ ಬಡವರ ನೋಡಬುಟ್ಟು ನಮ್ಮಣ್ಣಯ್ನವರು
ಅಕ್ಕಿ ಬೇಳೆ ದಾನ ಮಾಡುವರು ॥ ತಂ ॥
ಸೀರೆ ಇಲ್ಲದ ಸ್ತ್ರೀಯರ ನೋಡಬುಟ್ಟು ನಮ್ಮಣ್ಣಯ್ನವರರು
ಜವಳಿ ತರಸಿ ದಾನ ಮಾಡುವರು ॥ ತಂ ॥

ನನ್ನ ಕಳಗದ್ರೆ ಕಳಗಬೌದು, ಕಳಗದಿದ್ರೆ ಸ್ವಾಮಿ ನಿಂ ಪಾದುಕ ಬಿದ್ದು ಪ್ರಾಣಬುಡುವೆನು ಗುರುದೇವಾ. ವಜ್ರನುಂಗಿ ವಸ್ತ ಬುಡತೀನಿ. ನಿಮ್ಮ ಫಿರಂಗಿ ಬಾಯ್ಗೆ ಶಿರವ ಕೊಡಶೀನಿ ಅಂತೇಳುದ್ಲು. ಗಂಡ ಹೇಳೂಗಂಟ ಹೇಳಿದ. ಲಿಂಗರಾಜಮ್ಮ ಕೇಳಲಿಲ್ಲ. ಗಂಡುನ ಮಾತ ಮೀರಬುಟ್ಟು ಕೆಟ್ಟು ತವರಗೋಗಬೇಕು. ಬಾಳಗೆಟ್ಟು ನವ್ಮಣ್ಣಯ್ನೋರ ಬಾಕುಲಗೋಗಬೇಕು ಅಂತೇಳಿ, ಅರ್ದ ರಾಜ್ಯವನ್ನು ಕೇಳಿ ಬರಬೇಕಂತೇಳಿ ಲಿಂಗರಾಜಮ್ಮ ಆಡುವಂಥ ಕಂದ ವೀರಣ್ಣನ ನೋಡಿಕೊಂಡು -

ಬಾರೋ ಬಾರೊ ಕಂದ ವೀರಣ್ಣ ಅಯ್ಯೋ ಮಗನೆ
ಸ್ವಾದುರುಮಾವನ ಮನೆಗೆ ಹೋಗಾನ ॥ ತಂ ॥

ಗುಡಗುಡನೆ ಓಡಿಬಂದ ಮಗನ ಮುದ್ದಾಡಿ ಎತ್ಕೊಂಡು ತಾಯಿ ಕತ್ನ ಮಗ ತಬ್ಕೊಂಡು ಮಗನ ಕತ್ನ ತಾಯಿ ತಬ್ಕೊಂಡ್ರು. ಆರತಿಂಗಳ ಹಸುಳೆ ಕಂದ ವೀರಣ್ಣ ತಾಯಿ ಕೂಡ ಏನಂಥ ಹೇಳತಾವ್ನೆ ಅಂದ್ರೆ ತಾಯಾಡುವ ಮಾತ ಕೇಳಕೊಂಡು ಆಕಾಸವೇಣಿ ಗುಡಗುಡನೆ ಓಡಬಂದು ಆರತಿಂಗಳ ಹಸಳೆ ಮಾವನ ಮನೆಗೆ ಹೋಗಾನ ಬಾಪ್ಪ ಅಂತೇಳತೀಯಲ್ಲಮ್ಮ, ಯಾತುಕ ತಾಯಿ? ಅಂದ. ಕಂದ ನಿಂ ತಂದೆಗೆ ಬತ್ತ ಬಾಳ ಬಡುಸ್ತಾನ. ನಿಂ ಮಾವುನಗ ಬತ್ತ ಬಾಳ ದೊಡ್ಡುಸ್ತಾನ. ಕಂದ ನಿಂ ತಂದೆ ಆಳೂದು ಮಣ್ಣಿನ ಸೀಮೆ. ನಿಂ ಮಾವಯ್ಯ ನೋರಾಳೂದು ಚಿನ್ನುದ ಸೀಮೆ ಕಂದ. ಅದಕೆ ಮಾವಯ್ನೋರ ಮನೆಗೋಗಬೇಕು ಅಂದ್ರು. ಅಮ್ಮಾ ಕೆಟ್ಟು ತವುರಗೋಗಬೇಕು ಬಾಳಗೆಟ್ಟವರ ಬಾಕುಲಗೋಗಬೇಕು ಅಂತೀಯಲ್ಲಮ್ಮ, ಹೇಳುವೆನು ಕೇಳು ತಾಯಿ -

ಹರಗದಿರದ ತ್ವಾಟ ಯಾಕವ್ವ ತಾಯಮ್ಮನವರೆ
ಮಂಗವಿಲ್ಲದ ವನವು ಯಾಕವ್ವ ? ॥ ತಂ ॥
ಅಜ್ಜಿ ಇಲ್ಲದ ಮನೆಯು ಯಾಕಮ್ಮ ಅಯ್ಯೋ ತಾಯಿ
ಮಜ್ಗೆ ಇಲ್ಲದ ಊಟ ಯಾಕವ್ವ ? ॥ ತಂ ॥
ಹಂತವಿರದ ಊಟ ಯಾಕಮ್ಮ ತಾಯಮ್ಮನವರೆ
ಜಂತವಿಲ್ಲದ ಸೀರೆ ಯಾಕವ್ವ ? ॥ ತಂ ॥

ಜಲವಿಲ್ಲದ ಬಾವಿ, ಮಕ್ಕಳಿಲ್ಲದ ಮನೆ, ಒಕ್ಕಲಿಲ್ಲದ ಊರು, ಲಿಂಗವಿಲ್ಲದ ದೇವಸ್ಥಾನ, ಜಂಗುಮರಿಲ್ಲದ ಮಠ, ಯಾತುಕಮ್ಮ? ಹೇಳುವೆನು ಕೇಳು ತಾಯಿ. ಸ್ವಾದುರುಮಾವನ ಮನೆಗೋಗಬೇಕು ಅಂತ ಹೇಳತೀಯಲ್ಲ, ನನ್ನ ಪಡದಂಥ ತಾತನಿಲ್ಲ, ಎತ್ಕೊಂಡು ಸಾಕಿರುವಂಥ ಅಜ್ಜಮ್ಮನಿಲವಲ್ಲಮ್ಮ? ಇವುತ್ತುನ ದಿವುಸದಲ್ಲಿ ಅಜ್ಜಿ ಇಲುದ ಮನೆಗೆ ಹೆಜ್ಜೆ ತಾನೆ ಹೆಂಗಿಡೊದಮ್ಮ? ತಾತನಿಲ್ಲದ ಮನೆಲಿ ಮಾತ ತಾನೆ ಹೆಂಗಾಡುದಮ್ಮ ? ಹೇಳುವೆನು

ಕೇಳವ್ವ -

ಅವ್ವಾ ಮಾವಯ್ಯ ನನ್ನವನು ಆದಾರೆ ತಾಯಮ್ಮ
ಅತ್ತಮ್ಮ ನನ್ನವಳು ಆದಾಳ ? ॥ ತಂ ॥
ಮಾವಯ್ಯನವರು ರಾಜ್ಯ ಕೊಡಬೋದು ಅಯ್ಯೋ ತಾಯಿ
ಅತ್ತಮ್ಮನವರು ರಾಜ್ಯ ಕೊಡುವರ ? ॥ ತಂ ॥

ಮಾವ ಬದುಕಿದರೆ ಮಾವನ ಹೆಂಡತಿ ಮಕ್ಕಳಿಗೆ, ತಂದೆಯವರು ಬದುಕದರೆ ನಿನಗು ನನಗು ಅಲ್ವೆ ತಾಯಮ್ಮ? ಕೆಟ್ಟು ತವುರಗೋಗಬಾರದು. ಬಾಳಗೆಟ್ಟು ಬಾಕುಲಗೋಗಬಾರದು. ಈ ಪ್ರಕಾರವಾಗಿ ಕಂದ ವೀರಣ್ಣ ಮಾತಾಡಿದಾಗ ಲಿಂಗರಾಜಮ್ಮ ಈ ಕಡೆ ಮಗುನ ಮಾತ ಮೀರಬುಟ್ಟಳು. ಆ ಕಡೆ ಗಂಡುನ ಮಾತ ಮೀರುಬುಟ್ಟಳು. ನಾಳೆ ಬರೂಕಷ್ಟ ಗೊತ್ತಾಗನಿಲ್ಲ. ಲಿಂಗರಾಜಮ್ಮ ಕೆಟ್ಟು ತವುರಗೋಗಬೇಕು. ಬಾಳಗೆಟ್ಟು ಬಾಕುಲಗೋಗಬೇಕು ಅಂತೇಳಿ ಬಾಳ ಬಂಗ ಬಡಸ್ತಾನದಲ್ಲಿ ತಾಯಿ ರಾಜರ ಮಗಳಾಗಿದ್ದು ದೊರೆ ಮಡದಿಯಾಗಿದ್ದು ಯಾವ ಥರಾ ಬರತಾವಳೆ ಅಂದ್ರೆ -

ಅವ್ರು ಪಟ್ಟೆಸೀರೆ ಸವುರಸಿ ಉಟಕೊಂಡ ಲಿಂಗರಾಜಮ್ಮ
ಹರಕಲ ಮುರಕಲ ರವಿಕೆ ಇಕ್ಕೊಂಡ ॥ ತಂ ॥

ಪಟ್ಟೆಸೀರೆ ಸವುರಸಿ ಉಟಕೊಡು, ಹರದೋಗಿರುವ ರವಿಕೆ ಇಕ್ಕಂಡು, ಲಿಂಗರಾಜಮ್ಮ ಮಂಡೆಗಿಷ್ಟು ಎಣ್ಣೆ ಇಲುದೆ ತಾಯಿ ಹಂಗೆ ಎತ್ತಿ ಎಣಗಂಟ ಊಡಕೊಂಡು, ಕೈಗೆ ಬಳೆ ಇಲ್ಲದೆ ಮಣ್ಣಿನ ಬಳೆ ತೊಟ್ಕೊಂಡು ತಾಯಿ, ದೊರೆ ಮಡದಿಯಾಗಿದ್ದು, ರಾಜರ ಮಗಳಾಗಿದ್ದು, ಬಾಳ ಬಂಗ ಬಡುಸ್ತಾನದಲ್ಲಿ ಆಗಲೀಗ ಕಂದ ವೀರಣ್ಣುನ್ನ ಏನಂಥ ಶಿಸ್ತು ಸುಂಗಾರ ಮಾಡತಾವ್ಳೆ ಅಂದ್ರೆ -

ಅವಳು ಕುಂಚಕ, ಜೋಡು ಕುಪಾರಿ ಧರುಸವಳೆ
ಮಗನೀಗೆ ಹಾಗಲಿ ಮೇಗಾಯಿ ಧರುಸವಳೆ ॥ ತಂ ॥
ಕುಂಚಕ ಜೋಡು ಕುಪಾರಿ ಧರಸಕೊಂಡು ಲಿಂಗರಾಜಮ್ಮ
ಸರಗೆಜ್ಜೆ ಕಿವಿಲ್ಲಿ ಧರುಸಕೊಂಡ ॥ ತಂ ॥
ಕಂಕಳಲ್ಲಿ ಕಂದನ ಎತಕೊಂಡು ಲಿಂಗರಾಜಮ್ಮ
ಗಂಡುನ ಪಾದಕ್ಕೆ ಶರಣ ಮಾಡಕೊಂಡ ॥ ತಂ ॥

ಲಿಂಗರಾಜಮ್ಮ ಅವ್ರ ಗಂಡುನ ಮನೆದೇವತೆ ಬೇಡತಾವ್ಳೆ. ಗಂಡುನ ಮನೆ ದೇವತೆ ಉರಿ ಮಸಣಮ್ಮ. ಎಲ್ಲಾ ದೇವಮಾನ್ಯರುಗು ದೇವತೆಗಳಿಗು ಎರಡ ನೇತ್ರವಾದರೆ, ನಿನಗೆ ಮೈಯೆಲ್ಲ ಕಣ್ಣಲ್ಲಮ್ಮ? ರೋಮ ರೋಮವೆಲ್ಲ ಕಣ್ಣಲ್ಲಮ್ಮ ? ಪರದೇಸ ನನ್ನ ವಸ ಮಾಡಮ್ಮಾ ಎನುತೇಳಿ, ಅಣ್ಣುನ ಮನೆ ದೇವತೆ ಚಂಡಿ ಚಾಮುಂಡೇಶ್ವರಿ, ಕೆಟ್ಟು ತವರಿಗೆ ಬರತೀನಿ, ಬಾಳಗೆಟ್ಟು ಬಾಕುಲಿಗೆ ಬರತೀನಿ ಎನುತೇಳಿ ಲಿಂಗರಾಜಮ್ಮ ಯಾವಾಗ ದುಕ್ಕವನ್ನು ಮಾಡಿಕೊಂಡು ಕಂದನ ಎತ್ಕೊಂಡು ಹಿಂದಲ ಹೆಜ್ಜೆ ಎತ್ತಿ ಮುಂದುಕ ಮೂರ್ಹೆಜ್ಜೆ ಮಡಗೀದಾಳೆ. ಆ ಪರಮಾತ್ಮ ಶನಿದೇವರಾಗಿದ್ದವನು ಹೆಚ್ಚಿನ ದೇವ್ರು. ಲೋಕಕೆ ದೊಡ್ಡವನು ಸೂರ್ಯದೇವ ಸುಕುಮಾರ ಕಾಗೆವಾನ ಕಲಿಪುರುಷ ಸನಿದೇವ್ರು, ಗಂಡನ ಜಲ್ಮರಾಸಿಲಿದ್ದವನು, ಮಡದಿ ಹೋಗೂವಾಗ ನೋಡಬುಟ್ಟು ಆಗ ಏನಂಥ ಮಾತಾಡತಾವ್ರೆ

ಅಂದ್ರೆ ಲಿಂಗರಾಜಮ್ಮ ಗಂಡ ಎಷ್ಟೇ ಹೇಳುದ್ರು ಕೂಡವಾಗಿ ಮೀರಬುಟ್ಟು ಗಂಡನ ಮಾತ. ಹೋಯ್ತಾ ಇದ್ದೀಯಲ್ಲ ನಾಳೆ ದಿವ್ಸ ನಿನಗೆ ಕೇಡಗಾಲ ತರತ್ತೀನಿ. ಅವಮಾನ ತರತೀನಿ. ಈಗ ನಿನ್ನ ಜಲ್ಮರಾಶಿಗೆ ನಾನೇ ಬರತೀನಿ ಅಂತೇಳಿ ಪರಮಾತ್ಮ ಗಂಡನ ಜಲ್ಮರಾಶಿ ಏಳನೆ ರಾಸಿಯನ್ನು ಬುಟ್ಟು ಮಡದಿ ಜಲ್ಮರಾಶಿ ಎಂಟನೆ ರಾಸಿಗೆ ಬರತಾವ್ರೆ. ಲಿಂಗರಾಜಮ್ಮ ಯಾವಾಗ ಕಂದನ ಎತ್ಕೊಂಡು ಬಲಗಾಲ ಮುಂದೆತ್ತಿ ಎಡಗಾಲೆತ್ತಿ ಹಿಂದಗಾಡೆ ಮಡಗೀದಾಳೆ ಆಗ ಪರಮಾತ್ಮ ಜಲ್ಮರಾಶಿಗೆ ಬರಲಾಗಿ ಬಲಭುಜ ಆದರತಾ ಇರುವದು. ಬಲ ಹುಬ್ಬು ಕುಣೀತಾ ಇರುವುದು ಲಿಂಗರಾಜಮ್ಮನಿಗೆ ಎರಡನೆ ಬಾಕಲ ಕಡದು ಮೂರನೆ ಬಾಕಲಿಗೆ ಬರುವಾಗ –

ಅವಳ ಮೂಗುನ ಮೇಸ್ರಿ ಮುರದು ಬಿಳುತಲ್ಲ ಲಿಂಗರಾಜಮ್ಮ
ವಜ್ರಮೋಲೆ ಕಸದು ಬಿಳುತಲ್ಲ ॥ ತಂ ॥
ನಾಕು ಬಾಗಲು ಕಡದು ಬರುವಾಗ ಲಿಂಗರಾಜಮ್ಮ
ನತ್ತಿಮ್ಯಾಲೆ ಗೌಳಿ ನುಡದಿತ್ತು ॥ ತಂ॥
ನತ್ತಿ ಮ್ಯಾಗಳ ಗೌಳಿ ನುಡದಿತ್ತು ಲಿಂಗರಾಜಮ್ಮ
ಗಿಲೆಮ್ಯಾಲೆ ಪಲ್ಲಿ ಬಿದ್ದಿತ್ತು ॥ ತಂ ॥
ಆರು ಬಾಗಲು ಕಡಮು ಬರುವಾಗ ಲಿಂಗರಾಜಮ್ಮ
ಬಲಗಾಲು ಎಡರಿ ಬಿಡುತಲ್ಲ ॥ ತಂ ॥

ಲಿಂಗರಾಜಮ್ಮ ಯಾವಾಗ ಏಳನೆ ಬಾಕುಲಗ ಬಂದಳೊ ಕಡೇ ಬಾಕುಲಿಗೆ. ಪರಮಾತ್ಮ ಸನಿದೇವ್ರು ನಾಳೆ ಬರುವಂಥ ಕದನ ಚೂಚನೆ ಏನ ತೋರುಸತಾವ್ರೇ ಅಂದರೆ ಎದುರ್ಗೆ ಕ್ವಾಟೆ ಬಾಗಲಲ್ಲಿ ಕಾಡಿನಿಂದ ಆ ಕಡೆಯೊಂದು ಈ ಕಡೆಯೊಂದು ಹೆಣ್ಣಕಾಗೆ ಗಂಡಕಾಗೆ ಕಚ್ಚಾಡಿಕೊಂಡು ಹಾರಾಡಿಕೊಂಡು ಬರುವಂಥ ಗುರುದೇವಾ ಸೂಚನೆ ತೋರ್ಸ್ತಾವ್ರೆ, ನಾಗರಾವು ಕ್ಯಾರೆಹಾವು ಜಗಳ ಆಡಕೊಂಡು ಕದನ ಮಾಡುವಂಥದ್ದನ್ನ ತೋರಸತಾವ್ರೆ. ಹೆಣ್ಣುಲಿ ಗಂಡುಲಿ ಸೇರಕೊಂಡು ಕಾಳಗ ಮಾಡುವಂಥ ಕದನಾ ತೋರಸತಾವ್ರೆ, ಲಿಂಗರಾಜಮ್ಮ ನೋಡಕೊಂಡು ಕಾಳಗ ಮಾಡುವಂಥ ಕದನಾ ತೋರಸತಾವ್ರೆ, ಲಿಂಗರಾಜಮ್ಮ ನೋಡಕೊಂಡು ಗುಡಗುಡನೆ ಬರುವಾಗ ಈ ಕಡೆ ವೀರ್ರಾಜಿ ಭೂಪಾಲ ಎಷ್ಟು ಹೇಳುದ್ರು ನನ್ನ ಮಡದಿ, ಮಾತಮೀರಿ ಹೊಂಟೋದಲಲ್ಲ ಅಂತೇಳಿ ಮಂಚುದಮ್ಯಾಲೆ ಮಕಾಡೆನಾಗಿ ಮಲಗಿರುವಾಗ ಲಿಂಗರಾಜಮ್ಮ ಗುಡಗುಡನ ಹಿಂದಕ ಬಂದು ಗಂಡ ಮಲಗಿರುವದ ನೋಡಬುಟ್ಟು ಏನಂಥ ಮಾತಾಡುತಾವಳೆ? ಸ್ವಾಮಿ ಪತಿಯವರೆ ಗಂಡ ವೀರ್ರಾಜಿ ಭೂಪಾಲ ಹೇಳುವೆನು ಕೇಳುವರಾಗಿ –

ಅಪ್ಪಾ ಹೆಬ್ಬುಲಿಯ ಜಗಳ ನೋಡೇಳೊ ಗಂಡಯ್ಯನವರೆ
ಹೆಬ್ಬುಲಿಯ ಕಾಳಗ ನೋಡೇಳೊ ॥ ತಂ ॥
ಗೋಳಿಗೋಳು ಗುದ್ದಾಡುತ ಬರತಾವೆ ಗಂಡಯ್ನವರೆ
ಕಾಗ್ಗೋಳು ಕಚ್ಚಾಡತ ಬರುತಾವೆ ॥ ತಂ ॥

ಎಷ್ಟು ಹೇಳುದ್ರು ಕೂಡಾ ವೀರ್ರಾಜಿ ಭೂಪಾಲ ಮೇಲುಕ್ಕೇಳಲಿಲ್ಲ. ಸ್ವಾಮಿ ಕೇಡಗಾಲಕ್ಕೆ ನಿದ್ರೆ ಬರಬಾರದು ಸ್ವಾಮಿ ಅಂತೇಳಿ ತಟ್ಟಿ ತಟ್ಟಿ ಗಂಡುನ ಏಳುಸುದ್ರು ಕೂಡ ಅಲಗೂವಲ್ಲ, ತಲಗೂವಲ್ಲ, ಮೇಲಕ್ಕೆದ್ದು ಮೂರ ಮಾತ ಆಡೋಲ್ಲ. ಸ್ವಾಮಿ ನೀವು

ಮೇಲಕ್ಕೆದ್ದು ಮಾತಾಡದಿದ್ರೂ ಪರವಾಯಿಲ್ಲ. ನಾ. ಹೋಗಬುಟ್ಟು ಬತ್ತೀನಿ ಅಂತೇಳಿ, ಏನೇ ಬಂದ್ರು ಬರಲಿ ಶಿವ ಅಪ್ನೆ ಅಂತೇಳಿ. ಆ ಲಿಂಗರಾಜಮ್ಮ ಕೆಟ್ಟು ತಾಯಿ ತವುರಗೆ ಯಾವ ಥರ ಬತ್ತಾವಳೆ ಅಂದ್ರ –

ಪಿರಿಯಾಪಟ್ಣಾ ಬುಟಬುಟ್ಟು ಲಿಂಗರಾಜಮ್ಮ
ಕೆಟ್ಟು ತಾಯಿ ತವುರಗ ಬರುವಳೋ ॥ ತಂ ॥
ಬ್ಯಾಸಗೆ ತಿಂಗಳು ಬೆಂಗಳ ಕಾಡಲ್ಲಿ ಲಿಂಗರಾಜಮ್ಮ
ಒಂದ ಅಡವಿಯಲ್ಲಿ ಒಬ್ಬಳೆ ಬರುವಳೊ ॥ ತಂ ॥
ಸುಡುವಂಥ ಮರಳಲ್ಲಿ ಬರುವಾಳೊ ಲಿಂಗರಾಜಮ್ಮ
ಉರಿವಂಥ ಬಿಸಲಲ್ಲಿ ಬರುವಾಳೊ ॥ ತಂ ॥
ನಡೆವ ಕಾಲು ಒಪ್ಪಳೆ ಎದ್ದಿತೊ ಲಿಂಗರಾಜಮ್ಮ
ಬೀಸುತೋಳು ಬೆರಗು ಆಯಿತಲ್ಲ ॥ ತಂ ॥
ಬಾಳುವಾಗ ಬದಕೂವಾಗ ಸರುಮುರು ಬಳಗಾವು
ಅಯ್ಯೋ ಸಿವನೆ ಕೆಟ್ಟಾ ಮೇಲೆ ಯಾರು ಇಲುವಲ್ಲೋ ॥ ತಂ ॥

ಹುಣಸೂರತೋಪುಗ ಬಂದು ಲಿಂಗರಾಜಮ್ಮ ಅಲ್ಲಿಂದ ಮುಂದಕೆ ಬೆಳಕೆರೆ ರೋಡಲಿ ಆಲದಮರದ ಅಡೀಲಿ ಕುಂತಕೊಂಡು ಅಲ್ಲೊಂದು ರಾತ್ರಿ ತಂಗಿ ತಳವಿದ್ದು ಬರುವಾಗ ಕಂದ ವೀರಣ್ಣ ಅಮ್ಮಯ್ಯ ಹೊಟ್ಟೆ ಬಾಳ ಹಸಿತ್ತೈತೆ. ತಾಯಿ ದಾವಾರುದಮ್ಮ. ಎಲ್ಲಾರೆ ಸ್ವಲ್ಪ ತುತ್ತನ್ನು ಈಸಿಕೊಡು ಅಂತ ಕೇಳದನು ಕಂದ. ರಾಜವಂಶದಲ್ಲಿ ಕ್ಷತ್ರಿಯ ವಂಶದಲ್ಲಿ ಹುಟ್ಟಿ ಈಗ ಎಲ್ಲೋಗಿ ಅನ್ನ ಕೇಳೂದಪ್ಪ? ಸುಮ್ಮನಿರಪ್ಪ ಕಂದ ಅಂತೇಳಿ ಲಿಂಗರಾಜಮ್ಮ ಗುಡಗುಡನೆ ಓಡಿಬಂದು ಕೆರೆ ಒಳಗೆ ಮೂರು ಬಗಸೆ ನೀರು ಕುಡಿದುಕೊಂಡು ಕಂದುನಗೊಂದು ಬಗಸೆ ನೀರು ಕುಡಸಬುಟ್ಟು, ಅಲ್ಲೊಂದು ರಾತ್ರೆ ತಂಗಿದ್ದು, ಕಾಕೋಳಿ ಕೂಗಿ ಲೋಕ ಬೆಳಗಾಗಿ ಸೂರ್ಯ ಉದಯವಾಗು ಟೇಮ್ನಲ್ಲಿ ಬಲ ಮಗ್ಗೂಲಾಗೆದ್ದು ಕೈಕಾಲ ಮೊಕ ತೊಳಕೊಂಡು ಮಗುನಿಗು ಕೂಡ ಕೈಕಾಲ ಮೊಕ ತೊಳಕೊಂಡು ಇದು ಬೆಳಕೆರೆ ಅಂತೇಳಿ ನಾಮಕರಣ ಇಟಬುಟ್ಟು ತಾಯಿ ಲಿಂಗರಾಜಮ್ಮ –

ಅಯ್ಯಾ ಗುಂಗುಲದಾಚೆ ಪ್ರಾವ ಕಡುದಾಳೋ ಲಿಂಗರಾಜಮ್ಮ
ಹಾರತ್ತಿ ಉಕ್ಕಡಾವ ಕಡುದಾಳೊ ॥ ತಂ ॥
ಇಲವಲದ ಮಾರಗ ಕಡುದಾಳೊ ಲಿಂಗರಾಜಮ್ಮ
ಹಿನಕಲ್ಲು ಸುತ್ತೀಗೆ ಬರುತಾಳೆ ॥ ತಂ ॥
ಅಯ್ಯಾ ಹೀನಕಲ್ಲು ಸುಂಕ ಬಿಡುತಾಳೆ ಲಿಂಗರಾಜಮ್ಮ
ಅಣ್ಣಯ್ಯನಡವ ಸೂಜುಗ ಬರಗಾಣೆ ॥ ತಂ ॥
ಪಡವಾರಳ್ಳಿ ಉಕ್ಕಡ ಕಡುದಾಳೊ ಲಿಂಗರಾಜಮ್ಮ
ದೊಡ್ಡ ಮಾರುಕಟ್ಟು ಬೀದಿಲ್ಲಿ ಬರತಾಳೆ ॥ ತಂ ॥
ಪ್ಯಾಟೆ ಬುಟ್ಟು ಕ್ವಾಟೆಗ ಬರುವಾಗ ಲಿಂಗರಾಜಮ್ಮ
ಬಾಕಲ ಬಂಟಾರು ತಡುದವರೆ. ॥ ತಂ ॥
ಬರುವಂಥ ಲಿಂಗರಾಜಮ್ಮನ ನೋಡಿಕೊಂಡು ಬಾಕಲ ಬಂಟರು ತಡದು

ನಿಲ್ಲುಸಬುಟ್ಟು ಏನಮ್ಮ? ಯಾವ ರಾಜವ ಮಗಳು? ಯಾವ ಮಂತ್ರಿ ಮಗಳಮ್ಮ? ಯಾವ ದೇಸದವಳು? ಯಾವ ಪಟ್ಟದವಳಮ್ಮ? ಯಾವ ದೊರೆಗಳ ಮಡದಿಯಮ್ಮ? ಎಲ್ಲುಗ ಬಂದೆ ತಾಯಮ್ಮ? ಎಲ್ಲಿಗೋಯ್ತಿ ಅಂತೇಳಿ ಬಾಕಲ ಬಂಟರು ಕೇಳುವಾಗ ಏನಪ್ಪ ಪಾರದವರೆ, ಹೇಳುವೆನು ಕೇಳರಪ್ಪ. ಈವತ್ತುನ ದಿವಸದಲ್ಲಿ ಯಾವ ರಾಜನ ಮಗಳು, ಯಾವ ಮಂತ್ರಿ ಮಗಳು, ಯಾವ ದೇಸದವಳು, ಯಾವ ದೊರೆಗಳ ಮಡದಿ ಅಂತ ಕೇಳತೀರಲ್ಲಪ್ಪ? ನನ್ನ ನೆಪ್ಪು ನೆಲೆ ಗೊತ್ತು ಸಾಲದಿಲವಯ್ಯ ? ಗೊತ್ತಿಲ್ಲಮ್ಮ. ಹೇಳುವೆನು ಕೇಳರಪ್ಪ, ನಾನು ಯಾವ ರಾಜನ ಮಗಳು ಅಂದ್ರೆ ಮೈಸೂರು ದೊರಿತನ ಮಾಡುವಂಥ -

ಬಸಂಪರಾಜಿ ಮಗಳು ಕಾಣ್ರಯ್ಯ ಹಾಳಾದವರೆ
ದಳವಾಯರಸು ತಂಗಿ ಕಾಣ್ರಯ್ಯ ॥ ತಂ ॥
ದಳವಾಯರಸು ತಂಗಿ ಕಾಣರಪ್ಪ ಒಡಹುಟ್ಟು ನಾನು
ವೀರ್ರಾಜಿ ಅರಸು ಮಡದಿ ಕಾಣಿರಯ್ಯ. ॥ ತಂ ॥

ಅಲ್ಲ ಕಣಮ್ಮ, ನೀನು ರಾಜುನ ಮಗಳು, ದೊರೆಗಳ ಮಡದಿಯಾದ ಮ್ಯಾಲೆ ತಾಯಿ ಹೇಳುವೆನು ಕೇಳಿರಮ್ಮ. ದಂಡು ದಾಳಿ ಮಂದಿ ಮಾರಗ ಸೈತವಾಗಿ ಆನೆ ಪಲ್ಲಕ್ಕಿ ಮ್ಯಾಲೆ ಹಿಂದೆ ಸಾವಿರ ದಂಡು, ಮುಂದೆ ಸಾವಿರ ದಂಡು, ಮುಂದೆ ಬಿಡುಗತ್ತಿ ಪಾರ, ಹಿಂದ ಬಿಚ್ಚುಗತ್ತಿ ಪಾರ ಸೈತವಾಗಿ ಬರಬೇಕಲ್ಲಮ್ಮ? ರಾಜರ ಮಡದಿಯಾಗಿದ್ದು, ದೊರೆಗಳ ಮಡದಿಯಾಗಿದ್ದು ತಾಯಮ್ಮ ಬಡುಸ್ತಾನ ದೋರ ಮಗಳಂಗೆ ಬತ್ತಾ ಇದ್ದೀಯಲ್ಲಮ್ಮ? ನಿನ್ನ ಮಾತ್ರ ಒಳಗಡೆ ಬುಡಾದಿಲ್ಲ ಅಂದ್ರು. ಯಾತಕಪ್ಪ? ಯಾತಕಂದ್ರೆ ಲಿಂಗರಾಜಮ್ಮ ನಮ್ಮ ದೊರೆಗಳ ಅಪ್ಪಣೆ ಆಗೂಗಂಟ ನಾವು ನಂ ದೊರೆಗಳ ಅಪ್ಣೆ ಆಗೂಗಂಟ ನಾವು ಒಳಗಡೆ ಬುಡೂದಿಲ್ಲ ತಾಯಿ. ಹೇಳದೆ ಕೇಳದೆ ಒಳಗಡೆ ಬುಟಬುಟ್ರೆ ನಂ ಅನ್ನದ ಬಾಯಿಗೆ ಮಣ್ಣಾಯ್ತದೆ. ಬರುವಂಥ ಕೂಲಿ ಸಂಬಳಕ ಮಣ್ಣಾಯ್ತದೆ ಕಣಮ್ಮ. ನಾವು ಒಳಗಡೆ ಬುಡೊದಿಲ್ಲ ಕಣಮ್ಮ ಅಂದ್ರು. ಕೇಳರಪ್ಪ ಪಾರದವರೆ. ನೀವು ಒಳಗಡೆ ಬುಡೊದಿಲ್ಲವೇನ್ರಯ್ಯ? ಬುಡೊದಿಲ್ಲಕನಮ್ಮ. ನಾನು ಈ ಪಟ್ಣದೊಳಗಡೆ ಚಿಕ್ಕವಳಾಗಿದ್ದಾಗ ಏಳೊರಸದ ಮಗೀನಲ್ಲಿ ಕೇಳರಪ್ಪ ನಾ ಕೊಟ್ಟ ಅನ್ನ ಈಸಕೊಂಡು, ಕೊಟ್ಟ ಬಟ್ಟೆ ಈಸಕೊಂಡು, ಜೀವನ ಕಳಿತಿದ್ರಿ. ನಾ ಹೇಳದಂಗ ಕೇಳತಾ ಇದ್ರಿ. ಈಗ ಬುಡೊದಿಲ್ಲ ಅಂತಿರಲ್ಲಪ್ಪ ಅಂತೇಳಿ ಲಿಂಗರಾಜಮ್ಮ ಎಡಗೈಲಿ ಓಲೆಗರಿ ಈಸ್ಕೊಂಡು ಬಲಗೈಲಿ ಬೆರಳಿ ಕಂಠ ತಕ್ಕೊಂಡು ಅವರಣ್ಣಯ್ನಗೆ ಬರಬರನೆ ವಾಲೆ ಬರದು ಅಣ್ಣನ ಹೆಸ್ರ ಮೇಲಾಕಿ ತನ್ನ ಹೆಸ್ರ ಕೆಳಗಾಕಬುಟ್ಟು ನೋಡರಪ್ಪ ಪಾರದವರೆ ಈ ವಾಲೆಗರಿ ತಕ್ಕೊಂಡೋಗಿ ನಮ್ಮಣ್ಣಯ್ಯನ ಕೈಲಿ ಕೊಡರಪ್ಪ. ಅವ್ರು ಒಳಗಡೆ ಬುಡಿ ಅಂದ್ರೆ ಬುಟಬುಡರಪ್ಪ. ಬುಡಬ್ಯಾಡಿ ಅಂದ್ರೆ ಬುಡಬ್ಯಾಡರಪ್ಪ ಅಂದ್ರು. ಪಾರದವ್ರು ಕೊಟ್ಟಂಥ ತಾಳೆಗರಿ ಈಸಕೊಂಡು ಕುದ್ರೆಮ್ಯಾಲೆ ಕೂತುಕೊಂಡು, ಆ ಕಡೆ ಈ ಕಡೆ ಬಾರಿ ಬಂದೂಕ ಹಿಡಕೊಂಡ ಕೂತಿದ್ದನಲ್ಲ, ಅವರ್ಲೊಬ್ಬ ಪಾರೇದವನು, ಕುದ್ರೆ ಮ್ಯಾಲೆ ವಾಲೆಗರಿ ಈಸಕೊಂಡು ಬತ್ತಾವ್ನೆ. ಇನ್ನೊಬ್ಬ ಪಾರೇದವನು ಕಡೇ ಬಾಕಲಲ್ಲಿ ಕಾವಲಾಗಿ ನಿಂತುಕೊಂಡ-

ಏ ಕುಂಟುಕುದರೆ ಮೇಲೆ ಕುಂತಕೊಂಡ
ಪಾರಾದವನು ಮೇಟುಗತ್ತಿ ಬಲಗೈಲಿಡಕೊಂಡ ॥ ತಂ ॥
ಇಲ್ಲಿಗೆ ಮಿಂಚಿ ಅಲ್ಲಿಗೆ ಗುಡಗೂತ ಪಾರಾದವನು
ದೊರೆಯ ಬಳಿಗೆ ಬರುವಾನು. ॥ ತಂ ॥

ಬರುವಂಥ ಪಾರದವನ ನೋಡಬುಟ್ಟು ದಳವಾಯಿ ಪುಟ್ಟರಸು ಗುರುದೇವಾ ಮೈಸೂರ ರಾಜ್ಯವನ್ನಾಳವಂಥ ರಾಜ, ಏ ಪಾರಾದವನೆ ಕಡೆ ಬಾಕಲ ಬುಟಬುಟ್ಟು ಯಾತಕ್ಕೆ ಬಂದೆ ? ಎಂದು ಕೇಳಿದ. ಮಾಸ್ವಾಮಿ ಯಾರೋ ನಿಂ ತಂಗಿಯಂತೆ. ಲಿಂಗರಾಜಮ್ಮನಂತೆ. ಕೆಟ್ಟು ತವರುಗ ಬಂದಿದ್ದಾರಂತೆ. ಬಾಳಗೆಟ್ಟು ನಿಂ ಬಾಕುಲಗ ಬಂದಿದ್ದಾರಂತೆ ಸ್ವಾಮಿ. ವಾಲೆಗರಿ ಕೊಟ್ಟವರೆ ನೋಡಿ ಎನುವಾಗ, ಪಾರದವನ ಹತ್ರ ವಾಲೆಗರಿ ಈಸ್ಕೊಂಡು ಓದಬುಟ್ಟು ದಳವಾಯಿ ಪುಟ್ಟರಸು ಕಣ್ಣೀರ ಕೆಡೆಗತ ಏನಪ್ಪ ಪಾರದವರೆ, ಹೇಳುವೆನು ಕೇಳರಪ್ಪ -

ಯಾರೊ ಯಾರೊ ಇಲ್ಲ ಕಾಣರಪ್ಪ ಹಾಳಾದವರೆ
ಒಡಹುಟ್ಟು ನನ ತಂಗಿ ಕಾಣರಪ್ಪ ॥ ತಂ ॥
ಒಡಹುಟ್ಟು ನನ್ನ ತಂಗಿ ಕಾಣರಯ್ಯ ಪಾರಾದವರೆ
ತಡೆಯಬ್ಯಾಡಿ ದಾರಿ ಬುಡರಯ್ಯ ॥ ತಂ ॥

ಪಾರದವರೆ ನನ್ನ ತಂಗಿ ಲಿಂಗರಾಜಮ್ಮ ಕಾಲನಡಗೆ ಒಳಗೆ ಬಂದಿದ್ದಾಳೊ, ಇಲ್ಲ ಯಾತರಲ್ಲಿ ಬಂದಿದ್ದಾಳೊ? ಜತೇಲಿ ಯಾರಿದ್ದಾರೊ? ಮಾಸ್ವಾಮಿ ನಿಂ ತಂಗಿ ಒಡಹುಟ್ಟು ಲಿಂಗರಾಜಮ್ಮನವರು ಆನೆ ಪಲ್ಲಕ್ಕಿ ಮ್ಯಾಲೆ ಬಂದಿಲ್ಲ. ಕುದ್ರೆವಾನದ ಮ್ಯಾಲೆ ಬಂದಿಲ್ಲ ಸ್ವಾಮಿ. ದಂಡುಧಾಳಿ ಸೈತವಾಗಿ ಬಂದಿಲ್ಲ ಸ್ವಾಮಿ. ಕಾಲನಡಗೆ ಒಳಗೆ ಬಂದವ್ರೆ ಸ್ವಾಮಿ. ಯಾರಿದ್ದಾರಯ್ಯ ಜೊತೆಗೆ? ಕಂಕಳಲ್ಲಿ ಕಂದುನ ಎತ್ಕೊಬಂದು ಒಬ್ರೆ ನಿಂತವ್ರೆ, ಬಾಳ ಬಡುಸ್ತಾನದಲ್ಲಿ. ಪಾರದವರೆ ಹಾಗಾದ ಮ್ಯಾಲೆ ಹೇಳುವೆನು ಕೇಳರಪ್ಪ. ನನ್ನ ಅರಮನೆ ಅಸ್ಥಾನದಿಂದ ಹೂವಿನ ಪಲ್ಲಕ್ಕಿ ಮ್ಯಾಲ ಕೂರಸ್ಕೊಂಡು ಕರಕೊಂಡ ಬನ್ರಪ್ಪ ಅಂದ್ರು. ರಾಜನಾಡಿದ ಮಾತ ಕೇಳಿಕೊಂಡು ಅಲ್ಲಿರುವಂಥ ಸಿಪಾಯಿಗಳ ಕರಸಬುಟ್ಟು ಗುರುದೇವಾ ಆಳುಕಾಳು ಕರುಸಬುಟ್ಟು ಹೂವುನ ಪಲ್ಲಕ್ಕಿ ಕೊಟ್ಟು ಕಡೆ ಬಾಕುಲಗೆ ಬಂದು ಆ ಪಾರದವ್ನು ಏನಂಥ ಹೇಳತಾವ್ನೆ? ತಾಯಿ ಲಿಂಗರಾಜುಮ್ಮ, ನಿಂ ಕಾಣದೆ ಆಡುದ ನಂ ಸೊಲ್ಲು ತಪ್ಪಾಯ್ತು ತಾಯಿ. ನಮ್ಮ ಮನ್ನುಸಬುಡಮ್ಮ. ಅಯ್ಯಾ ನಿಂದೇನೂ ತಪ್ಪಿಲ್ಲ ಕಾಣರಪ್ಪ. ನನ್ನ ಗ್ರ್ಯಾಚಾರ ಕೆಟ್ಟುದಾಗಿ, ಅದೃಷ್ಟ ಕೆಟ್ಟುದಾಗಿ, ನನಗೀಥರ ಮಾತು ಬತ್ತಾ ಇರುವದು. ನಿಮ್ಮಲ್ಲೇನೂ ತಪ್ಪಿಲ್ಲ ಕಾಣರಪ್ಪ. ಏನರಪ್ಪ ನಮ್ಮಣ್ಣಯ್ನವರು ಏನಂಥ ಹೇಳುದ್ರು? ಒಳಗಡೆ ಬುಡು ಅಂದ್ರೋ ಇಲ್ಲಾ ಬ್ಯಾಡಾಂತ ಹೇಳುದರಯ್ಯ? ನಿಂ ಅಣ್ಣಯ್ನವರು ಹೂವುನ ಪಲ್ಲಕ್ಕಿ ಕಳಸವ್ರೆ ತಾಯಿ. ಇಗೋ ಈ ಹೂವನ ಪಲ್ಲಕ್ಕಿ ಮ್ಯಾಲ ಕೂತು ದಯಮಾಡಿ ಅಂದ್ರು. ನೋಡರಯ್ಯ ಈ ಹೂವನ ಪಲ್ಲಕ್ಕಿ ಆನೆವಾನ ಅಂದಣ ಯಾರುಗ ಬೇಕರಯ್ಯ? ನನ್ನ ಪಾದವೆ ಪರಮಸುಖ ನಡೀರಯ್ಯ ಅಂತೇಳಿ ಹೂವನ ಪಲ್ಲಕ್ಕಿ ಬುಟಬುಟ್ಟು ಕಂಕಳಲ್ಲಿ ಕಂದನ್ನ ಎತ್ಕೊಂಡು ಲಿಂಗರಾಜಮ್ಮ ಬಲಗಾಲೆತ್ತಿ ಒಳಗಡೆ

ಮಡೀಕೊಂಡು -

ಅಯ್ಯಾ ಕಂದಾನ ಕರಕೊಂಡು ತಾಯಿ ಬರುವಾಳೊ
ಲಿಂಗರಾಜಮ್ಮ ಅಣ್ಣಯ್ಯನವರ ಬಳಿಗೆ ಬರುವಾಳೊ ॥ ತಂ ॥
ಬರುವಂಥ ಲಿಂಗರಾಜಮ್ಮನ
ಕಣ್ಣಾರೆ ನೋಡಿದರು ಅವರಣ್ಣಯ್ಯನವರು
ಕಂಡುದ ಕೂಡಲೆ ಓಡಬಂದು
ಕತ್ತ ತಬಕೊಂಡ ಈಶ್ವರಾ ॥ ತಂ ॥

ಬರುವಂಥ ಲಿಂಗರಾಜಮ್ಮನ ನೋಡಕೊಂಡು ಗುಡಗುಡನೆ ಓಡಬಂದರು ಅವರಣ್ಣಯ್ಯ. ತಂಗಿ ಕತ್ತ ಅಣ್ಣ ಅಣ್ಣನ ಕತ್ತ ತಂಗಿ ತಬಕೊಂಡು, ಆ ಕಂದನ ಈಸಿ ಮುತ್ತಿಕ್ಕಿ ಮುದ್ದಾಡವ್ರೆ. ಆಗಲೀಗ ತಂಗಮ್ನ ಮುಂಗೈ ಹಿಡಕೊಂಡು ಅವರಣ್ಣಯ್ಯನವರು ಏನಂಥ ದುಕ್ಕ ಮಾಡತಾವರೆ ಅಂದ್ರೆ -

ಬಾರೊ ಬಾರೊ ನನ್ನ ತಂಗವ್ವ ಒಡಹುಟ್ಟು ತಂಗಿ
ಒಂದೂರಲ್ಲಿ ನೀ ಒಬ್ಬಾಳೆ ಬಂದಿಯವ್ವ ? ॥ ತಂ ॥
ಒಂದೂರಲ್ಲಿ ಒಬ್ಬಳೆ ಬಂದ್ಯವ್ವ ಒಡಹುಟ್ಟು ತಂಗಿ
ಒಂದಗೆ ನಿನಗ್ಯಾರು ಬರಲಿಲ್ಲವ ॥ ತಂ ॥
ಆನೆಮ್ಯಾಗಳ ಹಣವು ಸಾಲಲಿಲ್ವ ನನ್ನ ತಂಗ್ಯಮ್ಮ
ಎತ್ತುನ ಮ್ಯಾಗಳ ಮುತ್ತು ಸಾಲಲಿಲ್ವ ॥ ತಂ ॥
ಗಾಡಿ ಮ್ಯಾಗಳ ಜವುಳಿ ಸಾಲಲ್ಲಿವ ನನ್ನ ತಂಗಮ್ಮ
ಒಂಟೆ ಮ್ಯಾಗಳ ಹೊನ್ನು ಸಾಲಲಿಲ್ಲವ? ॥ ತಂ ॥
ಹೊಟ್ಟೆ ನೋಡಿ ಅನ್ನ ಕೊಡಲಿಲ್ವ ನಿನ ಗಂಡಯ್ನವರು
ಮೈಯ ನೋಡಿ ಬಟ್ಟೆ ಕೊಡಲಿಲ್ವ ॥ ತಂ ॥
ಮಂಡೆ ನೋಡಿ ಎಣ್ಣೆ ಕೊಡಲಿಲ್ವ ನಿನ ಗಂಡಯ್ನವರು
ಕೈಯ ನೋಡಿ ಬಳೆಯ ತೊಡಿಸಲಿಲ್ವ ? ॥ ತಂ ॥

ಕೆಟ್ಟು ತವುರಗ ಬಂದೆಯಮ್ಮ? ಬಾಳಗೆಟ್ಟು ನನ್ನ ಬಾಕುಲಗ ಬಂದ್ಯಮ್ಮ? ಚಿನ್ನ ಬೆರಳಿ ಮುತ್ತು ರತ್ನ ಸಾಲದೆ ಬಂದ್ಯವ್ವ? ಮದ್ದು ಸಾಲದ ಬಂದ್ಯವ್ವ? ಪಿರಂಗಿ ಗುಂಡು ಸಾಲದೆ ಬಂದ್ಯ ಲಿಂಗರಾಜಮ್ಮ? ಏನು ಕಾರಣ ಬಂದೆಯವ್ವ ಅಂತ ಕೇಳುದ್ರು. ಅಣ್ಣಯ್ಯ ಹೇಳುವೆನು ಕೇಳುವರಾಗಿ. ಚಿನ್ನ ಬೆರಳಿ ಮುತ್ತು ರತ್ನ ಸಾಲದೆ ಬರಲಿಲ್ಲ. ನನ್ನ ಕೈ ಹಿಡುದಂಥ ಪತಿದೇವ ಯಜಮಾನ್ರು ಅನ್ನ ಕೊಡನಿಲ್ಲ, ಬಟ್ಟೆ ಕೊಡನಿಲ್ಲ, ಮಂಡೆಗೆಣ್ಣೆ ಕೊಡನಿಲ್ಲ, ಕೈಗೆ ಬಳೆ ಕೊಡಸನಿಲ್ಲ ಅಂತೇಳಿ ನಿನಹತ್ರ ಬರನಿಲ್ಲ ಅಣ್ಣಯ್ಯ. ಲಿಂಗರಾಜಮ್ಮ ಮತ್ತೇನ ಕಾರಣ ಬಂದೆ? ಹೇಳುವೆನು ಕೇಳಿ ಅಣ್ಣಯ್ಯ. ನನ್ನ ಗಂಡುನಗೆ ಬತ್ತು ಬಡಸ್ತಾನ. ನಿಮುಗ ಬತ್ತು ಬಾಳ ದೊರೆತನ ಅಣ್ಣಯ್ಯ. ನೀವಾಳೂದು ಚಿನ್ನುದ ಸೀಮೆ. ನನ್ನ ಗಂಡಯ್ನನಾಳೂದು ಮಣ್ಣಿನ ಸೀಮೆ. ಗಂಡ ಹೇಡತೀರು ನಾವು ಬಾಳೂವಾಗ ಬದುಕುವಾಗ ಆ ಹೆಚ್ಚಿನ ದೇವರು ಪರಮಾತ್ಮ ಸೂರ್‍ಯದೇವನ ಮಗ ಕಾಗೆವಾನ ಕಲಿಪುರುಷ ರವಿನಂದನ ಸನಿದೇವ್ರು ಹಗಲೇರುವ ಮ್ಯಾಲೆ ಅಣ್ಣಯ್ಯ ಬಾಳ ಬಡುಸ್ತಾನ ಬಂದಬುಡುತು. ಕೇಡಗಾಲ

ನಮುಗ ಬತ್ತು ಅಣ್ಣಯ್ಯ. ಈಗ ಕೆಟ್ಟು ತವರಿಗೆ ಬಂದಿವಿನಿ. ಬಾಳಗೆಟ್ಟು ನಾ ಬಾಕುಲಗ ಬಂದಿವ್ನಿ. ಅಣ್ಣ ಹೇಳುವೆನು ಕೇಳುವರಾಗಿ. ನಂ ತಾಯಿ ತಂದೆ ತೀರೋದ ಮ್ಯಾಲೆ ಒಂದು ಮಾತು ಹೇಳುದ್ರಲ್ಲ? ತಂಗಮ್ಮ ನೀ ಕೆಟ್ಟಂಥ ಕಾಲದಲ್ಲಿ, ಬಡಸ್ತಾನ ಬಂದಂಥ ಕಾಲದಲ್ಲಿ, ನನ್ನ ಮನೆತನಕ ಬಂದೋಗು ಅಂತ ಹೇಳಿದ್ರಲ್ಲ? ನನ್ನ ಕೈಲಾದಷ್ಟು ಸಾಯ ಮಾಡಿತ್ತೀನಿ ಅಂತ ಹೇಳಿದ್ರಲ್ಲ? ಅದೇ ಪರಕಾರವಾಗಿ ಬಂದಿವ್ನಿ ಅಣ್ಣಯ್ಯ. ನೀ ಬಾಳುವಂಥ ರಾಜ್ಯದಲ್ಲಿ ಅಣ್ಣಯ್ಯ -

ಅರಧ ರಾಜ್ಯ ಭಾಗ ಕೊಡುರಣ್ಣ ನನ ಗಂಡಾನೀಗೆ
ಬರಬೇಕಾದ ದೇಶ ಕೊಡುರಣ್ಣ ॥ ತಂ ॥
ಅಣ್ಣ ಈರುನಗೆರೆ ದಾನ ಕೊಡುರಣ್ಣ ನನ ಗಂಡಾನೀಗೆ
ದೊಡ್ಡನಗೇರೆ ಸುಮ್ಮನೆ ಕೊಡುರಣ್ಣ ॥ ತಂ ॥
ಅಣ್ಣ ಮೂವತ್ತುಮೂರು ಹಳ್ಳಿ ಒಳಗಣ್ಣ ಮೈಸೂರು ಸುತ್ತ
ಮೂರು ಮನೆಯ ಹಳ್ಳಿ ಕೊಡುರಣ್ಣ ॥ ತಂ ॥
ಅಣ್ಣ ಪಡವಾರಳ್ಳಿ ಉಕ್ಕಡ ಕೊಡುರಣ್ಣ ನನ್ನ ಗಂಡಾನೀಗೆ
ಗುಂಗುಳದ ಛತ್ರಾವ ಕೊಡುರಣ್ಣ ॥ ತಂ ॥

ಇನ್ನೊಂದು ರಾಜ್ಯದಲ್ಲಿ ಅಣ್ಣಯ್ಯ ಏನ ಕೊಡತೀಯೊ ಕೊಡು. ದೊಡ್ಡ ಮಾರಕಟ್ನ ಬೀದಿ ಒಳಗೆ ಗೋನ ಪಾದದಷ್ಟಗಳ ಮನೀಕೊಳೂಕೆ ಜಾಗ ಕೊಡೂದುಂಟಾದ್ರೆ ಮಾಗಡಿ ಮ್ಯಾಲೆ ಮಾಗಡಿ ಕಟ್ಟುವೆನು. ಮಾಗಡಿ ಮ್ಯಾಲೆ ಚಿನ್ನದ ಕಳಸ ಮಡಗುಸುವೆನು ಅಣ್ಣಯ್ಯ, ನಿನ್ನ ಸಮುಕ ನಾನು ಮೈಸೂರ ರಾಜ್ಯದಲ್ಲಿ. ನಮ್ಮಣ್ಣಯ್ನವರು ಕೊಟ್ಟು ನನ್ನ ಬದುಕಸವ್ರೆ ಅಂತೇಳಿ ಕೈಯಣ್ಣೆ ಜೋತಿ ಎತ್ತಿ ಕೈ ಮುಕ್ಕೊಂಡು ನಿನ್ನ ಹೆಸರಾಗಿ ಬಾಳತೀನಿ ಅಣ್ಣಯ್ಯ. ರಾಜ್ಯ ಭಾರವನ್ನು ಕೊಡಿ ಅಂದ್ರು. ಲಿಂಗರಾಜಮ್ಮ ಅರಧ ರಾಜ್ಯವನ್ನು ಕೇಳೂಕೆ ಅಲ್ಲಿಂದ ಇಲ್ಲೀತಂಕ ಬರಬೇಕ? ನಿನ್ನ ಗಂಡಯ್ನ ಮನೆ ಒಳಗೆ ಕೂತಗೊಂಡು ಅಣ್ಣಯ್ಯ ಕೆಟ್ಟೋಗಿವ್ನಿ ಅಂತೇಳಿ ಒಂದ ವಾಲೆಗರಿ ಬರದು ಕಳಗಿದ್ರೆ ತಂಗಿ ಹೇಳುವೆನು ಕೇಳುವಳಾಗು -

ಅವ್ವಾ ಮದ್ದು ಇಲ್ಲದಿದ್ರೆ ಮದ್ದ ಕಳಗತಿದ್ದೆ ನನ್ನ ತಂಗಿ
ಗುಂಡು ಇಲ್ಲದಿದ್ರೆ ಗುಂಡ ಕಳಗತಿದ್ದೆ ॥ ತಂ ॥

ನಾನ ಬದುಕದರೇನು ? ನನ್ನ ತಂಗಿ ಬದುಕದರೇನು ಅಂತೇಳಿ ಲಿಂಗರಾಜಮ್ಮ ಚಿನ್ನ ಬೆರಳಿ ಮುತ್ತು ರತ್ನ ಬಂಗಾರ ಕಳಸತಿದ್ದಿ. ಆನೆ ಮೇಗಳ ಹಣ, ಎತ್ತುನ ಮೇಗಳ ಮುತ್ತು, ಗಾಡಿ ಮೇಗಳ ಜವಳಿ, ಒಂಟೆ ಮೇಗಳ ಬಂಗಾರ ಕಳಸತಾ ಇದ್ದೆ ತಂಗಿ. ದಂಡುಧಾಳಿ ಮಂದಿ ಮಾರಬಲ ಸೈನ್ಯ ಕಳಸತಿದ್ದಿ ತಂಗಮ್ಮ. ಹೇಳುವೆನು ಕೇಳುವವಳಾಗು. ಈ ರಾಜ್ಯ ದೇಸುದ ಮಾತು ಹಂಗಿರಲಿ, ಗಂಡಾಗಿ ಒಂದಗ ಹುಟ್ಟಿದ್ರೆ ತಲಗೆ ಸರಿಯಾಗಿ ಭಾಗ ಕೊಡಬೇಕಾಗಿತ್ತು. ಹೆಣ್ಣು ಪ್ರಾಣಿಯಾಗಿ ನೀ ಹುಟ್ಟಿ ಪರರ ಸೊತ್ತಾದೆ. ರಾಜ್ಯದ ಮಾತು ಹಂಗಿರಲಿ ತಂಗಮ್ಮ. ನೀ ಊಟ ಮಾಡಿ ಯಾವ ಕಾಲ, ಯಾವ ಹೊತ್ತಾಯ್ತೋ. ತಂಗಿ ಈಗ ಸ್ನಾನ ಮಾಡಿಕೊಂಡು, ಅರಮನೆ ಒಳಗೆ ಪಟ್ಟದ ರಾಣಿ ನಿಂ ಅತಗಮ್ಮ ಇದ್ದಾರೆ, ನೀನು ಅರಮನೆಗೆ ಹೋಗಿ ಮಿಂದು ಮಡಿ ಉಟ್ಕೊಂಡು ನಿನ್ನ ಕಣ್ಣಿಗೆ ಬೇಕಾದ ಚಿನ್ನ ಬಂಗಾರ ಆಭರಣ ಧರುಸಕೊಂಡು, ಕಣ್ಣುಗೆ ಬೇಕಾದ ಬಟ್ಟೆ ಇಕ್ಕೊಂಡು, ಹಾಲು ಅನ್ನ ಊಟ

ಮಾಡಕೊಂಡು, ತಾಂಬುಲದ ಇಳ್ಯ ಸಲುಸಕೊಂಡು, ಪಟ್ಟೆ ಮಂಚುದ ಮ್ಯಾಲ ಕೂತಗೊಂಡು, ಸಂತೋಸದಲ್ಲಿ ಒಂದು ರಾಜ್ಯವನ್ನು ಕೇಳು. ಅರಧ ರಾಜ್ಯವನ್ನು ಕೊಡತೀನಿ ತಂಗಿ ಅಂತೇಳಿ ಅವರಣ್ಣಯ್ಯನವರು ಒಪ್ಕೊಂಡಿದ್ದಾರೆ. ಆಗಲಿ ಅಂತೇಳಿ ಲಿಂಗರಾಜಮ್ಮ ಕಂದನ ಎತ್ಕೊಂಡು, ಅತ್ತಿಗೆ ಅರಮನೆಗೆ ಬರುವಾಗ, ಅವರಣ್ಣಯ್ನ ಹೆಂಡತಿ ಗ್ವಾಡೆ ಮಗ್ಗುಲಲ್ಲಿ ನಿಂತಕೊಂಡು, ಕಿಟಕಿ ಸಂದಿಲಿ ನೋಡಬುಟ್ಟು, ಅಣ್ಣಯ್ಯ ಹೇಳುದ್ದ ಕಿವಿಯಾರ ಕೇಳಕೊಂಡ್ರು. ಕಣ್ಣಾರ ನೋಡಕೊಂಡ್ರು ಪಟ್ಟದ ರಾಣಿ. ನೋಡುದ್ಯ ಈವಾಗ ಮಗ ಚಿಕ್ಕವನು ಅಂತೇಳಿ ಬಂದು ಅರಧ ರಾಜ್ಯವನ್ನು ಕೇಳತಾವಳೆ. ನಾಳೆ ಮಗ ದೊಡ್ಡವನಾದ ಮ್ಯಾಲೆ ಈ ರಾಜ್ಯಭಾರ ನನ್ನ ವಸ ಅಂದಬುಟ್ರೆ, ನಾವು ಎಲ್ಲೋಗಿ ಕಾಲ ಕಳೆಯಬೇಕು ? ಎಲ್ಲೋಗಿ ವನವಾಸ ಮಾಡಬೇಕು ಅಂತೇಳಿ ಅವರಣ್ಣಯ್ನ ಹೆಂಡತಿ, ಬರಲಿ ಬರಲಿ ನನ್ನ ಸವತಿ ಮಗಳು. ಇವಳಿದ್ದರೆ ತಾನೆ ರಾಜ್ಯಭಾರ ಕೇಳತಾಳೆ? ಇವುಳ ಇಲ್ಲಿರಿಸಕೊಬಾರದು. ಕ್ಯಾಣಸರದ ಮಾತಾಡಿ ಎರಡ ಅವಮಾನದ ಮಾತಾಡಿ ಕ್ಯಾಣ ಹುಟಸಬುಟ್ಟು ಕಳಸಬುಡಬೇಕು ಅಂತೇಳಿ ಅವರಣ್ಣಯ್ಯನೆಡತಿ -

ಬರುವಂಥ ಲಿಂಗರಾಜಮ್ನ ನೋಡಕೊಂಡ ಅವರಣ್ಣಯ್ನೆಡತಿ
ಅತಮೋರೆ ಇತಮೋರೆ ತಿರಿವಾಳೊ ॥ ತಂ ॥
ಕುಕ್ಕೆ ಮೇಲೆ ಮೊರವ ಇಡುತಾಳೆ ಅವರಣ್ಣಯ್ನೆಡತಿ
ತಣಗೆ ಮೇಲೆ ಚಂಬ ಇಡುವಳೊ ॥ ತಂ ॥
ಬಾರೆ ಬಾರೆ ಎಳೆಯ ಲಿಂಗರಾಜಿ ನನ್ನ ಸವತಿ ಮಗಳೆ
ಬಾಳಗೆಟ್ಟು ನನ್ನ ಬಾಕುಲಗ ಬಂದ್ಯೇನೆ ? ॥ ತಂ ॥
ಬಾಳಗೆಟ್ಟು ನನ್ನ ಬಾಕುಲಗ ಬಂದ್ಯೇನೆ ನನ್ನ ಸವತಿ ಮಗಳೆ
ನನ್ನ ಬಾಳಿಗೆ ನೀ ಮಿತ್ತಾಗಿ ಬಂದೇನೆ ? ॥ ತಂ ॥
ಬಾಳುತ್ತಿದರೆ ಗಂಡನ ಮನೆಯೇನ ಲಿಂಗರಾಜಮ್ಮ
ಕೆಟ್ಟ ಮೇಲೆ ಅಣ್ಣನ ಮನೇಯೇನೆ ? ॥ ತಂ ॥

ಅವರಣ್ಣುನ ಮಡದಿ ಆಡುದ ಮಾತ ಕೇಳಕೊಂಡು ಲಿಂಗರಾಜಮ್ಮ ಗುರುದೇವಾ ಚಿಕ್ಕಂದನಿಂದ ನಮ್ಮ ಅತುಗಮ್ಮನವರು ನನ್ನ ಎತ್ಕೊಂಡು ಸಾಕುದರಲ್ಲ? ಈವತ್ತು ನಮ್ಮಣ್ಣಯ್ನ ಮಡದಿ ಕ್ಯಾಣತನದ ಮಾತು, ಕುಂದಕದ ಮಾತಾಡತಾವರಲ್ಲ? ಯಾವತ್ತು ಇಂಥ ಮಾತಾಡನಿಲ್ಲ. ಈಗ ಪಾಪುದ ಮಾತು, ಕರ್ಮದ ಮಾತು ಆಡತಾವರಲ್ಲ? ಏನಗತಿ ಮಾಡಬೇಕು? ಅಂತೇಳಿ, ಇರಲಿ, ಅವರಾಡುವ ಮಾತೆಲ್ಲ ಅವರ ಪಾದಕ್ಕೆ ಆಗಲಿ ನನಗೇನಾಗಾಕಿಲ್ಲ ಅಂತೇಳಿ, ಲಿಂಗರಾಜಮ್ಮ ಹೆತ್ತತಾಯಿ ಬೇರೆ ಅಲ್ಲ. ಅತ್ಗೆ ಬೇರೆ ಅಲ್ಲ. ನಮ್ಮಣ್ಣಯ್ನವರು ತಂದೆ ಸಮಾನ. ಅತ್ಗೆ ತಾಯಿ ಸಮಾನ ಅಂತೇಳಿ ಲಿಂಗರಾಜಮ್ಮ ಗುಡಗುಡನ ಓಡ ಬಂದು ಅತ್ಗೆ ಪಾದ ಹಿಡಕೊಂಡಳು. ಲಿಂಗರಾಜಿ ಏನಕಾರಣ ಬಂದೆ ಅಂದ್ರು. ಅತಗಮ್ಮ ಕೆಟ್ಟು ತವರುಗ ಬಂದೆ ತಾಯಿ. ಬಾಳಗೆಟ್ಟು ನಿನ್ನ ಬಾಕುಲಗ ಬಂದನಮ್ಮ. ಸರಿ ಈಗೇನಾಗಬೇಕು ? ಏನಿಲ್ಲ ಕನವ್ವ. ನನಗೇನಿಲ್ಲದಿದ್ರೂ ಪರವಾಗಿಲ್ಲ. ನನ್ನ ಕಂದುನಗೆ ಸ್ವಲ್ಪ ತುತ್ತನ್ನ ಕೊಡವ್ವ. ಸ್ನಾನ ಮಡಿ ಮಾಡುಸಬೇಕೆಂದ್ರು. ಲಿಂಗರಾಜಿ ನಿನ್ನ ಕಂದುನಗೆ ತುತ್ತನ್ನ ಕೊಡ ಬೇಕಾದ್ರೆ, ತಾನ ಮಡಿ ಮಾಡಬೇಕಾದ್ರೆ ನೀರ ತುಂಬಿಲ್ಲ.

ನನ್ನ ಮನೆ ಒಳಗೆ ಆಳು ಕಾಳು ಯಾರೂ ಇಲ್ಲ. ಕೆಲ್ಸ ಮಾಡೂರು ಯಾರೂ ಇಲ್ಲ. ಉಸಾರಿಲ್ದೆ ಮೂರ ದಿಸದಿಂದ ನಾನೇ ಮನಗಿವ್ನಿ. ಹೇಳುವೆನು ಕೇಳುವಳಾಗು. ಈ ಹಗ್ಗ ಅರಬಿ ತಕ್ಕಂದು ನೀರ ತುಂಬಬುಡು. ಬಾಗಲ ಕಸ ಗುಡಸಬುಡು. ಸೋಲುಪ ರಾಗಿ ಬೀಸಬುಡು. ಅನಂತರ ನೀನೆಲ್ಲ ಕೆಲ್ಸ ಮುಗಸೋಗಂಟ ನಾನಾಡಗೆ ದುಡಗತೀನಿ. ನಿನ್ನ ಮಗುನಗೆ ಊಟಕ ಬಡಸತೀನಿ. ಸಾನಮಡಿ ಮಾಡುಸತೀನಿ ಅಂದ್ರು. ಇರಲಿ ನಮೆತ್ಗೆ ಕೆಲಸ ಮಾಡಿ ಮಾಡಿ ಸಾಕಾಗವರೆ. ನಮ್ಮತ್ಗೆ ಕೈನ ಕೆಲಸ ನಾನ ಕಿತ್ಕೊಬೇಕು ಅಂತೇಳಿ ಲಿಂಗರಾಜಮ್ಮ ಗುಡಗುಡನೆ ಕಂದನ ಬುಟುಬುಟ್ಟು ಅತ್ಗೆ ಹತ್ರ ಇವಳೇನ ಮಾಡತಾವಳೆ ಅಂದ್ರೆ? ಗುಡಗುಡನ ಓಡಬಂದು ಬಾಗುಲ ಕಸ ಗುಡಸ್ಕೊಂಡು, ಕಂಕಳಲ್ಲಿ ಕುಕ್ಕೆ ಇರೀಕೊಂಡು, ಕಸ ಸುರಿದಬುಟ್ಟು, ಬಾವಿ ಕಡೆಹೋಗಿ ನೀರ ಸೇದಿ ನೀರ ತುಂಬಬುಟ್ಟು, ಕುಟ್ಕೊ ಒನಕೆ ಬಲಗೈಲಿಡಕೊಂಡು ಕೊಟ್ಟಣ ಕುಟ್ಟಿ ಕೂಲಿ ಮಾಡಕೊಂಡು, ಬೀಸೆಕಲ್ಲು ಮುಂದಕೋಗಿ ರಾಗಿ ಬೀಸಕೊಂಡು, ತಾಯಿ ಲಿಂಗರಾಜಮ್ಮ ಕೇಳತಾವಳೆ, ಏನವ್ವ ಅತುಕಮ್ಮ ನನ್ನ ಕಂದ ವೀರಣ್ಣುಗೆ ಅನ್ನ ಕೊಡಮ್ಮ ಅಂತ. ಲಿಂಗರಾಜಿ ಅನ್ನ ಮಾಡಿಲ್ಲ. ಗಂಜಿ ಕಾಯ್ಸಿವಿನಿ. ನಿನ್ನ ಕಂದುನೆಗೆ ಕುಡಿಸು ಅಂತೇಳಿ ಹಾಳೆಹಾಕಬುಟ್ಟು ಗಂಜಿ ಬಿಡುವಾಗ ಮಗೀಗೆ ಗಂಜಿ ಕುಡಸಬುಟ್ಟುಳು ಲಿಂಗರಾಜಮ್ಮ. ಅವರತಗಮ್ಮ ಏನಂಥ ಕೇಳತಾವ್ರೆ? ಅಂದ್ರೆ ಲಿಂಗರಾಜಿ ನಿಮ್ಮಣ್ಣಯ್ನ ಹತ್ರ ಏನ ಕೇಳತಿದ್ದೆ? ಏನೂ ಇಲ್ಲ ಅತಕಮ್ಮ. ರಾಜ್ಯ ಬಾರವನ್ನು ಕೇಳತಿದ್ದಿ? ಯಾತಕಾಗಿ? ಹೇಳುವೆನು ಕೇಳು -

ಈವತ್ತು ಬಂದು ರಾಜ್ಯ ಕೇಳದವಳು ನನ್ನ ಸವತಿ ಮಗಳೆ
ನಾಳೆ ಇನ್ನೇನು ಕೇಳೊಲ್ಲೆ? ॥ ತಂ ॥
ಮುದ್ರೆ ಉಂಗುರ ದಾನ ಕೇಳಿದೊಳು ಲಿಂಗರಾಜಮ್ಮ
ಮಲಗೊ ಮಂಚಾವ ಕೇಳತಿಯೇ ॥ ತಂ ॥

ಮಲಗು ಮಂಚ ಕೇಳತೀಯೆ. ಏರೂ ಸಿಂಹಾಸನ ಕೇಳತೀಯೆ. ಹಿಡದಿರು ಚಂದ್ರಾಯದ ಕೇಳತೀಯಲ್ಲ? ಮಲಗೂವಂಥ ಮಂಚ ಕೊಟ್ಟಮ್ಯಾಲೆ, ಮುದ್ರೆಉಂಗುರ ದಾನ ಕೇಳತೀಯೆ. ಮುದ್ರೆ ಉಂಗರ ದಾನ ಕೊಡೂದು ಒಂದೆ. ಅವನ ಹೆಂಡತಿ ದಾನ ಕೊಡೂದು ಒಂದೇ ಲಿಂಗರಾಜಮ್ಮ. ನಾಳೆ ದಿವಸ ಅಣ್ಣಯ್ಯ ನಿನ್ನ ಹೆಂಡತಿ ನನ್ನ ಗಂಡುನಿಗೆ ದಾಸಿಯಾಗಿ ಕಳಗಿಸು ಅಂತೇಳತೀಯೆ. ಅವನ ಹೆಂಡತಿ ನಿನಗಂಡನ ಬಳಿಗೆ ಕಳಿಸಬೇಕೆ ಲಿಂಗರಾಜಮ್ಮ? ಹೇಳುವೆನು ಕೇಳುವಳಾಗು. ಅರಧ ರಾಜ್ಯ ಭಾಗ ಬೇಕಾದ್ರೆ -

ಹಿರಿ ಹೆಂಡತಿಯಾಗಿ ನಾನು ಬಾಳತೀನಿ ನನ್ನ ಗಂಡಾನೀಗೆ
ಕಿರಿ ಹೆಡತಿಯಾಗಿ ನೀನು ಬಾಳುವೆಯ ? ॥ ತಂ ॥
ನನ್ನ ಗಂಡನಗೆ ನೀ ಹೆಂಡತಿಯಾದರೆ ಲಿಂಗರಾಜಮ್ಮ
ಅರಧ ರಾಜ್ಯ ಭಾಗ ಕೊಡಸುವೇನು ॥ ತಂ ॥
ಅತ್ತಿಗೆಯಾಡಿದ ನುಡಿಯ ಕೇಳಿದಳು ಲಿಂಗರಾಜಮ್ಮ
ಈ ಕೆಟ್ಟನುಡಿಯ ನಾನು ಕೇಳಲಾರೆ ಶಂಕರಾ ಈಶ್ವರಾ.

ಲಿಂಗರಾಜಮ್ಮನಗೆ ಇಷ್ಟು ಮಾತೇಳಬುಟ್ಟು ಅವರಣ್ಣುನ ಹೆಡತಿ ಗುಡಗುಡನೆ ಓಡಬಂದು

ಗಂಡುನಗ ಚಾಡಿ ಚುಚ್ಚತಾವಳೆ. ಸ್ವಾಮಿ ನಿಂ ತಂಗಿ ಒಡಹುಟ್ಟು, ಬಂದು ಈವತ್ತು ಮಗನು ಚಿಕ್ಕವ್ನು ಅಂತೇಳಿ ಮಲಗೋ ಮಂಚ ಕೇಳತಾಳೆ. ಮುದ್ರೆ ಉಂಗುರ ದಾನ ಕೇಳತಾಳೆ. ನಾಳೆ ದಿವಸ ಅಣ್ಣಯ್ಯ ನಿನ್ನೆಡತಿ ನನ್ನ ಗಂಡುನಗ ಕಳಗಸು ಅಂದ್ರೆ ನಿಮ್ಮೆಡತೀನ ಅವಳ ಗಂಡುನಗೆ ಕಳಸೀಯಪ್ಪ! ಎನುವಂಥ ಕಾಲದಲ್ಲಿ ಹೆಂಡತಿಯಾಡುದ ಮಾತು ಕಿವಿನೆಟ್ಟಗಾಗಬುಡತು ಅವುನಗೆ. ಹೌದು ಮಡದಿ. ನೀ ಆಡೋ ಮಾತು ನಿಜ್ಜಯ. ಈಗ ಮಗ ಚಿಕ್ಕವ್ನು ಅಂತ ಬಂದು ರಾಜ್ಯ ಕೇಳತಾವಳೆ. ನಾಳೆ ಮಗ ದೊಡ್ಡವನಾದ ಮೇಲೆ ಈ ರಾಜ್ಯಭಾರ ಅಂದೇ ಅಂತಾಳೆ. ಈವತ್ತು ಮಲಗೋ ಮಂಚ, ಮುದ್ರೆ ಉಂಗರ, ಹಿಡದಿರು ಚಂದ್ರಾಯದ ಕೇಳಿದೋಳು ನಾಳೆ ದಿವ್ಸ ಸಿಂಹಾಸನ ಕೇಳತಾಳೆ. ನಿನ್ನ ಹೆಡತೀನ ನನ್ನ ಗಂಡುನಗೆ ಕಳಸು ಅಂದ್ರೆ ಹೆಂಡತೀನು ಕಳಸಬೇಕಾಯ್ತದೆ. ಹೊರಡು ನಿಂ ಮನೆಗೆ ಅಂತೇಳಿ ಅರಮನೆ ತೊರಸಬುಟ್ಟು ಅವರಣ್ಣಯ್ನವರು -

ಬಾರೆ ಬಾರೆ ಎಳೆಯ ಲಿಂಗರಾಜಿ ನನ್ನ ತಂಗಮ್ಮ
ಅರಧ ರಾಜ್ಯ ಭಾಗ ಬೇಕವ್ವ? ॥ ತಂ ॥

ಹೌದು ಅಣ್ಣಯ್ಯ ಅಂದಾಗ ಲಿಂಗರಾಜಮ್ಮ ಅರಧರಾಜ್ಯ ಭಾಗ ಬೇಕಾದ್ರೆ ಹೇಳುವೆನು ಕೇಳು ಲಿಂಗರಾಜಿ. ಏನೇಳುದ್ರೂ ಕೂಡಾ ನನ್ನ ಹತ್ರ ರಾಜ್ಯ ಸಿಕ್ಕುದಿಲ್ಲ. ಅರಧ ರಾಜ್ಯವನ್ನು ಕೊಡೂದಿಲ್ಲ. ಹೇಳುವೆನು ಕೇಳಮ್ಮ -

ನೀನು ಮಾರದ್ಹೆಣ್ಣು ಮನೆಗೆ ಹೋಗಮ್ಮ ಲಿಂಗರಾಜಮ್ಮ
ನೀ ಕೊಟ್ಟ ಹೆಣ್ಣು ಕುಲಕೆ ಹೊರಗವ್ವ ॥ ತಂ ॥

ಸ್ಮಶಾನಕೋದ ಹೆಣ, ಸರಕಾರಕೋದ ದುಡ್ಡು ಹಿಂದುಕ ಬಂದದವ್ವ? ಅದೇ ಪರಕಾರವಾಗಿ ನಿನ್ನ ಗಂಡನ ಹತ್ರ ಏನ ಬೇಕಾದ್ರು ಹೊಡದಾಡಮ್ಮ. ಅಣ್ಣಯ್ಯ ಅರಧ ರಾಜ್ಯವನ್ನು ಕೊಡ್ತೀನಿ ಅಂತೇಳಿ ಈಗ ಇನ್ನೊಂದ ಮಾತ ಆಡತೀಯಲ್ಲಣ್ಣ? ಹೋಗು ಲಿಂಗರಾಜಿ ಈವತ್ತ ಬಂದು ರಾಜ್ಯ ಕೇಳದೋಳು ನಾಳೆ ಬಂದು ಏನ ಕೇಳೊಲ್ಲೆ? ಇವಳಿಗೆ ಕ್ಯಾಣಸರದ ಮಾತಾಡಬುಟ್ಟು ಹಿಂದಕ ಕಳಗಸಬುಡಬೇಕು, ಅಂತೇಳಿ ಅವರಣಯ್ನವರು ಇನ್ನೊಂದು ಮಾತಾಡತಾವ್ರೆ. ಲಿಂಗರಾಜಿ ಅರಧರಾಜ್ಯ, ದೇಸ ಬೇಕಾದ್ರೆ ಹೇಳುವೆನು ಕೇಳು -

ನನ್ನ ಮಂಚುಕ ನೀನು ಹೆಂಡತಿಯಾದರೆ ಲಿಂಗರಾಜಮ್ಮ
ಅರಧ ರಾಜ್ಯ ಭಾಗ ಕೊಡುವೆನು ॥ ತಂ ॥

ಅಣ್ಣಯ್ಯ ಏನಂದೆ? ಒಡಹುಟುದೋಳು ತಂಗಿ ಅಂತ ತಿಳೀದೆ ಒಡಹುಟ್ಟದೋಳ ತಗೊಂಡೋಗಿ ನಿನ್ನ ಮಂಚುಕ ಹೆಡತಿ ಮಾಡಕೊಂಡಿಯಪ್ಪ? ಮುಟ್ಠಾಳ, ಹೇಡಿರಾಜ, ಹೆಡತಿ ಮಾತ ಕೇಳಕೊಂಡು ಇಂಥ ಮಾತಾಡತಿ ಅಂತೇಳಿ ಅಣ್ಣಯ್ಯನವರ ಕಪಾಲುಕ ಛಟೀರ ಅಂತ ಎರಡೇಟ ಹೊಡದ. ನೋಡದ್ಯ ನನ್ನ ಕಪಾಲುಕ್ಕೆ ಏಟ ಹೊಡದುಬುಟ್ಟಳಲ್ಲವೆ? ಇವಳ ಒಡಹುಟ್ಟು ಅಂತ ಮೊಕ ನೋಡಬಾರದು. ತಂಗಿ ಅಂತ ಸಲುಸಕೋಬಾರದು ಅಂತೇಳಿ -

ಏ ಬನ್ನಿ ಬನ್ನಿ ಬಾಗಲ ಬಂಟರೆ ಬಾಕಲ ಬಂಟರೆ
ಕಂಕಳಲಿರುವ ಕಂದನ ಕಿಳರಯ್ಯ ॥ ತಂ ॥

ಆಳುಗಳು ಪಾರದವರೆಲ್ಲ ಓಡಿಬಂದು ಲಿಂಗರಾಜಮ್ಮನ ಕಂಕಳಲ್ಲಿರುವ ಕಂದನ ಕಿತ್ತಿ ರಾಜನ ಕೈಗ ಕೊಟ್ಟಿದ್ದಾರೆ. ಆ ಕಂದನ ಈಸ್ಕೊಂಡು ಹೋಗಿ ಅಣ್ಣಯ್ನವರು ಮುಳ್ಳಪಂಜರದಲ್ಲಿ ಸೆರೆ ಮಡಗಬುಟ್ಟು ಏ ಪಾರದವರೆ ಇವಳ ತಂಗಿ ಅಂತ ಮೊಕ ನೋಡಬಾರದು.

ಇವಳ ಕತ್ತುನ ಮ್ಯಾಲೆ ಮೂರ ಗುದ್ದ ಗುದ್ದರಯ್ಯ ಪಾರದವರೆ
ಕ್ವಾಟೆ ಬುಟ್ಟು ಆಚುಗ ತಳ್ರಯ್ಯ ॥ ತಂ ॥

ದೊರೆ ಆಡುವ ಮಾತ ಕೇಳಕೊಂಡು ಆಳುಗೋಳು ಲಿಂಗರಾಜಮ್ಮನಗೆ ಕತ್ತುನ ಮ್ಯಾಲೆ ಮೂರ ಗುದ್ದ ಗುದ್ದಬುಟ್ಟು ಕ್ವಾಟೆಯಿಂದಾಚೆ ತಳ್ಳುವಾಗ ತಳ್ಳಿಸಕೊಂಡು, ಗುದ್ದಸಕೊಂಡು, ಸಲ್ಲುಸಕೊಂಡು ತಾಯಿ ಹೊರಗಡೆ ಬಂದುಬುಟ್ಟು ಏನಂಥ ದುಕ್ಕ ಮಾಡತಾವಳೆ. ಪರಮಾತ್ಮ ನನ್ನ ಗಂಡುನ ಮಾತು ಮೀರಿ ಬಂದುದಕೆ ಈ ಕೆಟ್ಟ ಮಾತು, ಕುಂದಕದ ಮಾತು ಕೇಳದನಲ್ಲ. ಹಸಬ್ಯಾರೆ ಕರ ಬ್ಯಾರೆ ಮಾಡಿದಂಗಾಯ್ತುಲ್ಲ. ಅಂಬಲಿ ಕುಡದು ವನವಾಸ ಮಾಡುದ್ರು ಸೈವಾಗಿ ನನ್ನ ಗಂಡನ ಮನೆಯೇ ಸ್ಥಿರ ಅಂತೇಳಿ ಆ ಎಳೆ ಲಿಂಗರಾಜಮ್ಮ ದುಕ್ಕವನ್ನು ಮಾಡಕೊಂಡು, ಅಣ್ಣಯ್ಯ ನೀ ರಾಜ್ಯವನ್ನು ಕೊಡದೆ ಹೋದ್ರು ಪರವಾಗಿಲ್ಲ. ನನ್ನ ಕಂದುನ ಕೊಡಪ್ಪ ಹೋಯ್ತೀನಿ ಅಂದ್ರು. ಆಗ ಅವರ ಅಣ್ಣಯ್ನವರು ಸಿಂಹಾನದಲ್ಲಿ ಕುಂತಕೊಂಡು ಲಿಂಗರಾಜಿ ನಿನ್ನ ಕಂದ ಬೇಕಾದರೆ ಹೇಳತೀನು ಕೇಳು. ನಿನ ಗಂಡ ಧೀರ, ಶೂರ, ಜಟ್ಟಿ, ರಣದಲ್ಲಿ ಎಂಥೆಂಥ ನೂರಾರು ಜಟ್ಟಿಗಳನ್ನು ಕೊಂದುಬಿಟ್ಟವ್ನಿ ಗೆದ್ದಿವ್ನಿ ಸವಾಲ ಮಾಡಿವ್ನಿ ಅಂತ ಹೇಳತಿದ್ದಲ್ಲ? ಈವತ್ತು ಹೇಳತೀನಿ ಕೇಳು -

ನನ್ನ ಮೇಲೆ ವಿದ್ಯಕ್ಕೆ ಕಳಗಮ್ಮ ನಿನ ಗಂಡಯ್ನವರು
ಲಡಾಯಿ ಜಗಳಾನೆ ಮಾಡಲಿ ॥ ತಂ ॥
ಮೀಸೆ ತಿರಿಕೊಂಡ ಕಾಚ ಕಟಕೊಂಡು ನಿನ ಗಂಡಯ್ನ
ಗಂಡಾದರೆ ರಣಕೆ ಬರಹೇಳು ॥ ತಂ ॥
ಸೀರೆ ಉಟಕೊಂಡು ಸೀವಳ ತೊಟಕೊಂಡು ನಿನ ಗಂಡಯ್ನ
ಹೆಣ್ಣಾದರೆ ಅರಮಲ್ಲಿ ಇರಹೇಳು ॥ ತಂ ॥
ಬಳೆಯ ತೊಟಕೊಂಡ ಬಣ್ಣ ಉಟಕೊಂಡು ನಿನ ಗಂಡಯ್ನ
ಹೇಡಿ ಆದ್ರೆ ಇಲ್ಲೆ ಇರಬೋದು ॥ ತಂ ॥

ಈ ಪರಕಾರವಾಗಿ ಅವರಣ್ಣಯ್ನವರು ಹೇಳುವಾಗ ಆ ಮುಳ್ಳ ಪಂಜರದಲ್ಲಿ ಸೆರೆ ಮಡಗಿದ್ದರಲ್ಲ, ಮೂರ ತಿಂಗಳ ಕಂದ ವೀರಣ್ಣ, ಮಾವುನ ಕೂಡಾ ಮಾತಾಡತಾವ್ನೆ. ಸ್ವಾದರಮಾವ ಈವತ್ತು ತಾಯಿ ಬ್ಯಾರೆ, ಮಗನ ಬ್ಯಾರೆ ಮಾಡದ್ದೀಯ. ಮಗನ ಬ್ಯಾರೆ ಮಾಡದ್ದೀಯ ಮಾವ. ನಂ ತಂದೆಯವರ ನಿನ್ನ ಮ್ಯಾಲೆ ವಿದ್ಯಕ ಕಳಗಬೇಕ? ಜಗಳಕ್ಕೆ ಲಡಾಯಿಗೆ ಕಳಗಬೇಕ? ನಿನ್ನೊಂದಗೆ ಲಡಾಯಿ ಮಾಡಕೊಂಡು ಕಂದುನ ಬುಡಸಕೊಂಡು ಅರಧರಾಜ್ಯವನ್ನು ಗೆದಕೊಂಡು ಹೋಗಬೇಕ ಮಾವ? ಹೇಳುವೆನು ಕೇಳು. ಈವತ್ತು ನಾನು ಚಿಕ್ಕವನು ಅಂತೇಳಿ ನನ್ನ ಸೆರೆ ಹಿಡಿದಿರಬೌದು. ನನಗೆ ಹನ್ನೆರಡ ವರಷ ತುಂಬುದ ಮ್ಯಾಲೆ ಹೇಳುವೆನು ಕೇಳು ಸೋದರಮಾವ -

ನೀನೇ ಒಂದು ಮರವೆ ಕಾಣಯ್ಯ ಸ್ವಾದುರುಮಾವಯ್ಯ
ನಿನಗೆ ನಾನು ಕೊಳ್ಳಿ ಕಾಣಯ್ಯ ॥ ತಂ ॥
ಮಾವ ಕತ್ತರಿಸಿ ಕಲಕಟ ಕಟ್ಟುವೆನು ನಿನ್ನನು
ಉತ್ತರಿಸಿ ನಾ ಜಗಲಿ ಕಟ್ಟುವೆನು ॥ ತಂ ॥

ಮಾವ ನೀನೆ ನನಗೆ ಮರ, ನಾ ನಿನಗೆ ಕೊಳ್ಳಿ ಆಗಬುಡತೀನಿ ಮಾವಯ್ಯ. ನಾನು ಹನ್ನೆರಡು ವರಸದ ಹುಡಗನಾದ ಮ್ಯಾಲೆ ಹೇಳುವೆನು ಕೇಳು. ನಿನ್ನ ಕತ್ತರಸಿ ಕಲಕಟ ಕಟ್ಟುವೆನು. ನಿನ್ನ ಉತ್ತರಸಿ ನಿನ್ನ ತಲೆ ಒಳಗೆ ಜಗಲಿ ಕಟ್ಟತೀನಿ ಮಾವಯ್ಯ. ನಂ ತಂದೆಯವರು ಎಂಥವರು ಅಂತ ತಿಳಕೊಂಡಬುಟ್ಟೆ? ನಂ ತಂದೆಯವ್ರು ಪಿರಿಯಪಟ್ಟಣದಲ್ಲಿ -

ಮಾವ ಎಂತೆಂಥ ಧೀರರ ಕೊಲ್ಲವರೆ ನಂ ತಂದೆಯವ್ರು
ಎಂತೆಂಥ ಸೂರರ ಕೊಲ್ಲವರೆ ॥ ತಂ ॥
ರಕ್ತದ ಕೋಡಿಯನ್ನ ನೋಡಿಲ್ಲ ಮಾವಯ್ಯ ನೀನು
ರಣದಲ್ಲಿ ಜಗಳ ಮಾಡಿಲ್ಲ ॥ ತಂ ॥

ಮಾವ ಬ್ಯಾಡ ಎನುವಂಥ ಕಾಲದಲ್ಲಿ, ಅವರ ಮಾವ ದಳವಾಯಿ ಪುಟ್ಟರಸು ಏನಂಥ ಹೇಳತಾವ್ರೆ. ಏ ಕಂದ ವೀರಣ್ಣ, ಸಣ ಬಾಲಕ ನೀನು, ಎಳೆಹುಡುಗ. ಹೇಳತೀನಿ ಕೇಳು. ನನ್ನ ಮ್ಯಾಲ ಈ ಥರ ಮಾತಾಡತೀಯಲ್ಲ. ನಾಳೆ ದಿವ್ಸ ನೀನು ಬಂದ ಮ್ಯಾಲೆ ಹೇಳುವೆನು ಕೇಳು-

ಏ ಚಿಕ್ಕ ಹುಡಗಾನೆ ಕೇಳಲೋ ಚಿಕ್ಕಾ ಹುಡುಗಾನೆ
ಸೊಕ್ಕುನ ಮಾತ ನೀನು ಆಡುಬ್ಯಾಡ ॥ ತಂ ॥
ಸೊಕ್ಕುನ ಮಾತ ನೀನಾಡಬ್ಯಾಡ ಚಿಕ್ಕ ಹುಡುಗಾನೆ
ಹಲ್ಲುಮುರದು ಕೈಗೆ ಕೊಡುವೆನೊ ॥ ತಂ ॥
ಎಳೆಯ ಹುಡುಗಾನೆ ಕೇಳಲೋ ಎಳೆಯ ಹುಡಗಾನೆ
ತಿಳಿಯಾದೆ ನೀ ಮಾತನಾಡುಬ್ಯಾಡ ॥ ತಂ ॥
ತಿಳಿಯಾದೆ ನೀ ಮಾತನಾಡುಬ್ಯಾಡ ಎಳೆಯ ಹುಡುಗಾನೆ
ಕಾಲಮುರದು ಕೈಗೆ ಕೊಡುವೇನೊ ॥ ತಂ ॥

ಮಾವ ಹಲ್ಲು ಮುರದು ಕೈಗ ಕೊಡತೀನಿ, ಕಾಲ ಮುರದು ಕೈಗ ಕೊಡತೀನಂತ ಹೇಳತೀಯಲ್ಲ? ಚಿಕ್ಕ ಹುಡುಗ ಸಣ್ಣ ಹುಡಗ ಅಂತೇಳತೀಯಲ್ಲ? ಹೇಳುವೆನು ಕೇಳು ಮಾವ-

ಮಾವ ಮುಟ್ಟಬ್ಯಾಡ ಕೆಣಕಿ ನೋಡಯ್ಯ ಸ್ವಾದುರುಮಾವಯ್ಯ
ಆಮೇಲೆ ನಿನ್ನ ಪಾಡ ನೋಡಯ್ಯ ॥ ತಂ ॥
ಮಾವ ಜಾಡಿಸಿ ಒಂದು ಹೊತ್ತ ಒದ್ದರೆ ಸ್ವಾದುರುಮಾವಯ್ಯ
ರಕ್ತ ಕಕ್ಕಿ ಪ್ರಾಣ ಬಡುಬೇಕು ॥ ತಂ ॥

ಸ್ವಾದರಮಾವ ಕೂಡೆ ಅಳಿಯ ಮಾತಾಡುವಾಗ ಲಿಂಗರಾಜಮ್ಮ ಕ್ವಾಟೆ ಕಡೇ ಬಾಕಲಲ್ಲಿ ನಿಂತಕೊಂಡು, ಅಣ್ಣಯ್ಯ ನಾನು ಹೋಗತೀನಿಕಣಪ್ಪ. ನನ್ನ ಮಗುನ ಕೊಡದೆ ಹೋದ್ರು

ಸರಿಯೆ. ಹೇಳತೀನಿ ಕೇಳು. ನಾಳೆ ವಾರವಾರ ಎಂಟ ದಿವ್ಸದಲ್ಲಿ ಸುಟ್ಟ ಸುಕ್ರುವಾರ ಮಟ್ಟ ಮಂಗಳವಾರ ಮಧ್ಯಾನದಲ್ಲಿ ಅಣ್ಣಯ್ಯ -

ನಿನ್ನ ಪಟ್ನ ಸೂರೆ ನಿನ್ನ ಪಾಳ್ಯೆ ಸೂರೆವೊ ಅಣ್ಣಯ್ಯ
ನಿನ್ನ ಕ್ವಾಟೆ ಸಂಮಾರ ಮಾಡುಸುವೇನೋ ॥ ತಂ ॥

ಅಣ್ಣಯ್ಯ ಹಸ ಬೇರೆ ಕರ ಬೇರೆ. ಕಂದನ ಬ್ಯಾರೆ ತಾಯಿನ ಬ್ಯಾರೆ ಮಾಡದಲ್ಲ ಅಣ್ಣಯ್ಯ? ಅದಕೋಸ್ಕರವಾಗಿ ಶಾಪ ಕೊಡತೀನಿ ಕೇಳು ಅಂತೇಳಿ ಲಿಂಗರಾಜಮ್ಮ ಹಾದಿ ಧೂಳು ಬೀದಿ ಧೂಳು ಗೋರಕೊಂಡು, ಬಗಸೆ ಧೂಳ ತಕ್ಕಂಡು, ಅಣ್ಣಯ್ನ ಕ್ವಾಟೆಗೆ ಏನಂತ ಧೂಳಸಾಪ ಇಡತಾವಳೆ ಅಂದ್ರೆ, ತಾಯಿ ಕಣ್ಣಲ್ಲಿ ಕಣ್ಣೀರ ಕೆಡಗಿದ ಮ್ಯಾಲೆ ನನ್ನ ಕಿಚ್ಚು ಪಡುಸುದ ಮ್ಯಾಲೆ, ಸಂಕಟ ಪಡುಸದ ಮ್ಯಾಲೆ ಹೇಳುವೆನು ಕೇಳಣ್ಣ. ನಿನ್ನ ರಾಜವಂಶದಲ್ಲಿ ಕ್ಷತ್ರಿವಂಶದಲ್ಲಿ, ಈ ರಾಜ್ಯ ಭಾರ ಆಳುವಲ್ಲಿ, ಅಣ್ಣಯ್ಯ ನಿನಗೆ ಪಟ್ನ ಆಳೊಕೆ, ಸಿಂಹಾಸನ ಏರೂಕೆ, ನಿನಗೆ ಹುಟ್ಟುಪುತ್ರ ಬ್ಯಾಡವೆ ಅಣ್ಣಯ್ಯ? ಒಂತಲೆ ಒಳಗೆ ಹುಟ್ಟುಪುತ್ರ ಆಗಲಿ. ಒಂತಲೆ ಒಳಗೆ ದತ್ತುಪುತ್ರ ಆಗಲಣ್ಣ. ನಿನ್ನ ಹೊಟ್ಟೆಲ್ಲಿ ಹುಟ್ಟುದ ಮಕ್ಕಳಿಗೆ ಗೊರಲಕೆಮ್ಮು ಬರಲಿ ಎನುತೇಳಿ ಲಿಂಗರಾಜಮ್ಮ -

ಅಣ್ಣ ಒಂದುಸುಳಿಯಾಗಿ ಒಬ್ಬನೆ ನಿಂತಕೊಣ್ಣ
ಅಣ್ಣಯ್ನವರೆ ಕ್ವಾಟೆ ಸಂಮಾರ ಮಾಡಸುವೆನು ॥ ತಂ ॥

ಮೈಸೂರು ಪಟ್ಣಕ ಸಾಪ ಕೊಟಬುಟ್ಟು ಲಿಂಗರಾಜಮ್ಮ ತನ್ನ ಗಂಡುನತಾಕೆ ಹೋಗಿ ಒಂದುಕ್ಕೊಂದು ಚಾಡಿ ಹೇಳಬೇಕು. ನಮ್ಮಣ್ಣನ ಮ್ಯಾಲ ವಿದ್ಯಕ ಕಳಸಬೇಕು. ಇವ್ನ ಪಟ್ನ ಸಂಮಾರ ಮಾಡುಸಬೇಕು. ಅಂತೇಳಿ ಕೈನ ಬಳೆ ಹೊಡಕೊಂಡು, ಮಾರುದ್ದ ಮಂಡೆಯನ್ನು ಬಿಚಕೊಂಡು, ಮುತ್ತೈದೆ ಸರಗ ಹರಕೊಂಡು, ಬಳೆ ಗಾಜನಲ್ಲಿ ಮೈಕೈನ್ನೆಲ್ಲ ಗೀಚಕೊಂಡು, ತಾಯಿ ಬಂಧಾನ ಮಾಡಕೊಂಡು ಕಂದನ ನ್ಯನಕೊಂಡು ಏನಂಥ ದುಕ್ಕ ಮಾಡತಾವಳೆ ಅಂದ್ರೆ. ಕಂದ ವೀರಣ್ಣ -

ಅಪ್ಪಾ ಬರುವಾಗ ನಾವು ಇಬ್ರು ಬಂದವಲ್ಲೊ ತಾಯಿಮಕ್ಕಳು
ಹೋಗುವಾಗ ನಾನು ಒಬ್ಬಳೆ ಹೋಗುಬೇಕ ? ॥ ತಂ ॥

ನಾನು ಹೋಗಿ ನಿಂ ತಂದೆಯವರ ಹತ್ರ ನಿಂತಕೊಂಡ್ರೆ, ಲಿಂಗರಾಜಿ ನನ್ನ ಕಂದ ವೀರಣ್ಣ ಎಲ್ಲಿ ಅಂತ ಕೇಳದ್ರೆ, ನಾನು ಏನು ಹೇಳಬೇಕಪ್ಪ? ಅಂತೇಳಿ ಲಿಂಗರಾಜಮ್ಮ -

ಅವಳು ಕಣ್ಣಲ್ಲಿ ಕಣ್ಣೀರ ಕೆಡಿಕೊಂಡು ಲಿಂಗುರಾಜಮ್ಮ
ಅಣ್ಣಯ್ನವರ ಮನೆಯ ಬುಡುತಾಳೆ ॥ ತಂ ॥
ಅಣ್ಣಯ್ನವರ ಮನೆಯ ಬುಡುತಾಳೆ ಲಿಂಗುರಾಜಮ್ಮ
ಗಂಡನ ಅರಮನೆಗೆ ಬರುವಾಳೊ. ॥ ತಂ ॥

ಗಂಡನ ಅರಮನೆಗೆ ಬರುವಾಗ ಬರುವಂಥ ಲಿಂಗರಾಜಮ್ಮುನ ವೀರ್ರಾಜಿ ಅರಸು ನೋಡಬುಟ್ಟು, ನೊರನೊರನೆ ಹಲ್ಲ ಕಡಕೊಂಡು, ಕಿಡಿಕಿಡಿ ರುದ್ರುಗ್ವಾಪ ತಾಳಕೊಂಡು ಮಂಚ ಇಳದಿ ಬಂದು -

ಅವನಿಗೆ ಕೆಂಜರಗಣ್ಣು ಕ್ವಾರು ಮೀಸೆಯಲ್ಲ ವೀರ್‍ರಾಜಿ ಅರಸಗೆ
ಉಬ್ಬಹಲ್ಲು ನೆಗಾಮುಕವಲ್ಲ ॥ ತಂ ॥
ನೊರನೊರನೆ ಹಲ್ಲ ಕಡುದಾನೊ ವೀರ್‍ರಾಜಿ ಅರಸು
ತೊಡೆತಟ್ಟಿ ಕಾಕ ಹೊಡದಾನೊ ॥ ತಂ ॥

ಗಂಡುನ ದಂಡಕ ಹೋಗಿ ಪಾದುಕ ಶರ್‍ಣ ಮಾಡಿದಳು ಲಿಂಗರಾಜಮ್ಮ. ಲಿಂಗರಾಜಿ ಹೋಗುವಾಗ ತಾಯಿಮಕ್ಕಳಿಬ್ರು ಹೋದ್ರಲ್ಲ. ನನ್ನ ಕಂದ ವೀರಣ್ಣ ಎಲ್ಲಿ? ಸ್ವಾಮಿ ಹೇಳುವೆನು ಕೇಳುವರಾಗಿ -

ನಾನಾಗಿ ಹೇಳುಬಾರದು, ನೀವಾಗಿ ಕೇಳುಬಾರದು ತಂದನ್ನ ತಾನ
ಸ್ವಾಮಿ ಏನ ಹೇಳಾಲಿ ಗುರಗೋಳೆ ॥ ತಂ ॥
ಅಪ್ಪಾ ನನಗೆ ಬಂದಿತ್ತು ವಿಧಿವಾಸ.

ಮಡದಿ ಹಾಗಂದರೇನು? ಹೇಳುವೆನು ಕೇಳಿ ಸ್ವಾಮಿ. ನಮ್ಮಣ್ಣಯ್ನವರ ಹತ್ರ ರಾಜ್ಯವನ್ನು ಕೇಳೋಕೆ ಹೋದಮ್ಯಾಲೆ ಬಾರೊ ತಂಗಮ್ಮ ಕೊಡುತೀನಿ ಅಂತೇಳಿ ನಮ್ಮತ್ತಿಗೆ ಇಲ್ಲದಿದ್ದ ಸಮಯ ನೋಡಕೊಂಡು ವ್ಯಾಳ್ಯ ನೋಡಕೊಂಡು ಅರಮನೆ ಒಳಗೆ ಕರಕೊಂಡೋಗಿ ಗುಟ್ಟಾಗಿ ಏನ ಮಾಡವರೆ ಅಂದ್ರೆ, ಲಿಂಗರಾಜಮ್ಮ ಯಾತಕಾಗಿ ಈ ಮಾತ ಹೇಳತಾವಳಂದ್ರೆ. ನನ್ನ ಗಂಡುನಗ ನಿಜವಾದ ಮಾತ ಹೇಳಬುಟ್ರೆ ಭಾಮೈದುನ ಮ್ಯಾಲೆ ವಿದ್ಯಕ್ಕೋಗೋದಿಲ್ಲ ಜಗಳಕೋಗೋದಿಲ್ಲ. ಇವುರಿಗೆ ಉರಿಯು ಗಾಯದ ಮ್ಯಾಲೆ ಉಪ್ಪಾಕಬೇಕು. ಒಂದುಕ ಒಂಭತ್ತು ಚಾಡಿ ಹೇಳಬೇಕು. ನಾನು ನನ್ನ ಗಂಡುನ ಲಡಾಯಿಗೆ ಕಳಗಬೇಕು. ಅಂತೇಳಿ ಲಿಂಗರಾಜಮ್ಮ ಏನಂಥ ಹೇಳತಾವ್ರೆ ಅಂದ್ರೆ. ಸ್ವಾಮಿ ನಮ್ಮಣ್ಣಯ್ನವರು -

ನನ್ನ ಅಂದ ಚಂದಾವ ನೋಡಕೊಂಡು ನಮ್ಮಣ್ಣಯ್ನವರು
ಗುಡಗುಡನ ಬಂದು ಮುಂಗೈ ಹಿಡಿಕಂಡ ॥ ತಂ ॥
ಅಪ್ಪಾ ಒಲ್ಲೆ ಅಂದಾರು ಬಿಡದೆ ನಮ್ಮಣ್ಣಯ್ನವರು
ತಳ್ಳಿ ತಳ್ಳಿ ಸರಸನಾಡೀದ ॥ ತಂ ॥
ತಳ್ಳಿ ತಳ್ಳಿ ಸರಸನಾಡೀದ ನಮ್ಮಣ್ಣಯ್ನವರು
ಕಾಲಲ್ಲೊದ್ದು ದಾಸು ಮಾಡೀದ ॥ ತಂ ॥
ತಂಗಿ ಅಂಬ ಮಮತಿ ತಿಳಿದಂತೆ ನಮ್ಮಣ್ಣಯ್ನವರು
ಮುಂಗೈ ಹಿಡಕಂಡು ಮಂಚಕೆ ಕೆಡವಿದ ॥ ತಂ ॥

ಏನಂದೆ ಮಡದಿ? ಹೌದು ಸ್ವಾಮಿ. ಅಣ್ಣಯ್ಯ, ನೀವು ಅಣ್ಣನಾಗಬೇಕು. ನಾನು ತಂಗಿಯಾಗಬೇಕು ಅಂದರೂ ಬಿಡದೆ ಏ ಲಿಂಗರಾಜಿ, ತಂಗಿ ಯಾರಿಗೆ ಅಣ್ಣನ್ಯಾರಿಗೆ? ನನಗೆ ಸ್ವತ್ತು ನೀನು ಅಂತೇಳಿ ನನ್ನ ಅಂದ ಚಂದ ರೂಪುರೇಖೆ ನೋಡಿಕೊಂಡು ಒಲ್ಲೆ ಅಂದರೂ ಬುಡದೆ ತಳ್ಳಿ ಸರಸನಾಡಿ ಕಾಲಕಾಲಲಿ ಒದ್ದು, ಸ್ವಾಮಿ ದಾಸ ಮಾಡಬುಟ್ಟು ನನ್ನ ಕಂದನ ಕಿತ್ತು ಮುಳ್ಳುಪಂಜರಕೆ ಸೆರೆ ಮಡಗಬಿಟ್ಟಿದ್ದಾನೆ. ನನ್ನ ಮುಂಗೈ ಹಿಡದು ಮಂಚಕ ಕೆಡವದಾಗ ಸ್ವಾಮಿ, ಅಣ್ಣಯ್ಯ ಬರತೀನಿ ತಡಿಯಪ್ಪ ಅಂತೇಳಿ ನನ್ನ ಕಂದುನಗ ಸೊಲಪ ಬುದ್ದಿ ಮಾತ ಹೇಳತೀನಿ ಅಂದಬುಟ್ಟು ನಮ್ಮಣ್ಣಯ್ನ ಕಣ್ಣಗ ಕಾಣದಂಗೆ ಸಿಕ್ಕೊ ಸಿಗದಂಗೆ ಅವ್ರ ಕಣ್ಣತಪ್ಸಿ ನಾ ಓಡಬಂದಬುಟ್ಟೆ ಸ್ವಾಮಿ. ಓಡಿ ಬರೂವಾಗ ನಮ್ಮಣ್ಣಯ್ನವರು ಲಿಂಗರಾಜಿ, ನನಕೈಗೆ ಸಿಕ್ಕದೆ ಹೊಂಟೋದೀಯ? ಯಾವತ್ತಿದ್ರು ಸಿಕ್ಕತೀಯೆ. ನಿನಗೆ

ಅವಮಾನ ಮಾಡೇ ಮಾಡತೀನಿ ಅಂದ್ರು. ನನಗೆ ಅವಮಾನ ಮಾಡೂದಿರಲಿ, ನಾಳೆ ದಿವಸ ನಿನ್ನ ತಲೆ ತಗುಸತೀನಿ ಅಂದೆ. ನಿನ್ನ ಗಂಡುನ ಕೈಲಿ ನನ್ನ ತಲೆ ತಗಸೀಯ? ನಾಳೆ ದಿನ ನಿನ್ನ ಗಂಡುನ ವಿದ್ಯುಕ ಕಳಗು. ಲಡಾಯಿಗೆ ಕಳಸು. ನನ್ನ ಮ್ಯಾಲ ವಿದ್ಯ ಮಾಡಕೊಂಡು ಲಡಾಯಿ ಮಾಡಕೊಂಡು ನಿನ್ನ ಕಂದುನ ಬುಡಸಕೊಂಡೋಗಲಿ. ರಾಜ್ಯ ಗೆದಕೊಂಡ ಹೋಗಲಿ. ಅಲ್ಲೀಗಂಟ ನಿನ್ನ ಮಗುನ ಕೊಡೂದಿಲ್ಲ ಅಂತೇಳಬುಟ್ರು ಸ್ವಾಮಿ. ಎನುತೇಳಿ ಲಿಂಗರಾಜಿ ಹೇಳುವಾಗ ಮಡದಿ ಆಡುದ ಮಾತ ಕೇಳಕೊಂಡು ಎಲ್ಲೂ ಇಲ್ಲದ ರುದ್ರುಗ್ವಾಪ ಬಂದ ಬುಡತು. ನೊರನೊರನೆ ಹಲ್ಲಕಡಕೊಂಡು ಲಿಂಗರಾಜಿ ನನ್ನ ಯಾರು ಅಂತ ತಿಳಕೋದೆ ಲಡಾಯಿಗೆ ಕರದಿದಾರೆ ನಿಮ್ಮಣ್ಣಯ್ನವರು. ವಿದ್ಯಕ ಕರದೀದಾರ -

ಕೊಡೆಣೆ ಚಂದ್ರಾಯದ ಕತ್ತೀಯ ಮಡದಿ ಲಿಂಗರಾಜಿ
ಹೊಕ್ಕಿ ಬರುವೆ ಮೈಸೂರ್‍ರಾಜ್ಯವ ॥ ತಂ ॥
ಹೊಕ್ಕಿ ಬರುವೆ ಮೈಸೂರ್‍ರಾಜ್ಯವ ಮಡದಿ ಲಿಂಗರಾಜಿ
ಹೋಗಿ ತರುವೆ ವೈರಿ ತಲೆಗಳ ॥ ತಂ ॥
ನಾನು ಅಂಗಣ ಮುಂಗಣ ಸೇರಿಸಿ ಹೊಡದರೆ ದಂಡೀನ ಒಳಗೆ
ಒಂದೊಂದು ಸಾವ್ರ ದಂಡ ಕೋಲುವೆನು ॥ ತಂ ॥
ನುಗ್ಗಿ ನುಗ್ಗಿ ಜಗಳ ಮಾಡಿದರೆ ದಂಡೀನ ಒಳಗೆ
ಕಬ್ಬುನ ಗದ್ದೆಗೆ ಕೀರ ನುಗ್ಗಿದಂಗೆ ॥ ತಂ ॥
ಬಾಂದರ್‍ರ ಮ್ಯಾಲೆ ಬಸಿರ್‍ರ ಕೊಲುವೆನೊ ದಂಡೀನ ಒಳಗೆ
ಹೊಟ್ಟೆ ಒಳಗಲ ಕಂದನ ತಗಿವೆನೊ ॥ ತಂ ॥
ಇನ್ನೊಂದ ಸಾರಿ ಜಗಳ ಮಾಡಿದರೆ ದಂಡೀನ ಒಳಗೆ
ಬಾಣತಿರ್‍ರ ಗೋಳು ಬಸಿರ್‍ರ ಗೋಳಲ್ಲ ॥ ತಂ ॥
ಬಾಣತ್ರಿ ಗೋಳು ಬಸಿರ್‍ರ ಗೋಳಲ್ಲೆ ದಂಡೀನ ಒಳಗೆ
ದಂಡೆಲ್ಲ ಗೋಳೆನ್ನುವದು ॥ ತಂ ॥

ನಾನು ಕೈಯೆತ್ತಿ ಮುಗಿದವರ ಬುಡಾದಿಲ್ಲ. ಕಾಲ ಕಟ್ಟಿದವರ ಬುಡಾದಿಲ್ಲ . ಎಂತೆಂಥ ಧೀರರ ಕೊಲ್ಲಿವ್ನಿ. ಎಂತೆಂಥ ಸೂರರ ಕೊಲ್ಲಿವ್ನಿ. ಹೇಳುವೆನು ಕೇಳೆಣ್ಣೆ. ನನ್ಹೆಸರು ಹೇಳಿದ ತಕ್ಷಣವಾಗಿ ಕುಂಪಣಿ ದೊರೆಗಳೆಲ್ಲ ಟೋಪಿ ಕಳೆದು ಸಲಾಮು ಮಾಡುವರು. ಅಯ್ಯಯ್ಯಾ ಇವ್ನು ಕೆಟ್ಟ ರಾಜ, ದುಷ್ಟರಾಜ ಅಂತೇಳಿ, ನನ್ನ ಮ್ಯಾಲೆ ಯಾರೂ ದಂಡೆತ್ತಿ ಬರಲಿಲ್ಲ. ನಿಮ್ಮಣ್ಣಯ್ನವರು ತಿಳೀದೆ ಬರಲಿ ಅಂತ ಕರದವರಲ್ಲ? ಎನುವಾಗ ಆ ಲಿಂಗರಾಜಮ್ಮನವರು ಏನಂಥ ಯೋಚ್ನೆ ಮಾಡತಾವರಂದ್ರೆ ಪರಮಾತ್ಮ ನನ್ನ ಗಂಡುನಗೆ ಹೇಳೋದೇನೋ ಹೇಳಬುಟ್ಟೆ. ಈಗ ದಂಡೆತ್ತಿ ಜಗಳಕ ಹೋದ್ರೆ ಭಾವ ಭಾಮೈದ್ದಿರಗೆ ಜಗಳ ಆಯ್ತು ಅಂತ ನಾಳೆ ದಿವಸ ವಾಡಿಕೆ ಆಯ್ತದೆ. ದೇಶದೇಶದ ಮೇಲೆ ಹಂಡೋಯ್ತದಲ್ಲ? ಅಂತೇಳಿ ಅಪ್ಮಾನ ಬರತದೆ ಅಂತೇಳಿ, ನನ್ನ ಗಂಡುನಗ ಸ್ವಲ್ಪ ಸಾಂತಿ ಮಾಡಬೇಕು ಅಂದಬುಟ್ಟು, ಆ ಲಿಂಗರಾಜಮ್ಮ -

ಅಪ್ಪಾ ಇಂದೂನ ಜಗಳ ನಾಳಾಕಾಗಾಲೊ ಗಂಡಯ್ನವರೆ
ನಾಳೆ ಜಗಳ ನಾಳಿದ್ದೀಗಾಗಲಿ ॥ ತಂ ॥

ನಾಳೆ ಜಗಳ ನಾಳಿದ್ದೀಗಾಗಲೋ ಗಂಡಯ್ನವರೆ
ದಂಡೆತ್ತಿ ನೀವು ಜಗಳಕ್ಕೆ ಹೋಗುಬ್ಯಾಡಿ ॥ ತಂ ॥

ಸ್ವಾಮಿ, ಈವತ್ತುನ ಜಗಳ ನಾಳೆಗಾಗಲಿ, ನಾಳೆ ಜಗಳ ನಾಳಿದ್ದಗಾಗಲಿ ಸ್ವಾಮಿ. ದಂಡೆತ್ತಿ ನೀವು ಜಗಳಕ ಹೋಗಬ್ಯಾಡಿ. ಲಡಾಯಿಗೆ ಹೋಗಬ್ಯಾಡಿ ಸ್ವಾಮಿ. ಹೇಳುವೆನು ಕೇಳುವರಾಗಿ-

ಅಪ್ಪಾ ದಂಡಿಗೋದ ಮ್ಯಾಲೆ ಮುಂಡೇರಾಯ್ತೀವಿ ಗಂಡಯ್ನವರೆ
ಎಂದಿದ್ರು ನಾವು ಮುಂಡೇರು ಕಾಣರಯ್ಯ ॥ ತಂ ॥
ಸಾಲುಗ ಮುಂಡೇರು ನಾವು ಆಯ್ತೀವಿ ಗಂಡಯ್ನವರೆ
ಲಡಾಯಕೆ ಜಗಳಕೆ ಹೋಗಬ್ಯಾಡಿ ॥ ತಂ ॥

ಸ್ವಾಮಿ ಹೇಳುವೆನು ಕೇಳಿ ಎನುವಾಗ, ಲಿಂಗರಾಜಿ ನಾನು ಹೆಂಗಸರ ಮಾತ ಕೇಳಿ ಯುದ್ಧಕ್ಕೆ ಹೋಗದೆ ಹೂ ಅನಬುಟ್ರೆ ರಣದಲ್ಲಿ ನಿಮ್ಮಣ್ಣಯ್ನವರು ನನ್ನ ಹೇಡಿ ಅಂತ ಕರೀತಾರೆ. ಹೆಂಗಸರ ಮಾತ ಕೇಳಿ ಉಳೀವಂಥ ರಾಜನಲ್ಲ ನಾನು. ಕೊಡ್ಹೆಣ್ಣೆ ಚಂದ್ರಾಯದ ಕತ್ತಿ ಅಂದ್ರು. ಲಿಂಗರಾಜಿ, ನಾನು ದಂಡೆತ್ತಿ ಜಗಳಕ ಹೋದಮ್ಯಾಲೆ ಇದ್ದೆನೋ ಸತ್ತೆನೋ ಗೊತ್ತಿಲ್ಲ. ನನ್ನ ಮಗ ಇದ್ರೆ ನೀವು ಪಟ್ಣ ಆಳತೀರಿ. ಕೊಟ್ಟಣ ಕುಟ್ಟತೀರಿ. ನನ್ನ ಕಂದ ವೀರಣ್ಣ ಇದ್ರೆ ಚಂದ್ರಾಯುಧಕ ಮೊದಲ ಆವುತಿ ಅಂತೇಳಿಬುಟ್ಟು ಹಿಡಕೊಂಡು ಕತ್ತ ಕೂದಬುಟ್ಟು ಆವತಿ ಕೊಡತಿದ್ನಲ್ಲ. ನನ್ನ ಕಂದ ವೀರಣ್ಣನ್ನ ಬುಟ್ಟ. ಬಂದ್ದಿದ್ದೀಯಲ್ಲ ಲಿಂಗರಾಜಿ ಅಂದ್ರು ಸ್ವಾಮಿ, ನನ್ನ ಮಗನನ್ನ ಕೊಂದುಬುಡತೀನಿ ಅಂತ ಹೇಳತೀರಲ್ಲ. ಹೇಳುವೆನು ಕೇಳಿ ಸ್ವಾಮಿ-

ಹಸೀನ ಮುಂದೆ ಕರವ ಕೊಲಬ್ಯಾಡಿ ಗಂಡಯ್ನವರೆ
ಕರೀನ ಮುಂದೆ ಹಸವ ಕೊಲಿರಪ್ಪ ॥ ತಂ ॥
ತಾಯಿ ಮುಂದೆ ಮಗನ ಕೊಲಬ್ಯಾಡಿ ಗಂಡಯ್ನವರೆ
ಮಗನ ಮುಂದೆ ತಾಯಿ ಕೊಲ್ರಪ್ಪ ॥ ತಂ ॥

ತಾಯಿ ಮುಂದೆ ಮಗನ ಕೊಂದ್ರೆ ಸ್ವಾಮಿ ನವನಾರು ಒಂಭತ್ತು ತಿಂಗಳು ಹೊತ್ತಿ ಹೆತ್ತಿ ಸಾಕಿರುವಂಥ ತಾಯಿ ಕಣ್ಣಿಂದ ನೋಡಿ ಯಾವ ಥರ ಸೈರಿಸಬಲ್ಲುಳು ಸ್ವಾಮಿ? ನನ್ನ ಮಗನ ಮಾತ್ರ ಕೊಲ್ಲಬ್ಯಾಡಿ. ನನ್ನ ಕೊಂದಬುಡಿ ಸ್ವಾಮಿ ಅಂದ್ರು ಲಿಂಗರಾಜಮ್ಮ. ನನ್ನ ಮಗನ ಕೊಲ್ಲಬ್ಯಾಡಿ ನನ್ನ ಕೊಂದಾಕಬುಡಿ ಅಂತ ಹೇಳತೀಯಲ್ಲ. ಹೇಳುವೆನು ಕೇಳು ಮಡದಿ-

ಹೆಣ್ಣೆ ಮದುವೆ ಆದ ತಾವಳಿಂದಲು ಅಯ್ಯೋ ಮಡದಿ
ಬಾಯೆತ್ತಿ ಒಂದ ಬಗುಳ ಬೈಲಿಲ್ಲ ॥ ತಂ ॥
ಸೋಬನ ಆದ ತಾಳಿಂದಲು ಅಯ್ಯೋ ಮಡದಿ
ನನ್ನ ಕೈಯೆತ್ತಿ ಒಂದೇಟ ಹೊಡಿಯಲಿಲ್ಲ ॥ ತಂ ॥
ಬಯ್ತಿನೆಂದರೆ ಬಾಯಿ ಬರದಲ್ಲ ನನ್ನ ಮಡದಿ
ಹೊಡಿತೀನೆಂದರೆ ಕೈಯೇ ಬರದಲ್ಲ ॥ ತಂ ॥
ಹ್ಯಾಗೆ ಕೊಲ್ಲಲಿ ನಿಮ್ಮ ಪ್ರಾಣವ ಅಯ್ಯೋ ಮಡದಿ
ನಿಮ್ಮ ಪ್ರಾಣ ನೀವೆ ಬುಡುರ್ಹೆಣ್ಣೆ. ॥ ತಂ ॥

ಸ್ವಾಮಿ ನನ್ನ ಕೊಲ್ಲದೆ ನೀವು ಹೊಂಟೋಗಬುಟ್ರೆ, ರಾಜ್ಯಭಾರವಾಳುವಂಥ ರಾಜ, ನೀವು ದಂಡೆತ್ತಿ ಜಗಳಕ ಹೋಗಬುಟ್ರೆ, ದಂಡಗೋದೋರು ಹಿಂದಕ ಬಂದಾರೊ ಬರದಿಲ್ವೋ ಗೊತ್ತಿಲ್ಲವಲ್ಲ. ಅಲ್ಲೆ ಮೃತಪಟ್ಟೋದ ಮ್ಯಾಲೆ ನಾವು ಹೆಂಗಸರಿದ್ದಕೊಂಡು ಈ ಅರಮನೆ ಆಸ್ಥಾನದಲ್ಲಿ ಹೆಣ್ಣರಾಣಿ ಪಟ್ಟ ಅಂತ ಹೆಸರಾಯ್ತದೆ ಸ್ವಾಮಿ. ಈ ಪಟ್ಣದಲ್ಲಿ ಪುಂಡ ಹುಡಗರು ಸ್ವಾಮಿ, ಗಂಡಿಲ್ಲದ ಮುಂಡೇರು ಪುಂಡಗಾರ್ತಿರು ನಿಂತವರೆ ಅಂತೇಳಿ, ಪುಂಡ ಹುಡಗರೆಲ್ಲ ಬಂದು ಮೈಮ್ಯಾಲ ಬೀಳತಾರೆ. ನಂ ಅವಮಾನ ಮಾಡತಾರೆ ಸ್ವಾಮಿ. ಅವಮಾನ ಮಾಡುಸ್ಕೊಂಡು ಬಾಳಾಟ ಬಾಳಲಾರೊ. ನೀವು ಕೊಂದರೆ ಕೊಲಬೌದು. ಕೊಲ್ಲಿಲ್ಲ ಅಂದ್ರೆ ಕೊಂದಬುಡತೀವಿ ಅಂದ್ರು. ಆ ನನ್ನೇ ಕೊಲತೀಯ ಲಿಂಗ್ರಾಜಿ ? ಮೈಸೂರ್ರ ಮಗಳಾದಕ್ಕೆ ನೋಡದ್ಯ ನಿನಗೆಷ್ಟು ಕೆಚ್ಚಿರಬೇಕು. ನನ್ನೇ ಕೊಲತೀನಿ ಅಂದಬುಟ್ಯಲ್ಲ. ಒಂದೇಟಗೆ ನಿನ್ನ ಸಿರಸ ತಗೀತೀನಿ ಅಂತೇಳಿ ವೀರ್‍ರಾಜಿ ಭೂಪಾಲ ಮಾತಾಡುವಾಗ ಈ ಕಡೆ ಮೈಸೂರಾಜ್ಯದಲ್ಲಿ ದಳವಾಯಿ ಮಾರಾಜ, ನಂ ಭಾವುನ ಮ್ಯಾಲೆ ದಂಡೆತ್ತಿ ಜಗಳಕೋಗಬೇಕು ಅಂತೇಳಿ. ಎಪ್ಪತ್ತೈದ ಸಾವುರ ದಂಡ ತಕೊಂಡೋಗಬೇಕು ಅಂದಬುಟ್ಟು ಯಾರ್‍ಯಾರ ಕರೀತಾವನೆ ಅಂದ್ರೆ-

ಅವ್ವ ಬನ್ನಿ ಬನ್ನಿ ದೊಡ್ಡುನಗೇರಿಯವರೆ
ದೊಡ್ಡುನಗೇರಿ ಹೆಂಗಸರೆ ಬರ್‍ರವ್ವ ॥ ತಂ ॥
ಮುದಕಿರು ಮೋಟಿರು ಹಿಂದಕ್ಕೋಗರವ್ವ ದಂಡಿನ ಜಗಳಕ
ಪರಾಯದವರೆ ಮುಂದುಕ ಬರ್‍ರವ್ವ ॥ ತಂ ॥

ಬಾಣತಿರು ಬಸರೀರು ಹಾಲುಮಕ್ಕಳು ಸಿಸಮಕ್ಕಳೆಲ್ಲ ಅರಮನೆ ಒಳಗಿರ್‍ರಮ್ಮ. ಕೋರೀರು ಮುಂದಕ ಬರ್‍ರಮ್ಮ. ನೀವು ಬರುವಾಗ ಸುಮ್ಮುನ ಬರಬ್ಯಾಡಿ -

ಕಾರಾದ ಪುಡಿ ಮಡ್ಲಲ್ಲಿ ಕಟಕೊಳ್ಳೀ ದೊಡ್ಡುನಗೆರಿಯೆಂದರೆ
ಮೋಟು ಒನಕೆ ಬಲಗೈಲಿ ಹಿಡಕೊಳಿ ॥ ತಂ ॥

ಏನ ದೊಡ್ಡುನಗೇರಿ ಹೆಂಗಸರೆ ಹೇಳುವೆನು ಕೇಳರಮ್ಮ. ಕಾರದ ಪುಡಿ ಮಡ್ಲಲ್ಲಿ ಕಟ್ಟಿಗೊಂಡು, ಮೋಟು ಒನಕೆ ಬಲಗೈಲಿಡಕೊಂಡು ರಣದಲ್ಲಿ ಲಡಾಯಿ ಮಾಡುವಾಗ, ನೀವು ಏನ ಮಾಡಬೇಕು ಗೊತ್ತೇನರವ್ವ -

ಅವ್ವಾ ಕಾರದಪುಡಿ ಕಣ್ಣಿಗೆ ಎರಚರವ್ವ ದಂಡೀನ ಒಳಗೆ
ಮೋಟು ಒನಕೆ ಸವಡುಗೆ ತಿವಿರವ್ವ ॥ ತಂ ॥

ಈ ಪರಕಾರವಾಗಿ ಹೆಂಗಸರ ನೇಮುಸಬುಟ್ಟು ಇನ್ಯಾರ ಕರೀತಾವ್ರೆ ಗೊತ್ತಾ -

ನಮ್ಮ ಈರುನಗೇರಿ ಧೀರ್‍ರನ್ನ ಕರಕೊಂಡ್ರೊ ಮೈಸೂರುರಾಜ
ದೊಡ್ಡುನಗೇರಿ ದೊಡ್ಡೋರ ಕರಕೊಂಡ್ರೊ ॥ ತಂ ॥
ಕಾರ್ಗಳ್ಳಿ ಕರಿನಾಯಕನ ಕಂದಾರೋ ಮೈಸೂರ್‍ರಾಜ
ಬಸನಳ್ಳಿ ಬಸೆಟ್ಟೀನ ಕರಕೊಂಡ್ರೊ ॥ ತಂ ॥
ಬನ್ನಿ ಬನ್ನಿ ಪಾಳೆಯ ಹುಡಗರೆ ಪಾಳ್ಯದ ಹುಡಗಾರೆ
ಮೀಸೆ ಬಿರದುದೊಡಿಯ ಕಟರಯ್ಯ ॥ ತಂ ॥

ದಂಡುಧಾಳಿ ಮಂದಿ ಮಾರಬಲ ಸಯನಾಗಿ ದಂಡೆತ್ತಿ ಹೋಗಬೇಕು ಅಂತೇಳಿ ಮೈಸೂರ್‍ರಾಜ

ಎಲ್ಲನು ಕರಕೊಂಡು, ಎಪ್ಪತ್ತೈದ ಸಾವಿರ ದಂಡ ಕಟ್ಟಿಗೊಂಡು ಈರನಗೆರೆ ಒಳಗೆ ಮುಂದಲ ದಂಡು ಶ್ರೀರಂಗಪಟ್ಣದಲ್ಲಿರಿಸಿ ಮೈಸೂರ್ರಾಜ ಆಗಿರುವನು -

ದಂಡು ಧಾಳಿ ಬೇಗ ಕಟಿಗೊಂಡ ದಳನಾಯಿ ಕಂದ
ದಂಡೆತ್ತಿ ಜಗಳಕ್ಕೆ ಹೋಗುಬೇಕು ॥ ತಂ ॥
ತೂಗೋ ಮಂಚುದ ಮ್ಯಾಲೆ ಕೂತುಗೊಂಡ ದಳವಾಯಿ ಕಂದಣ್ಣ
ಮನದಲೊಂದು ವೆಥಯ ಮಾಡೀದ ॥ ತಂ ॥
ಮನದಲೊಂದು ವೆಥೆಯ ಮಾಡಿಕೊಂಡು ದಳವಾಯಿ ಕಂದಣ್ಣ
ಮತ್ತೇನು ಮಾತುಗಳ ನುಡಿದಾನೊ ॥ ತಂ ॥

ದೊರೆಯಾಗಿರುವಂಥ ದಳವಾಯಿ ಮಾರಾಜ ಪಟ್ಟಿಮಂಚುದ ಮ್ಯಾಲೆ ತಾವಾಗಿ ಮೂರ್ತ ಮಾಡಿಕೊಂಡು ಸೆರೆ ಒಳಗಿರುವಂಥ ಕಂದ ವೀರಣ್ಣುನ ಕಣ್ಣೆತ್ತಿ ನೋಡಿಕೊಂಡು ಇನ್ನ್ಯಾರ ಕರಿತಾರೆ ಅಂದ್ರೆ -

ಅಯ್ಯ ಬಲಚೆರಿ ಪಾಳೆಯ ಅರಸನವರು ದಳವಾಯಿ ಕಂದಣ್ಣುನಿಗೆ
ಎಡದಲ್ಲಿ ಕೆಂಪೋಜಿ ಅರಸಿನವರು ॥ ತಂ ॥
ಇಬ್ಬರ ಮಧ್ಯಾದಲ್ಲಿ ನನ್ನಾ ದೊರಿಯೆ
ಏನಂಥ ಬಿನ್ನಪ ನುಡಿದಾನೊ ॥ ತಂ ॥

ಕೇಳಯ್ಯ ಪಾಳ್ಯದರಸನವರೆ, ದೊರೆಯಾಗಿರುವಂಥ ಕೆಂಪೋಜಿ ಅರಸನವರೆ, ಈವತ್ತುನ ದಿವುಸದಲ್ಲಿ ನಂ ತಂಗೆಯಾದ ಲಿಂಗರಾಜಮ್ಮ, ನನ್ನ ಜತೆ ಒಳಗೆ ಕದನ ಕಾಳಗ ಮಾಡಕೊಂಡು ಹೊಂಟೋಗಬುಟ್ಟುವಳೆ. ಅವ್ರ ಪತಿದೇವರಾಗಿರುವಂಥ ವೀರ್ರಾಜಿ ಅರಸನವರಿಗೆ ಹೋಗಿ ಏನು ಚಮತ್ಕಾರದ ಮಾತ ಹೇಳಾಳೊಗೊತ್ತಿಲ್ಲ. ಮೈಸೂರ್ರಾಜ್ಯಕೆ ಏನ ಕೇಡ ಬಂದಾದೊ ಗೊತ್ತಿಲ್ಲ. ಏನಗತಿ ಮಾಡಬೇಕೊ ಎಂಬುದಾಗಿ ದೊರೆಯಾಗಿರುವಂಥ ದಳವಾಯಿ ಪುಟ್ಟರಸು ಚಿಂತೆ ಮಾಡುವಂಥ ಕಾಲದಲ್ಲಿ -

ಚಿಂತೆ ಮಾಡುವ ರಾಜನ ನೋಡಿಕೊಂಡು ಪಾಳ್ಯದರಸು
ರಾಜನಿಗೆ ಧೈರ್ರ್ಯಾವ ಹೇಳೀದ ॥ ತಂ ॥
ಹೆದರುಬ್ಯಾಡ ಬೆಚ್ಚುಬ್ಯಾಡವಯ್ಯ ದಳವಾಯಿ ಮಾರಾಜ
ನಾವಿದ್ದು ಮ್ಯಾಲೆ ಭಯವು ಯಾಕಯ್ಯ ನನ್ನ ದೊರೆಯೆ
ಧೈರ್ಯದಿಂದ ರಾಜ್ಯವಾಳಯ್ಯ ॥ ತಂ ॥
ಸತ್ಯಬುಟ್ಟು ಅಸತ್ಯಕೋಗಬ್ಯಾಡ ನನ್ನ ದೊರೆಯೆ
ಅಪಸತ್ಯಾವ ಮನದಲಿ ನುಡಿಬ್ಯಾಡ ॥ ತಂ ॥
ರಾಜುನಾಗಿ ನೀನು ಹುಟ್ಟುದ್ಯಲ್ಲೋ ನನ್ನಾ ದೊರೆಯೆ
ಹೇಡಿಯಾಗಿ ಮಾತು ಬರಬ್ಯಾಡದೊ
ನೀನು ಧೀರನಾಗಿ ರಾಜ್ಯನಾಳುವಾಗ ನನ್ನಾ ದೊರೆಯೆ
ನಾರಿಯಾಗಿ ಹಿಂದುಕ ಸರಿಬ್ಯಾಡ ॥ ತಂ ॥

ಕೇಳಯ್ಯ ದೊರೆಯಾಗಿರತಕ್ಕಂಥ ದಳವಾಯಿ ಮಾರಾಜ. ನಾವು ನಿಮ್ಮೊಂದಿಗಿದ್ದ ಪಕ್ಷದಲ್ಲಿ ಭಯ, ಚಿಂತೆ ಯಾಕಯ್ಯ? ಧೀರನಾಗಿ ರಾಜ್ಯನಾಳು. ನಾರಿಯಾಗಿ ಹಿಂದಿರುಗಬ್ಯಾಡ. ಮೈಸೂರ್ರಾಜ್ಯದಲ್ಲಿ ಮಾರಾಜ ಅಂತೇಳಿ ಕೀರ್ತಿ ಉಳಿಸಿಕೊಂಡು ಹೇಡಿರಾಜ ಅಂತ ಹೆಸರ

ತಕೋಬ್ಯಾಡ. ಧೈರ್ಯದಲ್ಲಿ ರಾಜ್ಯನಾಳು ಅಂತೇಳಿ ಪಾಳ್ಯದರಸರು ಬುದ್ಧಿ ಹೇಳುವಂಥ ಕಾಲದಲ್ಲಿ, ಅದೇ ಕಾಲಕ್ಕೆ ಸರಿಯಾಗಿ ಪಿರಿಪಟ್ಣದಲ್ಲಿ ದೊರೆತನವನ್ನಾಳುವಂಥ ವೀರ್‍ರಾಜಿ ಅರಸು-

ಎಡದಲ್ಲಿ ಎಳೆಯ ಲಿಂಗ್ರಾಜಿ ನನ್ನಾ ದೊರೆಗೆ
ಬಲದಲ್ಲಿ ಪಟ್ಟಾದ ಗೌರಮ್ಮ ॥ ತಂ ॥
ಬಲದಲ್ಲಿ ಪಟ್ಟಾದ ಗೌರಮ್ಮ ನನ್ನಾ ಸ್ವಾಮಿಗೆ
ಮುಂದಗಡೆ ಕೆಂಪಾಜಿ ಮಲ್ಲಮ್ಮ ॥ ತಂ ॥
ಮೂರು ಜಾಣ ಮಡದೀರ ಮಧ್ಯದಲ್ಲಿ ನಾನ್ನಾ ದೊರೆಯು
ಮತ್ತೇನು ಮಾತಗಳ ಹೇಳೀದ ? ॥ ತಂ ॥

ಮೂರಜನ ಮಡದೀರ ಮಧ್ಯದಲ್ಲಿ ಕೂತಕೊಂಡು ದೊರೆಯಾಗಿರುವಂಥ ವೀರ್‍ರಾಜಿ ಅರಸುನವರು, ಯಾರನ್ನ ಕರದು ಬುದ್ಧಿ ಮಾತ ಹೇಳತಾವರೆಂದ್ರೆ -

ಬಡಗ ಬಾಗಲಲ್ಲಿ ಮಡವಳ್ಳಿ ಮಾದನಾಯಕ ನನ್ನಾ ಜಟ್ಟಿ
ತೊಡೆಯ ತಟ್ಟಿ ಮೀಸೆ ತಿರುಗವನು ॥ ತಂ ॥
ತೊಡೆಯ ತಟ್ಟಿ ಮೀಸೆ ತಿರುಗುವನೆ ಮಾದನಾಯಕ ಜಟ್ಟಿ
ಬೇಗುದಲ್ಲಿ ಅರಮನೆಗೆ ಬರ್‍ರಯ್ಯ ॥ ತಂ ॥
ಮೂಡು ಬಾಗಲಲ್ಲಿ ಕರಳೆ ಪಾಪನಾಯಕ ನನ್ನ ಜಟ್ಟಿ
ಅರಮನೆಗೆ ಬೇಗ ಬನರಯ್ಯ ॥ ತಂ ॥

ಬಡಗ ಬಾಗಲ ಮಡವಳ್ಳಿ ಮಾದನಾಯಕ, ಮೂಡಬಾಗಲ ಬಳಿ ಕರಳೆ ಪಾಪನಾಯಕ ಬೇಗದಲ್ಲಿ ಬನ್ರಪ್ಪ ಅಂತೇಳಿ, ಇಬ್ರ ಜಟ್ಟಿಗಳ ಕರೆದು ಅವರೊಂದಗೇನ ಮಾತಾಡತಾನೆ ಅಂದ್ರೆ. ಕೇಳಯ್ಯ ಮಾದನಾಯಕ, ಪಾಪಾನಾಯಕ, ನನ್ನ ಮಡದಿ ಲಿಂಗರಾಜಮ್ಮನ ಒಡಹುಟ್ಟಾಗಿರುವಂಥ ಮೈಸೂರ್‍ರಾಜ್ಯ ಸಂಸ್ಥಾನ ಆಳತಕ್ಕಂಥ ದಳವಾಯಿ ಮಾರಾಜ ಒಂದಗುಟದವ್ನು ಸಂಗಡ ಬೆಳೆದವನು ನನ್ನ ಮಡದೀಗೆ ಮಾಡಿರುವಂಥ ಅವಮಾನ ಬವಮ್ಮಾನ ಗೊತ್ತಾಗಬುಡತು. ಈವತ್ತುನ ದಿವುಸದಲ್ಲಿ ಮಡದಿ ಲಿಂಗರಾಜಿ, ನನ್ನ ವೀರಾಜಟ್ಟಿ ಮಾರಾಜಟ್ಟಿ ಎನುವಂಥ ಜಟ್ಟಿಗಳ ಜತೇಲಿ ಹೇಳತೀನಿ ಕೇಳು ಮಡದಿ-

ನನ್ನ ಬಲದಲ್ಲಿ ಎಡದಲ್ಲಿರುವ ಜಟ್ಟಿ ನೋಡ್ಹೆಣ್ಣೆ
ಜಟ್ಟಿಗೆ ನಿಮ್ಮಣ್ಣಯ್ಯ ಸಮನು ಆಗುವನ ? ॥ ತಂ ॥

ನಿಮ್ಮಣ್ಣ ದಳವಾಯಿ ಮಾರಾಜ ನನ್ನ ಎಡಬಲದಲ್ಲಿರುವಂಥ ಇಬ್ರು ಜಟ್ಟಿಗಳಿಗೆ ಸಮಾನವಾದಾನೆ ಹೆಣ್ಣೆ? ಹೇಳುವೆನು ಕೇಳು ಮಡದಿ -

ಹೆಣ್ಣೆ ಒಂದಗೆ ಹುಟ್ಟಿ ಸಂಗಡ ಬೆಳದವ್ನು ನಿಂ ಅಣ್ಣಯ್ಯನವರು
ನಿನಗಿಂಥ ಅಪಮಾನ ಮಾಡುದನ ? ॥ ತಂ ॥
ಒಂದಾಗುಟ್ಟಿ ಸಂಗಡದಲಿ ಬಂದವನು ನಿಂ ಅಣ್ಣಯ್ನವರು
ಮೈಮುಟ್ಟಿ ಅವಮಾನ ಮಾಡುದನ ? ॥ ತಂ ॥

**ಒಂದಗ್ಹುಟ್ಟಿ ಸಂಗಡದಲಿ ಬೆಳದಂಥ ನಿಮ್ಮಣ್ಣ ದಳವಾಯಿ ಮಾರಾಜ, ನಿನಗೆ ಈ ರೀತಿ ಅಪಮಾನ ಮಾಡುದ್ನ ? ಮೈ ಮುಟ್ಟಬುಟ್ನ? ಕೈ ಹಿಡುದಬುಟ್ನ ಮಡದಿ? ಎಂಬುದಾಗಿ**

ಜಟ್ಟಿಗಳ ಮುಂಭಾಗದಲ್ಲಿ ಕೂರುಸ್ಕೊಂಡು ಮಡದೀನ ಕೇಳತಾವ್ರೆ. ಆಗ ಲಿಂಗ್ರಾಜಮ್ಮ ಮನದಲ್ಲಿ ವೆಥೆ ಮಾಡಕೊಂಡ್ರು. ನೋಡದ್ಯ ? ನಾನು ಮೈಸೂರ್ರಾಜ್ಯದಿಂದ ಬಂದ ಗಳಿಗೆಲಿ ನಡದಂಥ ವಾರ್ತೆಗಳ ನನ್ನ ಪತಿದೇವರಗೇಳಬುಟ್ಟಿ. ಈವತ್ತಿನ ದಿವುಸದಲ್ಲಿ ನನ್ನ ಕೈಹಿಡುದಂಥ ಪತಿದೇವರಾದ ವೀರ್ರಾಜಿ ಅರಸು ಎಡದಲ್ಲಿ, ಬಲದಲ್ಲಿ ಜಟ್ಟಿಗಳ ಕುಂಡ್ರಸಕೊಂಡು ಒಂದಗುಟ್ಟಿ ಸಂಗಡ ಬೆಳದವನು ನಮ್ಮಣ್ಣ ದಳವಾಯಿ ಮಾರಾಜ ನಿನಗ್ಯಾವ ರೀತಿ ಅವಮಾನ ಮಾಡಿದ ಎಂಬದಾಗಿ ಕೇಳತಾವರಲ್ಲ? ಇವುರಗೆ ಮತ್ತೂ ಕ್ವಾಪ ಬರಿಸಬೇಕು ಅಂತೇಳಿ ಆ ಲಿಂಗ್ರಾಜಮ್ಮ ಗಂಡುನಿಗೆ ಹೇಳತಾವ್ರೆ -

ಆಡುದ ಮಾತು ಗ್ಯಾನ ಇಲುವಯ್ಯ ನನ್ನಾಳೋ ದೊರೆಯೆ
ಹೇಳುದ ಮಾತು ತಿಳಿಯಲಿಲವಯ್ಯ ॥ ತಂ ॥

ಏನಯ್ಯ ನನ್ನ ಕೈಹಿಡದಂಥ ಪತಿದೇವ್ರೆ, ವೀರ್ರಾಜಿ ಅರಸು ಆಡುದ ಮಾತು ಗ್ಯಾನವಾಗಲಿಲ್ವ? ಹೇಳಿದ ಮಾತು ತಿಳೀಲಿಲ್ಲ ಸ್ವಾಮಿ ಹೇಳುವೆನು ಕೇಳಿ -

ನಿಮಗೆ ಮೊಕುದಲ್ಲಿ ಮೀಸೆ ಇಲುವಯ್ಯ ನನ್ನಾಳೋ ದೊರೆಯ್ಯೆ
ಎದೆಯ ಒಳಗೆ ಪ್ರಾಣ ಇಲುವಯ ?
ಎದೆಯ ಒಳಗೆ ತ್ರಾಣ ಇಲುವಯ್ಯ ನನ್ನಾಳೊ ದೊರೆಯೆ
ಮುಂಗೈಲಿ ನಿನಗೆ ಶಗತಿ ಇಲವಯ್ಯ ॥ ತಂ ॥
ಮುಂಗೈಲಿ ನಿನಗೆ ಶಗತಿ ಇಲುವಯ್ಯ ನನ್ನಾಳೊ ದೊರೆಯೆ
ನಾಕರ ಸರಿ ಗಂಡಸು ನೀನಲ್ವ ?
ನಾಕರ ಸರಿ ಗಣಸು ನೀನಲ್ವ ನನ್ನಾಳೊ ದೊರೆಯೆ
ನನ್ನಂಥ ಹೆಂಗಸು ನೀನಯ್ಯ ॥ ತಂ ॥

ಕೇಳಯ್ಯ ವೀರ್ರಾಜಿ ಅರಸಿನವರೆ ಎದೇಲಿ ತ್ರಾಣ ಇಲವ? ಮುಂಗೈಲಿ ಶಗತಿ ಇಲವ? ನಾಕರ ಸರಿ ಗಣಸಲ್ವ? ಮೊಕದಲ್ಲಿ ಮೀಸೆ ಇಲ್ವ? ನನ್ನಂಥ ಹೆಂಗಸೂನೆ ಗುರುವೆ -

ಅಂತೇಳಿ ಮಡದಿ ಮಾತ ರಾಜ ಕೇಳುಕೊಂಡ ವೀರ್ರಾಜಿ ಅರಸು
ಮುದ್ದು ಮೀಸೆಯ ಮುರಿದು ತಿದಕೊಂಡ ॥ ತಂ ॥
ಮುದ್ದು ಮೀಸೆಯ ಮುರಿದು ತಿದ್ದಿಕೊಂಡ ನನ್ನಾ ದೊರೆಯು
ಗರಡು ಮೀಸೆಯ ಹಲಗೆ ತಿದ್ದಿಕೊಂಡ ॥ ತಂ ॥
ಅವ್ನು ತೊಡೆಯ ತಟ್ಟಿ ಮೀಸೆ ತಿದಿಕೊಂಡ ವೀರ್ರಾಜಿ ಅರಸು
ಬಾಗಿ ತಟ್ಟಿದ ಬಲದ ಭುಜವನೆ ॥ ತಂ ॥
ಬಾಗಿ ಬಲಭುಜವ ತಟ್ಟಿಕೊಂಡ ವೀರ್ರಾಜಿ ಅರಸು
ಹಲಗೆ ಎಡದ ಭುಜವ ತಟ್ಟಿಕೊಂಡ ॥ ತಂ ॥

ಆಗಲೀಗ ವೀರ್ರಾಜಿ ಅರಸುನವರು ನೊರಕನೆ ಹಲ್ಲುಕಡಕೊಂಡು, ದುರದುರನೆ ಲಿಂಗರಾಜಮ್ಮುನ ಮೊಕ ನೋಡಿಕೊಂಡು, ಕೇಳು ಮಡದಿ ಲಿಂಗರಾಜಿ ಈವತ್ತಿನ ದಿವುಸದಲ್ಲಿ ನನ್ನ ಹೇಡಿ ಅಂತ ತಿಳಿದಬುಟ್ಟ ಮಡದಿ? ಪಿರಿಯಪಟ್ಣದಲ್ಲಾಗತಕ್ಕಂಥ ಕಲ್ಮೆ ಹೇಳಕೊಡತೀನಿ ಕೇಳು ಮಡದಿ :

ನನ್ನ ವೀರ್ರಾಜಿ ಭೂಪನ ಸುದ್ದಿ ಕೇಳುದರೆ ನನ್ನ ಮಡದಿ
ಹಡಗೆಲ್ಲ ಗಡಗಡ ನಡುಗುವುದು ॥ ತಂ ॥
ನನ್ನ ದನಿಯ ಸಬತ ಕೇಳಿಕೊಂಡ್ರೆ ಕಾಡಿಳಿನೊಳಗೆ
ಹುಲಿಗೋಳು ಅಬ್ಬುರಸಿ ಓಡುವವು ॥ ತಂ ॥
ನಾನು ಬರುವಂಥ ಸಬತ ಕೇಳಿದರೆ ನನ್ನ ಮಡದಿ
ಹಾವೇ ಹುತ್ತಕ್ಕೆ ಹೋಗುವದು ॥ ತಂ ॥
ನನ್ನ ರವಳನ್ನೆ ಕೇಳಿದರೆ ಅಯ್ಯೋ ಮಡದಿ
ಆನೆಯೆ ಅಬ್ಬುರಸಿ ಓಡುವದು ॥ ತಂ ॥
ನಾನು ರಾಜು ಬೀದಿಲಿ ನಡೆದು ಬರುವಾಗ ನನ್ನ ವೈರಿಗಳು
ಹ್ಯಾಟ ಕಳದು ಸಲಾಮ ಹೊಡಿವರು ॥ ತಂ ॥
ಹ್ಯಾಟ ಕಳದು ಸಲಾಮ ಹೊಡಿತಾರೆ ನನ್ನ ಮಡದಿ
ಪಾದಕ ಬಿದ್ದು ಕಾಲು ಹಿಡಿತಾರೆ ॥ ತಂ ॥
ಹೆಣ್ಣೆ ಕತ್ತಿಯ ಕೈಯಲ್ಲಿ ಹಿಡುದರೆ ನನ್ನಾ ಮಡದಿ
ದಂಡೆಲ್ಲ ಗೋಳಂತ ನುಡಿತಾರೆ ॥ ತಂ ॥

ಮಡದಿ ಲಿಂಗರಾಜಿ, ಕಾಡಲ್ಲಿರುವಂಥ ಹುಲಿ ಬುಟ್ಟವನಲ್ಲ, ಸರಪ ಬುಟ್ಟವನಲ್ಲ, ನನ್ನ ರವಳು ರ್‍ವಾಸನೇನಾದರೂ ಆನೆ ಕಂಡಬುಟ್ರೆ, ಆನೇನೆ ಅಬ್ಬರಿಸಿ ಓಡೋಯ್ತದೆ ಮಡದಿ. ನಾನು ಬರೂದೇನಾದರೂ ವೈರಿಗಳೇನಾದ್ರು ಕಂಡಬುಟ್ರೆ ಕರವೆತ್ತಿ ಕೈ ಮುಗೀತಾರೆ. ಕಾಲುಗ ಶರಣ ಮಾಡತಾರೆ ಲಿಂಗರಾಜಿ -

ಈವತ್ನ ದಿವಸಾವೆ ಕೇಳೆಣ್ಣೆ ನನ್ನ ಮಡದಿ
ಹೊಕ್ಕಿ ಬರತೀನಿ ಮೈಸೂರ್ರಾಜ್ಯವ ॥ ತಂ ॥
ಹೊಕ್ಕಿ ಬರುವೆ ಮೈಸೂರ್ರಾಜ್ಯವ ನನ್ನಾ ಮಡದಿ
ನುಗುತೀನಿ ಮೈಸೂರ್ರಾಜ್ಯಕೆ ॥ ತಂ ॥
ಮೈಸೂರು ರಣಕೆ ಹೋದರೆ ನಿಂ ಅಣ್ಣಾಯ್ನವರ
ಕತ್ತರಿಸಿ ಕಲಕ್ವಾಟೆಗೆ ಹಾಕತೀನಿ ॥ ತಂ ॥
ಕತ್ತರಿಸಿ ಕಲಕ್ವಾಟೆಗೆಗಾಕತೀನಿ ಅವ್ನ ತಲೆಯ
ಕತ್ತರಿಸಿ ಶಿರವ ಕಡಿತೀನಿ ॥ ತಂ ॥
ಅವ್ನ ಕತ್ತ ಕತ್ತರಿಸಿ ಔತಣ ಮಾಡತೀನಿ ಮೈಸೂರ್ರಾಜ್ಯದೊಳಗೆ
ಉತ್ತಿರಸವನ ಜಗಲಿ ಕಟುತೀನಿ ॥ ತಂ ॥

ಈವತ್ತುನ ದಿವಸದಲ್ಲಿ ಮಡದಿ ಲಿಂಗರಾಜಮ್ಮ ಮೈಸೂರ್ರಾಜ್ಯಕೆ ನಾನು ಹೊಂಟೋಗ ಬುಟ್ರೆ ಲಿಂಗರಾಜಮ್ಮ, ನಿಮ್ಮಣ್ಣಾಯ್ನ ಕತ್ತರಸಿ ಕಲಕ್ವಾಟೆ ಒಳಗಾಕತೀನಿ. ಉತ್ತುರಿಸಿ ಜಗಲಿ ಕಟ್ಟತೀನಿ. ಅವ್ನ ಕತ್ತ ಕತ್ತರಸಿ ಔತಣ ಮಾಡತೀನಿ. ಅವನಿಗೆ ಸಮಾನವಾಗಿ ಬರುವಂಥ-

ದಂಡ ಬುಡವೋನು ನಾನಲ್ಲ ನನ್ನ ಮಡದಿ
ಅವನೊಂದಿಗೆ ಬರುವರ ಬುಡವೋನು ನಾನಲ್ಲ ॥ ತಂ ॥
ಅವನ ಮುಂದೆ ಬಂದವರ ಬುಡದಿಲ್ಲ ನನ್ನ ಮಡದಿ

ಅವನ ಹಿಂದೆ ಬಂದವರ ಬುಡಧಿಲ್ಲ ॥ ತಂ ॥
ದಂಡನೆ ಗೋಳಾಡಿಸಿ ಬರುವೆನೊ ನನ್ನ ಮಡದಿ
ಅವ್ನ ರಾಜ್ಯವ ನಾ ಕೆಡಿಸಿ ಬರುವೆನೊ ॥ ತಂ ॥

ಅವ್ನ ರಾಜ್ಯ ದೇಸ ಕೆಡಿಸಿ ಬರತೀನಿ ಲಿಂಗರಾಜಿ ಎಂಬುದಾಗಿ ವೀರ್‍ರಾಜಿ ಅರಸುನವರು ಮತ್ತೊಂದು ಮಾತ ಹೇಳತಾವ್ರೆ. ನನ್ನ ಧೀರ ಶೂರ ಅಂತ ನಂಬಬೇಕಾದ್ರೆ ಹೇಳುವೆನು ಕೇಳು ಮಡದಿ. ದಳವಾಯಿ ದೊರೆ ತಂದೆ ಶಿರಸ ತಗದೋರು ನಾವಲ್ವೆ ಮಡದಿ? ಈವತ್ತುನ ದಿವಸದಲ್ಲಿ -

ಅವರ ತಂದೆ ಶಿರಸ ನಾವ್ಹೆಂಗೆ ತಗದೆವೊ ಅದೇ ರೀತಿ
ನಿಮ್ಮಣ್ಣನ ಶಿರಸ ಈಗ ತಗಿವೆನೊ ॥ ತಂ ॥
ನಿಮ್ಮಣ್ಣನ ಶಿರಸ ಈಗ ತಗಿವೆನೊ ನನ್ನಾ ಮಡದಿ
ಮೈಸೂರು ಹಾಳನ್ನೆ ಮಾಡವೆನೊ ॥ ತಂ ॥

ಮೈಸೂರ ಹಾಳಪಟ್ಟಣ ಮಾಡಬುಡತೀನಿ, ಗಾಳಿಗಿಟ್ಟು ತೂರಬುಡತೀನಿ. ಅವ್ನ ದಂಡುಧಾಳೀನೆಲ್ಲ ಗೋಳಗರಿಸಿ ಬರತೀನಿ. ಈವತ್ತುನ ದಿವಸದಲ್ಲಿ ಮೈಸೂರ್‍ರಾಜ್ಯಕೆ ಹೋಯ್ತೀನಿ ಮಡದಿ -

ದಂಡಿನ ಜಗಳಕ್ಕೆ ಬರದೆ ಹೋಗಲಾರಿ ನನ್ನ ಮಡದಿ
ಕೊಡರ್‍ಹೆಣ್ಣೆ ಚಂದ್ರಾಯದ ಕತ್ತೀಯ ॥ ತಂ ॥
ತತಾರ್‍ಹೆಣ್ಣೆ ಚಂದ್ರಾಯದ ಕತ್ತೀಯ ನನ್ನ ಮಡದಿ
ನುಗ್ಗಿ ಬರುವೆ ಮೈಸೂರ್‍ರಾಜ್ಯವ ॥ ತಂ ॥

ಮೈಸೂರ್‍ರಾಜ್ಯವ ನುಗ್ಗಿ ಬರತೀನಿ. ತತ್ತಾರಲ ಹೆಣ್ಣೆ ಚಂದ್ರಾಯದ ಕತ್ತೀಯ ಅಂತೇಳಿ ವೀರ್‍ರಾಜಿ ಅರಸು ಲಿಂಗರಾಜಮ್ನ ಕೇಳುದ್ರು. ಆಗ ಲಿಂಗ್ರಾಜಮ್ಮ ಗುಡಗುಡನೆ ಓಡಬಂದು ಉಗ್ರಾಣದ ಮನೆಲಿರುವಂಥ ನೂರೊಂದಾಯದ ಮುಸ್ತಾಪಿನಲ್ಲಿ ಉಕ್ಕುನ ಕತ್ತಿ ತಗಂಡ ಬಂದು ನಮ್ಮಣ್ಣನ ಶಿರಸಾವ ಇದೇ ಕತ್ತಿಗೆ ಆವತಿ ಕೊಡಬೇಕು ಎಂಬುದಾಗಿ ಆಗಲೀಗ ಉಕ್ಕುನ ಚಂದ್ರಾಯದ ತಕಂಡ ಬಂದು ವೀರ್‍ರಾಜಿ ಆರಸುನವರ ಬಲಗೈಗೆ ಕೊಟ್ರು. ಕತ್ತಿಯನ್ನ ಕೈಲಿಡಕೊಂಡು ಲಿಂಗರಾಜಮ್ನ ಮೊಕ ಕಣ್ಣೆತ್ತಿ ನೋಡುದ್ರು. ಅವರ ಎಡದಲ್ಲಿ ಬಲದಲ್ಲಿ ಕೂತಿದ್ರಲ್ಲ ಪಟ್ಟದ ಗೌರಮ್ಮ, ಮಾಗಾಯಿ ಎಂಬತಕ್ಕ ಇಬ್ಬರು ಮಡದೀರು ಗಂಡನ ಮೊಕ ಕಣ್ಣೆತ್ತಿ ನೋಡಬುಟ್ಟು ಇಬ್ಬರು ಮಡದೀರು ಗುರುದೇವಾ -

ಕತ್ತಿ ಹಿಡಿದ ಗಂಡನ ನೋಡುತಾರೆ ಇಬ್ಬರು ಮಡದೀರು
ಅವ್ನ ಪಾದುಕ್ಕೆ ಧಿಡೀರನೆ ಬೀಳುತಾರೆ ॥ ತಂ ॥
ಅವ್ರ ಪಾದದ ಮ್ಯಾಲೆ ಸಮುನೆ ಬಿದ್ದುರಲ್ಲ ಇಬ್ಬರ ಮಡದೀರು
ಪಾದಕ ಬಿದ್ದು ಸ್ವಾಕ ಮಾಡುತಾರೆ ॥ ತಂ ॥
ಪಾದಕ ಬಿದ್ದ ಮಡದೀರ ನೋಡುಕೊಂಡು ವೀರ್‍ರಾಜಿ ಅರಸು
ಮರುಗಾಗಿ ಸುಮ್ಮನೆ ನಿಂತಕೊಂಡ ॥ ತಂ ॥

ಯಾವಾಗ ಎಡದಲ್ಲಿ ಬಲದಲ್ಲಿ ಕೂತಿದ್ದಂಥ ಪಟ್ಟದ ಗೌರಮ್ಮ, ಮಾಗಾಯಿ, ವೀರ್‍ರಾಜಿ

ಅರಸನವರ ಪಾದ ಹಿಡಕೊಂಡು ಸ್ವಾಕ ಮಾಡುದ್ರೋ ಆಗಲೀಗ ದುಕ್ಕ ಮಾಡುವಂಥ ಕಣ್ಣೆತ್ತಿ ನೋಡಿಕೊಂಡು ವೀರ್‍ರಾಜಿ ಅರಸರು ಏನು ಮಾಡುತಾರೆ ಅಂದ್ರೆ, ಯಾತಕ್ಕೆ ಪಟ್ಟದ ಗೌರಮ್ಮ? ಮಾಗಾಯಿ, ಚಿಂತೆ, ವ್ಯಥೆ ಮಾಡತೀರಿ? ನಿಮ್ಮಲ್ಲಿರುವಂಥ ವಿಚಾರ ನನಗ್ಹೇಳ ಕೊಡಿ ಅಂತೇಳಿ ವೀರ್‍ರಾಜಿ ಅರಸುನವರು ಕೇಳುದ್ರು. ಆಗಲೀಗ ಏನ ಮಾತಾಡತಾವರೆ ಅಂದ್ರೆ, ಈವತ್ತಿನ ದಿವಸದಲ್ಲಿ ಮಡದಿ ಕೈಯಿನ ಆಯುಧ ತಕ್ಕೊಂಡು, ವೈರಿ ಕತ್ತ ಕಡಿದು ಬರತೀನಿ ದಂಡಗೋಗಿ ಅಂತೇಳತಿರಲ್ಲ ಸ್ವಾಮಿ -

ರಾಜುರಾಗಿ ನೀವು ಹುಟಿದಿರಿ ನನ್ನಾಳೊ ದೊರೆಯೆ
ನಿಮ್ಮ ಸೇರಿ ರಾಣಿರಾದವಲ್ಲೊ ॥ ತಂ ॥
ನಿಮ್ಮ ಸೇರಿ ರಾಣಿರಾದವಲ್ಲೊ ನಮ್ಮ ದೊರೆಯೆ
ಮುಂಡೆರ ಮಾಡಿ ನಮ್ಮ ಹೊರಟೆಯ ॥ ತಂ ॥
ನಮ್ಮ ಮುಂಡೆರ ಮಾಡಿ ನಮ್ಮ ಹೊರಟೆಯ ನನ್ನಾಳೊ ದೊರೆಯೆ
ಹೆಣ್ಣರಾಣಿರ ಪಟ್ಟ ಮಾಡೆಯ ॥ ತಂ ॥
ಹೆಣ್ಣರಾಣಿರ ಪಟ್ಟ ಮಾಡುಬುಟ್ಟು ನಮ್ಮಾ ಸ್ವಾಮಿ
ಹಿಂಡಿನ ಜಗಳಾಕೆ ಹೋಗುಬ್ಯಾಡಿ ॥ ತಂ ॥

ಕೇಳಿ ಗುರುದೇವ ಇಷ್ಟಕಾಲದಗಂಟ ರಾಜರಾಗಿ ನೀವಿದ್ರಿ. ನಿಂ ಸೇರಿ ನಾವು ರಾಣಿರಾಗಿದ್ದಿವಿ. ಈವತ್ತಿನ ದಿವಸದಲ್ಲಿ ನಮ್ಮ ಬುಟಬುಟ್ಟು ಮೈಸೂರ್‍ರಾಜ್ಯಕ ದಂಡೆತ್ತಿ ಹೋಗಿ ನಮಗೆ ಮುಂಡೆ ಬಾಳ ಮಾಡಬುಟ್ಟು ಹೋದಿರ ಗುರುವೆ ಎಂಬುದಾಗಿ ಕೇಳಿದರು. ಎಳೆಯ ಲಿಂಗ್ರಾಜಿ, ಪಟ್ಟದ ಗೌರಮ್ಮ, ಪಟ್ಟದ ಮಾಗಾಯಿ ನನ್ನ ಎಂಥವನು ಅಂತ ತಿಳಕೊಂಡ್ರಿ ? ಈವಾಗಲೀಗ ಪ್ರಾಣ ಕಳಕೊಳ್ಳುನು ನಾನಲ್ಲ. ವಿದ್ಯ ಮಾಡುವಾಗ ವೈರಿ ಕೈಲಿ ಕೊಲೆ ಮಾಡಿಸಕೊಳ್ಳೂನು ನಾನಲ್ಲ. ನಿಮಗೆ ಮುಂಡೆತನ ಮಾಡವ್ನು ನಾನಲ್ಲ. ಚಿಂತೆ ಮಾಡಬ್ಯಾಡಿ. ಸಂಕಟ ಪಡಬ್ಯಾಡಿ-

ನನ್ನ ಹಿಡಿದಿರುವ ಪಾದಾವ ಬುಡರ್ಥೆಣ್ಣೆ ನನ ಮಡದಿ
ಹೋಯ್ತೀನಿ ಮೈಸೂರು ರಣಕೆ ॥ ತಂ ॥

ಪಾದ ಬುಟಬುಡು ಮಡದಿ ಹೋಯ್ತೀನಿ ಜಗಳಕೆ ಅಂದ್ರೆ ಬುಡೂರು ನಾವಲ್ಲ. ನಂ ಅರಸು ಜಾತಿ ಒಳಗೆ ಗಂಡ ದಂಡಿಗೋದ ಮ್ಯಾಲೆ ಹೆಂಡತಿರಿಗೆ ಮುಂಡೆ ಬಾಳು ಅಂತ ವಾಗ್ದಾನ ಉಂಟು ಸ್ವಾಮಿ. ಈವತ್ತಿನ ದಿವಸದಲ್ಲಿ -

ನಿನ್ನ ವೈರಿ ಮ್ಯಾಲೆ ಜಗಳ ಮಾಡುವದ ನನ್ನಾಳು ದೊರಿಯೆ
ನಮ್ಮ ಮ್ಯಾಲೆ ಜಗಳ ಮಾಡಯ್ಯ ॥ ತಂ ॥
ನಮ್ಮ ಮ್ಯಾಲೆ ಜಗಳ ಮಾಡಯ್ಯ ನಮ್ಮಾಳೊ ದೊರೆಯೆ
ನಮ್ಮ ಕೊಂದು ನೀನು ಹೋಗಯ್ಯ ॥ ತಂ ॥

ನಿನ್ನ ವೈರಿ ಮ್ಯಾಲೆ ಜಗಳಕೋಗಿ ಕದನ ಕಾಳಗ ಮಾಡೂದಕ್ಕಿಂತ, ನಂ ಮ್ಯಾಲೆ ಕದನ ಕಾಳಗ ಮಾಡಿ ನಮ್ಮಿಬ್ಬರ ಪ್ರಾಣಾನು ತಗದಬುಡಿ. ಆನಂತರ ಹೋಗಿ ಎಂಬದಾಗಿ ಪಟ್ಟದ ಗೌರಮ್ಮ, ಮಗಾಯಿ ಪಾದ ಹಿಡಕಂಡ್ರು. ಆ ಗಳಗೆ ಒಳಗೆ ವೀರ್‍ರಾಜಿ ಅರಸು ಮಡದೀರಗೆ ಸಮಾಧಾನ ಹೇಳತಾವ್ರೆ.

ಹೋದ ಕೂಡಲೆ ನನ್ನ ಕಳಗಿದರೆ ನನ್ನಾ ಮಡದಿ
ನಾನು ಹೋದ ಕಾರ‍್ಯ ಜಯವ ಮಾಡುತೀನಿ ॥ ತಂ ॥
ನಾನು ಹೋದ ಕಾರ‍್ಯ ಜಯವ ಮಾಡಿಕೊಂಡು ನನ್ನಾ ಮಡದಿ
ವೈರಿ ಶಿರಸ ತಕ್ಕೊಂಡು ಬರುತೀನಿ ॥ ತಂ ॥

ಹೋದಂಥ ಕಾರ‍್ಯ ಜಯವಾಗುತ್ತದೆ. ವೈರಿ ತಲೆ ನನ್ನ ಕೈಗೆ ಸಿಕ್ತದೆ. ತಡೀಬ್ಯಾಡಿ ಕಳಗಬುಡಿ ನನ್ನ ಎನುವಂಥ ಕಾಲದಲ್ಲಿ ದೇವಾ ಆಗಲೀಗ ಪಟ್ಟದ ಗೌರಮ್ಮ, ಎಳೆ ಮಾಗಾಯಿ ಏನೇಳುತಾರೆ? ಸ್ವಾಮಿ ನಂ ಬುಟ್ಟು ಖಂಡತವಾಗು ಜಗಳಕೆ ಹೋಗಬ್ಯಾಡಿ. ಪಿರಿಪಟ್ಟಣದಿಂದ ಮೈಸೂರ‍್ರಾಜ್ಯಕೆ ಹೋಗಬ್ಯಾಡಿ. ಲಿಂಗರಾಜಮ್ಮ ಅಣ್ಣನಾಗಿರುವಂಥ ದಳವಾಯಿ ಮಾರಾಜ ಅಂಥ ಶೂರ‍್ರಾದ ಮೇಲೆ -

ಅವ್ರು ಇಪ್ಪತ್ತ ಸಾವುರ ದಂಡ ಕಟ್ಟಿಗೊಂಡ ನಮ್ಮಾಳೊ ದೊರೆಯೆ
ನಿನ್ನ ಮ್ಯಾಲೆ ವಿದ್ಯಕೆ ಬರಲಯ್ಯ ॥ ತಂ ॥

ಇಪ್ಪತ್ತಸಾವುರ ದಂಡ ಬೇಕಾದ್ರೆ ಕಟಕೊಂಡು ನಂ ಪಿರಿಪಟ್ಟಣದ ಮ್ಯಾಲೆ ಅವರೇ ದಂಡೆತ್ತಿ ಬರಲಿ. ಆ ದಂಡಿನಲ್ಲಿ ನೀವು ಕದನ ಮಾಡಿ, ವಿದ್ಯ ಮಾಡಿ -

ನಿಮ್ಮ ಎಡದಲ್ಲಿ ಬಲದಲ್ಲಿ ನಿಂತಕೊಂಡು ನನ್ನಾಳೊ ದೊರೆಯೆ
ನಿಮ್ಮ ನೋಡಿ ಹೆಚ್ಚಾಳ ಪಡುತಿವಿ ॥ ತಂ ॥
ವೈರಿ ಕತ್ತ ನೀವು ಕಡಿದರೆ ನನ್ನಾ ದೊರೆಯೆ
ನಿಮ್ಮ ನೋಡಿ ಸಂತೋಸ ಮಾಡುತೀವಿ ॥ ತಂ ॥
ನೀವು ವೈರಿ ಜುಟ್ಟು ಹಿಡಿದು ಕೂದರೆ ನನ್ನಾಳೊ ದೊರೆಯೆ
ನಾವು ನೋಡಿ ನಗುವ ನಗುತೀವಿ ॥ ತಂ ॥
ನಾವು ನೋಡಿ ನಗುವ ನಗುತೀವಿ ನನ್ನಾ ಸ್ವಾಮಿ
ನಿಮ್ಮ ಸಗತೀಗ ನಾವು ಮೆಚುತೀವಿ ॥ ತಂ ॥
ನಮ್ಮ ಬುಟ್ಟು ಜಗಳ ಮಾಡುಬ್ಯಾಡ ನನ್ನಾಳೊ ದೊರೆಯೆ
ಕಣ್ಣ ಮುಂದಗಡೆ ಜಗಳ ಮಾಡಯ್ಯ ॥ ತಂ ॥

ನಂ ಬುಟ್ಟು ಮೈಸೂರ‍್ರಾಜ್ಯಕ್ಕೆ ಹೋಗಿ ಜಗಳ ಮಾಡಬ್ಯಾಡಿ ಸ್ವಾಮಿ. ಪಿರೀಯಪಟ್ಣಕ್ಕೆ ವೈರೀನ ಬರಮಾಡಕೊಂಡು ನಂ ಕಣ್ಣ ಮುಂದುಗಡೆ ಜಗಳ ಮಾಡಿ ದೇವಾ. ನೀವು ಕದನ ಮಾಡೂದ, ವೈರಿ ಜುಟ್ಟು ಹಿಡಿಕೊಂಡು ಕತ್ತ ಕುಯ್ಯಾದ, ಕಣ್ಣಾರೆ ನೋಡಿ ಮನದಲ್ಲಿ ಸಂತೋಸಪಡತೀವಿ. ಬಾಯಲಿ ನೆಗವ ನೆಗತೀವಿ. ನಿಮಗೂ ಧೈರ‍್ಯ ಕೊಡತೀವಿ. ಆ ರೀತಿ ಒಳಗೆ ಕದನ ಕಾಳಗ ಮಾಡಿ ದೊರೆಯೆ. ನೀವು ಮಾತ್ರ ಪಿರೀಪಟ್ಣ ಬುಟ್ಟು ಮೈಸೂರ‍್ರಾಜ್ಯಕ ಹೋಗಬೇಡಿ ಅಂತೇಳಿ ಪಟ್ಟದ ಗೌರಮ್ಮ, ಎಳೆ ಮಾಗಾಯಿ ಹೇಳುವಂಥ ಕಾಲದಲ್ಲಿ -

ಅಯ್ಯ ಮಡದಿರಾಡುದ ಮಾತ ಕೇಳುಕೊಂಡ ವೀರ‍್ರಾಜಿ ಅರಸು
ಗುಡಗುಡನೆ ಓಡಿ ಬಂದನಲ್ಲ ॥ ತಂ ॥
ಗುಡಗುಡನೆ ಓಡಿ ಬಂದನಲ್ಲ ವೀರ‍್ರಾಜಿ ಅರಸು
ತೂಗುಮಂಚುದ ಮ್ಯಾಲೆ ಕೂತುಗೊಂಡ ॥ ತಂ ॥
ತೂಗುಮಂಚುದ ಮ್ಯಾಲೆ ಕೂತುಗೊಂಡ ವೀರ‍್ರಾಜಿ ಅರಸು
ಎಡದಲ್ಲಿ ಬಲದಲ್ಲಿ ಮಡದೀರ ಬೇಗ ಕರುಕೊಂಡ ॥ ತಂ ॥

ತೂಗುಮಂಚಕೆ ಬಂದು ವೀರ್‍ರಾಜಿ ಅರಸನವರು ಎಡದಲ್ಲಿ ಮಂತ್ರಿ, ಬಲದಲ್ಲಿ ಪ್ರಧಾನಿ ಕೂರುಸಕೊಂಡು, ಇಬ್ಬರ ಮಧ್ಯದಲ್ಲಿ ವೀರ್‍ರಾಜಿ ಅರಸನವರು ಮೂರ್ತಮಾಡಿದರು. ಮಂತ್ರಿ ಪರಧಾನಿ ಕಣ್ಣೆತ್ತಿ ನೋಡುದ್ರು. ಕೇಳಯ್ಯ ಮಂತ್ರಿ ಪರಧಾನಿ ಈವತ್ತುನ ದಿವಸದಲ್ಲಿ ಬರಿವಂಥ ವಾಲೆ ತಂದು ಮುಂಭಾಗಕ ಮಡಗರಯ್ಯ -

ನನ್ನ ವೈರಿಗೆ ಒಂದ ವಾಲೆ ಬರೀಬೇಕು ನನ್ನಾ ಮಂತ್ರಿ
ವೈರಿಗೆ ನಾ ಜಗಳ ಮಾಡುಬೇಕು ॥ ತಂ ॥
ಆಡಿದಂಥ ಮಾತ ಕೇಳಿಕೊಂಡ ಮಂತ್ರಿ ಪರದಾನಿ
ಅವ್ರು ಪುಸ್ತಕ ಪೆನ್ನ ಬೇಗ ತರುತಾರೆ ॥ ತಂ ॥
ಅವ್ರು ಪುಸ್ತಕ ಪೆನ್ನ ಬೇಗ ತಂದರಲ್ಲ ಪರಧಾನಿ
ರಾಜನ ಮಧ್ಯದಲ್ಲಿ ಮಡಗಾರೊ ॥ ತಂ ॥

ರಾಜನ ಮಧ್ಯದಲ್ಲಿ ಪುಸ್ತಕ ಪೆನ್ನು ತಗಂಡ ಬಂದು ಮಡಗದಾಗ ವೀರ್‍ರಾಜಿ ಅರಸನುವರು ಮೈಸೂರ್‍ರಾಜ್ಯವನ್ನು ಆಳುವಂಥ ದಳವಾಯಿ ಅರಸಿನವರಿಗೆ ಏನಂಥ ವಾಲೆ ಬರಿತಾವ್ರೆ ಅಂದ್ರೆ-

ಕೇಳು ಕೇಳು ದಳವಾಯಿ ಮಾರಾಜ ನನ್ನಾ ಭಾಮೈದ
ಬರಿವಂಥ ವಾಲೇಯ ಓದಯ್ಯ ॥ ತಂ ॥
ನಾನು ಬರದ ವಾಲೇಯ ನೋಡುಕೊಂಡು ನನ್ನಾ ದೊರೆಯೆ
ಪಿರೀಯಪಟ್ಟಣಕೆ ನೀನು ಬಾರಯ್ಯ ॥ ತಂ ॥
ನಮ್ಮನೆದೇವ್ರ ಹಬ್ಬಕೆ ನೀನೀಗ ನನ್ನಾ ಭಾಮೈದ
ಸೈನ್ಯ ಕಟ್ಟಿ ನೀನು ಬಾರಯ್ಯ ॥ ತಂ ॥

ಆಗ ವೀರ್‍ರಾಜಿ ಅರಸನವರು, ರಾಜ ಕಣ್ಣೆತ್ತಿ ಓದಬುಟ್ಟು ಸಂತೋಸಪಟ್ಕೋಬೇಕು. ಆ ರೀತಿಯಲ್ಲಿ ವಾಲೆ ಬರೀತಾವ್ರೆ. ಕೇಳಯ್ಯ ದಳವಾಯಿ ಮಾರಾಜ ನಂ ಪಿರೀಪಟ್ಟುದಮ್ಮ, ಉರಿಮಸಣಮ್ಮನ ಹಬ್ಬ ಮಾಡತೀನಿ. ನೀನು ಇಪ್ಪತ್ತು ಸಾವ್ರ ದಂಡು ಧಾಳಿ ಮಂದಿ ಮಾರಬಲ ಕಟಗೊಂಡು ನನ್ನ ಮನೆದೇವ್ರು ಹಬ್ಬಕೆ ನೀನು ಬಾ. ಇವತ್ನ ದಿವಸದಲ್ಲಿ ಬರದೆ ತಪ್ಪುಸಕೋ ಬ್ಯಾಡ. ಅಂತೇಳಿ ಹಬ್ಬದ ವಾಲೆ ಮೊದಲ ಬರದ. ಎರಡನೆ ವಾಲೆ ಏನಂಥ ಬರೀತಾನೆ ಅಂದ್ರೆ.

ಸರಸಕೊಂದು ವಾಲೆ ಬರಿತಾನೆ ವಿರ್‍ರಾಜಿ ಅರಸು
ವಿನಾದಕೊಂದು ವಾಲೆ ಬರೀತಾನೆ ॥ ತಂ ॥
ಸರಸಕೊಂದ ವಾಲೆ ಬರಿತಾನೆ ವೀರ್‍ರಾಜಿ ಅರಸು
ನೆಗುಕೊಂದ ವಾಲೆ ಬರಿತಾನೆ ॥ ತಂ ॥

ನೆಗುಕೊಂದ ವಾಲೆ, ಸರಸಕೊಂದ ವಾಲೆ ಬರದಬುಟ್ಟು ವೀರ್‍ರಾಜಿ ಅರಸು ಕಟ್ಟಕಡೆಯಲ್ಲಿ ಏನಂಥ ವಾಲೆ ಬರೀತಾನೆ ಅಂದ್ರೆ -

ಕೇಳಲೊ ಕೇಳಲೊ ರಾಜ ದಳವಾಯಿ ದೊರೆಯೆ
ಗಂಡಾಗಿ ನೀನು ಅಪ್ಪುನಿಗೆ ಹುಟ್ಟಿದರೆ ॥ ತಂ ॥
ನೀ ಗಂಡಾಗಿ ನಿಮ್ಮಪ್ಪುನಿಗೆ ಹುಟಿದರೆ ದಳವಾಯಿ ದೊರೆಯೆ

ದಂಡೆತ್ತಿ ಜಗಳಕ್ಕೆ ಬಾರಯ್ಯ ॥ ತಂ ॥
ನೀನು ಆರು ಸಾವುರ ಆನೆ ಕಟುಕೊಂಡು ದಳವಾಯಿ ದೊರೆಯೆ
ನನ್ನ ಮ್ಯಾಲೆ ವಿದ್ಯಕ ಬಾರಯ್ಯ ॥ ತಂ ॥
ಒಂಟೆ ಮ್ಯಾಲೆ ಬಂಟರ ಬುಟುಕೊಂಡು ದಳವಾಯಿ ದೊರೆಯೆ
ನನ ಮ್ಯಾಲೆ ವಿದ್ಯಕ ಬಾರಯ್ಯ ॥ ತಂ ॥
ನೀನು ಹನ್ನೆರಡು ಸಾವುರ ಕುದರೆ ಕಟುಕೊಂಡು ನನ್ನಾ ದೊರೆಯೆ
ಕುದರೆ ಮ್ಯಾಲೆ ಸಿಪಾಯ ಕರಕೊಂಡು ॥ ತಂ ॥
ನೀನು ಆನೆ ಅಂಬಾರಿ ಸೈತವಾಗಿ ದಳವಾಯಿ ದೊರೆಯ
ಆನೆಮ್ಯಾಲೆ ನೀನು ಬಾರಯ್ಯ ॥ ತಂ ॥
ಹನ್ನೆರಡ ಸಾವ್ರರ ದಂಡ ತಕ್ಕಂಡು ದಳವಾಯಿ ಕಂದಣ್ಣ
ನನ್ನ ಮೇಲೆ ಯದ್ಧಕೆ ಬಾರಯ್ಯ ॥ ತಂ ॥
ಹನ್ನೆರಡ ಸಾವರ ಮುಂದೆ ಬುಟುಕೊಂಡು ದಳವಾಯಿ ಕಂದಣ್ಣ
ಹನ್ನೆರಡ ಸಾವರ ಮುಂದೆ ಬುಟುಕೊಂಡು ॥ ತಂ ॥
ಹನ್ನೆರಡ ಸಾವರ ಹಿಂದೆ ಬುಟುಕೊಂಡು ಕಂದ ದಳವಾಯಿ
ನನ್ನ ಮೇಲೆ ಯದ್ಧಕೆ ಬಾರಯ್ಯ ॥ ತಂ ॥

ಒಂಟೆಮ್ಯಾಲೆ ಬಂಟರ ಕುಂಡ್ರಸಕೊಂಡು, ಜಟ್ಟಿಗಳ ಕೂರಸಕೊಂಡು, ಕುದ್ರೆ ಸಿಪಾಯಿಗಳ ಕುಂಡ್ರಸಕೊಂಡು, ಇಪ್ಪತ್ತನಾಕ ಸಾವಿರ ಸೈನ್ಯಾನು ಕಟಗೊಂಡು ದಂಡೆತ್ತಿ ಬರಬೌದು ದಳವಾಯಿ ಮಾರಾಜ. ಇದೂ ಅಲ್ದೆ ಹೇಳತೀನಿ ಕೇಳು -

ಲೆ ನಾನು ನೀನು ಕಾಳಗ ಮಾಡುವ ದಳವಾಯಿ ದೊರೆಯೆ
ನೀನು ಗೆದ್ದರೆ ತಕೊ ಪಿರಿಯಪಟ್ಟಣ

ನಾನು ನೀನು ಸೇರಿಕೊಂಡು ದಂಡಿನಮಾಳದಲ್ಲಿ ಕಾಳಗ ಮಾಡುವಾಗ ಈ ಪಿರೀಪಟ್ನ ನೀನೇ ತಕೊ. ಈವತ್ತುನ ದಿವಸದಲ್ಲಿ ದಂಡುನೊಳಗೆ ನನಗೇನಾರ ನೀನು ಸೋತೋಗಬುಟ್ರೆ ಮೈಸೂರು ರಾಜ್ಯವ ನನಗೆ ಕೊಟ್ಟಬುಡು. ದಂಡೆತ್ತಿ ಜಗಳಕೆ ಬಾ. ನೀನು ಧೀರುನಾದ್ರೆ ಜಗಳಕೆ ಬರಬೌದು ಹೇಡಿಯಾದರೆ ಅಲ್ಲೆ ಇರಬೌದು. ಮೀಸೆ ಹೊತ್ತಿದ್ದರೆ ಬಂದು ಲಡಾಯಿ ಮಾಡು. ನೀನು ಧೀರನಿಗೆ ಹುಟ್ಟಿದ್ದರೆ ಗೆದ್ದು ರಾಜ್ಯ ತಕ್ಕೊಂಡೋಗೋ.

ಹೇಡಿಗೆ ನೀನು ಹುಟ್ಟಿದ್ದರೆ ನನ್ನ ದೊರೆಯೆ
ಹೇಡಿಯಾಗಿ ಅಲ್ಲೇ ಇರುವುದು ॥ ತಂ ॥
ಗಂಡಾದರೆ ಗುಂಡ ಹೊಡದಂಗ ಬರಬೌದು ಮೈಸೂರು ದೊರೆಯೆ
ಹೇಡಿಯಾದರೆ ಅಲ್ಲೇ ಇರುವುದು ॥ ತಂ ॥

ಬಂದಿರುವಂಥ ವಾಲೆ ನೋಡಿಕೊಂಡು ಗಂಡಾದರೆ ಗುಂಡ ಹೊಡೆದಂಗೆ ಜಗಳಕ ಬಾ. ಹೇಡಿಯಾಗಬುಟ್ರೆ ಬಣ್ಣ ಉಟಕೊಂಡು, ಬಳೆ ತೊಟಕೊಂಡು ಇರು ಎಂದು ವಾಲೆ ಬರದಬುಟ್ಟು, ಆಗಲೀಗ ಜಟ್ಟಿಗಳಿಗೆ ಜಟುಗೋಳೆ ಬರದಿರುವ ವಾಲೆ ಕೊಡಿರಯ್ಯ -

ವೈರಿ ಕೈಗೆ ವಾಲೆ ಕೊಟ್ಟರೆ ನನ್ನಾ ಜಟ್ಟಿಗಳೆ
ನಿಮಗೆ ಕೈತುಂಬ ಸಂಬಳವ ಕೊಡುವೆನು ॥ ತಂ ॥

ಅವ್ನು ಕುದ್ರೆ ಮ್ಯಾಲೆ ಹತ್ತಿ ಕುಂತಗೊಂಡ
ಬರೆದಿರುವ ವಾಲೆ ತಗದು ಬೆನ್ನುಗೆ ಕಟ್ಟಿಕೊಂಡ ॥ ತಂ ॥
ವಾಲೆ ತಗದು ಬೆನ್ನಿಗೆ ಕಟ್ಟಿಕೊಂಡು ಜಟ್ಟಿಗೊಳು
ಬೇಗದಲ್ಲಿ ಪಿರಿಪಟ್ಣ ಬುಡುತಾರೆ ॥ ತಂ ॥
ಅವ್ರು ಅಡವಿ ಅರಣ್ಯ ದಾಟಿಕೊಂಡು
ಕೊಡಗುನ ದೇಸನ ಬುಡುತಾನೆ ನನ್ನ ಜಟ್ಟಿ
ಅವ್ನು ಹುಣಸೂರು ನಗರದಲ್ಲಿ ಇಳುದಾನೋ ॥ ತಂ ॥
ಅವರು ಹುಣಸೂರು ನಗರವ ಬಿಟ್ಟರು
ಅವರು ಮೈಸೂರು ಪ್ಯಾಟೆಗೆ ಕಡದರು
ಅವರು ಮೈಸೂರು ಬೀದೀಗೆ ಬಂದರಲ್ಲ ಜಟ್ಟಿಗಳು
ಕೋಟೆಯ ಬಾಗಿಲಲ್ಲಿ ಇಳಿದರು.
ಕೋಟೆ ಪಾರಾದವರು ನೋಡಿದರು ಜಟ್ಟಿಗಳ
ಬಂದಂಥ ಕಾರಣುವ ಹೇಳಿರಯ್ಯ ॥ ತಂ ॥

ಬಂದಂಥ ಕಾರಣ ಹೇಳಿಕೊಡರಪ್ಪ ಎನುವಂಥ ಕಾಲದಲ್ಲಿ, ಆಡಿದಂಥ ಮಾತನೆ ಕೇಳಕೊಂಡು ಗುರುದೇವಾ ಕೇಳಯ್ಯ ಪಿರೀಪಟ್ಣದಲ್ಲಿ ಸಂಸ್ಥಾನ ಆಳತಕ್ಕಂಥ ವೀರ್‍ರಾಜಿ ಅರಸುನವರ ಕಡೆ ಏಳಜನ ಆಳಗೋಳು ಈವಾಗಲೀಗ ಕುದ್ರೆಮ್ಯಾಲೆ ಕುಂತಿರವರು, ನಮ್ಮ ರಾಜರಿಗೆ ಜಟ್ಟಿಯಾಗಿರುವಂಥವರು, ಎಂಬದಾಗಿ ಏಳಜನ ಆಳಗೋಳು ಹೇಳತಿದ್ದಾರೆ. ಆಡಿದಂಥ ಮಾತ ಕೇಳಕೊಂಡು ಆಗಲೀಗ ಕುದ್ರೆ ಮ್ಯಾಲೆ ಕೂತಿರುವಂಥ ಸಿಪಾಯಿಗೆ ಏನ ಮಾತಾಡತಾರೆ ಅಂದ್ರೇ ಏನಯ್ಯ ಕುದರ ಮ್ಯಾಲೆ ಕೂತಿರುವಂಥ ಸಿಪಾಯಿ, ಈವತ್ತುನ ದಿವುದಸದಲ್ಲಿ ನಂ ರಾಜರ ಅರಮನೆಗೆ ನೀವು ಬರಬೇಕಾದ್ರೆ ಕಾರಣವೇನು? ನಿಮ್ಮ ರಾಜರಿಗೆ ವಾಲೆಕೊಡಬೇಕುಕನರಪ್ಪ ಏನುವಂಥ ಕಾಲದಲ್ಲಿ, ನಮ್ಮ ರಾಜರಿಗೆ ವಾಲೆ ತಂದಿರುವಂಥ ಸಿಪಾಯಿ ಎಂಥವರಾಗಿರಬೌದು ಅಂತೇಳಿ ಬೇಗದಲ್ಲಿ ಕ್ವಾಟೆ ಬಾಗಲ ಗೇಟ ತಗುದ್ರು. ಆಗಲೀಗ ಸಿಪಾಯಿ -

ಅಯ್ಯ ಹಿಂದೆ ಮೂರು ಜನವ ಕಟ್ಟಿಕೊಂಡ ಹೆದುರುಕೊಂಡು
ಮುಂದೆ ಮೂರು ಜನವ ಬುಟ್ಟುಕೊಂಡ ॥ ತಂ ॥
ಧೈರ್ಯಕೊಬ್ಬನ ಬಲದಲ್ಲಿ ಬುಟ್ಟುಕೊಂಡು ನನ್ನಾ ಜಟ್ಟಿ
ಎಡದಲ್ಲಿ ಕುದರೆ ಬುಟುಕೊಂಡು ॥ ತಂ ॥
ಅರಮನೆ ಆಸ್ಥಾನಕೆ ಬಂದನಲ್ಲ ನನ್ನಾ ಸಿಪಾಯಿ
ಬಾಗಲ ಮುಂದೆ ಕುದರೆ ಇಳುದಾನೊ ॥ ತಂ ॥

ಬಾಗಲ ಮುಂಭಾಗದಲ್ಲಿ ಕುದರೆ ಇಳದು ಬಲದಲ್ಲಿರುವಂಥ ಜಟ್ಟಿ ಕೈಲಿ ಕುದರೆ ಕೊಟಬುಟ್ಟು ಸಿಪಾಯಿ, ದಳವಾಯಿ ಮಾರಾಜ, ಬಲದಲ್ಲಿ ಬಾಳೆ ಅರಸನವರು, ಎಡದಲ್ಲಿ ಕೆಂಪೋಜಿ ಅರಸನವರು, ಮಧ್ಯದಲ್ಲಿ ದಳವಾಯಿ ಮಾರಾಜೇಶ್ವರಿ ಕೂತಿದ್ರಲ್ಲ? ಅವ್ರು ಮೂರ ಜನರ ಬಳಿಗೆ ಬಂದು ಜಟ್ಟಿ, ಆಗಲೀಗ -

ತಲೆಯಲಿದ್ದ ಹ್ಯಾಟ ಕಳುದಾನೊ ನನ್ನಾ ಜಟ್ಟಿ
ಕರವೆತ್ತಿ ಕೈಯನ್ನೆ ಮುಗುದಾನೊ ॥ ತಂ ॥

ಕರವೆತ್ತಿ ಕೈಯನ್ನೆ ಮುಗುದಾನೊ ನನ್ನ ಜಟ್ಟಿ
ಹ್ಯಾಟ ಕಳದು ಸಲಾಮು ಮಾಡೀದ ॥ ತಂ ॥

ಯಾವಾಗ ಜಟ್ಟಿ ವಾಲೆ ತಗಂಡು ಬಂದು ಕರವೆತ್ತಿ ಕೈ ಮುಗಿದು ನತ್ತಿ ಮ್ಯಾಲಿರು ಹ್ಯಾಟ ಕಳದು ಸಲಾಮ ಮಾಡಿದ್ದಾನೆ. ಆ ಗಳಿಗೆ ಒಳಗೆ ದಳವಾಯಿ ಕಂದಣ್ಣುನಗೆ ಸಂತೋಸವೇ ಉಂಟಾಯ್ತು. ಏನಪ್ಪ ಜಟ್ಟಿ ಪಿರೀಪಟ್ಣದಿಂದ ಬಂದಿದ್ದೀಯಲ್ಲ? ಯಾತಕ್ಕಾಗಿ ಬಂದಿದ್ದೀಯೆ? ನನಗೇಳದಿದ್ರು ಪರವಾಯಿಲ್ಲ. ನನ್ನ ಮಂತ್ರಿ ಪರಧಾನಿ ಎಡದಲ್ಲಿ ಬಲದಲ್ಲಿ ಕೂತಿದ್ದಾರೆ. ಅವುರಗ್ಹೇಳು. ಅನ್ನುವನಂಥ ಕಾಲದಲ್ಲಿ ಅವ್ನು ಚಂದಕ್ಕು ಮೂರು ಮಾತಾಡನಿಲ್ಲ. ಮೂರ ಜನ ಮೂರ್ತಗಳು ಕುಳತಿರುವಂಥ ಸ್ಥಳ ಬುಟಬುಟ್ಟು ಆ ಪಟ್ಟೆಮಂಚಕೆ ತಕ್ಕೊಂಡೋಗಿ ವಾಲೆ ಮಡಗಬುಟ್ಟು ಜಟ್ಟಿ ಹಿಂದಿರುಗಿ ಬಂದಬುಟ್ಟ. ಹಿಂದಿರುಗಿ ಬಂದುಬಿಟ್ಟಂಥ ಕಾಲದಲ್ಲಿ ಯಾವ ದಿಕ್ಕನ ವಾಲೆಯೊ ಎಂಬದಾಗಿ ದಳವಾಯಿ ಮಾರಾಜ -

ತಂದ ವಾಲೆ ಗ್ಯಾನ ಮರೆತುಕೊಂಡ ದಳವಾಯಿ ಕಂದಣ್ಣ
ವಾಲೆ ಬಂದು ಮೂರು ದಿನ ಕಳಕೊಂಡೊ ॥ ತಂ ॥
ವಾಲೆ ಬಂದು ಮೂರು ದಿನ ತುಂಬತಲ್ಲ ದಳವಾಯಿ ಕಂದಣ್ಣ
ಬಂದ ವಾಲೆಯ ಕಣ್ಣೆತ್ತಿ ನೋಡುಲಿಲ್ಲ ॥ ತಂ ॥

ವಾಲೆ ಕೊಟಬುಟ್ಟು ಜಟ್ಟಿ ಆ ಗಳಗೆಲಿ ಪಿರೀಪಟ್ಣುಕ ಸಾಗಿ ಬಂದಬುಟ್ರು. ಪಿರೀಪಟ್ಣಕ ಬಂದು ಏಳಮಂದಿ ಆಳಗಳು, ಜಟ್ಟಿಯವರು, ವೀರ್‍ರಾಜಿ ಅರಸನ ಮುಂದಗಡೆ ನಿಂತುಕೊಂಡು ಬರೀ ಬಾಯ್ಲಿ ಮಾತಾಡತಾವ್ರೆ. ತಮ್ಮ ಯುಗತಿ ಸಗತಿ ವೀರ್‍ರಾಜಿ ಅರಸು ತಿಳಿಕೊಳ್ಲಿ ಅಂತೇಳಿ-

ಕೇಳಿ ಕೇಳಿ ನನ್ನಾ ಜಟ್ಟಿಗಳೆ ನನ್ನ ಜಟ್ಟಿಯೆ
ವೈರಿ ಕೈಲಿ ವಾಲೆ ಕೊಟ್ರೆಯಪ್ಪ ॥ ತಂ ॥

ಏನರಯ್ಯ ಜಟ್ಟಿಗಳ, ವೈರಿ ಕೈಲಿ ವಾಲೆ ತೆಗೆದುಕೊಟ್ಟು ಬಂದರಪ್ಪ? ಎನುವಂಥ ಕಾಲದಲ್ಲಿ ಜಟ್ಟಿ ಕಿಲಕಿಲನೆ ನಗಾಡಬುಟ್ಟುರು. ವಾಲೆ ಕೊಟ್ಟುಬಂದ್ರ ಅಂದ್ರೆ ಏನಂಥ ಹೇಳಬೇಕು ಸ್ವಾಮಿ -

ನಾವು ಕ್ವಾಟೆಗೆ ಹೋದ ಕೂಡಲೆ ನಿಮ್ಮಾ ಭಾಮೈದ
ಗಡಗಡಗಡನೆ ನಡಗೆಬುಟ್ನಯ್ಯ ॥ ತಂ ॥
ಅವ್ನು ಗಡಗಡಗಡನೆ ನಡಗೆಬುಟ್ನಲ್ಲ ವೀರ್‍ರಾಜಿ ಅರಸ್ಸೆ
ಜಲಜಲನೆ ಬೆವತೆ ಹೋದನಲ್ಲ ॥ ತಂ ॥
ಜಲಜಲನೆ ಬೆವತಗೊಂಡನಲ್ಲ ನನ್ನಾ ದೊರಿಯೆ
ನತ್ತಿ ಮ್ಯಾಗಳ ಕಿರೀಟ ತಗದಾನೊ ॥ ತಂ ॥
ನತ್ತಿಮ್ಯಾಗಳ ಕಿರೀಟ ತಗದು ಭೂಮಿಗೆ ಮಡಗಬುಟ್ಟು
ದಳವಾಯಿ ಮಾರಾಜ ಕೈ ಎತ್ತಿ ನಮುಗೆ ಮುಗುದಾನೊ ॥ ತಂ ॥

ಕೇಳಿ ಗುರುದೇವ, ನಾವು ಹೋದ ಕೂಡಲೆ ನಿಮ್ಮ ಭಾಮೈದ, ದಳವಾಯಿ ದೊರೆಯು ಗಡಗಡಗಡನೆ ನಡಗಬುಟ್ಟು ಜಲಜಲನೆ ಬೆವುತಕೊಂಡು, ನಾಳೆ ನನಗ್ಯಾವ ಕೇಡು, ಏನಕಷ್ಟ

ಬಂದೆದೊ? ಈ ಪಿರೀಪಟ್ಣದವ್ರು ಅಂದ್ರೆ ಸಾಮಾನ್ಯದೋರಲ್ಲ. ಇವ್ರು ನನ್ನ ಬುಟ್ವಾರಪ್ಪ ಎಂಬುದಾಗಿ ಭಯಭೀತಿ ಪಟ್ಟುಕೊಂಡು, ನತ್ತಿಮ್ಯಾಗಳ ಮುತ್ತುನ ಕಿರೀಟ ತಗದು, ಭೂಮಿ ಮ್ಯಾಲೆ ಮಡಗಬುಟ್ಟು, ನಮಗೆಲ್ಲಕೈಎತ್ತಿ ಮುಗದರು ಸ್ವಾಮಿ ಎಂಬುದಾಗಿ ಏಳುಮಂದಿ ಆಳುಗಳು ಗುರುದೇವಾ ಹೇಳಿದಂಥ ಕಾಲದಲ್ಲಿ -

ಜಟ್ಟಿ ಮಾತ ರಾಜ ಕೇಳಕೊಂಡ ವೀರ್ರಾಜಿ ಅರಸು
ಹಿಗ್ಗಿ ಹೆಗ್ಗೋಡ ಆಗೋದ ॥ ತಂ ॥
ಹಿಗ್ಗಿ ಹೆಗ್ಗೋಡು ಆದನಲ್ಲ ವೀರ್ರಾಜಿ ಅರಸು
ಅವ್ನು ಮನದಲ್ಲಿ ಸಂತೋಷಪಟಕೊಂಡ ॥ ತಂ ॥

ಇವತ್ನ ದಿವುಸದಲ್ಲಿ ಹಿಗ್ಗಿ ಹೆಗ್ಗೋಡನಾದ ವೀರ್ರಾಜಿ ಅರಸುನವರು ಪಟ್ಟಿ ಮಂಚದಮ್ಯಾಲೆ ಸಂತೋಸದಿಂದ ಕೂತಕೊಂಡು ಮನದಲ್ಲಿ ಏನಂಥ ವೆಥೆ ಪಟ್ಕತಾರೆ ಅಂದ್ರೆ. ದಂಡಗ ನಾ ಹೋದ ಮ್ಯಾಲೆ ನನ್ನ ಕೈಯೆ ಮಿಂಚಿಸಾದೊ ಇಲ್ಲಾ ಅವ್ನ ಕೈಯೆ ಮಿಂಚಿಸಾದೊ? ಆಗಲೀಗ ದೈಯ ದೇವಮಾನ್ರುವರ ಬೇಡಿಕೋದೆ ನಾವು ಕಾರ್ಯ ಮಾಡಾಕಾಗದು ಅಂತೇಳಿ ಆ ಗಳಿಗೆ ಒಳಗೆ ವೀರ್ರಾಜಿ ಅರಸು ತೂಗಮಂಚ ಇಳಿದು ಎಲ್ಲುಗೆ ಬರತಾರೆ ಅಂದ್ರೆ -

ಅಯ್ಯ ಮನೆಯ ದೇವರೆ ಹಿರಿಯಪಟ್ಣದಮ್ಮ
ಪಿರಿಪಟ್ಣದಮ್ಮನ ವರವ ನಾನು ಬೇಗ ಬೇಡಬೇಕು. ॥ ತಂ ॥

ಆಗಲೀಗ ವೀರ್ರಾಜಿ ಅರಸುನವರು ಹರಿವಂಥ ನದಿಗೆ ಬಂದು ಸ್ನಾನ ಮಡಿ ಮಾಡಿಕೊಂಡು ಪಿರೀಪಟ್ಣದಮ್ಮ ದೇವಸ್ಥಾನಕ ಬಂದು -

ಅಯ್ಯ ಬಗ್ಗಾನೆ ಬಾಗಾಲ ತಗದಾರೊ ವೀರ್ರಾಜಿ ಅರಸು
ಪನ್ನೀರ ಗಿಂಡಿಲಿ ಪನ್ನೀರ ತಂದಾರೊ ॥ ತಂ ॥
ಪನ್ನೀರ ಗಿಂಡಿಲಿ ಪನ್ನೀರ ತಂದುರಲ್ಲ ವೀರ್ರಾಜಿ ಅರಸು
ಮನದೇವತಿ ಮಂಡೆ ತೊಳುದಾರೊ ॥ ತಂ ॥
ಮನದೇವತಿ ಮಂಡೆ ತೊಳುದಾರೊ ವೀರ್ರಾಜಿ ಅರಸು
ಮರಗ ಮಲ್ಲಿಗೆ ಮಂಡೆಗೆ ಮುಡಸಾರೋ ॥ ತಂ ॥
ಮರಗ ಮಲ್ಲಿಗೆ ಮಂಡೆಗೆ ಮುಡಸಾರೊ ನನ್ನ ದೊರಿಯೆ
ಗಂಧ ಚಂದುರವ ಧರಸಾರೊ ॥ ತಂ ॥
ಕಾಯಿ ಹೊಡದಿ ಹಣ್ಣ ಮುರದಾರೊ ವೀರ್ರಾಜಿ ಅರಸು
ಬಲಚಾರಕೆ ಮಂಗಳಾರತಿ ಬೆಳಗಾರೊ ॥ ತಂ ॥

ಕರಪುರದ ಮಂಗಳಾರತಿ ಬಲಚಾರಕೆ ಬೆಳಗಬುಟ್ಟು, ಮನದೇವತೆ ಮುಂಭಾಗದಲ್ಲಿ ವೀರಮಂಡಿಗಾಲೂರಿ ಭೂಮಿ ಮ್ಯಾಲ ಕೂತಕೊಂಡು ಕರವೆತ್ತಿ ಕೈಮುಗದು ಅಡ್ಡಬಿದ್ದು, ಮನದೇವತಿ ಪಿರೀಪಟ್ಟಣದಮ್ಮನನ್ನು ವೀರ್ರಾಜಿ ಅರಸು ಏನಂಥ ವರ ಬೇಡತಾವ್ರೆ ಅಂದ್ರೆ-

ನನ್ನ ಮನೆಯ ದೇವತಿ ಪಿರಿಯಪಟ್ಣದಮ್ಮ ನನ್ನಾ ತಾಯಿ
ಹೊರಕ್ವಾಟೆ ನನ್ನ ವಸ ಮಾಡಮ್ಮ ॥ ತಂ ॥
ಹೊರಕ್ವಾಟೆ ನನ್ನ ವಸ ಮಾಡಿಕೊಟ್ರೆ ಪಿರಿಪಟ್ಣದಮ್ಮ
ಐದುಗಾಲಿಯ ತೇರ ಮಾಡಿಸುವೆನೊ ॥ ತಂ ॥

ಐದು ಗಾಲಿಯ ತೇರ ಮಾಡಿಸುವೆನೊ ನನ್ನಾ ತಾಯಿ
ತೇರಿಗೆ ಒಂದು ಉರಚಿ ಹಾಕುವೆನೊ ॥ ತಂ ॥
ತೇರಿಗೆ ಒಂದು ಉರಚಿ ಹಾಕತೀನಿ ನನ್ನಾ ತಾಯಿ
ಮೊದಲನೆ ಪೂಜೆಗೆ ನಾನೇ ಬರುತೀನಿ ॥ ತಂ ॥
ನೀನು ಮೈಸೂರ ನನ್ನ ವಸ ಮಾಡಿಕೊಟ್ರೆ ಪಿರೀಪಟ್ಣದಮ್ಮ
ಮನಸನ ಕಡಿದು ಆವತಿ ಕೊಡುವೇನು ॥ ತಂ ॥
ಹೊರಕ್ವಾಟೆ ನನ್ನ ವಸ ಮಾಡಿಕೊಟ್ರೆ ಪಿರಿಪಟ್ಣದಮ್ಮ
ಕೊಂಬಿನ ಟಗರ ನಿನಗೆ ಕೊಡುವೇನು ॥ ತಂ ॥
ಕೊಂಬಿನ ಟಗರನ್ನೆ ಕೊಡತೀನಿ ಪಿರೀಪಟ್ಣದಮ್ಮ
ಕೂಗೊ ಹುಂಜನ ನಿನಗೆ ಕೊಡುತೀನಿ ॥ ತಂ ॥

ಮೈಸೂರ್ರಾಜ್ಯ ನನ್ನವಸ ಮಾಡಿಕೊಟ್ರೆ ಹರಕೆ ಕೊಡತೀನಿ ಅಂತೇಳಿ ವೀರ್ರಾಜಿ ಅರಸುನವರು ಬಿದ್ದುಬಿದ್ದು ವರ ಬೇಡುವಾಗ -

ರಾಜನ ಸತ್ಯಕೆ ಒಪ್ಕೊಂಡ ಪಿರೀಪಟ್ಣದಮ್ಮ
ಅವನುದ್ದಕೂವೆ ಎದ್ದಿಯೆ ನಿಂತಕೊಂಡ ॥ ತಂ ॥
ಅವನುದ್ದಕೂವೆ ಎದ್ದಿಯೆ ನಿಂತುಕೊಂಡ ಪಿರೀಪಟ್ಣದಮ್ಮ
ಒಡದು ಒಡದು ಮಾತನಾಡೀದ ॥ ತಂ ॥
ಹೆದುರುಬ್ಯಾಡ ಬೆಚ್ಚಬ್ಯಾಡಯ್ಯ ವೀರ್ರಾಜಿ ಅರಸೆ
ನಾನಿದ್ದ ಮ್ಯಾಲೆ ಭಯವು ಯಾಕಯ್ಯ? ॥ ತಂ ॥
ನಾನಿದ್ದ ಮ್ಯಾಲೆ ಭಯವು ಯಾಕೆಂದು ಪಿರೀಪಟ್ಣದಮ್ಮ
ರಾಜರೊಂದಿಗೆ ಮಾತನಾಡಿಳೊ ॥ ತಂ ॥
ಕೇಳು ಕೇಳು ನನ್ನ ತಾಯಮ್ಮ ಪಿರೀಪಟ್ಣದಮ್ಮ
ಹೊರಕ್ವಾಟೆ ನನ್ನ ವಸವಾದರೆ ॥ ತಂ ॥
ಹೊರದೇಸ ನನ್ನ ವಸವಾದಾರೆ ಪಿರೀಪಟ್ಣದಮ್ಮ
ನಿನಗೆ ಕೊಳಗದಂಬಿಟ್ಟಿನ ಆರತಿ ಮಾಡಿಸೇನು ॥ ತಂ ॥

ಆಗಲೀಗ ಹರಕೆ ಕಟ್ಟಿಕೊಂಡು, ಕರವೆತ್ತಿ ಕೈ ಮುಕ್ಕೊಂಡುರು ವೀರ್ರಾಜಿ ಅರಸನವರು. ತಾಯಿಯಾದ ಪಿರೀಪಟ್ಣದಮ್ಮ, ಹೆದರಬ್ಯಾಡ, ಬೆಚ್ಚಬ್ಯಾಡ ದೊರೆಯಾಗಿರುತಕ್ಕಂಥ ವೀರ್ರಾಜಿ ಅರಸೆ, ಪರದೇಸ ನಿನ್ನ ವಶ ಮಾಡಿಕೊಡತೀನಿ ಅಂತೇಳಿ ವೀರ್ರಾಜಿ ಅರಸನವರಿಗೆ ಒಪ್ಪಿ ವರ ಕೊಟ್ಟಂಥ ಕಾಲದಲ್ಲಿ -

ತಾಯಿ ಕೊಟ್ಟ ವರವ ಪಡುಕೊಂಡ ವೀರ್ರಾಜಿ ಅರಸು
ತನ್ನಾ ಒಳಕ್ವಾಟೆ ಒಳುಗೆ ಬಂದನಲ್ಲ ॥ ತಂ ॥
ತನ್ನಾ ಒಳಕ್ವಾಟೆ ಒಳುಗೆ ಬಂದನಲ್ಲ ವೀರ್ರಾಜಿ ಅರಸು
ಬಂದು ಮಂಚಾವ ಸೇರಿದ ॥ ತಂ ॥

ದೊರೆಯಾದಂಥ ವೀರ್ರಾಜಿ ಅರಸನವ್ರು, ಅರಮನೆ ಆಸ್ಥಾನಕ ಬಂದು ಪಟ್ಟೆಮಂಚದ ಮ್ಯಾಲ ಮೂರ್ತಮಾಡಕೊಂಡು, ಈವತ್ತಿನ ದಿವುಸದಲ್ಲಿ ನನ್ನ ಮನೆದೇವತೆ ಪಿರೀಪಟ್ಣದ ತಾಯಿ ನನ್ನ ಬಲಭಾಗದಲ್ಲಿರುವಾಗ ಹೆಚ್ಚಾಳನಾಗಿರುವಂಥ ದಳವಾಯಿ ದೊರೆಯು ನನ್ನ ಮ್ಯಾಲೆ

ದಂಡೆತ್ತಿ ಕದನ ಕಾಳಗಕ್ಕೆ ಬಂದದ್ದೆ ಉಂಟಾದರೆ -
ನನ್ನ ವೈರಿ ಶಿರಸ ನಾನು ಬುಡವೆನ ದಳವಾಯಿ ಕಂದಣ್ಣನ
ಮನದೇವರಿಗೆ ಆವತಿ ಕೊಡುವೆನು ॥ ತಂ ॥
ಮನದೇವರಿಗೆ ಆವತಿ ಕೊಡುವೆನು ಮೈಸೂರ್ರಾಜನ
ಆ ಮೈಸೂರ ನನ್ನ ವಸ ಮಾಡುವೆನು ॥ ತಂ ॥

ಮೈಸೂರು ನನ್ನ ವಾಸಾಸ್ಥಾನ ಮಾಡಕೊಂಡು ದಳವಾಯಿ ರಾಜನ ನನ್ನ ಮನದೇವತೆ ಪಿರೀಪಟ್ನದ ಮಾರಿಗೆ ಬಲಿ ಕೊಡತೀನಿ ಎಂಬದಾಗಿ ಮನದಲ್ಲಿ ಸಂತೋಷಪಟಕೊಂಡು, ಪಟ್ಟೆಮಂಚದ ಮ್ಯಾಲೆ ತಾನಾಗಿ ಮೂರ್ತಮಾಡಿರುವಂಥ ಕಾಲದಲ್ಲಿ, ಈ ಕಡೆ ಮೈಸೂರ ಸಂಸ್ಥಾನ ಆಳತಕ್ಕಂಥ ದಳವಾಯಿ ಕಂದಣ್ಣ -

ವಾಲೆ ಬಂದು ಮೂರದಿನ ಕಳೆದಿತು ದಳವಾಯಿ ಕಂದಣ್ಣ
ಪಟ್ಟೆಮಂಚಕೆ ಬೇಗ ಬರುತಾನೆ ॥ ತಂ ॥
ಪಟ್ಟೆಮಂಚಕೆ ಸಾಗಿ ಬಂದನಲ್ಲ ದಳವಾಯಿ ಕಂದಣ್ಣ
ಮಡಗಿದ್ದ ವಾಲೇಯ ಓದಾನೊ ॥ ತಂ ॥

ಪಟ್ಟೆಮಂಚದ ಮ್ಯಾಲೆ ಮಡಗಿರುವಂಥ ವಾಲೇನ ಎರಡಕೈಗಳಲ್ಲಿ ಎತ್ಕೊಂಡು, ಸ್ವಾದರ ಮಾವನ ಬಲದಲ್ಲಿ ಕುಂಡ್ರಸಕೊಂಡು, ಬಾಳೆ ಅರಸನವರ ಎಡದಲ್ಲಿ ಕುಂಡ್ರಸಕೊಂಡು ವಾಲೆ ತಗದು ಕೈನಲ್ಲಿ ಹಿಡಕೊಂಡು ಕೇಳಪ್ಪ ಮಾವನಾದ ಬಾಳೆ ಅರಸನವರೆ, ಪಿರೀಪಟ್ಣದಿಂದ ಮೊನ್ನೆ ದಿವಸವೇ ಬಂತಲ್ಲ? ಮೊನ್ನೆ ಬಂದ ವಾಲೆ ಇಂದನವರಗು ನೋಡನಿಲ್ವಲ್ಲ? ಈವಾಗಲೀಗ ಈ ವಾಲೇಲಿರತಕ್ಕಂಥ ಲಿಖಿತಗಳ ನಾನಾಗಿ ಓದಿ ನೋಡಬೇಕು ಎಂಬುದಾಗಿ ದಳವಾಯಿ ಕಂದಣ್ಣ -

ವಾಲೆ ಒಡದು ಓದಿ ನೋಡುತಾನೆ ನನ್ನ ಕಂದ
ಬರೆದಿರುವ ಬರೆವಣಿಗೆ ಕಂಡನಲ್ಲ ॥ ತಂ ॥
ಬರೆದಿದ್ದ ಬರೆವಣಿಗೆ ಓದಕೊಂಡ ದಳವಾಯಿ ಕಂದಣ್ಣ
ಕೆಟ್ಟಿತವನ ಕಲಿಯ ಮೊಕುವೆಲ್ಲ ॥ ತಂ ॥

ದಳವಾಯಿ ಕಂದಣ್ಣ ಸರಸದ ವಾಲೆ ಓದಿ ನೋಡಿದ. ಮನದೇವತೆ ಹಬ್ಬಕ ಬಾ ಅನ್ನುವಂಥ ವಾಲೆ ನೋಡಿದ. ಕಟ್ಟಕಡೆಗಾಲದಲ್ಲಿ, ದಂಡೆತ್ತಿ ನನ್ನ ಮ್ಯಾಲ ಬಾ ದಳವಾಯಿ ದೊರೆಯೆ. ಗಂಡಾದರೆ ನನ್ನ ರಾಜ್ಯಕ ಬಂದು ಜಗಳ ಮಾಡಬೌದು, ಹೆಣ್ಣಾದರೆ ಅಲ್ಲೆ ಇರಬೌದು. ಧೀರನಾದರೆ ಜಗಳಕ ಬರಬೌದು. ಹೇಡಿಯಾದ್ರೆ ಅಲ್ಲೇ ಇರಬೌದು. ಗಂಡಾಗಿ ನಿಮ್ಮಪ್ಪುನಗ ನೀ ಹುಟ್ಟಿದ್ರೆ ನನ ಮ್ಯಾಲ ವಿದ್ಯುಮಾಡಿ ಗೆದ್ದಿ ಪಿರಿಯಪಟ್ಣ ತಕ್ಕೊಂಡೋಗು; ಸೋತರೆ ನಿನ್ನ ಮೈಸೂರ್ರಾಜ್ಯ ನನಗೆ ಬಿಟ್ಟಬುಡು ಎಂಬುದಾಗಿ-

ಅಯ್ಯ ಜೂಜು ವಾಲೆಯ ಓದಿ ನೋಡಿದ ದಳವಾಯಿ ಕಂದಣ್ಣ
ವಾಲೆ ಮ್ಯಾಲೆ ಕಣ್ಣೀರ ಕೆಡಗಿದ ॥ ತಂ ॥
ಜಗಳದ ವಾಲೆಯ ಓದಿಕೊಂಡ ದಳವಾಯಿ ಕಂದಣ್ಣ
ಗುಳಗುಳನೆ ದುಕ್ಕ ಮಾಡೀದ ॥ ತಂ ॥
ಕೇಳಿ ಕೇಳಿ ಸ್ವಾದುರುಮಾವಯ್ಯ ನನ್ನಾ ಮಾವ
ಬರೆದಿರುವ ವಾಲೇಯ ಓದಯ್ಯ ॥ ತಂ ॥

ಕೇಳಿ ಕೇಳಿ ಸ್ವಾದರಮಾವಯ್ಯ, ನಮ್ಮ ಭಾವ ವೀರ್‍ರಾಜಿ ಅರಸನವರು ನನಗಾಗಿ ವಾಲೆ ಬರೆದಬುಟ್ಟವರೆ. ಅವ್ರು ಕೊಟ್ಟಿರುವಂಥ ವಾಲೆ ನಾನು ಓದಿ ನೋಡಿದ್ದಾಯ್ತು. ನೀವು ಓದಿ ನೋಡಿ ಎಂಬದಾಗಿ ಆ ದಳವಾಯಿ ಕಂದಣ್ಣ ಸ್ವಾದುರುಮಾವುನ ಕೈಲಿ ವಾಲೆ ಕೊಟ್ರು. ಕೊಟ್ಟ ವಾಲೆ ಓದಿ ನೋಡಬುಟ್ಟು ಬಾಳೆ ಅರಸನವರು ಏನಂಥ ಮಾತಾಡತಾರೆ ಅಂದ್ರೆ ಗುರುದೇವಾ -

ಅವ್ರು ವಾಲೆ ಒಡದು ಓದಿ ನೋಡುತಾರೆ ಅಯ್ಯ ಶಿವನೆ
ರಾಜುನಿಗೆ ಒಂದ ಮಾತ ಹೇಳುತಾನೆ ॥ ತಂ ॥
ಕೇಳು ಕೇಳು ನನ್ನ ಕಂದಯ್ಯ ದಳವಾಯಿ ಕಂದಣ್ಣ
ಕದನಾದ ಜಗಳಾವ ಹೇಳುಬ್ಯಾಡ ॥ ತಂ ॥

ಕೇಳಪ್ಪ ಕಂದಣ್ಣ, ಜಗಳದ ಸುದ್ದಿ ಹೇಳಬೇಡ. ವೀರ್‍ರಾಜಿ ಅರಸನವ್ರು ಅಂದ್ರೆ ಕಂದ, ಕೊಡಗಿನ ರಾಜ್ಯಕೆ ಹೆಸರಾದವರು. ಅಂಥವ್ರು ಮ್ಯಾಲೆ ವಿದ್ಯಕೆ, ಜಗಳಕ್ಕೆ ಹೋಗೂದು ಥರವಲ್ಲ -

ನಿನ್ನ ಬದಕಾಟ ಬಾಳಾ ನೋಡಲಾರದೆ ನಿಂ ಭಾವಯ್ನವರು
ನಿನ್ನ ಮ್ಯಾಲೆ ವಾಲೆಯ ಬರದವರೆ ॥ ತಂ ॥
ನಿನಗೆ ಕೆಡುಸದಕ್ಕೆ ವಾಲೆಯ ಬರದವರೆ ನಿಂ ಭಾವನವರು
ಅವರ ಮ್ಯಾಲೆ ವಿದ್ಯಕ್ಕೆ ಹೋಗುಬ್ಯಾಡ ॥ ತಂ ॥

ಕೇಳಪ್ಪ ದಳವಾಯಿ ಕಂದಣ್ಣ; ನಿನ್ನ ಬಾಳಾಟ ಬದಕಾಟ ಕಣ್ಣಿಂದ ನೋಡಲಾರದೆ ಕದನದ ವಾಲೆ ನಿಂ ಭಾವ ಬರದವ್ರೆ. ಈವತ್ತುನ ದಿವುಸದಲ್ಲಿ ಬರದ ವಾಲೆ ನೋಡಕೊಂಡು ಅವ್ರಮ್ಯಾಲೆ ಕದನ ಕಾಳಗಕ್ಕೆ ಹೋಗಬ್ಯಾಡ ನನಕಂದ. ಕೊಡಗನ ರಾಜ ಅಂದ್ರೆ -

ಶಗತಿ ಒಳಗೆ ಮೊನಗಾರನಲ್ಲ ವೀರ್‍ರಾಜಿ ಅರಸು
ಅವ್ನು ರಣದಲ್ಲಿ ಬಾಳ ಶೂರನಲ್ಲೊ ॥ ತಂ ॥
ಅವ್ನು ರಣದಲ್ಲಿ ಬಾಳ ಶೂರನಲ್ಲ ನನ್ನಾ ಕಂದ
ವಿದ್ಯಾದ ಒಳುಗೆ ಮೋಡಿಗಾರನಲ್ಲೊ ॥ ತಂ ॥
ಆನೆ ಒಂದಿಗೆ ಜಗಳ ಮಾಡತಾರೆ ಕೊಡಗೀನ ದೊರೆಯು
ಹುಲಿ ಒಂದುಗೆ ಕದನ ಮಾಡುತಾರೆ ॥ ತಂ ॥
ಹುಲಿ ಒಂದುಗೆ ಕದನ ಮಾಡುತಾರೆ ನನ್ನ ಕಂದ
ಕರಡಿ ಒಂದುಗೆ ಜಗಳ ಮಾಡುತಾರೆ ॥ ತಂ ॥
ಅವ್ರು ವೀರಾಧಿವೀರರು ಶೂರಾಧಿಸೂರರು ನನ್ನಾ ಕಂದ
ಶೂರರ ಮ್ಯಾಲೆ ಜಗಳ ತರುವಲ್ಲ ॥ ತಂ ॥

ಅಂಥ ಶೂರರು ಧೀರರೊಂದಿಗೆ ನೀನು ಕದನ ಕಾಳಗ ಮಾಡಬಲ್ಯ? ಅವರೊಂದಿಗೆ ವಿದ್ಯಮಾಡಿ ದಂಡ ಗೆಲಬಲ್ಯ? ಅಂಥ ಸೂರರೊಂದಿಗೆ ವಿದ್ಯ ಥರವಲ್ಲ ಅಂತೇಳಿದ ಸ್ವಾದರ ಮಾವಯ್ನ ಮಾತನೆ ಕೇಳಕೊಂಡು -

ಮಾವಯ್ಯಾಡೀದ ಮಾತ ಕೇಳಕೊಂಡ ದಳವಾಯಿ ಕಂದಣ್ಣ
ಮನದಲ್ಲಿ ಚಿಂತೇಯ ಮಾಡೀದ ॥ ತಂ ॥
ಮನದಲ್ಲಿ ಚಿಂತೆಯ ಮಾಡೀದ ದಳವಾಯಿ ಕಂದಣ್ಣ
ಮನದಲ್ಲಿ ಚಿಂತೇಯ ಮಾಡೀದ ॥ ತಂ ॥
ಮನದಲ್ಲಿ ಚಿಂತೇಯ ಮಾಡೀದ ದಳವಾಯಿ ಕಂದಣ್ಣ
ಅವ್ನು ಮಾವುನಗೆ ಜವಾಬಾ ಹೇಳಿದ ॥ ತಂ ॥

ಮನದಲ್ಲಿ ಚಿಂತೆ ಮಾಡಕೊಂಡು ದಳವಾಯಿ ಮಾರಾಜ ಆಗಲೀಗ ಏನಂಥ ಮಾತಾಡುತಾರೆ ಅಂದ್ರೆ ಈವತ್ತುನ ದಿವುಸದಲ್ಲಿ ಕೇಳಿ ಮಾವಯ್ಯ. ದೀರರ ಮ್ಯಾಲೆ ಶೂರರ ಮ್ಯಾಲೆ ಕದನ ಕಾಳಗಕ್ಕೆ ಹೋಗಬ್ಯಾಡ ನನ್ನ ಕಂದ ಎಂಬುದಾಗಿ ಹೇಳತೀರಲ್ಲ ಮಾವಯ್ಯ. ಈ ಬಂದಿರುವಂಥ ವಾಲೆ ಓದಿ ನೋಡುದ್ರೆ ಈವತ್ತುನಾ ದಿವಸದಲ್ಲಿ -

ಹೆಣ್ಣಾಗಿ ನೂರ ಕಾಲ ಬಾಳುದಕೆ ಮಾವಯ್ಯನವರೆ
ಗಂಡಾಗಿ ಮೂರ ದಿವ್ಸ ಇರುವೆನು ॥ ತಂ ॥
ನಾನು ನಾರಿಯಾಗಿ ನೂರೊರಸ ಬಾಳುದಕ್ಕೆ ಮಾವಯ್ಯನವರೆ
ಧೀರನಾಗಿ ಮೂರ ದಿವ್ಸ ಇರುವೆನು ॥ ತಂ ॥
ಹೆಣ್ಣಾಗಿ ನೂರಕಾಲ ಬಾಳುದಕೆ ಮಾವಯ್ಯನವರೆ
ಗಂಡಾಗಿ ಒಂದಿವಸ ಇರುವೆನು ॥ ತಂ ॥

ಕೇಳಿ ಮಾವಯ್ಯ. ಬರೆದು ಕಳಿಸಿರುವಂಥ ವಾಲೆ ನೋಡಿ ಮೈಸೂರ್‍ರಾಜ್ಯದಲ್ಲಿ ನಾನೆಷ್ಟ ಕಾಲ ಬಾಳಬೇಕು, ಬದುಕಬೇಕು ಮಾವಯ್ಯ? ನಂ ಭಾವ ವೀರ್‍ರಾಜಿ ಅರಸನವ್ರು ಗಂಡಾದರೆ ಗುಂಡ ಹೊಡದಂಗ ಬರಬೌದು. ಹೆಣ್ಣಾದ್ರೆ ರಾಜ್ಯ ಆಳಬೌದು. ಬಣ್ಣ ಉಟಕೊಂಡು ಬಳೆ ತೊಟಕೊಂಡು ನಾರಿಯಂಗೆ ನೀನು ಮೈಸೂರಾಲಿದ್ಕೊ. ಗಂಡಾದ್ರೆ ದಂಡೆತ್ತಿ ನನ್ನ ಮ್ಯಾಲ ಜಗಳಕ ಬಂದು ಗೆದ್ರೆ ಪಿರೀಪಟ್ಣ ತಕ್ಕೊಂಡೋಗು. ಸೋತರೆ ನಿನ್ನ ಮೈಸೂರ್‍ರಾಜ್ಯ ಬುಟ್ಟುಬುಡು ಅಂತ ವಾಲೆ ಬರದವರಲ್ಲ ಮಾವ? ಹೇಳುವೆನು ಕೇಳಿ ಮಾವಯ್ಯ-

ನಾನು ಎಷ್ಟು ಕಾಲ ಬದಕಿದರೆ ಏನಯ್ಯ ಸ್ವಾದರಮಾವಯ್ಯ
ಸಾಯುವುದು ಒಂದೇ ದಿನವಯ್ಯ ॥ ತಂ ॥
ನಾನು ಯಾವ ಕಾಲ ಬಾಳುದರೇನಯ್ಯ ಸ್ವಾದರಮಾವಯ್ಯ
ಸಾಯುವದು ಒಂದೇ ದಿನವಯ್ಯ ॥ ತಂ ॥
ಮಾವ ಇಂದಿನ ಜಗಳಕ್ಕೆ ಹೋಗದಿದ್ರೆ ಪಿರೀಪಟ್ಟಣದವ್ರು
ಹೇಡಿ ಅನ್ನುವರು ರಣದಲ್ಲಿ ॥ ತಂ ॥

ಈವತ್ತುನ ದಿವುಸದಲ್ಲಿ ಪಿರೀಪಟ್ಣದ ಜಗಳಕ ನಾನು ಹೋಗದೆ ಹೋಗಬುಟ್ರೆ ದೇವಾ. ಪಿರೀಪಟ್ಣದವರು ರಣದಲ್ಲಿ ಹೇಡಿ ದಳವಾಯಿ ದೊರೆ ಅಂತೇಳತಾರೆ ಮಾವಯ್ಯ -

ನಾನು ಹೇಡಿಯಾಗಿ ಎಷ್ಟು ಕಾಲ ಬಾಳಬೇಕು ಮಾವಯ್ಯನವರೆ
ಧೀರನಾಗಿ ಒಂದ ದಿವಸ ಇರುವೇನು ॥ ತಂ ॥

ಹೇಡಿ ಅನುಸ್ಕೊಂಡು ಎಷ್ಟುಕಾಲ ಬಾಳಬೇಕು? ಧೀರನಾಗಿ ಇವತ್ತಿದ್ದು ನಾಳೆ ಸತ್ರು ಸರಿಯೆ ಮಾವಯ್ಯ -

ಇಂದಿನ ಜಗಳಕೆ ನನ್ನಾನೆ ಮಾವಯ್ಯನವರೆ
ತಡೀವಾದು ನಿಮಗೆ ಥರವಲ್ಲ ॥ ತಂ ॥
ತಡೀವಾದು ನಿಮಗೆ ಥರುವಲ್ಲ ಸ್ವಾದುರುಮಾವಯ್ಯ
ಹೊಕ್ಕಿಬರುವೆ ಪಿರಿಯಪಟ್ಟಣ ॥ ತಂ ॥
ನಾನು ಹೊಕ್ಕಿಬರುವೆ ಪಿರಿಯಪಟ್ಟಣ ಸ್ವಾದುರುಮಾವಯ್ಯ
ವೈರಿ ಶಿರಸ ನಾನು ತಗಿವೇನೊ ॥ ತಂ ॥

ಈವತ್ತುನಾ ದಿವುಸದಲ್ಲಿ ಹೋಯ್ತೀನಿ ಅನ್ನುನ ತಡೀಬ್ಯಾಡಿ ಮಾವಯ್ಯ. ಎಷ್ಟುಕಾಲ ಬದುಕದ್ರು, ಬಾಳುದ್ರು ಸಾಯಾದು ಒಂದೇ ದಿನವಯ್ಯ. ಪಿರೀಪಟ್ಣದ ಕಾಳಗಕ್ಕೆ ದಂಡೆತ್ತಿ ಹೋಯ್ತೀನಿ ಮಾವಯ್ಯ -

ಹೋದರೆ ನನ್ನ ಶಿರಸ ಕೊಡುವೆನು ಭಾವಯ್ಯನಿಗೆ ತಂದರೆ
ನಂ ಭಾವಯ್ನ ಶಿರಸ ಕಡಿಕೊಂಡ ತರುವೇನು ॥ ತಂ ॥
ಹೋದರೆ ನನ್ನ ಪ್ರಾಣ ಕಾಣಯ್ಯ ಸ್ವಾದರಮಾವಯ್ಯ
ಉಳಿದರೆ ನನ್ನ ದೇಹ ಕಾಣಯ್ಯ ॥ ತಂ ॥

ಹೋದರೆ ನನ್ನ ಶಿರಸ ಕೊಡತೀನಿ. ಗೆದ್ರೆ ಪಿರೀಪಟ್ಣ ತಕ್ಕಂಡು ಮೈಸೂರ್ರಾಜ್ಯಕೆ ನಾನಾಗಿ ಬರತೀನಿ ಮಾವ. ಹೋಯ್ತೀನಿ ಅನ್ನೂನ ತಡೀಬ್ಯಾಡಿ, ಕಳಗಿ, ಅನ್ನುವಂಥ ಕಾಲದಲ್ಲಿ ಆಡಿದಂಥ ಮಾತನ್ನ ಕೇಳಿಕೊಂಡು ಸ್ವಾದರಮಾವಯ್ಯನವರು ಏನಂಥ ಮಾತಾಡತಾರೇ. ಅಂದ್ರೆ, ಏನಪ್ಪ ದಳವಾಯಿ ಕಂದಣ್ಣ ಈವತ್ತುನ ದಿವಸದಲ್ಲಿ ಧೀರರ ಶೂರರ ಮ್ಯಾಲೆ ಕದನ ಕಾಳಗಕ ಹೋಯ್ತೀನಿ ಅಂತ ಹೇಳತೀಯಲ್ಲಪ್ಪ? ಹೇಳುವೆನು ಕೇಳಪ್ಪ. ಈ ಭೂಮುಂಡ್ಲದಲ್ಲಿರುವಂಥ ದೈಯ ದೈಯವಮಾನರು ಮಾರಿ ಮಸಣೀರು ದುರಗಿ ಚೌಡೀರಗಿಂಥ ಕೆಟ್ಟದೇವತೆ ದುಷ್ಟದೇವತೆ ಆ ಪಿರೀಪಟ್ಣದಲ್ಲವಳೆ ಕಂದ -

ಅಪ್ಪಾ ಕೆಟ್ಟದೇವತೆ ಅಂದ್ರೆ ನನಕಂದ ಪಿರೀಪಟ್ಣದ ಮಾರಿ
ಹೋದ ವೈರಿಯ ನುಂಗೇಬುಡುತಾಳೆ ॥ ತಂ ॥
ಹೋದ ವೈರಿಯ ನುಂಗೇಬುಡುತಾಳೆ ಪಿರೀಪಟ್ಣದಮ್ಮ
ಮಾರಿ ಬಾಯ್ಗೆ ಬಲಿಯ ಆಯಿತೀಯೆ ॥ ತಂ ॥

ನನ್ನ ಮಾತ ಮೀರಿ ಪಿರೀಪಟ್ಣದ ಕಾಳಗಕ್ಕೆ ನೀ ಹೋದದ್ದೆ ಆದ್ರೆ, ಪಿರೀಪಟ್ಣದಲ್ಲಿರುವಂಥ ಮಾರಿ ಕೆಟ್ಟ ಮಾರಿ, ದುಷ್ಟಮಾರಿ ನನಕಂದ, ವೀರ್ರಾಜಿ ಅರಸನ ಕಡೆ ಇದ್ದಾಳೆ ನನ ಕಂದ. ಅವ್ನ ಕಡೆ ಇರುವಂಥ ಮಾರಿಬಾಯ್ಗೆ ನೀನು ಬಲಿಯಾಗಬಿಟ್ಟೀಯ. ಮಾರಿ ಬಾಯ್ಗೆ ತುತ್ತಾಗಬುಟ್ಟೀಯ ನನ ಕಂದ -

ಅಲ್ಲಿ ಹೋಗಿ ಆರ ಇಲುವಂತೆ ನನ್ನಾ ಕಂದ
ನೀನು ಹೋಗಿ ಪ್ರಾಣ ಬುಡುವೆಯ? ॥ ತಂ ॥
ಮಾರಿಬಾಯ್ಗೆ ತುತ್ತಾಗೋದ ಮ್ಯಾಲೆ ದಳವಾಯಿ ಕಂದಣ್ಣ
ಮೈಸೂರ ಆಳುವರು ಯಾರಪ್ಪ? ॥ ತಂ ॥
ನೀನು ದಂಡೆತ್ತಿ ಜಗಳಕ ಹೋದಮ್ಯಾಲೆ ದಳವಾಯಿ ಕಂದಣ್ಣ
ಮೈಸೂರು ಕತ್ತಾಲೆ ಆಯ್ತದೆ ॥ ತಂ ॥

ಈವತ್ತ್ನ ದಿವುಸ ನನ್ನ ಮಾತ ಮೀರಿ ದಂಡೆತ್ತಿ ಪಿರೀಪಟ್ಣುಕ ಹೊಂಟೋದ್ರೆ ನನಕಂದ, ಮಾರಿ ಬಾಯ್ಗೆ ತುತ್ತಾಗಬುಡತೀಯೆ ನನ ಕಂದ; ಆ ಧೀರ್ರು ಸೂರರ ಮ್ಯಾಲೆ ದಂಡೆತ್ತಿ ಹೋಗಬ್ಯಾಡ ಎನುವಂಥ ಕಾಲದಲ್ಲಿ, ಏನ ಮಾವಯ್ಯ, ಈವತ್ತು ದಂಡೆತ್ತಿ ವಿದ್ಯಕ ಹೊಂಟೋಗಬುಟ್ರೆ, ಪಿರೀಪಟ್ಣದ ಮಾರಮ್ಮ ವೀರ್ರಾಜಿ ಅರಸನ ಕಡೆ ಇರುವಳು. ನನ್ನ ಕಂಡಬುಟ್ರೆ ಮಾವಯ್ಯ ಹೇಳುವೆನು ಕೇಳಿ -

ಪಿರೀಪಟ್ಣದಮ್ಮ ಅವ್ನ ಕಡೆ ಇದ್ದರೆ ಸ್ವಾದುರುಮಾವಯ್ಯ
ನನ್ನ ಕಡೆ ಚಾಮುಂಡಿ ಇಲುವಯ್ಯ? ॥ ತಂ ॥
ನಾನು ಚಾಮುಂಡಮ್ನ ವರವ ಬೇಡುತೀನಿ ಸ್ವಾದುರುಮಾವಯ್ಯ
ವರವ ಬೇಡಿ ವಿದ್ಯಾಕೋಯ್ತೀನಿ ॥ ತಂ ॥

ವೀರ್ರಾಜಿ ಅರಸನ ಕಡೆ ಪಿರೀಪಟ್ಣದಮ್ಮ ಇದ್ರೆ ನನ್ನ ಕಡೆ ಚಾಮುಂಡೇಶ್ವರಿ ಇಲ್ವ? ಈವತ್ನ ದಿವಸದಲ್ಲಿ ನನ್ನ ಮನೆದೇವತೆ ವರ ಬೇಡಕೊಂಡು ಆನಂತರ ನಾನು ಪಿರೀಪಟ್ಣುಕ ದಂಡೆತ್ತಿ ಜಗಳಕೋಯ್ತೀನಿ ಎಂಬುದಾಗಿ -

ಸ್ವಾದರಮಾವ್ನ ಬೇಗ ಬುಟನಲ್ಲೊ ದಳವಾಯಿ ಕಂದಣ್ಣ
ಗುಡಗುಡನೆ ಓಡೋಡಿ ಬಂದನಲ್ಲೊ ॥ ತಂ ॥
ಗುಡಗುಡನೆ ಸಾಗಿ ಬಂದನೆಲ್ಲೊ ದಳವಾಯಿ ಕಂದಣ್ಣ
ಬೆಳ್ಳಿ ಕತ್ತಿ ಬಲಗೈಲ್ಹಿಡುದಾನೆ ॥ ತಂ ॥
ಬೆಳ್ಳಿ ಕತ್ತಿ ಬಲಗೈಲ್ಹಿಡಕೊಂಡ ದಳವಾಯಿ ಕಂದಣ್ಣ
ಬಿಳಿಯ ಕುದರೆ ಮ್ಯಾಲೆ ಕೂತುಗೊಂಡ ॥ ತಂ ॥
ಬಿಳಿಯ ಕುದರೆ ಮ್ಯಾಲೆ ಕೂತುಗೊಂಡು ದಳವಾಯಿ ಕಂದಣ್ಣ
ಅರಮನೆ ಆಸ್ಥಾನ ಬುಟನಲ್ಲ ॥ ತಂ ॥
ಅರಮನೆ ಆಸ್ಥಾನ ಬುಟ್ಟನಲ್ಲ ಬಳವಾಯಿ ಕಂದಣ್ಣ
ಗುಡಗೀದ ಚಾಮುಂಡಿ ಬೆಟ್ಟಕೆ ॥ ತಂ ॥
ಚಾಮುಂಡಮ್ನ ಬೆಟ್ಟುಕೆ ಬಂದನಲ್ಲ ದಳವಾಯಿ ಕಂದಣ್ಣ
ಅವ್ನು ದೇವುಗಿರಿಗೆ ಸಾಗಿ ಬಂದನಲೊ ॥ ತಂ ॥
ಅವ್ನು ದೇವುಗಿರಿಗೆ ಸಾಗಿ ಬಂದನಲ್ಲ ದಳವಾಯಿ ಕಂದಣ್ಣ
ಬೇಗದಲ್ಲಿ ಕುದರೆ ಇಳುದಾನೊ ॥ ತಂ ॥

ಚಾಮುಂಡಿ ಬೆಟ್ಟಕ ಬಂದು ದಳವಾಯಿ ಕಂದಣ್ಣ ಗುರುದೇವಾ -

ಬಸವಣ್ಣ ಬಸವಣ್ಣ ಎನ್ನೀರೋ ಲೋಕಾದೊಳಗೆ
ಬಸವಣ್ಣನೆ ದೊಡ್ಡವನು ಎನ್ನೀರೊ ॥ ತಂ ॥
ದೇವುಗಿರಿಗೆ ಸಾಗಿ ಬಂದನಲ್ಲ ದಳವಾಯಿ ಕಂದಣ್ಣ
ತಣ್ಣೀರ ಮುಳಗಿ ಸ್ನಾನ ಮಾಡೀದ ॥ ತಂ ॥

ದಳವಾಯಿ ಮಾರಾಜ ದೇವಗಿರಿಗೆ ಬಂದು ತಣ್ಣೀರ ಮುಳಗಿ ಸ್ನಾನ ಮಾಡಿಕೊಂಡು ಒದ್ದೆಬಟ್ಟೆ ಉಟಕೊಂಡು ಕಂದಣ್ಣ -

ಚಾಮುಂಡಮ್ನ ಗುಡಿಗೆ ಬಂದನಲ್ಲ ದಳವಾಯಿ ಕಂದಣ್ಣ
ಬಗ್ಗಾನೆ ಬಾಗಾಲ ತಗುದಾನೊ
ಶಂಕರ ಮಾದೇವ ಲಿಂಗ ಬಾ
ಶಂಕರ ಮಾದೇವ ಲಿಂಗ ಬಾ
ಬಗ್ಗಾನೆ ಬಾಗಾಲ ತಗುದಾನೊ ದಳವಾಯಿ ಕಂದಣ್ಣ
ಚಾಮುಂಡಮ್ನ ವಿಗ್ರ್ರದ ಬಳಿಗೆ ಬಂದನಲ್ಲ
ಬಸವಣ್ಣ ಬಸವಣ್ಣ ಎನ್ನಿರೋ ಕಲ್ಯಾಣಕೆಲ್ಲ
ಬಸವಣ್ಣ ದೊಡ್ಡವನು ಎನ್ನಿರೋ
ವೀಗ್ರ್ರದ ಬಳಿಗೆ ಬಂದನಲ್ಲ ದಳವಾಯಿ ಕಂದಣ್ಣ
ತಾಯಿ ಮಂಡೆ ಬೇಗ ತೊಳುದಾನೊ
ರಾಮಾ ಶ್ರೀರಾಮ ಎನ್ನೀರೊ ಅಯೋಧ್ಯರಾಜ
ರಾಮಚಂದ್ರ ಬಂಟ ಎನ್ನೀರೊ

ದಳವಾಯಿ ಮಾರಾಜ ತಾನಾಗಿ ಬಂದು ಶ್ರೀ ಚಾಮುಂಡೇಶ್ವರಿ ವಿಗ್ರಹ ತೊಳದಬುಟ್ಟು ಸಣ್ಣಮಲ್ಲಿಗೆ ದುಂಡಮಲ್ಲಿಗೆ ಕೆಂಡಶಾಮಂತಗೆ ಪುಷ್ಪ ತಂದು ಮಂಡೆ ತುಂಬ ಮುಡಸಬುಟ್ಟು ಕಂದ ದಳವಾಯಿ ದೊರೆಯು, ಅಕ್ಕಸತೆ ಕುಂಕುಮ ಗಂಧ ಚಂದ್ರವನ್ನೆ ವಿಗ್ರ್ರಕ್ಕೆ ಧರುಸಬುಟ್ಟು, ಹನ್ನೆರಡ ಹೊಡಗಾಯಿ ಹನ್ನೆರಡ ಇಡಗಾಯಿ ಇಟಬುಟ್ಟು-

ಕರಪುರದ ಮಂಗಳಾರತಿ ಕಸಕೊಂಡ ದಳವಾಯಿ ಕಂದಣ್ಣ
ಎತ್ತಿ ಆರಾತಿ ಬೆಳಗೋದ ॥ ತಂ ॥
ಎತ್ತಿ ಮಂಗಳಾರತಿ ಬೆಳೀಕೊಂಡು ನನ್ನಾ ಕಂದ
ಬಿದ್ದುಬಿದ್ದು ವರವ ಬೇಡೀದ ॥ ತಂ ॥
ಹಾಸಿಹಾಸಿ ಅಡ್ಡಬಿಳುತಾನೆ ದಳವಾಯಿ ಕಂದಣ್ಣ
ಕರವೆತ್ತಿ ಕೈಯ ಮುಗುದಾನೊ ॥ ತಂ ॥

ಆಗಲೀಗ ದಳವಾಯಿ ದೊರೆಯು ಹಾಸಹಾಸಿ ಅಡ್ಡಬಿದ್ದಬುಟ್ಟು, ಕರವೆತ್ತಿ ಕೈ ಮುಗದಬುಟ್ಟು, ವೀರ ಮಂಡಿಗಾಲೂರಕೊಂಡು ವಿಗ್ರ್ರದ ಮುಂಭಾಗದಲ್ಲಿ ಕುಂತಕೊಂಡು ಆಗಲೀಗ ಚಾಮುಂಡೇಶ್ವರಿಗೆ ಏನಂಥ ವರ ಬೇಡತಾನೆ ಅಂದ್ರೆ -

ಅವ್ವಾ ಕೇಳು ಕೇಳು ನನ್ನ ತಾಯಮ್ಮ ಶ್ರೀಚಾಮುಂಡಮ್ಮ
ಪರದೇಶಕ ದಂಡೆತ್ತಿ ಹೋಯ್ತೀನಿ
ಹಾರ ಹಾರ ಮುತ್ತಿನ್ಹಾರ ಲಿಂಗದೊಳಗೆ ಶಿವುದಾರ
ಅವ್ವಾ ಹೊರದೇಸಕೆ ದಂಡೆತ್ತಿ ಹೋಯ್ತೀನಿ ನನ್ನಾ ತಾಯಿ
ಪಿರೀಪಟ್ನ ನನ್ನೊಸ ಮಾಡಮ್ಮ ॥ ತಂ ॥
ಪಿರೀಪಟ್ನ ನನ್ನೊಸ ಮಾಡಿಕೊಟ್ರೆ ಚಾಮುಂಡಮ್ಮ
ನಾಕು ಗಾಲಿ ತೇರ ಮಾಡುಸುವೆನು
ಲಿಂಗಯ್ಯ ಲಿಂಗ ಬನ್ನಿರಿ ಲಿಂಗಯ್ಯ ಮಲ್ಲಯ್ಯ
ಮುಕ್ಕಣ್ಣ ಮಲ್ಲಯ್ಯ ಬನ್ನಿರಿ
ನಿಮಗೆ ಸಾಕು ಗಾಲಿ ತೇರ ಮಾಡಿಸೇನೊ ಚಾಮುಂಡಮ್ಮ

ತೇರುನ ಮ್ಯಾಲೆ ತೆಪ್ಪ ಮಾಡಿಸೇನೊ ॥ ತಂ ॥
ತೇರುನ ಮ್ಯಾಲೆ ತೆಪ್ಪ ಮಾಡಿಸತೀನಿ ಶ್ರೀ ಚಾಮುಂಡಮ್ಮ
ನಿನ್ನ ತೇರಿಗೆ ಮುಂದಾಗಿ ಬರತೀನಿ ॥ ತಂ ॥
ನಿನ್ನ ತೇರಿಗೆ ಮುಂದಾಗಿ ಬರುವೆನೊ ಶ್ರೀ ಚಾಮುಂಡಮ್ಮ
ಮೊದಲಾಗಿ ಬಂದು ಉರಜಿ ಎಳೆವೆನೊ ॥ ತಂ ॥
ಪಿರೀಪಟ್ಣ ನನ್ನ ವಸ ಮಾಡಕೊಟ್ರೆ ಮನದೇವತಿ ಕೇಳು
ನಿನಗೆ ಉರಿಯು ಬಣ್ಣಾವ ಕಳಿಗೇನು.
ಸುವ್ವಿ ಸುವ್ವಮ್ಮ ಲಾಲಿ ಶಂಕರಮಲ್ಲಯ್ಯ
ಸುವ್ವಿ ಮುಕ್ಕಣ್ಣ ಲಾಲಿ.
ಉರಿಯ ಬಣ್ಣ ನಿನಗೆ ಕೊಡುವೆನು ಶ್ರೀ ಚಾಮುಂಡಮ್ಮ
ನಿನಗೆ ಗುಂಡು ಪಿರಂಗಿ ಕಳಿಗೇನು ॥ ತಂ ॥
ಅವ್ವಾ ಗುಂಡು ಪಿರಂಗಿ ಕಳಿಗತೀನಿ ಶ್ರೀ ಚಾಮುಂಡಮ್ಮ
ಪಿರೀಪಟ್ಣ ನನ್ನ ವಸವ ಮಾಡವ್ವ ॥ ತಂ ॥
ಪಿರೀಪಟ್ಣ ನನ್ನ ವಸ ಮಾಡಿಕೊಟ್ರೆ ಶ್ರೀಚಾಮುಂಡಮ್ಮ
ಬೆಟ್ಟುಕ ನಾನು ದೀಪ ಮಡುಗಸೇನು ॥ ತಂ ॥
ಬೆಟ್ಟುಕ ನಾನು ದೀಪ ಮಡುಗಸೇನು ನನ್ನಾ ತಾಯಿ
ಬರು ಪರಸೆಗೆ ಬೆಟ್ಟುಕ ನಾನು ಹಂತ ಕಟ್ಟಿಸೇನು
ಬಸವಣ್ಣ ಬಸವಣ್ಣ ಎನ್ನಿರೊ ಲೋಕಾದ ಒಳುಗೆ
ಬಸವಣ್ಣನೆ ದೊಡ್ಡವನು ಎನ್ನೀರೊ.

ಕೇಳವ್ವ ಮನೆದೇವತಿ ಚಾಮುಂಡವ್ವ ತೇರ ಮಾಡಿಸತೀನಿ, ತೇರುನ ಮ್ಯಾಲೆ ತೆಪ್ಪ ಕಟಸತೀನಿ. ಬೆಟ್ಟಕ ದೀಪ ಮಡಗಸತೀನಿ, ನಿನ್ನ ಬರೋ ಪರುಸೆಗೆಲ್ಲ ಹತ್ತುಕೆ ಹಂತ ಕಟ್ಟಸತೀನಿ ತಾಯಿ. ಈವತ್ನ ದಿವುಸದಲ್ಲಿ ಹೇಳುವೆನು ಕೇಳಮ್ಮ. ಈ ಹರಕೇನು ಒಪ್ಪಾಕಿಲ್ಲ ಅಂದ್ರೆ ಇನ್ನು ಯಾವ ಹರಕೆ ಒಪ್ಕೊತೀನಿ ಅಂದ್ರೆ -

ಗಂಡುಮಗ ನನ್ನ ಹೊಟ್ಟೆಲಿ ಹುಟಿದರೆ ಶ್ರೀ ಚಾಮುಂಡಮ್ಮ
ಚಾಮರಾಯರಂಬೊ ಹೆಸರ ಇಡುವೆನು ॥ ತಂ ॥
ಚಾಮರಾಯರಂಬೊ ಹೆಸರ ಕರೀತೀನಿ ನನ್ನಾ ತಾಯಿ
ಹುಟಿದ ಮಕ್ಳ ನಿನಗೆ ಬುಡವೆನು ॥ ತಂ ॥
ಅವ್ವಾ ಹೆಣ್ಣುಮಗಳು ನನ್ನ ಹೊಟ್ಟೇಲಿ ಹುಟ್ಟಿದಾರೆ ಶ್ರೀ ಚಾಮುಂಡಮ್ಮ
ಚಾಮೆಣ್ಣೆಂದು ಹೆಸರ ಕೊಡುವೆನು ॥ ತಂ ॥
ಹುಟಿದ ಮಕ್ಳು ನಿನದು ಕಾಣವ್ವ ಶ್ರೀ ಚಾಮುಂಡಮ್ಮ
ನಾನು ಬಿತ್ತಿದ ಬೆಳೆ ನಿನದು ಕಾಣವ್ವ ॥ ತಂ ॥
ಕಾಯಿ ನಿಂದು ಕೊಳ್ಳು ನಿಂದವ್ವ ಶ್ರೀ ಚಾಮುಂಡಮ್ಮ
ಪಿರೀಪಟ್ಣ ನನ್ನ ವಸ ಮಾಡಮ್ಮ

ಬಸವಣ್ಣ ಬಸವಣ್ಣ ಎನ್ನಿರೊ ಕಲ್ಯಾಣಕೆಲ್ಲ

ಬಸವಣ್ಣನೆ ದೊಡ್ಡವನು ಎನ್ನಿರೋ.

ಕೇಳವ್ವ ಚಾಮುಂಡಮ್ಮ, ನೀನಾಗಿ ನನಗೆ ಗಂಡುಮಗನ ವರ ಕೊಟ್ರೆ ಹುಟ್ಟುದ ಮಗನಿಗೆ ಚಾಮರಾಯರನ್ನೋ ಹೆಸರ ಕರೀತೀನಿ. ಹೆಣ್ಣು ಮಕ್ಕಳ ಹುಟಬುಟ್ರೆ ಚಾಮುಂಡಿ ಅನ್ನೋ ನಾಮಕರಣ ಮಾಡತೀನಿ ತಾಯಿ. ಹುಟ್ಟಿದ ಮಕ್ಕಳ ನಿನಗೆ ಕೊಡತೀನಿ, ಬತ್ತದ ಬೆಳೆ ನಿನ್ನ ವಶಕೆ ಕೊಡತೀನಿ ತಾಯಿ. ಕಾಯು ನಿಂದು ಕೊಳ್ಳು ನಿಂದವ್ವ. ಹೇಳುವೆನು ಕೇಳು ತಾಯಿ-

ಅವ್ವಾ ಗೆದ್ರೆ ಪಿರೀಪಟ್ಣ ಕಾಣವ್ವ ಶ್ರೀಚಾಮುಂಡಮ್ಮ
ಕೊಟ್ರೆ ಮೈಸೂರು ಕಾಣಮ್ಮ ॥ ತಂ ॥
ಕೊಟ್ಟರೆ ಮೈಸೂರು ಕಾಣಮ್ಮ ಶ್ರೀ ಚಾಮುಂಡಮ್ಮ
ಹೋದರೆ ನನ್ನ ದೇಹ ಕಣವ್ವ ॥ ತಂ ॥

ಗೆದ್ರೆ ಪಿರಿಯಪಟ್ಣ ತರತ್ತೀನಿ, ಸೋತರೆ ಮೈಸೂರ ಪಟ್ಣ ಕೊಡತೀನಿ ತಾಯಮ್ಮ. ಹೋದ್ರೆ ನನ್ನ ದೇಹ ಹೋಯ್ತದೆ ತಾಯಿ. ಈವತ್ನ ದಿವಸದಲ್ಲಿ ದಂಡುನ ಜಗಳಕ ಹೋಗಬಾಪ್ಪ ಅಂತೇಳಿ ಅಭಯ ಕೊಟ್ರೆ ತಾಯಮ್ಮ -

ಗೆಲಿತೀನಂದ್ರೆ ಬಲಚಾರಕೆ ನೀ ವರವ ಕೊಡಮ್ಮ ಶ್ರೀ ಚಾಮುಂಡಮ್ಮ
ಸೋಲಿತೀನಂದ್ರೆ ಎಡಚಾರಕೆ ವರವ ಕೊಡಮ್ಮ ॥ ತಂ ॥
ವರವ ಕೊಡೊ ನನ್ನಾ ತಾಯೆಂದು ನನ್ನಾ ಕಂದ
ಬಿದ್ದುಬಿದ್ದು ವರವ ಬೇಡೀದ ॥ ತಂ ॥

ಬಿದ್ದುಬಿದ್ದು ವರ ಬೇಡಿಕೊಂಡು ದಳವಾಯಿ ಮಾರಾಜ ವರ ಬೇಡುವಂಥ ಕಾಲದಲ್ಲಿ ಗುರುವೆ ಕಲ್ಲಾಗಿ ಕೂತಿದ್ದಂಥ ಚಂಡಿ ಚಾಮುಂಡೇಶ್ವರಿ -

ದಳವಾಯಿ ರಾಜನ ಹರಕೆಗೊಪಕೊಂಡ ಶ್ರೀಚಾಮುಂಡಮ್ಮ
ಗುಳಗುಳನೆ ಕಣ್ಣೀರ ಕೆಡಗಿದ ॥ ತಂ ॥
ಅಯ್ಯೋ ಕೇಳು ಕೇಳು ನನ್ನ ಕಂದಯ್ಯ ದಳವಾಯಿ ಕಂದಣ್ಣ
ಧೀರರ ಮ್ಯಾಲೆ ಜಗಳ ಮಾಡೆಯ ? ॥ ತಂ ॥
ಕಂದ ಕತ್ತಿ ಜಗಳ ನಿನಗೆ ಬರವದ ನನ್ನಾ ಕಂದ
ಕಠಾರಿ ಕಾಳಗ ನಿನಗೆ ಬರವದ ?
ಬಸವಣ್ಣ ಬಸವಣ್ಣ ಎನ್ನಿರೊ ಕಲ್ಯಾಣಕೆಲ್ಲ
ಬಸವಣ್ಣ ದೊಡ್ಡವನು ಎನ್ನೀರೋ.
ಕತ್ತಿಯ ಕೈಯಲ್ಲಿ ಹಿಡಕೊಂಡು ದಳವಾಯಿ ಕಂದಣ್ಣ
ರಣದಲ್ಲಿ ನಿಂತು ಜಗಳ ಮಾಡಬಲ್ಯ ನನ್ನಾ ಕಂದ
ವೈರಿ ಒಂದಿಗೆ ಕದನ ಮಾಡಬಲ್ಯ ?
ಸಂಕರ ಮಾದೇವ ಲಿಂಗ ಬಾ.

ಈವತ್ತುನ ದಿವಸದಲ್ಲಿ ನನ್ನ ಕಂದ ಪಿರೀಪಟ್ಣುಕ್ಕೋಗಿ ಅಂಥ ಧೀರರು, ಶೂರರ ಎದರಿಗೆ ನೀನು ನಿಂತಕೊಂಡು ಶಕ್ತಿ ಕಾಳಗ, ಕಠಾರಿ ಕಾಳಗ ಮಾಡಬಲ್ಯ ಕಂದ? ರಣದಲ್ಲಿ ನೀನು ಧೈರ್ಯವಾಗಿ ನಿಲ್ಲಬಲ್ಯ ಕಂದ ?

ಅಪ್ಪಾ ನನ್ನ ವರವ ಬೇಡಿ ನೀನು ಹೋದರೆ ದಳವಾಯಿ ಕಂದಣ್ಣ

ರಣದಲ್ಲಿ ಪ್ರಾಣವ ಬುಡತೀಯೆ.
ಹುಣ್ಣಿಮೆಯಂಗೆ ಚಂದ್ರ ನೋಡಮ್ಮ
ಹಣೆ ಒಳಗೆ ಬೆರಳಿನಲ್ಲಿ ತಿದ್ದಿರುವ
ಬಸಮಂಗ ನೋಡಿರವ್ವ.
ರಣದಲ್ಲಿ ನೀ ಪ್ರಾಣ ಬುಟ್ಟಮ್ಯಾಲೆ ನನ್ನಾ ಕಂದ
ಮೈಸೂರು ಹಾಳಾಗಿ ಹೋಯ್ತದೆ.
ಹಾರಹಾರ ಮುತ್ತಿನ್ಹಾರ ಶಿವಾನೀಗೆ
ಕೊರಳಲ್ಲಿರುವ ಶಿವದಾರ.

ನನ್ನ ಮಾತ ಕೇಳಪ್ಪ ಕಂದ ದಳವಾಯಿ ದೊರೆಯೆ. ಮೈಸೂರಲ್ಲಿ ಕತ್ಲೆ ಆಗಬುಡತದೆ. ಕದನ ಕಾಳಗಕ ಹೋಗಬ್ಯಾಡ. ದಂಡ ಕಟಕೊಂಡು ಜಗಳಕ್ಕೋಗಬ್ಯಾಡ ಎಂಬುದಾಗಿ ಚಂಡಿ ಚಾಮುಂಡೇಶ್ವರಿ ಕಣ್ಣಲ್ಲಿ ಕಣ್ಣೀರ ಕೆಡೀಕೊಂಡು-

ಅಯ್ಯೋ ಬೇಡ ಎಂದು ತಾಯಿ ನುಡದಾಳೊ ಶ್ರೀಚಾಮುಂಡಮ್ಮ
ಎಡಚಾರಕೆ ವರವ ಕೊಟ್ಟುಳಲ್ಲ ॥ ತಂ ॥
ಒಂದು ಕೈಲಿ ತಂಬೂರಿ ನೋಡಮ್ಮ ಶಿವನೀಗ
ಮತ್ತೊಂದ ಕೈಲಿ ಹೆಬ್ಬೂರ ನೋಡಮ್ಮ. ॥ ತಂ ॥

ಪಿರೀಪಟ್ಣಕೆ ದಂಡೆತ್ತಿ ನೀನು ಹೋದ್ದೆ ಆದ್ರೆ ರಣದಲ್ಲಿ ಪ್ರಾಣ ಬುಟ್ಟಬುಡತೀಯೆ. ಮೈಸೂರು ಕತ್ಲೆ ಆಗಬುಡತದೆ. ಬ್ಯಾಡ ನನ ಕಂದ ಎಂಬದಾಗಿ ಎಡಚಾರಕೆ ವರಕೊಟ್ಲು ಚಂಡಿ ಚಾಮುಂಡಮ್ಮ. ಆ ದಳವಾಯಿ ಕಂದಣ್ಣ ವರ ಕೊಟ್ಟಂಥ ಹೂ ನೋಡಿಕೊಂಡು ಏನ ಮಾತಾಡತಾನಂದ್ರೆ -

ಅಯ್ಯೊ ಬ್ಯಾಡ ಎಂದು ವರವ ಕೊಟ್ಟವಳೆ ಶ್ರೀ ಚಾಮುಂಡಮ್ಮ
ಕೊಟ್ಲು ಅಂತ ಎತ್ತೀಕೊಂಡನಲ್ಲ ॥ ತಂ ॥
ಅಯ್ಯ ಬಲಚಾರಕೆ ವರವ ಕೊಟ್ಟಳೆಂದು ಕಂದ ಬಳವಾಯಿ
ಕಾಣದಂತೆ ಪುಷ್ಪ ಎತ್ತಿಕೊಂಡ ॥ ತಂ ॥

ನನ್ನ ಮನೆದೇವತಿ ಶ್ರೀ ಚಾಮುಂಡಮ್ಮ ಬಲಚಾರಕೆ ವರ ಕೊಟ್ಟಬುಟ್ಲು. ನಾನು ಪಿರೀಪಟ್ನ ಗೆದ್ದಬುಡತೀನಿ ಎಂಬದಾಗಿ ದಳವಾಯಿ ಕಂದಣ್ಣ, ಬ್ಯಾಡ ಎಂಬದಾಗಿ ಚಾಮುಂಡಮ್ಮ ಎಡಚಾರಕೆ ವರಕೊಟ್ರೆ ಗುರುದೇವಾ, ಬಲಚಾರಕೆ ವರ ಕೊಟ್ಲು ಎಂಬದಾಗಿ ಕಂದ ದಳವಾಯಿ ಕಂದಣ್ಣ ಎತಕೊಂಡ. ನನ್ನ ಮನೆದೇವತೆ ವರ ಕೊಟ್ಟಮ್ಯಾಲೆ ಪಿರೀಪಟ್ಣ ಗೆದಕೊಂಡ ತರತೀನಿ, ಸೋಲಕಿಲ್ಲ ಎಂಬದಾಗಿ ದಳವಾಯಿ -

ಕೊಟ್ಟ ಪುಷ್ಪ ಮಂಡೆಗೆ ಮುಡಕೊಂಡ ದಳವಾಯಿ ಕಂದಣ್ಣ
ಬಿಳಿಯ ಕುದರೆ ಮ್ಯಾಲೆ ಕೂತಗೊಂಡ ॥ ತಂ ॥
ಬಿಳಿಯ ಕುದರೆ ಮ್ಯಾಲೆ ಕೂತಗೊಂಡು ದಳವಾಯಿ ಕಂದಣ್ಣ
ಅವ್ನು ನಂಜಾಲಗೂಡಿಗೆ ಬಂದನಲ್ಲೊ.
ರಾಮರಾಮ ಎನ್ನೀರೊ ಅಯೋಧ್ಯದಲ್ಲಿ
ರಾಮಚಂದ್ರನ ಬಂಟ ಎನ್ನೀರೋ.
ನಂಜಲಗೂಡಿಗೆ ಬಂದನಲ್ಲ ದಳವಾಯಿ ಕಂದಣ್ಣ

ಜೋಗಿ ತೋಪನಲ್ಲಿ ಕುದರೆ ಇಳುದಾನೊ ॥ ತಂ ॥
ಜೋಗಿ ತೋಪನಲ್ಲಿ ಕುದರೆ ಇಳುದಾನೊ ಕಂದ ದಳವಾಯಿ
ಹರಿಯು ಹೊಳೆಯ ಕಂಡನಲ್ಲ ॥ ತಂ ॥
ಕಪನಿ ಕಾವೇರಿಗೆ ಬಂದನಲ್ಲ ದಳವಾಯಿ ಕಂದಣ್ಣ
ಎದೆ ಉದ್ದ ನೀರಲ್ಲಿ ನಿಂತನಲ್ಲ ॥ ತಂ ॥
ಎದೆ ಉದ್ದ ಗಂಗೆಲ್ಲಿ ನಿಂತಕೊಂಡ ದಳವಾಯಿ ಕಂದಣ್ಣ
ಮುಳಗಿ ಮುಳಗಿ ಸ್ನಾನ ಮಾಡೀದ ॥ ತಂ ॥

ದಳವಾಯಿ ಕಂದಣ್ಣ ತಾನಾಗಿ ಬಂದು ಕಪನಿ ಕಾವೇರಿ ಹೊಳೆ ಒಳಗೆ ಎದೆಮಟ್ಟದ ನೀರಲ್ಲಿ ನಿಂತಕೊಂಡು ಸ್ನಾನ ಮಾಡಕೊಂಡು, ಒದ್ದೆಬಟ್ಟೆ ಉಟಕೊಂಡು, ನಂಜಲಗೂಡುಗೆ ಬಂದು ನಡಗಾಡ ನಂಜುಡೇಶ್ವರನ ಗುಡಿ ಬಾಗಲ ಮುಂಭಾಗದಲ್ಲಿ ನಿಂತಕೊಂಡು -

ಗುಡಿಯ ಬಾಗಲ ಬೇಗ ತಗುದಾನೊ ದಳವಾಯಿ ಕಂದಣ್ಣ
ನಡಗಾಡ ನಂಜುಂಡನ ನೆನೆದಾನೊ ॥ ತಂ ॥
ನಡಗಾಡ ನಂಜುಂಡನ ನೆನಕಂಡ ದಳವಾಯಿ ಕಂದಣ್ಣ
ಅವ್ನು ಲಿಂಗದ ಬಳೀಗೆ ಬಂದನಲ್ಲೋ ॥ ತಂ ॥
ಅವ್ನು ಲಿಂಗದ ಬಳೀಗೆ ಬಂದನಲ್ಲೊ ಬಳವಾಯಿ ಕಂದಣ್ಣ
ಸ್ವಾಮಿ ಲಿಂಗಾವ ತೊಳದಾನೊ ॥ ತಂ ॥

ದೊರೆಯಾಗಿರತಕ್ಕಂಥ ದಳವಾಯಿ ಕಂದಣ್ಣ, ನಡಗಾಡ ನಂಜುಡೇಶ್ವರನ ಬಳಿಗೆ ಬಂದು, ಲಿಂಗ ತೊಳದಬುಟ್ಟು, ಲಿಂಗಕ್ಕೆ ಜವನ ಪತ್ರೆ ಮರಗ ಮಲ್ಲಿಗೆ ಧರಿಸಬುಟ್ಟು ದಳವಾಯಿ ಮಾರಾಜ ಕಾಯಿಹೊಡದು ಕರಪುರದ ಮಂಗಳಾರತಿ ಬೆಳಗಬುಟ್ಟು, ತೀರಥ ಪರಸಾದ ಬುಟಕೊಂಡು, ನಡಗಾಡ ನಂಜುಂಡೇಶ್ವರನ ಲಿಂಗದ ಮುಂಭಾಗದಲ್ಲಿ ವೀರಮಂಡಿ ಗಾಲಾಕೊಂಡು ಭೂಮಿಮ್ಯಾಲ ಕೂತಕೊಂಡು -

ನಂಜಲಗೂಡು ಲಿಂಗಯ್ಯ ನನ್ನಾ ದೊರಿಯೆ
ಅಪ್ಪಾ ಪರದೇಸಕೆ ಕದನಕೋಯ್ತೀನಿ ॥ ತಂ ॥
ಅಪ್ಪಾ ಪರದೇಸಕೆ ಜಗಳಕೋಯ್ತೀನಿ ನಂಜುಂಡು ಲಿಂಗಯ್ಯ
ಪಿರೀಪಟ್ಣ ನನ್ನ ವಶ ಮಾಡಯ್ಯ ॥ ತಂ ॥
ಪಿರೀಪಟ್ಣ ನನ್ನ ವಶ ಮಾಡಿಕೊಟ್ರೆ ನಂಜುಂಡು ಲಿಂಗಯ್ಯ
ಹರಿಯೋ ಹೊಳೆಗೆ ಸೇತವೆ ಕಟಿಸೇನು ॥ ತಂ ॥
ಹರಿಯೋ ಹೊಳೆಗೆ ಸೇತುವೆ ಕಟಿಸೇನು ನಂಜುಂಡು ಲಿಂಗಯ್ಯ
ನಿನ್ನ ಮಜ್ಜಣಕೆ ಮದ್ದಾನೆ ಕಳವೆನು ॥ ತಂ ॥
ನಿನ್ನ ಮಜ್ಜಣಕೆ ಮದ್ದಾನೆ ಕಳಗತೀನಿ ನನ್ನಾ ಸ್ವಾಮಿ
ಪಿರೀಪಟ್ಣ ನನ್ನ ವಶ ಮಾಡಯ್ಯ ॥ ತಂ ॥

ಈವತ್ನ ದಿವಸದಲ್ಲಿ ಪಿರೀಪಟ್ಣ ನನ್ನ ವಸ ಮಾಡಕೊಟ್ರೆ ಸ್ವಾಮಿ ನಂಜುಂಡೇಶ್ವರ, ನಿನ್ನ ಹರಿವಂಥ ಕಪನಿ ಕಾವೇರಿಗೆ ಸೇತವೆ ಕಟಸತೀನಿ. ನಿನ್ನ ಮಜ್ಜಣಕೆ ಮದ್ದಾನೆ ಕಳಗತೀನಿ ದೇವಾ, ಪರದೇಸ ನನ್ನ ವಸ ಮಾಡಪ್ಪ ಎಂಬದಾಗಿ ದಳವಾಯಿ ಕಂದಣ್ಣ ಕರವೆತ್ತಿ ಕೈ ಮುಕ್ಕೆಂಡು ಹಾಸಹಾಸಿ ಅಡ್ಡಬೀಳುವಂಥ ಕಾಲದಲ್ಲಿ ಗುರುದೇವಾ -

ವರವ ಬೇಡುವ ಕಂದನ ನೋಡಿಕೊಂಡ ನಂಜುಂಡಲಿಂಗಯ್ಯ
ಅವ್ರು ಮನದಲ್ಲಿ ಚಿಂತೇಯ ಮಾಡೀದ ॥ ತಂ ॥
ಬೇಡ ಬೇಡ ನನ್ನ ಕಂದಯ್ಯ ದಳವಾಯಿ ಕಂದಣ್ಣ
ದಂಡೆತ್ತಿ ಜಗಳಕ್ಕೆ ಹೋಗುಬ್ಯಾಡ ॥ ತಂ ॥
ಧೀರರ ಮ್ಯಾಲೆ ಜಗಳಕ ಹೋಗಬ್ಯಾಡ ದಳವಾಯಿ ಮಾರಾಜ
ಶೂರರ ಮ್ಯಾಲೆ ಕದನಕ ಹೋಗಬ್ಯಾಡ ॥ ತಂ ॥

ಅಂಥ ಧೀರರು ಶೂರರ ಮ್ಯಾಲೆ ಕದನಕ ಹೋಗಬ್ಯಾಡ. ದಂಡೆತ್ತಿ ಜಗಳಕ ಹೋಗಬ್ಯಾಡ ಎಂದ ನಂಜುಂಡ ಲಿಂಗಯ್ಯ. ಆಗಲೀಗ ಕಂದ ದಳವಾಯಿ ದೊರೆಯು ಬಲಚಾರಕೆ ವರ ಕೊಡಬೇಕು ಅಂದ್ರೆ -

ಬ್ಯಾಡ ಅಂದು ಎಡಾಚಾರಕೆ ವರವ ಕೊಟನಲ್ಲ ನಂಜುಂಡುಲಿಂಗಯ್ಯ
ಬಲಚಾರಕಂತ ಹೂವ ಎತುಕೊಂಡ. ॥ ತಂ ॥

ಆಗಲೀಗ ದಳವಾಯಿ ಮಾರಾಜ ಹೂವನೆ ಎತ್ಕೊಂಡು ಮನದಲ್ಲಿ ವ್ಯಥೆಪಟ್ಕೊಂಡು ಮತ್ತೇನ ಮಾತಾಡತಾನೆ ಅಂದ್ರೇ ನನ್ನ ಮನೆದೇವ್ರು ನಂಜುಂಡೇಶ್ವರ ಗೆದ್ದು ಬರತೀಯೆ ಹೋಗಪ್ಪ ಎಂಬದಾಗಿ ಬಲಚಾರಕೆ ವರ ಪುಷ್ಪ ಕೊಟ್ರು, ಇನ್ನೇನ ನನಗೆ ಭಯ? ಪಿರೀಪಟ್ಣವ ಗೆದ್ದೇ ಬರತೀನಿ ಎಂಬದಾಗಿ ದಳವಾಯಿ ದೊರೆಯು -

ನಂಜಲಗೂಡ ಬೇಗ ಬುಡುತಾನೆ ನನ್ನ ಕಂದಯ್ಯ
ಮೈಸೂರ್‍ರಾಜ್ಯಕೆ ಬರುತಾನೆ. ॥ ತಂ ॥

ನಂಜಲಗೂಡ ಕೈಲಾಸ ಬುಟಬುಟ್ಟು ದಳವಾಯಿ ಮಾರಾಜ ಬಿಳಿಕುದ್ರೆ ಮ್ಯಾಲೆ ಕೂತಕೊಂಡು ಮೈಸೂರ್‍ರಾಜ್ಯಕೆ ತಾನಾಗಿ ಬಂದು -

ಸ್ವಾದರಮಾವನ ಬಳಿಗೆ ಬರುತಾನೆ ದಳವಾಯಿ ಕಂದಣ್ಣ
ಮಾವಯ್ಯ ನೋಡಿ ಸಂತೋಸ ಮಾಡೀದ ॥ ತಂ ॥
ನಾನು ಎಲ್ಲ ದೇವರ ವರವ ಬೇಡಿವ್ನಿ ಮಾವಯ್ನವರೆ
ರಣದಲ್ಲೋಗಿ ಜಗಳ ಮಾಡುತೀನಿ ॥ ತಂ ॥
ನಾನು ಹೋಗಿ ಬರುವೆ ಪಿರಿಯಪಟ್ಣಕೆ ಮಾವಯ್ಯನವರೆ
ವೈರಿ ತಲೆಯ ತಕೊಂಡು ಬರುವೆನು ॥ ತಂ ॥
ನಾನು ಗೆದ್ದರೆ ತರುವೆ ಪಿರಿಯಪಟ್ಟಣವ ಸ್ವಾದರಮಾವಯ್ಯ
ಸೋತರೆ ಕೊಡುವೆ ಮೈಸೂರ್‍ರಾಜ್ಯವ ॥ ತಂ ॥
ಹೋಗಿದ್ದು ಬರುವೆ ಪಿರಿಯಪಟ್ಟಣಕೆ ಸ್ವಾದುರಮಾವಯ್ಯ
ನೆಗುತ ನೆಗುತ ವರವ ಕೊಡಯ್ಯ ॥ ತಂ ॥

ಹೋಗಿದ್ದು ಬರತೀನಿ ಸ್ವಾದರಮಾವಯ್ಯ, ನಗನಗತ ವರ ಕೊಡಿ ಎಂಬದಾಗಿ ದಳವಾಯಿ ಮಾರಾಜ, ವರ ಬೇಡುವಂಥ ಕಾಲದಲ್ಲಿ, ಬಾಳೆ ಅರಸನವರು ಕೇಳಪ್ಪ ಕಂದ ದಳವಾಯಿ ದೊರೆಯೆ -

ನೀನು ದಂಡೆತ್ತಿ ಜಗಳಾಕೆ ಹೋಗುಬೇಕು ಅನುತೇಳಿ ಕಂದ
ಹೇಳುದ ಮಾತ ಕೇಳುದಿಲ್ಲವಲ್ಲ ॥ ತಂ ॥

ನೀನು ಹೇಳುದ ಮಾತ ಕೇಳಲಿಲವಯ್ಯ ಅಯ್ಯೋ ಕಂದ
ಮೂರಕ ಬುದ್ದಿ ಬುಡನೆ ಇಲದಲ್ಲ ॥ ತಂ ॥
ನಿನಗೆ ಪ್ರಾಣದ ಮ್ಯಾಲೆ ಆಸೆ ಇಲವಲ್ಲ ನನ್ನಾ ಕಂದ
ಕಂದನ ಮ್ಯಾಲೆ ಕಾಳಗ ಬಂತಲ್ಲೊ ॥ ತಂ ॥

ಅಯ್ಯಾ ನನ್ನ ಕಂದ ನಿನಗೆ ಜಲ್ಮದ ಮ್ಯಾಲೆ ಪ್ರಾಣದ ಮ್ಯಾಲೆ ಆಸೆ ಬರಲಿಲ್ಲವ ನನ್ನ ಕಂದ? ಈವತ್ತುನ ದಿವಸದಲ್ಲಿ ನಿನ್ನನ್ನು ನೀನು ತಿಳೀಲಿಲ್ಲ. ನಾನು ಹೇಳದಂಥ ಮಾತನ್ನು ಕೇಳಲಿಲ್ಲವಲ್ಲ ಎಂಬುದಾಗಿ -

ನಿನ್ನ ಹಣೆಯಲ್ಲಿ ಬರದಂಥ ಬ್ರಹ್ಮಾನು ಅಯ್ಯೋ ಕಂದ
ಏನು ಅಂದು ನಿನಗೆ ಬರುದನೋ ॥ ತಂ ॥
ಏನಂದು ನಿನಗೆ ಬರದಾನೊ ಅಯ್ಯೋ ಕಂದ
ಬ್ರಹ್ಮನ ಬರೆಯು ಬರದಂಗಾಗಲಿ ॥ ತಂ ॥

ಬ್ರಹ್ಮದೇವಾ, ನಿನ್ನ ಹಣೇಲಿ ಏನು ಬರಹ ಬರದೀದಾನೊ ಅದರಂಗಾಗಲಿ ಅಂತೇಳಿ ಬಾಳೆ ಅರಸನವರು, ದಳವಾಯಿ ಕಂದಣ್ಣ, ಕೆಂಪೋಚಿ ಅರಸನವರು ಆಗಲೀಗ ಮೂರ ಜನ ಮೂರ್ತಿಗಳು ಸೇರಿಕೊಂಡು ಪಟ್ಟೆಮಂಚದ ಮ್ಯಾಲೆ ಕೂತಕೊಂಡು -

ಚಾಮರಾಜನಗರಕೆ ವಾಲೆ ಬರುದಾರೊ ಅಯ್ಯೋ ಶಿವನೆ
ಆರು ಸಾವುರ ದಂಡ ಕರುದಾರೊ ॥ ತಂ ॥
ಮೂಡಲ ದೇಸಕೆ ನಾಲೆ ಬರದಾನೊ ದಳವಾಯಿ ಕಂದಣ್ಣ
ಮೂರು ಸಾವಿರ ಸೈನ್ಯ ಕರುದಾರೊ ॥ ತಂ ॥
ಬೆಂಗಳೂರಿಗೆ ವಾಲೆ ಬರದಾರೊ ದಳವಾಯಿ ಕಂದಣ್ಣ
ಏಳು ಸಾವಿರ ಜನವ ಕರುದಾರೊ ॥ ತಂ ॥
ಆರು ಸಾವರ ಆನೆ ಕಟುಕೊಂಡು ದಳವಾಯಿ ಕಂದಣ್ಣ
ಎಂಟು ಸಾವರ ಒಂಟೆ ಕಟುಕೊಂಡು ॥ ತಂ ॥
ಎಂಟೆ ಸಾವರ ಒಂಟೆ ಕಟುಕೊಂಡು ದಳವಾಯಿ ಕಂದಣ್ಣ
ಏಳು ಸಾವರ ಕುದರೆ ಕಟುಕೊಂಡು ॥ ತಂ ॥
ಗುಂಡು ಪೀರಂಗಿ ತಕ್ಕೊಂಡ ದಳವಾಯಿ ಕಂದಣ್ಣ
ಪಟ್ಟದಾನೆ ಪಟ್ಟದ ಕುದರೆ ಕರಕೊಂಡು ॥ ತಂ ॥
ಹಸರ ಕಟಗೆಯವ್ರು ಆರು ಸಾವರವಲ್ಲ ಕಂದ ದಳವಾಯಿ
ಬೆಳ್ಳಿ ಕಟಗೆಯವ್ರು ಏಳು ಸಾವ್ರುವಲ್ಲೊ ॥ ತಂ ॥
ಕಠಾರಿಪಾರಿ ಆರು ಸಾವುರವಲ್ಲ ಕಂದ ದಳವಾಯಿ
ಕತ್ತಿಪಾರ ಏಳು ಸಾವರವಲ್ಲೊ ॥ ತಂ ॥
ಇಪ್ಪತ್ತು ಸಾವ್ರ ದಂಡ ಕಟಕೊಂಡು ದಳವಾಯಿ ಕಂದಣ್ಣ
ದಂಡೀನ ಪಾಳಯಕೆ ಬಂದನಲ್ಲೊ. ॥ ತಂ ॥

ದಳವಾಯಿ ದೊರೆಯು ದಂಡುಧಾಳಿ ಮಂದಿ ಮಾರಬಲ ಸಕಲಿಷ್ಟುನು ಕರಸಕೊಂಡು ದಂಡು ಧಾಳಿ ದಂಡಕ ಬಂದು ದಂಡುನ ಮಧ್ಯದಲ್ಲಿ ನಿಂತಕೊಂಡು ಏನ

ಮಾತಾಡತಾನಂದ್ರೆ, 'ಈವತ್ತುನ ದಿವಸದಲ್ಲಿ ಹೇಳುವೆನು ಕೇಳರಪ್ಪ ಕತ್ತಿ ಪಾರದವರೆ, ಕಠಾರಿ ಪಾರದವರೆ, ಮದ್ದಿನ ಪಾರದವರೆ, ಗುಂಡನ ಕಾವಲಗಾರ್ರೆ ಹೇಳುವೆನು ಕೇಳರಪ್ಪ -

ದಂಡಿನ ಜಗಳಕ ನಾನು ಹೋಯ್ತೀನಿ ನನ್ನಾಳುಗಳ
ನನ್ನ ಒಂದಿಗೆ ನೀವು ಬನ್ನಿರಯ್ಯ ॥ ತಂ ॥
ನಿಮ್ಮ ಮಡದಿ ಮಕ್ಕಳಾಸೆ ಇರುವರು ನನ್ನಾಳುಗಳೆ
ಹಿಂದಿರುಗಿ ನಿಂ ಮನೆಗೆ ಹೋಗುರಯ್ಯ ॥ ತಂ ॥
ಹಿಂದಿರುಗಿ ನಿಂ ಮನೆಗೆ ಹೋಗುರಯ್ಯ ನನ್ನಾಳುಗಳೆ
ಮಡದಿ ಮಕ್ಕಳು ಇಲ್ಲದಿದ್ದರೆ ॥ ತಂ ॥
ಮಡದಿ ಮಕ್ಕಳ ಆಸೆ ಇಲದಿದ್ದರೆ ನನ್ನಾಳುಗಳೆ
ದಂಡೆತ್ತಿ ಜಗಳಕ ಬನರಯ್ಯ ॥ ತಂ ॥

ನಿಂ ಮಡದಿ ಮಕ್ಕಳ ಆಸೆ ಇರುವರು ಕೇಳರಪ್ಪ, ಆಗಲೀಗ ಹಿಂದಿರುಗಿ ನಿಂ ಮನೆ ಗೊಂಟೋಗಬುಡರಪ್ಪ. ದಂಡಿನ ಜಗಳದಲ್ಲಿ ನಾವಿದ್ರು ಸರಿಯೆ, ಮರಣವಾದ್ರು ಸರಿಯೆ, ಅನ್ನುವರು ನನ್ನ ಜತೆಗೆ ಬನರಪ್ಪ ಎನುವಂಥ ಕಾಲದಲ್ಲಿ ದಂಡುಧಾಳಿ ಮಂತ್ರಿ ಸೇನಾಪತಿಗಳೆಲ್ಲ ದಳವಾಯಿ ಮಾತನ್ನ ಕೇಳಕೊಂಡು ಅವರೆಲ್ಲ ಏನ ಮಾತಾಡತಾರೆ ಅಂದ್ರೆ, ಕಣ್ಣಲ್ಲಿ ಕಣ್ಣೀರ ಕೆಡೀಕೊಂಡು ರಾಜರ ಮುಂಭಾಗದಲ್ಲಿ ಎಲ್ಲ ಸೈನ್ಯವು ನಿಂತುಕೊಂಡ ಕಾಲದಲ್ಲಿ, ಈವತ್ತುನಾ ದಿವುಸದಲ್ಲಿ ಪಿರೀಪಟ್ಣದ ಕಾಳಗ ಅಂದ್ರೆ ಸತ್ತೋದರೆ ಅಲ್ಲೆ ಮರಣವಾಗಬುಡಬೇಕು ಕನರಯ್ಯ. ಗೆದ್ದಬಂದ್ರೆ ಪಿರೀಪಟ್ಣ ತಕ್ಕೊಂಡ ಬರಬೇಕು ಕನರಯ್ಯ. ಇವತ್ತುನಾ ದಿವುಸದಲ್ಲಿ ಹೋದ್ರು ನಿಂ ಪ್ರಾಣ ಹೊಂಟೋಗಬುಡಲಿ. ನಾವು ಜಗಳಕ ಬರತೀವಿ ಅಂದ್ರೆ ಕೈ ಎತ್ತರಪ್ಪ -

ನೀವು ಎರಡು ಮನಸು ನಿಮಗೆ ಇದ್ದರೆ ನನ್ನಾಳುಗಳೆ
ಒಬ್ರು ನೀವು ಕೈಯ ಎತ್ತುಬ್ಯಾಡಿ ॥ ತಂ ॥

ಮಡದಿ ಮಕ್ಕಳಾಸೆ ಇರುವವರು ಹೊಂಟೋಗಬುಡರಪ್ಪ. ಹೋದ್ರು ನಂ ಪ್ರಾಣ ಹೊಂಟೋಗಬುಡಲಿ ಅನ್ನುವವರು ನಂ ಜತೆ ಬನರಪ್ಪ. ಆಗಲಿ ಅಂತೇಳಿ ದಂಡುದಾಳಿ ಎಲ್ಲ ಮತ್ತೇನ ಮಾತಾಡತಾರೆ ಅಂದ್ರೆ. ಈವತ್ತುನಾ ದಿವುಸದಲ್ಲಿ ನಿಂ ಪ್ರಾಣ ಹೋದತಾವು ನಂ ಪ್ರಾಣ ಹೊಂಟೋಗಬುಡಲಿ. ನೀವು ಗೆದ್ರೆ ನಾವು ಗೆದ್ದಂಗೆ. ನೀವು ಸೋತರೆ ನಾವು ಸೋತಂಗೆ. ಗುರುದೇವಾ ಮಡದಿ ಮಕ್ಕಳು ಆಸೆ ನಮುಗ ಬ್ಯಾಡಿ. ನಿಂ ಜತೆ ನಾವು ಕೂಡಾ ಬರತೀವಿ ಎಂಬದಾಗಿ -

ಅವ್ರು ದಂಡುಧಾಳಿ ಕೈಯ ಎತ್ತಾರೊ ನನ್ನಾ ಗುರುವೆ
ಕರಾವೆತ್ತಿ ಕೈಯನ್ನೆ ಮುಗದಾರೊ ॥ ತಂ ॥

ದಂಡುಧಾಳಿ ಎಲ್ಲ ಕರವೆತ್ತಿ ಕೈಯನ್ನ ಮುಗದಂಥ ಕಾಲದಲ್ಲಿ ಕಂದ ದಳವಾಯಿ ದೊರೆಯು ದಂಡುನ ಸ್ಥಾನ ಬುಟಬುಟ್ಟು -

ಅವ್ರು ಆನೆ ಗುಂಪಿಗೆ ಸಾಗಿ ಬಂದರಲ್ಲ ದಳವಾಯಿ ಕಂದಣ್ಣ
ಆನೆಗೆ ಬುದ್ದೀಯ ಹೇಳೀದ ॥ ತಂ ॥
ನನ್ನ ಕಬ್ಬುನ ರುಣಕೆ ಅನ್ನಾಯ ಮಾಡಬ್ಯಾಡಿ ನನ್ನಾನೆಗಳೆ
ಯುಗತಿಯಿಂದ ಜಗಳ ಮಾಡುರಯ್ಯ ॥ ತಂ ॥

ನೀವು ಯುಗತಿಯಿಂದ ಜಗಳ ಮಾಡುರಯ್ಯ ನನ್ನಾನೆಗಳೆ
ಶಗತಿಯಿಂದ ಕಾಳಗ ಮಾಡರಯ್ಯ ॥ ತಂ ॥
ಯುಗತಿ ಶಗತಿಯಿಂದ ಕದನ ಜಗಳ ಮಾಡರಪ್ಪ ಅಂತೇಳಿ ಆನೆಗಳಿಗೆ ಹೇಳುವಂಥ ಕಾಲದಲ್ಲಿ ಎಲ್ಲಾ ಆನೆಗಳು ಕಣ್ಣಲ್ಲಿ ಕಣ್ಣೀರ ಕೆಡೀಕೊಂಡು-
ನಿಮ್ಮ ಒಂದಿಗೆ ನಾವು ಬರತೀವಿ ಎನುತೇಳಿ ಅವು
ಸೊಂಡಲ ಎತ್ತಿ ಸಲಾಮ ಕೊಡುತಾವೆ ॥ ತಂ ॥

ಆಗಲೀಗ ಕಂದ ದಳವಾಯಿ ದೊರೆಯು ಆನೆ ಗುಂಪನೆ ಬುಟಬುಟ್ಟು -
ಅವ್ರು ಕುದರೆ ಗುಂಪಿಗೆ ಸಾಗಿ ಬಂದನಲ್ಲ ಕಂದ ದಳವಾಯಿ
ಮತ್ತೇನ ಮಾತ ನುಡುದಾನೋ ॥ ತಂ ॥
ನನ್ನ ಕಳ್ಳೆ ರುಣಕೆ ಅನ್ನಾಯ ಮಾಡುಬ್ಯಾಡಿ ನನ್ನಾ ಕಂದ
ನನ್ನ ಒಂದಿಗೆ ಜಗಳಕ ಬನರಯ್ಯ ॥ ತಂ ॥
ನನ್ನ ಒಂದಿಗೆ ಕದನಕೆ ಬನರಯ್ಯ ನನ್ನಾ ಕುದರೆಯೆ
ನೀವು ಯುಗತಿ ಒಳಗೆ ಜಗಳ ಮಾಡುರಯ್ಯ ॥ ತಂ ॥
ಯಗತಿ ಶಗತಿ ಒಳಗೆ ಜಗಳ ಮಾಡರಪ್ಪ ಎಂದು ಕುದರೆ ಗುಂಪಿಗೆ ಹೇಳುವಂಥ ಕಾಲದಲ್ಲಿ ಕುದರೆಗಳೆಲ್ಲ ಕಣ್ಣೀರ ಕೆಡೀಕೊಂಡು ನಿಂ ಜತೆ ಒಳಗೆ ಬಂದು ಶಗತಿ ತೋರಿ ವಿದ್ಯ ಮಾಡತೀವಿ ಎಂಬದಾಗಿ ಅವು-
ಬಲದ ಕಾಲ ಮೇಕೆ ಎತ್ತತಾವೆ ಕುದರೆಗಳೆಲ್ಲ
ರಾಜನಿಗೆ ಸಲಾಮು ಕೊಡುತಾವೆ ॥ ತಂ ॥
ರಾಜುನಿಗೆ ಸಲಮ ಕೊಡುವಂಥ ಕಾಲದಲ್ಲಿ ಮತ್ತೇನ ಮಾತಾಡತಾನೆ ಅಂದ್ರೆ -
ಅಯ್ಯ ಕೇಳಿ ಕೇಳಿ ನನ್ನ ಬಂಟೆಯೆ ಒಂಟೆಗಳ
ಕತ್ತೀಯ ಜಗಳಕ ಹೋಯ್ತೀನಿ ॥ ತಂ ॥
ಕತ್ತಿ ಜಗಳಕ ನಾನೋಯ್ತಿನಿ. ನನ್ನ ಜತೇಲಿ ಬನರಪ್ಪ ಎನುವಂಥ ಕಾಲದಲ್ಲಿ ಆಡಿದಂಥ ಮಾತ ಕೇಳಿಕೊಂಡು ಎಲ್ಲಾ ಒಂಟೆಗಳು ಗುರುದೇವಾ -
ಅವು ಶಿರವ ಬಾಗಿ ಶರಣು ಮಾಡಾವೊ ನನ್ನಾ ಕಂದ
ಶರಣು ಮಾಡಿದ ಒಂಟೆ ನೋಡೀದ. ॥ ತಂ ॥

ಆಗಲೀಗ ಎಲ್ಲಾ ಪ್ರಾಣಿಗಳನ್ನು ಕಣ್ಣೆತ್ತಿ ನೋಡಿಕೊಂಡು ದಳವಾಯಿ ದೊರೆಯು-
ಹಿಂದೆ ಆರ ಸಾವಿರ ದಂಡಲ್ಲೊ ಕಂದ ದಳವಾಯಿ
ಮುಂದೆ ಆರು ಸಾವಿರ ದಂಡಲ್ಲೊ ॥ ತಂ ॥
ಆನೆ ಪಾರ ಮುಂದೆ ಬುಟುಕೊಂಡ ಕಂದ ದಳವಾಯಿ
ಕುದರೆ ಪಾರ ಹಿಂದೆ ಬುಟಕೊಂಡ ॥ ತಂ ॥
ಒಂಟೆ ಪಾರ ಬಲದಲ್ಲಿ ಬುಟುಕೊಂಡ ಕಂದ ದಳವಾಯಿ
ಬಂಟರ ಬಲದಲಿ ಬುಟುಕೊಂಡ ॥ ತಂ ॥
ಕತ್ತಿ ಪಾರದವರ ಕರಕೊಂಡ ದಳವಾಯಿ ಕಂದಣ್ಣ

ಕಠಾರಿ ಪಾರದವರ ಕಟಕೊಂಡ ॥ ತಂ ॥
ಹಸರಕಟಗೆ ಆರುಸಾವಿರ ಹಿಂದೆ ಬುಟಕೊಂಡ ಕಂದ ದಳವಾಯಿ
ಮಸರಕಟಗೆ ಮುಂದೆ ಬುಟುಕೊಂಡ ॥ ತಂ ॥

ಎಡದಲ್ಲಿ ಬಲದಲ್ಲಿ ಸೈನ್ಯ ಕಟಿಗೊಂಡು ದಳವಾಯಿ ಕುಂತುಗೊಂಡು-

ಆನೆ ಮ್ಯಾಲ ಅಂಬಾರಿ ಹೇರಕೊಂಡ ಕಂದ ದಳವಾಯಿ
ಅಂಬಾರಿಯ ಮ್ಯಾಲೆ ಕುಂತುಗೊಂಡು ॥ ತಂ ॥

ಅಂಬಾರಿ ಮ್ಯಾಲೆ ದಳವಾಯಿ ದೊರೆಯು ಕುಂತಗೊಂಡು ಪಟ್ಟದಾನೆ ಮುಂದೆ ಬುಟಕೊಂಡು ಕಂದ ದಳವಾಯಿ -

ಅಯ್ಯಾ ಕ್ವಾಟೆ ಬುಟ್ಟು ರಾಜ ಬರುತಾನೆ ಕಂದ ದಳವಾಯಿ
ಬರುವಂಥ ಕಾಲದೊಳಗಿನ್ನು ॥ ತಂ ॥
ಬರುವಂಥ ಕಾಲದೊಳಗಿನ್ನು ಕಂದ ದಳವಾಯಿ
ಮೈಸೂರ್‍ರಲ್ಲಿ ಗೋಳು ಗೋಳಲ್ಲೊ ॥ ತಂ ॥
ರಾಜನು ಜಗಳಾಕೆ ಹೋಯ್ತನೆ ಎನುತೇಳಿ ಗುರುವೆ
ಹಸೂಮಕ್ಕಳು ದುಕ್ಕ ಮಾಡುತಾವೆ ॥ ತಂ ॥
ಹಸೂಮಕ್ಕಳು ಸ್ವಾಕಪಡುತಾವೆ ಕಂದ ದಳವಾಯಿ
ಆಡೊ ಮಕ್ಕಳು ಕಣ್ಣೀರ ಕೆಡಗಾವೊ ॥ ತಂ ॥
ನಮ್ಮ ರಾಜರ ವಂಶ ಹೋಯ್ತದನತೇಳಿ ದೊಡ್ಡವರೆಲ್ಲ
ಬರುವ ರಾಜನ ಕಣ್ಣೆತ್ತಿ ನೋಡರೊ ॥ ತಂ ॥

ಈವತ್ಗೆ ನಮ್ಮ ಮೈಸೂರ್‍ರಾಜ ಅನುವಂಥ ಹೆಸರೊಂಟೋಗಬುಡತಲ್ಲ. ಇಷ್ಟೊಂದು ದಂಡ ಕಟಗೊಂಡು ಪಿರೀಪಟ್ಣಕೆ ಆಗಲೀಗ ದಳವಾಯಿ ಮಾರಾಜರು ಹೋಯ್ತರಲ್ಲ ಗುರುವೆ. ಹೋದದೊರೆ ಹಿಂದಕ ಬಂದಾನೊ ಇಲ್ವೊ ಎಂಬದಾಗಿ ಮೈಸೂರ ಮಕ್ಳು ದೊಡ್ಡವರು ಚಿಕ್ಕವರು ಸೈತವಾಗಿ ಕಣ್ಣಲ್ಲಿ ಕಣ್ಣೀರ ಕೆಡೀಕೊಂಡು ಸಂಕಟ ದುಕ್ಕ ಮಾಡಕೊಂಡು -

ಹೋಗೊ ರಾಜನ ಕಣ್ಣೆತ್ತಿ ನೋಡಕೊಂಡು ಎಲ್ಲಾ ಜನಗೊಳು
ಅಳು ಅಳುತೆ ಅವ್ರ ಮನೆಗೆ ಬರುತಾರೆ ॥ ತಂ ॥
ಮೈಸೂರು ರಾಜ್ಯವ ಬುಟನಲ್ಲ ಕಂದ ದಳವಾಯಿ
ಪಡವಾರಳ್ಳಿ ಗ್ರಾಮ ಕಡದನಲ್ಲೋ ॥ ತಂ ॥
ಪಡವಾರಳ್ಳಿ ಗ್ರಾಮ ಕಡದಾನೊ ಕಂದ ದಳವಾಯಿ
ಎಲ್ಲಾ ದೇವ್ರ ಗ್ಯಾನ ಮಾಡಿಕೊಂಡ ॥ ತಂ ॥
ಎಲ್ಲಾ ದೇವ್ರ ಗ್ಯಾನ ಮಾಡಿಕೊಂಡು ಬರುವಾ ಕಾಲದಲ್ಲಿ
ಮನೆಯ ದೇವರ ಮರತೆಕೊಂಡ ॥ ತಂ ॥

ಮನೆದೇವ್ರು ಚಂಡಿ ಚಾಮುಂಡೇಶ್ವರಿಗೆ ಮರೆತಕೊಂಡು ಕಂದ ದಳವಾಯಿ ಬರುವಂಥ ಕಾಲದಲ್ಲಿ ಆ ಗಳಿಗೆ ಒಳಗೆ ಮೈಸೂರ ಕಲ್ಲುಬೆಟ್ಟದ ಮ್ಯಾಲೆ ವರಗಿರುವಂಥ ಚಂಡಿ ಚಾಮುಂಡೇಶ್ವರಿ ಹೋಗುವಂಥ ದಳವಾಯಿ ಮಾರಾಜ ಸೈನ್ಯನೆಲ್ಲ ಕಣ್ಣೆತ್ತಿ ನೋಡಿಕೊಂಡು ಚಾಮುಂಡಮ್ಮ ಉರಿಗದ್ದಿಗೆ ಮ್ಯಾಲೆ ತಾನಾಗಿ ಮೂರ್ತಮಾಡಕೊಂಡು -

ಹೋಗೊ ರಾಜನ ಕಣ್ಣೆತ್ತಿ ನೋಡಿದ ಶ್ರೀಚಾಮುಂಡಮ್ಮ

ಗುಳಗುಳನೆ ಕಣ್ಣೀರ ಕೆಡಗಿದ ॥ ತಂ ॥
ಹಸುಳೆ ಕಂದ ಜಗಳಕೋಯ್ತನೆ ಕಂದ ದಳವಾಯಿ
ರಣದಲೋಗಿ ಪ್ರಾಣ ಬುಡುತಾನೆ ॥ ತಂ ॥
ನನ್ನ ಮಾತ ಮೀರಿ ಹೋಯ್ತಾನೆ ಕಂದಾ ದಳವಾಯಿ
ರಣದಲೋಗಿ ಪ್ರಾಣ ಬುಡತಾನ ॥ ತಂ ॥
ನನ್ನ ಮಾತ ಮೀರಿ ಹೋಯ್ತನೆ ಕಂದಾ ದಳವಾಯಿ
ವೈರಿ ಕೈಲಿ ಪ್ರಾಣ ಕೊಡುತಾನೆ ॥ ತಂ ॥

ವೈರಿ ಕೈಲಿ ಪ್ರಾಣ ಕೊಟಬುಡತನಲ್ಲ, ಏನಗತಿ ಮಾಡಬೇಕು ಅಂತೇಳಿ ಚಂಡಿ ಚಾಮುಂಡೇಶ್ವರಿ ಉರಿಗದ್ದಿಗೆ ಮ್ಯಾಲ ಮೂರ್ತಮಾಡಕೊಂಡು, ತಂಗೆ ಉತನಳ್ಳಿ ಉರಕಾತಿ ಕರದು ಬಲಭಾಗದಲ್ಲಿ ಕುಂಡ್ರಸ್ಕೊಂಡು, ತಂಗೆ ಉತನಹಳ್ಳಿ ಉರಿಕಾತಮ್ಮನಿಗೆ ಏನ ಮಾತ ಹೇಳತಾಳೆ ಅಂದ್ರೆ, ಏನವ್ವ ನನತಂಗೆ ಉತನಳ್ಳಿ ಉರಕಾತಿ. ಮೈಸೂರ ಸಂಸ್ಥಾನ ಆಳುವಂಥ ಕಂದ ದಳವಾಯಿ ನನ್ನ ಒಕ್ಕಲಲ್ಲಮ್ಮ. ಈವತ್ತನ ದಿವುಸ ಇಪ್ಪತ್ತಸಾವ್ರ ಸೈನ್ಯ ದಂಡ ಕಟ್ಟಿಗೊಂಡು ಪಿರೀಪಟ್ನಕೆ ಕದನಕೆ ಹೋಯ್ತಾವನಲ್ಲ -

ಅವ್ವಾ ಹಾಳಾಯ್ತು ಮೈಸೂರು ಮುರದೋಯ್ತು ದೇವಸ್ಥಾನ
ಕೆಟ್ಹೋಯ್ತು ನನ್ನ ಪಟ್ಣಾಣ ॥ ತಂ ॥
ನನಗೆ ಕತ್ತಿ ಹಿಡಿವರು ಇಲ್ಲ ಕಾಳಗ ಮಾಡುವರಿಲ್ಲ
ಮುಂದೋಗೊ ಗಣಸೆ ನನುಗಿಲ್ಲ ॥ ತಂ ॥

ಕತ್ತಿ ಹಿಡಿಯುವರಿಲ್ಲ, ಕಾಳಗ ಮಾಡುವರಿಲ್ಲ, ಮುಂದೋಗೊ ಗಣಸೆ ನನಗಿಲ್ಲ ತಂಗಿ ಉತನಹಳ್ಳಿ ಉರಕಾತಿ, ಏನಗತಿ ಮಾಡಬೇಕು ಎಂಬದಾಗಿ ಚಂಡಿ ಚಾಮುಂಡಮ್ಮ ಆಗಲೀಗ ತಂಗೆ ಉತನಹಳ್ಳಿ ಉರಕಾತಮ್ಮನಗೆ ಏನ ಬುದ್ದಿ ಹೇಳತಾಳೆ ಅಂದ್ರೆ, ಕೇಳವ್ವ ತಂಗೆ ಉತನಳ್ಳಿ ಉರಕಾತಿ. ಈವತ್ತುನ ದಿವಸದಲ್ಲಿ ಪಿರೀಪಟ್ಣಕ್ಕೆ ನೀನು ಹೊಂಟೋಗಬುಟ್ಟು ಪಿರೀಪಟ್ಣದಲ್ಲಿರುವ ನಮ್ಮಕ್ಕ ಪಿರೀಪಟ್ಣದ ಮಾರಮ್ಮ ಇದ್ದಾಳೆ ನನ ಕಂದ. ಆ ಮಾರಮ್ಮ ಅಂದ್ರೆ ಕೆಟ್ಟಮಾರಿ. ದುಷ್ಟುಮಾರಿ. ಹೋದಂಥ ದಂಡುಧಾಳಿ ಎಲ್ಲಾನು ಅವಳೆ ಸಂಹಾರ ಮಾಡಬುಡತಾಳೆ. ಆ ಮಾರಮ್ಮತಾಕೆ ಹೋಗಿ, ನಿನ್ನ ತಂತು ತಟವಟದಲ್ಲಿ ಅವಳ್ನ ಮೈಸೂರ್ರಾಜ್ಯಕೆ ಕರಕೊಂಡು ಬಂದುಬುಡು. ಈ ಸುತ್ತೇಳು ಮಾರೀರ ನಾನು ಕಟಿಕೊತೀನಿ ಎಂಬದಾಗಿ ತಂಗೆ ಉತನಹಳ್ಳಿ ಉರಕಾತಿ ಕರದು -

ಪಿರಿಯಪಟ್ಣಕೆ ತಾಯಿ ಬೇಗದಲ್ಲಿ ಕಳಗುತಾಳೆ. ॥ ತಂ ॥

ಅಕ್ಕಯ್ಯ ಆಡಿದಂಥ ಮಾತ ಕೇಳಿಕೊಂಡು ಚಿಕ್ಕವಳಾದ ಉತನಳ್ಳಿ ಉರಕಾತಿ ಸಾಗಿ ಪಿರೀಪಟ್ಣುಕ ಬರತಿದ್ದಾಳೆ. ಈ ಕಡೆ ಚಂಡಿ ಚಾಮುಂಡೇಶ್ವರಿ ಹೋಗುವಂಥ ದಳವಾಯಿ ದಂಡುಧಾಳೀನ ತಡಗಟ್ಟಬೇಕು ಎಂಬದಾಗಿ ಯಾವ ರೀತಿಯಲ್ಲಿ ತಡಗಟ್ಟಬೇಕು ಎನತೇಳಿ ಆಗಲೀಗ ಸಿಪಾಯಿ ಯಾಸ ತಾಳಿಕೊಂಡು, ಬಿಳಿಕುದರೆ ಮ್ಯಾಲ ಕೂತಕೊಂಡು, ಬೆಳ್ಳಿಕತ್ತಿ ಬಲಗೈಲಿಡಕೊಂಡು -

ಅಯ್ಯಾ ಕುದರೆ ಮ್ಯಾಲೆ ತಾಯಿ ಕೂತಕೊಂಡ ಶ್ರೀಚಾಮುಂಡಮ್ಮ
ಗುಡಗೀದ ಗುಂಗರಾಳ ಛತ್ತುರಕೆ ॥ ತಂ ॥

ಪಿರೀಪಟ್ಣದ ಗುಂಗರಾಳ ಛತ್ತರಕೆ ದಳವಾಯಿ ದೊರೆ ಬರುವುದ ನೋಡಿಕೊಂಡು ಚಂಡಿ ಚಾಮುಂಡೇಶ್ವರಿ ಗುಂಗರಾಳ ಛತ್ರಕ್ಕೆ ಬರುವಂಥ ಕಾಲದಲ್ಲಿ, ದಳವಾಯಿ ದೊರೆ ಗುಂಗರಾಳ ಛತ್ರದಲ್ಲಿ ಕೇಳರಪ್ಪ ದಂಡು ಧಾಳಿಗಳೇ, ಗುಂಗರಾಳ ಛತ್ರದಲ್ಲಿ ಡೇರ್‍ಯ ಹೊಡಿರಪ್ಪ. ಆನೆಗಳಿಗೆಲ್ಲ ಕಬ್ಬು ಕೊಡರಪ್ಪ. ಕುದರೆಗಳಿಗೆಲ್ಲ ಹುಳ್ಳಿಕಳ್ಳೆ ಕೊಡರಪ್ಪ. ನೀವು ಹಾಲು ಅನ್ನ ಪಂಚಾಮೃತದ ಅಡಗೆ ದುಡೀಕೊಳ್ರಯ್ಯ. ಊಟ ಉಪಚಾರಣೆ ಮಾಡಕೊಂಡು -

ಇಂದಿನ ರಾತರೆ ಇಲ್ಲೆ ತಳಗಾವೊ
ನಾಳೆ ರಾತರೆ ಎದ್ದು ಹೋಗಾವ ॥ ತಂ ॥

ನಾಳೆ ರಾತರೆಗೆ ಎದ್ದೋಗುವ ಎನುವಂಥ ಕಾಲದಲ್ಲಿ ದಳವಾಯಿ ದೊರೆ ಆಡಿದಂಥ ಮಾತ ಕೇಳಿಕೊಂಡು ದಂಡುಧಾಳಿ ಎಲ್ಲ ಅಲ್ಲಿ ತಂಗುವಂಥ ಕಾಲದಲ್ಲಿ, ಇದೇ ಸಮಯ್ಯ ವ್ಯಾಳ್ಯ ಅಂತೇಳಿ ಚಂಡಿ ಚಾಮುಂಡೇಶ್ವರಿ -

ಗುಂಗರಾಲ ಛತ್ರಕ್ಕೆ ಬಂದಳಲ್ಲ ಶ್ರೀಚಾಮುಂಡಮ್ಮ
ಮತ್ತೇನು ಮಾತುಗಳ ನುಡುದಾಳೊ ॥ ತಂ ॥

ಗುಂಗರಾಲ ಛತ್ರಕ ಬಂದಾಗ, ಕಾಕೋಳಿ ಕೂಗಿ ಲೋಕ ಬೆಳಗಾಗಬುಟ್ಟು ಎಂಟಗಂಟೆ ಜಾಮಕ ಸರಿಯಾಗಿ ಕಂದ ದಳವಾಯಿ ಛತ್ರ ಬುಟ್ಟು ಮುಂದಕ ಪಯಣ ಬೆಳಸುವಷ್ಟರಲ್ಲಿ ಅಡ್ಡ ಮೊರಗದಲ್ಲಿ ಚಂಡಿ ಚಾಮುಂಡೇಶ್ವರಿ ಬಂದು -

ಬರುವ ದಂಡ ತಡಗಟ್ಟಕೊಂಡ ಶ್ರೀಚಾಮುಂಡಮ್ಮ
ಮತ್ತೇನು ಮಾತುಗಳ ನುಡುದಾಳೊ ॥ ತಂ ॥

ಬರುವಂಥ ದಂಡ ತಡಕೊಂಡಂಥ ಕಾಲದಲ್ಲಿ ಏನರಪ್ಪ, ಯಾವ ರಾಜ್ಯದವರು? ಯಾವ ಪಟ್ಟಣದವರು? ಎಲ್ಲಿಗೋಯ್ತೀರಿ ? ಎನುವಂಥ ಕಾಲದಲ್ಲಿ ಕೇಳಯ್ಯ, ನೀನು ಎತ್ತಣ ನಾಡಿನ ಸಿಪಾಯಿಯಯ್ಯ? ನಾವು ಪಿರೀಪಟ್ಟಣದಲ್ಲಿರುವಂಥ ವೀರ್‍ರಾಜಿ ದೊರೆ ಮ್ಯಾಲೆ ದಂಡೆತ್ತಿ ಕಾಳಗಕ್ಕೆ ಕದನಕ್ಕೆ ಜಗಳಕ್ಕೆ ಬಂದ ಮೈಸೂರು ದಳವಾಯಿ ದಂಡು ನಾವು. ಎನುವಂಥ ಕಾಲದಲ್ಲಿ, ಏನಯ್ಯ ಪಿರೀಪಟ್ಣದಲ್ಲಿರತಕ್ಕಂಥ ವೀರ್‍ರಾಜಿ ಅರಸರ ಕಡೆ ಜಟ್ಟಿ ನಾನು-

ಅಂಥ ಸಗತಿ ನಿಮ್ಮಲ್ಲಿದ್ದರೆ ಮೈಸೂರವರೆ
ನನ್ನ ಮ್ಯಾಲೆ ಕದನ ಮಾಡರಯ್ಯ ॥ ತಂ ॥
ನನ್ನ ಮ್ಯಾಲೆ ಕದನ ಮಾಡರಯ್ಯ ಮೈಸೂರವರೆ
ನನ್ನ ಗೆದ್ದು ಮುಂದುಕ ಹೋಗರಯ್ಯ ॥ ತಂ ॥

ನನ್ನ ಗೆದ್ದುಕೊಂಡು ಮುಂದಕ್ಕೋಗಪ್ಪ ಎನುವಂಥ ಕಾಲದಲ್ಲಿ ಆಡಿದಂಥ ಮಾತ ಕೇಳಿಕೊಂಡು ಆಗಲೀಗ ದಳವಾಯಿ ಮಾರಾಜ, ದಂಡುಧಾಳಿಗೆಲ್ಲ ಏನಪ್ಪಣೆ ಮಾಡತಾನಂದ್ರೆ -

ಮೊದಲನೆ ಜಗಳ ಇದೇ ಕಣರಯ್ಯ ನನ್ನಾಳುಗಳೆ
ಸಿಪಾಯಿ ಮೇಲೆ ಜಗಳವಾಡರಯ್ಯ ॥ ತಂ ॥
ಸಿಪಾಯಿ ಮ್ಯಾಲೆ ಜಗಳ ಮಾಡುರಯ್ಯ ನನ್ನಾಳುಗಳೆ

ಇವನ ಕೊಂದು ಮುಂದಕ ನಡಿರಯ್ಯ ॥ ತಂ ॥

ಇವನ ಕೊಂದುಬುಟ್ಟು ಮುಂದಕ ನಡೀರಪ್ಪ ಎನುವಂಥ ಕಾಲದಲ್ಲಿ ಚಂಡಿ ಚಾಮುಂಡೇಶ್ವರಿ ಆಗಲೀಗ ಕತ್ತಿ ಕೈಲಿಡಕೊಂಡು ಕುದರೆ ಇಳಿದು ಆ ದಂಡುನ ಮಧ್ಯದಲ್ಲಿ ನಿಂತಕೊಂಡು ಕದನ ಕಾಳಗಕ ಬನ್ನಿ ಮೈಸೂರ ದೊರೆಗಳೆ ಎನುವಂಥ ಕಾಲದಲ್ಲಿ ಆಗಲೀಗ-

ದಂಡೆತ್ತಿ ಜಗಳಕ್ಕೆ ಬರುವಾಗ ಮೈಸೂರಿನವರು
ಇವಳು ಮಂಕುನ ಬೂದಿ ಮಡಲಲ್ಲಿ ಕಟಿಗೊಂಡ ॥ ತಂ ॥
ಇವಳು ಮಂಕುನ ಬೂದಿ ಮಡಲಲ್ಲಿ ಕಟಿಗೊಂಡ ಚಾಮುಂಡಿ ತಾಯಿ
ಎಲ್ಲಕ ಬೂದೀಯ ಉರಬೀದ ॥ ತಂ ॥

ಎಲ್ಲಾ ದಂಡುಧಾಳಿಗು ಮಂಕನ ಬೂದಿ ಉರುಬುದಂಥ ಕಾಲದಲ್ಲಿ ಗುರುದೇವಾ ದಂಡು ಧಾಳಿ ಎಲ್ಲ ಮಂಕುಮರಳಾಗಿ ಡಿಂಕುಡಿರಳಾಗಿ ಬೆರತಕೊಂಡು ಜರತಕೊಂಡು ನಿಲುವಂಥ ಕಾಲದಲ್ಲಿ ಅವುರಿಗೆ ಹೊಡಿಯಾಕೆ ಕೈ ಬರತಿಲ್ಲ. ನೋಡಾಕೆ ಕೈ ಬರತಿಲ್ಲ. ನೋಡಾಕೆ ಕಣ್ಣ ಕಾಣಾಕಿಲ್ಲ -

ಕತ್ತೀಯ ಬೀಸಿದರೆ ತಾಯಿ ಚಾಮುಂಡಮ್ಮ
ಕತ್ತು ಕತ್ತರಿಸಿ ಬೂಮಿಗೆ ಬಿಳುತಾದೆ ॥ ತಂ ॥
ಅವಳು ದಂಡುಧಾಳಿ ಕೊಂದೇಬುಟ್ಟಳಲ್ಲ ಶ್ರೀ ಚಾಮುಂಡಮ್ಮ
ಆನೆದಂಡ ಕೊಂದೇಬುಟ್ಟಳಲ್ಲೋ ॥ ತಂ ॥
ಆನೆದಂಡ ಕೊಂದೇಬುಟಳಲ್ಲ ಶ್ರೀ ಚಾಮುಂಡಮ್ಮ
ಒಂಟೆದಂಡ ಸಾಯಸೆಬುಟಳಲ್ಲ ॥ ತಂ ॥
ಒಂಟೆದಂಡ ಸಾಯಿಸೆಬುಟಳಲ್ಲ ಶ್ರೀ ಚಾಮುಂಡಮ್ಮ
ಅವಳು ಕುದುರೆಗಳ ಕೊಂದೇಬುಟಳಲ್ಲ? ॥ ತಂ ॥

ಎಲ್ಲಾ ದಂಡುಧಾಳಿ ಮಂದಿಮಾರಬಲವನ್ನು ಚಂಡಿ ಚಾಮುಂಡೇಶ್ವರಿ ಕೊಂದಾಕಬುಟ್ಟಂಥ ಕಾಲದಲ್ಲಿ ಆ ದಳವಾಯಿ ಮಾರಾಜ, ಅಯ್ಯೊ ಗುರುವೆ ಗುರುದೇವಾ ಇಪ್ಪತ್ತಸಾವ್ರ ದಂಡುಧಾಳಿ ಎಲ್ಲಾನು ಒಬ್ನೆ ಸಿಪಾಯಿ ಕೊಂದಾಕಬುಟ್ನಲ್ಲ ಎಂಬುದಾಗಿ ದಳವಾಯಿ ಕಂದಣ್ಣ ಆ ಸಿಪಾಯಿ ಬಳಿಗೆ ಬಂದು ಮುಂಭಾಗದಲ್ಲಿ ನಿಂತುಕೊಂಡು ಏನ ಮಾತಾಡತಾನೆ ಅಂದ್ರೆ-

ಅಪ್ಪಾ ಅಲ್ಲಿಂದ ನೀ ಒಬ್ಬನೆ ಬಂದಿಯಲ್ಲ ನನ್ನ ಸಿಪಾಯಿ
ಎಲ್ಲಾ ದಂಡ ನೀನೆ ಕೊಂದಯಲ್ಲ ? ॥ ತಂ ॥

ಎಲ್ಲಾ ದಂಡನು ಕೊಂದಂಗೆ ನನ್ನೂ ಕೊಂದಾಕಬುಡಪ್ಪ ಎಂಬದಾಗಿ ಆ ಕಂದ ದಳವಾಯಿ ಶಿರಬಾಗಿ ಬೂಮಿವ್ಯಾಲ ಕುಂತಕೊಂಡ. ಕೂತಕೊಂಡಂಥ ದಳವಾಯಿನ ಕಣ್ಣೆತ್ತಿ ನೋಡಕೊಂಡು ಚಾಮುಂಡಮ್ಮ -

ಅವಳು ಸಿಪಾಯಿನ ಯಾಸ ಮರಸೀದ ಚಾಮುಂಡಮ್ಮ
ಮಾಯ್ಕಾರ ನಿಜರೂಪ ತಾಯಿ ತೋರೀದ ॥ ತಂ ॥
ನಿಜರೂಪ ತಾಯಿ ತೋರಿದ ಶ್ರೀಚಾಮುಂಡಮ್ಮ
ನನ್ನ ನೋಡು ದಳವಾಯಿ ರಾಜಾರೆ ॥ ತಂ ॥

ನನ್ನಾ ನೋಡು ದಳವಾಯಿ ದೊರೆಯೆ. ಆಮೇಲೆ ಕೊಲ್ಲತೀನಿ ಎನ್ನಲಾಗಿ, ಕಂದ ದಳವಾಯಿ ಚಾಮುಂಡೇಶ್ವರಿನ ಕಣ್ಣೆತ್ತಿ ನೋಡಿದ. ಶಿವಶಿವಾ ಎಂಬದಾಗಿ ಕಣ್ಣೀರ ಕೆಡೆಗತ ಕಡುದುಕ್ಕ ಮಾಡತ ಏನಮ್ಮ, ನನ್ನ ಮನೆದೇವತೆ ಚಂಡಿ ಚಾಮುಂಡಮ್ಮ -

ನನ್ನ ದಂಡುಧಾಳಿ ಹಾಳಾಗಿ ಹೋಯ್ತಲ್ಲ ನನ್ನಾ ತಾಯಿ
ಒಂದ ದಂಡಲಿ ಒಬ್ಬ ಉಳುದನಲ್ಲ ॥ ತಂ ॥

ಎಲ್ಲಾ ದಂಡುಧಾಳಿ ಮಂದಿಮಾರಬಲು ಹಾಳಾಗಿ ಹೋಯ್ತು. ನಾನು ಒಬ್ನೆ ಉಳುದನಲ್ಲ ಎನುವಂಥ ಕಾಲದಲ್ಲಿ, ಕೇಳಯ್ಯ ದಳವಾಯಿ ಮಾರಾಜ ಎಲ್ಲಾ ದೇವರುಗಳ ಗ್ಯಾನ ಮಾಡಿಕೊಂಡು ನನ್ನ ಗ್ಯಾನನೆ ಮರತು ಬಂದೆಯಲ್ಲ? ಈವತ್ತುನ ದಿವಸದಲ್ಲಿ ನಿನ್ನ ಬಾಳಾಟ, ಯುಕತಿ, ಸಕತಿ ಎಲ್ಲ ಏನಾಯ್ತು ಕಂದ? ಈ ದಂಡುಧಾಳಿ ಎಲ್ಲ ಸತ್ತು ಮಡದೋದ್ರು, ಅಂತ ಚಿಂತೆಪಡಬೇಡ -

ಈವತ್ತಿನ ಕದನಕೋಗಬ್ಯಾಡ ನನ್ನಾ ಕಂದ
ನಾಳೆ ಕದನಕೆ ನೀನು ಹೋಗಯ್ಯ. ॥ ತಂ ॥

ನಾಳೆ ಕದನಕೆ ಹೋಗಪ್ಪ ಎಂಬದಾಗಿ ವರ ಕೊಟ್ಟುಬುಟ್ಟು ಚಂಡಿ ಚಾಮುಂಡಮ್ಮ ಮೈಸೂರ್ರಾಜ್ಯಕ ಬಂದು ಕಲ್ಲಬೆಟ್ಟದ ಮ್ಯಾಲೆ ಮೂರ್ತಮಾಡಕೊಂಡ. ಆಗಲೀಗ ಉತನಹಳ್ಳಿ ಉರಿಕಾತಮ್ಮ ಪಿರೀಪಟ್ಟಣದ ಮಾರಿ ಕರಕೊಂಡು ಬೆಳಗೊಳದ ದಿವಿದೇವತೆ ಕರಕೊಂಡು, ಸಾಸಲು ಹೊನ್ನಾದೇವಿ ಕರಕೊಂಡು, ಬನ್ನೂರ ಮಾರಿ ಕರಕೊಂಡು, ಏಳಜನ ಅಕ್ಕ ತಂಗೇರ ಕರಕೊಂಡು, ಚಂಡಿ ಚಾಮುಂಡೇಶ್ವರಿ ಬಳಿಗೆ ಬಂದಂಥ ಕಾಲದಲ್ಲೆ ಎಲ್ಲಾ ಮಾರೀರು ಬರುವಂತ ಟೇಮ್ನಲ್ಲಿ ಚಂಡಿ ಚಾಮುಂಡೇಶ್ವರಿ ಜರ ಎನುವಂಥ ಅವತಾರ ಎತ್ತಿಕೊಂಡು ಪಟ್ಟೆಮಂಚುದ ಮ್ಯಾಲೆ ಮಲಗಿರುವಂಥ ಕಾಲದಲ್ಲಿ, ಎಲ್ಲಾ ಮಾರೀರು ಬಂದಾಗ ಆ ಚಂಡಿ ಚಾಮುಂಡಮ್ಮ ಮೇಲಕ್ಕೆದ್ದ. ಕೇಳಕ್ಕಯ್ಯ ಚಾಮುಂಡಮ್ಮ ಈವತ್ನ ದಿವಸದಲ್ಲಿ ನಿನ್ನ ಕಷ್ಟ ಬಯಲಾಯ್ತಕ್ಕಯ್ಯ ಎಂದು ತಂಗೆ ಉತನಹಳ್ಳಿ ಉರಕಾತಮ್ಮ ಹೇಳುವಂಥ ಕಾಲದಲ್ಲಿ, ಎಲ್ಲಾ ಮಾರೀರು ಬಂದು ನನಗೆ ಮಾಯದ ಬೂದಿ ಪಿಡಿದ್ರು. ಯಾರ ಬಂದ್ರು ನನಗ ಜರ ತಗೀಲಿಲ್ಲ. ತಲೆನೋವು ಬುಡಸಲಿಲ್ಲ. ನಮ್ಮ ಹಿರಿ ಅಕ್ಕಯ್ಯ ಪಿರೀಪಟ್ಣದಮ್ಮ ಬಂದು ಮಾಯದ ಬೂದಿ ಮಂತ್ರಿಸಿ ನನಗಿಟ್ಟಂಥ ಕಾಲದಲ್ಲಿ, ನನಗ ಬಂದ ಕಷ್ಟವೆಲ್ಲ ಬಯಲಾಗಬುಡತು. ಇವತ್ತುನಾ ದಿವುಸದಲ್ಲಿ ಎಲ್ಲಿಲ್ಲದ ಸಂತೋಸ ನನಗುಂಟಾಗಿದೆ. ನಾವೇಳ ಜನ ಅಕ್ಕ ತಂಗೀರು ಸೇರಿಕೊಂಡಿರುವ ಟೇಂನಲ್ಲಿ ಈ ಬೆಟ್ಟದ ಮ್ಯಾಲೆ -

ಅಯ್ಯಾ ಚಂದುಕೊಂದ ಆಟದಿ ಆಡುವ ಅಕ್ಕಯ್ಯದೀರೆ
ಅಂದುಕೊಂಡು ಆಟ ಆಡುವ ॥ ತಂ ॥

ಅಂದ ಚಂದಕ್ಕೆ ಒಂದಾಟ ಆಡುವ ಎಂದಾಗ ಅಕ್ಕಯ್ಯ ಚಂಡಿ ಚಾಮುಂಡಮ್ಮ ಯಾವಾಟ ಆಡುವ ಅಂತ ಕೇಳಲಾಗಿ, ಕೇಳಿರಮ್ಮ ಯಾವಾಟಾನು ಬ್ಯಾಡಿ ಕಣ್ಣಾಮುಚ್ಚೆ ಆಟ ಆಡುವ ಕನರಮ್ಮ ಎಂದು ಹೇಳುದ್ರು. ಆಗಲಿ ಅಕ್ಕಯ್ಯ ಎಂಬುದಾಗಿ ಏಳುಜನ ಅಕ್ಕತಂಗೇರು ಮಾತಾಡಿಕೊಂಡು ಆ ಚಂಡಿ ಚಾಮುಂಡೇಶ್ವರಿ ಕಣ್ಣಗೆ ಬಟ್ಟೆ ಕಟಕೊಟ್ರು. ಕಣ್ಣಾಮುಚ್ಚಾಟ ಆಡುವಂಥ ಕಾಲದಲ್ಲಿ ಆರುಜನ ಮಾರೀರ ಬುಟಬುಟ್ಟು ಚಂಡಿ ಚಾಮುಂಡಮ್ಮ -

ಎಲ್ಲಾ ಮಾರೀರ ಬುಟ್ಟೇಬುಟಳಲ್ಲ ಶ್ರೀ ಚಾಮುಂಡಮ್ಮ
ಪಿರೀಪಟ್ಣದಮ್ಮನ ಹಿಡಕೊಂಡೋದ ॥ ತಂ ॥
ಪಿರೀಪಟ್ಣದಮ್ಮನ ಹಿಡಕೊಂಡಬುಟಳಲ್ಲೊ ಶ್ರೀ ಚಾಮುಂಡಮ್ಮ
ಕಣ್ಣು ಬಿಚ್ಚಿಕ ಮೊಕುವ ನೋಡೀದ ॥ ತಂ ॥

ಕೇಳಕ್ಕ ಆರುಜನ ನನ್ನ ಕೈಗ ಸಿಕಲಿಲ್ಲ. ನೀನು ಸಿಕ್ಕಾಕೊಂಡೆ. ಈವಾಗಲೀಗ ನಿನ್ನ ಕಣ್ಣ ಕಟ್ಟತೀನಿ ನೀನು ಯಾರಾರ ಹಿಡಕೊ ಅಕ್ಕಯ್ಯ. ನೀನು ಹಿಡಕೊಂಡ ಮ್ಯಾಲೆ ಇನ್ನೊಬ್ರು ಆಟ ಆಡತೀವಿ ಎಂಬದಾಗಿ ಚಂಡಿ ಚಾಮುಂಡೇಶ್ವರಿ, ಆರುಜನ ಅಕ್ಕತಂಗೇರು ಮಾತಾಡತಾವ್ರೆ. ಏನಕ್ಕ ನಮುಗಿರೊ ಎರಡ ಕಣ್ಣ ಕಟಬುಟ್ರೆ, ನಾವೇನೋ ಆಟ ಆಡಬುಡತೀವಿ. ನಮ್ಮಕ್ಕುನಗೆ ಮ್ಯೆ ಎಲ್ಲ ಕಣ್ಣು. ಯಾವಾದಾದರ ಒಂದ ಕಣ್ಣಲ್ಲಿ ನೋಡಕೊಂಡು ಬುಡತಾಳೆ. ಬಂದು ನಂ ಹಿಡಕೊಂಡಬುಡತಾಳಲ್ಲ? ಏನಗತಿ ಮಾಡಬೇಕು? ಇವಳ ಮೈ ಕೈಲಿರುವಂಥ ಕಣ್ಣನ್ನೆಲ್ಲ ಕಟಬುಡಬೇಕು ಅಂತೇಳಿ -

ಪಟ್ಟೆ ವಸತರವ ತಗದಾರೊ ಮಾರೀರು ಗುರುವೆ
ಅವಳ ಎಲ್ಲ ಕೈಯಿ ಕಾಲ ಬಿಗುದಾರೊ ॥ ತಂ ॥

ಮೈಯಿ ಕೈಗೆಲ್ಲ ಬಟ್ಟೆಬಿಗದಬುಟ್ಟಂಥ ಕಾಲದಲ್ಲಿ ಪಿರೀಪಟ್ಣದ ಮಾರಿ ಕಣ್ಣಕಾಣದಂತೆ ಭೂಮಿಗೆ ಕುಂತಕೊಂಡ. ಆ ಗಳಗೆ ಒಳಗೆ ಚಂಡಿ ಚಾಮುಂಡಮ್ಮ ಮುಳ್ಳಪಂಜರ ತಗಂಡ ಬಂದು ಪಿರೀಪಟ್ಣುದ ಮಾರಿಗೆ ಕವುಚಬುಟ್ಟು, ನಾಕ ಮೂಲಿಗೆ ನಾಕು ಗೂಟ ಹೊಡದಬುಟ್ಟು, ನೂಲನ್ಹಗ್ಗ ಕಟಬುಟ್ಟು ಕೇಳರವ್ವ, ಆರುಜನ ತಂಗೇರ ಇವತ್ತುನ ದಿವುಸದಲ್ಲಿ ಅಕ್ಕಯ್ನ ಜತೆ ಒಳಗೆ ನೀವು ಆಟಪಾಟ ಆಡಿ -

ಅಯ್ಯಾ ದಳವಾಯಿ ರಾಜನ ನಾನು ಕಟಕೊಂಡು ಅಕ್ಕಯ್ಯದೀರೆ
ಪಿರೀಪಟ್ಣದಿಕೆ ಹೋಗಿ ಬರುತೀನಿ. ॥ ತಂ ॥

ಪಿರೀಪಟ್ಣಕೆ ಹೋಯ್ತೀನಿ ಎಂಬದಾಗಿ ಚಂಡಿ ಚಾಮುಂಡೇಶ್ವರಿ ಮಂಕನ ಬೂದಿ ಮಲಯಾಳದ ಬೂದಿ ಮಡ್ಲಲ್ಲಿ ಕಟಗೊಂಡು ಆಗಲೀಗ ಗುಂಗರಾಳ ಛತ್ರಕ ಬಂದು ದಳವಾಯಿ ರಾಜನ ಮೊಕ ಕಣ್ಣೆತ್ತಿ ನೋಡಕೊಂಡು ಅಯ್ಯಾ ದಳವಾಯಿ ಕಂದಣ್ಣ, ಹೆದರಬ್ಯಾಡ ಬೆಚ್ಚಬ್ಯಾಡ, ಮುಂದ ಮುಂದ ನಾನ ಹೋಯ್ತೀನಿ, ಹಿಂದ ಹಿಂದೆ ನೀನು ಬಾಪ್ಪ ಎಂಬುದಾಗಿ -

ಅಯ್ಯಾ ಆನೆ ಗುಂಪಿಗೆ ಬೂದಿ ಉರಬಿದ ಶ್ರೀ ಚಾಮುಂಡಮ್ಮ
ಸತ್ತ ಆನೆ ಮ್ಯಾಕೆ ಏಳುತಾವೆ ॥ ತಂ ॥
ಕುದರೆಗೆಲ್ಲ ಬೂದಿ ಉರಬಿದ ಶ್ರೀ ಚಾಮುಂಡಮ್ಮ
ಕುದರೆಗಳು ಧಡನೆ ಏಳುತಾವೆ ॥ ತಂ ॥
ಒಂಟೆಗೊಳಿಗೆ ಬೂದಿ ಎರಚೀದ ಶ್ರೀಚಾಮುಂಡಮ್ಮ
ತಟಾಪಟನೆ ಮ್ಯಾಕೆ ಎದ್ದಾವೊ ॥ ತಂ ॥
ಕೊಂದಂಥ ದಂಡು ಧಾಳಿಗೆ ಮಾಯದ ಬೂದಿ ಬೇಗ ಉರಬಿದ
ಶ್ರೀಚಾಮುಂಡಮ್ಮ ದಂಡು ಧಾಳಿ ಫಳ್ನೆ ಏಳತಾವೆ ॥ ತಂ ॥

ಎಲ್ಲಾ ದಂಡುಧಾಳಿ ಮಂದಿಮಾರಬಲ ಎದ್ದಂಥ ಕಾಲದಲ್ಲಿ ಇಪ್ಪತ್ತನಾಕು ಸಾವ್ರದಂಡು ಮೇಲುಕ್ಕೆದ್ದು ಸರವಿಷ್ಟನು ಕಟಕೊಂಡು ದಳವಾಯಿ :-

ಎಡತೊರೆ ಪೇಟೇಯ ಬುಡುತಾನೆ ಕಂದ ದಳವಾಯಿ
ಪಿರಿಪಟ್ಟಣಕೆ ಬೇಗ ಬರುತಾನೆ. ॥ ತಂ ॥

ಪಿರೀಪಟ್ಟಣಕೆ ಬೇಗ ಬಂದು ಕಂದ ದಳವಾಯಿ ರಣಮಾಳದಲ್ಲಿ ಇಪ್ಪತನಾಕ ಸಾವ್ರ ದಂಡು ಧಾಳಿ ಮಂದಿ ಮಾರ್ಬಲ ಬುಟಬುಟ್ಟು, ನಾವು ಬಂದಿರುವಂಥ ವಿಚಾರ ನಂ ಭಾವುನಾದ, ವೀರ್‍ರಾಜಿ ಅರಸನಿಗೆ ಗೊತ್ತಾಗಬೇಕಲ್ಲ ಅಂತೇಳಿ -

ರಣಮಾಳದಲ್ಲಿ ದಂಡ ಕಟಕೊಂಡು ಕಂದ ದಳವಾಯಿ
ಢಾಂಢೂಂನೆ ಗುಂಡ ಹಾರಸಿದ ॥ ತಂ ॥
ಢಾಂಢೂಂನೆ ಗುಂಡ ಹಾರಸಿದ ಕಂದ ದಳವಾಯಿ
ಮದ್ದುನ ಹೊಗೆ ಊರಿಗೆ ಕವದೀತು ॥ ತಂ ॥
ಮದ್ದುನ ಹೊಗೆ ಊರಗೆ ಕವದೀತು ನನ್ನಾ ದೊರೆಯೆ
ಅವ್ರು ದಂಡುಧಾಳಿ ಎಚ್ರವಾಯುತಾರೆ ॥ ತಂ ॥

ವೀರ್‍ರಾಜಿನ ಕಡೆ ದಂಡುಧಾಳಿ ಮಂದಿಮಾರಬಲವೆಲ್ಲ ಆಗಲೀಗ ನೋಡುದ್ಯ ದಳವಾಯಿ ರಾಜನ ರಣಮ್ಯಾಳಕ್ಕೆ ಸೈನ್ಯ ಕಟಗೊಂಡು ಬಂದವನಲ್ಲ? ಈವತ್ತುನ ದಿವುಸದಲ್ಲಿ ಅವ್ನ ಮ್ಯಾಲೆ ವಿದ್ಯಕೊಗಬೇಕು ಕದನ ಕಾಳಗ ಮಾಡಬೇಕು. ಅವ್ನ ದಂಡನೆ ಕೊಲಬೇಕು ಎಂಬದಾಗಿ ಇತ್ಲಿಂದ ಗುರುದೇವಾ, ವೀರ್‍ರಾಜಿ ಅರಸನ ಕಡೆ ಸೈನ್ಯ ದಂಡಿನ ಮಾಳಕೆ ಬರುವಂಥ ಟೀಮಿನಲ್ಲಿ -

ಆನೆಹೊಟ್ಟೆಗೆ ತೊಟ್ಟಿಲ ಕಟಿಕೊಂಡು ಮೈಸೂರಿನವರು
ರಣಾದೊಳಗೆ ಜಗಳ ಮಾಡುತಾರೆ ॥ ತಂ ॥
ಕುದರೆ ಹೊಟ್ಟೆಗೆ ತೊಟ್ಟಿಲ ಕಟಿಕೊಂಡು ಮೈಸೂರಿನವರು
ಹೊಕ್ಕಿ ಹೊಕ್ಕಿ ಜಗಳ ಮಾಡುತಾರೆ ॥ ತಂ ॥
ಒಂದು ಸಾವ್ರ ಜನವ ಗುರುವೆ ಅವ್ರು ಕೊಂದರೆ ನನ್ನಾ ಗುರುವೆ
ಮೂರು ಸಾವರ ಇವರು ಕೊಲುತಾರೆ ॥ ತಂ ॥
ಎರಡು ಸಾವರ ಅವರು ಕೊಂದರೆ ಪಿರಿಪಟ್ಣದವರು
ಏಳುಸಾವರ ಇವರು ಕೊಲುತಾರೆ ॥ ತಂ ॥

ಶಿವಶಿವಾ, ಮೊದಲನೇ ಜಗಳದಲ್ಲಿ ಒಂದ ಸಾವರ ದಂಡನೆಲ್ಲ ಪಿರೀಪಟ್ಣದವ್ರು ಕೊಂದ್ರು. ಎರಡ ಸಾವ್ರ ದಂಡನೆ ಮೈಸೂರನವ್ರು ಕೊಂದ್ರು. ಎರಡನೆ ಜಗಳದಲ್ಲಿ ಏಳಸಾವ್ರ ಜನಗಳ ಮೈಸೂರ್‍ರಾಜರು ಕೊಂದಾಕದ್ರು. ಮೂರು ಸಾವ್ರ ಜನಗಳ ಪಿರೀಪಟ್ಣದವ್ರು ಕೊಂದಾಕದ್ರು.

ಇವ್ರ ಇಬ್ಬರು ಕಾಳಗ ಕಣ್ಣೆತ್ತಿ ನೋಡುಕೊಂಡ ಶ್ರೀಚಾಮುಂಡಮ್ಮ
ಕತ್ತಿ ತಗದು ಕೈಲಿ ಹಿಡುಕೊಂಡ ॥ ತಂ ॥
ಕತ್ತಿ ತಗದು ಕೈಲಿ ಹಿಡುಕೊಂಡ ಶ್ರೀಚಾಮುಂಡಮ್ಮ
ಹೊಕ್ಕಿ ಹೊಕ್ಕಿ ವಿದ್ಯ ಮಾಡೀದ. ॥ ತಂ ॥

ಆಗಲೀಗ ಗುರುದೇವ ಪಿರೀಪಟ್ಣದಲ್ಲಿರುವಂಥ ಬಸರಿಬಾಣತಿರು ಏಳಸಾವ್ರ ಜನರ ಮ್ಯಾಲೆ ದಂಡೆತ್ತಿ ಜಗಳಕ ಬರುವಾಗ

ಅಯ್ಯೋ ಬರುವ ಹೆಂಗಸಾರನೆ ನೋಡಕೊಂಡ ಶ್ರೀಚಾಮುಂಡಮ್ಮ
ಬಸರೀರ ಮ್ಯಾಲೆ ಬಾಣತೀರ ಕುಯ್ತಾಳೆ ॥ ತಂ ॥
ಬಸರೀರ ಮ್ಯಾಲೆ ಬಾಣತೀರ ಕುಯ್ತಾಳೆ ಶ್ರೀ ಚಾಮುಂಡಮ್ಮ
ಹೊಟ್ಟೆಲ್ಲಿರುವ ಕಂದನ ತಗಿತಾಳೆ ॥ ತಂ ॥
ಹೊಟ್ಟೆಲಿರುವ ಕಂದನ ತಗಿತಾಳೆ ಶ್ರೀ ಚಾಮುಂಡಮ್ಮ
ಕಂದನ ತಗದು ಕಾಲಿಗ ಮಡಗತಾಳೆ ॥ ತಂ ॥
ದಂಡುಧಾಳಿಗೆ ಮಾಯದ ಬೂದಿ ತಾಯಿ ಉರಬತಾಳೆ
ಮಂಕು ಮರಳು ಢೀಂಕು ಡಿರಳಲ್ಲೊ ॥ ತಂ ॥
ರಗತದ ಕೋಡಿ ಹಂಡೆಹೋಯ್ತಲ್ಲ ಪಿರಿಯಪಟ್ಟಣದಲ್ಲಿ
ರಗತದ ಕೋಡಿ ಹರದು ಬರುತಾದೆ ॥ ತಂ ॥

ರಗತದ ಕೋಡಿ ಹರಿದು ಬರುವಂಥ ಕಾಲದಲ್ಲಿ, ದಂಡುಧಾಳಿ ಮಂದ್ರಿ ಮಾರಬಲ ಎಲ್ಲಾ ಸತ್ತೋದ ಕಾಲದಲ್ಲಿ, ವೀರ್‍ರಾಜಿ ಅರಸನ ಕಡೆ ಇರುವಂಥ ವಲ್ಲಿಸೈಜುವ ಅಂದರೆ ಅವ್ರು ಹಿಂದೆ ಪಟ್ಟಣದಲ್ಲಿ ವಾಸಮಾಡಿಕೊಂಡು ಸಂಬಳ ತಕ್ಕೊಂಡು ಕಾಲ ಕಳಿತಿದ್ರಂತೆ. ಯಾವುದೋ ಒಂದು ಮಾತುನ ಸಲುವಾಗಿ ನಂ ಪಟ್ಟಣದಲ್ಲಿ ನೀನಿರಬ್ಯಾಡ ಹೋಗಯ್ಯ ಅಂತೇಳಿ ವೀರ್‍ರಾಜಿ ಅರಸು ಕಳುಗಬುಟಿದ್ರಂತೆ . ಅಂಥ ವಲ್ಲಿಸೈಜುವ ಕಣ್ಣೆತ್ತಿ ನೋಡಿಕೊಂಡು, ಈವತ್ತು ನಂ ಪಿರಿಪಟ್ನ ಹಾಳಾಗಬುಡತಲ್ಲ. ಏನಗತಿ ಮಾಡಬೇಕು ಅಂತೇಳಿ ಆ ವೀರ್‍ರಾಜಿ ಅರಸಿಗೆ ನಿನ್ನ ಮನೆ ಕರಿಅನ್ನ, ಕರಿಚೇಕು ತಿಂದುಕೊಂಡು ನಿನ್ನ ಮನೆ ಕಾಸು ದುಡ್ಡು ತಕ್ಕೊಂಡು ನಾನು ಬಾಳಿ ಬದುಕಿದನಲ್ಲ.

ನಿನ್ನಾ ಉಪ್ಪಿನ ರುಣಕೆ ಅನ್ನಾಯ ಮಾಡುದಿಲ್ಲ ವೀರ್‍ರಾಜಿ ಅರಸೆ
ಮೊಂಡುಗತ್ತಿ ನನಗೆ ಕೊಡಯ್ಯ ॥ ತಂ ॥
ಮೊಂಡುಗತ್ತಿ ನನಗೆ ಕೊಟ್ಟರೆ ವೀರ್‍ರಾಜಿ ಅರಸೆ
ದಂಡಿನ ಮಾಳಕೆ ಹೋಗುವೆನು ॥ ತಂ ॥

ದಂಡುನ ಮಾಳಕೆ ನಾನೋಗತೀನಿ. ಆ ದಂಡುನ ಮಾಳದಲ್ಲಿ ಮೈಸೂರನವರ ಸಗತಿ ಯುಗತಿ ನೋಡತೀನಿ. ದಂಡನಲ್ಲಿ ಜಗಳ ಮಾಡತೀನಿ ಅನುವಂಥ ಕಾಲದಲ್ಲಿ -

ಅಯ್ಯ ಕತ್ತಿ ತಗದು ಕೈಲಿ ಕೊಟ್ನಲ್ಲ ವೀರ್‍ರಾಜಿ ಅರಸು
ಕತ್ತೀಯ ಬೇಗಾನೆ ಹಿಡುಕೊಂಡು ॥ ತಂ ॥

ಕತ್ತಿ ಕೈಲಿಡಕೊಂಡು ವಲ್ಲಿಸೈಜುವ ವೀರ್‍ರಾಜಿ ಅರಸನ ಪಾದುಕ ಶರಣ ಮಾಡಕೊಂಡು ಆ ದಂಡುನ ಮಾಳಕೆ ಬರುವಂಥ ಕಾಲದಲ್ಲಿ

ಕಾಚಕಟ್ಟಿ ಮೀಸೆ ತಿರೀಕೊಂಡ ವಲ್ಲಿಸೈಜುವ
ಕತ್ತಿ ತಗದು ಕೈಲಿ ಹಿಡುಕೊಂಡ ॥ ತಂ ॥

ಕತ್ತಿ ಕೈಲಿಡಕೊಂಡು ರಣಮಾಳುಕ ಬಂದು ಮೈಸೂರ ದೊರೆಗಳೊಂದಿಗೆ ಏನಂಥ ಮಾತಾಡತಾವ್ನೆ -

ಅಯ್ಯ ಧೀರಾಧಿ ಧೀರರೆ ಬನುರಯ್ಯ ಮೈಸೂರಿನವರೆ
ನನ್ನ ಮ್ಯಾಲೆ ಕದನ ಮಾಡುರಯ್ಯ ॥ ತಂ ॥
ನೀವು ಶೂರಾಧಿ ಶೂರರೆ ಬನುರಯ್ಯ ಮೈಸೂರಿನವರೆ

ನನ್ನ ಮ್ಯಾಲೆ ವಿದ್ಯ ಮಾಡುರಯ್ಯ ॥ ತಂ ॥

ನನ್ನ ಮ್ಯಾಲೆ ವಿದ್ಯ ಮಾಡಯ್ಯ ಎನುವಂಥ ಕಾಲದಲ್ಲಿ ಆಗಲೀಗ ಮೈಸೂರವ್ರು ಎಲ್ರುನು ಕೊಂದಾಕಿವಿ, ಇವನೊಬ್ಬ ಏನ ಮಾಡಬಲ್ಲ? ಎಂಬದಾಗಿ ಸುತ್ತಮುತ್ತ ಮುತ್ತಿಗೆ ಹಾಕೊಂಡಂಥ ಕಾಲದಲ್ಲಿ -

ಒಂದು ಸಲ ಕತ್ತಿ ಹೊಡದರೆ ವಲ್ಲಿಸೈಜುವ
ನೂರು ತಲೆ ಭೂಮಿಗೆ ಬಿಳುತಾವೆ ॥ ತಂ ॥
ಹಿಂಕಣ್ಣ ಮುಂಕಣ್ಣ ಹೊಡದರೆ ವಲ್ಲಿಸೈಜುವ
ಮೈಸೂರವರು ಗೋಳುಗೋಳಲ್ಲೊ ॥ ತಂ ॥
ಅವ್ನ ದಂಡ ಹೊಕ್ಕಿ ಜಗಳ ಮಾಡಿದ್ರೆ ವಲ್ಲಿಸೈಜುವ
ದಂಡೆಲ್ಲ ಜಿಲ್ ಅನುವರು ॥ ತಂ ॥

ದಂಡೆಲ್ಲ ಜಿಲ್ ಅಂತೇಳಿ ದಂಡುನ ಮಾಳದಲ್ಲೆಲ್ಲ ಚಲ್ಲಾಪಿಲ್ಲಿಯಾಗಿ ಓಡಬುಟ್ಟ ಕಾಲದಲ್ಲಿ ಚಂಡಿ ಚಾಮುಂಡೇಶ್ವರಿ, ಶಿವ ಶಿವಾ ಒಬ್ಬ ಬಂದು ಮೂರ ಸಾವ್ರ ದಂಡ ಕೊಂದಾಕ ಬುಟ್ನಲ್ಲ? ಈಗ ಈ ವಲ್ಲಿಸೈಜುವನ ನಾನೇ ಕೊಂದಾಕಬೇಕಲ್ಲ ಎಂಬದಾಗಿ -

ಕತ್ತಿ ತಗದು ಕೈಯಲ್ಲಿಡುಕೊಂಡ ಶ್ರೀ ಚಾಮುಂಡಮ್ಮ
ಅವಳು ಮರಮಾಸದಲ್ಲಿ ಸಾಗಿಬರುತಾಳೆ ॥ ತಂ ॥
ಕತ್ತಿ ತಗದು ಕೈಯಲ್ಲಿ ಹಿಡುಕೊಂಡ ತಾಯಿ ಚಾಮುಂಡಿ
ಅವ್ನ ಬಲದ ಭುಜವ ಬೇಗ ಕಡುದಾಳೋ ॥ ತಂ ॥

ಕತ್ತಿ ಎತ್ತಿ ವಲ್ಲಿಸೈಜುವನಗೆ ಹೊಡದ ಕಾಲದಲ್ಲಿ ಚಂಡಿ ಚಾಮುಂಡೇಶ್ವರಿ ಹೊಡದಂಥ ಏಟು ಆ ವಲ್ಲಿಸೈಜುವನ ಭುಜಕ ಬೀಳಲಿಲ್ಲ. ಅವ್ನ ಮೊಳಸಂದಿಗೆ ಬಿದ್ದು ಮೊಳಸಂದು ಕತ್ತರಿಸಿ ಭೂಮಿಗೆ ಬಿದ್ದೋಯ್ತು, ಆ ಮೊಂಡಗೈಗೆ ಕತ್ತಿ ಕಟಕೊಂಡು ವಲ್ಲಿಸೈಜುವ ಗುರುದೇವಾ -

ಮೊಂಡಗೈಗೆ ಕತ್ತಿ ಕಟಕೊಂಡು ನನ್ನಾ ಗುರುವೆ
ರಣಮಾಳದಲ್ಲಿ ಜಗಳುಕ ನಿಂತನಲ್ಲ ॥ ತಂ ॥
ಮೊಂಡಗೈನ ಒಳಗೆ ಗುರುದೇವ ಮೈಸೂರನವರ
ಒಂದ ಸಾವರ ದಂಡ ಕೊಂದನಲ್ಲೋ ॥ ತಂ ॥

ಮೊಂಡಗೈಗೆ ಕತ್ತಿ ಕಟಕೊಂಡು ವಲ್ಲಿಸೈಜುವ ಒಂದ ಸಾವರ ದಂಡನೆ ಕೊಂದಾಕಿದಂಥ ಕಾಲದಲ್ಲಿ ಗುರುದೇವಾ, ಹಂಗೂ ಅವನೀಗ ಒಂದ ಸಾವ್ರ ದಂಡ ಕೊಂದಬುಟ್ನಲ್ಲ ಅಂತೇಳಿ-

ಅಯ್ಯಾ ಹಿಂಕಣ್ಣ ಮುಂಕಣ್ಣ ಹೊಡಕಂಡು ಶ್ರೀಚಾಮುಂಡಮ್ಮ
ಗುಡಗುಡನೆ ಸಾಗಿ ಬಂದಳಲ್ಲ ॥ ತಂ ॥

ಮಾರಮಾಯಸದಲ್ಲಿ ಚಾಮುಂಡಮ್ಮ ವಲ್ಲಿಸೈಜುವನ ಮುಂದಕ ಬುಟಕೊಂಡು ಹಿಂದೆ ಬಂದು ಕತ್ತಿ ಎತ್ತಿ ಅವನ ಕತ್ತಿಗೆ ಹೊಡುದ್ರು -

ಚಾಮುಂಡಮ್ಮನ ಕತ್ತಿ ಏಟು ಅವುನ ಕತ್ತಿಗೆ ಬಿಳುತಲ್ಲ
ವಲ್ಲಿಸೈಜುವನ ಕತ್ತ ಕತ್ತರಿಸಿ ಬೂಮಿಗ ಬೀಳುತಲ್ಲೊ ॥ ತಂ ॥

ಕತ್ತ ಕತ್ತರಿಸಿ ಬೂಮಿಗ ಬಿದ್ದಂಥ ಕಾಲದಲ್ಲಿ ಮೈಸೂರ್ರಾಜರ ದಂಡೆಲ್ಲ ಈವಾಗಲೀಗ ನಮ್ಮ

ದಂಡು ಗೆದ್ದಂತೆ ಆಯ್ತು ಅಂತೇಳಿ ದಂಡುಧಾಳಿ ಮಂದಿಮಾರಬಲವೆಲ್ಲ ಸಂತೋಸಪಟ್ಕೊಂಡು -

ಎಲ್ಲ ದೊರೆಗಳ ನಾವು ಕೊಂದವಲ್ಲೊ ಅಯ್ಯೊ ಶಿವನೆ
ನಮ್ಮ ವೈರಿ ಇನ್ನೂ ಬರನಿಲ್ಲ ॥ ತಂ ॥

ಎಲ್ಲ ದಂಡು ಕೊಂದೊ. ನಮ್ಮ ವೈರಿಯಾಗಿರುವಂಥ ವೀರ್‍ರಾಜಿ ಅರಸನವರು ಬರನಿಲ್ಲ. ಎಂಬದಾಗಿ ದಂಡುಧಾಳಿ ಮಂದಿಮಾರಬಲವೆಲ್ಲ ಕಾದು ಕೂತಿರುವ ಟೇಂನಲ್ಲಿ ಪಟ್ಟದ ಗೌರಮ್ಮ, ಎಳೆ ಲಿಂಗ್ರಾಜಿ, ಪಟ್ಟದ ಮಾಗಾಯಿ ಮಲಗಿರುವಂಥ ವೀರ್‍ರಾಜಿ ಅರಸುನ ಬಳಿಗೆ ಬಂದು -

ಅಯ್ಯ ಏಳಿ ಏಳಿ ನನ್ನ ದೊರೆರಾಯ ನನ್ನ ಸ್ವಾಮಿ
ದಂಡುಹೋಯ್ತು ದಾಳಿಹೋಯ್ತಲ್ಲೋ ॥ ತಂ ॥
ನಿನಗೆ ಎಂಥ ಸುಕನಿದ್ರೆ ಬರುತಯ್ಯ ನನ್ನಾಳೊ ದೊರೆಯೆ
ರಣಮಾಳದಲ್ಲಿ ವಿದ್ಯ ನಡಿವುದು ॥ ತಂ ॥

ರಣಮಾಳದಲ್ಲಿ ವಿದ್ಯ ನಡೀತಾದೆ, ಕಾಳಗ ನಡೀತಾದೆ, ಮೇಲಕ್ಕೆದ್ದೇಳಿ ಎಂಬದಾಗಿ ಏಳಿಸುವಂಥ ಕಾಲದಲ್ಲಿ ಎಳೆ ಲಿಂಗ್ರಾಜಮ್ಮ ತನ್ನ ಗಂಡನ ಕಾಲದಸಿಲಿ ನಿಂತಕೊಂಡು ಮತ್ತೇನ ಮಾತಾಡತಾಳೆ ಅಂದ್ರೆ -

ನಾರಿಯಾಗಿ ಊರಿಗೆ ನುಗಬುಟ್ಟು ನಮ್ಮಣ್ಣಯ್ನವರು
ಮಾರಿಯಾಗಿ ಜನವ ಕೊಂದರಲ್ಲೋ ॥ ತಂ ॥

ನಮ್ಮಣ್ಣ ದಳವಾಯಿ ಮಾರಾಜ ನಾರಿಯಾಗಿ ಊರಿಗೆ ನುಗ್ಗಿ ಮಾರಿಯಾಗಿ ನಂ ಪಟ್ಣ ಸಮ್ಮಾರ ಮಾಡಬುಟ್ನಲ್ಲ? ಅಂತೇಳಿ ಗಂಡನ ತಲದಸಿಲಿ ನಿಂತಕೊಂಡು ದುಕ್ಕ ಮಾಡುವಾಗ ವೀರ್‍ರಾಜಿ ಅರಸನವರು ದಡಬಡನೆ ಮೇಲಕ್ಕೆದ್ದು ಮೂರಜನ ಮಡದೀರ ಮೊಕವ ಕಣ್ಣೆತ್ತಿ ನೋಡಿಕೊಂಡು, ಕೇಳಲ ಮಡದಿ ಲಿಂಗ್ರಾಜಿ, ಎಳೆ ಗೌರಮ್ಮ, ಈವತ್ತುನಾ ದಿವುಸದಲ್ಲಿ ನಿಮ್ಮಣ್ಣ ದಳವಾಯಿ, ನನ್ನ ಮಂದಿಮಾರಬಲ ದಂಡುಧಾಳಿ ಸಕಲಿಷ್ಟನು ಕೊಂದಾಕಬುಟ್ನ ಹೆಣ್ಣೆ -

ಹೆಣ್ಣೆ ತತಾರಲ ಹೆಣ್ಣೆ ಚಂದ್ರಾಯದ ಕತ್ತೀಯ
ನನ್ನ ಮಡದೀರೆ ನಾನು
ದಂಡುನ ಮಾಳಕೆ ಹೋಗಿ ಬರುವೆನು ॥ ತಂ ॥

ದಂಡುನ ಮಾಳಕ್ಕೋಯ್ತೀನಿ ಎಂಬದಾಗಿ ಮೂರಜನ ಮಡದೀರ್ನು ಚಂದ್ರಾಯುದ ಕೇಳುವಂಥ ಕಾಲದಲ್ಲಿ ಪಟ್ಟದ ಮಾಗಾಯಿ, ಎಳೆಗೌರಮ್ಮ ಏನ ಮಾತಾಡತಾರೇ ಅಂದ್ರೆ-

ನಮ್ಮ ಕೊಂದು ನೀನು ಹೋಗಯ್ಯ ನನ್ನಾಳೊ ದೊರೆಯೆ
ಆಮ್ಯಾಲೆ ನೀನು ಕದನ ಮಾಡಯ್ಯ ॥ ತಂ ॥

ನಂ ಕೊಂದಾಕಬುಟ್ಟು ನೀನೋಗಿ ಕದನ ಮಾಡು ಅಂದಾಗ, ನಿಮ್ಮ ಯಾತಕ್ಕೆ ಕೊಲ್ಲಬೇಕು ಮಡದೀರೆ? ಎನ್ನಲಾಗಿ ಕೇಳಿ ಗುರುದೇವ, ನಮ್ಮ ಬುಟಬುಟ್ಟು ರಣಮಾಳಕ್ಕೆ ಜಗಳಕ ಹೊಂಟೋಗಬುಟ್ಟು ಅಲ್ಲಿ ನೀವು ಮರಣವಾದ ಮೇಲೆ -

ಅಯ್ಯ ಮೈಸೂರಿನವರು ಸಾಗಿಬರುತಾರೆ ನಮ್ಮರಮನೆಗೆ
ನಮ್ಮ ಮೈಯ ಅವರು ಮುಟುತಾರೆ ॥ ತಂ ॥

ನಿಂ ಪ್ರಾಣ ಹೋದಮ್ಯಾಲೆ ನಿಂ ವೈರಿಗಳು ಅರಮನೆಗೆ ನುಗ್ಗಬಿಟ್ಟು ನಮ್ಮ ಮೈ ಮುಟ್ಟತಾರೆ. ಕೈ ಹಿಡೀತಾರೆ ಸ್ವಾಮಿ. ನಿಂ ಪ್ರಾಣ ಹೋಗುದಕ ಮೊದಲೇ ನಂ ಪ್ರಾಣ ಹೋಗುಬುಡಲಿ ಸ್ವಾಮಿ. ನಂ ತಗದಬುಟ್ಟು ಆಮ್ಯಾಲ ನೀವು ಜಗಳಕ ಹೋಗಿ ಸ್ವಾಮಿ-

ಕಿಡಕಿಡಿ ಕ್ವಾಪ ತಾಳಿಕೊಂಡ ವೀರ್‍ರಾಜಿ ಅರಸು
ಕೆಂಜರಗಣ್ಣ ಕಿರಳು ಮರಳಲ್ಲ ॥ ತಂ ॥
ಒಬ್ಬಳ ಮ್ಯಾಲೆ ಒಬ್ಬುಳ ಕೆಡಿಕೊಂಡ ವೀರ್‍ರಾಜಿ ಅರಸು
ಕರಕರಕರನೆ ಶಿರಸ ಕೂದಾನೊ ॥ ತಂ ॥

ಮೂರುಜನ ಮಡದೀರ ಕಡದಾಕಬುಟ್ಟು ವೀರ್‍ರಾಜಿ ಅರಸುನವರು, ಆ ರಗತದ ಕತ್ತಿ ಕೈಲಿಡಕೊಂಡು-

ದಂಡಿನ ಮಾಳಕೆ ಸಾಗಿ ಬರುತಾನೆ ವೀರ್‍ರಾಜಿ ಅರಸು
ದಂಡೆಲ್ಲ ಕಣ್ಣೆತ್ತಿ ನೋಡಿದ ॥ ತಂ ॥
ಬಂದಂಥ ಬಾವಯ್ನ ಕಂಡಕೊಂಡ ದಳವಾಯಿ ಕಂದಣ್ಣ
ದಂಡ ಬುಟ್ಟು ದೂರ ಬಂದನಲ್ಲ ॥ ತಂ ॥

ದಂಡ ಬುಟುಬುಟ್ಟು ದೂರವಾಗಿ ಬಂದು ದಳವಾಯಿ ಕಂದಣ್ಣ ನಿಂತಕೊಂಡಂಥ ಕಾಲದಲ್ಲಿ, ನಿಂತಿರುವಂಥ ದಳವಾಯಿ ರಾಜನ ಬಳಿಗ ಬಂದು ವೀರ್‍ರಾಜಿ ಅರಸುನವರು-

ನನ್ನಾ ದಂಡ ಕೊಂದ ಧೀರ ಬಾರಯ್ಯ ಮೈಸೂರು ದೊರಿಯೆ
ನಾನ್ನಾ ಮ್ಯಾಲೆ ಕದನ ಮಾಡಯ್ಯ ॥ ತಂ ॥

ಭಾವನಾದ ವೀರ್‍ರಾಜಿ ಅರಸುನವರೆ, ಇವತ್ತುನ ದಿವುಸದಲ್ಲಿ ನಿಮ್ಮ ವೈರಿಯಾಗಿ ನಾನು ದಂಡುನ ಮಾಳಕ ಬಂದಿವ್ನಿ ಬಾವಯ್ಯ. ಮೊದಲನೆ ಪೆಟ್ಟು ನಿಂದು ಎರಡನೆ ಪೆಟ್ಟು ನಂದು ಎಂದನು.

ಆಗಲೀಗ ದಳವಾಯಿ ಕಂದಣ್ಣ ದಡಬಡನೆ ಮೇಲುಕ್ಕೆದ್ದು ವೀರ್‍ರಾಜಿ ಅರಸುನ ಮೊಕವ ಕಣ್ಣೆತ್ತಿ ನೋಡಿಕೊಂಡು ಕೇಳಯ್ಯ ಭಾವನಾದ ವೀರ್‍ರಾಜಿ ಅರಸೆ -

ಅಪ್ಪಾ ನಿನ್ನ ಪೆಟ್ಟ ನಾನ ಗೆದ್ದಿವ್ನಿ ನನ್ನ ಭಾವಯ್ಯ
ನನ್ನ ಪೆಟ್ಟ ನೀನು ಗೆದಕೊಯ್ಯ ॥ ತಂ ॥

ಈವಾಗಲೀಗ ನನ್ನ ಪೆಟ್ಟ ನೀನು ಗೆದಕೋಃ ವೀರ್‍ರಾಜಿ ಅರಸೆ, ಎನುವಂಥ ಕಾಲದಲ್ಲಿ, ಆಗಲಿ ದಳವಾಯಿ ದೊರೆಯೆ, ನನ್ನ ಪೆಟ್ಟ ನೀನು ಗೆದಕೊಂಡೆ. ಈವಾಗಲೀಗ ನೀನೊಂದ ಪೆಟ್ಟ ಹೊಡಿ ಎಂಬದಾಗಿ ವೀರ್‍ರಾಜಿ ಅರಸುವರು ಬೂಮೀಲಿ ತಲೆಬಾಗಿ ಕೂತಕೊಂಡಂಥ ಕಾಲದಲ್ಲಿ, ದಳವಾಯಿ ಕಂದಣ್ಣ ಚಿನ್ನದ ಚಂದ್ರಾಯುದ ತಗದು ಬಲಗೈಲಿಡಕೊಂಡು ಮುಂಗೈ ಮುಷ್ಟಿಯಿಂದ ವೀರ್‍ರಾಜಿ ಅರಸುನ ಕತ್ತಿನ ಮ್ಯಾಲೆ ಕತ್ತಿ ಹೊಡಿದಂಥ ಕಾಲದಲ್ಲಿ-

ಅಯ್ಯ ಕತ್ತಿ ಬಂದು ಕತ್ತುಗ ಬೀಳುವಾಗ ವೀರ್‍ರಾಜಿ ಅರಸೆ
ಕಾಯೋ ದೇವ್ರು ಮೊದಲೆ ಇಲುವಲ್ಲ ॥ ತಂ ॥
ಕಾಯೊ ದೇವ್ರು ಮೊದಲೆ ಇಲುವಲ್ಲ ವೀರ್‍ರಾಜಿ ಅರಸೆ
ಕತ್ತ ಕತ್ತರಿಸಿ ಬೂಮಿಗೆ ಬಿಳುತಲ್ಲ ॥ ತಂ ॥

ಕತ್ತಕತ್ತರಿಸಿ ಭೂಮಿಗೆ ಬಿದ್ದಂಥ ಕಾಲದಲ್ಲಿ, ಮೈಸೂರ ದೊರೆ ದಳವಾಯಿ ಕಂದಣ್ಣ ಉಳಿದಂಥ ದಂಡು ಧಾಳಿ ಎಲ್ಲಾ-

ಪಿರೀಪಟ್ನ ನಮುದು ಅಂತೇಳಿ ಆಗಲೀಗ
ಬೀದಿ ಬೀದಿಲಿ ಬೋರ್ಡ ಬರದಾರೊ ॥ ತಂ ॥
ಪಿರೀಪಟ್ನ ಮೈಸೂರ್ರಾಜರದಾಯ್ತು ಎಂಬದಾಗಿ ಬೀದಿಬೀದಿಲ್ಲಿ ಬೋರ್ಡ ಬರದಬುಟ್ಟು-
ಅಯ್ಯಾ ದಂಡುಧಾಳಿ ಸಕಲ ಬಳಗವ ಕಟಿಕೊಂಡು ದಳವಾಯಿ ಕಂದಣ್ಣ
ಪಿರಿಯಪಟ್ನವ ಬೇಗ ಬುಡುವನು. ॥ ತಂ ॥

ಪಿರೀಪಟ್ನ ಬೇಗಬುಟ್ಟು ಮೈಸೂರ್ರಾಜ್ಯಕೆ ಬೇಗದಲ್ಲಿ ಬಂದಂಥ ಕಾಲದಲ್ಲಿ, ಆ ಗಳಿಗೆ ಒಳಗೆ ಚಂಡಿ ಚಾಮುಂಡೇಶ್ವರಿ ಬೆಟ್ಟುಕ ಬಂದು ಮುಳ್ಳುಪಂಜರದಲ್ಲಿ ಸೆರೆಹಾಕಿರುವಂಥ ಅಕ್ಕಯ್ಯ ಪಿರಿಯಪಟ್ನದ ಮಾರೀನ ಸೆರೆ ತೆಗೆದಬುಟ್ಟು, ಅವುಗಳಿಗೆ ಕಟ್ಟಿರುವಂಥ ಕಣ್ಣ ಬಿಚ್ಚಾಕಬುಟ್ಟು ಅಕ್ಕಯ್ಯ ಈವಾಗ ನೀನೋಗಿ ನಿನ್ನ ಪಿರೀಪಟ್ನ ಕಣ್ಣೆತ್ತಿ ನೋಡಕೊ ಹೋಗವ್ವ ಎನುವಂಥ ಕಾಲದಲ್ಲಿ, ಆಗಲೀಗ ಪಿರೀಪಟ್ಟದಮ್ಮ ಪಿರೀಪಟ್ನಕ ಬಂದು -
ಅವಳು ರಗತದ ಕೋಡಿ ಕಣ್ಣೆತ್ತಿ ನೋಡುತಾಳೆ ಪಿರೀಪಟ್ನುದಮ್ಮ
ಬಿದ್ದಿರು ಹೆಣವ ಕಣ್ಣಾರೆ ಕಾಣುತಾಳೆ ॥ ತಂ ॥
ಬಿದ್ದಿರುವಂಥ ದಂಡುಧಾಳಿ ಮಂದಿಮಾರಬಲ ಎಲ್ಲಾನು ಕಣ್ಣೆತ್ತಿ ನೋಡಕೊಂಡು -
ಅವಳು ಅಂಗಯ್ಯ ಮಂಗಯ್ಯ ಕಡಿಕೊಂಡ ಪಿರೀಪಟ್ನುದಮ್ಮ
ಸಾಗಿ ಮೈಸೂರಗೆ ಬಂದಳಲ್ಲ. ॥ ತಂ ॥

ಏನವ್ಮ ಒಡಹುಟ್ಟು ಬೆಟ್ಟದ ಚಾಮುಂಡೇಶ್ವರಿ? ಈವುತ್ನ ದಿವಸದಲ್ಲಿ ನನ್ನ ಮರಮಾಯ್ಸಿ ನನ್ನ ಪಟ್ನ ಕೊಂದಬುಟ್ಟಲ್ಲ ಎಂಬದಾಗಿ ಪಿರೀಪಟ್ನದಮ್ಮ ಕೇಳುವಾಗ, ಅಕ್ಕಯ್ಯ ಹಿರೀಪಟ್ನದಮ್ಮ ಹೇಳುವೆನು ಕೇಳಕ್ಕ -
ಇವರ ತಂದೆ ತಲೆಯ ನಿನಗೆ ಕೊಡಸಿದ್ದಿ ಅಕ್ಕಯ್ನನವರೆ
ನಾನೊಂದು ತಲೆಯ ತಂದೇ ತಂದನಲ್ಲೆ ॥ ತಂ ॥
ಇವರ ತಂದೆ ತಲೆ ನಿನಗ ಕೊಡಸಿದ್ದಿ. ದಳವಾಯಿ ರಾಜನ ತಲೆ ಅಲ್ಲಿ ಹೋಗಬಾರದು. ಅಪ್ಪ ಮಗನ ತಲೆ ಒಂದು ಪಟ್ನದಲ್ಲಿ ಹೋದ್ರೆ ನಮ್ಮಕ್ಕನಿಗೆ ಕರ್ಮ ಬಂದಬುಟ್ಟದೋ, ನನಗೆ ಕರ್ಮ ಬಂದಬುಟ್ಟದೋ ಅಂತೇಳಿ ಪಿರೀಪಟ್ನದಿಂದ ನಾನೊಂದ ತಲೆ ತಕ್ಕೊಂಡಬಂದಿವ್ನಿ. ಅಕ್ಕಯ್ಯ ಇಲ್ಲಿರುವಂಥ ದಳವಾಯಿ ರಾಜನ ಕರಕೊಂಡ ಬಂದು ನನ್ನ ತೇರಿಗೆ ಮುಂದಾಗಿ-
ಅವ್ವಾ ನಿನ್ನ ಜಾತ್ರೆ ಮುಂದಾಗಿ ನಡೆಸತೀನಿ ಅಕ್ಕಯ್ಯನವರೆ
ಹಿಂದೆ ಜಾತ್ರೆ ನನಗೆ ಆಗಲವ್ವ ॥ ತಂ ॥
ಅವ್ವಾ ಮೊದಲು ಪೂಜೆ ನಿನಗೆ ಆಗಲವ್ವಾ ನನ್ನ ಅಕ್ಕಯ್ಯ
ಹಿಂದುಲ ಪೂಜೆ ನನಗೆ ಆಗಲವ್ವ ॥ ತಂ ॥
ನಾನು ಮಾಡಿದ ತಪ್ಪು ಮನ್ನಿಸು ಎನುತೇಳಿ ಶ್ರೀ ಚಾಮುಂಡಮ್ಮ
ಅಕ್ಕನ ಪಾದಕೆ ಶರಣ ಮಾಡೀದ ॥ ತಂ ॥

ಈಗಲೀಗ ಮೈಸೂರ್ರಾಜ್ಯದಲ್ಲಿ ರತಕ್ಕಂಥ ದಳವಾಯಿ ರಾಜನ ಕೈಲಿ ಅಕ್ಕಯ್ಯ ನಿನಗು ತೇರುತೆಪ್ಪ ಮಾಡಸತೀನಿ. ಮೊದಲ ಪೂಜೆ ನಿನಗಾಗಲಿ. ಎರಡನೆ ಪೂಜೆ ನನಗಾಗಲಿ. ನಾನು

ಮಾಡಿದ ತಪ್ಪು ಮನ್ನಿಸು ಎಂಬುದಾಗಿ ಅಕ್ಕನ ಪಾದಕ ಶರಣ ಮಾಡಿದಂಥ ಕಾಲದಲ್ಲಿ -
ತಂಗಮ್ಮ ಆಡಿದ ಮಾತ ಕೇಳಿಕೊಂಡು ಪಿರೀಪಟ್ಣದಮ್ಮ
ಮಂಕಾಗಿ ಬೂಮಿಲಿ ಕುಂತಕೊಂಡ. ।। ತಂ ।।

ಆಗಲೀಗ ದಳವಾಯಿ ರಾಜ ಚಾಮುಂಡೇಶ್ವರಿ ಬಳಿಗೆ ಬಂದು ಕೇಳವ್ವ ಚಾಮುಂಡೇಶ್ವರಿ ಮುಳ್ಳು ಪಂಜರದಲ್ಲಿ ಸೆರೆಹಾಕಿರುವಂಥ ಕಂದ ವೀರಣ್ಣ ನನ್ನ ಪಟ್ಟಣದಲವನೆ, ಎನುವಂತ ಕಾಲದಲ್ಲಿ ಆ ಚಂಡಿ ಚಾಮುಂಡೇಶ್ವರಿ ಅವನ ವಂಶ ಇನ್ನು ಉಳಿಕೊಂಡದಲ್ಲ ಎಂಬದಾಗಿ ಮುಳ್ಳುಪಂಜರದಲ್ಲಿ ಸೆರೆಹಾಕಿರುವಂಥ ಕಂದ ವೀರಣ್ಣುನಿಗೆ ಮಾಯದಬೂದಿ ಉರಬಿದ. ಅಗಲೀಗ ಕಂದ ವೀರಣ್ಣ ಮುಳ್ಳುಪಂಜರದಲ್ಲಿ, ಮೈಸೂರ್ರಾಜ್ಯದಲ್ಲಿ ಮಾಯಮಾಡಬುಟ್ಟು ಪಿರೀಪಟ್ಣದಲ್ಲಿ ಏನಂತ ವರ ಕೊಡತಾಳೆ ಅಂದ್ರೆ, ಕೇಳಪ್ಪ ನನಕಂದ ಮುಳ್ಳು ಮಂಜರದಲ್ಲಿರುವಂಥ ಕಂದ ವೀರಣ್ಣ -
ನೀನು ಪಿರೀಪಟ್ಣದ ಒಳುಗೆ ನನಕಂದ ವೀರಣ್ಣ
ಈರಣಸ್ವಾಮಿ ಎಂದು ನೀನು ಒಡದು ಮೂಡಯ್ಯ ।। ತಂ ।।
ವೀರಣ್ಣಂತ ಒಡದು ಮೂಡಪ್ಪ ನನಕಂದ
ನಿನಗೊಂದ ಪೂಜೆ ನಾನು ಕೊಡಿಸುವೆನು ।। ತಂ ।।
ಆಗಲೀಗ ಈ ರೀತಿ ಶಾಪ ಕೊಟಬುಟ್ಟು ಮಾಯದಬೂದಿ ಉರಬಿದಂತ ಕಾಲದಲ್ಲಿ ಮುಳ್ಳು ಪಂಜರದಲ್ಲಿದ್ದ ಮಗ ಮಾಯವಾಗಬುಟ್ಟು, ಪಿರೀಪಟ್ಣುದಲ್ಹೋಗಿ ಕಂದ ವೀರಣ್ಣ ಅಂತ ಕಲ್ಲಾಗಿ ಒಡೆದು ಮೂಡಿದಂತ ಕಾಲದಲ್ಲಿ -
ಅಯ್ಯ ಹುಟ್ಟಿದ ಮಗನ ಕಲ್ಲು ಮಾಡಬುಟ್ಟು ಶ್ರೀ ಚಾಮುಂಡಮ್ಮ
ತನ್ನ ಬೆಟ್ಟುಕ ತಾನೆ ಬಂದಳಲ್ಲೊ. ।। ತಂ ।।

*****

# ೩. ಮಡಿಕೇರಿ ಲಿಂಗರಾಜ

ತಂದನ್ನ ತಾನಂದೇನಾನಾ ॥ ಪಲ್ಲವಿ॥
ಅಯ್ಯಾ ಏರುತಾನೆ ಲಿಂಗರಾಜ ನೀಲಾದ ಕುದುರೇದು ॥ ತಂ ॥
ರಾಜಾ ಕುದ್ರೆ ಮ್ಯಾಲೆ ಕೂತುಗಂಡೂ ಕುದ್ರೆ ದೌಡಾಬುಡತಾನೇ. ॥ ತಂ ॥
ಅಯ್ಯಾ ಮಡಿಕೇರಿ ಲಿಂಗುರಾಜಾ ಬಳ್ಯಾರಿಗೋಗುತಾನೆ. ॥ ತಂ ॥
ಯವ್ವಾ ತಂಗೇಯ ಅರಮನೆಗೆ ಹೋಗುತಾನೆ ಲಿಂಗುರಾಜಾ. ॥ ತಂ ॥
ತಂಗೆ ಬಂದಂತ ಅಣ್ಣನಾ ಬಾಚಿ ಕೊಳ್ಳಕಟಿಗಂಡೂ ॥ ತಂ ॥
ಯವ್ವೇ ಬಂದೇನೋ ನಮ್ಮಣ್ಣ ಭೋಗುವೆಲ್ಲಾ ಚಂದೇನೋ ? ॥ ತಂ ॥
ನಿನ್ನ ಅರುಮನೆ ಭೋಗ ಚೆಂದುವೇನೋ ನಮ್ಮಣ್ಣ ॥ ತಂ ॥
ಅಣ್ಣ ಅತ್ತಿಗೆ ಮಲ್ಲಮ್ಮುನೋರ ಭೋಗುವೆಲ್ಲ ಚೆಂದುವೇನೋ ? ॥ ತಂ ॥
ತಂಗೆ ನನುಭೋಗ ಚೆಂದಾ ನಿನುಭೋಗ ಚೆಂದುವೇನೇ? ॥ ತಂ ॥
ಅವ್ವಾ ಬಾರೇ ನನ್ನಾ ತಂಗೇ ತವರೀಗೆ ಹೋಗಾನಾ ॥ ತಂ ॥
ತಂಗೆ ತೌರಾಸೇ ನೀನು ತೊರಿದಲ್ಲೇ ನನ್ನ ತಂಗೀ ॥ ತಂ ॥
ಅವ್ವಾ ಹುಟ್ಟಿದಾ ಮನೆಗೆ ಹೊರುಗಾಗಿ ಹುಟ್ಟಿದಲ್ಲೇ ॥ ತಂ ॥
ನೀನು ಸೇರಿದಾ ಮನಗೆ ತಂಗೆ ಸೆರಿಯಾಗಿ ಸೇರಿದಲ್ಲಾ ॥ ತಂ ॥
ನಿನ್ನ ಅತ್ತೆ ಮಾವುರು ತಂಗೆ ಹಗೆಯಾಗಿ ಸೇರಿದಲ್ಲಾ ॥ ತಂ ॥

ಅವ್ವಾ ಬಾರೇ ನನ್ನಾ ತಂಗೇ ತವಿರೀಗೇ ಹೋಗಾನಾ ॥ ತಂ ॥
ಅವ್ವಾ ತೌರಾಸೆ ನೀನು ತೊರಿದ್ಯಲ್ಲೆ ನನ್ನ ತಂಗೇ ॥ ತಂ ॥
ಅಣ್ಣಾ ತೌರಾಸೆ ನನಿಗೆ ನನಿಗ್ಯಾಕೋ ಅಣ್ಣಾ? ॥ ತಂ ॥
ಅಣ್ಣಾ ಮದುವೇ ಮಾಡೀ ನನ್ನ ಇಲ್ಲಿಗೆ ಹನ್ನೆರಡೊರುಸಾ ॥ ತಂ ॥
ನನ್ನ ಕರೀನಿಲ್ಲ ಕಳುಸ್ಲಿಲ್ಲ ಬಂದು ನನ್ನ ನೋಡಲಿಲ್ಲಾ ॥ ತಂ ॥
ನನ್ನಾ ತಾಯಿ ಸತ್ತಾಗ್ಹೇಳನಿಲ್ಲ ತಂದೆ ಸತ್ತಾಗ ಕರೀನಿಲ್ಲಾ ॥ ತಂ ॥
ಅಣ್ಣಾ ತಾಯಿ ಸತ್ತಾಗ್ಹೇಳನಿಲ್ಲ ತಂದೆ ಸತ್ತಾಗ ಕರೀನಿಲ್ಲಾ ॥ ತಂ ॥
ನನ್ನಾ ತಾಯಿ ತಂದೆ ಸತ್ತುಮೇಲೆ ತೌರಾಸೇ ನನಿಗ್ಯಾಕೆ ? ॥ ತಂ ॥
ನನ್ನ ಹೆತ್ತವ್ವ ಇದ್ದುರೇ ನೆತ್ತೀಗೆಣ್ಣೇ ಒತ್ತೀ ॥ ತಂ ॥
ಹೆತ್ತವ್ವ ನೆತ್ತಿಗೆಣ್ಣೆಯ ಒತ್ತಿ ನಡುದಾರಿಗೆ ಕಳಿಸೋಳೂ ॥ ತಂ ॥
ನನ್ನ ಹಡುದವ್ವ ಇದ್ದುರೆ ಹಾಲೂ ಬಾನಾನಿಕ್ಕೀ ॥ ತಂ ॥
ನನ್ನ ಹಡುದವ್ವ ಹಾಲುಬಾನಾ ಇಕ್ಕಿ ನಡುದಾರಿಗೆ ಕಳುಸೋಳೂ ॥ ತಂ ॥

★ ಪ್ರತಿಸಾಲಿನ ಕೊನೆಯಲ್ಲಿ ಪಲ್ಲವಿಯನ್ನು ಹಾಡುತ್ತಾರೆ

ಅಣ್ಣಾ ತಾಯಿ ಇರೋಗಂಟಾ ತೌರಾಸೆ ನನಿಗಲ್ಲೋ ॥ ತಂ ॥
ಅಣ್ಣಾ ತಂದೇ ಇರೋಗಂಟಾ ಬಳುಗೆಲ್ಲಾ ಆಸ್ಯಲ್ಲೋ ॥ ತಂ ॥
ಅಣ್ಣಾ ತಾಯಿದ್ರೆ ತೌರಾಸೆ ತಂದಿದ್ರೆ ಬಳಗ್ದಾಸೇ ॥ ತಂ ॥
ನನ್ನಾ ತಾಯಿ ತಂದೆ ಸತ್ತುಮೇಲೆ ತೌರಾಸಿನ್ಯಾತಕೋ ॥ ತಂ ॥
ನನ್ನಾ ತಾಯಿಲ್ಲದ ತವರೀಗೆ ಬರುವೋದು ತರವಲ್ಲಾ ॥ ತಂ ॥
ಅಣ್ಣಾ ತಾಯಿಲ್ಲದ ತವರೀಗೆ ಬರುವೋದು ತರವಲ್ಲಾ ॥ ತಂ ॥
ಅಣ್ಣಾ ತೌರಾಸೆ ನನಿಗೇ ನನಿಗ್ಯಾಕೋ ಅಣ್ಣಾ? ॥ ತಂ ॥

ಯವ್ವೇ ಯಾಕಮ್ಮಾ ನನು ತಂಗೆ ಗೋಳುದುಕ್ಕ ಮಾಡುತೀಯಾ ? ॥ ತಂ ॥
ತಂಗೇ ನಾನು ಇರೋಗಂಟಾ ನಿನಗೇನು ಭಯವಮ್ಮಾ? ॥ ತಂ ॥
ಅವ್ವಾ ಬಾರೇ ನನ್ನ ತಂಗೇ ತವರೀಗೆ ಹೋಗಾನಾ ॥ ತಂ ॥
ನೀನು ಮದಿವ್ಯಾಗಿ ಬಂದುಮೇಲೆ ಮರುಗಮಲ್ಲಿಗೆಗಿಡ ಒಣಗಿ ತರಗಾದುವಲ್ಲೆ॥ತಂ॥
ತಂಗೇ ಸುರುಗಿ ಸಾವಂತಿಗೇ ಸೂಡಿ ಬಾಡೋದುವಲ್ಲೇ ॥ ತಂ ॥
ಅವ್ವಾ ಬಾರೇ ನನ್ನಾ ತಂಗೇ ತವರಿಗೆ ಹೋಗಾನಾ ॥ ತಂ ॥
ತಂಗೇ ಭಾವಾ ಬಸಪ್ಪನೋರು ಎಲ್ಲಿಗೆ ಹೋಗ್ಯವರವ್ವಾ ? ॥ ತಂ ॥
ಅಣ್ಣಾ ಅವರೂ ಯಾಲಕ್ಕಿದೊರೆಯಾಗಿ ಮಲನಾಡಿಗೋಗ್ಯವರೇ ॥ ತಂ ॥
ಅವ್ರು ಆಳಿಗೆಲ್ಲಾ ದೊರಿಯಾಗೀ ಮಲೆನಾಡ್ನಲ್ಲವರಣ್ಣಾ ॥ ತಂ ॥
ನನ್ನಾ ದೊರಿಯಿರದ ಮರೆಯಲ್ಲಿ ಕರಿಯಾಕೆ ಬಂದ್ಯಲ್ಲೋ ॥ ತಂ ॥
ನನ್ನಾ ದೊರಿಯಿಲ್ಲದ ಮರೆಯಲ್ಲಿ ನಾನೆಂಗೆ ಬರುಲಣ್ಣಾ ?॥ ತಂ ॥
ನನ್ನಾ ಪುರುಷಿಲ್ಲದ ಮರೆಯಲ್ಲಿ ನಾನೆಂಗೆ ಬರುಲಣ್ಣಾ ? ॥ ತಂ ॥

ಅವಳು ಹರಿವಾಣ ಬೆಳಗೀ ಹಾಲುಬಾನಾ ಇಕ್ಕುತಾಳೇ ॥ ತಂ ॥
ಅಣ್ಣಾ ತಂಗೆ ಮಲ್ಲಿ ಹಾಲುಬಾನಾ ಉಣ್ಣುತಾ ಏನು ಜಾನಾ ಮಾಡುತಾನೇ ॥ ತಂ ॥
ನನ್ನ ಮಡಿಕೇರಿ ಒಳಿಗೆ ನಾನರುಮನೆ ಕಟ್ಟುವಾಗಾ ॥ ತಂ ॥
ನಾನು ಕಟ್ಟಡ ನಿಲ್ಲಿಸಿದ್ರೆ ಮುರಿದು ಬೀಳೋದಲ್ಲೋ ॥ ತಂ ॥
ಅರಮನೆ ಎಷ್ಟ ಕಟ್ಟಿಸಿದರೂ ನಿಲ್ಲೋದಿಲ್ಲವಲ್ಲೋ ॥ ತಂ ॥

ಯಾತಕ್ಕಾಗಿ ಅರಮನೆ ಮುರಿದು ಬೀಳ್ತಾದೆ ಅಂತೇಳಿ ಹೋಗಿ ದೋಸಿಗರಲ್ಲೀ ನಾನು ಪಂಚಾಂಗ ಕೇಳೋವೊತ್ತಿಗೇ, ದೋಸಿಗರಲ್ಲಿ ಏನು ಹುಟ್ಟದೆ ಅಂದರೇ, ಬಡಗಲಾಗೆ ಬಾಲಚಿಕ್ಕಿ ಮೂಡಿ ಮೂಡಲಾಗಿ ಜ್ಯೋತಿ ಮೂಡೀ ಮೂಡು ಕೆಂಪು ಏರೋ ಹೊತ್ತಿನಲ್ಲೀ

ನನ್ನ ತಂಗೆ ಗಂಡನ ಮನೆ ಬಲಿಯ ಕೇಳೈತಲ್ಲೋ ॥ ತಂ ॥
ನನ್ನ ಭಾವನಾ ಬಸಪ್ಪನೋರಾ ಬಲಿಯ ಕೇಳೈತಲ್ಲೋ ॥ ತಂ ॥

ನಿನ್ನ ಭಾವನ ತಂದು ಅರಮನೆಗೆ ಬಲಿಕಡುದರೆ ಸರೀ. ನಿನ್ನ ಭಾವನ ಅರಮನೆಗೆ ಬಲಿಕಡೀದೇವಾದರೇ ನಿನ್ನ ಮನ್ತಾನ ಉಳಿಯಾದಿಲ್ಲಾ, ಸಂತಾನ ಉಳಿಯಾದಿಲ್ಲಾಂತ

ದೋಸಿಗ್ರು ಹೇಳಿ ಹೋಗ್ಯವ್ರೆ. ನನ್ನಾ ಭಾವನಾ ತಂದರ ಮನೆಗೆ ಬಲಿ ಕಡುದರೆ ಸರೀ. ನನ್ನ ಭಾವನ ಅರಮನೆಗೆ ಬಲಿ ಕಡೀದೇವಾದರೇ ನನ್ನ ಮನ್ತಾನ ಉಳಿಯಾದಿಲ್ಲಾ, ಸಂತಾನ ಮುಂದೆ ಬೆಳೆಯೋದಿಲ್ಲವಲ್ಲೋ ದಮ್ಮಯ್ಯಾ. ನನ್ನಾ ಭಾವ ಯಾಲಕ್ಕಿನಾಡಿಗೇ ಆಳಿಗೆಲ್ಲಾ ದೊರೆಯಾಗಿ ಮಲನಾಡಿಗೆ ಹೋಗ್ಯವನೇ ಭಾವಿಲ್ಲದ ಮರೆಯಲ್ಲೀ-

ಭಾವಿಲ್ಲದ ಮರೆಯಲ್ಲೀ ತಂಗೇಯ ಕರಕಂಡು ತೌರಿಗೆ ನಾನ್ಹೋದಾರೇ ॥ ತಂ ॥
ನನ್ನಾ ಭಾವಿಲ್ಲದ ಮರೆಯಲ್ಲೀ ತಂಗೇಯ ಕರಕಂಡು ತೌರಿಗೆ ನಾನೋದಾರೇ॥ ತಂ ॥
ಮುಂದೆ ನನ ತಂಗೆ ಆಸೀಗೆ ನಮ ಭಾವಬರತಾನೇ ॥ ತಂ ॥
ಯವ್ವೆ ನನ ತಂಗೆ ಆಸೀಗೆ ನನು ಭಾವಾ ಬರುತಾನೇ ॥ ತಂ ॥
ಆಗ ಮೋಸುದಲ್ಲಿ ಅವನಾ ಅರಮನೆಗೆ ಕಡೀಬೋದೂ ॥ ತಂ ॥

ಭಾವಿಲ್ಲದ ಮರೆಯಲ್ಲೀ ತಂಗೇ ಕರಕವ್ಹೋಗೀ ನನ್ನಾ ತೌರಿನಲ್ಲಿರಿಸಿಕಂಡರೇ ನನ್ನಾ ತಂಗೆ ಆಸೆಗೆ ನನ್ನ ಭಾವ ನನ್ನ ಮನೆಗೆ ಬತ್ತಾನೇ. ಆಗಾ ಮೋಸುದಲ್ಲಿ ಅವನ್ನ ಅರಮನೆಗೆ ಬಲೀ ಕಡೀಬೌದಂತ, ತಂಗೇ ಮನೆ ಒಳಗೆ ಹಾಲುಬಾನ ಉಣ್ಣುತಾ ಜ್ಯಾನ ಮಾಡುತವನಲ್ಲೋ ಶಿವನೇ

ಅಣ್ಣನುಗೆ ಬೆಳ್ಳಿಯ ತಟ್ಟೆಲ್ಲಿ ಇವಳ್ಳೇವ ತರುತಾಳೇ ॥ ತಂ ॥
ತಂಗೆ ಅಣ್ಣಂಗಿಳ್ಳೇವು ಇಡುವಾಗಾ ತಂಗೆ ಕೈಯ ಹಿಡುಕಂಡೂ ॥ ತಂ ॥
ಅಣ್ಣ ತಂಗೆ ಕೈಯ ಹಿಡಿಕಂಡು ಮುಂದೇ ಕೂರಿಸಿಗಂಡಾ ॥ ತಂ ॥
ಅವ್ವಾ ಬಾರೇ ನನ್ನಾ ತಂಗೇ ಧರುಮಾದ ನಿಂಗವ್ವಾ ॥ ತಂ ॥
ತಂಗೇ ಭಾವಾ ಬಂದಾಗಾ ಬರುತಾನೆ ಬಾರವ್ವಾ ॥ ತಂ ॥
ನಿನ್ನ ಹತ್ತು ಸುತ್ತಿನ ಅರುಮನೆಗೆ ಮುತ್ತಿನ ಬೀಗಾಹಾಕೊ ॥ ತಂ ॥
ನಿನ್ನ ಆರು ಸುತ್ತಿನರುಮನೆಗೆ ಅರಗಿನ ಬೀಗಾನಾಕೇ ॥ ತಂ ॥
ತಂಗೆ ಬಣ್ಣುದ್ವಾಲೆ ಬರೆದೂ ಬಾಗಿಲಿಗೆ ಕಟ್ಟವ್ವಾ ॥ ತಂ ॥

ಏನಂತ ಬಣ್ಯದ್ವಾಲೆ ಬರೆದೂ ಬಾಗಿಲಿಗೆ ಕಟ್ಟು ಅಂದರೂ ತಂಗೇಗೇ ? ನಮ್ಮಣ್ಣ ಬಂದು ನನ್ನ ತೌರೂಮನೆಗೆ ಕರಕಂಡು ಹೋಗವನೆ ಗಂಡಯ್ಯಾ. ನಾನು ತೌರು ಮಲ್ಲಿದ್ದೀನೀ. ನೀವು ಮಲ್ನಾಡ್ನಿಂದ ಮನೆಗೆ ಬಂದಾಗಾ ನನ್ನ ತೌರಿಗೆ ನೀವು ಬಲ್ಲೀ ಅಂತಾ.

ಅಕ್ಷಾರಾ ಬರೆದೂ ಉತ್ತರಾಸಿಗೆ ಕಟ್ಟು ತಂಗೇ ॥ ತಂ ॥
ಅವ್ವಾ ಭಾವ ಬಂದಾಗಾ ಬಾಗಿಲಲ್ಲಿ ವಾಲೇ ಓದಿ ಬರುತಾನೇ ಬಾರವ್ವಾ ॥ ತಂ ॥
ಭಾವಬಂದಾಗಾ ಬಾಗಿಲಲ್ಲಿ ವಾಲೇ ಓದೀಬರುತಾನೇ ಬಾರವ್ವಾ ॥ ತಂ ॥
ಅಣ್ಣ ಮಟ್ಟಮಟ ಮಂಗಳ್ವಾರಾ ಕರೆಯಾಕೆ ಬಂದಲ್ಲೋ ॥ ತಂ ॥
ಅಣ್ಣಾ ಮಂಗಳ್ವಾರ ನಾನೂ ಮನಿಯ ಬಿಡೋದಿಲ್ಲಾ ॥ ತಂ ॥
ಅಣ್ಣಾ ಸುಕ್ಕುರುವಾರ ನಾನೂ ಪ್ಯೆಣಮಾಡೋದಿಲ್ಲಾ ॥ ತಂ ॥
ಅಣ್ಣಾ ಸನಿವಾರಾ ನಾನೂ ಬರುತೀನಿ ನಡಿಯಣ್ಣಾ ॥ ತಂ ॥

ಅಣ್ಣಾ ನಿನ್ನಾಸೆ ನನ್ನಾಸೆ ಸನಿವಾರಾ ಬರುತೀನೀ ॥ ತಂ ॥
ನನಿಗೇ ಇರೋನೊಬ್ಬ ಮಗುನಾಣೇ ಸನಿವಾರ ಬರುತೀನೀ ॥ ತಂ ॥
ತಂಗೆ ಮಗನಾಣೆ ಇಟ್ಟುಮೇಲೆ ಆಣೆಗೆ ನೀ ತಪ್ಪುಬೇಡಾ ॥ ತಂ ॥
ನಾನೂ ಹೋಗಿಬರಾತೀನಿ ಸನಿವಾರ ಬಾರವ್ವೋ ॥ ತಂ ॥
ಆಗ ಏರುತಾನೆ ಲಿಂಗುರಾಜಾ ನೀಲಾದ ಕುದುರೇಯಾ ॥ ತಂ ॥
ಅಯ್ಯಾ ಮಡಿಕೇರಿ ಲಿಂಗುರಾಜಾ ಮಡಿಕೇರಿಗೋಯ್ತಾನೇ ॥ ತಂ ॥
ಇವುಳಿಗೆ ವಾರವಾರ ಶನಿವಾರಾ ತುಂಬೆಬಂತಲ್ಲೋ ॥ ತಂ ॥
ಇವ್ವ ಏಳು ವರುಸದ ಮಗನ ತೊಡಿಮ್ಯಾಲೆ ಕರುಕಂಡೂ ॥ ತಂ ॥
ಯವ್ವೆ ಬಾರೋ ನನ್ನಾ ಮಗುನೆ ಧೂಪಾರ್ತಿ ಕಂದಯ್ಯಾ ॥ ತಂ ॥
ಮಗನೆ ಮಲೆನಾಡಿಗೋದ ತಂದೇ ಮನಿಗೆ ಬಂದಿಲ್ಲವಲ್ಲೋ ॥ ತಂ ॥

ನನ್ನ ಮಗನೆ ಧೂಪಾರ್ತಿ ಕಂದಯ್ಯಾ, ಮಲ್ನಾಡಿಗೋದ ನಿಮ್ಮ ತಂದೇ ನನ್ನಾ ಮನಿಗೆ ಬಂದಿಲ್ಲಕಂದಯ್ಯಾ. ನಮ್ಮಣ್ಣಾ ಬಂದು ನನ್ನ ತೌರುಮನೆಗೆ ಕರೆದು ಹೋಗ್ಯವರೇ. ಮಗನಾಣೆ ಬತ್ತೀನಿ ಅಂತ ಆಣೆಯಿಟ್ಟು ಕಳಿಸಿದ್ದೀನೀ.

ಏಳೂ ನನ್ನಾಕಂದಾ, ತವರೀಗೆ ಹೋಗಾಣಾ ॥ ತಂ ॥
ಯವ್ವೇ ಏಳೋ ನನ್ನಾ ಮಗನೇ ತವಿರೀಗೆ ಹೋಗಾನಾ ॥ ತಂ ॥
ಅಮ್ಮಾ ತೌರುಮನೆಗೆ ಹೋಗಾಕೆ ಸುಂಗಾರನಾಗುತಾಳೇ ॥ ತಂ ॥
ಅಮ್ಮಾ ಬಂಗಾರ ಧರಿಸೀ ಸುಂಗಾರನಾಗುತಾಳೇ ॥ ತಂ ॥
ಯವ್ವೇ ಬಂಗಾರ ಧರಿಸೀ ಸುಂಗಾರನಾಗುತಾಳೇ ॥ ತಂ ॥
ಇವ್ವ ಹತ್ತು ಸುತ್ತಿನರುಮನೆಗೆ ಮುತ್ತಿನ ಬೀಗಾನಾಕೀ ॥ ತಂ ॥
ಇವ್ವ ಆರು ಸುತ್ತಿನರುಮನೆಗೆ ಅರಗಿನ ಬೀಗಾನಾಕೀ ॥ ತಂ ॥
ಅಮ್ಮ ಬಣ್ಣದ್ವಾಲೆ ಬರದೂ ಬಾಗಿಲಿಗೆ ಕಟ್ಟುತಾಳೇ. ॥ ತಂ ॥

ಏನಂತ ಬಣ್ಣದ್ವಾಲೆ ಬರೆದು ಬಾಗಿಲಿಗೆ ಕಟ್ಟುತ್ತಾಳೇ? ನನ್ನ ಗಂಡಾ ಬಸಪ್ಪ ದೊರಿಯೇ ನಮ್ಮಣ್ಣ ಬಂದೂ ನನ್ನಾ ತೌರೂಮನೆಗೆ ಕರಕಡೋಗ್ಯವನೆ. ಗಂಡಯ್ಯಾ ನಾನು ತೌರುಮಲ್ಲಿದ್ದೀನೀ. ಮನಿಗೆ ಬಂದಾಗ ನನ್ನಾ ತವಿರಿಗೇ ನೀವು ಬನ್ನೀ ಅಂತಾ.

ಅಕ್ಸಾರಾ ಬರೀತಾಳೇ ಉತ್ತರಾಸಿಗೆ ಕಟ್ಟುತಾಳೇ ॥ ತಂ ॥
ಅವ್ವ ಮನೆಬುಟ್ಟು ಬರುವಾಗಾ ಅವಶಕುನ ಕಂಡಳಲ್ಲೋ ॥ ತಂ ॥
ಶಿವ್ವೆ ಮನೆಬುಟ್ಟು ಬರುವಾಗಾ ಅವಶಕುನ ಕಂಡುಳಲ್ಲೋ ॥ ತಂ ॥

ಇವ್ವ ಸತ್ಯ ಇವುಳ ಧರ್ಮ ಏನು ಅವಶಕುನ ತೋರುತ್ತಾದೇ? ಹೋಗಬ್ಯಾಡಾ ನಿಂಗಮ್ಮಾ ನಿಮ್ಮಣ್ಣಾ ಬಂದು ನಿನ್ನಾ ಮುಂಡೆಮಾಡಾಕೆ ಕರ್ದುಹೋಗ್ಯವನೇ. ಮುಂಡೇಮಾಡಿ ಮೋಸ

ಮಾಡೂತ್ತಾನೇ. ಮನೆ ಹೊಸಿಲದಾಟಿ ಹೊರಕ್ಕೆ ಹೋಗಬ್ಯಾಡಂತ

ಉತ್ತರಾಸ ಹಣಿಗೊಡದೂ ತಡದೂ ನಿಲ್ಲಿಸೈತಲ್ಲೋ ॥ ತಂ ॥
ಅಯ್ಯೊ ಉತ್ತರಾಸ ಹಣಿಗೊಡದೂ ತಡದೂ ನಿಲ್ಲಿಸೈತಲ್ಲೋ ॥ ತಂ ॥
ಅಲ್ಲೀ ಕಣ್ಣೀರ ಬುಡುತಾಳೇ ಏನು ಜ್ಯಾನ ಮಾಡುತಾಳೇ ॥ ತಂ ॥
ನನ್ನ ತೌರಿಗೆ ನಾನೋಗದಿಕೆ ಇಲ್ಲೊಂದು ಅವಸಕುನಾಯ್ತೋ ॥ ತಂ ॥
ನನ್ನ ತೌರಿಗೆ ನಾನೋಗಾಕೆ ಅವಸಕುನಾದರೇನೊ ? ॥ ತಂ ॥

ನನ್ನ ತೌರಿಗೆ ನಾನೋಗದಿಕೆ ನನಿಗೆ ಅವಸಕುನಾದರೇನೂ? ನನಿಗೆ ಯಾವ ಕಷ್ಟ ಬಂದರೂ ನಮ್ಮಣ್ಣವನೇ.

ನನಗೆ ಯಾವಕಷ್ಟ ಬಂದರೂ ನಮ್ಮಣ್ಣ ಅವನಲ್ಲೋ ॥ ತಂ ॥
ಶಿವ್ನೆ ನಮ್ಮಣ್ಣ ಅವನೆ ನನ್ನ ಕಾಪಾಡುತಾನೇ ॥ ತಂ ॥
ತಂಗೆ ಅಣ್ಣನ ನೆನುಕಂಡು ಸಕುನ ಹಿಂದಕುಮಾಡೀ ॥ ತಂ ॥
ಅವ್ವ ಮುಂದಕೆ ಮೂರುಮ್ಯೆಲಿ ಹೋಗುತಾಳೇ ನಿಂಗವ್ವಾ ॥ ತಂ ॥
ಅಮ್ಮಾ ನಡುದಾರಿಲ್ಲೋಗುವಾಗಾ ಆಲ್ಲೊಂದ ಅವಸಕುನಾಯ್ತೂ ॥ ತಂ ॥

ನಡುದಾರಿಯಲ್ಲೇನು ಅವಸಕುನಾಗುತ್ತಾದೇ? ಇವ್ಳ ಸತ್ಯ ಅಲ್ಲೇನು ಅವಸಕುನ ತೋರುತ್ತಾದೇ? ಹೋಗಬ್ಯಾಡಮ್ಮಾ ನಿಮ್ಮಣ್ಣ ನಿನ್ನ ಮುಂಡೆಮಾಡೀ ಮೋಸಾಮಾಡಕ್ಕೆ ಕರ್ದು ಹೋಗ್ತವ್ನೆ. ಮುಂಡೇಮಾಡಿ ಮೋಸ ಮಾಡುತ್ತಾನೇ. ಅಣ್ಣನ ಮನೆ ಹೊಸಿಲು ದಾಟಿ ಒಳಕ್ಕೆ ಹೋಗಬೇಡಾಂತ.

ಹೋಗೋನದಿಯ ಒಳಗೇ ಸೂತುಕಾದಳಲ್ಲೋ ॥ ತಂ ॥
ಅಮ್ಮಾ ನಡುದಾರಿಲ್ಲೋಗುವಾಗಾ ನೆರಿಗೆ ಮಾಸೀದವಲ್ಲೋ ॥ ತಂ ॥
ನೆರಿಗೆ ಮಾಸೀ ಹೊರಗೆ ಆಗ್ಯವಳಲ್ಲೋ ॥ ತಂ ॥
ಅಲ್ಲಿ ಕಣ್ಣೀರ ಬಡುತಾಳೇ ಏನು ಜ್ಯಾನ ಮಾಡುತಾಳೇ ॥ ತಂ ॥
ನನ್ನ ತೌರಿಗೆ ನಾನೋಗಾಕೆ ಇಲ್ಲೊಂದವಸಕುನಾಯ್ತೋ ॥ ತಂ ॥
ನನ್ನ ತೌರಿಗೆ ನಾನೋಗದಿಕೆ ಅವಸಕುನ ಆದುರು ಏನೋ ॥ ತಂ ॥
ನನಿಗೆ ಯಾವ ಕಷ್ಟ ಬಂದರೂ ನಮ್ಮಣ್ಣ ಅವನಲ್ಲೋ ॥ ತಂ ॥

ನನ್ನ ತೌರಿಗೆ ನಾನೋಗದಿಕೆ ನನಗೆ ಅವಸಕುನ ಆದರೇನೂ? ಯಾವಕಷ್ಟ ಬಂದರೂ ನನಗೆ ನಮ್ಮಣ್ಣವನಲ್ಲಾ ಶಿವನೇ -

ನಮ್ಮಣ್ಣ ಅವನೇ ನನ್ನ ಕಾಪಾಡುತಾನೇ ॥ ತಂ ॥
ಅಮ್ಮಾ ಅಣ್ಣಾನ ನೆನುಕೊಂಡು ಸಕುನ ಹಿಂದಕುಮಾಡಿ ॥ ತಂ ॥
ತನ್ನ ತೌರಿಗೆ ಹೋದೋಳು ಹೊರಗೇ ಕೂತವಳಲ್ಲೋ. ॥ ತಂ ॥

ಒಳಗೆ ಅತ್ತಿಗೆ ಮಲ್ಲಮ್ಮ ಮಾತುನಾಡುತಾಳೇ ॥ ತಂ ॥
ಯವ್ವ ಬಂದ್ದೇನೆ ಅತ್ತಿಗಮ್ಮ ಭೋಗುವೆಲ್ಲ ಚೆಂದವೇನೇ ? ॥ ತಂ ॥
ಅತ್ತಿಗಮ್ಮ ಅರಮನೆ ಭೋಗ ಚೆಂದುವೇ ಅತ್ತಿಗಮ್ಮಾ ? ॥ ತಂ ॥
ಅತ್ತಿಗಮ್ಮ ನನ್ನು ಭೋಗ ಚಂದ ನಿನ್ನು ಬೋಗ ಚಂದವವ್ವಾ? ॥ ತಂ ॥

ಮಾತಾಡ್ಸಿ ಎದ್ದು ಕಾಲಿಗೆ ನೀರು ಕೊಡಕ್ಕೆ ಬಂದಾಗ, ಅತ್ತಿಗೆ ಮಲ್ಲಮ್ಮನವರೇ ಬರೀ ಕಾಲು ತೊಳೆದು ಒಳಕ್ಕೆ ಬರೋವಂಗಿಲ್ಲಾ. ನಾನು ನಡುದಾರಿಲ್ಲಿ ಬರೋವಾಗ ನೆರಿಗೆಮಾಸಿ ಹೊರಗಾಗಿ ಬಂದಿದ್ದೀನೀ. ನಾನು ನೀರು ಮೀದು ಒಳಕ್ಕೆ ಬರಬೇಕು ಅತ್ತಿಗೇ ಮಲ್ಲಮ್ಮಾ-

ನಾನೂ ನೀರಾ ಮೀಯಾಬೇಕೂ ನೀರಾ ಕಾಸಮ್ಮಾ ॥ ತಂ ॥
ಈಗ ವಾದಾಳು ನಿಂಗಮ್ಮಾ ಹೊರಗೇ ಕೂತವಳಲ್ಲೋ ॥ ತಂ ॥
ಒಳಿಗೆ ಅತ್ತಿಗೆ ಮಲ್ಲಮ್ಮನೋರು ನೀರಾ ಕಾಸೂತಾರೇ ॥ ತಂ ॥

ಎಲ್ಲೋ ಹೋಗಿದ್ದ ಅಣ್ಣ ನಿಂಗರಾಜ ಮನಿಗೆ ಬಂದ. ತಂಗಿ ಬಂದು ಬಾಗಿಲಲ್ಲಿ ಕೂತವಳೇ-

ಅಣ್ಣಾ ತಂಗೆ ಮೊಕವ ನೋಡಿ ಹುಸಿನಗೆ ನೆಗುತಾನೇ ॥ ತಂ ॥
ಅವ್ವಾ ಬಂದೇನೆ ನನು ತಂಗೇ ಭೋಗುವೆಲ್ಲ ಚೆಂದವೇನೇ ? ॥ ತಂ ॥
ತಂಗೆ ಅರುಮನೆ ಭೋಗ ಚೆಂದುವೇನೆ ನನ್ನ ತಂಗೇ ? ॥ ತಂ ॥
ಅಣ್ಣಾ ನನುಭೋಗ ಚಂದಾ ನಿನುಭೋಗ ಚೆಂದುವೇನೋ ? ॥ ತಂ ॥
ತಂಗೇ ಭಾವಾ ಬಸಪ್ಪನೋರು ಬಂದರೇನೇ ನನು ತಂಗೇ ॥ ತಂ ॥
ಅಣ್ಣಾ ಮಲೆನಾಡಿಗೋದೋರು ಮನಿಗೆ ಬಂದಿಲ್ಲುವಲ್ಲೊ ॥ ತಂ ॥

ಮಲ್ನಾಡಿಗೋದೋರು ಮನೆಗೆ ಬಂದಿಲ್ಲ ಅಣ್ಣಾಯ್ಯಾ. ನಮ್ಮಣ್ಣ ಬಂದು ನನ್ನ ತೌರುಮನೆಗೆ ಕರ್ಕಂಡು ಹೋಗವ್ನೆ ಗಂಡಯ್ಯಾ. ನಾನೂ ತೌರುಮಲ್ಲಿದ್ದೀನಿ. ಮನಿಗೇ ಬಂದಾಗಾ ನೀವೂ ನನ್ನ ತೌರಿಗೇ ಬಲ್ಲೀ ಅಂತಾ ಬಣ್ಣುದ್ ವಾಲೆ ಬರ್ದು ಬಾಗಿಲಿಗೆ ಕಟ್ಟಿಬಂದಿದ್ದೀನಿ ಅಣ್ಣಯ್ಯಾ. ಅವ್ರು ಮಲ್ನಾಡಿನಿಂದ ಮನೆಗೆ ಬಂದಾಗಾ -

ಬಾಗಿಲಲ್ಲಿ ವಾಲೆಯ ಓದಿ ಬರತಾರೇ ತಡಕೋಳೋ ॥ ತಂ ॥
ಮನಿಗೇ ಬಂದಾಗಾ ಬಾಗಿಲಲ್ವಾಲೇ ಓದೀ ಬರತಾರೇ ತಡಕೋಳೋ. ॥ ತಂ ॥
ಆಗ ಹೆಡತೀ ಮಲ್ಲಮ್ಮಾ ಗಂಡಗೂಟ ಇಕ್ಕುತಾಳೇ ॥ ತಂ ॥
ಅವ್ವಾ ಬಾರೇ ನನ್ನಾ ತಂಗಿ ಒಂದಿಗೂಟ ಮಾಡಾನಾ ॥ ತಂ ॥
ನಾವು ಒಂದಿಗೆ ಊಟವ ಮಾಡಿ ಒಂದಿಗಿಳ್ಳೇವು ಮೇಲ್ಲಾಣಾ ॥ ತಂ ॥
ನಾವು ಒಂದು ತಾಯಿ ಮಕ್ಕಳಾಗಿ ಒಂದಾಗಿ ಇರುವಾನಾ ॥ ತಂ ॥
ಅಣ್ಣಾ ಒಂದಿಗೂಟ ಮಾಡಾಕೆ ಹೊರಗೆ ಆಗಿವಿನಲ್ಲೋ ? ॥ ತಂ ॥
ಅಣ್ಣಾ ನೆರಿಗೆ ಮಾಸಿವಿನಿ ಹೊರಗೆ ಆಗಿದ್ದಿನಣ್ಣಾ ॥ ತಂ ॥

ನೆರಿಗೆ ಮಾಸಿ ಹೊರಗೆ ಆಗಿದ್ದೀನಿ ಅಂದರೆ ತಂಗಿ, ನೆರಿಗೆ ಮಾಸಿರೋ ಸೆರಗು ಬ್ಯಾರೆ ಕೂತಾದೇ -

ಈ ಬಾಯಿಗೂ ಕೈಗೂ ಭೇದವಿಲ್ಲ ಬಾರವ್ವಾ ॥ ತಂ ॥
ಅಣ್ಣಾ ನಾನು ನೆರಿಗೆ ಮಾಸಿದು ಮ್ಯಾಲೆ ನಿನ್ನ ಸರಿಸಮ ಕೂರುಬಹುದೇ ? ॥ ತಂ ॥
ನಾನೂ ಹೊರಗೇನಾನಾದುಮ್ಯಾಲೆ ಒಂದಿಗೂಟ ಮಾಡೋದಿಲ್ಲಾ॥ ತಂ ॥

ನೀನು ನನ್ನ ಒಂದಿಗೂಟ ಮಾಡ್ದಿದ್ರೂ ನನಗೆ ಚಿಂತಿಲ್ಲಾ ತಂಗೇ. ನನಗೆ ಯಾವುದೋ ಒಂದು ಚಿಂತೆ ಹಿಡಿದಾದೇ. ಏನು ಅಣ್ಣಯ್ಯಾ ನಿನ್ನ ಚಿಂತೇ?

ನಿನಗೆ ಗಂಡನ ಮನೆ ಆಸ್ಯವ್ವಾ ತೌರುಮನೆ ಆಸ್ಯವ್ವಾ ॥ ತಂ ॥
ನೀನು ಗಂಡನಾಸೆ ಮಾಡುತೀಯೇ ತೌರಾಸೆ ಮಾಡುತೀಯೇ ? ॥ ತಂ ॥
ನಿನಿಗೆ ಯಾವಾಸೆ ನನಿಗೆ ಹೇಳು ಹೇಳೇ ನನ್ನ ತಂಗೀ ॥ ತಂ ॥

ಅಣ್ಣಯ್ಯ ಅಣ್ಣಯ್ಯಾ ಹೆಣ್ಣು ಮಕ್ಕಳು ತೌರುಮನೆಗೆ ಬಂದರೇ ಒಂದಿಗುಟ್ಟಿದ ಅಣ್ಣದೀರೂ ಗಂಡನಾಸೆ ಮಾಡುತ್ತೀಯಾ ತೌರಾಸೆ ಮಾಡುತ್ತೀಯಾ ಅಂತ ಎಲ್ಲೂ ಕೇಳೋದಿಲ್ಲಾ. ನಾನು ಬರೋದಾರಿಲ್ಲಿ ಅವಸಕುನಾಗಿರೋದಿಕ್ಕೂ ಇಲ್ಲಿ ನೀನು ಕೇಳೋದಿಕ್ಕು ನನ್ನಾ ಮನಸ್ಸು ಬೆಚ್ಚಿ ಬೆದರತಾದೇ ಅಣ್ಣಯ್ಯ-

ಇದು ಏಕೋ ನಮ್ಮಣ್ಣಾ ಭಿನ್ನುದ ಮಾತಾಡತೀಯಾ ॥ ತಂ ॥
ಯಾಕಪ್ಪಾ ನಮ್ಮಣ್ಣಾ ಭಿನ್ನದ ಮಾತಾಡತೀಯಾ? ॥ ತಂ ॥
ಇಂಗೆ ಭಿನ್ನದ ಮಾತಾಡುಬ್ಯಾಡ ಬಿಡಿಸೇಳೋನಮ್ಮಣ್ಣಾ ? ॥ ತಂ ॥
ತಂಗೆ ಒಡದು ಹೇಳಬೇಕಾದ್ರೆ ಬಾಸೆಕೊಡು ನನಗೆ ॥ ತಂ ॥
ನಿನಗೆ ಒಡದು ಹೇಳಬೇಕಾದ್ರೆ ಬಾಸೆಕೊಡೊ ತಂಗೇ. ॥ ತಂ ॥
ಅಣ್ಣ ನೀನೂ ನಾನೂವೆ ಅಣ್ಣ ಒಂದಿಗೆ ಹುಟ್ಟಿಲ್ಲುವೇನೋ ॥ ತಂ ॥
ನಾವು ಒಂದಿಗೆ ಹುಟ್ಟಿ ಒಂದಿಗೆ ಬೆಳದಿಲ್ಲವೇನೋ ? ॥ ತಂ ॥
ಅಣ್ಣಾ ಒಂದು ತಾಯಿ ಮಕ್ಕಳಾಗಿ ಬಾಸೆಯಾಕೋ ನಮ್ಮಣ್ಣಾ? ॥ ತಂ ॥
ಅಣ್ಣಾ ಭಿನ್ನುದ ಮಾತಾಡುಬೇಡಾ ಬಿಡಿಸೇಳೋ ನಮ್ಮಣ್ಣಾ ॥ ತಂ ॥

ನನ ತಂಗೆ ಧರುಮದ ನಿಂಗಮ್ಮಾ, ನೀನು ನನಗೆ ದಯವಾಗಬೇಕೂ. ನಿನ್ನಿಂದ ನನ್ನ ಮನ್ತಾನ ಉಳೀಬೇಕೂ. ನಿನ್ನಿಂದ ನನ್ನಾ ಸಂತಾನ ಮುಂದೆ ಬೆಳೀಬೇಕು ತಂಗೇ. ನೀನು ಹುಟ್ಟಿರೋ ಮನೆ ಕಷ್ಟ ನಿನದಲ್ಲವೇ ತಂಗೇ ?

ನನಗೆ ಬಾಸೆ ಕೊಟ್ಟೋರತು ಒಡದು ಹೇಳೋದಿಲ್ಲಾ ॥ ತಂ ॥
ನನಗೆ ಬಾಸೆ ಕೊಟ್ಟೋರತು ನಿನಗೆ ಒಡದು ಹೇಳೋದಿಲ್ಲಾ ॥ ತಂ ॥

ಜ್ಞಾನಾ ಮಾಡುತ್ತಾಳೆ ಧರಮದ ನಿಂಗಮ್ಮಾ. ನನ್ನ ತೌರುಮನೇ ಸಂತಾನ, ಮನ್ತಾನವೆಲ್ಲ ಬೆಳೀಬೇಕಾದರೆ ನಾನು ಸಹಾಯವಾಗಬೇಕೂ ಅಂತ ನಮ್ಮಣ್ಣ ಕೇಳಿಕತ್ತಾನೇ. ನನ್ನ ತೌರುಮನೆ ಸಂತಾನ ಮನ್ತಾನವೆಲ್ಲ ಉಳೀಬೇಕಾದರೆ ನಾನು ಸಾಯವಾಗಬೇಕೂ. ನನ್ನಿಂದ ನನ್ನ ತೌರುಮನೆ ಬೆಳೀಬೇಕೂ.

ನನಿಗೆ ಬಂದುದ್ದೆಲ್ಲ ಬರಲೀ ಭಗುವಂತನ ದಯವಿರಲೀ ॥ ತಂ ॥
ನನಿಗೆ ಇದ್ದುದೆಲ್ಲ ಇರಲೋ ಈಸ್ಸುರುನ ವರವಿರಲೋ ॥ ತಂ ॥
ಅಣ್ಣನ್ಗೆ ಬಲಗೈಯ ಬಾಸೇಯ ಮಾಡಿಕೊಟ್ಟವಳಲ್ಲೋ ॥ ತಂ ॥
ಅಣ್ಣಾ ಬಾಸೆ ಮಾಡಿಸಿಕಂಡು ನೀರ ಹೂಯ್ಸತಾನೇ ॥ ತಂ ॥
ತಂಗೇ ಸೂತಕಾ ಕಳೆದೋಯ್ತೂ ಒಳಿಕ್ಕೇ ಕರಕಂಡ್‌ವಾದಾ ॥ ತಂ ॥
ಅಣ್ಣಾ ಸಾಲುಮಂಚದ ಮ್ಯಾಲೆ ತಂಗೆ ಕೂರಿಸಿಗಂಡಾ. ॥ ತಂ ॥

ಸಾಲುಮಂಚದ ಮ್ಯಾಲೆ ತಂಗೆ ಕೂರಿಸಿಗಂಡು, ಐಭೋಗವಾದ ಅಡಿಗೆಯನ್ನು ಮಾಡಿಸೀ ತಂಗೆ ಮುಂದಕ್ಕೆ ತಂದು ಹಾಲುಬಾನಾನೇ ಮಡಗುತ್ತಾನೆ. ಊಟ ಮಾಡು ತಂಗೇ ಅನಂತ್ರ, ಒಡದು ಹೇಳುತ್ತೀನೀ. ಅಣ್ಣಾ ಅಣ್ಣಾ ನೀನು ಹಾಲುಬಾನ ಇಕ್ಕಿದರೂ ನನ್ನಾತ್ಮಕ್ಕೆ ಸಂತೋಸವಾಗದಿಲ್ಲಾ. ನಿನ್ನ ಕಷ್ಟವನ್ನು ಒಡದುಹೇಳು. ಅನಂತ್ರ ಊಟ ಮಾಡುತ್ತೀನೀ. ತಂಗೇ ಧರಮದ ನಿಂಗಮ್ಮಾ ನೀನು ಊಟ ಮಾಡ್ತಾಕೂತ್ಕೋ ನಾನೂ ಒಡದೇಳ್ತ್ರಾ ನಾನೂ ಕೂತ್ಕತ್ತೀನೀ. ಆಗ್ಲಿ ಅಣ್ಣಯ್ಯಾಂತ ಹೇಳಿ ಬಾಯಿಗೊಂದು ಗುಕ್ಕಾಕಿ ಕೈಲಿ ಒಂದು ಗುಕ್ಕ ಹಿಡಿದಿದ್ದಾಳೇ ನಿಂಗಮ್ಮಾ.

ಕೇಳಮ್ಮಾ ನನು ತಂಗೆ ಧರುಮಾದ ನಿಂಗವ್ವಾ ॥ ತಂ ॥
ನನ್ನ ಮಡಿಕೇರಿ ಒಳುಗೆ ನಾನರುಮನೆ ಕಟ್ಟವಾಗಾ ॥ ತಂ ॥
ತಂಗೇ ಕಟ್ಟಿಕಟ್ಟಿ ನಿಲಿಸಿದ್ರೆ ಮುರುದು ಬೀಳೋದಲ್ಲಾ ॥ ತಂ ॥
ಅವ್ವಾ ಎಷ್ಟು ಕಟ್ಟಿದುರೂ ನಿಲ್ಲೋದಿಲುವಲ್ಲೇ ॥ ತಂ ॥

ಎಷ್ಟು ಕಟ್ಟಿಸಿದ್ರೂ ನಿಲ್ಲೋದಿಲ್ಲಾ. ಯಾತಕ್ಕಾಗಿ ಅರಮನೆ ಮುರಿದು ಬೀಳ್ತದೆ ಅಂತೇಳೀ ಹೋಗೀ ದೋಸಿಗರಲ್ಲಿ ಪಂಚಾಂಗ ಕೇಳೋವೊತ್ತಿಗೇ ದೋಸಿಗರಲ್ಲಿ ಏನು ಹುಟ್ಟಿತೂ ಅಂದರೇ ತಂಗೇ. ಬಡಗಲಾಗೆ ಬಾಲಚಿಕ್ಕಿ ಮೂಡೀ, ಮೂಡಲಾಗಿ ಜೋತಿ ಮೂಡೀ ಮುಂಗೋಳಿ ಕೂಗಿ, ಮೂಡು ಕೆಂಪೇರೋ ಹೊತ್ತಿನಲ್ಲಿ

ನಿನ್ನಾ ಗಂಡಾನ ಅರಮನೆ ಬಲಿಯ ಕೇಳೈತಲ್ಲೋ ॥ ತಂ ॥
ನಿನ್ನಾ ಗಂಡಾನ ಕೊಡವ್ವಾ ಅರುಮನೆಗೆ ಕಡಿಯಾನಾ ॥ ತಂ ॥

ಕೆಟ್ಟ ಅಣ್ಣಯ್ಯ ಅಂತ ಹೇಳೀ ಹಾಲುಬಾನದೆಡೆ ಮೇಲೆ ಮಕಾಡೆ ಬಿದ್ದಲ್ಲೋ ಶಿವನೇ. ಹಾಲುಬಾನದೆಡೆ ಮೇಲೆ ಮಕಾಡೆಬಿದ್ದೂ, ಹೋಗಿ ಅಣ್ಣನ ಕಾಲುಮೇಲೆ ಧರ್ಮದ ನಾರೀ ಬೀಳುತ್ತಾಳೇ.

ಅಣ್ಣ ನನ್ನ ಮುಂಡೆ ಮಾಡಾಕೇ - ಮಾದೇವನೇ*
ನನ್ನ ಮೋಸದಿಂದ ಕರೆತಂದಾ? - ಮಾದೇವನೇ
ಅಣ್ಣಾ ನಾನು ಮುಂಡೆ ಆಗುಲೇನೂ - ಮಾದೇವನೇ
ಅಣ್ಣಾ ನನ್ನ ಗಂಡನ ಕೊಡುಲೇನೂ? - ಮಾದೇವನೇ

* ಇಲ್ಲಿ ಹಾಡಿನ ಧಾಟಿ ಬದಲಾಗುವುದು. ಪ್ರತಿ ಸಾಲಿನ ಮುಂದೆ ಮಾದೇವನೇ ಎಂದು ಸೊಲ್ಲು ಸೇರಿಸಿ ಹಾಡುವರು.

ನನ ಗಂಡನ ಕೊಟಬುಟ್ರೂ - ಮಾದೇವನೇ
ನಾನು ಮುಂಡೆ ಬಾಳಬಾಳಿಕೊಂಡೂ - ಮಾದೇವನೇ
ನಾನು ಸೇರಿದೋರ ಮನೆ ಮುರ್ದ್ರೂ - ಮಾದೇವನೇ
ನಾನು ಸೆರಗೊಡ್ಡಿ ತಿನುಲೇನೂ? - ಮಾದೇವನೇ
ನನ್ನ ಕುಲುದೋರ ಮನೆಮುರ್ದ್ರೂ - ಮಾದೇವನೇ
ಅಣ್ಣಾ ಕೂಲಿ ಮಾಡಿ ತಿನ್ನುಲೇನೂ? - ಮಾದೇವನೇ
ಅಣ್ಣಾ ನನ್ನ ಮುಂಡೆ ಮಾಡುಬೇಡಾ - ಮಾದೇವನೇ
ಅಣ್ಣಾ ನನ್ನ ಗಂಡನ ಕೇಳುಬೇಡಾ - ಮಾದೇವನೇ

ನನ್ನ ಮುಂಡೆ ಮಾಡಿ ನನ್ನ ಗಂಡನ ಕೇಳಬ್ಯಾಡಾ ಅಂತ, ಅಣ್ಣನ ಕಾಲು ಮ್ಯಾಲೆ ಕಣ್ಣೀರು ಬುಡುತವಳಲ್ಲೋ ಶಿವನೇ -

ಎಷ್ಟು ಕಣ್ಣೀರು ಬುಟ್ರು ಅಣ್ಣಂಗೆ ಕನಿಕರವಿಲ್ಲಾ. ನಿನ್ನಾ ಗಂಡನ ತಂದರಮನೆಗೆ ಬಲಿ ಕಡುದ್ರೆ ಸರಿ. ನಿನ್ನಾ ಗಂಡನ ಅರಮನೆಗೆ ಬಲಿ ಕಡೀದೆವಾದರೇ ನನ್ನಾ ಮನ್ತಾನ ಸಂತಾನ ಉಳಿಯದಿಲ್ಲವಲ್ಲೇ ತಂಗೀ? ನಿನ್ನ ಗಂಡನೊಬ್ಬನ ಆಸೆಮಾಡಿ ನಾನು ಮನ್ತಾನ ಹಾಳು ಮಾಡಿಕಳಕೆ ಸಾಧ್ಯವಿಲ್ಲಾ.

ನೀನು ಗಂಡನಾಸೆ ಮಾಡುಬ್ಯಾಡಾ ತೌರಾಸೆ ಮಾಡವ್ವಾ ।। ತಂ ।।
ನಿನ್ನ ಮಗನೀಗೆ ನಾನೂ ರಾಜ್ಯಪಟ್ಟ ಕಟ್ತುತೀನಿ ।। ತಂ ।।
ನನ್ನ ಕೊಡಗೀನ ದೇಸಾದ ಜಹಗೀರು ಹಾಕುತೀನೀ ।। ತಂ ।।
ಅವ್ವಾ ಗಂಡುನಾಸೆ ಮಾಡುಬೇಡಾ ತೌರಾಸೆ ಮಾಡವ್ವಾ ।। ತಂ ।।
ಮುಂದೆ ನಾನಾಳೋ ದೊರಿತಾನಾ ನೀನೇ ಆಳಿಕಳ್ಳೇ ।। ತಂ ।।
ಮುಂದೆ ನಾನಾಳೋ ಸಿರಿತಾನಾ ನೀನೇ ಆಳೇತಂಗೀ ।। ತಂ ।।
ಅವ್ವಾ ಗಂಡನಾಸೆ ಮಾಡುಬ್ಯಾಡಾ ತೌರಾಸೆ ಮಾಡುತಂಗೇ. ।। ತಂ ।।

ಅಣ್ಣಯ್ಯಾ ಅಣ್ಣಯ್ಯಾ ನನ್ನ ಗಂಡನ ಅರಮನೆಗೆ ಬಲಿ ಕಡಿಯಾಕ್ಕೊಟ್ರೂ
ನಾನು ಮುಂಡೆ ಬಾಳ ಬಾಳಿಕಂಡೂ ದೊರಿಸ್ತನಾ ಆಳುಲೇನೋ ।। ತಂ ।।
ನಾನು ಮುಂಡ್ಯಾಗಿ ಇದ್ದುಕಂಡೂ ಸಿರಿಸ್ತನಾ ಆಳುಲೇನೋ ? ।। ತಂ ।।
ನನ್ನ ರಾಜ ಇಲ್ಲದುಮ್ಯಾಲೇ - ಮಾದೇವನೇ
ನಿನ್ನ ರಾಜ್ಯನೇ ನನಿಗ್ಯಾಕೋ? - ಮಾದೇವನೇ
ನನ್ನ ದೊರಿಯೆ ಇಲ್ಲದು ಮ್ಯಾಲೇ - ಮಾದೇವನೇ
ನಿನ್ನಾ ದೊರಿತಾನಾ ನನಿಗ್ಯಾಕೋ - ಮಾದೇವನೇ
ಅಣ್ಣಾ ರಾಣಿ ಇದ್ದುರು ಏನೋ - ಮಾದೇವನೇ
ಮನೆಯಲ್ಲಿ ರಾಜ ಇಲ್ಲದು ಮ್ಯಾಲೇ? - ಮಾದೇವನೇ
ಅಣ್ಣಾ ದೊರೆಸಾನಿ ಇದ್ದುರು ಏನೋ - ಮಾದೇವನೇ

ಮನೆಯಲ್ಲಿ ದೊರಿಯೆ ಇಲ್ಲದುಮ್ಯಾಲೇ? - ಮಾದೇವನೇ
ಅಣ್ಣಾನ ಕಾಲುಕಟ್ಟಿ ತಂಗಿ ಕಣ್ಣೀರ ಬಡುತಾಳೇ - ಮಾದೇವನೇ
ಅಣ್ಣಾ ನನು ಗಂಡನ ಕೇಳುಬ್ಯಾಡಾ - ಮಾದೇವನೇ
ಅಣ್ಣಾ ನನ್ನನ್ನು ಮುಂಡೆ ಮಾಡುಬ್ಯಾಡಾ - ಮಾದೇವನೇ
ನಾನು ಮುಂಡೆಬಾಳ ಬಾಳಿಕೊಂಡು - ಮಾದೇವನೇ
ನನ್ನ ಸೇರುದೋರ ಮನೆ ಮುರದೂ - ಮಾದೇವನೇ
ನಾನು ಸೆರುಗೊಡ್ಡಿ ತಿನ್ನುಲಾರೇ - ಮಾದೇವನೇ
ನನ್ನ ಕುಲುದೋರ ಮನೆ ಮುರದೂ - ಮಾದೇವನೇ
ಅಣ್ಣ ಕೂಲಿ ಮಾಡಿ ತಿನ್ನುಲಾರೇ - ಮಾದೇವನೇ
ನನ್ನ ಗಂಡನ ಕೇಳುಬ್ಯಾಡಾ - ಮಾದೇವನೇ
ಅಣ್ಣ ನನ್ನ ಮುಂಡೆ ಮಾಡುಬ್ಯಾಡಾ - ಮಾದೇವನೇ

ಅಣ್ಣನ ಕಾಲು ಮೇಲೆ ಕಣ್ಣೀರು ಬಡುತವಳಲ್ಲೋ ಶಿವನೇ. ಎಷ್ಟು ಕಣ್ಣೀರು ಬುಟ್ಟರೂ ಇವನಿಗೆ ಕನಿಕರವಿಲ್ಲಾ. ನಿನ್ನಾ ಗಂಡನರಮನೆಗೆ ಬಲಿಕಡುದರೆ ಸರೀ. ನಿನ್ನಾ ಗಂಡನ ಅರಮನೆಗೆ ಬಲಿ ಕಡೀದೆವಾದರೇ ನನ್ನಾ ಮನ್ತಾನ ಸಂತಾನ ಉಳಿಯಾದಿಲ್ಲ ತಂಗೇ, ಒಬ್ಬನಾಸೆ ಮಾಡಿ ಮನತಾನ ಹಾಳುಮಾಡಿಕಳಾಕೆ ನನ್ನಿಂದಾ ಸಾಧ್ಯವಿಲ್ಲಾ -

ನೀನು ಗಂಡುನಾಸೆ ಮಾಡುಬ್ಯಾಡ ತೌರಾಸೇ ಮಾಡವ್ವಾ* ॥ ತಂ ॥
ಅಣ್ಣಾ ನಾನು ಮುಂಡೆ ಆಗುಲಾರೇ ನನ್ನ ಗಂಡನ ಕೊಡುಲಾರೇ ॥ ತಂ ॥
ನೀನು ಕೊಡುದೇವಾದುರೂ ತಂಗೇ ನಾನು ಬುಡೋದಿಲ್ಲವಲ್ಲಾ ॥ ತಂ ॥
ಅಣ್ಣಾ ಬುಡುದೇವಾದುರೂ ಅಣ್ಣಾ ನಾನು ಕೊಡೋದಿಲ್ಲವಲ್ಲಾ ॥ ತಂ ॥
ನೀನು ಬಡುದೇವಾದುರೂ ಅಣ್ಣಾ ನಾನು ಕೊಡೋದಿಲುವಲ್ಲೋ ॥ ತಂ ॥
ಅಲ್ಲಿ ಅಣ್ಣನುಗೂ ತಂಗೀಗೂ ಹಟವೆ ಬಂದೀತಲ್ಲಾ ॥ ತಂ ॥

ನಾನು ಬುಡೋದಿಲ್ಲಾ, ನಾನು ಕೊಡೋದಿಲ್ಲಾ. ಅಣ್ಣನ್ಗೂ ತಂಗಿಗೂ ಬಂದು ಹೋಯಿತೂ. ಎಲಾ ನನ ತಂಗೇ, ನನಗೇ ಬಲಗೈ ಬಾಸೆಮಾಡೀ, ಕೊಡೋದಿಲ್ಲಾಂತ ಹಟ ಮಾಡುತ್ತಾ ಇದ್ದೀಯಾ? ನನ್ನಾ ಮನೆ ಒಳಿಗೆ ನನಗೇ ಮಕ ತೋರಿಕಂಡೂ ನನ್ನ ಮನೆ ಒಳಗೆ ಅರಗಳಿಗೆ ಕೂಡಬ್ಯಾಡಾ. ಹೊಂಟೋಗು ಮುಂಡೇಂತೇಳಿ ಕುತ್ತಿಗೇ ಮೇಲೆ ಕೈಯಾಕಿ ರಾವಿನಲ್ಲಿ ಹಟ್ಟಿಯಿಂದಾಚೆಗೆ ನೂಕುತ್ತಾನೇ. ಅಣ್ಣಾ ನೂಕೋರಾವಿಗೆ ಬಾಲೆ ಬಾಗಿಲಲ್ಲಿ ಬಲಗಾಲೆಡವೀ ಮಕಾಡೆ ಬೀಳುತ್ತಾಳೇ. ಹಣೆಗೇಟಾಯಿತೂ. ಮೂಗಿನ ಮ್ಯಾಲೆ ರಗುತಾ ಇಳಿದು ಬಂತೂ. ಕೆನ್ನೆ ಮೇಲೆ ಕಣ್ಣೀರು ಇಳಿದು ಬಂದವಲ್ಲಾ ದಮ್ಮಯ್ಯಾ. ಹುಟ್ಟಿದ ಮಲ್ಲಿ ಹಟ್ಟಿಂದಾಚಿಗೆ ನೂಕುವಾಗಾ ಬಾಳಾ ಸಂಕಟ ಹುಟ್ಟಿಬಂತೂ. ಅಣ್ಣನಿಗೇ ಕೈಯೆತ್ತಿ ಮುಗದೂ ಕಣ್ಣೀರು ಬುಟ್ಟೂ ಎಲಾ ಪಾಪಿಗೇಡಿ ಸೂಳೇಮಗನೇ, ಅನ್ಯಾಯಕಾರ ಬಡ್ಡೀಮಗನೇ,

* ಹಾಡುವಾಗ ಸೊಲ್ಲು ಬದಲಾವಣೆ. ಪ್ರಾರಂಭದ ಸೊಲ್ಲಿನ ಬಳಕೆ.

ನಾನು ಹುಟ್ಟಿದಮಲ್ಲಿ ನನ್ನನ್ನು ಹಟ್ಟಿಂದಾಚೆಗೆ ನೂಕುತ್ತೀಯಾ ? ನನ್ನ ಗಂಡನ ನಾನು ಕೊಟ್ಟರೇ ನನ್ನ ಎದೆ ಮೇಲೆ ಹುಟ್ಟಲಿ ರಾಹು ಎಕ್ಕದ ಕಾಯಿ ಅಂತೇಳೀ ಎದೆ ತಟ್ಟಿಗಂಡ್ಲಲ್ಲೋ ದಮ್ಮಯ್ಯಾ. ಎಲಾ ಮುಂಡೇ ಹೆಣ್ಣು ಹೆಂಗಸಾಗಿ ನನ್ನಂತಾ ಗಂಡಸಿನ ಮೇಲೆ ಎದೆ ತಟ್ಟುತೀಯಾ? ಮಂತ್ರಿ ಸೇನಾಧಿಪತಿಗಳಿರಾ ಜಲ್ದಿ ಓಡಿಬನ್ನೀ. ಈ ಮುಂಡೇ ಹೆಣ್ಣು ಹೆಂಗಸಾಗಿ ನನ್ನಂತಾ ಗಂಡ್ಸಿನ ಮ್ಯಾಲೇ ಎದೆ ತಟ್ಟುತ್ತಾಳೇ.

ಇವಳಾ ಕೈಸೆರೆ ಹಿಡಿರಯ್ಯಾ ಕಂಬಕ್ಕೆ ಕಟ್ಟಿರಯ್ಯೋ ॥ ತಂ ॥
ಇವಳಾ ಕೈಸೆರೆ ಹಿಡಿದೂ ಕಂಬಕ್ಕೆ ಕಟ್ಟಿರಯ್ಯಾ
ಇವಳಾ ಮುಳ್ಳಾ ಕೊರಡಾ ತಂದೂ ಮೈಕೈಯ ಹೊಡಿರಯ್ಯಾ
ಇವ್ಳಾ ಮುಳ್ಳಾ ಕೊರಡಾದಲ್ಲೀ ಮೈತುಂಬಾ ಹೊಡಿರಯ್ಯಾ

ನಮ್ಮಣ್ಣವನೆ ನನ್ನ ಕಾಪಾಡತಾನೇಂತೇಳಿ ಬಂದವಳೂ ಇವತ್ತುನ ಕಾಲದಲ್ಲೀ ತಂಗಿಯನ್ನು ಕೈಸೆರೆ ಹಿಡಿಸಿ ಅಣ್ಣಾ ಕಂಬಕ್ಕೆ ಕಟ್ಟುಸ್ತವನಲ್ಲೋ ಶಿವನೇ -

ಈಗಾ ಧರುಮಾದ ನಿಂಗಮ್ಮ ಕೈಸೆರೆಹಿಡಿದಾರೂ ॥ ತಂ ॥
ಈಗಾ ಕೈಸೆರೆ ಹಿಡಿತಾರೋ ಕಂಬಕ್ಕೆ ಕಟ್ಟತಾರೇ
ಈಗಾ ಮುಳ್ಳಾ ಕೊರಡದಲ್ಲಿ ಮೈಕೈಯ ಹೊಡಿವಾಗ ॥ ತಂ ॥
ಹೊಡುತ ತಡೀಲಾರ್ದೆ ಕೈಯೆತ್ತಿ ಮುಗುದಾಳೂ ॥ ತಂ ॥
ಅಣ್ಣಾ ಮುಳ್ಳಾ ಕೊರಡಾದೇಟ ತಡೀಲಾರೆ ಅಣ್ಣಯ್ಯ ॥ ತಂ ॥
ಅಣ್ಣಾ ಮುಳ್ಳಾ ಕೊರಡಾದೇಟಾ ತಡಿಲಾರೆ ದೇವಾ ಮಾದೇವನೇ
ನಾನು ತಡೀಲಾರೆನಪ್ಪಾ ಅಯ್ಯಾ - ಮಾದೇವನೇ
ಅಣ್ಣಂಗೆ ಕೈಯೆತ್ತಿ ಮುಗೀತಾಳೇ - ಮಾದೇವನೇ
ತಂಗೆ ನಿರಿಗೋಳ ಮಾಡುತಾಳೇ - ಮಾದೇವನೇ
ಮುಳ್ಳಾಕೊರಡವೇಟು - ಮಾದೇವನೇ
ಮೈಗೆಲ್ಲಾ ನಾಟಿಕೊಂಡೂ - ಮಾದೇವನೇ
ಮೈತುಂಬಾ ಶಿವಶಿವಾ - ಮಾದೇವನೇ
ರಗುತಾ ಇಳುದೋಗುತಾದೆ - ಮಾದೇವನೇ
ಅಣ್ಣಾ ತಡಿಯಲಾರೇನೋ - ಮಾದೇವನೇ
ಅಣ್ಣಂಗೆ ಕೈಯೆತ್ತಿ ಮುಗೀತಾಳೆ - ಮಾದೇವನೇ
ತಂಗೆ ಕಣ್ಣಿರ ಬುಡುತಾಳೇ - ಶಿವ ಮಾದೇವನೇ

ಈಗಲಾದರೂ ನಿನ್ನ ಗಂಡನ ಕೊಡುತ್ತೀಯೇನವ್ವಾ ಅಂತೇಳೀ ಕೇಳಿದ. ಅಣ್ಣಯ್ಯ ಅಣ್ಣಯ್ಯ, ನನ್ನ ಗಂಡನ ಅರಮನೆಗೆ ಬಲಿ ಕಡಿಯಾಕ್ಕೊಟ್ಟೂ ನಾನು ಮುಂದೆ ಬಾಳ ಬಾಳಿಕಂಡೂ, ಮುಂದೆ ದೊರಿತನ ಆಳಲಾರೆ ಅಣ್ಣಯ್ಯಾ -

ನನ್ನ ಹೊಡೆದೂಬುಡುಬ್ಯಾಡ - ಮಾದೇವನೇ
ನನ್ನ ಹೊಡೆದು ನೀ ಬುಡುಬ್ಯಾಡ - ಮಾದೇವನೇ

ನಾನು ಮುತ್ತೈದೆ ಮೇಲಾಗಿ - ಮಾದೇವನೇ
ಅಣ್ಣಾ ಮುಂದಾಗ್ಲೇ ಸಾಯ್ತೀನಿ - ಮಾದೇವನೇ
ಕೊಂದೇಬುಡಪ್ಪಾ - ಮಾದೇವನೇ
ನನ್ನ ಕೊಂದೇಬುಡಪ್ಪಾ - (ಅಯ್ಯಾ) ಮಾದೇವನೇ
ಕಣ್ಣೀರ ಬುಡತಾಳೇ - ಮಾದೇವನೇ
ಯವ್ವೆ ನಿರಿಗೋಳ ಮಾಡುತಾಳೆ - ಮಾದೇವನೇ
ಶಿವನೆ ದೊರಿಗೋಳ ಮಾಡುತಾಳೆ - ಮಾದೇವನೇ

ನನ್ನ ಗಂಡನ ತಂದು ನಿನ್ನರಮನೆಗೆ ಬಲಿ ಕಡೀಬೇಕಾದರೇ, ನಾನು ಮುತ್ತೈದೆ ಮೇಲಾಗಿ ಮುಂದಾಗ್ಲೇ ಸತ್ತು ಪ್ರಾಣ ಬುಡುತೀನಿ. ನನ್ನ ಹೊಡೆದುಬುಡುಬ್ಯಾಡ ಕೊಂದುಬುಡು ಅಂತ ಅಣ್ಣನುಗೆ ಕಣ್ಣೀರು ಬುಟ್ಟು ಕೈ ಮುಗೀತಾಳಲ್ಲೋ ಶಿವನೇ. ಎಷ್ಟು ಮೀರಿ ಬಂಧಾನ ಮಾಡಿದ್ರೂ ಕೊಡೋದಿಲ್ಲಾ ಎನ್ನೋ ಸ್ಮರಣೆಲ್ಲೇ ಇದ್ದಾಳೇ, ಮಂತ್ರಿ ಸೈನಾಧಿಪತಿಗಳಿರಾ ಇವುಳ ಗಂಡನತಂದರಮನಿಗೆ ಬಲಿ ಕಡಿದ ಹೊರತು ಇವಳ ಸೆರೆ ಬುಡಬ್ಯಾಡಿ ಅನ್ನೋದಾಗಿ ಹೇಳುವಾಗ ಮುಳ್ಳು ಕೊರಡದೇಟು ಮೈಯೆಲ್ಲಾ ಬಂಧನವಾಯ್ತು -

ಕಣ್ಣೀರ ಬುಡುವತಾಳೇ* - ಕಲ್ಯಾಣದೇವಾ
ಹಾಡೀಕೊಂಡಳವತಾಳೇ - ಕಲ್ಯಾಣದೇವಾ
ನಾನು ಪ್ರಾಣವ ಬುಡವತೀನಿ - ಕಲ್ಯಾಣದೇವಾ
ನನ್ನ ಮಗನ ತಂದುತೋರಿರಪ್ಪಾ - ಕಲ್ಯಾಣದೇವಾ
ಹಾಡೀಕೊಂಡಳವತಾಳೇ - ಕಲ್ಯಾಣದೇವಾ
ನಿರಿಗೋಳ ಮಾಡುತಾಳೇ - ಕಲ್ಯಾಣದೇವಾ
ಎಲ್ಲಿ ಇದ್ದೀಯೋ ಮಗುನೇ - ಕಲ್ಯಾಣದೇವಾ
ಎಲ್ಲಿ ಇದ್ದೀಯೋ ಕಂದಾ - ಕಲ್ಯಾಣದೇವಾ
ನನ್ನ ಐಭೋಗ ನೋಡುಬಾರೋ - ಕಲ್ಯಾಣದೇವಾ
ಮಗನ ಆಲಅಬ್ಬರಿಸಿ ಕೂಗುತಾಳೇ - ಕಲ್ಯಾಣದೇವಾ
ನಿರಿಗೋಳ ಮಾಡುತಾಳೇ - ಕಲ್ಯಾಣದೇವಾ

ಏಳು ವರುಸದ ಮಗ ಧೂಪಾರತಿ ಕಂದಯ್ಯಾ, ಊರು ಮಕ್ಕಳ ಕುಟ್ಟೆ, ಊರ ಮುಂದೆ ಗೋಲಿಆಟ ಆಡತವನೇ. ತಾಯಿ ದೊರಿತಾಯಿ ದುಕ್ಕ ಕೇಳುತೂ. ಓಡೀ ಬಂದು ನೋಡಿದಕೇ ತಾಯಿಯನ್ನ ಕಂಬಕ್ಕೆ ಕಟ್ಟಿ ಹೊಡೆದೂ ಮುಳ್ಳುಕೊರಡದೇಟೂ ಮೈತುಂಬಾ ರಗತಾ ಇಳೀತೈತೆ. ಹೆಜ್ಜೆಲ್ಲಾ ರಗತಾ ಇಳೀತ್ತಾದೇ. ತಾಯಿಯನ್ನು ದಿಟ್ಟಿಸಿನೋಡೀ ಓಡಿಹೋಗಿ ತಾಯಿ ಬಾಚಿತಬ್ಬಿಕತ್ತಲೋ ಶಿವನೇ -

ಮಗನ ಗದ್ದಾವನಿಡದೂ - ಕಲ್ಯಾಣದೇವಾ
ಕಣ್ಣೀರ ಬುಡವತಾಳೇ - ಕಲ್ಯಾಣದೇವಾ.

---

* ಹಾಡಿನ ಧಾಟಿ ಹಾಗೂ ಸೊಲ್ಲಿನ ಬದಲಾವಣೆ

ಗಿರಿಗೋಳ ಮಾಡುತಾಳೇ - ಕಲ್ಯಾಣದೇವಾ
ಕೆಟ್ಟ್ಯಲ್ಲೋ ನನ್ನ ಮಗನೇ - ಕಲ್ಯಾಣದೇವಾ
ಕೆಟ್ಟ್ಯಲ್ಲೋ ನನ್ನ ಕಂದಾ - ಕಲ್ಯಾಣದೇವಾ
ತಪ್ಪೀದಾಗೆಲ್ಲ ಮಗನೇ - ಕಲ್ಯಾಣದೇವಾ
ನಾನೂವೆ ಸಾಯತೀನಿ - ಕಲ್ಯಾಣದೇವಾ
ನಿಮ್ಮ ತಂದ್ಯೂವೆ ಸಾಯತಾರೇ - ಕಲ್ಯಾಣದೇವಾ
ತಾಯಿ ಅಂತಾವ ಮಗುನೇ - ಕಲ್ಯಾಣದೇವಾ
ಮತ್ಯಾರನ ಕರೆಯುತೀಯೋ? - ಕಲ್ಯಾಣದೇವಾ
ತಂದೇ ಅಂತಾವ ಕಂದಾ - ಕಲ್ಯಾಣದೇವಾ
ಮತ್ಯಾರನ ಕರೆಯುತೀಯೋ? - ಕಲ್ಯಾಣದೇವಾ
ನಿಮ್ಮ ತಂದ್ಯೂವೆ ಸಾಯತಾರೇ - ಕಲ್ಯಾಣದೇವಾ
ನಾನೂವೆ ಸಾಯತೀನಿ - ಕಲ್ಯಾಣದೇವಾ
ಗಿರಿಗೋಳ ಮಾಡುತಾಳೇ - ಕಲ್ಯಾಣದೇವಾ
ಹಾಡಿಕೊಂಡಳವತಾಳೇ - ಕಲ್ಯಾಣದೇವಾ
ಗಿರಿಗೋಳ ಮಾಡತಾಳೇ - ಕಲ್ಯಾಣದೇವಾ

ಯಾಕವ್ವಾ ತಾಯಿ ನೀನು ಸಾಯುತ್ತೀಯಾ? ತಂದೆ ಯಾಕೆ ಸಾಯುತ್ತಾರೇ? ನಿನ್ನನ್ನ ಯಾಕೆ ಕಂಬಕ್ಕೆ ಕಟ್ಟಿ ನಿರ್ಬಂಧವನ್ನು ಮಾಡಿ ನಿಲಿಸವರೆ ತಾಯಿ? ಅಂತೇಳಿ ಕೈ ಮುಗದು ಕಣ್ಣೀರಾ ಬುಡುತ್ತಾನೇ. ನಿನ್ನಾ ತಂದೆ ತಂದು ಆ ಮನೆಗೆ ಬಲಿಕಡಿಯುತ್ತಾರೆ ಮಗನೇ. ನಿನ್ನ ತಂದೆ ತಂದು ಅರಮನೆಗೆ ಬಲಿ ಕಡಿಯೋವರೆಗ್ಗೂ ನನ್ನನ್ನ ಕಂಬಕ್ಕೆ ಕೈಸೆರೆ ಹಿಡಿದು ಕಟ್ಟವರಲ್ಲೋ ನನ್ನ ಮಗನೇ. ಆ ಮಾತು ಕೇಳಿ ಕಂದಯ್ಯ -

ಕಣ್ಣೀರ ಬುಡುವತಾದೇ - ಕಲ್ಯಾಣದೇವಾ
ಮಗುವೇ ಗಿರಿಗೋಳ ಮಾಡುತಾದೇ - ಕಲ್ಯಾಣದೇವಾ
ತಾಯಿ ಐಭೋಗ ನೋಡೀ - ಕಲ್ಯಾಣದೇವಾ
ತಾಯಿ ಬಂಧಾನ ನೋಡೀ - ಕಲ್ಯಾಣದೇವಾ
ತಾಯಿಯಾ ಮುಂದುಗಾಡೇ - ಕಲ್ಯಾಣದೇವಾ
ಹಾಡಿಕೊಂಡಳವತಾದೆ - ಕಲ್ಯಾಣದೇವಾ
ಗಿರಿಗೋಳ ಮಾಡುತಾದೇ - ಕಲ್ಯಾಣದೇವಾ
ಯಾಕಪ್ಪ ನನ್ನ ಮಗನೇ - ಕಲ್ಯಾಣದೇವಾ
ನನು ಮುಂದೆ ಅಳುಬ್ಯಾಡಾ - ಕಲ್ಯಾಣದೇವಾ
ನನಗೆ ಸಂಕ್ಟವಾ ಕುಡುಬ್ಯಾಡಾ - ಕಲ್ಯಾಣದೇವಾ

ನಿಮ್ಮ ತಂದೆ ತನ್ನರಮನೆಗೆ ಬಲಿಕಡಿಯುತ್ತಾರೆ ಅನ್ನೋ ಸಂಕ್ಟ ಹೊಟ್ಟೆ ಒಳಗೆ ತುಂಬ್ಯಾದೆ ಮಗನೇ. ನೀನು ನನ್ನ ಮುಂದೆ ಕಣ್ಣೀರು ಬುಡೋದು, ಮುಡಿ ಉಳ್ಳೋದು, ನನ್ನ ಕಣ್ಣಲ್ಲಿ

ನೋಡಲಾರೆ. ನನ್ನ ಮುಂದೆ ಕಣ್ಣೀರುಬುಟ್ಟು ನನಗೇ -

ಸಂಕ್ಟಾವ ಕುಡುಬ್ಯಾಡೋ - ಕಲ್ಯಾಣದೇವಾ
ನನ್ನ ಅಣ್ಣನ ಬಳೀಗೆ ಹೋಗೀ - ಕಲ್ಯಾಣದೇವಾ
ನನ್ನ ಅಣ್ಣನ ಕೊಳ್ಳಾನೆ ತಬ್ಬಿ - ಕಲ್ಯಾಣದೇವಾ
ಅಳೋಗೋ ನನ್ನ ಮಗುನೇ - ಕಲ್ಯಾಣದೇವಾ

ನನ್ನ ಮುಂದೆ ಅತ್ತು ನನಗೆ ಸಂಕಟ ಕುಡುಬ್ಯಾಡಾ, ನನ್ನ ಅಣ್ಣನ ಕೊಳ್ಳುತಬ್ಬಿ ಕಣ್ಣೀರು ಬುಡುತ್ತಾ, ಕಂದಾ ನಿರಿಗೋಳ ಮಾಡುತ್ತಾ

ಮಾವನ ಬಳಿಗೆ ಹೋಗೀ - ಕಲ್ಯಾಣದೇವಾ
ಮಾವನಾ ಕಾಲು ಮ್ಯಾಲೇ - ಕಲ್ಯಾಣದೇವಾ
ಹಾಸುನಾಡೆ ಕೇಳುತಾದೇ - ಕಲ್ಯಾಣದೇವಾ

ಮಾವನ ಕಾಲು ಮ್ಯಾಲೆ ಹಾಸುನಾಡೆ ಬಿದ್ದು ಮಾವಯ್ಯೋ, ಮಾವಯ್ಯೋ ನನ್ನ ಹೆತ್ತ ತಾಯಿ ನನಗೆ ದೇವರೂ, ನನ್ನ ತಂದೆ ನನಗೆ ದೇವರು ಕಣಪ್ಪಾ. ನನ್ನ ತಾಯಿಗೆ ನಿರುಬಂಧನ ಮಾಡಿರೋದೂ -

ನನ್ನ ಕಣ್ಣಲ್ಲಿ ನೋಡಲಾರೇ - ಕಲ್ಯಾಣದೇವಾ
ನನ್ನ ಕಣ್ಣಲ್ಲಿ ನೋಡಲಾರೇ - ಕಲ್ಯಾಣದೇವಾ
ನನ್ನ ತಾಯಿ ಸ್ವರೆಯ ಬುಡೋ - ಕಲ್ಯಾಣದೇವಾ
ನನ್ನ ತಾಯಿಯ ನೋಡಲಾರೇ - ಕಲ್ಯಾಣದೇವಾ
ಕಣ್ಣೀರ ಬುಡವತಾನೇ - ಕಲ್ಯಾಣದೇವಾ
ಗಿರಿಗೋಳ ಮಾಡುತಾನೇ - ಕಲ್ಯಾಣದೇವಾ
ಹಾಡಿಕೊಂಡಳವತಾನೇ. - ಕಲ್ಯಾಣದೇವಾ

ನಿನ್ನ ತಾಯಿ ಸೆರೆ ಬುಡಬೇಕಾದರೆ ನಿನ್ನ ತಂದೆ ತಂದು ಅರಮನೆಗೆ ಬಲಿ ಕಡುದ ಹೊರತು ನಿನ್ನ ತಾಯಿ ಸೆರೆ ಬುಡದಿಲ್ಲ ಹೊಂಟೋಗು. ಮಾವಯ್ಯಾ ಮಾವಯ್ಯಾ ನನ್ನ ತಂದೆ ತಂದರಮನೆಗೆ ಬಲಿ ಕಡೀತೀಯಾ? ನನ್ನ ತಾಯಿನ ನೀನು ಮುಂಡೆ ಮಾಡುದ್ಯಲ್ಲೋ. ಮಾವಯ್ಯೋ, ನನ್ನ ಹೆತ್ತ ತಾಯಿ ತಂದೆ ಇದ್ದರೇ, ನನ್ನ ತಾಯಿ ತಂದೆ ಇದ್ದರೇ ನನ್ನಂತ ಮಗನ ಹಡುಕುತ್ತಾರೇ

ನನ್ನ ತಂದೆ ಕಡಿಯದಿಕ್ಕೆ ಮಾವೋ - ಕಲ್ಯಾಣದೇವಾ
ನನ್ನ ಕಡಿಯಪ್ಪ ನೀನೂ - ಕಲ್ಯಾಣದೇವಾ
ನನ್ನ ಕಡಿಯಪ್ಪ ಮಾವಾ - ಕಲ್ಯಾಣದೇವಾ
ಕಣ್ಣೀರ ಬುಡುವತಾದೇ - ಕಲ್ಯಾಣದೇವಾ

ಗಿರಿಗೋಳ ಮಾಡುತಾದೇ - ಕಲ್ಯಾಣದೇವಾ
ದೊರಿಗೋಳ ಮಾಡುತಾದೇ - ಕಲ್ಯಾಣದೇವಾ
ಹಾಡಿಕೊಂಡಳುವತಾದೇ - ಕಲ್ಯಾಣದೇವಾ

ನನ್ನ ಹೆತ್ತ ತಂದೆ ತಾಯಿ ಇದ್ದರೇ ನನ್ನಂತ ಮಗನ್ನ ಹಡಕತ್ತಾರೆ ಮಾವಯ್ಯಾ. ನನ್ನ ತಂದೆ ತಂದರಮನೆಗೆ ಬಲಿ ಕಡಿಬ್ಯಾಡ. ನನ್ನ ತಾಯಿ ಮುಂಡೆ ಮಾಡುಬ್ಯಾಡಂತ ಮಾವನ ಕಾಲುಮ್ಯಾಲೆ ಕಣ್ಣೀರು ಬುಡುತ್ತೈತಲ್ಲೋ ಮಗುವೇ -

ಮೊಗ ಕಣ್ಣೀರು ಬುಟ್ರೂ ಇವನಿಗೆ ಕನಿಕರವಿಲ್ಲಾ. ಮಾವುನ್ಗೆ ಕನಿಕರವಿಲ್ಲಾ. ಆಗ ನೋಡೋ ದಮ್ಮಯ್ಯ, ಮಾವನ ಬುಟ್ಟು ಅತ್ತೇ ಬಳಿಗೆ ಹೋಯ್ತು ಕಣ್ಣೀರುಬುಡುತ್ತಾ. ಅತ್ತೆ ಬಳಿಗೋಗೀ,

ಅತ್ತೆಯ ಕಾಲುಮ್ಯಾಲೇ - ಕಲ್ಯಾಣದೇವಾ
ಹೋಗಿ ಹಾಸುನಡೆ ಬೀಳುತಾದೇ - ಕಲ್ಯಾಣದೇವಾ
ಹಾಸುನಡೆ ಬೀಳುತಾದೇ - ಕಲ್ಯಾಣದೇವಾ
ಕಣ್ಣೀರ ಬಿಡುವತಾದೇ - ಕಲ್ಯಾಣದೇವಾ
ಅತ್ತೆಮ್ಮ ಅತ್ತೆಮ್ಮಾ, ನನ್ನ ತಾಯಿ ನಿನ್ನಂತ ಹೆಣ್ಣು ಜಲಮಾ - ಕಲ್ಯಾಣದೇವಾ
ನನ್ನ ತಾಯಿ ನಿನ್ನಂತಾ ಹೆಣ್ಣು ಜಲುಮಾ - ಕಲ್ಯಾಣದೇವಾ
ನಿನ್ನ ಕಣ್ಣಲ್ಲಿ ನೋಡುಬಾರೇ - ಕಲ್ಯಾಣದೇವಾ
ನಿನ್ನ ಕಣ್ಣಲ್ಲಿ ನೋಡುಬಾರೇ - ಕಲ್ಯಾಣದೇವಾ
ಅತ್ತೆಯ ಕೊಳ್ಳತಬ್ಬೀ - ಕಲ್ಯಾಣದೇವಾ
ಕಣ್ಣೀರ ಬುಡವತಾದೋ - ಕಲ್ಯಾಣದೇವಾ
ಅತ್ತೆಯ ಸೆರಗಿಡಿದು ಎಳೆಯುತಾನೇ - ಕಲ್ಯಾಣದೇವಾ
ಹಾಡಿಕೊಂಡಳವತಾನೇ - ಕಲ್ಯಾಣದೇವಾ

ಅತ್ತಿಗೆ ಮಲ್ಲಮ್ಮ ಬಂದು ನೋಡುತ್ತಾಳೇ. ಇವುಳನ್ನ ಕಂಬಕ್ಕೆ ಕಟ್ಟವರೇ, ಮುಳ್ಳುಕೊರಡ್ನಲ್ಲೇ ಹೊಡೆದು ಮೈಯೆಲ್ಲ ಗಾಯ ಆಗಿ ಬಾಳ ನಿರ್ಬಂಧನವಾಗಿ, ಭೂಮಿಗೆ ಕತ್ತು ಎಟ್ಕಂಡು ಕಣ್ಣೀರು ಬುಡುತಾ ನಿಂತವಳೇ. ಇವುಳು ಬಂದು ಅತ್ತಿಗೆ ಮಲ್ಲಮ್ಮ ನಿಟ್ಟಿಸಿನೋಡೀ ಬಾಳಾ ಸಂಕಟ ಉಂಟಾಯಿತೂ. ಕಣ್ಣೀರು ಬುಡುತ್ತಾ ಗಂಡನಾ ಬಳಿಗೋಗೀ ಗಂಡಂಗೆ ಕೈಯೆತ್ತಿ ಮುಗದೂ ಕಣ್ಣೀರು ಬುಡುತ್ತಾಳೇ. ಯಾಕೇ ನನ್ನ ಮಡದೀ ಕಣ್ಣೀರು ಬಿಟ್ಟು ಕೈ ಮುಗಿಯುತ್ತೀಯಲ್ಲಾ ಕಾರಣವೇನು? ಏನು ಕಾರಣ ಅಂದರೆ ಗಂಡಯ್ಯೋ ಹುಟ್ಟಿದಾ ಮನೆ ಹೆಣ್ಣುಮಕ್ಕಳ ಹೊಟ್ಟೆ ಉರಸೋದು ತರವಲ್ಲಾ ಗಂಡಯ್ಯಾ. ನಿನ್ನ ತಂಗಿಯನ್ನು ಇಷ್ಟು ನಿರ್ಬಂಧನ ಮಾಡಿದ್ದೀಯಲ್ಲೋ ಗಂಡಯ್ಯಾ. ನಿನ್ನ ತಂಗಿಗಿಷ್ಟು ಕೊಲೆ ಮಾಡಿರೋದೂ ನೀನು ಮನೆಕಟ್ಟಿದಂಗಾಗುತ್ತಾದಾ? ಇಲ್ಲಾ ನಿನ್ನ ಭಾವನ ತಂದು ಅರಮನಗೆ ಬಲಿ ಕಡುದಂಗಾಗುತ್ತಾದಾ? ಇಲ್ಲಾ ನಿನ್ನ ಸಂತಾನ ಉಳದಂಗಾಗುತ್ತಾದಾ ಗಂಡಯ್ಯಾ? ಯಾತಕ್ಕೆ ಸಾರ್ತಕ ಆಗುತಾದಾ? ಗ್ಯಾನ ಮಾಡೂ. ಧ್ಯಾನ ಮಾಡಿ ನನಗೆ ಉತ್ರ

ಹೇಳೂ ಅಂತಾ ಗಂಡನಿಗೆ ಕೇಳುತ್ತಾಳೇ. ಆಗ ಗಂಡ ಜ್ಞಾನಮಾಡುತ್ತಾನೆ, ಲಿಂಗರಾಜಾ. ನನ್ನತಂಗಿಯನ್ನ ನಿರ್ಬಂಧನ ಮಾಡಿರೋದೂ ಇವಳ ಕೈಸೆರೆ ಕಟ್ಟಿರೋದೂ ಮುಳ್ಳು ಕೊರಡಿನಲ್ಲಿ ಮೈತುಂಬ ಹೊಡೆದಿರೋದೂ ಯಾತಿಕ್ಕೂ ಸಾಧ್ಯ ಆಗೋದಿಲ್ಲ, ಮಂತ್ರಿ ಸೇನಾಧಿಪತಿಗಳಿರಾ ನನ್ನ ಭಾವನ ತಂದರಮನೆಗೆ ಬಲಿ ಕಡಿಯಬೇಕೂ, ನನ್ನ ಮನೆ ಕಟ್ಟಿದಂಗೆ ಆಗಬೇಕೂ. ಮುಂದೆ ನನ್ನ ಸಂತಾನ ಉಳದಂಗೆ ಬೆಳದಂಗೆ ಆಗಬೇಕೂ. ಅವಳಿಗ್ಯಾಕೆ ನಿರ್ಬಂಧನ ಮಾಡಾಣಾ? ಏಳುಸಾವ್ರ ದಂಡು ಕಟಿಕೊಂಡೋಗಿ ಏಳು ಸಾವ್ರ ದಂಡಿನಲ್ಲಿ ಅವನ್ನ ಕೈಸೆರೆ ಹಿಡಿದು ತಂದು ಕಡಿತೀನೀ.

ಇವ್ಳ ಕೈಸೆರೆ ಬಿಡಿರಯ್ಯಾ ಹಟ್ಟೀಗೆ ನೂಕಿರಯ್ಯಾ - ॥ ತಂ ॥
ಆಗ ಧರುಮಾದ ನಿಂಗಮ್ಮನ ನೂಲಗ್ಗ ಬಿಡುತಾರೇ - ॥ ತಂ ॥
ಇವ್ಳ ಕೈಸೆರೆ ಬಿಡುತಾರೇ ಹೊರಟೋಗು ಅಂತಾರೇ - ॥ ತಂ ॥

ತೌರುಮನೆಗೆ ಮನಿಂದ ಹೊರಟುಬರುವಾಗ ಉತ್ರಾಸಾಣಿಗೊಡದು ನಿಲ್ಲಿಸಿದ್ನಲ್ಲೋ ದಮ್ಮಯ್ಯ. ನನ್ನ ತೌರು ಮನೆಗೆ ನಾನೋಗದಕೆ ನನಗೆ ಯಾವ ಶಕುನಾದ್ರೇನು ? ನನ್ನ ತೌರಲ್ಲವೇ ನನಿಗೆ. ನನಿಗೆ ಯಾವ ಕಷ್ಟಬಂದ್ರೂ ನಮ್ಮಣ್ಣವ್ನೇ ನನ್ನಾ ಕಾಪಾಡ್ತಾನೇ ಅಂತ ಅಣ್ಣನ್ನ ನೆನಕೊಂಡೂ ಬಂದವಳೂ ನಡುದಾರಿಲ್ಲಿ ಬರುವಾಗ ನೆರಿಗೆವಾಸಿ ಹೊರಗಾಗಿದ್ನಲ್ಲಪ್ಪಾ. ಅಲ್ಲೂ ನಮ್ಮಣ್ಣವನೇ ನನಗೆ ಯಾವ ಶಕುನಾದರೂ ನಮ್ಮಣ್ಣವನೆ ಯಾವ ಕಷ್ಟ ಬಂದರೂ ನಮ್ಮಣ್ಣ ನನ್ನ ಕಾಪಾಡ್ತಾನೆ ಅಂತ ಬಂದವಳು. ಹುಟ್ಟಿದಾ ಮಲ್ಲಿ ಹಟ್ಟಿನಾಚೀಗೆ ನೂಕಿಸಿಕೊಂಡೂ ಮೈತುಂಬಾ ಹೊಡೆಸಿಗಂಡೂ ಹೆಜ್ಜೆಲ್ಲಾ ರಕ್ತ ಇಳಿಸಿಗಂಡೂ ಕಣ್ಣೀರು ಬುಡುತಾ ಹೊಂಟೋಗುತಾವಳಲ್ಲೋ ಶಿವನೇ -

ಅಮ್ಮಾ ತೌರಮನೆಯ ಬುಟ್ಟು ಗಂಡನ ಮನಿಗೆ ಹೋಗೀ - ॥ ತಂ ॥
ಇವ್ಳು ಹತ್ತು ಸುತ್ತಿನರುಮಾನೇ ಬೀಗ ಬಿಚ್ಚಿದಳಲ್ಲೋ
ಒಳಗೋಗಿ ಪಟ್ಟೇಮಂಚದ ಮ್ಯಾಲೆ ಮಕಾಡೆ ಮಲಿಗ್ಯಾಳೋ
ಅಮ್ಮಾ ಗಂಡಾನ ನೆನಕೊಂಡು ಕಣ್ಣೀರ ಬುಡುತಾಳೇ
ಗಂಡಾನ ನೆನಕೊಂಡು ಹಾಡಿಕೊಂಡು ಅಳುತಾಳೇ

ಕಣ್ಣೀರು ಬುಡುತಾ ಮಗನೇ ದೂಪಾರ್ತಿ ಕಂದಯ್ಯ, ನಮ್ಮಣ್ಣ ನನ್ನ ಕರಿಯಾಕೆ ಬಂದಿದ್ದಾಗ ಭಾವಾ ಬಸವಪ್ಪದೊರೆ ಎಲ್ಲೀ ನನ ತಂಗೀ ಅಂತೇಳಿ ಕೇಳಿದಾ. ಅಣ್ಣಯ್ಯಾ ಅಣ್ಣಯ್ಯಾ ಯಾಲಕ್ಕಿನಾಡಿಗೆ ಆಳಿಗೆಲ್ಲಾ ದೊರೆಯಾಗಿ ಮಲ್ನಾಡಿಗೆ ಹೋಗವ್ರೆ ಅಂತಹೇಳಿದ್ದೇ. ನಮ್ಮಣ್ಣ ಏಳುಸಾವಿರ ದಂಡು ಕಟಿಕಂಡೋಗಿ ಅಲ್ಲೇ ಕೈಸೆರೆ ಹಿಡದು ತಂದು ಕಡಿದ್ರೇ ನಾನು ಮುಂಡೆಯಾಗತೀನಲ್ಲೋ ಮಗನೇ.

ಈಗ ಬಣ್ಣದ್ವಾಲೆಯ ಬರದು ಗಂಡನ್ಗೆ ಕಳುಹುಕೊಡುತ್ತಾಳೇ ॥ ತಂ ॥
ಬಣ್ಣದ್ವಾಲೆ ಬರದು ಗಂಡನ್ಗೆ ಕಳುಸಿದಳಮ್ಮಾ ॥ ತಂ ॥
ಬಣ್ಣಾದ ವಾಲೇಯ ಏನಂತ ಬರೆದಾಳೇ ? ॥ ತಂ ॥

ಗಂಡ ನಾನು ಮುಂಡೆ ಆಗುತೀನಿ ಮಗ ತಬ್ಲಿ ಆಗುತಾನೇ ॥ ತಂ ॥
ನಮ್ಮ ಹಾಲಿನಂತಾ ಅರುಮನೆ ಹಾಳುಬೀಳೋಕಾಲ ಬಂತೂ ॥ ತಂ ॥
ಗಂಡಾ ತುಪ್ಪದಂತಾ ಅರುಮನೆ ತಿಪ್ಪೆ ಅನ್ನೋ ಕಾಲ ಬಂತೂ ॥ ತಂ ॥
ಗಂಡಾ ಜಲ್ದಿ ಬಂದು ನನಗೆ ಮೊಕವ ತೋರಾಬೇಕೂ ॥ ತಂ ॥
ನನಗೆ ಜಲ್ದೀ ಬಂದೂ ಗಂಡ ಮೊಕವ ತೋರಾ ದೊರಿಯೇ ॥ ತಂ ॥
ಬಣ್ಣಾದ ವಾಲೇಯ ಗಂಡುನ್ಗೆ ಬರದಾಳಲ್ಲಾ. ॥ ತಂ ॥

ವಾಲೆ ಹೋಗಾದೆ ಗಂಡನ ತಲೆದಸೀ ॥ ತಂ ॥
ಗಂಡ ಬಂದಂತ ವಾಲೇಯ ನಿಂದು ಓದೀಕಂಡು ॥ ತಂ ॥

ಆಳಿಗೆಲ್ಲ ದೊರಿಯಾಗಿದ್ನಲ್ಲೋ ದಮ್ಮಯ್ಯಾ. ಆಳಿಗೆಲ್ಲಾ ಯೇಳಿ ನನ್ನೆಡ್ತಿ ಏನೋ ಕಷ್ಟದ ವಾಲೆ ಬರದವಳೇ. ಓಗಿ ಮೂರುದಿನಕ್ಕೆ ಬತ್ತೀನಿ ಅಂತ ಆಳಿಗೇ ಯೇಳೀ -

ವಾಲೆ ಕಂಡು ಗಳಿಗೆಲ್ಲಿ ಮನಿಗೆ ಬಂದವನಯ್ಯಾ. ॥ ತಂ ॥
ಹೆಡ್ತಿ ಮಾಕಾಡೆ ಮನಿಗ್ಹೋಳು ಮ್ಯಾಲ್ಕೆ ಎದ್ದಿಲ್ಲುವಲ್ಲೋ ॥ ತಂ ॥
ಹೋಗಿ ಮಡದೀಯ ಮುಂದುಗಾಡೆ ಕುಂತಿಗಂಡ ಶಿವ ಶಿವಾ ॥ ತಂ ॥
ಯಾಕೇ ನನ್ನಾ ಮಡದಿ ಧರಮಾದ ನಿಂಗವ್ವಾ ॥ ತಂ ॥
ನನಗೆ ಕಷ್ಟಾದ ವಾಲೇಯ ಬರದೆ ನನ್ನಾ ಮಡದೀ ॥ ತಂ ॥

ಗಂಡನ ದನಿ ಕೇಳಿ ಮಕಾಡೆ ಮನಗಿದ್ದವಳು ಮ್ಯಾಕೆದ್ದು ಗಂಡನ ದಿಟ್ಟಿಸಿ ನೋಡೀ ಗಂಡನ ಮಕನೋಡಿ ಕಣ್ಣೀರು ಬುಟ್ಟೂ ಗಂಡನಾ ಕೊಳ್ಳುತಬ್ಬೀ -

ಗಂಡಾ ನಾನು ಮುಂಡೆ ಆಗತೀನಿ ಮಗ ತಬ್ಲಿ ಆಗುತಾನೇ ॥ ತಂ ॥
ನನ್ನ ಹಾಲಿನಂತಾ ಅರುಮನೆ ಹಾಳುಬೀಳೊ ಕಾಲಬಂತೂ ॥ ತಂ ॥
ನನ್ನ ತುಪ್ಪದಂತಾ ಅರಮನೆ ತಿಪ್ಪೆ ಅನ್ನೋಕಾಲ ಬಂತೂ ॥ ತಂ ॥

ಯಾಕೆ ನನ್ನ ಮಡದೀ ದರಮದ ನಿಂಗಮ್ಮಾ, ನಾನಿದ್ದ್ಹಂಗೆ ನೀನೆಂಗೆ ಮುಂಡೆ ಆಗತೀಯಾ? ನಮ್ಮಣ್ಣ ಗಂಡಯ್ಯಾ ಅರುಮನೆ ಕಟ್ಟಿಸ್ತವನೇ, ಅರುಮನೆ ಕಟ್ಟಡ ನಿಲ್ಲದೆ ಮುರ್ದು ಬೀಳ್ತದಂತೆ. ಯಾತಕ್ಕಾಗಿ ಮುರ್ದು ಬೀಳ್ತದೆ ಅಂತೇಳಿ ಅಣ್ಣಯ್ಯ ಜೋಸಿಗರಲ್ಲಿ ಪಂಚಾಂಗ ಕೇಳೋಹೊತ್ತಿಗೇ, ಅಣ್ಣ ಕಟ್ತಿರೋ ಅರಮನೆ ನಿಮ್ಮನ್ನು ಬಲಿಕೇಳ್ಯಾದೇ. ನಿಮ್ಮನ್ನಾ ಕುಂಡೋಗಿ ಅಣ್ಣಾ ಅರಮನೆಗೆ ಬಲಿ ಕಡೀತಾನೇ.

ಗಂಡಾ ನಾನು ಮುಂಡೇ ಆಗತೀನಿ, ಮಗ ತಬ್ಲಿನಾಗುತಾನೇ ॥ ತಂ ॥
ತನ್ನ ಮಡದೀಯ ಮ್ಯಾಲೆ ಕಡಿಕ್ವಾಪ ಆದುನಲ್ಲೋ ॥ ತಂ ॥
ತನ್ನ ಮಡದೀಯ ಮ್ಯಾಲೆ ಕಡಿಕ್ವಾಪನಾದ ರಾಜಾ ॥ ತಂ ॥

ನನ್ನ ಮಡದೀ ದರುಮದ ನಿಂಗಮ್ಮಾ, ನೀವು ಅಣ್ಣ ತಂಗಿಗೇ, ನಿಮ್ಮಣ್ಣ ತಂಗಿಗೇನೋ ಜಗಳ ಉಂಯಟಾಗಿದೆ. ನಾವು ಕೃಷ್ಣಾರ್ಜುನರಂಗೇ ನಾವು ಭಾಮಕ್ಕಳು ಇದ್ದೀವಿ ಮಡದೀ. ಅಣ್ಣತಂಗೀಗೆ ನಿಮಗೆ ಜಗಳಬಂದೂ -

ನನ್ನ ಹಾಲಿನಂತೆ ಭಾವಂಗೆ ಹಗೆ ನೀನ್ ಹಗಿತನ ಹೇಳುತೀಯಾ ॥ ತಂ ॥
ಹಾಲಿನಂತ ಭಾವಂಗೆ ಹಗಿತನ ತಂದ್ಯೇನೇ ॥ ತಂ ॥
ನನ್ನ ತುಪ್ಪದಂತ ಭಾವಂಗೆ ಕಿಚ್ಚು ತಂದು ಮಡಗೀದ್ಯಾ ॥ ತಂ ॥
ನನ್ನ ಹಾಲಿನಂತ ಭಾವನಿಗೆ ನೀನು ಹಗಿತನ ಹೇಳುಬ್ಯಾಡಾ ॥ ತಂ ॥
ನನ್ನ ತುಪ್ಪದಂತ ಭಾವನಿಗೆ ನೀನ್ ಕಿಚ್ಚು ತಂದು ಹೇಳಬ್ಯಾಡಾ ॥ ತಂ ॥
ನಾವು ಕೃಷ್ಣಾರ್ಜುನರಂಗೆ ಇದ್ದೀವಲ್ಲೇ ನನ್ನು ಮಡದಿ ಃ ॥ ತಂ ॥

ಅಣ್ಣಾತಂಗಿ ನಿಮಗೆ ಜಗಳ ಬಂದೂ ನನ್ನಹ್ಹತ್ರ ಭಾವನ ಹಗಿತನ ಹೇಳುತ್ತೀಯೇನೇ ಮಡದೀ?

ಇಲ್ಲಿಗೇ ಭಾವನಾ ಮಕವಾ ನೋಡಿ ಮೂರೊರುಸಾಯ್ತು ॥ ತಂ ॥
ನಿಮ್ಮ ಜಗಳ ತಿಳಿಯಾತೀನಿ ಭಾವನಾ ನೋಡಾತೀನೀ ॥ ತಂ ॥
ನಾನು ಹೋಗಿ ಬರಾತೀನಿ ನನ್ನ ಮಡದಿ ನಿಂಗಮ್ಮಾ ॥ ತಂ ॥

ಮನೆವಳಿಗೆ ಗಳಿಗೆ ಕೂಡನಿಲ್ಲಾ. ಭಾವನ ಮನೆಗೆ ಹೊಂಟಾ. ನಿಮ್ಮ ಜಗಳವೇನು ತಿಳಿದೂ ಭಾವನ ನೋಡಿ ಬತ್ತೀನೀ. ಭಾವನಾ ಸಮ ಕೂತೂಗಂಡು ಸಂತೋಸದಿಂದ ಉಂಡು ಬತ್ತೀನಿ ಅಂತ, ಮನೆ ಒಳಗಡೇಗೆ ಕೂಡನಿಲ್ಲಾ ಗಂಡಾ. ಭಾವನ ಮನೆಗೆ ಹೊಂಟಾಗಾ ಹೆಂಡ್ತಿಗೆ ಸಂಕಟ ಉಂಟಾಯಿತೂ

ಹೋಗಿ ಗಂಡನ ಶಿವಾನೇ - ಮಾದೇವನೇ
ಅತ್ತು ತಡಿಯಾತಾಳೇ - ಮಾದೇವನೇ
ಗಂಡಾ ಮರಣಾಗಾಲಾಕೆ - ಮಾದೇವನೇ
ನಿನಗೆ ಮರಣಾಗಾಲ ಬಂದೂ - ಮಾದೇವನೇ
ನೀವು ಬುದ್ಧಿಲ್ಲದೆ ಹೋಗುತೀರಾ - ಮಾದೇವನೇ
ಗಂಡಾ ಕೇಡುಗಾಲಾ ಕೂಡಿ - ಮಾದೇವನೇ
ನಿಮ್ಗೇ ಕೇಡುಗಾಲಾ ಕೂಡಿ - ಮಾದೇವನೇ
ನೀವು ಬುದ್ಧಿಲ್ಲದೆ ಹೋಗುತೀರಾ - ಮಾದೇವನೇ
ಶಿವ್ನೆ ಕಣ್ಣೀರ ಬುಡುತಾಳೇ - ಮಾದೇವನೇ
ತನ್ನ ಇಕ್ಕಿದ್ದ ರವಕೇ ಬಿಚ್ಚಿ - ಮಾದೇವನೇ
ಗಂಡಗೆ ಮೈಕೈಯ ತೋರುತಾಳೇ - ಮಾದೇವನೇ

ಗಂಡನ್ನು ಮೈಕೈಯ ತೋರುತಾಳೇ - ಮಾದೇವನೇ
ಕಾರಣವೇನು ಮಡದಿ ಮೈಯೆಲ್ಲಾಗಾಯ ? ನನ್ನ ಮೋಸದಲ್ಲಿ ಕರಕವೋಗಿ ನಿನ್ನ ಗಂಡನ ಕೊಡು, ಅರಮನಿಗೆ ಬಲಿಕಡೀಬೇಕೂಂತ ಕೇಳಿದಾ. ಕೊಡೋದಿಲ್ಲ ಅಂತೇಳಿ ಹಠ ಮಾಡೋ ಹೊತ್ತಿಗೆ, ನನ್ನ ಕಂಬಕ್ಕಟ್ಟಿ ನನ್ನ ಹೊಡೆದಿ ಕಳಿಸಿದಾ ನಮ್ಮಣ್ಣ ನಿಂಗರಾಜಾ.

ಕಣ್ಣೀರ ಬುಡುತಾಳೇ - ಮಾದೇವನೇ
ಗಿರಿಗೋಳ ಮಾಡುತಾಳೇ - ಮಾದೇವನೇ
ದೊರಿಗೋಳ ಮಾಡುತಾಳೇ - ಮಾದೇವನೇ
ಅಮ್ಮಾ ಹಾಡಿಕೊಂಡು ಅಳುತಾಳೇ - ಮಾದೇವನೇ
ನೋಡಬೇಕು ಮೂರು ದಿನ. ಮೂರು ದಿನ ತಡೆದು ನೋಡಾನ. ನಡಿ ಮನೆಗೆ ಹೋಗಾಣ, ಅಂತ ಹಿಂದಿರುಗಿ ಬಂದೂ ಅವತ್ತಿನಾ ರಾತ್ರೇಲಿ ಗಂಡ ಹೆಡ್ತೀ ಸಂತೋಸದಲ್ಲಿ ಅಡಿಗೆಯನ್ನು ಮಾಡೀ ಗಂಡ ಹೆಡ್ತಿ ಐಭೋಗದಲ್ಲಿ ಊಟಮಾಡಿ ಸಾಲುಮಂಚದ ಮ್ಯಾಲೆಕ್ಕೋಗಿ ಮಲಗವ್ರೆ. ಅದೇ ರಾತ್ರೆ ಒಳಗೆ ಅಣ್ಣ ನಿಂಗರಾಜ ಏಳು ಸಾವ್ರ ದಂಡು ಕಟ್ಟಿಗಂಡು ಒತ್ತಾವನಲ್ಲೋ ಶಿವನೇ -

ಅಣ್ಣ ಏಳು ಸಾವ್ರ ದಂಡು ಕಟ್ಟಗಂಡು ಬತ್ತಾವನೇ. ಇವಳ ಸತ್ಯ ಇವಳ ಧರ್ಮಾ -
ಗಂಡಾನ ಕನಸೀಗೆ ಕೆಟ್ಟಕನಸು ಬೀಳುತಾದೇ ॥ ತಂ ॥
ಇವ್ಳ ಗಂಡಾನ ಕನಸೀಗೆ ಕೆಟ್ಟ ಕನಸುಬೀಳುತಲ್ಲಾ ॥ ತಂ ॥
ಕನಸ್ನಲ್ಲಿ ಮನಿಯೆಲ್ಲಾ ಕಸಿಗೊಂಡು ಬೀಳೋದ ಕಂಡನಪ್ಪಾ ॥ ತಂ ॥
ಮನೆಯೆಲ್ಲಾ ಕಸಿಗಂಡು ಧಿಗಿಧಿಗಿನೆ ಉರೀತಾದೇ ॥ ತಂ ॥
ಹೊಳೆಯ ನೀರೆಲ್ಲಾ ಮನೆಗೆ ನುಗ್ಗಿದುಂಗಾಯ್ತೊ ॥ ತಂ ॥

ಕನಸಲ್ಲಿ ಮನೆ ಕಸ್ಸಿಕೊಂಡದ್ದು ನೋಡಿ ಆಲಅಬ್ಬರಿಸಿ ಆಕರಿಸಿ ಎದ್ದು ಕೂತುಗಂಡ ಗಂಡಯ್ಯಾ. ಏನು ಗಂಡಯ್ಯಾ ಆಕರಿಸಿದ್ರಲ್ಲಾ ? ನನ್ನ ಮಡದೀ ನಿಂಗಮ್ಮಾ ನನ್ನಾ ಕನಸಲ್ಲಿ ನನ್ನ ಮನೆ ಕತ್ತಿಕಂಡು ಉರಿದಂಗಾಯಿತೂ. ಹೊಳೇ ನೀರೆಲ್ಲಾ ಮನೆ ಒಳಕ್ಕೆ ನುಗ್ಗಿದಂಗಾಯಿತೂ. ಅದಕ್ಕೇ ಆಕರಿಸಿ ನಾನು ಎದ್ದು ಕೂತುಗಂಡೆ ನನ್ನ ಮಡದೀ. ಗಂಡಯ್ಯಾ ಮುಂದೆ ಕೇಡುಗಾಲ ನಮಗೆ. ಹೊಳೇ ನೀರು ಕಂಡದ್ದೂ ನಮಗೇ ಕಣ್ಣೀರು ಗಂಡಯ್ಯಾ. ಮನೆ ಕತ್ತಿಗಂಡು ಉರಿಯೋದು ಕನಸ್ನಲ್ಲಿ ಇದು ಕಿಚ್ಚುಕಾಣೋ ಗಂಡಯ್ಯಾ. ಮುಂದೆ ನಮಗೆ ಕಷ್ಟ ದೊರೆಯುತ್ತಾದೇ. ನಾನು ಮುಂಡೆ ಆಗುತ್ತೀನೀ. ನಮ್ಮಣ್ಣ ಏಳು ಸಾವುರ ದಂಡು ಕಟ್ಟಿಗಂಡು ಬಂದುಬುಟ್ಟಾನೋ. ನಮಗೆ ಯಾವುದೂ ಬ್ಯಾಡಾ -
ನಮ್ಮ ದೇಸ ಬುಟ್ಟು ನಾವು ಬೇರೆ ದೇಶಕ್ಕೋಗುವಾನಾ ॥ ತಂ ॥
ನಾವು ಮನೆಯಾ ಬುಟ್ಟುಬ್ಯಾರೆ ದೇಸಕ್ಕೋಗಾನಾ ॥ ತಂ ॥
ನಡಿಯೋ ನನ್ನ ದೊರೆ ಕೈಯೆತ್ತಿ ಮುಗುದಾಳೂ ॥ ತಂ ॥
ಮಧ್ಯರಾತ್ರಿ ಹೊತ್ತಿನಲ್ಲಿ ಕದ್ದು ಹೊಂಟೋಗಿ ಬುಡಾನ ನಡೀ. ಯಾರಾರೂ ದಾರೀಲಿ

ಕಂಡಾರು ಅಂತೇಳಿ ಇವ್ರು ಕದ್ದು ಹೊಂಟೋಗಿ, ಮಧ್ಯರಾತ್ರಿ ಹೊತ್ತಿನಲ್ಲಿ -

ಇವ್ರು ಹೆಣ್ಣುರೂಪ ಬುಡುತಾಳೇ ಗಂಡುರೂಪ ತೊಡುತಾಳೇ ॥ ತಂ ॥
ಬಲಗಡೆ ಬಣ್ಣದ ಬಾಕ ಇಟ್ಟಳು ತಂಗೀ ॥ ತಂ ॥
ಬಲಗಡೆ ಬಣ್ಣದ ಬಾಕ ಧರಿಸವಳಲ್ಲೋ ॥ ತಂ ॥
ಎಡಗಡೆ ನಡುಗೀಗ ಚೂರಿ ಧರಿಸವಳಲ್ಲಾ ॥ ತಂ ॥
ನಿಂತು ಧರಿಸಾಳು ನಿಲುವಂಗಿ ದೂಗವಾ ॥ ತಂ ॥
ಕುಂತು ಕಟ್ಟಾತಾಳೇ ಗುಗ್ಗರಾದ ಪೇಟಗಳಾ ॥ ತಂ ॥
ಇವ್ರ ಧೂಪಾರ್ತಿ ಮಗನ ಬೆನ್ನು ಮ್ಯಾಲೆ ಕಟ್ಟಿಗಂದೂ ॥ ತಂ ॥

ಕುದ್ರೆ ಈಚೆಗಿಡಕಂಡು ಬರವಾಗಾ, ಕುದ್ರೆ ಹೋಗಿ ಹೊಸಲ ಮೇಲೆ ಲದ್ದಿ ಹಾಕಿತು. ಮೂರು ಜನವೂ ಒಂದೇ ಕುದುರೆ ಮ್ಯಾಲೆ ಕೂತಿಗಂಡು ಮಧ್ಯರಾತ್ರಿ ಹೊತ್ತಿನಲ್ಲೀ ಮನೆಬುಟ್ಟು -

ಮಧ್ಯರಾತುರೆ ಬಳಗೇ ಕದ್ದು ಹೊರಡುತಾರೇ ॥ ತಂ ॥
ಊರುಬುಟ್ಟು ಮೂರು ಮೈಲಿ ದೂರ ಹೋಗ್ಯವರೇ ॥ ತಂ ॥

ಇವ್ರು ಊರುಬುಟ್ಟು ಮೂರು ಮೈಲಿ ದೂರ ಹೋಗ್ಯವರೇ. ಅಷ್ಟೊತ್ಗೆ ಅಣ್ಣ ಏಳು ಸಾವ್ರ ದಂಡು ತಂದೂ ತಂಗೆ ಮನೆ ಒಳಕ್ಕೆ ಮುತ್ತಿಗೆ ಹಾಕಿದ್ನಲ್ಲೋ ದೇವಾ. ಅಣ್ಣನ ದಂಡು ಬಂದು ತಂಗೆ ಮನೆ ಒಳಿಕ್ಕೆ ಮುತ್ತಿಗೆ ಹಾಕಿದ್ದು, ತಂಗೆ ಮನೆ ಒಳಗೇ-

ಕ್ವಾಣೆ ಕೊಟ್ಟಿಗೇನೆಲ್ಲಾ ಹುಡಿಕಾಡಿ ಅಣ್ಣಯ್ಯ ॥ ತಂ ॥
ಕ್ವಾಣೆ ಕೊಟ್ಟಿಗೇನೆಲ್ಲಾ ಹುಡಿಕಾಡುತಾನೇ ॥ ತಂ ॥
ಎಲ್ಲೀ ಹುಡುಕಿದ್ರೂ ಇವ್ರೇ ಇಲ್ಲವಲ್ಲೋ ॥ ತಂ ॥

ಅವ್ರು ಕೂರೋ ಕುದ್ರೇ ಯಾವ ರೂಮಿನಲ್ಲಿ ಕಟ್ರಿದ್ರೋ ಅದೇ ರೂಮಿನಲ್ಲೀ ಹೊಸಲ್ನ ಮ್ಯಾಲೆ ಲದ್ದಿಹಾಕಿ ಬಂದಿತ್ತಲ್ಲಾ? ಕುದ್ರೆಲದ್ದೀ ನೋಡಿ ಏನಂತಾನೆ ಅಣ್ಣಾ? ನನ್ನ ಭಾವನಾದ ಬಸಪ್ಪದೊರೆ ಕುದ್ರೆ. ಕೂರೋ ಅಂತ ಕುದ್ರೆ ಈ ರೂಮಿನಲ್ಲಿ ಕಟ್ತಿದ್ದೋ. ಅದೇ ಕುದ್ರೆ ಈಗ ಲದ್ದಿ ಹಾಕಿ ಹೋಗ್ಯಾದೆ. ಎಲ್ಲೋ ಈಗ್ಲೇ ಕದ್ದು ಹೊಂಟೊಯ್ತವ್ರೆ ಅವ್ರು. ಕುದ್ರೆ ಲದ್ದಿ ನೋಡಿ ಏನನ್ನುತ್ತಾನೇ? ನನ್ನ ಬೇಟೆ ನಾಯಿಗಳಿರಾ ಯಾವ ದಿಕ್ಕಿನಲ್ಲಿ ಹೋಗುತ್ತಾರೇ ವಾಸನೆ ಹಿಡೀರಿ ಅಂತೇಳಿ ನಾಯಿಗೆ ಹೇಳುತ್ತಾನೇ. ಯಾವದಿಕ್ಕಿನಲ್ಲೀ ಹೋಯ್ತವ್ರೇ -

ಅದೇ ದಿಕ್ಕಿನೊಡನೆ ನಾಯಿಗೋಳು ಓಡಿಹೋದ್ರೋ ॥ ತಂ ॥
ಅವ್ರ ವಾಷ್ನೆ ಹಿಡಿಕಂಡು ನಾಯೆಲ್ಲ ಹೋಗುತಾವೇ ॥ ತಂ ॥
ಅಯ್ಯಾ ಹೆಜ್ಜೇನು ಮೊರದಂಗೆ ದಂಡೆಲ್ಲಾ ಮೊರೆದಾವು ॥ ತಂ ॥
ದಂಡು ಆಲೆಅಬ್ಬುರಿಸಿ ಕೊಬ್ಬಿಕೂಗೂತಲ್ಲೋ ॥ ತಂ ॥

ಇವ್ರು ಅಡವಿಲ್ಲಿ ಕದ್ದು ಹೊಂಟೋಗುವಾಗ ದಂಡಿನ ಸದ್ದು ಕೇಳಿತು. ಗಂಡಯ್ಯಾ ಗಂಡಯ್ಯಾ ಕೆಟ್ಟೆ. ಅಣ್ಣನಾ ದಂಡು ಬೆನ್ನತ್ತಿ ಬರಂಗೆ ಕಾಣತಾದೇ. ಎಲ್ಲಾರಾ ಔತೂ ಕೂತು ಬಿಡೋಣಾ ನಡಿಯೋ ಗಂಡಯ್ಯಾ ಅಂತೇಳಿ ಬಿದಿರುಮೆಳೆ ಒಳಗೆ ಕುದ್ರೆ ಕಟ್ಟಾಕಿ, ಒಂದು ಹಳ್ಳದಲ್ಲಿ ಕೂತುಗಂಡೂ, ಮರದಾ ತರಗೆಲೆಯನ್ನು ಬಾಚಿಗಂಡೂ ಮೈಮೇಲೆ ಕೌಚಿಗಂಡ್ರೂ -

ಅಯ್ಯಾ ಹಿಂದಲಿಂದ ಬಂದ ದಂಡೂ ಮುಂದರಿದೇ ಹೋಗುತಾವೇ ॥ ತಂ ॥

ನಾಯಿ ಮುಂದಕೇ ಓಡೂವಾಗಾ ವಾಷ್ಣೆ ಸಿಗಾನಿಲ್ಲಾ ॥ ತಂ ॥

ಮುಂದಕ್ಕೆ ನಾಯಿ ವಾಷ್ಣೆ ಹಿಡಾಕಂಡು ಓಡುವಾಗ ವಾಷ್ಣೆ ಸಿಕ್ಕನಿಲ್ಲಾ. ಹಿಂದಕ್ಕೆ ತಿರುಗಿ ವಾಷ್ಣೆ ನೋಡುತ್ತಾವೇ. ಎಲ್ಲಿ ಔತು ಕೂತಿದ್ರೋ ಅಲ್ಲಿ ವಾಷ್ಣೆ ಹಿಡಕಂದೋ. ದಂಡೆಲ್ಯಾನೂ ಕರಕಂಡು ಬತ್ತಾ ಅವಲ್ಲೋ ಶಿವನೇ. ನಾಯಿಗೋಳು ಬಂದೂ, ತರಗೆಲೆಯೆಲ್ಲಾನೂ ಮ್ಯಾಲಕ್ಕೆ ಎಳದೂ ಎಳದೂ ಬಂದು ಹಳ್ಳದಲ್ಲಿ ಕೂತಿದ್ರೂ. ತರಗೆಲೆ ಮೂಸಿನೋಡೀ -

ದಂಡ ಬಗಳಿ ಕೂಗಾತಾವೇ ಬೊಬ್ಬೆ ಹೊಡೆಯತಾವೇ ॥ ತಂ ॥

ದಂಡೆಲ್ಲಾ ಬಂದು ತರಗೆಲೆ ತೆಗೆದು ನೋಡಿದ್ರೇ ತರಗೆಲೆ ಒಳಗೆ, ಮರದ ತರಗೆಲೆ ಯೆಲ್ಲಾನೂ ಮ್ಯಾಲೆ ಕೌಚಿಕಂದೂ, ಔತಿಕಂಡು ಕೂತಿದ್ರಲ್ಲಾ ದಮ್ಮಯ್ಯಾ. ತರಗೆಲೇನ ದಂಡು ಬಂದು ತಗದು ನೋಡುವಾಗ ಆ ತರಗೆಲೇ ಒಳಗೆ ಕೂತವರೇ.

ಧರಮಾದ ನಿಂಗಮ್ಮನಾ - ಮಾದೇವನೇ
ಗಂಡನ ಶಿವಶಿವಾ - ಮಾದೇವನೇ
ಕೈಸೆರೆ ಹಿಡುದಾರೋ - ಮಾದೇವನೇ
ಇವ್ರ ಹೊಡುಕೊಂಡು ಹಿಡಿಕೊಂಡು - ಮಾದೇವನೇ
ದೂಡಿಕಂಡೆ ಹೋಯ್ತಾರೇ - ಮಾದೇವನೇ
ಯವ್ವೆ ಅಣ್ಣನ ಬಳಿಗೆ ಹೋಗೀ - ಮಾದೇವನೇ
ಅಣ್ಣನಿಗೆ ಕೈಯೆತ್ತಿ ಮುಗುದಾಳೂ - ಮಾದೇವನೇ
ಅಣ್ಣ ಗಂಡನ ಕಡಿಯಾದಾ - ಮಾದೇವನೇ
ನನ್ನ ಕಣ್ಣಲ್ಲಿ ನೋಡಲಾರೇ - ಮಾದೇವನೇ
ಯವ್ವೆ ಕಣ್ಣೀರ ಬುಡುತಾಳೇ - ಮಾದೇವನೇ
ಯವ್ವೆ ನಿರಿಗೋಳ ಮಾಡುತಾಳೇ - ಮಾದೇವನೇ
ದೊರಿಗೋಳ ಮಾಡುತಾಳೇ - ಮಾದೇವನೇ
ನಾನು ಮುತ್ತೈದೆ ಮೇಲಾಗಿ - ಮಾದೇವನೇ
ಅಣ್ಣ ಮುಂದಾಗ್ಲೇ ಸಾಯ್ತೀನೀ - ಮಾದೇವನೇ
ನನ್ನ ಕೊಂದೇ ಹೋಗಪ್ಪಾ - ಮಾದೇವನೇ
ಯವ್ವೆ ಹಾಡಿಕೊಂಡು ಅಳುತಾಳೇ - ಮಾದೇವನೇ

ಗಂಡನ ಕಡಿಯೋದು ಕಣ್ಣಲ್ಲಿ ನೋಡಾಕಾಗಾಕಿಲ್ಲಾ. ನಾನು ಮುತ್ತೈದೆ ಮೇಲಾಗಿ

ಮುಂದಾಗ್ಲೇ ಸತ್ತು ಮರಣವಾಗಿ ಕಣ್ಣಿಗೆ ಮರೆಯಾಗತ್ತೀನಿ. ಗಂಡಯ್ಯಾ, ನನ್ನ ಕೊಂದು ಹೋಗು ಅಂತಾ ಕಣ್ಣೀರು ಬಿಟ್ಟು ಅಣ್ಣಗೆ ಕೈಮುಗಿಯುತ್ತಾಳೇ. ತಂಗೆ ಮಕ ನೋಡಿ ರಾವಾಗಿ ಎಲಾ ಮುಂಡೇ ನನ್ನ ಗಂಡನ ಕೊಟ್ರೆ ನನ್ನ ಎದೆ ಮೇಲೆ ಕುರವು ಎಕ್ಕದಕಾಯಿ ಅಂತೇಳಿ ಹೆಣ್ಣಿಂಗಸಾಗಿ ನನ್ನಂತಾ ಗಂಡಸಿನ ಮ್ಯಾಲೆ ನೀನು ಎದೆ ಬಡಿದೆಯಲ್ಲಾ? ಮಾರಿ ಮುಂದೆ ಕ್ವಾಣದ ಕಡಿದಂಗೇ -

ನಿನ್ನ ಮುಂದೆ ನಿನ್ನ ಗಂಡನ ಕಡೀತೀನಿ ॥ ತಂ ॥
ಇವುರು ಹೊಡಕಂಡು ಹಿಡಕಂಡು ದೂಡಿಕಂಡೆ ಹೋಗುತಾರೇ ॥ ತಂ ॥
ಯವ್ವೇ ಕಣ್ಣೀರ ಬುಡುತಾಳೇ ಗಿರಿಗೋಳ ಮಾಡುತಾಳೇ ॥ ತಂ ॥

ನನ್ನ ಗಂಡನ ಕಡಿಯುತ್ತಾನೇ ನನ್ನ ಮುಂದೇ. ನನ್ನ ಕಣ್ಣಲಿ ನೋಡಲಾರೇ. ಎಂಗೆ ನೋಡಲಿ ಶಿವನೇ? ಮುತ್ತೈದಿ ಮೇಲಾಗಿ ಮುಂದಾಗ್ಲೇ ಸತ್ತು ಬಿಡುಬೇಕು ಯಾವಲೆಕ್ಕದಲ್ಲಿ ಸಾಯಲಿ ಅಂದರೇ ಅಣ್ಣನಾ ದಂಡಿನಮ್ಯಾಲೆ ಯುದ್ಧಕ್ಕೆ ನುಗ್ಗಿದ್ರೇ ಹೆಣ್ಣಿಂಗಸಾಗಿ ನನ್ನ ಮ್ಯಾಲೆ ಯುದ್ಧಕೆ ಬಂದಳು ಅಂತೇಳಿ ಅಣ್ಣನ ದಂಡು ನನ್ನನ್ನು ಕೊಲ್ಲುತ್ತಾರೇ.

ಆಗ ಮುತ್ತೈದೆ ಮೇಲಾಗಿ ಮುಂದಾಗ್ಲೇ ಸಾಯ್ತೀನೀ ॥ ತಂ ॥
ನಾನು ಮುತ್ತೈದೆ ಮೇಲಾಗಿ ಮುಂದಾಗ್ಲೇ ಸಾಯತೀನೀ ॥ ತಂ ॥

ಅಣ್ಣನ ದಂಡಿನ ಮ್ಯಾಲೆ ಯುದ್ಧಕ್ಕೆ ನುಗ್ಗಬೇಕು ಅನ್ನೋದಾಗೀ ಮನಸು ಮಾಡತಾವ್ಳಲ್ಲೋ ಶಿವನೇ -

ಬಂದುದೆಲ್ಲ ಬರಲಪ್ಪಾ ದಮ್ಮಯ್ಯಾ*
ನನಗೆ ಶಿವನೇ ಭಗವಂತನ ದಯುವೆ ಇರಲಯ್ಯಾ
ತಂದೇನಾನ ತಂದೆನ ತಾನ ತಂದನ್ನಾ
ತಾನಂದನ್ನ ತಂದೇನಾನ ತಾನಂದನ್ನ ತಾನಾ
ಇದ್ದುದೆಲ್ಲ ಇರುಲಪ್ಪ ದಮ್ಮಯ್ಯೋ
ನನಗೇ ಶಿವನೇ ಈಸ್ಪುರುನ ವರವೇ ಇರಲಯ್ಯಾ
ತಂದೇನಾನ ತಂದೆನ ತಾನ ತಂದನ್ನಾ
ತಾನಂದನ್ನ ತಂದೇನಾನ ತಾನಂದನ್ನ ತಾನಾ
ಬಣ್ಣದಾಕತ್ತಿ ಬಲಗೈಲಿಡಕಂಡೂ
ಅಣ್ಣನಾ ದಂಡಿಗೇ ಹಾರುತಾಳೇ ಹುಲ್ಲೇ ಮರಿಯಾಗೀ
ತಂದೇನಾನ ತಂದೆನ ತಾನ ತಂದನ್ನಾ
ತಾನಂದನ್ನ ತಂದೇನಾನ ತಾನಂದನ್ನ ತಾನಾ
ಹಾರುತಾಳೇ ಹುಲ್ಲೇ ಮರಿಯಾಗೀ
ಅಣ್ಣನಾ ದಂಡಿಗೇ ಹಾರೀ ಇದ್ದಕ್ಕೆ ನಿತಂವಳೇ
ತಂದೇನಾನ ತಂದೆನ ತಾನ ತಂದನ್ನಾ
ತಾನಂದನ್ನ ತಂದೇನಾನ ತಾನಂದನ್ನ ತಾನಾ

* ಇಲ್ಲಿ ಹಾಡಿನ ಧಾಟಿಯನ್ನು ಬದಲಾಯಿಸಿ ಹಾಡುವರು

ಭೂಮಿತಾಯಿ ಸಾಕಾರ ಇವಿಳೀಗೇ
ಆಗ ಶಿವನೇ ಭಗುವಂತನ ಸಾಕಾರ ಇವುಳಿಗೇ
ತಂದೇನಾನ ತಂದೆನ ತಾನ ತಂದನ್ನಾ
ತಾನಂದನ್ನ ತಂದೇನಾನ ತಾನಂದನ್ನ ತಾನಾ

ಇವ್ಳಿಗೆ ಭೂಮುತಾಯಿ ಸಾಕಾರಾ. ಅಲ್ಲಿ ಭಗವಂತನ ಸಹಕಾರ ಇವಳಿಗೇ. ಇವ್ಳು ನುಗ್ಗೋ ರಾವಿಗೇ ಭೂಮಿತಾಯಿ ಸಾಕಾರದಲ್ಲಿ ಭಗವಂತನಾ ಸಾಕಾರದಲ್ಲೀ ಅಣ್ಣನಾ ದಂಡು ಬಂದು ಯುದ್ಧಕ್ಕೆ ನಿಂತವರೇ -

ಇತ್ತೊಂದು ಬೀಸ ಬೀಸುತಾಳಲ್ಲೋ
ಅಣ್ಣನಾ ದಂಡು ಒಂದು ಸಾವಿರಾ ದಂಡೇ ಮಡುದಾದೇ ॥ ತಂ ॥
ಭಗವಂತನಾ ಸಾಕಾರ ಇವಳೀಗೇ
ಅಣ್ಣನಾದಂಡು ಬೆಕ್ಕುಬೆರಗಾಗಿ ನಿಂತೇ ಅವರಲ್ಲೋ ॥ ತಂ ॥
ಕುರಿಯಾ ಹಿಂಡಿಗೇ ತ್ವಾಳಾ ನುಗ್ಗಿದಂಗೇ
ಅಣ್ಣನ ದಂಡಾ ಬಾಳ ನಾಶಾ ಮಾಡುತಾಳಲ್ಲೋ
ಆನೆ ಮೇಲೆ ತಾ ಆನೆ ಕಡುದಾಳೋ
ಅಣ್ಣನ ದಂಡಾ ಒಂಟೆ ಮೇಲೆ ತಾ ಒಂಟೆ ಕಡುದಾಳೋ ॥ ತಂ ॥
ಅತ್ತೊಂದು ಬೀಸ ಬೀಸುತಾಳಲ್ಲೋ
ಅಣ್ಣನಾ ದಂಡು ಐದುಸಾವರ ದಂಡೆ ಮಡುದಾವೇ ॥ ತಂ ॥

ಐದು ಸಾವರ ದಂಡು ಮಡುದಾವೇ
ಒಂದು ತೊಡೆಯುದ್ದ ರಗುತಾ ಹರಿತಾದೇ
ಹಾರಿಹಾರಿತಾ ಯಿದ್ಧ ಮಾಡುವಾಗಾ
ಬೆನ್ನುಮ್ಯಾಗಳು ಮೊಗ ಕಸುಗಂಡೂ
ರಗುತದ ಕೋಡಿ ಒಳಿಕ್ಕೆ ಬೀಳುತಾದೋ ॥ ತಂ ॥
ಬೆನ್ನುಮ್ಯಾಲೆ ಮೊಗ ಕಟ್ಟಿಗಂಡೂ
ಯುದ್ಧಕ್ಕೆ ನಿಂತಿದ್ಲಲ್ಲೋ ದಮ್ಮಯ್ಯಾ
ಬೆನ್ನುಮ್ಯಾಗಳ ಮೊಗಾ ಕಸುಗಂಡು-
ರಗುತದ ಕೋಡಿ ಒಳಕ್ಕೆ ಬೀಳುತ್ತಾದೇ
ದಂಡು ಕೊಲ್ಲೋ ರಾವು ಶಿವ ಶಿವೋ
ಇವಳಿಗೆ ಮೊಗ ಬಿದ್ದುದು ಗೊತ್ತೆ ಇಲ್ಲುವಲ್ಲೋ ॥ ತಂ ॥

ದಂಡು ಕೊಲ್ಲೋರಾವು, ದಂಡು ಕೊಲ್ಲರೊಚ್ಚಿನಲ್ಲೀ ಬೆನ್ನುಮ್ಯಾಗಳ ಮೊಗ ರಕ್ತದ ಕೋಡಿ ಒಳಕ್ಕೆ ಕಸುಗಂಡೂ ಬಿದ್ದುದ್ದೂ ಇವ್ಳಿಗೆ ಆರುವಾಗನಿಲ್ಲಾ .

ಆರು ಸಾವ್ರರ ದಂಡೇ ಮಡುದಾದೇ
ದಂಡಿನಾ ರಗುತಾ ತೊಡಿಉದ್ದವಾ ಹರಿಯತಾದಲ್ಲೋ ॥ ತಂ ॥

ರಗುತದ ಕೋಡಿ ಒಳಗೇ ಶಿವ ಶಿವಾ
ಇವ್ಳ ಮೊಗ ಮುಣಗಿ ಮುಣಗೀ ಏಳುತಾದಲ್ಲಾ ॥ ತಂ ॥

ಮುಳಗಿ ಮುಳಗಿ ಏಳುತ್ತಾದೇ. ಒಂದು ಹೆಣಾ ಸಿಕ್ಕುತು. ಹೆಣ್ಣಿನ ಮ್ಯಾಲೆ ಒಂದು ಮೊಗಾ ಸೊಪ್ಪಾಗಿ ಮನಗ್ತೊ.

ದಂಡು ಕೊಲ್ಲೊರಾವೀನ ಒಳಗಲ್ಲೋ
ಶಿವಶಿವಾ ದಂಡು ಕೊಲ್ಲೊ ರೊಚ್ಚಿನ ಒಳಗಲ್ಲೋ ॥ ತಂ ॥
ದಂಡೀನು ಮ್ಯಾಲೆ ಧ್ಯಾನುವಲ್ಲೋ
ಇವ್ಳೀಗೆ ಮಗೀನ ಮ್ಯಾಲೆ ಧ್ಯಾನ ಇಲುವಲ್ಲೋ ॥ ತಂ ॥
ಆರು ಸಾವರ ದಂಡೇ ಮಡುದಾದೇ
ಅಣ್ಣನಾ ದಂಡು ಹದ್ದುಕಾಗೆ ಮಾರಿಹಬ್ಬವಾಗ್ಯಾದೋ ॥ ತಂ ॥
ಹದ್ದು ಕಾಗೆ ಮಾರ್ಯಬ್ಬ ಆಗ್ಯಾದೋ
ಅಣ್ಣನಾ ದಂಡೂ ದಂಡಿನಾ ರಗುತಾ
ನಾಯಿ ನರಿಗೆ ದೊರಿತಾನಾ ಆಗ್ಯವೋ
ಆರು ಸಾವಿರ ದಂಡೇ ಮಡುದಾದೇ
ಏಳು ಸಾವ್ರ ದಂಡಿನಲ್ಲಿ ಒಂದು ಸಾವರ ದಂಡೆ ಉಳದಾದೋ ॥ ತಂ ॥

ಆರು ಸಾವರ ದಂಡು ಹೊಡದು ಒಂದು ಸಾವರ ದಂಡೆ ಉಳದಾದೇ. ಅಣ್ಣಂಗೆ ಯೋಚ್ನೆ ಬಂದೋಯ್ತು. ಮಂತ್ರಿ ಸೇನಾಧಿಪತಿಗಳಿರಾ. ಆರುಸಾವರ ದಂಡು ಮಡದು ಹೋಗ್ಯಾದೇ. ಇನ್ನು ಒಂದು ಸಾವರ ದಂಡು ರಣಸೂರೆ ಮಾಡಿ ಒಂಟೋಗುತಾಳೇ. ನಾವೇ ಸೋತ್ವು ಅಂತೇಳಿ ಬಾವುಟ ಏರಿಸಿರಪ್ಪಾ ತಂಗ್ಯಮ್ಮಾ ಯುದ್ಧದ ಕೈ ನಿಲಿಸಮ್ಮಾ ಅಂತೇಳೀ -

ಸೋತೆ ಅಂತಾವಾ ಬಾವುಟ ಏರಿಸ್ಯವನೋ
ಶಿವಶಿವ ಬಾವುಟ ನೋಡೀ
ಯುದ್ಧದ ಕೈಯಾ ನಿಲುಸುತಾಳಲ್ಲೋ ॥ ತಂ ॥
ಮಗೀನ ಮ್ಯಾಲೆ ಗ್ಯಾನ ಇಲುವಲ್ಲೋ
ಇವ್ಳೀಗೆ ಗಂಡನ ಮ್ಯಾಲೆ ಧ್ಯಾನುವಲ್ಲೋ ॥ ತಂ ॥

ಸೋತೆ ಅನ್ನೋ ಬಾವುಟ ನೋಡಿದ ಗಳಿಗೆಲ್ಲೀ ಮಗೀನ ಮ್ಯಾಲೆ ಗ್ಯಾನಿಲ್ಲಾ. ಗಂಡನ ಮ್ಯಾಲೆ ಧ್ಯಾನ. ಎಡಕ್ಕೇ ಬಲಕ್ಕೇ ತಿರುಕ್ಕಂಡು ನೋಡುತ್ತಾಳೇ

ಗಂಡನಾದರೆ ಕಣ್ಣಿಗೆ ಕಂಡಾನೋ
ಗಂಡನ ತೆಗೆದು ಕೈಗೆತ್ತೀ ಕುದುರೀಗೆಸ್ದಾಳೋ ॥ ತಂ ॥
ಗಂಡನ ಬಾಚಿ ಕುದುರೀಗಾಕ್ಕಂಡೊ

ಗಂಡನ ಮ್ಯಾಗಳ ಧ್ಯಾನ, ದಂಡು ಕೊಂದ ರಾವು, ಮಗಾ ಮರ್ತು ದಡಾ ತಗಂಬಂದ್ಲೆಲ್ಲೋ ಶಿವನೇ.

ಇಲ್ಲಿ ಆರು ಸಾವಿರ ದಂಡು ಮಡಿದುಹೋಗ್ಯಾವೇ ಮಂತ್ರಿ ಸೇನಾಧಿಪತಿಗಳಿರಾಯಾವ

ಪ್ರಾಣೆ ಉಳಿಯುತ್ತಾವೇ, ಆ ಪ್ರಾಣೆಯನ್ನ ಹುಡಿಕ್ಯಾಡಿ ನೋಡೀ ತಗಳಿರಯ್ಯಾ. ಉಳಿಯುವಂತಾ ಪ್ರಾಣೆ ಹುಡಿಕ್ಯಾಡಿ ನೋಡುವಾಗ ದಂಡಿನೊಳಗೇ, ಧೂಪಾರ್ತಿ ಕಂದಯ್ಯಾ, ಒಂದು ಹೆಣೆನ ಮ್ಯಾಲೆ ಹೆಣಾ ತಬ್ಬಿಕಂಡು ಮಲಿಗ್ಯಾದೇ, ಸೊಪ್ಪಾಗ್ಯಾದೇ -

ಇವ್ವಕಂದ ಈಗ ಕಣ್ಣಿಗೆ ಕಂಡನಲ್ಲೋ
ಕಂದನಾ ನೋಡಿ ಏನ ನುಡಿಯಾ ನುಡಿಯುತಾನೋ ॥ ತಂ ॥

ಮೊಗಾ ನೋಡಿ ಏನು ನುಡಿ ನುಡಿಯುತ್ತಾನೇ. ಮಂತ್ರಿ ಸೇನಾಧಿಪತಿಗಳಿರಾ. ನನ್ನ ತಂಗಿ ಮುಂಡೇ, ಗಂಡನಾ ಉಳಿಸಿಗಂಡೂ, ದಂಡೂ ಕೊಂದೇ ಅನ್ನೋ ಸಿರಿಬಂದೂ

ದಂಡು ಕೊಂದು ಸಿರಿ ಬಂದೂ ನನ ತಿಂಗೀ
ಶಿವಶಿವಾ ಮಗುವ ಮರತೋಗ್ಯವಳಲ್ಲೋ ॥ ತಂ ॥
ದಂಡು ಕೊಂದು ಸಿರಿಬಂದೂ ಮಂತಿರೀ
ನನ ತಂಗೀ ಮಗುವಾ ಮರತು ಓಗ್ಯವಳಲ್ಲಾ? ॥ ತಂ ॥

ಮಗ ಹಿಡಿಕಂಡು ಮಡಿಕೇರಿಗೆ ನಡೀರಿ. ಮುಂದೆ ಏನು ಕಥೆಯಾಗುತ್ತಾದೋ ನೋಡೋಣ. ಮೊಗಾ ತಗೊಂಡೋಗಿ ಮಡಿಕೇರಿಗೆ ಇಟಕತ್ತಾರೇ. ಗಂಡನ ತಕಂಬಂದು ಮನೇ ಒಳಗೇ ರಾವಿನಲ್ಲಿ ರೊಚ್ಚಿನಲ್ಲಿ ಇದ್ಧಾ ಮಾಡುವಾಗ ಮೈತುಂಬಾ ರಗುತಾ ಆಗ್ಯಾದೇ. ಗಂಡನಾ ಮೈತೊಳದೂ ಇವ್ವೂ ಮೈತೊಳಕಂಡಳು. ಅಷ್ಟೊತ್ತುವರೆಗೂ ಮಗೀನ ಮ್ಯಾಲೆ ಗ್ಯಾನಿಲ್ಲ ಇವಳಿಗೇ. ಮಗೀನ ಮೈತೊಳಿಯೋದಕ್ಕೆ ಧ್ಯಾನ ಮಾಡುತ್ತಾಳೇ -

ಆಗ ಮಗೀನ ಮ್ಯಾಲವಳ ಧ್ಯಾನ - ಮಾದೇವನೇ
ಶಿವನೇ ಆಗ ಬಂತಲ್ಲೋ - ಮಾದೇವನೇ
ಎಲ್ಲೀ ನನ್ನಾ ಕಂದಾ ? - ಮಾದೇವನೇ
ನನ್ನ ಧೂಪಾರತಿ ಕಂದಯ್ಯನೇ - ಮಾದೇವನೇ
ಶಿವನೇ ಎಲ್ಲೋ ನನ್ನಾ ಕಂದಾ ? - ಮಾದೇವನೇ
ಶಿವನೇ ಕಣ್ಣೀರ ಬುಡುತಾಳೇ - ಮಾದೇವನೇ
ಯವ್ವ ನಿರಿಗೋಳ ಮಾಡುತಾಳೇ - ಮಾದೇವನೇ
ಅಯ್ಯಾ ಹಾಡಿಕೊಂಡು ಅಳುತಾಳೇ - ಮಾದೇವನೇ
ಯವ್ವೇ ನಿರಿಗೋಳ ಮಾಡುತಾಳೇ - ಮಾದೇವನೇ
ನನ್ನ ದಂಡು ಕೊಲ್ಲೋ ರಾವಿನಲ್ಲೀ - ಮಾದೇವನೇ
ನಾನು ದಂಡು ಕೊಲ್ಲೋ ರಾವಿನಲ್ಲೀ - ಮಾದೇವನೇ
ನಾನು ದಂಡು ಕೊಲ್ಲೋ ರೊಚ್ಚಿನಲ್ಲೀ - ಮಾದೇವನೇ
ನನ್ನ ಮಗನ ನಾ ಕೊಂದೆನೇನು ? - ಮಾದೇವನೇ

ದಂಡು ಕೊಲ್ಲೋ ರಾವಿನಲ್ಲಿ, ದಂಡು ಕೊಲ್ಲೋ ರೊಚ್ಚಿನಲ್ಲಿ, ಎಡಕೇ ಬಲಕೇ ತಿರುಗಿ ರಾವಿನಲ್ಲಿ ಯುದ್ಧಮಾಡುವಾಗಾ ನನ್ನ ಬೆನ್ನುಮ್ಯಾಗಳ ಮಗಾ-

ನನ್ನ ಕತ್ತೀಯ ಬಾಯೀಗೆ - ಮಾದೇವನೇ

ಶಿವನೇ ನನ್ನ ಮಗ ಸಿಕ್ಕವ್ನೆ - ಮಾದೇವನೇ
ಆಗ ಮರಣ ಹೊಂದವನೆ - ಮಾದೇವನೇ
ನಾನು ಸಾಕೀದ ಕೈನಿಂದ - ಮಾದೇವನೇ
ನನ್ನ ಮಗನ ನಾ ಕೊಂದುನಲ್ಲೇ - ಮಾದೇವನೇ
ಶಿವನೆ ಕಣ್ಣೀರ ಬುಡುತಾಳೇ - ಮಾದೇವನೇ
ಯವ್ವೆ ನಿರಿಗೋಳ ಮಾಡುತಾಳೇ - ಮಾದೇವನೇ
ಯವ್ವೇ ದೊರಿಗೋಳ ಮಾಡುತಾಳೇ - ಮಾದೇವನೇ
ನನ್ನ ಮಗನ ನಾ ಸಾಯ್ಸುವಾಗಾ - ಮಾದೇವನೇ
ನನ್ನ ಮಗನ ನಾ ಸಾಯ್ಸುಬಂದೇ - ಮಾದೇವನೇ
ನಾನು ಯಾವ ಕೈಲಿ ಹಾಲುಬುಡ್ಲೀ ? - ಮಾದೇವನೇ
ನಾನು ಹಾಲು ಉಯ್ಯೋ ಕೈಲೀ - ಮಾದೇವನೇ
ನನ್ನ ಮಗನ ನಾ ಕೊಂದುಬಂದೇ - ಮಾದೇವನೇ
ಶಿವನೇ ಕಣ್ಣೀರ ಬುಡುತಾಳೇ - ಮಾದೇವನೇ
ಅಯ್ಯಾ ಸಿರಿಗೋಳ ಮಾಡುತಾಳೇ - ಮಾದೇವನೇ
ಅಯ್ಯಾ ದೊರಿಗೋಳ ಮಾಡುತಾಳೇ - ಮಾದೇವನೇ
ಅಯ್ಯಾ ಹಾಡಿಕೊಂಡು ಅಳುತಾಳೇ - ಮಾದೇವನೇ

ಮಗೀನ ಧ್ಯಾನದಲ್ಲಿ ಮಕಾಡೆ ಮನೀಕಂಡಳೂ. ಮಡಿಕೇರಿ ಒಳಿಕ್ಕೇ ಮಗನನ್ನು ತಗಂಡು ಹೋಗಿ ಅಣ್ಣಾ ಮಗೀನ ಚಂದ ನೋಡುತ್ತಾನೇ. ಮಗೀನ ರೂಪು ನೋಡುತ್ತಾನೇ. ಮಂತ್ರಿ ಸೇನಾಧಿಪತಿಗಳಿರಾ. ಅಪ್ಪಾ ಮಗ ಎಲ್ಲಾ ಒಂದೆ ಚೆಂದಾ, ಒಂದೇ ರೂಪು -

ಅಪ್ಪನ ರಗುತಾ ಮಗನ ರಗುತವೆಲ್ಲಾ ಒಂದೇ
ಅರುಮನೆಗೆ ಅಪ್ಪನಾ ಕಡುದಾರೇನು ಮಗನಾ ಕಡುದಾರೇನೂ* ॥ ತಂ ॥
ತಂದೇ ಕಂದಾ ಒಂದೇ ಚಂದುವಲ್ಲೋ ॥ ತಂ ॥
ಕಂದಾನ ಹಿಡಿರಯ್ಯ ಅರಮನಿಗೆ ಕಡಿಯಾಣಾ ॥ ತಂ ॥
ಮೊಗುವಾ ಕಡಿಯಾಕೆ ಮನಸಾ ಮಾಡಿದನಲ್ಲೋ ॥ ತಂ ॥
ಶಿವ್ನೆ ಕಂದಾನ ಕಡಿಯಾಕೆ ಮನಸಾ ಮಡಾದುನಲ್ಲೋ .॥ ತಂ ॥

ಇಲ್ಲಿ ಕಂದನ್ಹೆತ್ತ ತಾಯಿ ತಂದೇ ಕಂದಾನ ನೆನುಕಂಡು ಮಾಕಾಡೆ ಮನಿಗ್ಯೆವ್ರೆ ॥ ತಂ ॥
ಅಲ್ಲಿ ಕಂದಾನ ಕಡಿಯಾಕೆ ಮನಸಾಮಾಡಾತಾರೇ ॥ ತಂ ॥

ಮಗಾ ಕಡಿಯಾದಿಕ್ಕೆ ಆನೆಮ್ಯಾಲೆ ಅಂಬಾರಿ ಹಾಕೀ, ಅಂಬಾರಿಮ್ಯಾಲೆ ಮಗಾ ಕೂರಿಸೀ, ಮಗಾ ಅರಮನೆಗೆ ಬಲಿ ಕಡಿಯಾಕೇ -

ಮಡಿಕೇರಿ ಒಳುಗೆಲ್ಲಾ ಮೆರವಣಿಗೆ ಮಾಡುತಾರೇ ॥ ತಂ ॥
ಮೆರವಣಿಗೆ ಮಾಡಿಕಂಡು ಅರಮನೆ ಮುಂದಕೇ ತಂದು ನಿಲಿಸ್ಯವರಲ್ಲೋ ॥ ತಂ ॥
ಅರಮನೆ ಮುಂದುಕೆ ತಂದು ನಿಲಿಸ್ಯವರಯ್ಯಾ ॥ ತಂ ॥

ಅರಮನೆ ಮುಂದುಕೆ ತಂದು ನಿಲಿಸೀ, ಮೊಗಾ ಕಡಿಯೋದಿಕ್ಕೇ -

ಸಾಣೆಕಲ್ಲಿನ ಮ್ಯಾಲೆ ಕತ್ತೀ ಮಸಿಯಾತಾರೇ ॥ ತಂ ॥
ಅಯ್ಯಾ ಪಾಣೆಕಲ್ಲಿನ ಮ್ಯಾಲೆ ಕತ್ತೀ ಮಸಿಯಾತಾರೇ ॥ ತಂ ॥
ಶಿವನೇ ಕತ್ತೀಯ ಮಸಿಯೋದ ಕಂದಯ್ಯ ನೋಡುತಾನೇ ॥ ತಂ ॥
ಕತ್ತೀಯ ಮಸಕೊಂಡು ಕಂದನ ಮುಂದುಕು ಬಂದೂ ॥ ತಂ ॥
ಅರಮನೆಗೆ ಕೈಯೆತ್ತಿ ಮುಗಿಯಪ್ಪಾ ಅನುತಾರೇ ॥ ತಂ ॥
ಕಂದಯ್ಯ ಕೈಯೆತ್ತಿ ಅರಮನೆಗೆ ಮುಗುದಾನೋ ಶಿವ ಶಿವಾ ॥ ತಂ ॥
ಅರಮನೆಗೆ ಭೂಮಿಗೇ ಬಗ್ಗೀ ನೀ ಅಡ್ಡೂ ಬೀಳಯ್ಯ ॥ ತಂ ॥
ಅರಮನೆಗೆ ಭೂಮಿಗೇ ಬಗ್ಗೀ ಅಡ್ಡೂ ಬೀಳೋವಾಗಾ ॥ ತಂ ॥

ಅಯ್ಯೋ ಶಿವ ಶಿವಾ, ಭೂಮಿಗೆ ಬಗ್ಗೀ ಅರಮನೆಗೆ ಅಡ್ಡಬೀಳು ಅನ್ನುತ್ತಾರೇ. ನಮಸ್ಕಾರ ಮಾಡು ಅನ್ನುತ್ತಾರೇ. ಅರಮನುಗೆ ಕೈಮುಗದೂ ಅರಮನುಗೆ ನಮಸ್ಕಾರ ಮಾಡೋದಕ್ಕೆ ಭೂಮಿಗೇ ಕಂದ ಬಗ್ಗಿದಾ -

ಕತ್ತಿ ಎತ್ತೀ ಶಿವನೇ ಶಿರಕ್ಕೇ ಬುಟ್ಟವರಲ್ಲೋ ॥ ತಂ ॥
ಕತ್ತಿ ಎತ್ತೀ ಕಂದನ ಶಿರಕೇ ಬುಟ್ಟವರಯ್ಯೋ ॥ ತಂ ॥

ಮಗೀನ ಶಿರ, ಶಿರ ಅರದ ತುಂಡಾಯಿತೂ, ಮ್ಯಾಳೆ ಉಳದಾದೇ -

ಮ್ಯಾಳೇ ಮಾತಾಡುತ್ತಾದೇ* - ಕಲ್ಯಾಣದೇವಾ
ಮ್ಯಾಳನೇ ಮಾತಾಡುತ್ತಾದೇ - ಕಲ್ಯಾಣದೇವಾ
ತಡಿರಪ್ಪಾ ಕಡಿಬ್ಯಾಡೀ - ಕಲ್ಯಾಣದೇವಾ
ನನ್ನ ಕೊಂದರೂ ಚಿಂತೆಯಿಲ್ಲಾ - ಕಲ್ಯಾಣದೇವಾ
ನಾನು ಅರಮನೆಗೆ ಬಲಿಯಾಗುತೀನೀ - ಕಲ್ಯಾಣದೇವಾ
ನನ್ನ ತಾಯಿ ತಂದೆ ತೋರಯ್ಯೋ - ಕಲ್ಯಾಣದೇವಾ
ನನ್ನ ತಂದೆ ತಾಯೀಯ ನೋಡೀ - ಕಲ್ಯಾಣದೇವಾ
ಅರಮನಿಗೆ ಬಲಿಯೆ ನಾನಾಗುತೀನಿ - ಕಲ್ಯಾಣದೇವಾ
ಮ್ಯಾಳೆ ಮಾತಾಡುತಾದೋ - ಕಲ್ಯಾಣದೇವಾ
ಅಯ್ಯಾ ನಿರಿಗೋಳ ಮಾಡುತಾದೇ - ಕಲ್ಯಾಣದೇವಾ
ಪಾಡಾಡಿ ಪಾಡಾಡಿ ತಾಯಿ ತಂದೆ ನೆನವರಿಕೆಯಲ್ಲಿ
ಪಾಡಾಡಿ ಪಾಡಾಡಿ ಅರಮನೆ ಮುಂದುಗಡೆ ನೆನವರಿಕೆಯಲ್ಲಿ
ಮಗ ಮರಣವಾದ್ನಲ್ಲೋ ಶಿವನೇ.
ಮಗೀನ ಬಲಗಾಲ ಕೂದೂ ಬಾಯಿಗೆ ಕೊಟ್ಟವರಲ್ಲೋ* ॥ ತಂ ॥
ಕಂದನ ಬಲಗಾಲ ಕುಯ್ತಾರೆ ಬಾಯಿಗೆ ಕೊಟ್ಟವರಲ್ಲೋ ॥ ತಂ ॥
ಅಯ್ಯಾ-ರಗುತಾವ ತಗುದು ಬಲಿಯ ಚಲ್ಲಿದುರಲ್ಲೋ ॥ ತಂ ॥
ಕಂದಾನ ಅರುಮನೆಗೆ ಬಲಿಯ ಕೊಟ್ಟವರಲ್ಲೋ. ॥ ತಂ ॥

* ಹಾಡಿನ ಧಾಟಿ ಹಾಗೂ ಸೊಲ್ಲಿನ ಬದಲಾವಣೆ
* ಹಾಡಿನ ಧಾಟಿ ಹಾಗೂ ಸೊಲ್ಲಿನ ಬದಲಾವಣೆ

ಬಲಿ ಕೊಟ್ಟಾದ ಮ್ಯಾಲೇ, ಮತ್ತೇನು ಗ್ಯಾನ ಮಾಡುತ್ತಾನೇ. ನನ್ನಾ ಮಂತ್ರಿ ಸೇನಾಧಿ ಪತಿಗಳಿರಾ ನನ್ನಾ ತಂಗೇ, ಹೆಣ್ಣು ಹೆಂಗಸಾಗೀ ನನ್ನಂತಾ ಗಂಡ್ಸಿನ ಮ್ಯಾಲೆ ಎದೆ ತಟ್ಟಿದಳು. ಏನಂತ ತಟ್ಟಿದ್ಲೂ ? ನನ್ನಾ ಗಂಡನ ಕೊಟ್ರೇ ನನ್ನಾ ಎದೆಯ ಮ್ಯಾಲಿನ ಕುರುಹು ಯಕ್ಕದಕಾಯಿ ಅಂತೇಳಿ ಎದೆತಟ್ಟಿ ಹೆಣ್ಣೆಂಗಸಾಗಿ ಅವ್ಳು ಆಟಾಗೆಲಿಸಿಕೊಂಡ್ಲೂ. ಅದೂ ಅಲ್ಲದೇ ಏಳು ಸಾವುರ ದಂಡೂ ಕೊಂದೂ ಅವಮಾನ ಮಾಡಿ ಅವ್ಳು ಹಟ ಗೆಲ್ಲಿಸಿಕೊಂಡ್ಳೂ. ಅವ್ಳು ಹಟ ಗೆಲ್ಲಿಸಿಕಂಡೊತ್ತಿಗೇ, ಕಡಿದ ಮಗುವನ್ನ -

ತಂಗೆ ಮನೆಗೆ ನಾವು ಮುಯ್ಯಾ ಕಳಸಾನಾ ॥ ತಂ ॥
ಕಡಿದಾ ಕಂದನ್ನ ತಂಗೆ ಮನೆಗೆ ಕಳುಸಾನಾ ॥ ತಂ ॥
ಅಯ್ಯಾ ಕಡಿದಾ ಮಗುವಾ ಬಂಗಾರ್ದ ಪೆಟುಗೇಲಿ ಕಡಿದೇ ತುಂಬಿದುನಲ್ಲೋ ॥ ತಂ ॥
ಯಾವ ಬಂಗಾರ್ದಗಡಿಗೆಗೆ ಬೀಗ ಮುದ್ದುರಿಕ್ಕಾಕಿ ॥ ತಂ ॥
ಬೀಗ ಮುದ್ದುರಿಕೆ ಮಾಡ್ಯವ್ನೆ ನಿಂಗರಾಜಾ ॥ ತಂ ॥
ಯಾವ್ವಾ ಗಡಿಗೇ ಮ್ಯಾಲೆ ಏನ ವಾಲೇಯ ಬರುದಾನೋ ? ॥ ತಂ ॥

ಗಡಿಗೇ ಮೇಲೆ ಏನಂತ ಬಣ್ಣದ, ಅಕ್ಷರ ಬರೆಸ್ತಾನೇ. ನನ್ನ ತಂಗೆ ನಿಂಗಮ್ಮಾ, ನನ್ನ ಗಂಡನ ಕೊಟ್ಟರೆ ಎದೆಯ ಮ್ಯಾಲೆ ಕುರುಹು ಎಕ್ಕದ ಕಾಯಿ ಅಂತ ಎದೆ ತಟ್ಟಿಗಂಡ್ಯಲ್ಲೇ ತಂಗೆ ? ಅದಕ್ಕೇ ನಿನ್ನ ಮನೆಗಿದು ಮುಯ್ಯೋ. ನನ್ನ ದಂಡು ಕೊಂದೂ ಹೆಣ್ಣು ಹೆಂಗಸಾಗಿ ನಿನ್ನಟಾ ಗೆಲ್ಲಿಸಿಕಂಡಿದ್ದಕ್ಕೇ, ಅದಕ್ಕೆ ನಿನ್ನ ಮನೆಗಿದು ಮುಯ್ಯಿ ಕಳಿಸ್ತೀನಿ.

ಇದಾ ಒಡದು ನೋಡೀ ತಂಗೇ ನೀನೂ ಸಂತೋಷ ಪಡೂ ॥ ತಂ ॥
ನೀನೂ ಒಡದು ನೋಡೀ ನೀನೂ ಸಂತೋಷ ಪಡುತಂಗೀ ॥ ತಂ ॥
ತಂಗೀಯ ಮನೆಗೆ ಮುಯ್ಯಾ ಕಳಸೂತಾನೇ ॥ ತಂ ॥
ಅಯ್ಯಾ ಮುಂದೇ ಕೋವೀ ಪಾರಾ ಹಿಂದೆ ಕತ್ತೀ ಪಾರಾ ॥ ತಂ ॥
ಆನೆ ಮ್ಯಾಲೆ ಬಂಗಾರ್ದ ಪೆಟ್ಟುಗೆಯಲ್ಲೋ ॥ ತಂ ॥
ಅಯ್ಯಾ ತಂಗೇಯ ಮನುಗೇ ತಂದು ನಿಂತವರಲ್ಲೋ. ॥ ತಂ ॥

ಇವ್ರು ಮಗಾ ನೆನಕಂಡು ಮಕಾಡೆ ಮನಗಿದ್ದೋರು ಮ್ಯಾಕೆದ್ರಲ್ಲಾ. ತಂಗೇ ಮನೆ ಬಾಗಲಿಗೆ ಬಂದೂ -

ಕೊಂಬೂ ಊದೂತಾರೇ ಕಾಳೆ ಹಿಡಿಯುತಾರೇ ॥ ತಂ ॥
ಯವ್ವಾ ಕೊಂಬಾ ಊದೀ ಕಾಳೆ ಹಿಡಿಯೂತಾರೇ ॥ ತಂ ॥

ಏನು ಮನೆ ಬಾಗಲಲ್ಲೀ ಕೊಂಬೂದಿ ಕಾಳೆಹಿಡೀತಾರಲ್ಲಾ ಅನ್ನಾದಾಗಿ ಮಕಾಡೆ ಮಲಗಿದ್ಯೋಳು ಮ್ಯಾಲಕ್ಕೆ ಎದ್ದು ನೋಡುತ್ತಾಳೆ. ಅಣ್ಣನ ದಂಡು ಬಂದು ತಿರುಗಿ ನಿಂತಾದೆ ಬಾಗಲಲ್ಲೀ. ಆಗಾ ಬಳದು ಕತ್ತಿ ತಗದುಕಂಡು ಬಲಗೈಲಿ ಹಿಡಕಂಡೂ ರಾವಿನಲ್ಲಿ ಬಾಕಿಲಿಗೆ ಬಂದು ನಿಂತುಕಂಡಾಗ. ಅಮ್ಮಾ ಅಮ್ಮಾ ಧರುಮದ ನಿಂಗಮ್ಮಾ, ನಿನ್ನ ಮೇಲೆ ಯಿದ್ದಕ್ಕೆ ನಾವು ಬಂದಿಲ್ಲಾ ಕಣವ್ವಾ, ನಿಮ್ಮಣ್ಣ ಏನೋ ಮುಯ್ಯಿ ಕಳಿಸವರೇ. ಆ ಮುಯ್ಯಾ ನಿನಗೆ ಕೊಡೋದಿಕ್ಕೆ ನಾವು ತಂದಿದ್ದೀವಿ.

ಅಣ್ಣನಾ ಮ್ಯಾಗಳು ಸಿಟ್ಟಾ ನಮ್ಮ ಮ್ಯಾಲೆ ಬಿಡುಬ್ಯಾಡಾ ॥ ತಂ ॥
ಬಂದಂತಾ ಜನವೆಲ್ಲಾ ಕೈಯೆತ್ತಿ ಮುಗುದಾರೋ ॥ ತಂ ॥

ಹಗ್ಯಾಡೋ ಅಣ್ಣಯ್ಯಾ, ಹಗೆಗಾರ ಅಣ್ಣಯ್ಯ , ನನಗೇನು ಮುಯ್ಯಿ ಕಳಿಸವನೇ? ನನಗೆ ಒಂದೂ ಗೊತ್ತಿಲ್ಲಾ. ಭಗವಂತಾ ಭೂಮಿತಾಯಿ ನಿನ್ನ ಸಹಕಾರ ನನಿಗೇ. ಹಗೆಗಾರ ಅಣ್ಣಯ್ಯಾ ಏನು ಕಳಿಸ್ಯವನೆ? ನನ್ಗೆ ಒಂದೂ ಗೊತ್ತಿಲ್ಲಾ. ನಾನು ಗಂಗುಸ್ತಾನಕ್ಕೆ ತಗಂಡು ಹೋಗೀ ಗಂಗುಸ್ತಾನದೊಳಗೆ ಬಂಗಾರದ ಪೆಟಿಗೆಯನ್ನಿಟ್ಟು ಪೂಜೆಮಾಡಿ ಭಗವಂತನ ಬೇಡಿ, ಭೂಮಿತಾಯಿಯನ್ನು ಬೇಡಿ, ನೋಡಬೇಕೂ ಏನಂತ ಬೇಡಬೇಕೂ ಅಂದರೇ ಅಣ್ಣ ನನಗೇ, ಹಗೆಗಾರ -

ಅಣ್ಣಾ ನನಗೆ ಪಾಷಾಣ ಕಳಿಸಿದರೂ ಪಂಚಾಮೃತವಾಗ್ಲೀ ತಂದನ್ನಾ...
ಅಣ್ಣ ನನಗೆ ಇಸುವ ಕಳಿಸಿದುರೂ ಅಮೃತವಾಗುಲಯ್ಯಾ ॥ ತಂ ॥
ಭಗವಂತನಾ ಶರಣು ಎತ್ತಿ ಪೂಜೆ ನಾ ಮಾಡುಬೇಕು ॥ ತಂ ॥
ಭೂಮಿತಾಯಿ ಸ್ಮರಣು ಎತ್ತಿ ಪೂಜೆ ನಾ ಮಾಡುಬೇಕು ॥ ತಂ ॥
ಹರಿಯಾಹಳ್ಳಕ್ಕೇ ಕೊಂಡೇಹೋಗೂತಾಳೇ ॥ ತಂ ॥

ಹರಿಯಾ ಹಳ್ಳಕ್ಕೆ ಕೊಂಡೋಗಿ ಗಂಗಸ್ತಾನದಲ್ಲಿ ಬಂಗಾರದ ಪೆಟಿಗೇನ ಮಡಗಿ, ನೀರು ಮಡಿ ಉಟ್ಟೊ ಭೂಮಿತಾಯಿಯನ್ನು ಶರಣು ಮಾಡೀ, ಭಗವಂತಗ ಕೈಯಿತ್ತಿ ಮುಗದು ಏನು ಬೇಡುತ್ತಾರೆ ಭಗವಂತನ್ನಾ? ಭಗವಂತಾ ಭೂಮಿತಾಯಿ ನನಗೆ ಹಗೆಗಾರ ನಮ್ಮಣ್ಣಾ, ಹಗ್ಗಾರಣ್ಣ ಏನ ಮುಯ್ಯಿ ಕಳಸವನೆ ಅನ್ನೋದು ನನಗೆ ಒಂದೂ ಗೊತ್ತಿಲ್ಲಾ ಭಗವಂತಾ, ಭೂಮಿತಾಯಿ. ಇದೂ ನಿಮ್ಮ ಸಹಕಾರ ನನಿಗೇ. ನಮ್ಮಣ್ಣಾ ನನಿಗೇ-

ಪಾಪಾಣ ಕಳಿಸಿದರೂ ಪಂಚಾಮುರುತವಾಗಲೀ ॥ ತಂ ॥
ಭೂಮಿತಾಯಿ ನನಿಗೆ ನೀನೇ ಸಹಕಾರಾ ॥ ತಂ ॥
ಭಗವಂತ ನೀನು ನನಿಗೇ ಸಹಕಾರಾ ॥ ತಂ ॥
ಭೂಮಿತಾಯಿ ಸ್ಮರಣು ಎತ್ತೀ ಭಗವಂತ್ನ ಸ್ಮರಣೆ ಎತ್ತೀ ॥ ತಂ ॥
ಯವ್ವಾ ಬಂಗಾರ್ದ ಪೆಟಿಗೇಯ ಪೂಜೇ ಮಾಡೂತಾಳೇ ॥ ತಂ ॥

ಇವುಳ್ಗೆ ಭಗವಂತ್ನ ಸಾಕಾರಾ, ಭೂಮಿತಾಯಿ ಸಾಕಾರಾ ॥ ತಂ ॥
ಭಗವಂತನ ದೃಷ್ಟಿ ಬಿತ್ತೋ ಭೂಮಿತಾಯಿ ದೃಷ್ಟಿಬಿತ್ತು ಇವಳಿಗೇ -

ಇವ್ಳು ಹೆಂಗೆ ಪೂಜೆ ಮಾಡುತಾಳೇ, ಮೊಗ ಅಂಗೇ ಜೀವ ಆಗೂತಾನೇ ॥ ತಂ ॥
ಇವ್ಳು ದೂಪುಗಾಳ ಹೆಂಗೆ ಕೊಡೂತಾಳೋ,
ದೂಪುದಾಳ ಹೋಗಿ ಶಿವಕಳೆ ಆಗೂತಾವೇ ॥ ತಂ ॥
ಇವ್ಳು ಮಾಡಿದಂತ ಧೂಪುದಾಳ ಜೀವಕಳಿ ಆಗೂತಾವೇ
ಬಂಗಾರ್ದ ಪೆಟ್ಟಿಗೇಲ್ಲಿ ಮಗುವೇ ಜೀವಾಗ್ಯವ್ನೇ ॥ ತಂ ॥
ಯವ್ವಾ ಜೀವಕಳೇನಾಗೀ ಮೊದಲೆಂಗೆ ಇದ್ದಾ ಅಂಗೇ ಆಗ್ಯವ್ನೇ ॥ ತಂ ॥
ಬಂಗಾರ್ದ ಪೆಟಿಗೇಲಿ ನಿದುರೇಲ್ಲಿ ಮನಗ್ಯವ್ನೋ. ॥ ತಂ ॥

ಪೆಟಿಗೇ ಪೂಜಸಿದ ಮ್ಯಾಲೇ ನಮ್ಮಣ್ಣ ನನಗೇನು ಕಳಿಸ್ವವ್ನೆ ನೋಡಬೇಕೂ ಅಂತಾ -

ಇವ್ವ ಹೆಂಗೆ ಬೀಗ ಬಿಚ್ಚುತಾಳೇ ಹಂಗೇ ಎಚ್ಚರುಕ್ಯಾದಾ ॥ ತಂ ॥
ಯವ್ವ ಹೆಂಗೆ ಬೀಗ ಬಿಚ್ಚುತಾಳೇ ಹಂಗೇ ಎಚ್ಚರುಕ್ಯಾದಾ ॥ ತಂ ॥

ಬೀಗ ಹೆಂಗೆ ಬಿಚ್ಚುತ್ತಾಳೇ ಹಂಗೆ ಎಚ್ಚರುಕ್ಯಾದಾ. ಬೀಗ ಬಿಚ್ಚುದ ಮ್ಯಾಲೇ ಪೆಟ್ಟಿಗೇ ಮುಸುಗಾ-

ಮುಸಗೆಂಗೆ ತಗೀತಾಳೇ ಹಂಗೇ ಕಣ್ಣ ಬುಡುತಾನೇ ॥ ತಂ ॥
ಇವ್ವ ಮುಸುಗೆಂಗೆ ಎತ್ತುತಾಳೇ ಹಂಗೇ ಕಣ್ಣ ಬಡುತಾನೇ ॥ ತಂ ॥
ತಾಯಿ ಕಣ್ಣಿಗೆ ಕಂದ ಚಿಲಿಪಿಲಿನೆ ನಗುತಾನೇ ॥ ತಂ ॥
ಧೂಪಾರ್ತಿ ಕಂದಯ್ನ ಬಾಚೀ ತಬೀಕಂದೂ ॥ ತಂ ॥
ಮಗನ ಬಾಚೀ ತಬ್ಬೀಕಂದು ಗದ್ದ ಮುದ್ದಾಡುತಾಳೇ ॥ ತಂ ॥
ಅಲ್ಲಿ ಬಂದಂತ ಜನುಕೆಲ್ಲ ಕೈಯೆತ್ತಿ ಮುಗುದಾಳೋ ॥ ತಂ ॥

ಬಂದ ಜನಕ್ಕೆಲ್ಲ ಕೈಯೆತ್ತಿ ಮುಗದೂ, ಬಂದ ಜನಯೆಲ್ಲಾನೂ ಮನೆಗೆ ಕರ್ಕ ಓಗೀ ಬಾಳಾ ಐಭೋಗವಾಗಿ ಅಡಿಗೆಯನ್ನು ಮಾಡಿಸಿ ಊಟಕ್ಕಿಕ್ಕೀ, ಅಣ್ಣಾ ಅಣ್ಣಾ ಮುಯ್ಯೀ ಕಳಿಸಿದ ಮ್ಯಾಲೆ ಅವ್ನಿಗೇ ನಾನೊಂದು ಮುಯ್ಯೀ ಕಳಿಸಬೇಕೂ ಅನ್ನೋದಾಗಿ ಧ್ಯಾನ ಮಾಡುತ್ತಾಳೇ. ಒಂಬತ್ತು ಜಾತಿ ಹಣ್ಣು ತತ್ತಾಳೇ. ಒಂಬತ್ತು ರಸಬಾಳೆ ಹಣ್ಣು, ಒಂಬತ್ತು ಕಸಿ ಮಾವಿನ ಹಣ್ಣು, ಒಳ್ಳೊಳ್ಳೇ ಜಾತಿ ಹಣ್ಣು. ಒಳ್ಳೊಳ್ಳೇ ಜಾತಿ ಹಣ್ಣು ಒಂಬತ್ತು ಒಂಬತ್ತು ತಂದೂ ಬಂಗಾರದ ಪೆಟ್ಟಿಗೆ ಒಳಕ್ಕೆ ತುಂಬಿ ಅಣ್ಣ್ಯಂಗೆ, ಬೀಗ ಹಾಕಿದ್ಹಾ ಅದೇ ಲೆಕ್ಕವಾಗಿ ಬೀಗಹಾಕೀ, ಪೆಟ್ಟಿಗೆ ಮ್ಯಾಲೆ ಏನಂತ ಬಣ್ಣದ ಅಕ್ಸಾರ ಬರೆಯುತ್ತಾಳೇ? ಅಣ್ಣಾ ನೀನು ಕಳಿಸಿದ್ದು ನನ್ನಾತ್ಮಕ್ಕೆ ಸಂತೋಸವಾಯಿತೂ.

ಈಗ ಹಣ್ಣಾ ನೀ ತಿನ್ನಣ್ಣಾ ತಣ್ಣಾಗೆ ಬದುಕಣ್ಣಾ ॥ ತಂ ॥
ಅಣ್ಣಾನ ಮನಿಗೆ ಹಣ್ಣು ಮುಯ್ಯಾ ಕಳುಸವ್ನೇ ॥ ತಂ ॥
ಅಣ್ಣಾನ ಮನಿಗೆ ಹೋಗಿ ಹಣ್ಣು ಮುಯ್ಯ ಕೊಟ್ಟುರಲ್ಲೋ ॥ ತಂ ॥

ಹ್ವಾದ ಜನುವೆಲ್ಲಾ, ಭಗವಂತನ ಧ್ಯಾನಮಾಡಿ ಭೂಮಿತಾಯಿ ಧ್ಯಾನಮಾಡಿ, ನಿನು ತಂಗೆ ಬಂಗಾರದ ಪೆಟ್ಟಿಗೆ ಪೂಜೆಮಾಡಿದ್ಲು. ಮೊಗ ಇಲ್ಲೆಂಗಿದ್ದ ಅಂಗೇ ಜೀವಕಳೆ ಆಗಿದ್ದ ಬಂಗಾರದ ಪೆಟಿಗೆಯೊಳಗೇ ಎಂದರು.

ಅಣ್ಣಾ ಧ್ಯಾನಮಾಡುತ್ತಾನೇ. ನನ್ನ ಮಡಿಕೇರಿ ಒಳಗೆ ನಾನು ಅರಮನೆ ಕಟ್ಟುವಾಗಾ ಮುರಿದು ಬೀಳೋದೂ. ದೋಸಿಗರಲ್ಲಿ ಕೇಳೋ ವೊತ್ತಿಗೆ ನಿನ್ನ ತಂಗೆ ಗಂಡನ ಬಲಿ ಕಡೀಬೇಕು ಅನ್ನೋದಾಗಿ ಹೇಳಿದ್ರು ಜೋಯಿಸಿಗ್ರು. ಬಲೀ ಕಡಿಸಿದ್ರೆ ನನ್ನ ತಂಗಿ ಮುಂಡೆ ಆಗೋಳು. ಅರಮನೆಗೆ ವೊಗ ಬಲಿ ಕಡಿದಂಗೆ ಆಗಿಹೋಯ್ತು. ನನ್ನ ಸಂತಾನ ಉಳಿದಂಗಾಗಿಹೋಯ್ತೂ. ನನ್ನ ತಂಗಿ ಮುಂಡೆಯಾಗೋಳು. ಅವ್ಳ ಮುತ್ತೈದೆ ಸ್ತಾನವೂ ಉಳಿದಂಗಾಯ್ತೂ. ಸತ್ತ ಮಗನೂ ಉಳದಂಗಾದ ನನ್ನ ತಂಗೆಗೇ. ಇಲ್ಲಿಂದೀಚೆಗೆ ನಾವು-

ಒಂದು ತಾಯಿ ಮಕ್ಕಳಾಗಿ ಹೊಂದಿಕೊಂಡೇ ಬಾಳೋಣ ॥ ತಂ ॥
ನಾವು ಒಂದು ತಾಯಿ ಮಕ್ಕಳಾಗಿ ಹೊಂದಿಕೊಂಡೇ ಹೋಗಾಣ ॥ ತಂ ॥
ತಂಗೆ ನಿನಗೂ ನನಿಗೆ ಇಲ್ಲಿಗೇ ಜಗಳ ಬ್ಯಾಡಕಾಣೇ ॥ ತಂ ॥
ನಿನಗೂ ನನಗೂ ತಂಗೆ ಹಗೆತನ ಬ್ಯಾಡಮ್ಮಾ ॥ ತಂ ॥
ನಾವು ಹೊಂದಿಕಂಡೆ ಬಾಳಾಣ ನಾವೊಂದಾಗಿ ಹೋಗಾಣಾ. ॥ ತಂ ॥

ಇಲ್ಲಿಂದೀಚೆಗೆ ನಾವು ಒಂದು ತಾಯಿ ಮಕ್ಕಳಾಗಿ ಹೊಂದಿಕೊಂಡು ಬಾಳಾಣಾ. ನಿನಗೆ ನನಗೆ ಜಗಳ ಬ್ಯಾಡಂತ ಹೇಳಿ ಬಣ್ಣದ್ವಾಲೆ ಬರೆದು ಕಳಿಸಿದ್ನಲ್ಲೋ. ಇಲ್ಲಿಂದೀಚೆಗೆ ಇವುಳ ಮುತ್ತೈದೆ ಸ್ತಾನ ಉಳಿದಂಗಾಯ್ತು. ಅವ್ನೂ ಅರಮನೆಗೆ ಬಲಿ ಕಡೀದೆ ಇದ್ರೆ ಅವ್ನ ಸಂತಾನವೆಲ್ಲಾ ಹಾಳಾಗದು. ಎಲ್ಲಾ ಉಳಿದಂಗಾಯ್ತು. ಅರಮನೆಗೆ ಬಲಿ ಕೊಟ್ಟಂಗೂ ಆಯ್ತೂ. ಅಣ್ಣಂಗೂ ತಂಗಿಗೂ ಜಗಳವಿಲ್ಲದಂಗಾಯ್ತೂ. ಈಗ ಅಣ್ಣ ತಂಗೆ ಒಂದೂಗೆ ನಡಿಯೋಕಾಲ ಬಂದು ಹೋಯ್ತು ಶಿವನೇ.

★★★★

# ೪. ಲಕ್ಕಣ್ಣ ಈರಣ್ಣ

ಹಳೆಯನೆಬೀಡೆಣ್ಣ ಸುವ್ವಲಾಲೆ
ವಳಲಿಗೆ ಕೊಟ್ಟೈತೆ ಸುವ್ವಲಾಲೆ
ತಾಯಿ ಬಲ್ಲಾಳದೇವಿ ಸುವ್ವಲಾಲೆ
ಮಾವ ಬಲ್ಲಾಳರಾಯ. ಸುವ್ವಲಾಲೆ

ಲಕ್ಕಣ್ಣೀರಣ್ಣಾರು ಸುವ್ವಲಾಲೆ
ಅವರೂಟ ಮಾಡಿಕೊಂಡು ಸುವ್ವಲಾಲೆ
ಊಟ ಮಾಡಿಕೊಂಡು ಸುವ್ವಲಾಲೆ
ಅವ್ರೋದ ಮಠಗಿನ್ನಾಗಿ. ಸುವ್ವಲಾಲೆ

ಮಾವ ಬಲ್ಲಾಳರಾಯ್ಗೆ ಸುವ್ವಲಾಲೆ
ಎರಡು ಜನಯೆಣುಮಕ್ಕಳು ಸುವ್ವಲಾಲೆ
ಒಂದು ಕಾಗುದುವ ಬರುದಾನೆ ಸುವ್ವಲಾಲೆ
ಕಾಗುದಾಗೇನಂತ ಬರುದಾನೆ? ಸುವ್ವಲಾಲೆ
ಎಡಗಾರ ಬೈಲಿನಾಗೆ ಸುವ್ವಲಾಲೆ
ಹನ್ನೆರ್ಡು ಬೈಲಿನಾಗೆ ಸುವ್ವಲಾಲೆ
ಹನ್ನೆರಡು ಮೆಟ್ಟಿನೇಗ್ರ ಸುವ್ವಲಾಲೆ
ಎಡಗಾರ ಬೈಲಿನಾಗೆ ಸುವ್ವಲಾಲೆ
ಒಂದೇಗ್ರ ಮಲಗಿದಾನೆ ಸುವ್ವಲಾಲೆ
ಹನ್ನೆರ್ಡು ಮೆಟ್ಟಿನೇಗ್ರ ಸುವ್ವಲಾಲೆ
ಬಾಲವ ಹೊತುಗಂಡು ಸುವ್ವಲಾಲೆ
ಹನ್ನೆರ್ಡೆ ಮಟ್ಟಿನೇಗ್ರ ಸುವ್ವಲಾಲೆ
ಬಾಲಾವ ಹಾಸಿಕೊಂಡು ಸುವ್ವಲಾಲೆ
ಬಾಲವ ಹೊತುಗಂಡು ಸುವ್ವಲಾಲೆ
ಒಂದುಕಿವಿ ಹಾಸಿಗಂಡು ಸುವ್ವಲಾಲೆ
ಏಗ್ರ ಮಲಗಿದಾನೆ ಸುವ್ವಲಾಲೆ
ಏಗ್ರಾನೆ ಹೊಡುದರಿಗೆ ಸುವ್ವಲಾಲೆ
ಚಿಕ್ಕರಿಗೆ ಚಿಕ್ಕೊನ್ನೆ ಸುವ್ವಲಾಲೆ
ದೊಡ್ಡೊರಿಗೆ ದೊಡ್ಡೊನ್ನೆ ಸುವ್ವಲಾಲೆ

ದೊಡ್ಡೊರಿಗೇನೆ ಕೊಟ್ಟು ಸುವ್ವಲಾಲೆ
ಲಗ್ನ ಮಾಡತೀನೆಂದು ಸುವ್ವಲಾಲೆ
ಹಂಗಂತಾನೆ ಹೇಳಿ ಸುವ್ವಲಾಲೆ
ಒಂದು ಕಾಗುದುವ ಬರುದಾರೆ ಸುವ್ವಲಾಲೆ
ಬೇಗಾನೆ ಕರಿಬಾರೆ. ಸುವ್ವಲಾಲೆ

ಲಕ್ಕಣ್ಣೇರಣ್ಣಾರು ಸುವ್ವಲಾಲೆ
ಅವ್ರು ಓದಿಕೊಂಡು ಬರುತಾರೆ ಸುವ್ವಲಾಲೆ
ತಾಯಿ ಬಲ್ಲಳದೇವಿ ಸುವ್ವಲಾಲೆ
ಅವ್ಳು ಚಿನ್ನಾದ ಗಿಂಡೀಲಿ ಸುವ್ವಲಾಲೆ
ಅವ್ಳು ಪನ್ನೀರು ತಂದು ಕೊಡುತಾಳೆ ಸುವ್ವಲಾಲೆ
ಕಂದನು ಮುಖವ ತೊಳೆದು ಸುವ್ವಲಾಲೆ
ಅವ್ರು ವಳವೀಕೆ ಹೋದಾರೆ ಸುವ್ವಲಾಲೆ
ತಾಯಿ ಬಲ್ಲಳದೇವಿ ಸುವ್ವಲಾಲೆ
ಏನಂತೇಳಲುತಾಳೆ ಸುವ್ವಲಾಲೆ
ಅಪ್ಪ ನನ್ನ ಮಕ್ಕಳಿರಾ ಸುವ್ವಲಾಲೆ
ಒಂದು ಕಾಗದವ ಬರುದಾರೆ ಸುವ್ವಲಾಲೆ
ನೀವೆ ಹೋಗಿ ನೊಡ್ಕೈಕಳಿರಾ ಸುವ್ವಲಾಲೆ
ಲಕ್ಕಣ್ಣೇರಣ್ಣಾರು ಸುವ್ವಲಾಲೆ
ಅವ್ರು ಹೋಗಿ ನೋಡಲುತಾರೆ ಸುವ್ವಲಾಲೆ
ಬಾಳ ಎಚ್ಚಾಯಗೊಳುತಾರೆ ಸುವ್ವಲಾಲೆ
ತಾಯಿ ಬಲ್ಲಳದೇವಿ ಸುವ್ವಲಾಲೆ
ಒಳ್ಳೆ ನಲ್ಲಾದಡಿಗೆ ಸುವ್ವಲಾಲೆ
ನೀನು ಬೇಗದಿಂದ ಮಾಡವ್ವ ಸುವ್ವಲಾಲೆ
ಅಪ್ಪ ನನ್ನ ಮಕ್ಕಳಿರಾ ಸುವ್ವಲಾಲೆ
ನೀವು ಚಿಕ್ಕಮಕ್ಕಳಾಗೆ ಸುವ್ವಲಾಲೆ
ತಂದೆ ಕೊಂದೇನಾಕಿದ ಸುವ್ವಲಾಲೆ
ನಿಮಗುಲಿಯ ತಂಟೆ ಬೇಡ ಸುವ್ವಲಾಲೆ
ತಾಯಿ ಬಲ್ಲಳದೇವಿ ಸುವ್ವಲಾಲೆ
ನಮ್ಮ ತಡೆಯಾಲು ಬ್ಯಾಡವ್ವ ಸುವ್ವಲಾಲೆ
ನಾವು ಹೋಗ್ಯಾರ ಬರುತೇವಿ ಸುವ್ವಲಾಲೆ

ಒಳ್ಳೆ ನಲ್ಲಾದಡಿಗೆ ಸುವ್ವಲಾಲೆ
ಮಾಡ್ಯಾಳು ಬಲ್ಲಳದೇವಿ ಸುವ್ವಲಾಲೆ

ಒಳ್ಳೆಯ ಹರಿವಾಣ ಸುವ್ವಲಾಲೆ
ಅವಳು ಸುಣ್ಣಚ್ಚಿ ಬೆಳಿಗ್ಯಾಳೆ ಸುವ್ವಲಾಲೆ
ಚಿನ್ನಾದ ಪರಿವಾಣಕೆ ಸುವ್ವಲಾಲೆ
ಅವ್ವ ಕೆಮ್ಮಣ್ಣಚ್ಚಿ ಬೆಳಗ್ಯಾಳೆ ಸುವ್ವಲಾಲೆ
ಅವರೂಟಾವ ಮಾಡ್ಯಾರೆ ಸುವ್ವಲಾಲೆ
ಅವ್ರು ಕೈಬಾಯಿ ತೊಳುದಾರೆ ಸುವ್ವಲಾಲೆ
ಅವ್ರು ಮ್ಯಾಕಿನ್ನು ಎದ್ದಾರೆ ಸುವ್ವಲಾಲೆ
ಅವ್ರು ಮಂಚದನೇ ಮ್ಯಾಲೆ ಸುವ್ವಲಾಲೆ
ಅವ್ರು ಸುಖನಿದ್ದೆ ಮಾಡುತಾರೆ ಸುವ್ವಲಾಲೆ
ತಾಯಿ ಬಲ್ಲಳದೇವಿ ಸುವ್ವಲಾಲೆ
ಅವಳು ಏನಂತೇಳಲುತಾಳೆ ಸುವ್ವಲಾಲೆ
ಅಪ್ಪ ನನ ಮಕ್ಕಳಿರಾ ಸುವ್ವಲಾಲೆ
ನಿಮಿಗೆಷ್ಟೊತ್ತೊ ಸುಖನಿದ್ದೆ? ಸುವ್ವಲಾಲೆ
ಹಾಗಂತಾನೆ ಹೇಳಿ ಸುವ್ವಲಾಲೆ
ಅವ್ರು ಮ್ಯಾಕಿನ್ನು ಎದ್ದಾರೆ ಸುವ್ವಲಾಲೆ
ಮ್ಯಾಕಿನ್ನು ಎದ್ದಾರೆ ಸುವ್ವಲಾಲೆ
ಅವ್ರು ಹಿತ್ತಲಿಗೆ ಹೋದಾರೆ ಸುವ್ವಲಾಲೆ
ಒಂದು ಹೂವನ್ನು ಹಾಕ್ಯಾರೆ ಸುವ್ವಲಾಲೆ
ಒಂದು ಸೊಸಿಯನ್ನು ಹಾಕ್ಯಾರೆ ಸುವ್ವಲಾಲೆ
ಸೊಸಿಯನ್ನು ನೆಟ್ಟಾರೆ. ಸುವ್ವಲಾಲೆ
ಅವರು ತಾಯಿಗೇನು ಹೇಳುತಾರೆ ಸುವ್ವಲಾಲೆ
ಒಂದು ಸೊಸಿಯನ್ನು ಹಾಕಿದೀವಿ ಸುವ್ವಲಾಲೆ
ಗಿಡವು ಒಣಗೋದಾರೆ ಸುವ್ವಲಾಲೆ
ನನ ಮಕ್ಕಳು ಸತ್ತಾರೆನ್ನು ಸುವ್ವಲಾಲೆ
ಗಿಡುವೆ ಚಿಗುತಾ ಬಂದ್ರೆ ಸುವ್ವಲಾಲೆ
ನನ ಮಕ್ಕಳಿದ್ದಾರೆನ್ನಿ ಸುವ್ವಲಾಲೆ
ಹಾಗಂತಾನೆ ಹೇಳಿ ಸುವ್ವಲಾಲೆ
ಅವ್ರು ಜಟ್ಟೇರ ಕರಿಸ್ಯಾರೆ ಸುವ್ವಲಾಲೆ
ಅವ್ರು ಎಣ್ಣೇಯ ಒತ್ತಿಸ್ಯಾವರೆ ಸುವ್ವಲಾಲೆ
ರಾಮನಗ್ಗಣಿ ಕಾಯ್ದು ಸುವ್ವಲಾಲೆ
ಭೀಮನಗ್ಗುಗೆಂದು ಸುವ್ವಲಾಲೆ
ಅವರು ಹಸೆಮ್ಯಾಲೆ ಕುಳಿತವರೆ ಸುವ್ವಲಾಲೆ
ಹಸೆಮ್ಯಾಲೆ ಕುಂತವರೆ ಸುವ್ವಲಾಲೆ
ಅವ್ರಾರತಿ ಬೆಳಗ್ಯಾರೆ ಸುವ್ವಲಾಲೆ

ಅಕ್ಕುಸ್ತಿ ಇಟ್ಟಾರೆ ಸುವ್ವಲಾಲೆ
ಅವ್ರು ಮೇಕಿನ್ನು ಎದ್ದಾರೆ ಸುವ್ವಲಾಲೆ
ಅವ್ರು ಸುಂಗಾರನಾಗುತಾರೆ ಸುವ್ವಲಾಲೆ
ಲಕ್ಕಣ್ಣೆ ಹಿಡುದಾನೆ ಸುವ್ವಲಾಲೆ
ಅವ್ನು ಕರಿಯಾನೆ ಕುದುರೆಯ ಸುವ್ವಲಾಲೆ
ಈರಣ್ಣ ಏರ್ಯಾನೆ ಸುವ್ವಲಾಲೆ
ಬಿಳಿಯಾನೆ ಕುದುರೇಯ. ಸುವ್ವಲಾಲೆ

ತಾಯಿ ಬಲ್ಲಳದೇವಿ ಸುವ್ವಲಾಲೆ
ಅವಳು ಹೋಗಿ ತಡೆಯುತಾಳೆ ಸುವ್ವಲಾಲೆ
ತಾಯಿ ಬಲ್ಲಳದೇವಿ ಸುವ್ವಲಾಲೆ
ನನ್ನ ತಡೆಯಲು ಬೇಡವ್ವ ಸುವ್ವಲಾಲೆ
ನಾವು ಹೋಗ್ಯಾರ ಬರುತೇವಿ ಸುವ್ವಲಾಲೆ
ಅಪ್ಪ ನನ ಮಕ್ಕಳಿರಾ ಸುವ್ವಲಾಲೆ
ಜ್ವಾಕಿ ಕಣ ನನ ಮಕ್ಕಳಿರಾ ಸುವ್ವಲಾಲೆ
ಎಲ್ಲಿಂದನೆಲ್ಲಿಗೆ ಸುವ್ವಲಾಲೆ
ಅವ್ರು ಕುದ್ರುಗೊಂಡು ಊರಾಮುಂದೆ ಸುವ್ವಲಾಲೆ
ಅವ್ರು ಕುದ್ರಿ ಜಾರಿಬಿದ್ದಾರೆ. ಸುವ್ವಲಾಲೆ

ಈರಣ್ಣ ಈರಣ್ಣ ಸುವ್ವಲಾಲೆ
ನಮಿಗಪಶಕುನಾದಾವಲ್ಲೊ ಸುವ್ವಲಾಲೆ
ನಾವು ಹಿಂದಾಕೆ ಹೋಗಾನ ನಡಿಯೋ ಸುವ್ವಲಾಲೆ
ಎಡಬಲಕೆ ಜುಗುವೀನ ಸುವ್ವಲಾಲೆ
ನಾವು ಮುಂದಾಕೆ ಹೋಗಾನ ನಡಿಯೋ ಸುವ್ವಲಾಲೆ
ಎಲ್ಲಿಂದಾನೆಲ್ಲೀಗೆ ಸುವ್ವಲಾಲೆ
ಅವ್ರು ಎಲಗುಂದೂರ ಮುಂದೆ ಸುವ್ವಲಾಲೆ
ಎಲೆಜಾರಿ ಬಿದ್ದಾರು ಸುವ್ವಲಾಲೆ

ಈರಣ್ಣ ಈರಣ್ಣ ಸುವ್ವಲಾಲೆ
ನಮಿಗಪಶಕುನಾದಾವಲ್ಲೊ ಸುವ್ವಲಾಲೆ
ಅವಶಕುನಾದಾವಲ್ಲೊ ಸುವ್ವಲಾಲೆ
ನಾವು ಹಿಂದಾಕೆ ಹೋಗಾನ ನಡಿಯೋ ಸುವ್ವಲಾಲೆ
ಇದು ಬಲು ಚೋಜಿಗವೇನೋ ಸುವ್ವಲಾಲೆ
ನಾವು ಮುಂದಾಕೆ ಹೋಗಾನ ನಡಿಯೋ ಸುವ್ವಲಾಲೆ

ಅಲ್ಲಿಂದನೆಲ್ಲೀಗೆ ಸುವ್ವಲಾಲೆ
ಅವರು ಕೆಲವತ್ತೂರ ಮುಂದೆ ಸುವ್ವಲಾಲೆ
ಅವ್ರು ಕಾಲುಜಾರಿ ಬಿದ್ದಾರೆ. ಸುವ್ವಲಾಲೆ

ಈರಣ್ಣ ಈರಣ್ಣ ಸುವ್ವಲಾಲೆ
ನಮಿಗಪಶಕುನಾದಾವಲ್ಲೊ ಸುವ್ವಲಾಲೆ
ನಾವೆ ಹಿಂದಾಕ್ ಹೋಗಾನ ನಡಿಯೇ ಸುವ್ವಲಾಲೆ
ಅಲ್ಲಿಂದನೆಲ್ಲೀಗೆ ಸುವ್ವಲಾಲೆ
ಕೆಂಚೊಳ್ಳುರಾ ಮುಂದೆ ಸುವ್ವಲಾಲೆ
ಕೆಂಚಿ ಜಾರಿ ಬಿದ್ದಾರೆ. ಸುವ್ವಲಾಲೆ
ಈರಣ್ಣ ಈರಣ್ಣ ಸುವ್ವಲಾಲೆ
ನಮಿಗಪಶಕುನಾದಾವಲ್ಲೊ ಸುವ್ವಲಾಲೆ
ನಾವು ಹಿಂದಾಕೆ ಹೋಗಾನ ನಡಿಯೇ ಸುವ್ವಲಾಲೆ
ನಿನಗಿದು ಬಲು ಜೋಜಿಗವೇನೊ ಸುವ್ವಲಾಲೆ
ನಾವ್ ಮುಂದಾಕ್ ಹೋಗಾನ ನಡಿಯೋ. ಸುವ್ವಲಾಲೆ

ಅಲ್ಲಿಂದಾನೆಲ್ಲೀಗೆ ಸುವ್ವಲಾಲೆ
ಕಂಬಕಲು ಗುಡ್ಡಾಕೋಗಿ ಸುವ್ವಲಾಲೆ
ಅವರು ಕುದುರೇಯ ಇಳುದಾರೆ ಸುವ್ವಲಾಲೆ
ಅವರು ಕುದುರೆ ಕಟ್ಟಲುತಾರೆ ಸುವ್ವಲಾಲೆ
ಅವ್ರು ಮಖವೆ ಮಜ್ಜಣ ಮಾಡಿ ಸುವ್ವಲಾಲೆ
ಅವ್ರು ಊಟ ಮಾಡಲುತಾರೆ ಸುವ್ವಲಾಲೆ
ಊಟಾವೆ ಮಾಡ್ಯಾರೆ ಸುವ್ವಲಾಲೆ
ಅವ್ರು ವಿಳ್ಳೇವ ಮೆಲುತಾರೆ ಸುವ್ವಲಾಲೆ
ಈರಣ್ಣ ಈರಣ್ಣ ಸುವ್ವಲಾಲೆ
ನಾವ್ ಹೊತ್ತಾಯ್ತು ಹೋಗಾನ ನಡಿಯೋ ಸುವ್ವಲಾಲೆ
ಎಲ್ಲಿಂದಾನೆಲ್ಲೀಗೆ ಸುವ್ವಲಾಲೆ
ಅವ್ರು ಉಡುಗರು ಸಾಣೇನಳ್ಳಿ ಸುವ್ವಲಾಲೆ
ಅವ್ರು ಕೆರಿಗಿನ್ನು ಹೋದಾರೆ ಸುವ್ವಲಾಲೆ
ಅವ್ರು ಕುದುರೇಯ ಇಳುದಾರೆ ಸುವ್ವಲಾಲಿ
ಅವ್ರು ಕುದುರೆ ಕಟ್ಟಲುತಾರೆ ಸುವ್ವಲಾಲೆ
ಎಡಗುರ ಸಾಣೇನಳ್ಳಿ ಸುವ್ವಲಾಲೆ
ಮುದಕಜ್ಜಿ ನೀರಿಗೆ ಬಂದು ಸುವ್ವಲಾಲೆ
ಯಾ ರಾಜ್ಯದ ಮಕ್ಳು ಸುವ್ವಲಾಲೆ

ನೀವು ಯಾವ ದೇಶವ್ರಪ್ಪ? ಸುವ್ವಲಾಲೆ
ಅಡವೀನೆ ಬೀಡಮ್ಮ ಸುವ್ವಲಾಲೆ
ಏಳಲೆ ವಂಜಿನಗೆರಿಗೆ ಸುವ್ವಲಾಲೆ
ಕೊಟ್ಟದು ಬಲ್ಲಾಳದೇವಿ ಸುವ್ವಲಾಲೆ
ನಮ್ಮ ತಾಯಿ ಬಲ್ಲಳದೇವಿ ಸುವ್ವಲಾಲೆ
ನಮ್ಮ ಮಾವ ಬಲ್ಲಳರಾಯ ಸುವ್ವಲಾಲೆ
ಒಂದು ಕಾಗುದುವ ಬರುದಾರೆ ಸುವ್ವಲಾಲೆ
ನಾವು ಅದಿಕೆ ಬಂದಿದೇವಜ್ಜಿ ಸುವ್ವಲಾಲೆ
ಬನ್ನಿರಪ್ಪ ನನ್ನ ಮಕ್ಕಳಿರಾ ಸುವ್ವಲಾಲೆ
ನನ್ನರಮನಿಗೆ ಹೋಗಾನ. ಸುವ್ವಲಾಲೆ

ಆಗಾಲೆ ಮುದುಕಜ್ಜಿ ಸುವ್ವಲಾಲೆ
ಅರಮನೆಗೆ ಹೋದಾರೆ ಸುವ್ವಲಾಲೆ
ಚಿನ್ನಾದ ಗಿಂಡೀಲಿ ಸುವ್ವಲಾಲೆ
ಪನ್ನೀರು ತಂದು ಕೊಟ್ಟಾಳೆ ಸುವ್ವಲಾಲೆ
ಕೈಕಾಲು ಮುಖವ ತೊಳೆದು ಸುವ್ವಲಾಲೆ
ಅವ್ರು ವಳವೀಕೆ ಹೋದಾರೆ ಸುವ್ವಲಾಲೆ
ವಳ್ಳೆನಲ್ಲಾದಡಿಗೆ ಸುವ್ವಲಾಲೆ
ಮಾಡ್ಯಾಳೆ ಮುದುಕಜ್ಜಿ ಸುವ್ವಲಾಲೆ
ಲಕ್ಕಣ್ಣೀರಣ್ಣರಿಗೆ ಸುವ್ವಲಾಲೆ
ಅವಳೂಟಕಿಕ್ಕಲುತಾಳೆ ಸುವ್ವಲಾಲೆ
ಊಟಾವ ಮಾಡ್ಯಾರು ಸುವ್ವಲಾಲೆ
ಅವ್ರು ಕೈಬಾಯಿ ತೊಳೆದಾರು ಸುವ್ವಲಾಲೆ
ಆಗಲೇ ಮುದುಕಜ್ಜಿ ಸುವ್ವಲಾಲೆ
ಅವರಿಗಿಳ್ಳೇವ ಕೊಡುತಾಳೆ ಸುವ್ವಲಾಲೆ
ಇಳ್ಳೇವ ಕೊಟ್ಟಾಳೆ ಸುವ್ವಲಾಲೆ
ಅವ್ರು ಇಳ್ಳೇವ ಮೆಲುತಾರೆ ಸುವ್ವಲಾಲೆ
ಆಗಲೆ ಮುದುಕಜ್ಜಿ ಸುವ್ವಲಾಲೆ
ಅವಳೇನಂತೇಳಲುತಾಳೆ ಸುವ್ವಲಾಲೆ
ಅಪ್ಪಾ ನನ ಮಕ್ಕಳಿರಾ ಸುವ್ವಲಾಲೆ
ನೀವು ಚಿಕ್ಕಮಕ್ಕಳಾಗೆ ಸುವ್ವಲಾಲೆ
ನಿಮ ತಂದೆ ಕೊಂದೇನಾಕಿದ ಸುವ್ವಲಾಲೆ
ಜ್ವಾಕಿ ನನ ಮಕ್ಕಳಿರಾ ಸುವ್ವಲಾಲೆ
ನೀವು ಜ್ವಾಕೀಲಿ ಹೋಗಿರಪ್ಪ. ಸುವ್ವಲಾಲೆ

ಅಲ್ಲಿಂದಾನೆಲ್ಲೀಗೆ ಸುವ್ವಲಾಲೆ
ಅವ್ರು ಕೆರಿಗಿನ್ನು ಬಂದಾರೆ ಸುವ್ವಲಾಲೆ
ಅವ್ರು ಕುದುರೇಯ ಏರಿಕೊಂಡ್ರು ಸುವ್ವಲಾಲೆ
ಅವ್ರು ಹುಡುಗರು ಸಾಣೇನಳ್ಳಿ ಸುವ್ವಲಾಲೆ
ಅವ್ರು ಕೆರಿಗಿನ್ನು ಹೋದಾರು ಸುವ್ವಲಾಲೆ
ಹನ್ನೆಲ್ಡು ಮೆಟ್ಟಿನೇಗ್ರ ಸುವ್ವಲಾಲೆ
ಬಾಲಾವ ಮೆಟಿಗಂಡು ಸುವ್ವಲಾಲೆ
ಬಾಲಾವ ಹೊತುಗಂಡು ಸುವ್ವಲಾಲೆ
ಒಳ್ಳೆ ಏಗ್ರ ಮಲಗೀದಾನೆ. ಸುವ್ವಲಾಲೆ
ಈರಣ್ಣ ಈರಣ್ಣ ಸುವ್ವಲಾಲೆ
ನನ್ನ ಕತ್ತೆತ್ತಿ ನೋಡತೀತೆ ಸುವ್ವಲಾಲೆ
ನನಗೆ ನೋಡಿದರೆ ಭಯವಾಯ್ತು ಸುವ್ವಲಾಲೆ
ನೀ ಮುಂದೆ ಗುಂಡಬಿಡು ಸುವ್ವಲಾಲೆ
ಬಾಲಾವ ನೋಡಿ ಸುವ್ವಲಾಲೆ
ಒಳ್ಳೆ ಭಾಗ್ಯವ್ದ ಗುಡ್ಡಾಯ್ತು ಸುವ್ವಲಾಲೆ
ಆಗಾಲೇ ಈರಣ್ಣ ಸುವ್ವಲಾಲೆ
ಮುಂದೆ ಗುಂಡಾ ಬಿಟ್ಟ ಸುವ್ವಲಾಲೆ
ಈರಣ್ಣೊಡೆದಾ ಗುಂಡು ಸುವ್ವಲಾಲೆ
ನೆತ್ತೀಲಿ ಹೊಂಟೊಯ್ತು ಸುವ್ವಲಾಲೆ
ಲಕ್ಕಣ್ಣೊಡೊದಾ ಗುಂಡು ಸುವ್ವಲಾಲೆ
ಒಂದ ಕಿವೀಲೊಂಟೋಯ್ತು ಸುವ್ವಲಾಲೆ
ಆಗಾಲೇ ಈರಣ್ಣ ಸುವ್ವಲಾಲೆ
ಬಾಳ ಎಚ್ಚಾಯಗೊಳುತಾನೆ ಸುವ್ವಲಾಲೆ
ಲಕ್ಕಣ್ಣ ಲಕ್ಕಣ್ಣ ಸುವ್ವಲಾಲೆ
ಒಂದು ಕಾಗುದ ಬರೆಯೆಂದ ಸುವ್ವಲಾಲೆ
ಮಾವ ಬಲ್ಲಾಳರಾಯ್ಗೆ ಸುವ್ವಲಾಲೆ
ಒಂದು ಗಾಗುದುವ ಬರೆದಾರೆ. ಸುವ್ವಲಾಲೆ

ಬೇಗಾನೆ ಕಳಿವ್ಯಾರೆ ಸುವ್ವಲಾಲೆ
ಆಗಲೇ ಈರಣ್ಣ ಸುವ್ವಲಾಲೆ
ಅವ್ನು ಎಚ್ಚಾಯಗೊಳುತಾನೆ ಸುವ್ವಲಾಲೆ
ಮಾವ ಬಲ್ಲಾಳರಾಯ ಸುವ್ವಲಾಲೆ
ಅವ್ರು ಓದಿ ನೊಡಲುತಾರೆ ಸುವ್ವಲಾಲೆ
ಅವ್ರು ಓಡೋಡಿ ಬರುತಾರೆ ಸುವ್ವಲಾಲೆ

ಓಡೋಡಿ ಬಂದಾರೆ ಸುವ್ವಲಾಲೆ
ಅವ್ರು ಉಗ್ರಾನ ನೋಡುತಾರೆ ಸುವ್ವಲಾಲೆ
ಅವ್ರು ಏನಂತೇಳಲುತಾರೆ ಸುವ್ವಲಾಲೆ
ಅಪ್ಪ ನನ್ನಳಿಯಗಳಿರಾ ಸುವ್ವಲಾಲೆ
ನೀವ್ ಚಿಕ್ಕಪ್ರಾಯದೋರು ಸುವ್ವಲಾಲೆ
ನಿಮ್ಮ ಮುಖವನ್ನು ನೋಡಿದಾರೆ ಸುವ್ವಲಾಲೆ
ನೀವು ಬಾಳಾ ಬಾಡೋಗೋತಿ ಸುವ್ವಲಾಲೆ
ನಡಿರಪ್ಪ ನನ್ನಳಿಯಗಳಿರ ಸುವ್ವಲಾಲೆ
ನನ್ನ ಅರಮನಿಗೆ ಹೋಗಾನ. ಸುವ್ವಲಾಲೆ

ಲಕ್ಕಣ್ಣೀರಣ್ಣಾರು ಸುವ್ವಲಾಲೆ
ಅವರು ಅರಮನಿಗೆ ಬಂದಾರೆ ಸುವ್ವಲಾಲೆ
ಅತ್ತೆ ಕಾಳಿಕದೇವಿ ಸುವ್ವಲಾಲೆ
ಅವ್ರ ಕಡುಬಾಯ ಹಿಡುದಾಳೆ ಸುವ್ವಲಾಲೆ
ಯಪ್ಪ ನನ್ನ ಅಳಿಗಳಿರಾ ಸುವ್ವಲಾಲೆ
ನಿಮ್ಮುಖವೆ ಬಾಡೋಗೇತಿ ಸುವ್ವಲಾಲೆ
ವಳ್ಳೆ ನಲ್ಲಾದಡಿಗೆ ಸುವ್ವಲಾಲೆ
ಮಾಡ್ಯಾಳೆ ಕಾಳಿಕಾದೇವಿ ಸುವ್ವಲಾಲೆ
ಲಕ್ಕಣೀರಣ್ಣರಿಗೆ ಸುವ್ವಲಾಲೆ
ಅವ್ವು ಊಟಕಿಕ್ಕಲುತಾಳೆ ಸುವ್ವಲಾಲೆ
ಊಟಾವ ಮಾಡ್ಯಾರು ಸುವ್ವಲಾಲೆ
ಅವ್ರು ಕೈಬಾಯಿ ತೊಳೆದಾರು ಸುವ್ವಲಾಲೆ
ಯಪ್ಪ ನನ್ನ ಅಳಿಗಳಿರಾ ಸುವ್ವಲಾಲೆ
ನೀವು ಎಲ್ಲಿ ಹೋಗಲು ಬೇಡಿ ಸುವ್ವಲಾಲೆ
ಮಂಚಾದನೆ ಮೇಲೆ ಸುವ್ವಲಾಲೆ
ನೀವು ಸುಖನಿದ್ರೆ ಮಾಡಿರಪ್ಪ ಸುವ್ವಲಾಲೆ
ಬೇಲೂರಿಗೇನೆ ಹೋಗಿ ಸುವ್ವಲಾಲೆ
ನಾನೇಗ್ರ ಮಾರಿಕಂಡು ಸುವ್ವಲಾಲೆ
ಏಗ್ರಮಾರಿಕಂಡು ಸುವ್ವಲಾಲೆ
ನಾನು ಚರ್ಮ ಚಿತ್ರವ ಮಾಡಿಸಿ ಸುವ್ವಲಾಲೆ
ನಾನು ಏಕಿ ಏಕಿ ಬಂದು ಸುವ್ವಲಾಲೆ
ನಿಮ್ಮ ಲಗ್ನ ಮಾಡುತೇನಿ ಸುವ್ವಲಾಲೆ
ಹಾಗಂತಾನೇಳಿ ಸುವ್ವಲಾಲೆ
ಅವ್ರು, ಬೇಲೂರಿಗೆ ಬಂದಾರೆ. ಸುವ್ವಲಾಲೆ

ಲಕ್ಕಣ್ಣೆರಣ್ಣಾರು ಸುವ್ವಲಾಲೆ
ಅವ್ರತ್ತೆ ಕಾಳಿಕದೇವಿ ಸುವ್ವಲಾಲೆ
ನಮಿಗೆ ಬೇಸರಿಕೆನಾಯ್ತಮ್ಮ ಸುವ್ವಲಾಲೆ
ಚಿನ್ನದ ಚಂಡ ಕೊಡೆ ಸುವ್ವಲಾಲೆ
ಬಣ್ಣದ ಲಗ್ಗೆಕೊಡೆ ಸುವ್ವಲಾಲೆ
ಎಲ್ಲಿ ಅಡಲತೀರ ? ಸುವ್ವಲಾಲೆ
ನೀವ್ ಯಾವ್ತಾವ್ ಆಡಲತೀರ ಸುವ್ವಲಾಲೆ
ಮೂಡುಗಡೆ ಕೋಡಿಲೋಗಿ ಸುವ್ವಲಾಲೆ
ನಾವು ಅಲ್ಲಿ ಆಡಲತೀವಿ. ಸುವ್ವಲಾಲೆ

ತಾಟಗಿತ್ತಿ ತಿರುಮಲದೇವಿ ಸುವ್ವಲಾಲೆ
ಅವ್ಳು ಬದನಾವತಿಯೆಂಬ ಸೂಳೆ ಸುವ್ವಲಾಲೆ
ಅವ್ಳು ಏಳುನೆರಿಕೆ ಉಪ್ಪುರಿಕೆ ಸುವ್ವಲಾಲೆ
ಅವ್ಳು ಮ್ಯಾಲೆ ಕುಂತೀದಾಳೆ ಸುವ್ವಲಾಲೆ
ನಿಮ್ಮ ಕಂಡರೆ ಬಿಡುವೋಳಲ್ಲ ಸುವ್ವಲಾಲೆ
ನೀವಿಲ್ಲೆ ಆಡಿರಪ್ಪಾ ಸುವ್ವಲಾಲೆ
ನಾವು ಇಲ್ಲಿ ಆಡೋದಿಲ್ಲ ಸುವ್ವಲಾಲೆ
ನಾವು ಅಲ್ಲಿ ಆಡಲುತೇವಿ ಸುವ್ವಲಾಲೆ
ಲಕ್ಕಣ್ಣ ಲಕ್ಕಣ್ಣ ಸುವ್ವಲಾಲೆ
ಲಗ್ಗೆಯ ಹೊತಗಳೊ ಸುವ್ವಲಾಲೆ
ಲಗ್ಗೆಯ ಹೊತಗಂಡು ಸುವ್ವಲಾಲೆ
ಚಂಡನ್ನು ತಕ್ಕಂಡು ಸುವ್ವಲಾಲೆ
ಪಡಗಡೆ ಕೋಡಿಗೋಗಿ ಸುವ್ವಲಾಲೆ
ಲಗ್ಗೇವ ಒಡಲುತಾರೆ ಸುವ್ವಲಾಲೆ
ಲಗ್ಗೇವ ಒಡ್ಯಾರೆ ಸುವ್ವಲಾಲೆ
ಚಂಡನ್ನಾಡಲೂತಾರೆ. ಸುವ್ವಲಾಲೆ

ಇವ್ಳು ಸೂಳೆನೆಂಬೂ ಮುಂಡೆ ಸುವ್ವಲಾಲೆ
ಇವ್ಳು ಏಳುನೆರಿಗೆ ಉಪ್ಪುರಿಕೆ ಸುವ್ವಲಾಲೆ
ಇವ್ಳು ಮ್ಯಾಲೆ ಕುತುಗಂಡು ಸುವ್ವಲಾಲೆ
ಈರಣ್ಣೊಡೆದಾ ಚಂಡು ಸುವ್ವಲಾಲೆ
ನನ್ನ ಅರಮನೆಗೆ ಬೀಳಾಲೆ ಸುವ್ವಲಾಲೆ
ಲಕ್ಕಣ್ಣೊಡೆದಾ ಚಂಡು ಸುವ್ವಲಾಲೆ
ಲಗ್ಗೀಗೆ ತಗುಲಾಲಿ ಸುವ್ವಲಾಲೆ

ಗಗನಾಕೆ ಹಾರಾಲಿ ಸುವ್ವಲಾಲೆ
ಸೂಳೆನೆಂಬ ಮುಂಡೆ ಸುವ್ವಲಾಲೆ
ಅವ್ವ ಹಾಡಿ ಬೇಡಿ ಹರಕೆ ಕಟ್ಟಿ ಸುವ್ವಲಾಲೆ
ಅವ್ವ ಬಿದ್ದು ಬಿದ್ದು ಬೇಡಲುತಾಳೆ. ಸುವ್ವಲಾಲೆ
ಈರಣ್ಣೊಡೆದಾ ಚಂಡು ಸುವ್ವಲಾಲೆ
ಸೂಳೆ ಅರಮನೆಗೆ ಬಿತ್ತು ಸುವ್ವಲಾಲೆ
ಲಕ್ಕಣ್ಣೊಡೆದಾ ಚಂಡು ಸುವ್ವಲಾಲೆ
ಲೆಗ್ಗೀಗೆ ತಗುಲ್ಯಾತೊ ಸುವ್ವಲಾಲೆ
ಗಗನಾಕೆ ಹಾರ್‍ಯಾತು ಸುವ್ವಲಾಲೆ
ಆಗಲೇ ಈರಣ್ಣ ಸುವ್ವಲಾಲೆ
ಅವನು ಧಗಬಾಯ ಬಿಡುತಾನೆ ಸುವ್ವಲಾಲೆ
ಲಕ್ಕಣ್ಣ ಲಕ್ಕಣ್ಣ ಸುವ್ವಲಾಲೆ
ನನ ಚಂಡನ್ನು ಹುಡುಕೆಂದ ಸುವ್ವಲಾಲೆ
ಚಂಡು ಸಿಕ್ಕಾಲಿಲ್ಲ ಸುವ್ವಲಾಲೆ
ಆಗಾಲೆ ಲಕ್ಕಣ್ಣ ಸುವ್ವಲಾಲೆ
ನೀನು ಓಡೋಡಿ ಹೋಗಪ್ಪ ಸುವ್ವಲಾಲೆ
ನನಗೆ ಮುಂದೆ ಯಾವ್ದು ಬರತೀತೊ ಸುವ್ವಲಾಲೆ
ದನವ ಕಾಯೋರಣ್ಣ ಸುವ್ವಲಾಲೆ
ನಮ್ಮ ಚಂಡ ಕಾಣಾಲಿಲುವೆ ? ಸುವ್ವಲಾಲೆ
ಈರಣ್ಣೊಡೆದಾ ಚಂಡು ಸುವ್ವಲಾಲೆ
ಸೂಳೆ ಅರಮನೆಗೆ ಬಿತ್ತು ಸುವ್ವಲಾಲೆ
ಲಕ್ಕಣ್ಣೊಡೆದ ಚಂಡು ಸುವ್ವಲಾಲೆ
ಲೆಗ್ಗಿಗೆ ತಗುಲ್ಯಾತು ಸುವ್ವಲಾಲೆ
ಗಗನಾಕೆ ಹಾರ್‍ಯಾತು ಸುವ್ವಲಾಲೆ
ಆಗಾನೆ ಲಕ್ಕಣ್ಣ ಸುವ್ವಲಾಲೆ
ಮೂಡುಗಡೆ ಕೋಡಿಗೆ ಬಂದ ಸುವ್ವಲಾಲೆ
ನೀನು ಹೊಡೆದಾ ಚಂಡು ಸುವ್ವಲಾಲೆ
ಸೂಳೆ ಅರಮನೆಗೆ ಬಿತ್ತು ಸುವ್ವಲಾಲೆ
ಹೋಗಪ್ಪ ಲಕ್ಕಣ್ಣ ಸುವ್ವಲಾಲೆ
ನನಗೆ ಮುಂದ್ಯಾವ್ದ ಬರತೀತೊ ಸುವ್ವಲಾಲೆ

ಸೂಳೆನೆಂಬೂ ಮುಂಡೆ ಸುವ್ವಲಾಲೆ
ಇವಳು ಬಾಗುಲಾಗೆ ನಿಂತುಕೊಂಡು ಸುವ್ವಲಾಲೆ
ಬಾಗಲಾಗೆ ನಿಂತುಗಂಡು ಸುವ್ವಲಾಲೆ

ಇವಳು ಈರಣ್ಣನ ನೋಡುತಾಳೆ ಸುವ್ವಲಾಲೆ
ಆಗಾಲೆ ಲಕ್ಕಣ್ಣ ಸುವ್ವಲಾಲೆ
ಅವನು ಓಡೋಡಿ ಹೋಗುತ್ತಾನೆ. ಸುವ್ವಲಾಲೆ
ಅತ್ತೆಮ್ಮ ಅತ್ತೆಮ್ಮ ಸುವ್ವಲಾಲೆ
ನಮ ಚಂಡನ್ನು ಕೊಡಮ್ಮ ಸುವ್ವಲಾಲೆ
ನಮ್ಮಾವ ಬರುವ ಹೊತ್ತು ಸುವ್ವಲಾಲೆ
ನಿಮಗೆ ಕೊಡವಾದಿಲ್ಲ ಸುವ್ವಲಾಲೆ
ನಿಮ್ಮ ಈರಣ್ಣನ ಬರೇಳೋಗೋ ಸುವ್ವಲಾಲೆ
ಆಗಾನೆ ಲಕ್ಕಣ್ಣ ಸುವ್ವಲಾಲೆ
ಅವ್ನು ಮೂಡುಗಡೆ ಕೋಡಿಗೆ ಸುವ್ವಲಾಲೆ
ಮೂಡುಗಡೆ ಕೋಡಿಗೆ ಹೋಗಿ ಸುವ್ವಲಾಲೆ
ಈರಣ್ಣ ಈರಣ್ಣ ಸುವ್ವಲಾಲೆ
ನಿನ್ನ ಬರೇಳಿದಳು ಸುವ್ವಲಾಲೆ
ನೀನು ಓಡೋಡಿ ಹೋಗಪ್ಪ. ಸುವ್ವಲಾಲೆ

ಆಗಾನೆ ಈರಣ್ಣ ಸುವ್ವಲಾಲೆ
ಅವ್ನು ಓಡೋಡಿ ಹೋಗುತಾನೆ ಸುವ್ವಲಾಲೆ
ಇವ್ಳು ಸೂಳೆನೆಂಬೊ ಮುಂಡೆ ಸುವ್ವಲಾಲೆ
ಇವ್ಳು ಒಳ್ಳೆನಲ್ಲಾದಡಿಗೆ ಸುವ್ವಲಾಲೆ
ಇವ್ಳು ಬೇಗದಿಂದ ಮಾಡುತಾಳೆ ಸುವ್ವಲಾಲೆ
ಆಗಾಲೆ ಈರಣ್ಣ ಸುವ್ವಲಾಲೆ
ಓಡೋಡಿ ಹೋಗುತಾನೆ ಸುವ್ವಲಾಲೆ
ಇವ್ಳು ಚಿನ್ನಾದ ಗಿಂಡೀಲಿ ಸುವ್ವಲಾಲೆ
ಪನ್ನೀಗ ಹಿಡಿಕಂಡು ಸುವ್ವಲಾಲೆ
ಇವ್ಳು ಬಾಗಿಲಾಗೆ ನಿಂತಿದಾಳೆ ಸುವ್ವಲಾಲೆ
ಈರಣ್ಣನ ಮುಖವ ನೋಡಿ ಸುವ್ವಲಾಲೆ
ಇವಳು ನೀರನ್ನು ಕೊಟ್ಟಾಳೆ ಸುವ್ವಲಾಲೆ
ಇವಳು ವಳವೀಕೆ ಹೋದಾಳೆ ಸುವ್ವಲಾಲೆ
ಸೂಳೆನೆಂಬೊ ಮುಂಡೆ ಸುವ್ವಲಾಲೆ
ಇವ್ಳು ಊಟಕಿಕ್ಕಲುತಾಳೆ ಸುವ್ವಲಾಲೆ
ಊಟಾವ ಮಾಡ್ಯಾರೆ ಸುವ್ವಲಾಲೆ
ಅವ್ರು ಕೈಬಾಯ ತೊಳದಾರೆ ಸುವ್ವಲಾಲೆ
ಇವ್ರಿಗಿಳ್ಳೇವ ಕೊಡುತಾಳೆ ಸುವ್ವಲಾಲೆ
ಇವ್ರು ವಿಳ್ಳೇನ ಮೆಲುತಾರೆ. ಸುವ್ವಲಾಲೆ

ಅತ್ತೆಮ್ಮ ಅತ್ತೆಮ್ಮ ಸುವ್ವಲಾಲೆ
ನಮ್ಮಾವ ಬರುವಾ ಹೊತ್ತು ಸುವ್ವಲಾಲೆ
ನಮ ಚಂಡನ್ನು ಕೊಡವ್ವ ಸುವ್ವಲಾಲೆ
ನಮಗೆ ಮುಂದ್ಯಾವ್ದು ಬರತೀತೂ ಸುವ್ವಲಾಲೆ
ಚಂಡ ಕೊಡತೀನೆಂದು ಸುವ್ವಲಾಲೆ
ನನ ಮಂಚಕೆ ಬಾರೆಂದು ಸುವ್ವಲಾಲೆ
ನಮ್ಮಾವ ಬಲ್ಲಾಳರಾಯ ಸುವ್ವಲಾಲೆ
ಹಳೆಬೀಡು ಪಟ್ಟಣಕೆ ಸುವ್ವಲಾಲೆ
ಏಳೇಳು ಪಟ್ಟಣಕೆ ಸುವ್ವಲಾಲೆ
ಸತ್ಯಕೆ ಬಲ್ಲಾಳುರಾಯ ಸುವ್ವಲಾಲೆ
ನಮ್ಮಾವ ಏರೋಮಂಚ ಸುವ್ವಲಾಲೆ
ನಾನು ಏರೋದಿಲ್ಲ ಸುವ್ವಲಾಲೆ
ಹಂಗಂತಾನೆ ಹೇಳಿ ಸುವ್ವಲಾಲೆ
ಇವಳು ಸೊಂಟುದಾಗೆ ಇರುವಂತ ಸುವ್ವಲಾಲೆ
ಇವಳು ಎಳಿಗಂಟ ಹಿಡುದಾಳೆ ಸುವ್ವಲಾಲೆ
ಇವನು ಸ್ವಂಟದಲ್ಲೆ ಇರುವಂತ ಸುವ್ವಲಾಲೆ
ಇವನು ಬಾಕನ್ನಾ* ಇರುದಾನೆ ಸುವ್ವಲಾಲೆ
ಇವನು ಚಂಡ ಕಿತಗಂಡ ತಗಂದೆ ಓಡುತಾನೆ. ಸುವ್ವಲಾಲೆ

ತಲೆಯಲ್ಲಿ ಇರುವಂತ ಸುವ್ವಲಾಲೆ
ಸೆಲ್ಲೆ ಉತ್ತಂಸ ತೊಡದು ಸುವ್ವಲಾಲೆ
ಸೆಲ್ಲೆ ನೆಲಕೆ ಬಿದ್ದು ಸುವ್ವಲಾಲೆ
ಇವಳು ಸೆಲ್ಲನ್ನು ಚಲ್ಲುತಾಳೆ ಸುವ್ವಲಾಲೆ
ಇವಳು ಕೊಳ್ಳಲ್ಲಿ ಇರುವಂತ ಸುವ್ವಲಾಲೆ
ತಾಳಿ ಮುರುದೊಗೆದಾಳೆ ಸುವ್ವಲಾಲೆ
ಇವಳು ಮೂಗಲ್ಲಿ ಇರುವಂತ ಸುವ್ವಲಾಲೆ
ಮೂಗತಿ ಮುರುದೊಗೆದಾಳೆ ಸುವ್ವಲಾಲೆ
ಇವಳು ನಾಮ ಕೆಡಿಸಿಕೊಂಡಳು ಸುವ್ವಲಾಲೆ
ಸ್ವಂಟದಲ್ಲೆ ಇರುವಂತಾ ಸುವ್ವಲಾಲೆ
ಡಾಬ ಮುರುದೊಗುದಾಳೆ ಸುವ್ವಲಾಲೆ
ಕೈಯಲ್ಲೆ ಇರುವಂತ ಸುವ್ವಲಾಲೆ
ಬಳೆಯ ಚಚ್ಚಿ ಒಗುದಾಳೆ ಸುವ್ವಲಾಲೆ
ತಲೆಯಲ್ಲಿ ಮುಡುದಂತ ಸುವ್ವಲಾಲೆ

* ಬಾಕಿಂದ

ಇವಳು ಹೂವ ಕಿತ್ತೊಗೆದಾಳೆ ಸುವ್ವಲಾಲೆ
ಏಳು ಮಾರಿನ ಮಂಡೆ ಸುವ್ವಲಾಲೆ
ಅವಳು ತಲೆಯ ಕೆದರಿಕೊಂಡು ಸುವ್ವಲಾಲೆ
ಅವಳು ಮೈ ಕೈ ಬೆವರಿಕೊಂಡು ಸುವ್ವಲಾಲೆ
ಅವಳು ರಾಮರೈತ ಮಾಡಿಕೆಂಡ್ಲು ಸುವ್ವಲಾಲೆ
ಇವಳು ಸೂಳೆನೆಂಬೊ ಮುಂಡೆ ಸುವ್ವಲಾಲೆ
ಇವಳು ಅರಮನೆಗಳ ಮುಂಡಿಗೆ ಸುವ್ವಲಾಲೆ
ಇವಳು ಅಗಣೀಯ ಜಡಿದಾಳೆ ಸುವ್ವಲಾಲೆ
ಇವಳು ತಲೆಯಲ್ಲಿ ಇರುವಂತ ಸುವ್ವಲಾಲೆ
ಇವಳು ಸೆಲ್ಲನ್ನು ಹಕ್ಕೆಂದು ಸುವ್ವಲಾಲೆ
ಇವಳು ಮಕ್ಕಾಡೆ ಮಲಿಗವಳೆ ಸುವ್ವಲಾಲೆ

ಇವನು ಏಗ್ರಾನ ಮಾರಿಕೊಂಡು ಸುವ್ವಲಾಲೆ
ಏಕಿ ಏಕಿಂದ ಬಂದ ಸುವ್ವಲಾಲೆ
ನೀನು ಅರಮಲ್ಲಿ ಇದಿಯೇನೆ ಸುವ್ವಲಾಲೆ
ನೀ ಕದವ ತೆಗೆಯನೆಂದ್ರು ಸುವ್ವಲಾಲೆ
ಅವಳು ಕದವ ತೆಗೆಯೊನಿಲ್ಲ ಸುವ್ವಲಾಲೆ
ಇವಳ ಅರಮನೆ ಮೂರಸುತ್ತ ಸುವ್ವಲಾಲೆ
ಇವರು ಸುತ್ತಿ ಸುತ್ತಿ ಬರುತಾರೆ ಸುವ್ವಲಾಲೆ
ಅವ್ರು ಜಾಡಿಸಿ ಕದವನೊದ್ರು ಸುವ್ವಲಾಲೆ
ಕದವೆ ಹಿಂದಾಕೋಯ್ತು ಸುವ್ವಲಾಲೆ
ಅರಮನಿಗೆ ಹೋಗಿ ಸುವ್ವಲಾಲೆ
ಅವಳ ಮುಖದ ನೋಡಿ ಸುವ್ವಲಾಲೆ
ನಾನಿಲ್ದ ಇಂದಾಗಡೆ ಸುವ್ವಲಾಲೆ
ನನ್ನ ಅರಮನಿಗ್ಯಾರೊ ನುಗ್ಗಿದ್ರೆ? ಸುವ್ವಲಾಲೆ
ಸೆಲ್ಲನ್ನು ತೆಗುದಾಳೆ ಸುವ್ವಲಾಲೆ
ಬಡ್ಡೀಗೆ ಒಗದಾಳೆ ಸುವ್ವಲಾಲೆ
ಲಕ್ಕಣ್ಣೀರಣ್ಣಾರು ಸುವ್ವಲಾಲೆ
ನನ್ನ ಅರಮನಿಗೆ ನುಗ್ಗಿದ್ರು ಸುವ್ವಲಾಲೆ
ನನ್ನ ಅವಮಾನ ಮಾಡಿದ್ರು ಸುವ್ವಲಾಲೆ

ಬಡವಾರದ ಬಡಿಗೇರೆ ಸುವ್ವಲಾಲೆ
ಬೇಗದಿಂದ ಕರಿಸ್ಯಾರೆ ಸುವ್ವಲಾಲೆ
ಒಂದು ಒಣಮರ ಕೆತ್ತಿಸ್ಯಾರೆ ಸುವ್ವಲಾಲೆ

ಒಂದು ಸೂಲ ಕೂಡುಸುತಾರೆ ಸುವ್ವಲಾಲೆ
ಲಕ್ಕಣ್ಣೀರಣ್ಣಾರು ಸುವ್ವಲಾಲೆ
ಅವ್ರು ಲಗ್ಗೆ ಹೊತುಗಂಡು ಸುವ್ವಲಾಲೆ
ಅವ್ರು ಓಡೋಡಿ ಹೋಗುತಾರೆ ಸುವ್ವಲಾಲೆ
ಅತ್ತೆ ಕಾಳಿಕದೇವಿ ಸುವ್ವಲಾಲೆ
ನಿನ್ನ ಮಾತ ಮೀರೋದಿವಲ್ಲೇ ಸುವ್ವಲಾಲೆ
ಲಕ್ಕಣ್ಣೀರಣ್ಣಾರು ಸುವ್ವಲಾಲೆ
ಅವಳ ಕೈಕಾಲಿಡಿಯಲುತಾರೆ ಸುವ್ವಲಾಲೆ
ಹಳೆಯಬೀಡು ಪಟ್ಟಣಕ್ಕೆ ಸುವ್ವಲಾಲೆ
ಹೋದರು ಬಲ್ಲಾಳರಾಯ. ಸುವ್ವಲಾಲೆ

ಹಳೆಬೀಡಪ್ಪಗಳಿರಾ ಸುವ್ವಲಾಲೆ
ನನ ತಂಗಿ ಬಲ್ಲಾಳದೇವಿ ಸುವ್ವಲಾಲೆ
ತಂಗಿ ಬಲ್ಲಳದೇವಿ ಸುವ್ವಲಾಲೆ
ಅವಳು ನೀರಿಗೆ ಬಂದರೆ ಸುವ್ವಲಾಲೆ
ಅವಳಿಗೆ ನೀರನ್ನು ಕೊಡಬ್ಯಾಡಿ ಸುವ್ವಲಾಲೆ
ಅಲ್ಲಿಂದಾನೇಲ್ಲಿಗೆ ಸುವ್ವಲಾಲೆ
ಅವರು ಎಲ್ಲಿಗೋಗಲುತಾರೆ ಸುವ್ವಲಾಲೆ
ಯಾರಗೆರೆಯಪ್ಪಗಳಿರಾ ಸುವ್ವಲಾಲೆ
ನನ ತಂಗಿ ಬಲ್ಲಳದೇವಿ ಸುವ್ವಲಾಲೆ
ಯಾರಗೆರೆಕ್ಕಗಳಿರಾ ಸುವ್ವಲಾಲೆ
ನನ ತಂಗಿ ಬಲ್ಲಳದೇವಿ ಸುವ್ವಲಾಲೆ
ಅವಳು ನೀರಿಗೆ ಬಂದಾರೆ ಸುವ್ವಲಾಲೆ
ಅವಳಿಗೆ ನೀರನ್ನು ಕೊಡಬ್ಯಾಡಿ ಸುವ್ವಲಾಲೆ
ಎಲ್ಲಿಂದಾನೆಲ್ಲೀಗೆ ಸುವ್ವಲಾಲೆ
ಅವನು ಕುಂಬಾರಕೇರಿಗೋದ ಸುವ್ವಲಾಲೆ
ಕುಂಬಾರಗೇರಿಯಣ್ಣಗಳಿರಾ ಸುವ್ವಲಾಲೆ
ನನ ತಂಗಿ ಬಲ್ಲಳದೇವಿ ಸುವ್ವಲಾಲೆ
ಕುಂಬಾರಗೇರಿಯಕ್ಕಗಳಿರಾ ಸುವ್ವಲಾಲೆ
ನನ ತಂಗಿ ಬಲ್ಲಳದೇವಿ ಸುವ್ವಲಾಲೆ
ಅವಳು ನೀರಿಗೆ ಬಂದರೆ ಸುವ್ವಲಾಲೆ
ಅವಳಿಗೆ ನೀರನ್ನು ಕೊಡಬ್ಯಾಡಿ ಸುವ್ವಲಾಲೆ
ಆಗ ಬಲ್ಲಾಳರಾಯ ಸುವ್ವಲಾಲೆ
ತನ್ನಅರಮನೆಗೆ ಹೋದಾರೆ. ಸುವ್ವಲಾಲೆ

ಲಕ್ಕಣ್ಣೀರಣ್ಣಾರೆ ಸುವ್ವಲಾಲೆ
ನಡೀರಿ ನೀವು ಹೋಗಾನ ಸುವ್ವಲಾಲೆ
ಅತ್ತೆ ಕಾಳಿಕದೇವಿ ಸುವ್ವಲಾಲೆ
ಅವ್ರ ಕೈಕಾಲ ಕಟ್ಟುತಾಳೆ ಸುವ್ವಲಾಲೆ
ಅವ್ರ ಶೂಲಕ್ಕಾಕಲುಬೇಡಿ ಸುವ್ವಲಾಲೆ
ನೀವು ಶೂಲಕ್ಕೇರಿಸಬೇಡಿ ಸುವ್ವಲಾಲೆ
ಆಗ ಬಲ್ಲಾಳರಾಯ ಸುವ್ವಲಾಲೆ
ಅವ್ರು ಕರಕೊಂಡೋಗಲುತಾರೆ. ಸುವ್ವಲಾಲೆ
ಈರಣ್ಣ ಈರಣ್ಣ ಸುವ್ವಲಾಲೆ
ಲಕ್ಕಣ್ಣಗೇನೇಳಲುತಾರೆ ಸುವ್ವಲಾಲೆ
ಲಕ್ಕಣ್ಣ ಲಕ್ಕಣ್ಣ ಸುವ್ವಲಾರೆ
ನಮ್ಮಕ್ಕ ಬನವಂತದೇವಿ ಸುವ್ವಲಾಲೆ
ಅವಳು ಬಳ್ಳಾರಿಸೀಮಿಗೆ ಸುವ್ವಲಾಲೆ
ಅವಳ ಕೊಟ್ಟಿಲಗ್ನವ ಮಾಡಿ ಸುವ್ವಲಾಲೆ
ಒಂದು ಕಾಗುದವ ಬರೆಯೆಂದ ಸುವ್ವಲಾಲೆ
ಕಾಗುದುವ ಬರೆದಾರೆ ಸುವ್ವಲಾಲೆ
ಕಾಗೆ ಕೊಳ್ಳಿಗೆ ಕಟ್ಟಿ ಸುವ್ವಲಾಲೆ
ಅದು ಬಳ್ಳಾರಿ ಸೀಮಿಗೋಗಿ ಸುವ್ವಲಾಲೆ
ಆಗ ಬನವಂತದೇವಿ ಸುವ್ವಲಾಲೆ
ಅವಳು ಏಳುಮಾರಿನ ಮಂಡೆ ಸುವ್ವಲಾಲೆ
ಅವಳು ಮೈಯ ಮುಚ್ಚಿಗೆಂಡೆ ಸುವ್ವಲಾಲೆ
ಅವಳು ಸ್ನಾನ ಮಾಡಲುತಾಳೆ ಸುವ್ವಲಾಲೆ
ಇದು ಮನಿಯ ಮುಂಜನಿ ಮ್ಯಾಲೆ ಸುವ್ವಲಾಲೆ
ಇದು ಕುತಗಂಡರಸಲೀತೀತೆ ಸುವ್ವಲಾಲೆ
ಚೀಟಿ ನೆಲಕೆ ಬಿತ್ತು. ಸುವ್ವಲಾಲೆ

ಆಗೆ ಬನವಂತದೇವಿ ಸುವ್ವಲಾಲೆ
ಅವಳು ಮೈಯ ಮುಚ್ಚಿಕೊಂಡು ಸುವ್ವಲಾಲೆ
ನಂದು ಸಾನ್ನವೇನಾಗಿಲ್ಲ ಸುವ್ವಲಾಲೆ
ಇದು ಅಪಶಕುನಾದಾವಲ್ಲ ಸುವ್ವಲಾಲೆ
ಹಟ್ಟೀಗೆ ಬಂದಾಳೆ ಸುವ್ವಲಾಲೆ
ಅವಳು ಚೀಟಿ ಓದಲುತಾಳೆ ಸುವ್ವಲಾಲೆ
ಲಕ್ಕಣ್ಣೀರಣ್ಣಾರು ಸುವ್ವಲಾಲೆ
ನನ್ನ ತಮ್ಮಗಳಿರಾ ಸುವ್ವಲಾಲೆ

ನಮ್ಮಾವ ಬಲ್ಲಳರಾಯ ಸುವ್ವಲಾಲೆ
ಅವನು ಶೂಲಕ್ಕಾಕಲುತಾನೆ ಸುವ್ವಲಾಲೆ
ಶೂಲಕ್ಕೆನೆನಾಕ್ಯಾನೆ ಸುವ್ವಲಾಲೆ
ಅವನು ಶೂಲ ಏರಿಸುತಾನೆ ಸುವ್ವಲಾಲೆ
ಆಗೆ ಬನವಂತದೇವಿ ಸುವ್ವಲಾಲೆ
ಅವಳು ಓಡೋಡಿ ಬಂದಾಳೆ ಸುವ್ವಲಾಲೆ
ಅವಳು ಬಾಗಿಲಾಗೆ ನಿಂತುಗಂಡು ಸುವ್ವಲಾಲೆ
ಅವಳ ತಮ್ಮಗಳ ನೋಡುತಾಳೆ ಸುವ್ವಲಾಲೆ
ಹುಟ್ಟೀದ ನಿರಮಲಕೆ ಸುವ್ವಲಾಲೆ
ನೀನು ಬಂದೆ ಏನ ಮುಂಡೆ? ಸುವ್ವಲಾಲೆ
ಮಾವ ಬಲ್ಲಳರಾಯ ಸುವ್ವಲಾಲೆ
ಅವ್ನು ಜಾಡಿಸಿ ಕಾಲಾಗೊದ್ದ ಸುವ್ವಲಾಲೆ
ಅವಳು ಸೊಂಟ ಮುರುದು ಬಿದ್ದಾಳೆ ಸುವ್ವಲಾಲೆ
ಅವ್ರಕ್ಕ ಬನವಂತದೇವಿ. ಸುವ್ವಲಾಲೆ
ಆಗೆ ಬಲ್ಲಳದೇವಿ ಸುವ್ವಲಾಲೆ
ಅವಳು ಬಚ್ಚಲಾಗೆ ನೀರು ಮೆಯ್ತಾಳೆ ಸುವ್ವಲಾಲೆ
ಅವಳಿಗೆ ಅಪಶಕುನನಾಗಲುತಾವೆ ಸುವ್ವಲಾಲೆ
ಏಳುಮಾರಿನ ಮಂಡೆ ಸುವ್ವಲಾಲೆ
ಅವಳು ಮೈಯಾಗೆ ಮುಚ್ಚಗಂಡು ಸುವ್ವಲಾಲೆ
ಅವಳು ಹಿತ್ತಲಿಗೆ ಹೋದಾಳೆ ಸುವ್ವಲಾಲೆ
ಅವಳು ಗಿಡವನ್ನು ನೋಡ್ಯಾಳೆ ಸುವ್ವಲಾಲೆ
ಗಿಡವೇ ಒಣಗೋಗೀತೆ. ಸುವ್ವಲಾಲೆ

ಆಗ ಬಲ್ಲಳದೇವಿ ಸುವ್ವಲಾಲೆ
ಅವಳು ಓಡೋಡಿ ಬರುತಾಳೆ ಸುವ್ವಲಾಲೆ
ಓಡೋಡಿ ಬರುತಾಳೆ ಸುವ್ವಲಾಲೆ
ಅವಳು ಏರಿಮ್ಯಾಲೆ ನಿಂತಿಗಂಡು ಸುವ್ವಲಾಲೆ
ನನ ಮಕ್ಕಳ ಸತ್ಯವಿದ್ರೆ ಸುವ್ವಲಾಲೆ
ಕೆರೆಯಲ್ಲು ವಾಜಗಲೆ ಸುವ್ವಲಾಲೆ
ನನಗೋಗಾಕಿಟಾದ್ಯಾಗಲೆ ಸುವ್ವಲಾಲೆ
ಕೆರಿಯಲ್ಲೆ ವಾಜಾಯ್ತು ಸುವ್ವಲಾಲೆ
ನನಗೋಗಾಕೀಟಾಯ್ತು ಸುವ್ವಲಾಲೆ
ಆಗ ಬಲ್ಲಳದೇವಿ ಸುವ್ವಲಾಲೆ
ಅವಳು ಓಡೋಡಿ ಹೋಗುತಾಳೆ. ಸುವ್ವಲಾಲೆ

ಮಕ್ಕಳ ನೋಡುತಾಳೆ ಸುವ್ವಲಾಲೆ
ಅಯ್ಯೊ ನನ್ನ ಮಗಳೆ ಬನವಂತದೇವಿ ಸುವ್ವಲಾಲೆ
ಜಾಡಿಸಿ ಕಾಲಾಗೊದ್ದೊ ಸುವ್ವಲಾಲೆ
ಸ್ವಂಟ ಮುರುದು ಬಿದ್ದಿದಾಳೆ ಸುವ್ವಲಾಲೆ
ಲಕ್ಕಣ್ಣೀರಣ್ಣಾರು ಸುವ್ವಲಾಲೆ
ಅಪ್ಪ ನನ ಮಕ್ಕಳಿರಾ ಸುವ್ವಲಾಲೆ
ನನ ಮಾತ ಮೀರಿ ಬಂದಿರಲ್ಲೊ ಸುವ್ವಲಾಲೆ
ಒಂದು ಮಗಿಯನ್ನು ತಕ್ಕಂಡು ಸುವ್ವಲಾಲೆ
ಹಳೆಬೀಡು ಪಟ್ಣಕ್ಕೋಗಿ ಸುವ್ವಲಾಲೆ
ಹಳೇಬೀಡಕ್ಕಗಳಿರಾ ಸುವ್ವಲಾಲೆ
ಈಟ ನೀರನ್ನು ಕೊಡಿರವ್ವಾ ಸುವ್ವಲಾಲೆ
ನಿಮ್ಮಣ್ಣ ಬಲ್ಲಳರಾಯ ಸುವ್ವಲಾಲೆ
ಮನ್ನೆ ಸಾರೋಗ್ಯವರೆ ಸುವ್ವಲಾಲೆ
ತಂಗಿ ಬಲ್ಲಳದೇವಿ ಸುವ್ವಲಾಲೆ
ಅವಳು ನೀರಿಗೆ ಬಂದಾರೆ ಸುವ್ವಲಾಲೆ
ಅವಳಿಗೆ ನೀರನ್ನು ಕೊಡಬ್ಯಾಡಿ. ಸುವ್ವಲಾಲೆ

ಎಲ್ಲಿಂದಾನೇಲ್ಲಿಗೆ ಸುವ್ವಲಾಲೆ
ಅವಳು ಹಾರೋರ ಕೇರಿಗೋದ್ಲು ಸುವ್ವಲಾಲೆ
ಹಾರೋಗೇರಿ ಅಕ್ಕಗಳಿರಾ ಸುವ್ವಲಾಲೆ
ಈಸ ನೀರನ್ನು ಕೊಡಿರವ್ವ ಸುವ್ವಲಾಲೆ
ನಿಮ್ಮಣ್ಣ ಬಲ್ಲಳರಾಯ ಸುವ್ವಲಾಲೆ
ಮನ್ನೆ ಸಾರೋಗವರೆ ಸುವ್ವಲಾಲೆ
ತಂಗಿ ಬಲ್ಲಳದೇವಿ ಸುವ್ವಲಾಲೆ
ಅವಳಿಗೆ ನೀರನ್ನು ಕೊಡಬೇಡಿ. ಸುವ್ವಲಾಲೆ

ಅಲ್ಲಿಂದಾನೆಲ್ಲೀಗೆ ಸುವ್ವಲಾಲೆ
ಅವಳು ಕುಂಬಾರಗೇರಿಗೋದಲ್ಲು ಸುವ್ವಲಾಲೆ
ಕುಂಬಾರಗೇರಿಯಣ್ಣಗಳಿರಾ ಸುವ್ವಲಾಲೆ
ನನಗೀಸ ನೀರ ಕೊಡಿರಪ್ಪ ಸುವ್ವಲಾಲೆ
ಚಿಗರೀಲಿ ಇದ್ದಾವೆ ಸುವ್ವಲಾಲೆ
ಮಕ್ಕಂಡು ಹೋಗಮ್ಮ ಸುವ್ವಲಾಲೆ
ನೀರನ್ನು ಮಕ್ಕಂಡು ಸುವ್ವಲಾಲೆ
ಅವಳು ತೆಲಿಮ್ಯಾಲೆ ಹೊತಗಂಡು ಸುವ್ವಲಾಲೆ

ಅವಳು ಮುಡುಮುಂದಗೆ ನಿತಗಂಡ್ಲು ಸುವ್ವಲಾಲೆ
ಹಳೆಬೀಡಾಳಗಲೆ ಸುವ್ವಲಾಲೆ
ಕುಂಬಾರಗೇರಿ ಊರಾಗಲೆ ಸುವ್ವಲಾಲೆ
ಕೆಂಡದಾನೆ ಮಳಿಯೇ ಸುವ್ವಲಾಲೆ
ಸುರಿಯಲು ಬಲ್ಲಳರಾಯ ಸುವ್ವಲಾಲೆ
ಅವನ ದಂಡುದಾಳಿಯೆಲ್ಲ ಸುವ್ವಲಾಲೆ
ಮಂಡಿಮರೋವಬಲ ಸುವ್ವಲಾಲೆ
ಮಂಡಿಮಾರುಬಲ ಸುವ್ವಲಾಲೆ
ಅಡಗಲಿ ಬಲ್ಲಳರಾಯ ಸುವ್ವಲಾಲೆ
ಹಾಗಂತಾನೆ ಹೇಳಿ ಸುವ್ವಲಾಲೆ
ಅವಳು ಶಾಪಕೊಟ್ಟಾಳೆ. ಸುವ್ವಲಾಲೆ

ನೀರನ್ನು ತಕ್ಕಂಡು ಸುವ್ವಲಾಲೆ
ಅವಳು ಓಡೋಡಿ ಬಂದಾಳೆ ಸುವ್ವಲಾಲೆ
ಮಗಳು ಬನವಂತದೇವಿ ಸುವ್ವಲಾಲೆ
ಮಂಡಿಗೆ ನೀರನಾಕಿದ್ಲು ಸುವ್ವಲಾಲೆ
ಲಕ್ಕಣ್ಣೀರಣ್ಣರಿಗೆ ಸುವ್ವಲಾಲೆ
ಅವಳು ಭಾವೀಗೆ ಬಿಡುತಾಳೆ ಸುವ್ವಲಾಲೆ
ಎಡಗಡೆ ಈರಣ್ಣ ಸುವ್ವಲಾಲೆ
ಬಲಗಡೆ ಲಕ್ಕಣ್ಣ ಸುವ್ವಲಾಲೆ
ನಟ್ಟಾನೆ ನಡುವೇಲಿ ಸುವ್ವಲಾಲೆ
ನಾನು ಬಲ್ಲಳದೇವಿ ಸುವ್ವಲಾಲೆ
ನನ ಮಕ್ಕಳು ಸಜ್ಜಾಗಿದ್ರೆ ಸುವ್ವಲಾಲೆ
ನನಗೆ ಸೂಲ ಕೂಡಿ ಬರಲಿ ಸುವ್ವಲಾಲೆ
ಹಂಗಂತಾನೆ ಹೇಳಿ ಸುವ್ವಲಾಲೆ
ಅವಳು ನಡುವೇಲಿ ನಿಂದಿದಾಳೆ ಸುವ್ವಲಾಲೆ

ಹಳೆಯಬೀಡಾಳಾಯ್ತು ಸುವ್ವಲಾಲೆ
ಕುಂಬಾರಗೇರಿ ಊರಾಯ್ತು ಸುವ್ವಲಾಲೆ
ಕೆಂಡದಾನೆ ಮಳೆಯು ಸುವ್ವಲಾಲೆ
ಸುರಿದತೆ ಬಲ್ಲಳರಾಯ ಸುವ್ವಲಾಲೆ
ದಂಡೂನೆ ದಾಳೆಲ್ಲ ಸುವ್ವಲಾಲೆ
ಅಡುಗೆತೆ ಬಲ್ಲಾಳರಾಯ. ಸುವ್ವಲಾಲೆ

★★★★

# ೫. ಸರ್ಜಪ್ಪನಾಯಕ

ರಂಗಪ್ಪರಾಜ ದೊರಿಗೇ
ಸಂಗಾತೀರು ಬೇಕಲ್ಲೋ ಗೆಳೆಯಾ
ಬಂಗಾರದಂತಾ ಕುಲವಣ್ಣಾ
'ಪಾಳ್ಳೇಗಾರ ದೊರಿಯೇ*'
ಕುಲದಲ್ಲಿ ನಾಯಕರ ಮಗನೋ
ದೃಢದಲ್ಲಿ ಶಿವಾನ ಭಕುತಾ
ಧೀರಾ ಘನಪಾಳ್ಳೇಗಾರಾ
ಆ ರಂಗಪ್ಪರಾಜ ದೊರಿಗೇ
ತರೀಕೆರೆ ಪ್ಯಾಟೆಯ ಒಳಗೇ
ಅವರು ಎಂತಂಬೊ ಸಾಧನೆಯ ಕಲುತವನೇ
'ಪಾಳ್ಳೇಗಾರ ದೊರಿಯೇ'
ಅವನೆಡಗೈಲೊಂದು ಈಜುಬಾಕು
ಬಲಗೈಲಿ ಫಿರಂಗಿ ಕತ್ತೀ
ದಸ್ತೂರಿ ಚೂರಿಗಳಣ್ಣಾ
ಧೀರಾ ಘನಪಾಳ್ಳೇಗಾರಾ
ನೂರೊಂದು ಆಯ್ದ ಮಡಿಗ್ಯವನೇ
'ಪಾಳ್ಳೇಗಾರ ದೊರಿಯೇ'
ಧೀರ ರಂಗಪ್ಪನಾಯ್ಕ
ಕಾಮನದುರುಗದ ಒಳಗೇ
ರಂಗುರಾಮನ ಪೂಜೆ ಮಾಡುತಾರೇ
'ಪಾಳ್ಳೇಗಾರ ದೊರಿಯೇ'
ಆಯ್ಯಾ ರಂಗುರಾಮನ ಪೂಜೆ ಮಾಡುತಾರೇ
'ಪಾಳ್ಳೇಗಾರ ದೊರಿಯೇ'

ರಂಗಸ್ವಾಮಿ ಪೂಜೆ ಮಾಡಬೇಕಾದ್ರೆ, ಆವಾಗ ಭಕ್ತಿಯಿಂದ ಹೋಗಿದ್ದಾನೆ. ರಂಗಸ್ವಾಮಿ ಪೂಜೆ ಮಾಡಿದ್ದಾನೆ. ಮನೆದೇವ್ರ ಪೂಜೆ ಮಾಡಿಕೊಂಡು ನೋಡಿ ಸ್ವಾಮಿ, ಪ್ರವೇಶ ಮಾಡ್ತಾ ಇದ್ದಾನೆ ಗುಟ್ಟಳ್ಳಿ ವನದಿಂದ. ಎಲ್ಲಿಗೆ ಬರ್ತಾ ಇದ್ದಾನೆ ? ತರೀಕೆರೆ ಪ್ಯಾಟೆಗೆ ಬರಬೇಕು

* ಸಹಗಾಯಕ ಆಗಾಗ 'ಪಾಳ್ಳೇಗಾರ ದೊರಿಯೇ', 'ಅಲ್ಲವೆ ? ', 'ಆಹಾ' ಮೊದಲಾಗಿ ಉದ್ಗರಿಸುತ್ತಾನೆ.

ಎಂಬುದಾಗಿ ಅರಮನಿಗೆ ಬರ್‍ತಾ ಇದ್ದಾನೆ. ಬರುವಂತ ಕಾಲದಲ್ಲಿ ಏಳು ತುರುಕಿನ ದಂಡು-ಅಂತಹುದು ಸೇರಿಕೊಂಡು ಆ ಗುಟ್ಟಳ್ಳಿ ವನದಲ್ಲಿ, ಗುಡ್ಡುದ ಸಾಲಿನಲ್ಲಿ ಹಳ್ಳದಲ್ಲಿ ಕೊಳ್ಳದಲ್ಲಿ ಕಾದುಕುಂತಿದ್ದು ಗುಂಡುಮದ್ದನ್ನು ತೆಗೆದುಕೊಂಡು ಇವನು ಬರುವ ಮಾರ್ಗದಲ್ಲಿ 'ಧಡೀರ್ ಸಿಡೀರ್ ಸಿಡೀರ್' ಅಂದುಬುಟ್ಟು, ಆ ಗುಂಡುಮದ್ದನ್ನು ಹಾರಿಸಿಬಿಟ್ಟಿದ್ದಾರೆ.

''ಅಲ್ಲವೆ'' ?

ಮೋಸದಲ್ಲಿ ಹೊಡೆದುಬಿಟ್ಟರು.

''ಅಲ್ಲವೆ'' ?

ಆ ಮದ್ದಿನ ಹೊಗೆ ಒಳಗೆ ಸಿಕ್ಕಿಬಿಟ್ಟಿದ್ದಾನೆ ರಂಗನಾಯಕ ಅಂತಕ್ಕಂತಾವನು. ಆ ಗುಟ್ಟಳ್ಳಿ ವನದಲ್ಲಿ, ಮಹಾ ಪ್ರಬಲವಾದಂತಾ ಮದ್ದಿನ ಹೊಗೆಯನ್ನು ಕುಡಿದುಬಿಟ್ಟಿದ್ದಾ. ರತ್ನ, ಗೋಮೇಧಿಕ, ಪುಷ್ಯರಾಗ ಎಲ್ಲಾ ದೋಚಿದ್ದಾರೆ ಸ್ವಾಮೀ. ಆ ರಂಗನಾಯಕನ ಮಡದಿ ಅನ್ನತಕ್ಕವಳು ತಾಯಿ ಎಧವಿ ಯಾಗೋಗಿಬಿಟ್ಟಳು. ಆಯಮ್ಮನ ಹೆಸರು ದೊಡ್ಡಮ್ಮನವರು. ದೊಡ್ಡಮ್ಮನವರು ವಿಧವೆಯಾಗೋಗಿದ್ದಾರೆ. ಏಳು ಜನ ಮಕ್ಕಳುಂಟು. ಏಳು ಮಕ್ಕಳ ಸಾಕಿಕೊಂಡು ಇರುವಾಗ, ಅರುಮನೆವೊಳಗೆ ಭಕ್ಷಿ ಭಂಡಾರವೆಲ್ಲ, ವಜ್ರವೈಢೂರ್ಯವೆಲ್ಲ ಪರದೇಶದವರು ಬಂದು ದೋಚಿದ್ದಾರೆ. ಈಗೇನು ಮಾಡಬೇಕು ? ಅಯ್ಯೋ ! ಈ ಪುತ್ರರನ್ನು ನಾನು ಕಾಪಾಡುವುದು ಹೇಂಗೆ ಎಂದು ಚಿಂತಾಕ್ರಾಂತಳಾಗಿದ್ದಾಳೆ. ಒಂದು ದಿವಸದಲ್ಲಿ-

''ಅಲ್ಲವೆ'' ?

ಕಡೇದಾಗಿ 'ಭಿಕ್ಷಾಂದೇಹಿ' ಅಂದಿದ್ದಾಳೆ. ಈ ಪ್ರಕಾರವಾಗಿ ಸಾಕಿಕೊಂಡು ತರೀಕೆರೆ ಪಟ್ಟಣದಲ್ಲಿರೋಣ -

ಒಂದಾನೊಂದು ದಿವಸ ನಮ್ಮ ಮಹಾರಾಜ ಶ್ರೀಗಳಾದಂತಹ ಶ್ರೀಮಾನ್ ಬೋರೇಗೌಡರನ್ನತಕ್ಕವರು ಇಂಥಾ ವ್ಯಕ್ತಿಯಾದವರು ಕನಿಕರಪಟ್ಟು -

'' ಅಲ್ಲವೆ '' ?

''ಅಮ್ಮಾ ದೊಡ್ಡಮ್ಮನವರೆ ಹೀಗೆ ದಯಮಾಡಿ'' ಅಂದರು.

''ಸ್ವಾಮಿ ಅಪ್ಪಣೆಯಾಗಲಿ' ಹಾಗಂದಿದ್ದಾರೆ ಅಮ್ಮನವರು.

''ಆಹಾ''

ಅಣ್ಣ ಚಂದುಳ್ಳನಾಯಕ
ಮಾರಪ್ಪ ನಾಡನಾಯಕ
ಊರಿಗೆ ರಂಗಪ್ಪನಾಯಕ
ಚಿಕ್ಕಪ್ಪ ರಾಮನಾಯಕ
ಬಸುಮಂಗಿ ಹಿರಿಯನಾಯಕ
ನೆರಕೇರಿ ರಂಗನಾಯಕ
ಅಣ್ಣ ಕೇಜಗದೊರಿಯೋ
ನಿಜುಗಲ್ಲ ಓಬಳಿನಾಯಕ

ಈ ಪ್ರಕಾರವಾಗಿರೋಣ ಎಂಜುಜನ ಮಕ್ಕಳನ್ನು ಸಾಕಿಕೊಂಡು ಸಲವಿಕೊಂಡಿದ್ದಾಳೆ.

ಸಾಕಿಕೊಂಡು ಇರುವಂತಾ ಕಾಲದಲ್ಲೀ .
ಸಾಕ್ಷಾತ್ ಸದ್ಗುರು ಪರಮಾತ್ಮನಿಗೆ ಕರ್ಪೂರ ಸಾಂಬ್ರಾಣಿ ಲೋಬಾನ ಮಾಡಿದ್ದಾನೆ. ಪರಮಾತ್ಮನ ಧ್ಯಾನಮಾಡ್ತ ಕುಂತಿದ್ದಾನೆ. ಕಾಡಿನಲ್ಲಿ ಮ್ಯಾಕೆಗಳು ಮೇಯ್ತಾ ಇದ್ದಾವೆ. ಮ್ಯಾಕೆ ವ್ಯಾಲೆ ದೃಷ್ಟಿ ಹೋಗಲಿಲ್ಲ ಇವನಿಗೆ. ಪರಮಾತ್ಮನಲ್ಲಿ ದೃಷ್ಟಿ! ಇವನ ಆತ್ಮನೆಲ್ಲ ಪರಮಾತ್ಮನಿಗೆ ಅರ್ಪಿಸಿಬಿಟ್ಟೊ ಸ್ತೋತ್ರ ಮಾಡ್ತಾ ಕುಂತಿದ್ದಾನೆ, ಆ ಮೂಗುತ್ತದ ಪಕ್ಕದಲ್ಲಿ.

ಓಂ ನಮಶಿವಾಯ ಗುರುವೇ ಓಂ ನಮಶಿವಾಯ ಗುರುವೇ
ತತ್ತೈ ತತ್ತೈ ತಗಡತ್ತೈ ..............
ಶಿವಶಿವ ಎನ್ನೋದು ಬಾಯೊಳು ಅಂದರೆ
ಬಂದ ಬವರ ದೂರಾಗುವದೋ
ನಮಶಿವಾಯ ಗುರುವೇ ಓಂ ನಮಶಿವಾಯ ಗುರುವೇ
ಅರಿಯಾದೆ ಮಾಡಿದೆ ಪ್ರಭುವೇ
ಕರುಣೆಸೋ ಎನ ಗುರುವೇ ಕರುಣೇ

''ಪರಮಾತ್ಮಾ ಅರಿಯದೆ ಮಾಡಿದ ಅಪರಾಧವನ್ನು ಕ್ಷಮಿಸಿ ಕಾಪಾಡೋ ಭಾರವು ತಮ್ಮದಲ್ಲವೆ ಪರಮಾತ್ಮಾ?'' - ಹಾಗಂದು ಕೈ ಜೋಡಿಸಿದ್ದಾನೆ.

ಅವನಾ ಎದೆಯಾನೇ ನೋಡಿದಾರೇ ಆರಡಿ ಅಡ್ಡಗಲವಂತೇ
ಅವನಾ ಮೀಸೆಯಾ ಕಂಡರೇ ಮುಂಗೈ ದಪ್ಪಾವಂತೇ
ಸೊಂಟಾವ ನೋಡಿದಾರೇ ಒಂದೇ ರೆಟ್ಟೇಯ ಗಾತುರಾ
ಧೀರಾ ಘನ ಪಾಳ್ಯೇಗಾರಾ
ಕತ್ತೀ ಕೈಯಲ್ಲೀ ಸಮರಂತಾ
'ಪಾಳ್ಯೇಗಾರ ದೊರಿಯೇ'.
ಇವನು ನೂರೊಂದಾಯ್ದಕ್ಕೆ ಮೊನೆಗಾರ
'ಪಾಳ್ಯೇಗಾರ ದೊರಿಯೇ'
ಕುಲದಲ್ಲಿ ನಾಯಕರ್ಹುಡುಗಾ
ದೃಢದಲ್ಲಿ ಶಿವಾನ ಭಕುತಾ
ಧೀರಾ ಘನ ಪಾಳ್ಯೇಗಾರಾ
ತತ್ತೈ ತತ್ತೈ ತಕಧೀಂ.....
ಎಂಥಾ ಸರ್ಜಪ್ಪನವನಣ್ಣಾ ಮೂರುಲೋಕದೊಳಗೇ

ಅವನಾ ಎದೆಯಾನೇ ನೋಡಿದಾರೇ ಆರಡಿ ಅಡ್ಡಗಲವಂತೇ. ಅವನಾ ಮೀಸೆಯಾ ಕಂಡರೇ ಮುಂಗೈ ದಪ್ಪಾವಂತೇ. ಸೊಂಟಾವ ನೋಡಿದಾರೇ ಒಂದೇ ರಟ್ಟೇಯ ಗಾತುರಾ! ವಸ್ತಾದಿ ಸರ್ಜಪ್ಪನಾಯಕಾ ತರೀಕೆರೆ ಪ್ಯಾಟೆ ಒಳಗೆ ಅವರ ತಂದೆಯವರು ಕಟ್ಟಿಸಿದಂತಾ ನಗರದ ಗರಡಿವೊಳಗೆ ಹೋಗಿ -

''ಹೋಗಿದ್ದಾನೆ'' !
ಅಯ್ಯಾ ಗರುಡಿ ಸಾಧನೆಯ ಕಲುತವನೇ
'ಪಾಳ್ಳೇಗಾರ ದೊರಿಯೇ'
ಗರುಡಿ ಸಾಧನೆಯ ಶಿವನೇ ಕಲಿತಾನೆ ಪಾಳ್ಳೇಗಾರ
ಗರುಡಿ ಅರಮನೇಯ ಒಳುಗೆ
ಕೆಮ್ಮ ಣ್ಣ ಮಂಟೀಯ ಒಳಗೆ
ಉಕ್ಕಿನ ಪಂಜರವ ಕಟಿಸೀ
ಧೀರ ಘನ ಪಾಳ್ಳೇಗಾರ
ಅವರ ತಂದೆಯವರು ಕಟ್ಟಿಸಿದಂತಾ ಅರಮನೆಯ ಒಳುಗೆ
ಗಾಜುನ ಮಲ್ಲಕಂಬ ಕಟೆಸೀ
ಧೀರ ಘನ ಪಾಳ್ಳೇಗಾರ
ಎಂತಂಬೋ ಸಾಧನೆಯ ಕಲುತವನೇ
'ಪಾಳ್ಳೇಗಾರ ದೊರಿಯೇ'
ಅಯ್ಯಾ ಎಂತಂಬೋ ಸಾಧನೆಯ ಕಲುತವನೇ
'ಪಾಳ್ಳೇಗಾರ ದೊರಿಯೇ'
ಎಂತಂಬೋ ಸಾಧನೆಯ ಕಲುತವನೇ
'ಪಾಳ್ಳೇಗಾರ ದೊರಿಯೇ'
ಎಂತಂಬೋ ಸಾಧನೆ ಮಾಡ್ತಾ ಇದ್ದಾನೆ ಗರುಡಿ ಅರಮನೆ ಒಳುಗೆ
''ಅಲ್ಲವೆ'' ?
ಗುಡುಗಾಗಿ ಗುಡುಗ್ಯವನಣ್ಣ
ಹದ್ದಾಗಿ ಹಾರ್‍ಯವನಣ್ಣ
ಸಿಡಿಲಾಗೊಂದು ಎರಗ್ಯವನಣ್ಣ
ಮಿಂಚಾಗೊಂದು ಮಿಂಚ್ಯವನಣ್ಣ
ಕೆಂಜುರುಗಣ್ಣು ಬಿಟ್ಟವನಣ್ಣ
ಹುರಿಮೀಸೆ ತಿರಿವ್ಯವನಣ್ಣ
ಕರಿಕರಿನೆ ಬಂದವನಣ್ಣ
ಆರ ಮೈಲಿ ಹೊಡೆದವನಣ್ಣ
ಹಿಂಗಣ್ಣ ಹೊಡೆದವನಣ್ಣ
ಮುಂಗಣ್ಣ ನೆಗೆದವನಣ್ಣ
ಇಂತೆಂಬೋ ರಾಜರ ಮೊನೆಗಾರ
'ಪಾಳ್ಳೇಗಾರ ದೊರಿಯೇ'
ಕತ್ತೀವರಸೆ ಕಲುತಿದ್ದಾನೆ.
ಕುದುರೆವರಸೆ ಕಲಿತಿದ್ದಾನೆ.
ಕುದುರೆ ಮ್ಯಾಲೆ ಸರ್‍ರನೆ ಏರೀ
ಧೀರ ಘನ ಪಾಳ್ಳೇಗಾರ

ಸುರುಹೊನ್ನೆ ತ್ವಾಟಕೆ ಹೋಗಿ
ಸುರುಹೊನ್ನೆ ತ್ವಾಟದ ಒಳಗೆ
ಶಿರುಬಗ್ಗಿ ಹೂವ ಕೊಯ್ದು
ಮರುಗಮಲ್ಲಿಗೆ ಜಾಜಿ
ಸುರುಗಿ ಶ್ಯಾವಂತಿಗಿ ತಂದ
ಪಾರಿಜಾತವನೇ ತಂದಾ
ಧೀರ ಸರ್ಜಪ್ಪನಾಯಕಾ
ಕಾಮನದುರುಗಾಕೆ ನೆಗೆದವನೇ
'ಸರ್ಜಪ್ಪದೊರಿಯೇ '
ಅಯ್ಯಾ ಕಾಮನದುರಾಗಾಕೆ ನೆಗೆದವನೇ
'ಸರ್ಜಪ್ಪದೊರಿಯೇ'
ಕಾಮಾನದುರಹುಗಾದ ಒಳಗೇ
ಗರುಡಾನ ದುರುಗದ ಒಳಗೇ
ಧೀರ ಘನ ಪಾಳ್ಳೇಗಾರ.

ರಂಗುರಾಮನ ಪೂಜೆಯ ಮಾಡುತಾರೇ ಕಲಗಂಟೇ ಒಳಗೇ. ತಂದೆ ಕಾಲದ ರಂಗಸ್ವಾಮಿ ಪೂಜೆ ಮಾಡ್ತಾ ಇದ್ದಾನೆ....

ಅಯ್ಯಾ ಮನೆಸ್ವಾಮಿ ರಂಗಾ ಗತಿಯೆಂದಾ
'ಪಾಳ್ಳೇಗಾರ ದೊರಿಯೇ'
ಅಯ್ಯಾ ಮನೆರಂಗನೆ ನೀನೆ ಗತಿಯೆಂದಾ
'ಪಾಳ್ಳೇಗಾರ ದೊರಿಯೇ'
ಮನೆ ರಂಗಸ್ವಾಮಿ ಪೂಜೆ ಮಾಡಿದ್ದಾನೇ !
''ಅಲ್ಲವೆ ?''
ಹಾಸಿ ಅಡ್ಡಬಿದ್ದಿದ್ದಾನೇ
''ಅಲ್ಲವೆ''
ನಿಮ್ಮ ಶಿರಸು ಮಕಾಡೆ ಹಾಕುತೀನಿ
'ಪಾಳ್ಳೇಗಾರ ದೊರಿಯೇ.'

ಕಸ್ತೂರಿರಂಗನ ದೊರಿಯೇ
ಧೀರ ಘನ ಪಾಳ್ಳೇಗಾರ
ಅರಮನೆ ಸರ್ಜಪ್ಪನಾಯಕಾ
ರಂಗುಸ್ವಾಮಿ ಪೂಜೆ ಮಾಡುತಾರೇ ಕಾಲಗಂಟೇ ಒಳಗೇ
ತಾಯಿ ದೊಡ್ಡಮ್ಮನವರೂ
ಅತ್ತಿಗೆ ಬಾಗಮ್ಮನವರೂ
ತಂಗಿ ನಂಜಮ್ಮನವರು

ಹುಲಿಯಾಲು ಮೊಲದ ಗಿಣ್ಣು
ಬಿದುರಕ್ಕಿ ಜೇನುತುಪ್ಪ
ಸರಳೆಮ್ಮೆ ಮರೀಯ ತುಪ್ಪ
ಸರಳೆಮ್ಮೆ ಮರಿಯ ಹಾಲು
ಧೀರ ಘನ ಪಾಳ್ಳೇಗಾರ
ಘನತರವಾದಂತಡುಗೆಯ ಮಾಡ್ಯವರೆ
'ಪಾಳ್ಳೇಗಾರ ದೊರಿಯೇ'
ಅಯ್ಯಾ ಘನತರವಾದಂತಡುಗೆಯ ಮಾಡ್ಯವರೆ
'ಪಾಳ್ಳೇಗಾರ ದೊರಿಯೇ'

ಆಗ ಮಂಚಾಮೃತದಡಿಗೆಯ ಮಾಡಿದ್ದಾರೆ. ಊಟಕ್ಕೆ ಕರೆದಿದ್ದಾರೆ -
ಊಟಕ್ಕೆ ಬೇಗ ಬಾರಯ್ಯ ನನ್ನ ಕಂದ ನೀನೇ
ಅಯ್ಯಾ ಊಟಕ್ಕೆ ಬೇಗ ಬಾರಾಯ್ಯ ನನ್ನ ಕಂದ ನೀನೇ.

ಅಪ್ಪಣೆಯ ಕೊಡೆ ತಾಯೀ
ಇಂದೀನ ದಿವುಸದಲ್ಲೀ
ತಂದನ ತಾನ ತಂದನ ತಾನ*...
ತಕಧೀಂ.... ತತ್ತಧೀಂ....... ತತ್ತೈ ತಕಟಧೀಂ...
ನನ್ನನುನಾ ನನ್ನನುನಾ ನಾನಾನಾ.

ನನ್ನಾ ಕಂದಾ ಬ್ಯಾಡ ಬ್ಯಾಡ ನನ್ನಾ ಕಂದಾ
ಬೇಡಿಕೊಂಬೆನು ನನ್ನಾ ಬಾಲಾ
ಹೋಗಬ್ಯಾಡ ನನಕಂದ ನೀನೂ
ಬೇಡಿಕೊಂಬೆ ನನ ಬಾಲಾ
ಬಿಡುಬಿಡು ನಮ್ಮ ತಾಯೀ ಎಂತಾ ಮಾತಾಡುತೀಯಾ ?
ನಾನು ಯಾರ ಕೈಗೂ ಸಿಕ್ಕುವನಲ್ಲಾ
ನಾನು ಒಬ್ರ ಕೈಗೂ ಸಿಗೋವನಲ್ಲಾ
ಉಕ್ಕಿನೇಟು ತಗೊಂಡವನಲ್ಲಾ
ಭೂಮೀಗೆ ಬೆನ್ನು ಕೊಟ್ಟವನಲ್ಲ
ತೊಟ್ಟು ರೈತವ ಬಿಟ್ಟವನಲ್ಲ
ಧೀರಾ ಘನ ಪಾಳ್ಳೇಗಾರ
ಹೋಗಿಬರುತೀನೇ ನಮ್ಮ ತಾಯೀ ....

---

* ಸೊಲ್ಲು ಬದಲಾವಣೆ. ಹಾಡಿನ ಧಾಟಿಯೂ ಬದಲಾಗುವುದು

ನಾನು ಹೋಗುತೀನಿ ಹಡದವ್ವ ತಾಯೀ
ತರೀಕೆರೆ ಪ್ಯಾಟೆಯಿಂದಾ ಬಂದವನೇ ಪಾಳ್ಳೇಗಾರಾ
ದೇಶಕೋಶವನೇ ತಿರುಗಿ
ಈ ಧೀರ ಘನ ಪಾಳ್ಳೇಗಾರಾ
ವಸ್ತಾದಿ ಸರ್ಜಪ್ಪನಾಯಕ
ಈ ಕುಲದಲ್ಲಿ ನಾಯಕರುಡುಗಾ
ಈ ಧೀರ ಘನ ಪಾಳ್ಳೇಗಾರಾ
ದೊಡ್ಡೋರಿಗೆಲ್ಲಾ ಕರಸೂವೇ ಪಾಳ್ಳೇಗಾರ ದೊರಿಯೇ
ಅಯ್ಯಾ ದೊಡ್ಡೋರಿಗೆಲ್ಲಾ ಕರಸೂವೇ
'ಪಾಳ್ಳೇಗಾರ ದೊರಿಯೇ'.

ಆವಾಗ ಹೋಗಿದ್ದಾನೆ. ಮೈಸೂರು ಬ್ರಿಟಿಷ್ ರಾಜ್ಯಕ್ಕೆ. ಪರದೇಶಕ್ಕೋಗಿದ್ದಾನೆ -
ಇಲಾಯ್ತಿ ಪಟ್ಟಣಕೋಗುತಾನೇ ಕಾಲ ಗಂಟೆ ಒಳಗೇ
ಅಯ್ಯಾ ಇಲಾಯ್ತಿ ಪಟ್ಟಣಕೋಗುತಾನೇ ಕಾಲ ಗಂಟೆ ಒಳಗೇ
ಅವನೇ ಇಲಾಯ್ತಿ ಪಟ್ಣಕೆ ಬರುತಾನೇ
'ಪಾಳ್ಳೇಗಾರ ದೊರಿಯೇ'.

ಇಲಾಯ್ತಿ ಪಟ್ಣಕ್ಕೆ ಬಂದಿದ್ದಾನೆ ಧೀರಾ ಸರ್ಜಪ್ಪನಾಯಕ.
''ಅಲ್ಲವೆ'' ?
ರಾಣಿ ರಾಜ್ಯಭಾರ ಮಾಡ್ತಾ ಇದ್ದಾಳೆ.
ಏನು ಅವಳಿಗೆ, ಸೈನ್ಯ ಮಂತ್ರಿ ಪ್ರಧಾನಿಗಳು - ಬೇಕಾದ ಮಂದಿ ಇರವ್ರೋರು. ಅಂತಾ ಇಲಾಯತಿ ಪಟ್ಣಕ್ಕೋಗಿದ್ದಾನೆ. ಇಲಾಯ್ತಿ ಪಟ್ಣದ ಉದ್ಯಾನವನ ಸೇರಿದ್ದಾನೆ.
''ಅಲ್ಲವೆ'' ?
ಉದ್ಯಾನವನದಲ್ಲಿ ಏನು ಮಾಡಿದ್ದಾನೆ ?
''ಅಲ್ಲವೆ'' ?
ಒಂದು ನೆಲಮಾಳಿಗೆ ತೆಗೆಸಿದ್ದಾನೆ.
''ಆಹಾ''
ನೆಲಮಾಳಿಗೆಯೊಳಗೆ ಏನು ಮಾಡಿದ್ದಾನೆ ? ಗುಂಡು ಮದ್ದು ತುಂಬಿದ್ದಾನೆ! ಗುಂಡು ಮದ್ದು ತುಂಬಿ, ಕತ್ತಿ ಕಟಾರ ಬಂದೂಕ ಬಾರು ಮಾಡಿದ್ದಾನೆ.
ನಿಡಿಬಿಲ್ಲು ಬಾಕನೆ ತೆಗೆದಾ
ಕೈಯಲ್ಲಿ ಹಿಡಿದುಕೊಂಡ
ಏಳು ಗೆಣ್ಣಿನ ಕೋವಿ ಬಿಗದಾ
ಧೀರ ಘನ ಪಾಳ್ಳೇಗಾರಾ
ಹೆಗಲ ಮ್ಯಾಲೆ ಮಡಗಿಕೊಂಡು

ಎಡಗೈಲೊಂದು ಫಿರಂಗಿಕತ್ತಿ
ಬಲಗೈಲೊಂದೀಜು ಬಾಕು
ಬಲಗೈಲಿ ಫಿರಂಗಿ ಕತ್ತಿ
ದಸ್ತೂರಿ ಚೂರಿಗಳಣ್ಣ
ನಿಗರೀದ ಬಾಕುಗಳಣ್ಣ
ನಿಗರೀದ ಚೂರಿಗಳಣ್ಣ
ಹೊಡೆಗೊಡಲಿ ಮಡಿಗ್ಯವನಣ್ಣ
ಧೀರ ಘನ ಪಾಳ್ಳೇಗಾರಾ
ಹಳ್ಳ ಒಂದಡಿಯನೆ ಮಾಡಿ
ದಿಣ್ಣೆಯ ಮರೆ ಮಾಡ್ಯವನೆ
ಕಾದು ಕುಂತವನೆ ಸರಜಪ್ಪ
'ಪಾಳ್ಳೇಗಾರ ದೊರಿಯೇ'
ಅಯ್ಯೋ ಯಾರೋ ಕುಂತಂಗೆ ಕುಂತವನೇ
'ಪಾಳ್ಳೇಗಾರ ದೊರಿಯೇ'.

ಕಾದು ಕುಂತಿದ್ದಾನೆ. ಕುಂತಂತ ಟೈಮಿನಲ್ಲೀ-
ಕಿವಿಗೊಟ್ಟು ಕೇಳ್ಯವನಣ್ಣಾ
ಧೀರಾ ಸರ್ಜಪ್ಪನಾಯಕಾ
ಧೀರ ಘನ ಪಾಳ್ಳೇಗಾರಾ
ಹದ್ದಾಗಿ ಹಾರ್‍ಯವನಣ್ಣಾ
ಗುಡುಗಾಗಿ ಗುಡುಗ್ಯವನಣ್ಣಾ
ಗದ್ದಲಿಸಿ ಕ್ಯಾಕ ಹೊಡುದವನೇ
'ಪಾಳ್ಳೇಗಾರ ದೊರಿಯೇ'
ಅಯ್ಯೋ ಗದ್ದಲಿಸಿ ಕ್ಯಾಕ ಹೊಡುದವನೇ
'ಪಾಳ್ಳೇಗಾರ ದೊರಿಯೇ'.

ಆವಾಗಾ ಆ ವೀರಾ ಸರ್ಜಪ್ಪನಾಯಕ-
''ಅಲ್ಲವೆ'' ?
ಗದ್ದಲಿಸಿ ಕ್ಯಾಕ ಹೊಡಿದಿದ್ದಾನೇ
''ಅಲ್ಲವೆ'' ?
ಹುರಿ ಮಾಡಿ ಮೀಸೆ ತಿರುವಿದ್ದಾನೇ
''ಅಲ್ಲವೆ'' ?
ದಮ್ಮುಕಟ್ಟಿ ದಂಡೆ ಒತ್ತಿದ್ದಾನೆ,
''ಅಲ್ಲವೆ'' ?

ಏಳು ಸಾವಿರ ದಂಡೂ ರಿಸಾಲ್ ತೆಗೆದುಕೊಂಡು ಬರ್‍ತಾ ಇದೆ.
''ಅಲ್ಲವೆ'' ?

ಆ ನಡುದಂಡಿಗೆ ತಿರುಗ ನೆಗೆದವನೇ
'ಪಾಳ್ಳೇಗಾರ ದೊರಿಯೇ'
ಅಯ್ಯಾ ನಡುದಂಡಿಗೆ ತಾನೇ ನೆಗೆದವನೇ
'ಪಾಳ್ಳೇಗಾರ ದೊರಿಯೇ'
ನಡುದಂಡಿಗೆ ನೆಗೆದವನಣ್ಣಾ
ಅರಿಯಾಗಿ ಅದುಗಿದನಣ್ಣಾ
ಗುಡುಗಾಗಿ ಗುಡುಗ್ಯವನಣ್ಣಾ
ಸಿಡಿಲಾಗಿ ಎರಗ್ಯವನಣ್ಣಾ
ನಡುದಂಡಿಗೆ ಬೇಗ ಬಿದ್ದವನೇ
'ಪಾಳ್ಳೇಗಾರ ದೊರಿಯೇ'
ಅಯ್ಯಾ ನಡುದಂಡಿಗೆ ಬೇಗ ಬಿದ್ದವನೇ
'ಪಾಳ್ಳೇಗಾರ ದೊರಿಯೇ'
ಅಂಗೈಲಿ ಹೊಡೆದವನಣ್ಣಾ
ಆರು ಸಾವಿರ ಪಡೆಯನಣ್ಣಾ
ಮುಂಗೈಲಿ ಹೊಡೆದವನಣ್ಣಾ
ಮೂರು ಸಾವಿರ ದಂಡುಗಳನ್ನ
ಹಬ್ಬದ ಕುರಿಯಂಗೆ ಕಡುದವನೇ
'ಪಾಳ್ಳೇಗಾರ ದೊರಿಯೇ'
ಅಯ್ಯಾ ಹಬ್ಬದ ಕುರಿಯಂಗೆ ಕಡುದವನೇ
'ಪಾಳ್ಳೇಗಾರ ದೊರಿಯೇ'
ಹಬ್ಬದ ಕುರಿಯಂಗೆ ಕಡುದ
ಧೀರ ಘನ ಪಾಳ್ಳೇಗಾರಾ
ನೂರೊಂದು ತಲೆಗಳ ತಗುದ
ಧೀರ ಘನ ಪಾಳ್ಳೇಗಾರಾ
ನೂರೊಂದು ತಲೆಗಳ ತಂದು
ಧೀರ ಘನ ಪಾಳ್ಳೇಗಾರಾ
ಅವನೇಳು ಗಾಡಿ ಭರ್ತಿ ಮಾಡುತಾನೇ
'ಪಾಳ್ಳೇಗಾರ ದೊರಿಯೇ'
ಏಳು ಗಾಡಿ ಭರ್ತಿಯ ಮಾಡಿ
ಧೀರ ಘನ ಪಾಳ್ಳೇಗಾರಾ
ವಸ್ತಾದಿ ಸರ್ಜಪ್ಪನಾಯಕ

ಮುಚ್ಚಿದ ಖಾನೇಯ ಕಳುವ್ಯವನೇ ಈಲಾತಿಗೆ ಶಿವನೇ.
ನನ್ನ ಸೀಮೆ ದಪ್ಪರಾಗಿ ದಪ್ಪಜ್ವಾಳ ನಿಮ್ಮ ಖಜಾನೆಗೆ ಭರ್ತಿ ಮಾಡಿಕೊಳ್ಳಿ ಎಂದು ನೂರಾರು ತಲೆಗಳನ್ನು ಕಡಿದೂ, ಅದೇ ಗಾಡಿ ಮ್ಯಾಲೆ ಹೇರಿದ್ದಾನೆ.

ಅಯ್ಯಾ ಮಸಲತ್ತು ಕುಣಿಕೀಯ
ಮಾಡುತಾಳೇ ಕಾಲಗಳಿಗೆ ಒಳಗೇ
ಮಸಲತ್ತು ತಂತ್ರೀಯ ಸ್ವಾಮೀ
ಮಾಡ್ಯವಳೆ ಇಲಾಯ್ತಿ ರಾಣಿ
ಏನೆಂದು ಆಲೋಚನೆ ಮಾಡೀ
ಕಷ್ಟ ತಾಯೆಂತ ಹೇಳುತಾರೆ ಕಾಲಗಳಿಗೆ ಒಳಗೇ
ಅಯ್ಯಾ ಕಷ್ಟ ತಾಯೆಂತ ಹೇಳುತಾರೆ ಕಾಲಗಂಟೆ ಒಳಗೇ

ಸವಾರಿ ಮಾಡಕೊಂಡು ಬರುವಂತ ಕಾಲದಲ್ಲಿ -
''ಅಲ್ಲವೆ'' ?
ಒಂದು ಹೂನಳ್ಳಿ ಪಟ್ಣಕೆ ಬರುತಾನೇ
'ಪಾಳ್ಯೇಗಾರ ದೊರಿಯೇ'
ಅಯ್ಯಾ ಹೂನಳ್ಳಿ ಪಟ್ಣಕೆ ಬರುತಾನೇ
'ಪಾಳ್ಯೇಗಾರ ದೊರಿಯೇ'
ಹೂನಳ್ಳಿ ಪಟ್ಣದ ಒಳಗೇ
ಬರುವಂತಾ ಕಾಲದ ಒಳಗೇ
ದೊಡ್ಡದೊಡ್ಡವರು ಸೇರಿದ್ದಾರೆ -
''ಅಲ್ಲವೆ'' ?
ಹೂವಾಡಿಗರ ಬೀದಿಯ ಒಳುಗೆ
ಹೂವೀನ ನಿಲುವಂಗಿ
ಹೂವೀನ ಟೋಪೀ ನೋಡೀ
ಹೂವಿನ ಷರಾಯಿ ನೋಡೀ

ಈ ಪ್ರಕಾರವಾಗಿ ಅವರೂ ಸಹ, ಅವರು- ಬಡವರಾಗಿರತಕ್ಕಂಥಾವರು, ಹೂವಾಡಿಗರ ಬೀದಿಯಿಂದ ಮಲ್ಲಿಗೆ ಹೂವಿನೊಳಗೆ ಷರಾಯಿ, ನಿಲುವಂಗಿ, ಹೂವಿನ ಟೋಪಿ, ಕಿರೀಟ, ಭುಜಕೀರ್ತಿಗಳು, ಹೂವಿನಲ್ಲಿ ತಯಾರುಮಾಡಿದ್ದಾರೆ. ನಾವೂ ಒಂದು ಮರ್ಯಾದೆ ಕೊಡೋಣ ಅನ್ನತಕ್ಕಂಥದ್ದಾಗಿ, ಆ ಪಾಳ್ಯೇಗಾರನಿಗೆ ಇವ್ರೂ ಒಂದು ಮರ್ಯಾದೆಯನ್ನು ಮಾಡಿದ್ದಾರೆ.
''ತೆಗೆದುಕೊಂಡಿದ್ದಾರೇ ''
ಇನ್ನೊಂದು ಬೀದಿಯವ್ರು, ಸೂಳೇರ ಬೀದಿಯಂತೆ ಸ್ವಾಮೀ! ಸೂಳೆಯರ ಬೀದಿಯಲ್ಲಿ ಏನು ಮಾಡುತ್ತಾರೆ ? ಅವರು ಇವನ ಮತಕ್ಕೆ ಸಂಬಂಧಪಟ್ಟವರು.

''ಅಲ್ಲವೆ'' ?

ಒಬ್ಬ ಯಾಲಕ್ಕಿ ನಾಯಕ ನೋಡು. ಯಾಲಕ್ಕಿ ನಾಯಕ ಅಂದ್ರೆ ಅವನ ಹೆಸರು ನಿಂಗನಾಯಕ.

''ಅಲ್ಲವೆ'' ?

ನಿಂಗನಾಯಕ ಅನ್ನತಕ್ಕಂತೋನಿಗೆ ಪುತ್ರಸಂತಾನವಿಲ್ಲದೆ ಓರ್ವ ಪುತ್ರಿಯನ್ನು ಪಡೆದುಕೊಂಡು,

''ಅಲ್ಲವೆ'' ?

ಸುಖದಿಂದ ಸಾಕಿದ್ದಾನೆ. ಆಯಮ್ಮನೂ ಪಚ್ಚೆ ಆರತಿ, ಪಗಡೆ ಆರತಿ, ರತ್ನದಾರತಿ ಮಾಡಿಕೊಂಡು,

''ಅಲ್ಲವೆ'' ?

ಕನ್ನಡಿ ಕಳಸ ಹಿಡಕೊಂಡು, ಸೋಬಾನಗಳನ್ನು ಪಾಡಿಕೊಂಡು

''ಅಲ್ಲವೆ'' ?

ಆ ರಾಜಾಸ್ತಾನದ ಬೀದಿಯಲ್ಲಿ, ಅವರೂ ಸಹಾ ಬರ್‍ತಾ ಇದ್ದಾರೆ.

ಸೋಬಾನೆಂಬೋದೆ ಶಿವನೀಗೆ*
ಸೋಬನ ಹೇಳೀರೆ ಸೊಬಗಿನ-ಮುತ್ತೈದೆರು
ರಾಗ ಪಾಡೀರೆ ರಮಣೀರೆ.

ಅತ್ತಲು ಶರಣೆಂಬೆ ಇತ್ತಲು ಶರಣೆಂಬೆ
ಸುತ್ತೇಳ ಗಿರಿಗೆ ಶರಣಂದು-ಶರಣಂದು
ಮತ್ತೆ ರಾಜರಿಗೆ ನಡತಂದು.

ಸೋಬಾನೆಂಬೋದೆ ಶಿವನೀಗೆ
ಸೋಬಾನೆಂಬೋದೆ ಶಿವನೀಗೆ

ಹೀಗೆ ಸೋಬಾನಗಳನ್ನು ಪಾಡಿಕೊಂಡು ಮತ್ತು ಸೋಳೇರ ಮ್ಯಾಳವನ್ನು ಕಟ್ಟಿಕೊಂಡು-
ಹಾರ್ಮೊನಿ ಬಾರಿಸಿಕೊಂಡೂ
ತಬಲಾವ ಬಜಾಯ್ಸಿಕಂಡೂ
ಬಂಟಾ ಸರ್ಜಪ್ಪನಾಯಕ
ಬರುವಂತ ದಾರಿಯ ಒಳಗೆ
ಬರುವಾ ಸಂದಿಯ ನೋಡಿ
ಈ ಧೀರ ಘನ ಪಾಳ್ಳೇಗಾರ
ವಸ್ತಾದಿ ಸರ್ಜಪ್ಪನಾಯಕ
ಧೀರ ಘನ ಪಾಳ್ಳೇಗಾರ

* ಹಾಡಿನ ಧಾಟಿ ಬದಲಾವಣೆ ಯಾಗುವುದು

ರಾಜಿರುವ ಬಳಿಗೆ ಬರುತಾರೇ ಕಾಲಗಳಿಗೆ ಒಳಗೆ
ಅಯ್ಯಾ ರಾಜರ ಬಳಿಗೆ ಬರುತಾರೆ ಕಾಲ ಗಂಟೆ ಒಳಗೆ
ಸಖೀ ನೋಡೆಸಖೀ*
ಇವ ಎಂಥಾ ಸುಂದರಾಂಗ ನೋಡೆಸಖೀ.

ನೋಡೆ ಸಖಿ ಇವನೆಂತ ಸುಂದರನು ?
ಮರುಗ ಮಲ್ಲಿಗೆ ಜಾಜೀ ಸುರುಗಿ ಸ್ಯಾವಂತಿಗೇ
ಪರಿಮಳಿಸುವ ದಿಟನೋಡೆ ಸಖೀ
ಪರಿಮಳಿಸುವ ಮರುಗ ನೋಡೆ ಸಖೀ
ನೋಡೆ ಸಖಿ ಇವನೆಂಥ ಸುಂದರನು ?
ತಕಥೈ.... ಆಆ.... ಥಕಿಥೀಂ.....
ನನ್ನನುನಾ ನನ್ನನುನಾ...

ಸಂಗೀತ ವರ್ಣಗಳನ್ನಾಡಿದ್ದಾರೇ
ರಾಜರಿಗೆ ಸಂತೋಷ ಮಾಡಿದ್ದಾರೇ.

ನೀ ಅರಮನೆಗೆ ಹೊರುಡಯ್ಯಾ ಪರಮಾತ್ಮಾ. ನಾನು ಇಲ್ಲಿಗೆ ನೆರೆದು ಹನ್ನೆರಡು ವರ್ಷ ತಪಸ್ಸಿದ್ದೆ. ನಮ್ಮ ರಾಷ್ಟ್ರದಲ್ಲಿಯೇ ಆಗಲಿ ಪರದೇಶದಲ್ಲಿಯೇ ಆಗಲಿ ನನಗೆ ತಕ್ಕಾದವರು ಸಿಕ್ಕೋವರೆಗೆ ನಾನು ಒಬ್ಬ ಪುರುಷರನ್ನು ಕಣ್ಣೆತ್ತಿ ನೋಡಬಾರದು ಎಂಬುದಾಗಿ ಹನ್ನೆರಡು ವರ್ಷ ಕಾದಿದ್ದೆ ಪ್ರಭು. ಅದಕ್ಕಾಗಿ ನನಗಿಂದಿಗೆ ಧನ್ಯನಾದೆ. ಶ್ರೀರಾಮರಿಗೆ -

ಪರದೇಯ ಒಳಗೆ ನೋಡು
ಧೀರಾ ಘನ ಪಾಳೈಗಾರ
ನಾನು ಹೆಂಡತಿಗೆ ಕಡೆಯೇ
ಎನುತಾಳೆ ಜಾತಿಗಾರ ರಂಗಿ.

ಅಯ್ಯಾ ತನ್ನಂತ ಹೆಂಡತಿ ಕಡೆಯೋನೋ
'ಪಾಳ್ಳೇಗಾರ ದೊರಿಯೇ'
ತಾನೆಡತೀಗೆ ಕಡೆಯ ಎಂಬುತಾಳೆ
'ಸರಜಪ್ಪ ದೊರಿಯಾ'
ಅಣ್ಣಾ ಹುರಿಮೀಸೆ ತಿರುವ್ಯವನಣ್ಣ
ಕಿರುಮೀಸೆ ತಿರುವ್ಯವನಣ್ಣ
ಧೀರ ಘನ ಪಾಳ್ಳೇಗಾರ

---

* ಧಾಟಿ ಬದಲಾವಣೆ. ನಾಟಕದ ಮಟ್ಟಿನಲ್ಲಿ ಹಾಡುವರು.

ಇರುವಂತ ಕಾಲದಲ್ಲಿ...
ಕೆಂಜರುಗಣ್ಣ ಬಿಟ್ಟವನಣ್ಣ
ಗದ್ದಲಿಸಿ ಕ್ಯಾಕವ ಹೊಡದ
ಧೀರ ಘನ ಪಾಳ್ಳೇಗಾರ
ಊರ ಅರಮನೆಗೆ ನಡೆದವನೆ
'ಪಾಳ್ಳೇಗಾರ ದೊರಿಯೇ'
ಅಯ್ಯಾ ಸೂಳೆ ಅರುಮನೆಗೆ ನಡೆದದೆ-
ಸೂಳೇಯ ಅರಮನೆಯೊಳಗೆ
ಪಚ್ಚೆಯಾರ್ತಿ ಪಗಡೆಯಾರ್ತಿ
ರತ್ನದಾರತಿಯ ಮಾಡಿ
ರಾಜರಿಗೆ ನಜರ ಮಾಡುತಾಳೆ
ಸೂಳೇಯ ರಾಣಿ
ಶಿವನೇ ರಾಜನಿಗೆ ನಜರ ಮಾಡುತಾಳೆ
ಕಾಲಗಳಿಗೆ ಒಳಗೆ
ರಾಜನಿಗೆ ನಜರುಮಾಡಿ
ಸುಪನಾತಿ ಸೂಳೆರಂಗಿ
ರಾಜಿರುವ ವರ್ಣವ ನೋಡಿ
ಸೂಳಿರುವ ಬಣ್ಣವ ನೋಡಿ
ಧೀರಾ ಘನ ಪಾಳ್ಳೇಗಾರ
ಏಳ್ಳು ಬೆರೆತಂಗೆ ಬೆರೆತ್ಯೆತೆ
ಕಾಲಗಂಟೆ ಒಳಗೆ
ಅರಮನೆಯ ಮೇಲೆ ನೋಡಿ
ಬಂಗಾರದ ಕಳಸ ಇಡಿಸವನೆ
'ಪಾಳ್ಳೇಗಾರ ದೊರಿಯೇ'
ಬಂಗಾರದ ಕಳಸ ಇಡಿಸಿ
ಧೀರಾ ಘನ ಪಾಳ್ಳೆಗಾರ
ಅರಮನೆಯ ಬಾಗ್ಲಿಗೆ ನೋಡಿ
ಕಬ್ಬುಣದ ದ್ವಾರವ ಮಾಡಿ
ಮಾಡ್ಸವನೆ ಪಾಳ್ಳೆಗಾರ ಧೀರಾ ಘನ ಪಾಳ್ಳೆಗಾರ.

ಈ ಪ್ರಕಾರವಾಗಿ ಧೀರಾಘನಪಾಳ್ಳೆಗಾರ ಇತ್ತಲಾಗಾದರೂ ಆ ರಾಜಾಧಿರಾಜನು ಸುಖವಾಗಿದ್ದಾನೆ.
''ಅಲ್ಲವೆ'' ?
ಈ ಕಡೆ ಸುಖವಾಗಿರೋಣ
''ಅಲ್ಲವೆ'' ?

ಅತ್ತಲೇನಾಯಿತು ? ಇಲಾಯ್ತಿ ಪಟ್ಟಣದಲ್ಲಿ ಏಳು ಸಾವಿರ ದಂಡು ಕೂಡಿಸಿದ್ದಾಳೆ. ಇಲಾಯ್ತಿ ದಂಡು ಸೇರಿಸಿದ್ದಾಳೆ. ಜಾತಿ ಗುಂಪಿನವರನ್ನು ಕರೆದಿದ್ದಾಳೆ. ಏಳು ಸಾವಿರ ದಂಡನ್ನು ಕೂಡ್ಸಿಕೊಂಡು ಮೀಟಿಂಗ್ ಮಾಡಿದ್ದಾಳೆ. ಒಂದಾನೊಂದು ದಿವಸದಲ್ಲಿ, ಅವರ ರಾಜಸ್ತಾನದ ಸಭಾದಲ್ಲಿ ಒಂದು ಮೀಟಿಂಗ್ ಮಾಡಿಬಿಟ್ಟು, ಹಿಂದೆ ಕುಲದಲ್ಲಿ ರಂಗನಾಯಕರ ಮೃತಪಡಿಸಿದ್ದು-
''ಅಲ್ಲವೆ'' !

ಕಷ್ಟಕಾಯಕ ಮಾಡಬೇಕು ಕಾಲಗಳಿಗೆ ಒಳಗೆ
ಅಯ್ಯಾ ಕಷ್ಟಕಾಯಂತ ಮಾಡಬೇಕು ಕಾಲಗಳಿಗೆ ಒಳಗೆ
ಜಾತಿಗುಂಪಿನೋರು ಬನ್ನಿ
ಜರ್ಮನಿ ಜನಗೋಳು ಬನ್ನಿ
ಈ ನಾಡದೊರೆಗಳು ಬನ್ನಿ
ಇಲಾಯ್ತಿ ದೊರೆಗಳು ಬನ್ನಿ
ಇಲಾತಿ ರಾಣಿ ಕೂಡಿ
ಇಂಥ ಏಳು ಸುತ್ತಿನ ದಂಡು
ಕೂಡುತ್ತೈತೆ ಈಲಾತಿಯ ಒಳಗೆ
ತಂದ ತಾನು ತಾನ ತಾನ
ತಂದೆ ತಂದನ್ನ ತಾನು ತಾನ*

ಅವ್ನು ಒಟ್ಟಿಗೆ ಸಿಕ್ಕನು ಒಬ್ರಿಗೆ ದಕ್ಕದೋನು ತಂದನಾನು ತಾನೂತಾನ
ಸರ್ಜ ಅಂತಂದೋ ಧೀರನ ಖಂಡಿತ ತರುತೀನಿ ತಂದನಾನು ತಾನೂತಾನ
ಅಯ್ಯ ಅಂತಂಬೊ ಬಿರುದ ಖಂಡಿತ ಕೊಡುತೀನಿ ತಂದನಾನು ತಾನೂತಾನ
ಅಯ್ಯಾ ಏಳು ಸುತ್ತಿನ ಗೊಂಡೆ ರಾಜ್ಯಕೆ ಬನ್ನಿರಿ ತಂದನಾನು ತಾನೂತಾನ
ಅಯ್ಯಾ ಹಿತ್ತಾಳೆ ಹಣಗಳ ಬೇಗುದಲ್ಲಿ ಮಾಡಿ ತಂದನಾನು ತಾನೂತಾನ
ಅಯ್ಯಾ ಏಳು ಸುತ್ತೀನ ದಂಡೀಗೆ ಬುದ್ಧೀಯ ಹೇಳುತಾರೆ ತಂದನಾನು ತಾನೂತಾನ
ಅಯ್ಯಾ ಹಿತ್ತಾಳೆ ಹಣಗಳ ಬೇಗುದಲ್ಲಿ ಮಾಡುತಾರೆ ತಂದನ್ನ ತಾನ
ಆ ಹಿತ್ತಾಳೆ ಹಣಕೆಲ್ಲ ಚಿನ್ನದ ನೀರದ್ದುತಾರೊ ತಂದನ್ನ ತಾನ
ಅಯ್ಯ ತವರದ ರೂಪಾಯ ಬೇಗುದಲ್ಲಿ ಮಾಡಬೇಕು ತಂದನ್ನ ತಾನ
ಅಯ್ಯ ತವರದ ರೂಪಾಯ ಚಿನ್ನದ ನೀರೀಗೆ ತಂದನಾನು ತಂದನ್ನ ತಾನ
ಅಯ್ಯಾ ಇಂತಂಬೋ ಹಣಗಳ ಬೇಗುದಲ್ಲಿ ಮಾಡಬೇಕು ತಂದನ್ನ ತಾನ

ಇಂತೆಂಬೋ ಹಣ ಮಾಡಬೇಕೂ -
ಅಯ್ಯಾ ರಾಜನ್ನ ಸೇಡೀಗೆ ಬೇಗುದಲ್ಲಿ ಸಿಗಿಸಬೇಕೂ ತಂದನ್ನ ತಾನ

* ಧಾಟಿ ಬದಲಾವಣೆ

ಥೈ ಥೈ.... ಥದ್ದಿದ್ದೈ ತದ್ದಿತ್ತೈ...
ಅಯ್ಯಾ ರಾಜನ ಟೈಮಲ್ಲಿ ಬೇಗನೆ ಹೊಗುಬೇಕು ತಂದನ್ನ ತಾನ
ರಾಣಿಗೆ ಲಂಚವ ಕೊಡುಬೇಕು ಎಂಬುತಾರೆ ತಂದನ್ನ ತಾನ
ನೋಡ್ರಿ- ರಾಣಿಗೆ ಏಳು ಸಾವಿರ ಹಣ ತರಿಸಿದ್ದಾನೆ
'ಆಹಾ'
ಏಳು ಸಾವಿರ ದಂಡು ಬಂದು ನಿಂತಿದೆ
'ಅಲ್ಲವೆ ?'
ಸೂಳೆ ಅರಮನೆ ಸುತ್ತ ನಿಂತುಕೊಂಡು

ಬಾರವ್ವ ಬಾರವ್ವ ನಮ್ಮ ತಾಯಿ ನೀನು ತಂದನ್ನ ತಾನ
ಅವ್ವ ಬಾರೇ ಬಾರವ್ವ ನಮ ತಾಯಿ ನೀನು ತಂದನ್ನ ತಾನ
ಅಯ್ಯ ರಾಣಿಯ ದವಲತ್ತ ಕೊಡುಸ್ತೀವಿ ನಮುತಾಯಿ ತಂದನ್ನ ತಾನ
ಅಯ್ಯ ರಾಣೀಯ ಪೌಜನ್ನು ಕೊಡತೀವಿ ನಮ ತಾಯಿ ತಂದನ್ನ ತಾನ
ನಿಮಗೇಳು ಗಾಡಿ ಹಣವನ್ನೆ ಕೊಡುತೀವಿ ಬಾರವ್ವ ತಂದನ್ನ ತಾನ
ನಿನ್ನ ಅರಮನೆ ಖಜಾನೆ ಭರ್ತಿಯ ಮಾಡಮ್ಮ ತಂದನ್ನ ತಾನ
ಅಯ್ಯ ನಿನಮನೆಗೆ ಬರುವಂತ ನಾಯಕರ ಮಗನನ್ನೆ ತಂದನ್ನ ತಾನ
ರಾಜಾಧಿರಾಜನ ಕೈಸೆರೆ ಕೊಡುಬೇಕು ತಂದನ್ನ ತಾನ
ಸರ್ಜನ ಕೈಸೆರೆ ಕೊಡುಬೇಕು ನಮ್ಮ ತಾಯಿ ತಂದನ್ನ ತಾನ

ಹಣವನ್ನು ಕಂಡರೆ ಹೆಣ ಬಾಯಿಬಿಡುತ್ತೈತೆ*
ಹಣಕಿನ್ನು ಆಸೆ ಎಲ್ಲಾರ್ಗೆ ರಾಣೀ ರಾಣೀ ರಾಣೀ

ಅವನನ್ನು ಕೈಸೆರೆ ಹಿಡಿದುಕೊಡುತ್ತೀನಿ ಎಂಬುದಾಗಿ ಪ್ರಮಾಣ ಮಾಡಮ್ಮ ತಾಯಿ. ಹಾಲು ಭಾಸೆಯನ್ನು ಮಾಡಮ್ಮ -

ಹಾಲುಬಾಸೆ ನೀರುಬಾಸೆ ಬೇಗುದಲ್ಲಿ ಮಾಡುತಾಳೆ ತಂದನ್ನ ತಾನ
ಅಯ್ಯ ತಾನಾಡೋ ಮಾತೀಗೆ ತಪ್ಪಾಳೋ ನಾನಲ್ಲಾ ತಂದನ್ನ ತಾನ
ಇಲ್ಲಿಗೆ ಒಂದು ವಾರದ ಒಳಗೆ ಕೈಸೆರೆಕೊಡುತೀನಿ ತಂದನ್ನ ತಾನ
ನಾನು ಒಂದು ವಾರಾದೊಳಗೆ ಕೈಸೆರೆ ಕೊಡುತೀನಿ ತಂದನ್ನ ತಾನ
ಅಯ್ಯ ಆ ಮಾತ ಬೇಗುದಲ್ಲಿ ಕೇಳುತಾರೆ ಸಭೆಯೆಲ್ಲ ತಂದನ್ನ ತಾನ
ಅಯ್ಯ ಸಭೆಯೆಲ್ಲ ಕೇಳವರೆ ಸಂತೋಷಪಡುತಾರೆ ತಂದನ್ನ ತಾನ
ಜಾತ್ಯೋರು ಬನ್ನಿ ಅಯ್ಯಾ ತಾವು ಗೌಡುಗಳ ಬರಬೇಕು*
ಜಾತಿ ಸುತ್ತಿನೋರು ದಂಡೆ ಬೇಗುದಲ್ಲಿ ಬರಬೇಕು
ಜಾತಿ ಸೂತ್ತಿನೋರು ದಂಡು ಬೇಗುದಲ್ಲಿ ಬರಬೇಕು
ಸುತ್ತಿನೋರ ದಂಡೆ ಹೋಗಿ ಜಾತ್ಯೋರ ದಂಡನೆಲ್ಲ

* ಹಾಡಿನ ಧಾಟಿ ಬದಲಾಗುವುದು

ನಾನು ಹೇಳಿದಂತೆ ನೀವು ಕೇಳಬೇಕು.
ನಾನೇಳಿದಂತೆ ಕೇಳಬೇಕು ಸುತ್ತಿನೋರ ದಂಡ ನಾನ್ಯಾವ ರೀತಿಯಲ್ಲಿ -
ಇಂದೀನ ದಿನುದಲ್ಲಿ ನನ ಮನೆಗೆ ಬರುವಂತ ರಾಜಾಧಿರಾಜಾ*
ಬೇಡಿಕೊಂಬೆನೆ ತಾಯಿ ಬ್ಯಾಡವ್ವ ನನ್ನ ಮಗುಳೆ
ಅವನ ಅನ್ನವನೆ ಉಂಡು
ಅವನ ಬಟ್ಟೆಯಾನೆ ಹೊದ್ದು ಅವನ ಸ್ವತ್ತಾನೆ ತಿಂದು
ಉಂಡಮನೆಗೆ ಎರಡ ಬಗಿಬೋದೆ ನನ್ನ ಮಗಳೆ ಹೇಳೆ ?
ಅಮ್ಮಾ ನಂಬಿದೋರಿಗೆರಡೆ ಬಗಿಬೋದೆ ನನ್ನ ಮಗಳೆ ನೀನು
ಮಗಳೇ, ನಂಬಿದೋರಿಗೆರಡ ಬಗಿಬೋದೆ ಮಗಳೆ ನೀನು ?
ಎಂತ ಮಾತನಾಡುತೀಯ ಕೇಳು ಕೇಳೋ... ನನ್ನ ತಂದೆ
ಎಂತ ಮಾತಾಡುತೀಯ ಧೀರ ಘನ ಪಾಳ್ಳೇಗಾರ
ಖಂಡಿತ ಕೊಡಬೇಕು ಕಂಡ್ಯ
ಧೀರಘನಪಾಳ್ಳೇಗಾರ್ನ ಕೊಡುತೀನಿ ಖಂಡಿತ ನಾನು
ಹಾಗೆಂದು ತಂದೆಗೆ ಹೇಳಿ ನನ್ನ ಮಾತ ಕೇಳದೆಹೋದ್ರೆ
ನಿನ್ನೆರಡೆ ತುಂಡಿಗೆ ಕಡಿಸೇನು ನನ್ನ ತಂದೆ ನಿನ್ನ
ಅಯ್ಯಾ ನಿನ್ನೆರಡು ತುಂಡಿಗೆ ಕಡಿಸೇನು.

ಶಿವನೇ ಎರಡೆ ತುಂಡಿಗೆ ಒಡಸೇನು ನಮ್ಮ ತಂದೆ ಕೇಳು -
ಆ ಮಾತ ಕೇಳಿಕೊಂಡು ತಂದೆ ನಿಂಗಾನಾಯ್ಕ
ಅವರ ತಂದೆ ನಿಂಗಾನಾಯ್ಕ ಬ್ಯಾಡವ್ವ ನನ್ನ ಮಗಳೆ
ಈವತ್ತಿನ ಗಳಿಗೆ ಒಳಗೆ -
ನೀನೇಳಿದಂತೆ ನಾನು ಕೇಳುತೀನಿ ನನ್ನ ಮಗಳೆ

ಸಿಹಿನೀರಿಗೆ ಹೋಗಿಬರುವ ಸಮಯದೊಳಗೆ ಪ್ರಾಣ ಹೋಗುತ್ತೈತೆ. ಶಿವನೇ ಹರನೇ- ಆ ಪಟ್ಟಣದಲ್ಲಿ ಹೊನಳ್ಳಿ ಪಟ್ಟಣದಲ್ಲಿ ಸೀನೀರು ಕಲ್ಯಾಣಿಗೆ ಹೋಗಿ ನೀರು ತುಂಬಿಕೊಂಡು ಬರುವ ಸಮಯದಲ್ಲಿ ಸಿಹಿನೀರ ಕಲ್ಯಾಣಿ ಕಟ್ಟಡ ಮಾಡಿದ ಕಲ್ಲ ಪೊಟರೆಯೊಳಗೆ ಇರ್ತಕ್ಕಂತ ಒಂದೇ ಖಂಡದ ಸರ್ಪ, ಒಂದೇ ಖಂಡದ ಸರ್ಪ ಕಲ್ಲ ಪೊಟರೆಯಿಂದ ಬಂದುಬುಟ್ಟು ಬಲಗಾಲಹತ್ರ ನುಗ್ಗಿಬಿಟ್ಟು ಆಗಲೋ ಈಗಲೋ ಪ್ರಾಣ ಹೋಗುತ್ತೆ ಎಂಬುದಾಗಿ ಹೇಳಿತ್ತು.
''ಅಲ್ಲವೆ''
ಆ ಸರ್ಜಪ್ಪನಾಯಕ ಅನ್ನತಕ್ಕಂಥವನು
ಹದ್ದು ಬಂದಂಗೆ ಬರುತ್ತಾನೆ
ಸರ್ಜಪ್ಪದೊರೆಯೇ

* ಹಾಡಿನ ಧಾಟಿ ಬದಲಾಗುವುದು

ಅವನೇ ಹದ್ದು ಬಂದಂಗೆ ಬರುತಾನೆ
ಸರ್ಜಪ್ಪದೊರೆಯೇ
ಬಂದಂತ ಕಾಲದ ಒಳಗೇ ಧೀರಾಘನ ಪಾಳ್ಳೆಗಾರ
ಈ ವಸ್ತಾದಿ ಸರ್ಜಪ್ಪನಾಯಕ
ಅವನ ಖಂಡಿತ ಕೈಸೆರೆ ಕೊಡುತೀನಿ
ಜಾತ್ಯೋರ ದಂಡಿಗೆ
ಅಯ್ಯಾ ಖಂಡಿತ ಕೈಸೆರೆ ಕೊಡುತೀನಿ ಕುಂಪಣ್ಯೋರ ದೊರೆಗೆ ಕೈವಸಕೊಡುತೀನಿ
ಎಂಬುದಾಗಿ ಹೇಳಿದ್ದಾಳೆ.
''ಅಲ್ಲವೆ'' ?

ಎದ್ದೇಳಿ ಪಾಳ್ಳೇಗಾರ ಏಸೊತ್ತು ಸುಖನಿದ್ರೆ*
ಎಷ್ಟೊತ್ತು ಸುಖನಿದ್ರೆ ಧೀರ ಘನ ಪಾಳ್ಳೆಗಾರ
ನಿನ್ನ ಸೂಳೆ ಮುಖವನ್ನು ನೋಡುಬಾರೋ
ಕಾಲಗಳಿಗೆ ಒಳಗೆ.

ಆ ಮಾತ ಕೇಳಿಕೊಂಡು
ದೀರಾ ಘನ ಪಾಳ್ಳೇಗಾರ
ಎದ್ದವನೆ ಶೂರಾನಾಯ್ಕ
ದೀರಾ ಘನ ಪಾಳ್ಳೇಗಾರ
ತಾಯಪಾದಕ್ಕೆ ಹೋಗಿ ವಂದಾನೆ ಮಾಡತಾನೆ
ಹೋಗಿ ಬರುವೇನೆ ನಮ ತಾಯಿ ಹಡೆದವ್ವ ತಾಯಿ
ಅಯ್ಯಾ ಹೋಗಿ ಬರುವೇನೆ ನನು ತಾಯಿ ಹಡೆದಮ್ಮ ಕೇಳೆ.
ಬ್ಯಾಡಪ್ಪ ನನ್ನ ಮಗನೆ
ಹೋಗುಬ್ಯಾಡ ನನ್ನ ಬಾಲಾ
ಹೋಗುಬ್ಯಾಡ ನನ್ನ ಕಂದ
ನಿನು ಮುತ್ತಿನಂತಾ ಪ್ರಾಣಹೊಗುತ್ತೈತೇ
ಕಾಲಗಂಟೆ ಒಳಗೆ.
ಹೇಯ್ ನನ್ನ ಪ್ರಾಣ ಹೋಗೋದು ನಿನಗೆ
ಹ್ಯಾಗೆಗೊತ್ತವ್ವ ತಾಯಿ ?
ಧೀರ ಘನಪಾಳೆಗಾರ ತಾಯ ಕೇಳುತಾಲವನೆ
ನಿನ ಪ್ರಾಣ ಹೋಗುದು ನನಗೆ
ಗೊತ್ತುಂಟು ನನ್ನ ಮಗನೆ
ನಾನ್ಹೇಳಿದ ಮಾತನ್ನು ಲಾಲಿಸೋ ನನ್ನ ಬಾಲ ನೀನೆ

* ಹಾಡಿನ ಧಾಟಿ ಬದಲಾಗುವುದು

ನಾನೇಳಿದ ಮಾತನ್ನು ಕೇಳೋ ನನ್ನ ಮಗನೆ ಕೇಳೋ
ಅಯ್ಯಾ ಕಟ್ಟಿದ ಅರಮನೆಯ ಬಿಡುಬ್ಯಾಡ ನನ್ನ ಮಗನೆ ಕೇಳೋ
ಮಗನೇ ಕಟ್ಟಿದ ಅರಮನೆಯ ಬಿಡುಬ್ಯಾಡ.
ಆ ಮಾತ ಕೇಳಿಕೊಂಡು ಧೀರ ಘನ ಪಾಳ್ಳೇಗಾರ
ಬಿಡುಬಿಡೆ ನಮ್ಮ ತಾಯಿ
ಈವತ್ತಿನ ಗಳಿಗೆ ವಳಗೆ
ನಾನು ಖಂಡಿತ ಸೂಳೆಮನೆಗೆ ಹೋಗುತಿನಿ
ಹಡುದಮ್ಮ ಕೇಳೆ.

ತಾಯಿ ನಾನು ಎಷ್ಟು ಮಾತ್ರಕ್ಕೂ ನಿಲ್ಲದಿಲ್ಲಾ -

ಬಲಗಡೆ ಪ್ರಸಾದ ಕೊಡಬೇಕು ನನ್ನ ಸ್ವಾಮಿ ನೀನು
ಬಲಗಡೆ ಪ್ರಸಾದ ನೀನು ಖಂಡಿತ ಕೊಡಬೇಕು ಸ್ವಾಮಿ
ನೀನು ಕೊಡದೆ ಹೋದಾರೆ ನೋಡು
ನಿನ್ನ ಕಿತ್ತು ಮಕಾಡೆ ಎಳೆವೇನೋ
ಕಾಲ ಗಂಟೆ ಒಳಗೆ.
ಅಯ್ಯಾ ಕಿತ್ತು ಮಕಾಡೆ ಏಳುದೇನೋ
ಕಾಲು ಗಂಟೆ ಒಳಗೆ.
ಆ ಮಾತ ಕೇಳಿಕೊಂಡು ರಂಗುಸ್ವಾಮಿ ಏನಂಬುತಾರೆ
ಇವ್ರ ತಂದೆ ಕಾಲ್ದ ರಂಗನಾಯ್ಕ
ತಂದೆ ಕಾಲ್ದ ರಂಗಪ್ಪನಾಯ್ಕ
'ಅಯ್ಯೋ'
ಅಯ್ಯಾ ಬಲಗಡೆ ಪ್ರಸಾದ ಕೊಡುತಾನೆ
ಹೆದರಕೊಂಡು ದೊರೆಯೆ
ಬಲಗಡೆ ಪ್ರಸಾದ ಕೊಟ್ಟ
ಧೀರ ಘನ ಪಾಳ್ಳೆಗಾರ
ವಸ್ತಾದಿ ಸರ್ಜಪ್ಪನಾಯ್ಕ
ದಮ್ಮುಕಟ್ಟಿ ದಂಡೆಯ ಒತ್ತಿ
ಹುಸಿನಗುವ ನಗುತವನಣ್ಣ
ಹುಸಿನಗುವ ನಕ್ಕವನಣ್ಣ
ಧೀರ ಸರ್ಜಪ್ಪನಾಯಕ
ಆವಾಗ ಏನು ಮಾಡಿದ್ದಾನೆ ?
ಮೂರು ಮೈಲಿ ನೆಗ್ದವನಣ್ಣ
ಮೂರು ಮೈಲಿಲಾಗದ ಹೊಡದ
ಮೂರು ಮೈಲಿ ಲಾಗವ ಹೊಡೆದು
ಈ ಧೀರ ಘನ ಪಾಳ್ಳೆಗಾರ
ಈ ವಸ್ತಾದಿ ಸರ್ಜಪ್ಪನಾಯಕ

ಗದ್ದಲಿಸಿ ಕ್ಯಾಕ ಹೊಡದವನೆ
'ಪಾಳ್ಳೆಗಾರ ದೊರಿಯೆ'
ಅವನು ಗದ್ದಲಿಸಿ ಕ್ಯಾಕ ಹೊಡೆದವನೆ
'ಪಾಳ್ಳೆಗಾರ ದೊರಿಯೆ'.

ಅಂಬಾದೇವಿ ದೇವಿ ಮಾತೇ*
ಪರಿಪಾಲಿಸೇ ಮಾದೇವಿ
ಜಗದಂಬಾ ಪರಿಪಾಲಿಸಿ ಹೇ ಜಗದಂಬಾ

ಉರಿಮುಖ ನೋಡಿ ಹುಲಿ ಮುಖ ನೋಡಿದಂಗಾಯಿತು. ಹೆದರ್ಕೊಂಡಿದ್ದಾಳೇ.

ತಲೆಮ್ಯಾಗಳ ಮಂಡೆ ಒದರುತ್ತಾವಳೆ ತಲೆಯೆ ಓಗುತ್ತೈತೆ
ಅಯ್ಯಾ ತಲೆ ಮ್ಯಾಗಳ ಮಂಡೆಯ ಒದರುತ್ತಾಳೆ ತಲೆಯೆ ಓಗುತ್ತೈತೆ.

ಅದೇಕ್ಷಣ ತಲೆಯ ಮ್ಯಾಲೆ ಪ್ರಸಾದ ಒದರಿಬಿಟ್ಟು, ಹೆಚ್ಚಿನ ಪೂಜೆ ಮಾಡಿಸ್ತೀನಿ, ಹೆಚ್ಚಿನ ವಾದ್ಯ ಮಾಡಿಸ್ತೀನಿ, ಅಂದುಬುಟ್ಟು ರಣವಾದ್ಯವನ್ನು ಅಮ್ಮನ ಗುಡಿಮುಂದೆ ಮಾಡಿಸಿಬಿಟ್ಟ. ಅಲ್ಲಿ ಒಂದು ಪದ ಹೇಳಿಬಿಟ್ಟ. ಅಮ್ಮನಿಗೆ ಸ್ತೋತ್ರಮಾಡಿ ಒಂದು ಪದ್ಯಹೇಳಿ -

ಬಾಗುಲು ಚಿಕ್ಕಾದೋ ಬಗ್ಗಿಬಾರೇ ಎಲ್ಲವ್ವ*
ಭಾಗ್ಯ ಉಳ್ಳೋನು ನಿನ ಮಗ - ಪೂಜಾರಿ
ಬಾಗಲಿಗೆ ಮುತ್ತ ಬಿಡಿಸ್ಯಾನೇ.

ಯಾಕೆ ಎನ್ನವ್ವ ನನ ಮೇಲೆ ಕೋಪಗಳು
ನಾ ತಂದು ಕೊಡುವೆ ನಿನಿಗೊಂದ - ಗಜನಿಂಬೆ
ಈ ಕಿರುಸಂತೆ ತೋಪಿನಲ್ಲಿ ಬೆಳಿಯೋ

ಆವಾಗ ಅಮ್ಮನೋರು ಏನುಮಾಡ್ತಾ ಇದ್ದಾರೆ ? -

ಉಕ್ಕಿನ ನಿಲವಂಗಿ ತರಸಿ
ಉಕ್ಕಿನ ಟೋಪಿಯ ತರಸಿ
ಉಕ್ಕಿನ ಇಜಾರವ ಧರಸಿ
ಧೀರಾ ಘನ ಪಾಳ್ಳೇಗಾರ
ಕಂಚು ಗುರಾಣಿಯ ಹಿಡುದು
ಎಡಗೈಲಿ ಹಿಡಿದುಕೊಂಡು
ಉಕ್ಕಿನ ಗುರಾಣಿಯನ್ನು
ಬಲಗೈಗೆ ಹಿಡದುಕೊಂಡು
ಧೀರ ಘನ ಪಾಳ್ಳೆಗಾರ

---

* ಹಾಡಿನ ಧಾಟಿ ಬದಲಾಗುವುದು
* ಕಗ್ಗದ ಪದದಂತೆ ಧಾಟಿ ಬದಲಾವಣೆಯಾಗುವುದು

ವೀರ ಸರ್ಜಪ್ಪನಾಯಕ
ನೂರೊಂದಾಯ್ದುವ ತೊಡುತಾನೇ
ಕಾಲಗಳಿಗೆ ಒಳಗೆ
ಅವನೇ ನೂರೊಂದಾಯ್ದುವ ತೊಡುತಾನೆ
'ಸರ್ಜಪ್ಪದೊರಿಯೆ'
ಎಡಗೈಲೊಂದೀಜುಬಾಕು
ಬಲಗೈಲಿ ಫಿರಂಗಿ ಕತ್ತಿ
ಓಯ್ದೀಟು ಚೂರಿಗಳನ್ನ ಒಳಗಡೆಲಿ ಮಡಿಗ್ಯವನಣ್ಣ
ಏಳುಗೆಣ್ಣಿನ ಕೋವಿ ಬಿಗುದಾನು
ಏಳು ಗಣ್ಣಿನ ಕೋವಿಯ ಬಿಗುದು
ಹೆಗಲ ಮ್ಯಾಲೆ ಬಾಚಿಟ್ಟುಕೊಂಡು
ಹದಿನೆಂಟು ಮೊಳದುದ್ದ ಶಿವನೆ
ಉಕ್ಕಿನ ನಡುಪಟ್ಟಿಯಕಟ್ಟಿ
ಧೀರಾ ಘನ ಪಾಳ್ಳೇಗಾರ
ಪಂಜಾಬಿಚಣ್ಣವ ಹೊಡದು
ಧೀರಾ ಘನ ಪಾಳ್ಳೇಗಾರ
ಇಂತೆಂಬ ಆಯ್ದುವ ತೊಡುತಾನೆ
ಪಾಳ್ಳೆಗಾರ ದೊರಿಯೆ
ಅಯ್ಯಾ ಇಂತೆಂಬಾಯುಧವ ತೊಡುತಾನೆ
'ಪಾಳ್ಳೆಗಾರ ದೊರಿಯೆ'

ತಂದನ್ನೆ ತಾನ*
ಅಯ್ಯಾ ಕೀಲುಬಂದಿಗಳ ಧರಿಸ್ಯಾಳೆ ಕಾಲ್ನಾಗೆ ತಂದನ್ನತಾನ
ಅಯ್ಯಾ ನಾಗರ ಹೆಡೆಯಂತ ನಡುವೀಗೆ ನೋಡಣ್ಣ ತಂದನ್ನತಾನ
ಅಯ್ಯಾ ನಾಗರ ಹೆಡೆಯಂತ ಒಡ್ಯಾಣ ಧರಿಸ್ಯಾಳೆ ತಂದನ್ನತಾನ
ಅಯ್ಯಾ ಏನೇನು ಆಭರಣ ಧರಿಸ್ಯಾಳೆ ಜಾಟಗಿತ್ತಿ? ತಂದನ್ನತಾನ
ಅಯ್ಯಾ ಪೀತಾಂಬ್ರ ಉಡುಗೇಯ ಉಡುತಾಳೆ ಬೇಗುದಲ್ಲಿ ತಂದನ್ನತಾನ
ಅಯ್ಯಾ ಕಸ್ತೂರಿಬಟ್ಟನ್ನು ಫಣಿಮ್ಯಾಲೆ ಧರಿಸ್ಯಾಳೆ ತಂದನ್ನತಾನ
ಅಯ್ಯಾ ಎದಿಗೀಗ ನೋಡಯ್ಯ ಎದಿಹಾರ ಧರಿಸ್ಯಾಳೆ ತಂದನ್ನತಾನ
ಅಯ್ಯಾ ಮೂಗಿಗೆ ನೋಡಯ್ಯ ಸಂಪೀಗೆ ಬಟ್ಟನ್ನ ತಂದನ್ನತಾನ
ಅಯ್ಯಾ ಸಂಪೀಗೆ ಬಟ್ಟನ್ನ ಧರಿಸ್ಯವಳೆ ತಾಟಗಿತ್ತಿ ತಂದನ್ನತಾನ
ಅಯ್ಯಾ ವಾಲೆ ಜುಮಕಿಗಳ ಕಿವಿಯಲ್ಲಿ ಧರಿಸ್ಯಾಳೆ ತಂದನ್ನತಾನ
ಅಯ್ಯಾ ಮೇಲ ಹೊದಕೆ ನೋಡಿ ಉಡುಪನ್ನ ತಂದನ್ನತಾನ

* ಹಾಡಿನ ಧಾಟಿ ಬದಲಾಗುವುದು

ಅಯ್ಯಾ ಮರುಗ ಮಲ್ಲೀಗ್ಯಂತ ಪಾವಡಾನ ಧರಿಸ್ತಾಳೆ ತಂದನ್ನತಾನ
ಅಯ್ಯಾ ಮುಸುಗೀನ ಗೌಸನ್ನ ಧರಿಸ್ಯಾಳೆ ತಂದನ್ನತಾನ

ಅಡಿಗೆಸಾಲಿಗೆ ಹೋಗಿದ್ದಾಳೆ. ಭಯಭಕ್ತಿಯಿಂದ ಅಡಿಗೇಯ ಮಾಡಿದ್ದಾಳೆ.

ಅಯ್ಯಾ ಸಣ್ಣಕ್ಕಿ ಸವಿಬೋನ ಅಡುಗೇಯ ಮಾಡ್ಯಾಳೆ ತಂದನ್ನತಾನ
ಅಯ್ಯ ಸಣ್ಣಕ್ಕಿ ಅನ್ನಕೆ ಏನೇನು ಮಾಡಬೇಕು? ತಂದನ್ನತಾನ
ಅಯ್ಯಾ ಸರಳೆಮ್ಮೆ ನೊರಿಹಾಲು ಬೇಗನೆ ತರಸ್ಯಾಳೆ ತಂದನ್ನತಾನ
ಅಯ್ಯಾ ಸರಳಮ್ಮೆ ತುಪ್ಪಾವ ಕಾಸ್ಯವಳೆ ಬೇಗುದಲ್ಲಿ ತಂದನ್ನತಾನ
ಅಯ್ಯಾ ನಾಗರ್ಹಾವಿನ ತಲೆಯನ್ನು ಬೇಗದಲ್ಲಿ ತರಿಸ್ಯಾಳೆ ತಂದನ್ನತಾನ
ಅಯ್ಯಾ ಇಲಿಯ ಪಾಷಾಣದ ಬೇಗುದಲ್ಲಿ ಬೆರಿಸ್ಯಾಳೆ ತಂದನ್ನತಾನ
ಅಯ್ಯಾ ಉಚ್ಚಳ್ಳಣ್ಣೆ ನೋಡು ಕಣಗಿಲಬೇರನ್ನ ತಂದನ್ನತಾನ
ಅಯ್ಯಾ ಇದು ಎಲ್ಲ ಬೇಗುದಲ್ಲಿ ಒಟ್ಟಿಗೆ ಇಡುದವಳೆ ತಂದನ್ನತಾನ
ಅಯ್ಯಾ ರಸವನ್ನು ಬೇಗಾ ತೆಗುದಾಳೆ ಆ ಬಾಲೆ. ತಂದನ್ನತಾನ

ಇದನ್ನೆಲ್ಲಾ ಬೆರಸಿದ್ದಾಳೆ. ಮಾಡಿದಂತಾ ಅಡಿಗೆಗೆ -

ಅಯ್ಯಾ ಊಟ ಮಾಡೇಳು ನೀ ಬ್ಯಾಗ
'ಪಾಳ್ಳೇಗಾರ ದೊರಿಯೇ'
ಊಟಾನ ಮಾಡುಬನ್ನಿ
ಹಸಿದಲ್ಲೊ ನಮ್ಮಾಗುರುವೆ
ಹಸಿದೆಲ್ಲೋ ನಮ್ಮ ಸ್ವಾಮಿ
ಧೀರ ಘನ ಪಾಳ್ಳೇಗಾರ
ತಲೆ ಮ್ಯಾಲೆ ಮುಸುಗುಹಾಕಿ
ಊಟ ಇಡೋ ಗಿಂಡಿ ಒಳಗೆ
ಪನ್ನೀರ ಅಗ್ಗಣೆಯ ತುಂಬಿ
ನಯ ನುಡಿ ಭಯ ಭಕ್ತಿ
ನಯನುಡಿಲಿ ತಾನೆ ಬರುತಾಳೆ
ಸೂಳೆಗಾರ ರಂಗಿ
ಅವಳೇ ನಡೆಮಡಿ ಮ್ಯಾಲೆ ಬರುತಾಳೆ
ಸೂಳೆಗಾರ ರಂಗಿ
ರಾಜನಿಗೆ ನೀರು ಕೊಟ್ಟು
ಕೈಕಾಲು ಮಜ್ಜಣವ ಮಾಡಿ
ಮಕಮಜ್ಜನ ಮಾಡಿಕೊಂಡು
ಊಟ ಇಡೋ ಗಿಂಡಿ ತಗುದ
ಎರಡುಕ್ಕೈಲೂ ಹಿಡಿದುಕೊಂಡು
ಆ ಭಗವಂತನ ಸ್ತೋತ್ರ ಮಾಡುತಾನೇ

ರಂಗಪ್ಪನ ಮಗನೇ
ಅಯ್ಯಾ ಭಗವಂತನ ಸ್ತೋತ್ರ ಮಾಡುತಾನೇ
ರಂಗಪ್ಪನ ಮಗನೇ
ಅವನೇ ಭಗವಂತ ಸ್ತೋತ್ರ ಮಾಡುತಾನೇ
'ಪಾಳೈಗಾರ ದೊರಿಯೇ'.

ಭಗವಂತನ ಸ್ತೋತ್ರವನ್ನು ಮಾಡುವಂತ ಕಾಲದಲ್ಲಿ -

ಕಾಮನ ದುರುಗದಾಗೆ ಇರುವ
ಇವ್ರ ತಂದೆಕಾಲದ ರಂಗಸ್ವಾಮಿ
ತಂದೆ ಕಾಲ್ದ ರಂಗಸ್ವಾಮಿ
ಧೀರ ಘನ ಪಾಳ್ಳೇಗಾರ
ಇವ್ರು ತಾಯಿ ತೌರುಮನೆಯ
ಉಚ್ಚಂಗಿ ಎಲ್ಲಮ್ಮ ತಾಯಿ
ಆಲೂರು ದಂಡ್ನೆಲ್ಲಮ್ಮ ತಾಯಿ
ನಡುದುರ್ಗದ ಬಸುವಣ್ಣ
ರಾಣಿ ಅರಮನಿಗೆ ಬರುತಾರೆ
ಕಾಲಗಳಿಗೆ ಒಳಗೆ
ಅಯ್ಯಾ ರಾಣಿ ಅರಮನಿಗೆ ಬರುತಾರೆ
ಕಾಲಗಂಟೆ ಒಳಗೆ
ಅರಮನೆಯ ಹತ್ರ ಬಂದು
ಸುತ್ತಮುತ್ತ ನೋಡುತಾರೆ.

ಶ್ರೀರಂಗರಾಮಸ್ವಾಮಿ
ಗರುಡಪ್ಪನಾಗಿಬಿಟ್ಟ
ಕಾಲಗಳಿಗೆಯ ಒಳಗೆ
ಎಡದಿಂದ ಬಲಕ್ಕೆ ಬಂದ
ಬಲದಿಂದ ಎಡಕ್ಕೆ ಹೋದ
ಎಡದಿಂದ ಬಲಕ್ಕೆ ಬಂದ
ಧೀರ ಘನ ಪಾಳೈಗಾರ.

ಇದುರೀಗೆ ನೋಡುಸ್ವಾಮಿ
ಸೂಳೆ ಅರುಮನೆಯ ಮುಂದೆ
ಅಶೋಕದ ಹೊನ್ನರಳಿ ಮರ

ಮರದ ಕೊಂಬೆಯನೇರ್ಯವನೆ
ರಂಗಸ್ವಾಮಿ ಗುರುವೆ
ಅವನೇ ಹೊನ್ನರಳಿ ಮರವನೇರ್ಯವನೆ
ರಂಗಸ್ವಾಮಿ ಗುರುವೆ
ಏರಿದಂತಾ ಕಾಲದ ಒಳಗೆ
ಬಾರಮ್ಮ ನನ್ನ ರಾಣಿ
ಈವತ್ತಿನ ಗಳಿಗೆ ಒಳುಗೇ
ರಾಣೀ ರಾಣೀ...
ಎಂಥ ಮಾತ ಹೇಳುತೀಯ
ಈ ಪಟ್ಟಣದ ಪ್ರಜರುಗೊಳೆಲ್ಲ
ಹೆಣ್ಣು ಮಕ್ಕಳು ಸಹ.

ಬೇಕು ಬೇಕಾದಂತ ಪಕ್ಷಿಗಳ ಸಾಕಿದ್ದಾರೆ. ಈ ಪಟ್ಟಣದ ಪ್ರಜೆ ಪರಿವಾರಕರು. ಹೆಣ್ಣು ಮಕ್ಕಳೂ ಕೂಡ.
''ಅಲ್ಲವೆ ? ''
ಆ ಪಕ್ಷಿಗಳನ್ನು ಆಹಾರಕ್ಕಾಗಿ ಹದ್ದು ಬಂದು ಯಾವುದಾದರೂ ಒಂದು ಪಕ್ಷಿಯನ್ನು ಹಾರಿಸಿಕೊಂಡು ಹೋಗಿ ತಿಂದೀತು ಎಂಬುದಾಗಿ ಕ್ಷೇಮಣೆಗೋಸ್ಕರ ಆ ಗರುಡ ಅಂತದು ವಾಸಮಾಡ್ತ ಸಂಚರಣೆ ಮಾಡ್ತಾ ಕುಂತಿದೆ ಕಾದು. ಸಂದರ್ಭಿಗಾಗಿ ಕುಂತಿದೆ.

ಆ ಹಾಲಕ್ಕಿ ದುಶ್ಶಕುನ ನಿನಗೆಂದೆ ಹೆಡ್ಡದೊರಿಯೆ ನೀನು
ಅಯ್ಯಾ ಹಾಲಕ್ಕಿ ದುಶ್ಶಕುನ ನಿನಗೆಂದೆ ಹೆಡ್ಡದೊರಿಯೆ ನೀನು
ಇದು ಒಂದೇ ದಿಟವೆಂದ
ಧೀರ ಘನ ಪಾಳೈಗಾರ
ಇದು ನಿಜ ಎಂದ ದೊರೆಯು
ಧೀರ ಘನ ಪಾಳೈಗಾರ
ನನ ರಾಣಿಮಾತೆ ನಿಜವೆಂದ
ಧೀರ ಘನ ಪಾಳ್ಯೇಗಾರ
ಅರಮನೆಗೆ ಬೇಗ ಹೋಗುತಾನೆ
ಕಾಲಗಳಿಗೆ ಒಳಗೆ
ಅಯ್ಯಾ ಅರಮನೆಗೆ ತಾನೆ ಹೋಗುತಾನೆ
ಕಾಲಗಳಿಗೆ ಒಳಗೆ
ಅರಮನೆಗೆ ಹೋಗ್ಯವನಣ್ಣ
ಸಣ್ಣನಾಮ ಚಿಲುಕದ ಬಟ್ಟು
ಹಣೆಮ್ಯಾಲೆ ಧರಿಸಿಕೊಂಡು

ಧೀರಾ ಘನ ಪಾಳ್ಳೇಗಾರ
ವಸ್ತಾದಿ ಸರ್ಜಪ್ಪನಾಯಕ
ಊಟಕ್ಕೆ ಬೇಗ ಕುಂತವನೆ
ಕಾಲುಗಳಿಗೆ ಒಳಗೆ
ಮನೆ ದೇವತೆ ಉಚ್ಚಂಗಿ ಎಲ್ಲಿ
ಏನೆಂದು ಹೇಳುತಾಳೆ
ಮಾಯಕಾತಿ ಎಲ್ಲವ್ವ ತಾಯಿ
ಮಾಯಕಾತಿ ಎಲ್ಲಮ್ಮ ದೇವಿ
ನನುದೆ ಭಕ್ತ ಹೋಗುತಾನೆ
ಏನ ಮಾಡಲಿ ನಾನು ?

ಗುಳುಗುಳನೆ ದುಃಖ ಮಾಡುತಾಳೆ
ಕಾಲಗಳಿಗೆ ಒಳಗೇ
ಅಯ್ಯಾ ಗುಳುಗಳನೆ ದುಃಖ ಮಾಡುತಾಳೆ
ಕಾಲಗಳಿಗೆ ಒಳಗೇ
ಗುಳುಗುಳನೆ ದುಃಖವ ಮಾಡಿ
ಕಣ್ಣಿನಲ್ಲಿ ನೀರನು ಸುರಸಿ

ಉಚ್ಚಂಗಿ ಎಲ್ಲವ್ವತಾಯಿ
ಇವ್ನು ಗೌಳಿ ಶಕುನಾಕೆ ಹೋಗವಳೆ ಊಟ ಮಾಡುಬ್ಯಾಡೊ
ತಾಯಿ ಗೌಳಿ ಶಕುನಾಕೆ ಹೋಗುತಾಳೆ ಊಟ ಮಾಡುಬ್ಯಾಡ
ತಾಯಿ ಗೌಳಿ ಶಕುನಾಗಿ ನುಡಿದವಳೆ ಮಗನೇ ಊಟ ಮಾಡುಬ್ಯಾಡ.

ಈ ಪ್ರಕಾರವಾಗಿ ಗೌಳಿ ಶಕುನವಾಗಿ ನುಡಿದಿದ್ದಾಳೆ.
''ಅಲ್ಲವೆ''
ಎಡಬಲ ನೋಡಿದ. ಗೌಳಿ ಶಕುನ ಕೇಳಿದ. ಇದು ಏನೆರಾಣಿ ಗೌಳ ಶಕುನ? ಊಟ ಮಾಡುದಿಲ್ಲ. ಇಂತಾ ಗೌಳಿ ಶಕುನಾಗತಾ ಇದೆ ಎಡಗಡೆ ಬಲಗಡೆಯಲ್ಲಿ.
'ಅಲ್ಲವೆ ?'

ಎಂಥಾ ಮಾತೇಳುತೀ ರಾಜಾ
ಧೀರಾಘನ ಪಾಳ್ಳೇಗಾರ
ಹಸಿಯಾ ಸೌದೆಯಾ ತಂದೆ
ಒಲೆಗೀಗ ಚಾಚಿದೆ ನಾನು
ಹಸಿಯ ಒಲೆಯ ಒಳಗೆ ಹೊಗೆಯು ಸುತ್ತಿಕೊಂಡು
ಅರಮನೆ ಒಳಗೆ ನೋಡು ಹೊಗೆಯು ಸುತ್ತಿಕೊಂಡು

ಹೊಗೆಗೋಸ್ರ ತಡಿಯಲಾದೆ
ಹಾಳಲ್ಲಿ ಬೇಗ ನುಡಿದ್ರೈತೆ ಅದರ ಶಕುನವೆಲ್ಲಿ?
ಹಾಳಲ್ಲಿ ಬೇಗ ನುಡಿದ್ರೈತೆ ಅದರ ಶಕುನವ್ಯಾಕೆ?
ಆ ಮಾತಕೇಳಿಕೊಂಡು
ಧೀರ ಘನ ಪಾಳೈಗಾರ
ಇದು ಒಂದು ದಿಟಾವೆಂದು
ಇದು ನಿಜ ಎಂದಾನವನು
ಧೀರ ಘನ ಪಾಳೈಗಾರ
ಊಟಕ್ಕೆ ಬೇಗ ಕುಂತವರೆ
ಕಾಳಗಳಿಗೆ ಒಳಗೆ.
ಊಟಕ್ಕೆ ಕುಂತವರಿನ್ನ
ಧೀರ ಘನ ಪಾಳ್ಯೇಗಾರ
ಈ ವಸ್ತಾದಿ ಸರ್ಜಪ್ಪನಾಯಕ
ಧೀರ ಜನ ಪಾಳ್ಯೇಗಾರ
ಒಂದು ತುತ್ತನೆತ್ತವನಣ್ಣ
ಒಂದೊಂದು ತುತ್ತಿನ ಗುಕ್ಕು
ಎರಡೊಂದು ತುತ್ತಿನ ಗುಕ್ಕು
ಕೈಯಲ್ಲಿ ಹಿಡಿದುಕೊಂಡು
ಭೂಮೀಗೆ ಮಡಿಗ್ಯವನಣ್ಣ
ಮತ್ತೊಂದು ತುತ್ತಿನಗುಕ್ಕು
ಭಗವಂತನ ಹೆಸುರ್ಹೇಳಿ
ಮಡಿಗ್ಯವನೆ ಪಾಳ್ಯೇಗಾರ
ಮತ್ತೊಂದು ತುತ್ತನು ತೆಗೆದು
ಊಟವ ಬೇಗಾ ಮಾಡುತಾನೆ
'ಆ ಪಾಳ್ಯೇಗಾರ ದೊರಿಯೆ'
ಅಯ್ಯಾ ಊಟಾವ ತಾನೆ ಮಾಡುತಾನೆ
'ಪಾಳೈಗಾರದೊರಿಯೆ'
ಊಟಾವ ಮಾಡುವಾಗ
ಮನಿದೇವರು ಬಂದು ನೋಡಿ
ಶ್ರೀರಂಗ ರಾಮಸ್ವಾಮಿ
ಮುಂದೀಗ ನಿಂತವನಣ್ಣ
ಏನೆಂದು ಹೇಳುತ್ತಾನೆ ?
ಅಲ್ಲಿಗೆ ಬಂದಾನು ಸ್ವಾಮಿ
ಮಾಯದಲ್ಲಿ ಬಂದವನಣ್ಣ

ರಪ್ಪನೆ ಕೆನ್ನೆಗೆ ಹೊಡೆದವನೆ
'ಪಾಳ್ಳೇಗಾರ ದೊರಿಯೆ'
ಅಯ್ಯಾ ಮಾಯದಿ ಕೆನ್ನೆಗೆ ಹೊಡೆದವನೆ.

ಮಾಯಕಾರ ಸ್ವಾಮಿ ರಪ್ಪನೆ ಕೆನ್ನೆಗೆ ಹೊಡೆದಿದ್ದಾನೆ.
''ಅಲ್ಲವೆ''
ಕೆನ್ನೆಗೆ ಹೊಡೆದ ಮಾತ್ರಲೆ, ಜಲಜಲನೆ ಬೆವತಿದ್ದಾನೆ ವಸ್ತಾದಿ.
''ಅಲ್ಲವೆ''
ಬೆವೆತು ಏನು ಮಾಡುತ್ತಾನೆ.
''ಅಲ್ಲವೆ''
ಇದೇನಾಯಿತಪ್ಪ ಅಂದುಬುಟ್ಟ
''ಆಹಾ''
ಖಂಡಿತ ಊಟ ಮಾಡೋದಿಲ್ಲ ಅಂದುಬುಟ್ಟ
''ಆಹಾ''
ಛೆ ಎಂಥ ನಿರ್ಧಾರ ಮಾಡಿದ್ದಿ ಸರ್ಜಪ್ಪನಾಯಕ? ಖಂಡಿತ ಊಟ ಮಾಡ್ರಿ.
''ಆಹಾ''
ಹಸಿದೋರು ಹೀಗೆಲ್ಲ ವೇಸ್ಟ ಮಾಡಬಾರದು. ಕೈತುತ್ತು ಬಾಯಿತುತ್ತು ಮಾಡುವಾಗ್ಗೆ ತುತ್ತು ಕೆಳಕ್ಕೆ ಬೀಳೋದಿಲ್ವೆ ಪ್ರಪಂಚದಲ್ಲಿ ?
''ಅಲ್ಲವೆ''
ಈ ತುತ್ತು, ಬಿಟ್ಟಂತ ತುತ್ತನ್ನು ನೀನು ಖಂಡಿತವಾಗಿ ಬಿಟ್ಟರೆ -

ಕೂಡುದ ಹೆಂಡ್ತಿಯ ಬಿಟ್ಟಂಗೆ ಕಾಲಗಳಿಗೆ ಒಳಗೇ
ಅಯ್ಯಾ ಕೂಡುದ ಹೆಂಡ್ತಿಯ ಬಿಟ್ಟಂಗೆ ಕಾಲಗಳಿಗೆ ಒಳಗೇ
ಥೈ ಥಕಿಟ ಥೈ ಥಕಡಧೀಂ
ಆ ಮಾತ ಕೇಳಿಕೊಂಡು
ಧೀರಾ ಘನ ಪಾಳ್ಳೇಗಾರ
ಇದುನಿಜ ಎಂದ ದೊರೆಯು
ಇದು ನಿಜ ಎಂದ ಸ್ವಾಮಿ
ಭಗವಂತನ ದಯವೊಂದಿರಲಿ ನನ್ನ ಜತೆಯಿರಲಿ
ಸಾಕ್ಷಾತ್ ಭಗವಂತ ನನಗೆ -
ನಿಂದೊಂದು ದಯವಿರಲಿ ನಿಮುದೊಂದು ದಯವಿರಲಿ
ಭಗವಂತ ನೀನೆ ಗತಿಯೆಂದ ಕಾಲಗಳಿಗೆ ಒಳಗೆ.

ಭಗವಂತ್ನ ಸ್ಮರಣೆ ಮಾಡಿದ್ದಾನೆ

"ಅಲ್ಲವೆ ?"
ಅವನಪ್ಪ ಅವನು ನೆನೆದಿದ್ದಾನೆ -
ಒಂದೊಂದು ತುತ್ತನೆ ಉಂಡ
ಎರಡೊಂದು ತುತ್ತನೆ ಉಂಡ
ಮೂರೊಂದು ತುತ್ತನೆ ಉಂಡ
'ಪರಮಾತ್ಮಾ'
ನಾಲ್ಕೊಂದು ತುತ್ತನೆ ಉಂಡ
ನಾಗರ್ಹಾವಿನ ವಿಷವು ಹೋಯ್ತೊ
ನೇತ್ರಾವೆ ಕೆಟ್ಟುಹೋಯಿತು
ಕೈಕಾಲು ತಣ್ಣಗಾದವು
ನಾಲ್ಕೊಂದು ಗಳಿಗೆ ಒಳುಗೇ
ಇಲಿಯಾ ಪಾಷಾಣವೆಲ್ಲ
ದ್ವಾರಾ ಬಂದು ಮಾಡಿತಯ್ಯಾ
ಭಗವಂತಾ ನೀನೆ ಕಾಯೆಂದಾ
ಕಾಲಗಳಿಗೆ ಒಳಗೆ
ಐದೊಂದು ಗಳಿಗೆ ಒಳಗೆ
ಗ್ಯಾನ ತಪ್ಪೀತು ಸ್ವಾಮಿ
ತಪ್ಪಿದ ಗಳಿಗೆ ಒಳುಗೇ ಏ ಏ ಏ.....

ತಪ್ಪಿದ ಗಳಿಗೆ ಒಳುಗೆ ರಪ್ಪನೆ ಬಿದ್ದಿದ್ದಾನೆ ಭೂಮಿಗೆ. ರಪ್ಪನೆ ಕೆಳಕ್ಕೆ ಬಿದ್ದುಬಿಟ್ಟು ಅನ್ನ ಸಂಕಟ ಬಂದು ಪಾಷಾಣವು ಕೀಲುಕೀಲಿಗೆ ಬಂದಾಗಿ ನಿಂತು ಹೋಗಿದೆ ಸ್ವಾಮೀ-

ಜ್ಞಾನತಪ್ಪೀಗ ಬಿದ್ದವನೆ
'ಈ ಪಾಳ್ಯಗಾರ ದೊರಿಯೆ'.
ಗ್ಯಾನ ತಪ್ಪೀಗ ಬಿದ್ದಾ
ಪಾಳ್ಳೇಗಾರಾ ಸ್ವಾಮಿ
ಧೀರಾ ಘನ ಪಾಳ್ಳೇಗಾರ
ವಸ್ತಾದಿ ಸರ್ಜಪ್ಪನಾಯಕ
ತಪ್ಪಿದ ಜ್ಞಾನವ ನೋಡಿ
ಸುಪನಾತಿ ಸೂಳೆರಾಣಿ
ಏನೆಂದು ಹೇಳುತಾಳೆ ?
ಇದು ಒಂದೆ ಸಮಯವೆಂದು
ತಡಿರ್‌ಬಿಡಿರ್‌ನವಳು ಲಾಳ ಮುಂಡಿಗೆ ಹಾಕಿ
ಎಡಗಾಲಲೊದ್ದವಳಣ್ಣ
ಉರುಡಿಸ್ಕಾಡಿ ಬೇಗ ನೋಡುತಾಳೆ
ರಾಜಾನಾ ಪ್ರಾಣವಾ

ಉರುಡಿಸ್ಯಾಡಿ ನೋಡಿದಳಣ್ಣ
ಏನೆಂದು ಹೇಳುತಾಳೆ ?
ಇದು ಒಂದೆ ಸಮಯ ಎಂದು
ಇದು ಒಂದೆ ಟೇಮು ಎಂದು
ಈ ಸುಪನಾತಿ ಸೂಳೆರಾಣಿ
ಮೆಲ್ಲನೆ ಎದ್ದಳು ಆ ರಾಣಿ
ಮೈಯಾಗಳ ಆಯ್ದ ತೆಗುದವಳೇ
ಕಾಲಗಳಿಗೆ ಒಳಗೆ
ಮೈಯಾಗಳ ಆಯ್ದ ಶಿವನೆ
ಎಡಗೈಲೊಂದೀಜು ಬಾಕು
ಬಲಗೈಲಿ ಫಿರಂಗಿ ಕತ್ತಿ
ಉಕ್ಕಿನು ನಿಲುವಂಗಿ ಶಿವನೆ
ಉಕ್ಕಿನ ಟೋಪಿಯ ತಗದು
ಕಂಚಿನ ಗುರಾಣಿ ತಗದು
ಉಕ್ಕಿನ ಗುರಾಣಿ ತಗದು
ಏಳು ಗೆಣ್ಣಿನ ಕೋವಿ ತಗದು
ಚೋಂಗಾಕಿದ ನಡುಕಟ್ಟ ಅಳಿದ್ಲು
ಬಾಕು ಭಲ್ಯವ ತೆಗದು
ನೂರೊಂದಾಯ್ದವ ತೆಗದು
'ಪರಮಾತ್ಮಾ'
ಆಯದ ಮುಸ್ತಾಪ ಕಟುತಾಳೇ ಕಾಲಗಳಿಗೆ ಒಳಗೆ
ಆಯ್ದ ಮುಸ್ತಾಪನ ಕಟುತಾಳೇ ಕಾಲಗಳಿಗೆ ಒಳಗೆ
ಆಯ್ದ ಮುಸ್ತಾಪನ ಕಟ್ಟೀ
ಈ ಸುಪನಾತಿ ಸೂಳೆ ರಾಣಿ
ಏನೆಂದು ಹೇಳುತಾಳೆ ?
ಆದರೊಟ್ಟಿಗೆ ಬೇಗ ಹೋಗುತಾಳೇ
ಹಾಳುಬಾವಿಗೆ ತಳ್ಳಕ್ಕೇ
ಹಾಳುಭಾವಿಗೆ ತುಂಬಿದಳಣ್ಣಾ
ಮುಚ್ಚಳಿಕೆ ಕಲ್ಲನು ಹಾಕಿ
ಅರಮನಿಗೆ ಬಂದವಳಣ್ಣ
ಬಂದೇನ ಯೋಚನೆ ಮಾಡುತಾಳೆ
ಛಾಯಗಾರ ಲೌಡೀ ?
ಇನ್ನೊಂದ ಯೋಚನೆ ಮಾಡುತಾಳೆ
ಈ ಛಾಯಗಾರ ಲೌಡೀ

ಏನೇನು ಆಲೋಚ್ನೆ ಮಾಡ್ತಾ ಇದ್ದಾಳೆ ?
''ಅಲ್ಲವೆ'' ?
ಇನ್ನೊಂದು ಉಪಾಯವಿದೆ. ಇದಕ್ಕೇನು ಮಾಡಬೇಕೆಂದು -
''ಅಲ್ಲವೆ'' ?
ಇವನ ಕೈಯಾಗ್ಳ ಉಗುರು ಹುಲಿಯುಗುರಿನ ಪ್ರಕಾಶವಾಗಿದ್ದಾವೆ.
''ಅಲ್ಲವೆ'' ?
ಇವ್ನ ಕೈಯಾಗ್ಳ ಉಗುರು ಬಿಟ್ಟರೆ ಸಾಕ್ಷಾತ್ ಭಗವಂತನ ಕರುಣದಿಂದ.
''ಅಲ್ಲವೆ'' ?
ಇವ್ನ ಜೀವ ಅನ್ನತಕ್ಕಂತಾದ್ದು ಕೂಡಿಕಂಡು, ಮೇಲಕ್ಕೇನಾದ್ರೂ ಎದ್ರೆ ಬಿಡ್ತಾನೆಯೇ ಜಾತ್ಯೋರ ದಂಡನ್ನೂ ನನ್ನನ್ನೂ ?
''ಅಲ್ಲವೆ'' ?
ಇವನು ಕೈಯಾಗ್ಳ ಉಗುರಿನಲ್ಲಿ ಸಾವಿರ ಜನ ಕೊಲ್ಲುತ್ತಾನೆಂದು
''ಅಲ್ಲವೆ'' ?

ಕೈಯಗಳ ಉಗುರ ತೆಗುದವಳೆ ಮಾಯಕಾತಿ ರಂಗಿ
ಅಯ್ಯಾ ಕೈಯಾಗಳ ಉಗುರ ತೆಗುದವಳೆ ಮಾಯಕಾತಿ ರಂಗಿ
ಕೈಯಗಳ ಉಗುರ ತಗದು
ಸುಪನಾತಿ ಸೂಳೆ ರಂಗಿ
ಕೈಯಗಳ ಉಗುರ ತಗದು
ಅಯ್ಯಾ ಎಂತಂಬೋ ಮೋಸ ಮಾಡುತಾಳೆ
ಕಾಲಗಂಟೆ ಒಳಗೇ
ಉಗುರನ್ನು ಹಳ್ಳಗೇರಿಗೆ ಎಸೆದು -
ಉಗುರನ್ನು ತಗುದವಳಣ್ಣ
ಹಳ್ಳಗೇರಿಗೆ ಎಸ್ತವಳಣ್ಣ
ಏಳು ಸುತ್ತಿನ ಕ್ವಾಟೆಯ ಹತ್ತಿ
ಸೆರಗು ಬೀಸಿ ದಂಡ್ನ ಕರದವಳೇ ಜಾತಿಗಾರ ಲೌಡೀ
ಅಯ್ಯಾ ಸೆರಗ ಬೀಸಿನ್ನ ಕರದಾಳೇ ಜಾತಿಗಾರ ರಂಗಿ
ಸೆರಗ ಬೀಸಿ ದಂಡ ಕರದ್ಲು
ಕೈಸನ್ನೆ ಮಾಡಿ ಕರದ್ಲು
ಸುಪನಾತಿ ಸೂಳೆ ರಂಗಿ
ಒಂಟೂರಿ ನಗಾರಿ ಬಡದ್ಲು

ಅಗಲ್ದು ಕಾಳೇಯನೂದಿ ಶಬ್ದಾವ ಬೇಗ ಮಾಡುತಾಳೇ ಕ್ವಾಟೇ ಮ್ಯಾಲೆ ನಿಂತು. ಅಯ್ಯಾ ಶಬ್ದಾ ಮಾಡುತಾಳೇ ಕ್ವಾಟೇ ಮ್ಯಾಲೆ ನಿಂತು -

ಶಬ್ದಾವ ಮಾಡಿದುಳಣ್ಣ
ಧೀರಾ ಘನ ಪಾಳ್ಯೇಗಾರಾ

ವಸ್ತ್ರಾದಿ ಸರ್ಜನಾಯಕ
ಏನೆಂದು ಹೇಳಲಣ್ಣ?
ಧೀರಾ ಘನ ಪಾಳ್ಳೇಗಾರಾ
ಭಗವಂತ ನೀನೇ ಗತಿಯೆಂದಾ
'ಪಾಳ್ಳೇಗಾರಾ ದೊರಿಯೇ'.

ದಂಡು ಬಂದು ಕ್ವಾಟೆಯ ಸುತ್ತಲೂ ಕಾವುಳ ಕವುದಂಗೆ ಕವುದು ನಿಂತಿದೆ ಸ್ವಾಮೀ-
''ಅಲ್ಲವೆ'' ?
ನಿಂತಂತ ಕಾಲದಲ್ಲೀ ಏಳು ತುರುಕಿನ ದಂಡು ಬಂದೂ -

ಹಿಡಿಬೇಕು ಪಾಳ್ಳೇಗಾರನ
ಕಡಿಬೇಕು ಪಾಳ್ಳೇಗಾರನ
ರಣಗಂಬಕೆ ಬಲಿಯ ಕೊಡಬೇಕು ಕಾಲಗಳಿಗೆ ಒಳಗೆ
ಅಯ್ಯಾ ರಣಗಂಬಕೆ ಬಲಿಯ ಕೊಡಬೇಕು ಕಾಲಗಂಟೆ ಒಳಗೆ
ರಣಗಂಬಕೆ ಬಲಿಯ ನಾವು
ಕೊಡಬೇಕು ಎಂಬುತಾರೆ
ಮದ್ದಿನ ಹೊಗೆಯ ಕೊಟ್ಟು
ಗುಂಡುಮದ್ದ ಹೊಚ್ಚವರಣ್ಣ
ಮದ್ದಿನ ಮನೆಗೀಗ ಹೊಚ್ಚವರೆ ಕಾಲಗಳಿಗೆ ಒಳಗೆ
ಅಯ್ಯಾ ಮದ್ದಿನ ಮನೆಗೀಗ ಹೊಚ್ಚವರೆ ಕಾಲಗಳಿಗೆ ಒಳಗೆ
ಮದ್ದಿನ ಮನೆಯನ್ನು ಹೊಚ್ಚಿ
ಬಿಟ್ಟಾರಾ ಗಳಿಗೆ ಒಳಗೆ
ಮದ್ದು ಗುಂಡು ನೋಡಿ
ತಡಿರ್ ಬಿಡಿರ್‌ನೆ ಹೊತ್ತಿದುವಲ್ಲೋ
ತಡಿರ್ ಬಿಡಿರ್‌ನೆ ಹಾರಿತೊ ಸ್ವಾಮಿ
ಹಾರಿದಂತಾ ಕಾಲದ ಒಳುಗೇ
ಗುಂಡು ಹಾರಿತೋ ಸ್ವಾಮೀ
ಹಾರಿದಂತಾ ಗಳಿಗೆ ಒಳಗೇ
ಧೀರಾ ಘನಪಾಳ್ಳೇಗಾರಾ
ಶ್ರೀರಂಗರಾಮ ಸ್ವಾಮೀ
ಏನೆಂದು ಹೇಳುತಾರೆ ?
ಗುಳಗುಳನೆ ದುಃಖ ಮಾಡುತಾರೆ ರಂಗನಾಥ ಸ್ವಾಮೀ
ಅಯ್ಯಾ ಗುಳುಗುಳನೆ ದುಃಖ ಮಾಡುತಾರೆ ರಂಗನಾಥ ಸ್ವಾಮೀ.

ಗುಳುಗುಳನೆ ದುಃಖ ಮಾಡಿದ್ದಾರೆ.

''ಅಲ್ಲವೆ'' ?
ಆವಾಗ ಏಳು ಸಾವಿರ ದಂಡು ಕಾವುಳ ಕವಿದಂಗೆ ಕವಿದಿದೆ.
''ಅಲ್ಲವೆ'' ?
ಕವುದಂತ ಕಾಲದಲ್ಲಿ, ಏಳು ಸುತ್ತಿನ ದಂಡು ಬಂದು ಹಿಡಿದು ನಿಲ್ಲಿಸಬೇಕು - ಅಂತ ಕಾದಿದ್ದಾರೆ. ನಿಂತಂತ ಕಾಲದಲ್ಲಿ -

ಹಿಡಿಬೇಕು ಪಾಳ್ಳೇಗಾರನ
ಕಡಿಬೇಕು ಪಾಳ್ಳೇಗಾರನ
ತಕ್ಷಣಕೆ ರಂಗಸ್ವಾಮಿ
ತಕ್ಷಣಕೆ ಮನೆಸ್ವಾಮಿ
ತಕ್ಷಣಕೆ ಮನೆದೇವಿ
ತಕ್ಷಣಕೆ ಬಂದವರಣ್ಣ
ನೂರೊಂದು ಮಂತ್ರವ ಜಪಿಸಿ
ಶ್ರೀಪಾದ ತೆಗೆದವರಣ್ಣ
ಅವ್ನ ತಲೆ ಮ್ಯಾಲೆ ಹೊರಿಸವರಣ್ಣ
ಹೊರಿಸ್ವಂತ ಗಳಿಗೆ ಒಳಗೆ
ಬಗಬಗನೆ ತಾವೆ ಬಗುದಾರೆ ಮಾಟಗಾತಿ ವಿಷವ
ಅಯ್ಯಾ ಬಗಬಗನೆ ತಾವೆ ಬಗುದಾರೆ ಕಾಲಗಂಟೆ ಒಳಗೆ
ನಾಗರಾವಿನ ವಿಷವ ತಗದ
ಇಲಿಯ ಪಾಷಾಣವ ತೆಗದ
ಧೀರಾ ಘನ ಪಾಳ್ಳೇಗಾರಾ
ಏನೆಂದು ಹೇಳುತಾನೆ ?
ಪರಶಿವನೆ ನೀನೆ ಗತಿಯಂದಾ ಕಾಲಗಳಿಗೆ ಒಳಗೆ
ಸೂಳೆ ಅರೆಮನೆಯ ಒಳಗೆ
ದೀರಾ ಘನಪಾಳ್ಳೇಗಾರಾ
ಎಡಬಲಕೆ ನೋಡಿದನಣ್ಣಾ
ಏನೆಂದು ಹೇಳುತಾನೆ ?
ಇದು ಏನೋ ಮೋಸವಾಯ್ತು
ಧೀರಾ ಘನಪಾಳ್ಳೇಗಾರಾ
ಭಗವಂತ ನೀನೇ ಗತಿಯೆಂದಾ
'ಪಾಳ್ಳೇಗಾರಾ ದೊರಿಯೇ'
ಅಯ್ಯಾ ಭಗವಂತ ನೀನೇ ಗತಿಯೆಂದಾ
'ಪಾಳ್ಳೇಗಾರಾ ದೊರಿಯೇ'
ತಾಯಿ ಮಾತ ಮೀರಿ ಬಂದೇ
ಅಣತಮ್ಮರ ಮಾತ ಕೇಳ್ದೇ

ಧೀರಾ ಘನ ಪಾಳ್ಳೇಗಾರಾ
ತಾಯಿತಂದೇ ಮಾತ ಕೇಳದೆ
ಭ್ರಷ್ಟನು ನಾನಾದೇ
ಧೀರಾ ಘನಪಾಳ್ಳೇಗಾರಾ
ಭಗವಂತ ನೀನೇ ಗತಿಯೆಂದಾ
'ಪಾಳ್ಳೇಗಾರಾ ದೊರಿಯೇ'
ಅಯ್ಯಾ ಭಗವಂತ ನೀನೇ ಗತಿಯೆಂದಾ
'ಪಾಳ್ಳೇಗಾರಾ ದೊರಿಯೇ'
ಭಗವಂತ ನೀನೇ ಗತಿಯೋ
ರಂಗುಸ್ವಾಮಿ ನೀನೇ ಗತಿಯೋ
ನೀನಾದ್ರೂ ಕಾಯ್ಬೇಕೆಂದು
ನಿಂದೊಂದು ದಯವಿರಲೆಂದು
ಮನೆದೇವ್ತಿ ಎಲ್ಲಮ್ಮ ತಾಯಿ
ನೀನಾದ್ರೂ ಕಾಯ್ಲೇಬೇಕು
ಅಲಕ್ ಮೌಲಾಲಿ ಗತಿಯಂದಾ
'ಪಾಳ್ಳೇಗಾರಾ ದೊರಿಯೇ'
ಅಯ್ಯಾ ಅಲಕ್ ಮೌಲಾಲಿ ಗತಿಯೆಂದಾ
'ಪಾಳ್ಳೇಗಾರಾ ದೊರಿಯೇ'
ತಾಯಿ ಮಾತ ಮೀರಿದೋರಿಗೇ
ನಾಯಿಪಾಡು ಬತ್ತಾದೆಂದೂ
ತಂದೆ ಮಾತ ಮೀರಿದೋರಿಗೇ
ಖಂಡಿತ ನಾಯಿಪಾಡು ಬತ್ತಾದೆಂದೂ.

ಅಲಕ್ ಮೌಲಾಲಿ ಗತಿಯೆಂದ
ಧೀರಾ ಘನಪಾಳ್ಳೇಗಾರಾ
ಚಕ್ಕನೆ ಮೇಲಕ್ಕೆ ನೆಗೆದಾ
ಧೀರಾ ಘನಪಾಳ್ಳೇಗಾರಾ
ಕರಕರನೆ ಹಲ್ಲನು ಕಡುದ
ಕೆಂಜುರುಗಣ್ಣನೆ ಬಿಟ್ಟ
ಕೆಂಜುರುಗಣ್ಣನೆ ಬಿಟ್ಟವನಣ್ಣ
ಹುರಿಮೀಸೆ ತಿರುವಿದನಣ್ಣ
ಅರಮನೆ ಬಾಕಲಿಗೆ ಬಂದು
ಬಿದ್ದುಬಿಟ್ಟು ನೋಡುತಾನೆ
ಏಳು ಸಾವುರ ದಂಡು ಒಳಗೆ

ಕಾವುಳ ಕವುದಂಗೆ ಕವುದೈತೆ ಏಳು ಸಾವ್ರ ದಂಡೂ
ಅಯ್ಯಾ ಕಾವುಳ ಕವುದಂಗೆ ಕವುದೈತೆ ಏಳು ಸಾವ್ರ ದಂಡೂ
ಕಾವುಳ ಕವುದಂಗೆ ಕವುದ್ದಾ
ಕಂಡವನೇ ಪಾಳ್ಳೇಗಾರಾ
ಎರಡೂ ಕಣ್ಣೆತ್ತಿ ನೋಡೀ
ಎರಡೂ ಕಿವಿಗೊಟ್ಟು ಕೇಳೀ
ಧೀರಾ ಘನಪಾಳ್ಳೇಗಾರಾ
ಕರಕರನೆ ಹಲ್ಲನು ಕಡಿದಾ
ಹುರಿಮಾಡಿದ ಮೀಸೆಯ ಕೆದರಿ
ಧೀರಾ ಘನ ಪಾಳ್ಳೇಗಾರಾ
ವಸ್ತಾದಿ ಸರ್ಜಪ್ಪನಾಯಕ
ಧೀರಾ ಘನ ಪಾಳ್ಳೇಗಾರಾ
ನಡುದಂಡಿಗೆ ಬೇಗ ನೆಗೆದವನೇ ರಂಗಪ್ಪನ ಮಗನೇ
ಅಯ್ಯಾ ನಡುದಂಡಿಗೆ ಬೇಗ ನೆಗೆದವನೇ ರಂಗಪ್ಪನ ಮಗನೇ
ನಡುದಂಡಿಗೆ ನೆಗೆದವನಣ್ಣಾ
ಗುಡುಗಾಗಿ ಗುಡುಗ್ಯವನಣ್ಣಾ
ಸಿಡಿಲಾಗಿ ಎರಗ್ಯವನಣ್ಣಾ
ಧೀರಾ ಘನ ಸರ್ಜಪ್ಪನಾಯಕಾ
ವಸ್ತಾದಿ ಪಾಳ್ಳೇಗಾರಾ
ಹಬ್ಬದ ಕುರಿಯಂಗೆ ಕಡುದವನೇ
ತುರುಕರೋರ ದಂಡು
ಅಯ್ಯಾ ಹಬ್ಬದ ಕುರಿಯಂಗೆ ಕಡುದವನೇ
ತುರುಕರೋರ ದಂಡು
ಜಾತ್ಯೋರ ತಲೆಗಳ ನೋಡೀ
ಜಾತ್ಯೋರ ಮುಖವನು ನೋಡೀ
ಧೀರಾ ಘನಪಾಳ್ಳೇಗಾರಾ
ಅಂಗೈಲಿ ಹೊಡುದವನಣ್ಣಾ
ಆರುಸಾವ್ರ ಹಗೇವ್ರ ದಂಡಾ
ಮುಂಗೈಲಿ ಹೊಡುದವನಣ್ಣಾ
ಮೂರು ಸಾವ್ರ ದಂಡುಗಳನ್ನ
ಚೆಂಡಾಡಿ ತಲೆಯ ಹೊಡುದವನೇ
'ಪಾಳ್ಳೇಗಾರಾ ದೊರಿಯೇ'
ಅಯ್ಯಾ ಚೆಂಡಾಡಿ ತಲೆಯ ಹೊಡುದವನೇ
'ಪಾಳ್ಳೇಗಾರಾ ದೊರಿಯೇ'

ಚಂಡಾಡಿ ಹೊಗ್ಯವನಂತೆ
ಧೀರಾ ಘನ ಪಾಳ್ಳೇಗಾರಾ
ವಸ್ತಾದಿ ಸರ್ಜಪ್ಪನಾಯಕಾ
ನೂರೊಂದು ತಲೆಯಾ ತೆಗುದವನೇ ಜಾತ್ಯೋರ ದಂಡಾ
ಅಯ್ಯಾ ನೂರೊಂದು ತಲೆಯಾ ತೆಗುದವನೇ ಜಾತ್ಯೋರ ದಂಡಾ
ನೂರೊಂದು ತಲೆಗಳ ತೆಗೆದೂ
ಧೀರಾ ಘನ ಪಾಳ್ಳೇಗಾರಾ
ವಸ್ತಾದಿ ಸರ್ಜಪ್ಪನಾಯಕಾ
ಅರಮನೆಗೆ ಬೇಗ ಬರುತಾನೇ ಕಾಲಗಳಿಗೆ ಒಳಗೇ
ಅಯ್ಯಾ ಅರಮನಿಗೆ ತಾನೇ ಬರುತಾನೇ ಕಾಲಗಳಿಗೆ ಒಳಗೇ
ಎತ್ತೋದೆ ರಾಣಿ ನೀನೂ ?
ಎಲ್ಲೋದೆ ರಾಣಿ ನೀನು ?
ನಿನ್ನ ಮುದ್ದು ಮುಖವನ್ನು ತೋರ್ಬಾರೇ ಛಾಯಗಾರ ರಂಗೀ

ಎಲೆ ರಂಗಿ, ನಿನ್ನ ಮುದ್ದುಮುಖವನ್ನು ತೋರು. ನಿನಗಾಗಿ ತಂದೆತಾಯಿಗಳನ್ನು ತೊರೆದೆ.
''ಅಲ್ಲವೆ'' ?
ಬಾಂಧವರನ್ನು ತೊರೆದೆ !
''ಅಲ್ಲವೆ'' ?
ಇಂಥಾ ನನಗೆ ಕೆಟ್ಟ ಮೋಸವನ್ನು ಮಾಡಿದೆ.
''ಅಲ್ಲವೆ'' ?
ಅದಕ್ಕಾಗಿ ನಿನ್ನ ಮುಖವನ್ನು ನೋಡಿ-
''ಹೌದು''
ನಾನಿನ್ನು ಆಸ್ಥಾನವನ್ನು ಬಿಟ್ಟು
''ಆಹಾ''
ನಮ್ಮ ಅರಮನೆಗೆ ಹೋಗುತ್ತೇನೆ.
''ಅಲ್ಲವೆ'' ?
ಹಾಗೆಂದು ಹೇಳ್ತಾ ಇದ್ದಾನೆ ಸರ್ಜಪ್ಪನಾಯಕ!
''ಆಹಾ''
ಈ ರಾಣಿ ಎಂತವಳು ? ಏನು ಮಾಡಿದ್ದಾಳೆ ?
''ಆಹಾ''

ಇಂಥಾ ಸೂಳೆ ಅರಮನೆ ಸುತ್ತ ಏಳು ಆಳು ಕಂದಕ ಹೊಡಸಿದ್ದಾಳೆ.
''ಅಲ್ಲವೆ'' ?
ಏಳು ಆಳ ಕಂದಕ ತೆಗ್ಸಿ ಉಕ್ಕಿನ ದಸಿ ನೆಡಿಸಿದ್ದಾಳೆ.

"ಅಲ್ಲವೆ ? "
ಮುಳ್ಳಿನ ದಸಿ ನೆಡಿಸಿದ್ದಾಳೆ.
"ಆಹಾ"
ಅದರ ಮೇಲೆ ಬಿದಿರು ಚಾಪೆ ಹಾಸಿದ್ದಾಳೆ. ಸಣ್ಣ ಮದ್ದು ಹರಡಿಬಿಟ್ಟು ನೆಲಸಮ ಆಗೋ ಹಾಗೆ ಮಾಡಿಸಿದ್ದಾಳೆ. ಈ ರಾಣಿ ಅನ್ನತಕ್ಕಂತವ್ವ ಹೋಗಿದ್ದಾಳೆ.
"ಅಲ್ಲವೆ" ?
ಮದ್ದಿನಮನೆ ಹೊಚ್ಚಿದ್ದಾಳೆ.
"ಅಲ್ಲವೆ" ?
ಮದ್ದಿನಮನೆ ಹೊಚ್ಚಿದ ಕೂಡಲೇ
"ಆಹಾ"
ದಡೀರ್ ಬಿಡೀರ್ ಅಂತ ಮದ್ದು ಅರಮನೆ ಸುತ್ಲು ಕಾವಳ ಕವಿದಂಗೆ ಹೊಗೆ ಸುತ್ತೋಗಿತ್ತು.
"ಅಲ್ಲವೆ" ?
ಹೊಗೆ ಒಳಗೆ ಸಿಕ್ಕಿದ್ದಾನೆ! ಮೋಸಮಾಡಿಬಿಟ್ರು ಕುಂಪಣಿಯೋರು!
"ಅಲ್ಲವೆ" ?
ಜಾತಿ ದಂಡು ಹೋಗಿ ಕಂಡುಹಿಡಿದುಬಿಡ್ತು ಇವನ. ಖಂಡಿತ ಖೂನಿ ಮಾಡುತ್ತಾರೆ, ನಾನೇನು ಮಾಡಬೇಕೆಂದೂ
"ಆಹಾ"

ಹಿಂಗಣ್ಣ ಹಾಕಿದನಂತೇ ಮುಂಗಣ್ಣ ನೆಗೆದವನಣ್ಣ
ಧೀರಾ ಘನ ಪಾಳ್ಳೇಗಾರಾ
ಅರಮನೆ ಬೆಂಕೀಯ ನೆಗೆದವನೇ
ಕಾಲಗಳಿಗೆ ಒಳಗೇ
ಅಯ್ಯಾ ಅರಮನೆ ಬಿಟ್ಟೂ ನೆಗೆದವನೇ
ಕಾಲಗಳಿಗೆ ಒಳಗೇ
ಹೋಗುವಂತಾ ಕಾಲದಲ್ಲೀ
ಕೈಯೆತ್ತಿ ಕಾಲುಜಾರೀ
ಉಕ್ನ ಕಂದಕಕೆ ಬಿದ್ದವನೇ
'ಪಾಳ್ಳೇಗಾರಾ ದೊರಿಯೇ'
ಅಯ್ಯಾ ಉಕ್ನ ಕಂದಕಕೆ ಬಿದ್ದವನೇ
'ಪಾಳ್ಳೇಗಾರಾ ದೊರಿಯೇ'
ಉಕ್ಕಿನ ಕಂದಕಕೆ ಬಿದ್ದಾ
ಬಿದ್ದಂಥಾ ಕಾಲದೊಳಗೇ
ಧೀರಾ ಘನ ಪಾಳ್ಳೇಗಾರಾ
ವಸ್ತಾದಿ ಸರ್ಜಪ್ಪನಾಯಕಾ
ಉಕ್ಕಿನ ದಸಿಗೊಳೇ ನಾಟ್ಯಾವೇ

ಶರೀರಾಕೆ ಸ್ವಾಮೀ
ಅಯ್ಯಾ ಉಕ್ಕಿನ ದಸಿಗೊಳೇ ನಾಟ್ಯಾವೇ
ಶರೀರಾಕೆ ಸ್ವಾಮೀ
ಶಿವಶಿವ ಎಂದು ಹೋಗೀ
ಧೀರಾ ಸರ್ಜಪ್ಪ ದೊರೆಗೆ
ಎದೆಯಲ್ಲಿ ಏರಿದ ದಸಿಯು
ಭೂಮ್ಯಲ್ಲಿ ಒರಗೋನೆ ಸ್ವಾಮೀ
ಅಂಗೈಲಿ ಏರಿದ ದಸಿಯು
ಮುಂಗೈಲಿ ಒಡದೀತಣ್ಣಾ
ಅಂಗಾಲಾಗೆ ಏರಿದ ದಸಿಯು
ಮುಂಗಾಲಾಗೆ ಒಡದೀತಣ್ಣಾ
ಇವನ ಕೈಕಾಲ ರೈತವೆಲ್ಲಾ
ಕಂದಕದೊಳಗೇ ತಾಯೀ
ರೈತಾವು ಕಣ್ಣಿಗೆ ಹಾರಿತೋ
ಶರೀರ ಬತ್ತಿಹೋಯಿತೋ
ಭಗವಂತಾ ನೀನೆ ಗತಿಯೆಂದಾ
ರಂಗಪ್ಪನ ಮಗುನೇ
ತಾಯಿಮಾತ ಮೀರಿಬಂದೇ
ಅಣ್ಣತಮ್ದಿರ ಮಾತನು ಮೀರಿ
ನನ್ನಂತಾ ಪಾಪಿಜನ್ಮ
ಜಗದೊಳಗೆ ಇರಬಾರದಂದೂ
ಭಗವಂತನ ಸ್ಮರಣೆಯ ಮಾಡೀ
ಧೀರಾ ಘನಪಾಳ್ಳೇಗಾರಾ
ಮೌಲಾಲೀ ಹೆಸರನೆ ಪಡೆದು
ಧೀರಾ ಘನಪಾಳ್ಳೇಗಾರಾ
ರಂಗರಾಮ ನೀನೇ ಗತಿಯೆಂದಾ
'ಪಾಳ್ಳೇಗಾರಾ ದೊರಿಯೇ'
ಭಗವಂತನ ಸ್ಮರಣೆಯನ್ನು ಮಾಡಿದಂತಾ ಗಳುಗೆ ಒಳಗೇ
ಶ್ರೀರಂಗರಾಮದೇವರೂ ಏನೆಂದೂ ಹೇಳುತಾರೇ
ಕೆಟ್ಟೇನೋ ನನ್ನ ಕಂದಾ ಬದುಕೀದಾ ನನ್ನ ಕಂದಾ ?
ಈಗೇನ ಮಾಡಲೀ ಎಂದು ಚಿಂತೇಯ ಮಾಡುತಾರೇ.

ಸಾಕ್ಷಾತ್ ಭಗವಂತ ನಮ್ಮ ಸ್ವಾಮೀ. ಈ ಪ್ರಕಾರವಾಗಿ ಚಿಂತೆ ಮಾಡುವಂತಾ ಕಾಲದಲ್ಲೀ ಸ್ವಾಮಿಯ ದೃಷ್ಟಿ ಬಿದ್ದೋಯಿತು ಈ ಭಕ್ತನ ಮೇಲೆ. ಅಷ್ಟರೊಳಗಾಗಿ, ಏಳು ಸಾವಿರ ದಂಡಿನಲ್ಲಿ, ಮಳವಳ್ಳಿ ಚಂದ್ರಾಯಮ್ಮ ಅನ್ನತಕ್ಕಂತಾವ್ನು, ಸತ್ತಿದ್ದಾನೋ ಬದುಕಿದ್ದಾನೋ

ನೋಡಬೇಕೆಂದು ಪಕ್ಷಿ ಕುದರಿ ಮ್ಯಾಲೆ ಕುಂತುಕೊಂಡು ಒಂದೇ ಕುಪ್ಪಳಿಕೆ ಕುಪ್ಪಳಿಸಿದ್ದಾನೇ. ಏಳಾಳ ಕಂದಕದಲ್ಲಿ ಬಗ್ಗಿ ಬಗ್ಗಿ ನೋಡುತ್ತಾನೆ. ಇದೇ ಒಂದು ಕಾಲವೆಂದು ಹರಿದುಹೋಗುವಂತ ನೆತ್ತರವನ್ನು ಗಟಗಟಗಟನೆ ಮೂರು ಬೊಗಸೆಯನ್ನು ಕುಡಿದಿದ್ದಾನೆ. ಭಗವಂತಾ ನೀನೇ ಗತಿಯೆಂದುಬಿಟ್ಟ! ಆಗಾ ದೊರಿಯೇನು ಮಾಡಿದ್ದಾನೇ ? ಕತ್ತೆತ್ತಿ ನೋಡಿದಾ. ಆ ರಾಜನನ್ನು ಏನು ಮಾಡುತ್ತಾನೆ!

ಎಡಗಡೆಯ ದಸಿಯನು ಕಿತ್ತಾ
ಬಲಗಡೆಗೆ ಚುಚ್ಚಿದಾನಣ್ಣಾ
ಬಲಗಡೆಯ ದಸಿಯನ್ನು ಕಿತ್ತಾ
ಎಡಗಡೆಗೆ ಎಸೆದಾನಣ್ಣಾ
ಧೀರಾ ಘನಪಾಳ್ಳೇಗಾರಾ
ಮತ್ತೊಂದು ದಸಿಯನೆ ಕಿತ್ತಾ
ಬೀಸೀ ರಾಜನಿಗೇ ಒಗದವನೇ
ಸರೋಜಪ್ಪ ದೊರಿಯೇ
ಒಗದಂತಾ ದಸೀಯು ಹೋಗೀ
ರಾಜನಿಗೆ ಈಗ ಹೊಡದೂ
ಕುದುರೆಯು ಸತ್ತು ಹೋಯಿತೂ
ರಾಜನೂ ಮೃತಪಟ್ಟುಹೋದಾ
ಹೋದಂತಾ ಕಾಲದ ಒಳುಗೇ
ನೆಗದೂ ಹೊಡೆದವನೇ .... ವಾ
'ಪಾಳ್ಳೇಗಾರದೊರಿಯೇ'
ಅಯ್ಯಾ ನೆಗದು ಹೊಡದವನೇ.... ವಾ
'ಪಾಳ್ಳೇಗಾರದೊರಿಯೇ'

ಕುದುರೇ ಬಾಲವನ್ನು ಹಿಂತಿರುಗಿಸಿ ಹಿಡುದಿದ್ದಾನೇ. ನೆಗೆದಿದ್ದಾನೇ. ಆ ನೆಗೆದಂತಾ ಕಾಲದಲ್ಲಿ -

ಆ ಮನೆದೇವರ ಸ್ಮರಣೇ ಮಾಡುತಾನೇ
ರಂಗಪ್ಪನ ಮಗುನೇ
ಅಯ್ಯಾ ಮನೆದೇವರ ಸ್ಮರಣೇ ಮಾಡುತಾನೇ
ವಸ್ತಾದಿ ಸರ್ಜಪ್ಪನಾಯಕಾ
ಧೀರಾ ಘನ ಪಾಳ್ಳೇಗಾರಾ
ನಮ್ಮ ಪಾಳ್ಯಾದರುಮನೆಗೆ ಹೋಗಬೇಕಲ್ಲಾ
'ಪಾಳ್ಳೇಗಾರ ದೊರಿಯೇ'
ನಮ್ಮ ಪಾಳ್ಯಾದರುಮನೆಗೆ ಹೋಗಬೇಕೂ

'ಪಾಳ್ಳೇಗಾರ ದೊರಿಯೇ'
ಹೂನಳ್ಳಿ ಪಟ್ಣವ ಬಿಟ್ಟಾ
ಧೀರಾ ಘನ ಪಾಳ್ಳೇಗಾರಾ
ಅವನೇನೆಂದು ಯೋಚನೆಯ ಮಾಡುತಾನೇ
ಕಾಲಗಳಿಗೆ ಒಳಗೇ
ಅಯ್ಯಾ ಅವನೇನೆಂದು ಯೋಚನೆಯ ಮಾಡುತಾನೇ
ಕಾಲಗಳಿಗೆ ಒಳಗೇ.
ಇಷ್ಟು ದಿವಸಾ ಸ್ವಾಮೀ
ನರಲೋಕದಲ್ಲಿ ಬಾಳಿದ್ದು ಸಾಕು
ಒಂದು ದಿನ ಪ್ರಾಣವಂತು
ಹೋಗುವುದು ನಿಶ್ಚಯವೆಂದು
ಧೀರಾ ಘನ ಪಾಳ್ಳೇಗಾರಾ
ಕಾಮನದುರುಗಾಕೆ ಬರುತಾನೆ.
'ಪಾಳ್ಳೇಗಾರ ದೊರಿಯೇ'
ಸ್ವಾಮೀ, ಕಾಮನದುರುಗಾಕೆ ಬರುತಾನೇ
ರಂಗಪ್ಪನ ಮಗುನೇ
ಕಾಮನದುರುಗಾಕೆ ಬಂದಾ
ಧೀರಾ ಘನ ಪಾಳ್ಳೇಗಾರಾ
ಕಾಮನದುರುಗಾದ ಹೊರುಗೆ
ಧೀರಾ ಘನ ಪಾಳ್ಳೇಗಾರಾ
ಮನೆದೇವರ ಕೋಟೆ ನೋಡೀ
ಧೀರಾ ಘನಪಾಳ್ಳೇಗಾರಾ
ಈ ಪಾಪಿ ಜಲ್ಮ ಇರುಬಾರುದೆಂದೂ
ಧೀರಾ ಘನ ಪಾಳ್ಳೇಗಾರಾ
ಗುಟ್ಟಳ್ಳಿ ವನಕೇ ಬರುತಾನೇ
ರಂಗಪ್ಪನ ಮಗುನೇ
ಅಯ್ಯಾ ಗುಟ್ಟಳ್ಳಿ ವನುಕೆ ಹೋಗುತಾನೇ
ರಂಗಧಾಮ ದೊರಿಯೇ
ಗುಟ್ಟಳ್ಳಿ ವನಕ್ಕೆ ಬಂದಾ
ಧೀರಾ ಘನಪಾಳ್ಳೇಗಾರಾ
ತಾಯೀಗೆ ಮುಖವನ್ನಾ
ತೋರಬಾರ್ದು ಎಂದಾ ರಾಜಾ
ಬಂಧುಬಳಗಕ್ಕೆ ಸ್ವಾಮೀ
ಮುಖವನ್ನು ತೋರಬಾರ್ದೂ ಎಂದೂ

ಧೀರಾ ಘನಪಾಳ್ಳೇಗಾರಾ
ಆ ಗುಟ್ಟಳ್ಳಿ ವನುಕೇ ಬರುತಾನೇ
ಪಾಳ್ಳೇಗಾರದೊರಿಯೇ
ಅಯ್ಯಾ ಆ ಗುಟ್ಟಳ್ಳಿ ವನುಕೇ ಬರುತಾನೇ
'ಪಾಳ್ಳೇಗಾರ ದೊರಿಯೇ'
ಗುಟ್ಟಳ್ಳಿ ವನದ ಒಳುಗೇ
ಉದ್ಯಾವನದ ಒಳುಗೇ
ಸುರುಹೊನ್ನೆ ಮರದಡಿಯಾ
ತಂದೆ ಗೋರೀಲಿ ಕುಂತೂ
ಗೋರಿಯ ಪೂಜೆಯಾ ಮಾಡೀ
ಧೀರಾ ಘನಪಾಳ್ಳೇಗಾರಾ
ವಸ್ತಾದಿ ಸರ್ಜಪ್ಪನಾಯಕಾ
ಧೀಂ ತತ್ತಧೀಂ ತತ್ತಧೀಂ ತತ್ತಧೀಂತ ತೈ
ತತ್ತಧೀಂತ ತೈ ತಗಡ ತಗಡಧೀಂ..
ಗೋರಿಯ ಪೂಜೆಯಾ ಮಾಡೀ
ಧೀರಾ ಘನಪಾಳ್ಳೇಗಾರಾ
ಹಾಸೀ ಅಡ್ಡಾನೆ ಬಿದ್ದೂ
ಆ ಸೊಂಟದಾಗಳ ಪಟ್ಟಿ ಬಿಚ್ಚೀ
ಧೀರಾ ಘನಪಾಳ್ಳೇಗಾರಾ
ವೃಕ್ಷಕ್ಕೇ ಹಾಕಿದನಣ್ಣಾ
ಧೀರಾ ಘನಪಾಳ್ಳೇಗಾರಾ
ವಸ್ತಾದಿ ಸರ್ಜಪ್ಪನಾಯಕಾ
ತನ್ನ ಕೈಯಿಂದಾ ಪ್ರಾಣ ಬಿಡುತಾನೇ
'ಈ ಪಾಳ್ಳೇಗಾರ ದೊರಿಯೇ'
ಅಯ್ಯಾ ಕೈಯಿಂದಾ ತಾನೇ ಪ್ರಾಣ ಬಿಡುತಾನೇ
ಕಾಲಗಂಟೆ ಒಳಗೇ
ಕೈಯಿಂದಾ ಪ್ರಾಣವ ಬಿಟ್ಟಾ
ಧೀರಾ ಘನಪಾಳ್ಳೇಗಾರಾ.

ಇವರಣ್ಣಾ ಕೆಂಗಪ್ಪ ನಾಯಕಾ
ರಂಗರಾಮ್ನ ಗುಡಿಗೆ ಹೋಗೀ
ಪೂಜೆಯ ಮಾಡಿಕೊಂಡೂ
ಬರುವಂತಾ ಸಮಯದಲ್ಲೀ
ಅಣ್ಣಾನ ಸವಾವ ನೋಡೀ

ಭಗುವಂತಾ ನೀನೇ ಗತಿಯೆಂದಾ
ರಂಗಪ್ಪನ ಮಗನೇ
ಇದು ಏನೋ ಚೋದ್ಯವೆಂದಾ
ಧೀರಾ ಘನಪಾಳ್ಳೇಗಾರಾ
ಮೃತಪಟ್ಟು ಹೋಗ್ಯವನೆಲ್ಲಾ
ಧೀರಾ ಘನಪಾಳ್ಳೇಗಾರಾ.

ಸವವನ್ನೂ ತೆಗೆದುಕೊಂಡೂ
ಬಂಧುಬಳಗಾವ ಕರೆಸಿ
ತಂದೆಯ ಗೋರಿಯ ಪಕ್ಕ
ತಂದೆಯ ಗೋರಿಯ ಪಕ್ಕ
ಗೋರಿಯ ತಾನೇ ಮಾಡುತಾನೇ
ಅರದ ಗಳಿಗೆ ಒಳಗೇ
ಅವನಾ ಗೋರಿಯ ತಾನೇ ಮಾಡುತಾನೇ,
ಕಾಲ ಗಂಟೆ ಒಳಗೇ.
ಗೋರಿಯ ಮಾಡಿದರಣ್ಣಾ
ಉತ್ರುಕ್ರಿಯಾವ ಮಾಡೀ
ಉತ್ರುಕ್ರಿಯಾವ ಮಾಡೀ
ದಾನಾಧರ್ಮಾನೇ ಮಾಡೀ
ಅನ್ನದಾನ ಮಾಡುತಾರೇ
ಗೋದಾನಾ ಮಾಡುತಾರೇ
ಎಲ್ಲಾ ದಾನವನೂ ಮಾಡೀ
ಧೀರಾ ಘನಪಾಳ್ಳೇಗಾರಾ
ವೈಕುಂಠ ಸ್ವರ್ಗ ಸೇರವನೇ
ಸರೋಜಪ್ಪ ದೊರಿಯೇ.

ಈ ಪ್ರಕಾರವಾಗಿ ಅಣ್ಣತಮ್ಮಂದಿರೆಲ್ಲಾ ಸೇರಿಕೊಂಡೂ, ಕೆಂಗಣ್ಣ ನಾಯಕಾ, ಧೀರ ಪಾಳ್ಳೇಗಾರಾ, ನಿಜಗಲ್ಲ ಓಬಳಿನಾಯಕ ಅನ್ನತಕ್ಕಂತವ್ರೂ ಅವರೇಳು ಜನ ಅಣ್ಣತಮ್ಮಂದಿರು ಸೇರಿಕೊಂಡು ಸಹೋದರರು, ಇದೇ ಪ್ರಕಾರವಾಗಿ ಜಾಗ್ರತೆ ಹೂನಳ್ಳಿ ಪಾಳ್ಯಕ್ಕೆ ಹೋಗಬೇಕು. ಹೋಗಿದ್ದಾರೇ. ಹೂನಳ್ಳಿ ಪಾಳ್ಯದಲ್ಲಿ ಸೂಳೆ ರಾಣಿಯನ್ನು, ಅತ್ತಿಗಮ್ಮನವರೇ ನಮ್ಮಣ್ಣ ಎಲ್ಲಿ ಹ್ವಾದ ಎಂದು ಕೇಳುತಾರೇ. ನಿಮ್ಮಣ್ಣನವರು ಪರದೇಶಕ್ಕೆ ವಿದ್ಯಕ್ಕೆ ಹೋದವರು ಇನ್ನು ಬಾರಲೇ ಇಲ್ಲ ಎಂದು ಹೇಳುತ್ತಾಳೆ. ಆ ಮಾತನ್ನು ಕೇಳಿಕೊಂಡು ಅರಮನೆಯನ್ನು ಲೂಟಿ ಮಾಡಿದ್ದಾರೇ. ಲೂಟಿಯನ್ನು ಮಾಡಿಕೊಂಡೂ ಚಂದ್ರಾಯುಧವನ್ನು ತೆಗೆದುಕೊಂಡೂ ಈಕೆಯ ಮುಂದಲೆಯನ್ನು ಹಿಡಿದುಕೊಂಡೂ

ಅರಮನೆ ಮುಂಭಾಗದಲ್ಲಿ ಮೇಲಕ್ಕೆ ಎಸೆದಿದ್ದಾರೇ. ಚಂದ್ರಾಯುಧ ಒಡ್ಡಿದ್ದಾರೇ -

ಹತವಾಗೀ ಸೂಳೇ ಕೊಂದವರೇ
ಸೂಳೆಗಾರ ರಂಗೀ
ಹತವಾಗಿ ತಾನು ಹೋಗ್ಯವಳೇ
ಸೂಳೆಗಾರ ರಂಗೀ,
ಹತವಾಗೀ ಕೊಂದವರಣ್ಣಾ.
ಅರಮನೆಯ ಒಳಗೇ ಹೋಗೀ
ವಜ್ರವೈಢೂರ್ಯ ನೋಡೀ
ದಾನಧರ್ಮಾವ ಮಾಡೀ
ಧೀರಾ ಘನಪಾಳ್ಳೇಗಾರಾ
ಅರಮನೆ ಒಳಗೆ ಹೋಗೀ
ದ್ರವ್ಯಬಂಗಾರ ನೋಡೀ
ದಾನಧರ್ಮಾವ ಮಾಡುತಾರೇ
ಆ ಪಟ್ಣ ಪಾಳ್ಯದೋಳಗೇ
ಅಯ್ಯಾ ಅವರು ದಾನಧರ್ಮಾನ ಕೊಡುತ್ತಾರೇ.
ಆ ಪಟ್ಣದೊಳಗೇ.

ಈ ಪ್ರಕಾರವಾಗೀ ಸರ್ಜಪ್ಪನಾಯಕನಾಗಿರತಕ್ಕಂತವ್ನೂ, ಸೂಳೆ ಪಟ್ಟಣಧ ಒಳಗೆ ಮೃತಪಟ್ಟಿದ್ದರ ದೆಸೆಯಿಂದಾ, ಅಣ್ಣತಮ್ಮಂದಿರು ಹೋಗಿ ಆಕೆಯನ್ನು ಮೃತವನ್ನು ಪಡಿಸಿ. ಆಕೆಯಲ್ಲಿರತಕ್ಕಂತಾ ಭಂಡಾರವನೆಲ್ಲಾ ದಾನಧರ್ಮವನ್ನು ಮಾಡೀ, ತಾವು ತಮ್ಮ ಪಟ್ಣಕ್ಕೆ ದಯಮಾಡುವಂತಾವರಾದರೂ.

ಇಲ್ಲೀಗೆ ಜಯಜಯಾ
ಇಲ್ಲೀಗೆ ಶುಭಶುಭಾ.

★★★★★

# ೬. ಬಸವರಾಯ

ಸುವ್ವಾ ಬಾ ಚನ್ನ ಬಸುವಯ್ಯಾ ಸುವ್ವೀ ॥ ಪಲ್ಲವಿ ॥

ಏಳೇಳೂತಾಲೆದ್ದೂ ಯಾರಾನಾ ನೆನವೇನೂ
ಎಲ್ಲಾ ಧಾನ್ಯವಾ ಬೆಳಿಯವಳಾ* - ಸುವ್ವೀ , ಸುವ್ವಾ ಬಾ....
ಎಲ್ಲಾ ಧಾನ್ಯನಾ ಬೆಳಿಯಂತಾ ಭೂಮುತಾಯಾ
ನಾ ಎದ್ದೊಂದರುಗಳುಗೆ ನೆನವೇನೂ - ಸುವ್ವೀ , ಸುವ್ವಾ ಬಾ....

ಹಾದೀ ಮನಿಯವಳಾ ಪಾದಾದುಂಗುರದವಳಾ
(ಈ) ಗೋದುಂಬೆ ಸೀರೇ ನೆರಿಯವಳಾ - ಸುವ್ವೀ , ಸುವ್ವಾ ಬಾ....
ಗೋದುಂಬೆ ಸೀರೇ ನೆರಿಯವಳಾ ಸರಸತಿಯಾ
ನೀನೋದೀ ಕೊಡಮ್ಮಾ ವಕುನಾವಾ - ಸುವ್ವೀ , ಸುವ್ವಾ ಬಾ....

ಎಂಟೆಲೆ ಮಾವೀನಾ ದಂಟಿನೊಳಗಿರುವ್ವೋಳಾ
(ನೀ) ಗಂಟೆಯಾ ಗತ್ತುಗೆ ನಲಿಯವಳ
ಗಂಟೆಯಾ ಗತ್ತುಗ ನಲಿಯವಳ ಸರುಸತಿಯಾ
ನಮ್ಮಾ ಗಂಟಾಲಕ್ಸರುಕ ನೆರಿಯಮ್ಮಾ.

ಆರೇಳು ಮಾವೀನಾ ನಾರೀನೊಳಗಿರುವ್ವೋಳಾ
(ನೀ) ತಾಳೇಯ ಗತ್ತುಗೆ ನಲಿಯವಳ
ತಾಳೇಯ ಗತ್ತುಗೆ ನಲಿಯವಳ ಸರುಸತಿಯಾ
ನಮ್ಮ ನಾಲೀಗಕ್ಸರುಕ ನೆರಿಯಮ್ಮಾ.

ಹಾಳೂಟ್ಟು ಗಂಗಲ್ಲಿ ತೋಳಿಗು ಚಿನ್ನದ ಪದ್ಮ
ನಾ ತಾಳೀದಿ ಬಸುರಾಯ್ರ ಸ್ವರುಗಾವ
ಬಸುವರಾಯರ ಮಡದಿ ಹಸಿಯವ್ರು ನೀಲಮ್ಮಾ
ಹಸುವೀನಾ ಹಾಲಾ ಒಲುಮೇಲಾ

* ಪ್ರತಿ ಎರಡು ಸಾಲಿಗೊಮ್ಮೆ ಪಲ್ಲವಿಯನ್ನು ಹಾಡುವರು

ಹಸುವೀನಾ ಹಾಲ್ಗಾ ಒಲೆಮ್ಯಾಲಾ ಇಟ್ಟವರಾ
ಅವರು ಶಿಶುವು ನೆನದು ದುಕ್ಕ ಮಾಡುತವರಾ
ನಾವ್ ಭೂಮೀಗೆ ಹಿರಿಯವರು ಭೂಲೋಕ್ಕೆ ಹೆಚ್ಚಿನವರು
ನಮ್ಮ ಕಲ್ಯಾಣುಕೆ ತಕ್ಕ ಮಗನಿಲ್ಲಾ
ನಮ್ಮ ಕಲ್ಯಾಣುಕೆ ತಕ್ಕ ಮಗನಿಲ್ಲಾ ಬಸುರಾಯ್ರಾ
ನಾವು ಎಷ್ಟೇ ಸತ್ತೀಕುರಾದ್ರಾ ಫಲವೇನೂ ?

ಕೇಳು ಕೇಳು ನನ್ನ ಹುಚ್ಚು ಮನುಷಿ ನೀಲೆಣ್ಣೆ
ಈ ಭೂಲೋಕದಲ್ಲಿರುವ ನರುಳುಗಳೂ
ಭೂಲೋಕದಲ್ಲಿರುವ ನರುಳುಗಳು ಎಲಹೆಣ್ಣೆ
ಅವರೇ ನಮಗೆ ಮಕ್ಕಕಾಣೇ.

ನಾವು ನವಮಾಸೊಂಬತ್ತು ತಿಂಗಾ ಹೆತ್ತೂ ತಬ್ಬಿದಾ ಮಕ್ಕಾ
ನಮ್ಮ ತಾಯಿತಂದೇಲಂತಾ ಪ್ರೀತಿಸೀ
ನಮ್ಮ ತಾಯಿತಂದೆಲಂತಾ ಪ್ರೀತೀಸಿ ಬಲುಕಷ್ಟ
ಈ ನರಳುಗಳು ನಮ್ಮ ಮಕ್ಕಳುಂಟಾ ?

ಏನೇ ಹೇಳಿದರೂನೂ ಕೇಳೋದಿಲ್ಲ ಬಸುರಾಯ್ರೇ
ನನಗೆ ಮಕ್ಕಳ ಫಲ ನೀವು ತರಾಬೇಕು
ನಾವು ಬ್ರಹ್ಮನ ಬಳಿಯಲ್ಲಿ ಮಕ್ಕಳು ಕೇಳಾನಿಲ್ಲ
ಈ ನರಲೋಕದಲ್ಲಿ ನಮಗೆ ಮಕ್ಕಳುಂಟಾ ?

ಎಷ್ಟೇ ಹೇಳಿದರೂನಾ ಕೇಳಾಲಾರಿ ಬಸುರಾಯ್ರೇ
ನನಗೆ ಬಂಜೀ ಅನೋ ಸಬುದ ತಪ್ಪುಸಯ್ಯಾ
ಮಕ್ಕಳ ಮೇಲೆ ಇಷ್ಟೊಂದು ಪ್ರೀತ್ಯಾದ್ರಾ
ನಾನು ಹೇಳಿದಂಗಾ ನೀನೂ ಮಾಡಾಬೇಕೂ.

ನಮ್ಮ ಎಷ್ಟ ಭಾಗ್ಯ ಇದ್ರೂ ಹಾಕಬಾರದು ಎಲಹೆಣ್ಣೇ
ನಾನು ಕ್ವಾರಣ್ಯಕ ಇಂದು ಹೋಗಿ ಬರುತೀನಿ
ನಾನು ಕ್ವಾರಣ್ಯಕ ಇಂದು ಹೋಗಿ ಬರಾನುಗಂಟಾ
ನಮ್ಮ ಕಲ್ಯಾಣನೆಲ್ಲಾ ರಜಹೊಡದು
ನಮ್ಮ ಕಲ್ಯಾಣನೆಲ್ಲಾ ರಾಜ ಹೊಡೆದು ಸುಂಗುರುಸು
ನೀನು ಮುತ್ತಿನ ರಂಗೋಲ್ಯಾ ಹರುಳೆಣ್ಣೇ.

ಅವ್ರು ಮಡದಿ ನೀಲವ್ಗ ಬುದ್ಧಿ ಹೇಳಿ ಬಸುರಾಯ್ರು
ಅವ್ರು ತಾನಾ ಮಡಿಯಾ ಸ್ವಾಮೀ ಮಾಡುತವರಾ
ಅವರು ತಾನಾ ಮಡಿಯಾ ಮಾಡೀ ಮೈಗೆಲ್ಲಾ ಬಸುಮಾಂಗ ಹಾಕೀ
ಅವ್ರು ಮುತ್ತಿನು ಜೋಳಿಗುವಾ ಮುಂಗೈಲಿಡದೂ
ಮುತ್ತಿನು ಜೋಳಿಗುವಾ ಮುಂಗೈಲಿ ಹಿಡಕಂಡೂ
ಅವರು ಚಿನ್ನಾದ ಬೆತ್ತಾ ಬಲಗೈಲಿ.

ಶಿವನೇ ಮುತ್ತೈದೆರ ಬಿಕುಸಾ ಬಸವರಾಯರ ಬಿಕುಸಾ
ನಿಮ್ಮ ಭಕ್ತಿ ಕ್ವಾರಣ್ಯಾ ಬರಬೇಕೂ
ಮೂರು ಮನೆ ಕ್ವಾರಣ್ಯ ಮಾಡಿಬಂದ್ರು ಬಸುರಾಯ್ರು
ಅವ್ರು ಬರುವ ದಾರಿಲ್ಲಿ ಏನು ಗ್ಯಾಪನೇ.

ನನ್ನ ಮಡುದಿ ಮಕ್ಕಳಗ್ಯಾನ ಮರಿಯಲು ಬೇಕೂಲಂತಾ
ಅವ್ರು ತುಂಬಿ ಬರುತಾರೆ ಸ್ವಾಮೀ ಜಳ್ಳುಬತ್ತಾ ಸುವ್ವೀ
ಅವ್ರು ತಂದಿರುವ ಕ್ವಾರಣ್ಯಾ ಮಾಯಮಾಡಿ ಬಸುರಾಯ್ರು
ಅವ್ರು ಜಳ್ಳು ಬತ್ತ ಸ್ವಾಮಿ ತಗದು ಬರುತವರಾ.

ಬಂದೂ ಬಸವರಾಯ್ರೂ ಕಲ್ಯಾಣದಲ್ಲಿ ನಿಂತೂಗಂಡೂ
ಅವ್ರು ಮಡುದಿ ನೀಲಮ್ಮನಾ ಕೂಗುತವರಾ
ಕೇಳುಕೇಳೂ ನನ್ನಾ ಮಡದಿಯೆ ನೀಲೆಣ್ಣೆ
ನಾನು ಮಕ್ಕಾಳ ಫಲವ ತಕ್ಕಂಡು ಬಂದಿವನಿ.

ನೀನು ಸತ್ತುವಂತಿಯಾದಾರಾ ಮಕ್ಕಳು ಬೇಕಾದರೆ
ನಾನು ಹೇಳಿದಾಂಗ ನೀನು ಮಾಡಬೇಕು
ಸತ್ತುವಂತಿಯಾದರ ಕೊಡುತೀನಿ ಜಳ್ಳು ಬತ್ತಾ
ನೀ ಒಂದಕ್ಕೆ ಮೊನೆ ಮುರೀದೆ ಅಕ್ಕಿ ಮಾಡಾಬೇಕು

ಒಂದಕ್ಕಿ ಮೊನು ಮುರೀದೆ ಅಕ್ಕಿ ಮಾಡಿ ಎಲಹೆಣ್ಣೆ
ನೀ ಒಕ್ಕುಳಕ್ಕಿ ಹಾಕಿ ಒಂದು ಬದನುವಾ
ಒಕ್ಕಳಕ್ಕಿ ಹಾಕಿ ಒಂದು ಒದುನೆ ಎಸ್ರು ಮಾಡಿ
ಈ ಲಕ್ಸಾದ ಮೇಲೆ ತೊಂಬತ್ತಾರೂ

ಲಕ್ಸಾದ ಮೇಲೆ ತೊಂಬತ್ತಾರು ಗಣಂಗಳುಗ
ನೀನು ಊಟಾ ಬಡಿಸುದುರ ಫಲವುಂಟು.

ಅಯ್ಯಾ ಗಟ್ಟಿ ಬತ್ತದಲ್ಲಿ ಅಕ್ಕಿ ಆಗುವದು ಕಷ್ಟ
ಈ ಜಳ್ಳು ಬತ್ತಸ್ವಾಮಿ ಅಕ್ಕಿ ಆಗ್ವುದಾ ?
ಈ ನರುಳುಗಳೊಟ್ಟೆಲ್ಲಿ ಮಕ್ಕಳಾಗ್ವುದೆ ಕಷ್ಟ
ನೀ ಸತ್ವಂತಿ ಮಕ್ಕಳ ಕೇಳುಬಹುದಾ ?

ಬಸುವರಾಯರ ಮಾತಾ ಹಸಿಯವ್ರು ನೀಲಮ್ಮ ಕೇಳಿ
ಅವ್ರು ಕೊಟ್ಟಂತಾ ಜಳ್ಳು ಬತ್ಯಾ ಹತ್ತು ಬೆರುಳಲ್ಲಿ
ಅವರು ಕೊಟ್ಟಂತಾ ಜಳ್ಳುಬತ್ತಾ ಹತ್ತು ಬೆರುಳಲ್ಲೆತ್ತಿ ಗಂಡೂ
ಅವ್ರ ನಾದೂನಿ ನಾಗವ್ವನ್ ತಾವ್ಕ ತೆರುಳವ್ರಾ.

ಕೇಳು ಕೇಳು ನನ್ನ ಸತ್ತುವಂತೆ ನಾಗಮ್ಮ
ನಿಮ್ಮಣ್ಣಯ್ ಕೊಟ್ಟಿರುವ ಜಳ್ಳುಬತ್ಯಾ ನಾಗವ್ವ
ನಿಮ್ಮಾಣ್ಣಯ್ಯ ಕೊಟ್ಟಿರುವ ಜಳ್ಳುಬತ್ಯಾ
ನೀ ಒಂದಕ್ಕಿ ಮೊನು ಮುರೀದೆ ಅಕ್ಕಿ ಮಾಡಾಬೇಕು.

ಅವ್ರು ಅತ್ತೀಗು ಕೊಟ್ಟ ಬತ್ಯಾ ಹತ್ತು ಬೆರುಳಲ್ಲೀ ಈಸಿಗಂಡು
ಅವ್ರು ತಾಯಿ ಮೊಕಬೋಜಣನಾದ್ರ ಮಾಡುತವರಾ.
ತಣ್ಣೀರು ತಾನಾ ಮಾಡೀ ಕೈಕಾಲು ಮೊಕ ಮೋಜ್ಣ ಮಾಡೀ
ಅವ್ರು ಊಬತ್ತಿರೇಕ ಧರುಸುತವ್ರಾ.

ಅವ್ರು ಬೆಳ್ಳೀಯ ಒಳುಕಲ್ಲುಗ ಜಳ್ಳುಬತ್ತ ಸುರುದವರಾ
ಅವ್ರು ಚಿನ್ನಾದ ಒನಕಾ ಬಲುಗೈಲಿ
ಚಿನ್ನಾದ ಒನುಕಾ ಬಲುಗೈಲಿ ಹಿಡುಕಂಡು
ಅವ ಯಾರ್‍ಯಾರೂ ಪಾದ್ಯಾ ನೆನುದಾಳೂ

ನಮ್ಮ ಅಣ್ಣಯ್ ಬಸುರಾಯ್ರಾ ಪಾದಾ ಅತ್ತಿಗು ನೀಲಮ್ನ ಪಾದಾ
ಈ ಶರುಣಾರಾ ಪಾದಾ ಗತಿಯೆಂದೂ
ಅವ್ರು ಶರಣಾರ ಪಾದಾ ನೆನುದವಳ ನಾಗಮ್ಮಾ
ಒಂದಕ್ಕೂ ಮೊನು ಮುರೀದೆ ಅಕ್ಕಿ ಮಾಡವಳಾ.

ಒಂದಕ್ಕೂ ಮೊನು ಮುರೀದೆ ಅಕ್ಕಿ ಮಾಡಿ ನಾಗಮ್ಮ
ಅವ್ರಣ್ಣಯ್ನ ಪಟ್ಟಣುಕ ತೆರುಳವರಾ
ಅತ್ತೀಗತ್ತೀಗ ಕೇಳಮ್ಮಾ ಸತ್ತಿವಂತೆ
ನೀವು ಕೊಟ್ಟಿರುವ ಜಳ್ಳುಬತ್ಯ ಅಕ್ಕಿ ಮಾಡಿವನೀ.

ಅವ್ವ ನಾದಾನಿ ಕೊಟ್ಟಂತಾ ಈ ಅಕ್ಕಿಯಾ ತಗುದವಳಾ
ಅವ್ರು ತಣ್ಣೀರು ಸ್ತಾನಾ ಮಾಡವಳಾ
ಅವ್ರು ತಣ್ಣೀರು ಸ್ತಾನಾ ಮಾಡವರಾ ನೀಲಮ್ಮಾ.

ಅವ್ರು ಬಾಯ್ಕಟ್ಟಿನ್ನು ಮ್ಯಾಲಾ ಒಲೆಹೂಡೀ
ಒಕ್ಕುಳಕ್ಕಿ ಹಾಕೀ ಅನ್ನ ಮಾಡೀ ನೀಲಮ್ಮಾ
ಅದು ಬೆಟ್ಟ ಬೆಳೀದಾಗಾ ಅನ್ನದ ರಾಶ್ಯಾ.

ಬಾಯಿಗೆ ಬಾಯ್ಕುಟ್ಟೂಡಿ ನಡವೀಗೆ ನಡಕಟ್ಟ ಧರಸಿ
ಅವರೊಕ್ಕೊಳಕ್ಕಿ ಹಾಕಿ ಅಡಗ ದುಡಗಿ
ಅವರೊಕ್ಕೊಳಕ್ಕಿ ಒಂದ ಬದನ ಎಸರು ಮಾಡಿ
ಅವ್ರು ಬೆಟ್ಟ ಬೆಳಿಯಾಗಿ ಅನ್ನೊದು ರಾಸ್ಯ.

ಅವ್ರು ಬೆಟ್ಟ ಬೆಳಿಯಾಗಿ ರಾಸ್ಯವಾಯ್ತು ನೀಲಮ್ಮ
ಅದು ಏಳು ಗಾವುದೀಗ ಗಮುಗರದು
ಅದು ಏಳು ಗಾವುದೀಗ ಗಮುಗರದುದಡುಗೇಯ ದುಡಗಿ
ಅವ್ರು ಬಸುರಾಯನ ತಾಕ ತೆರಳವರ.

ಕೇಳಿ ಕೇಳಿ ನಮ್ಮ ಸತುವಂತ ಬಸುರಾಯ್ರ
ನಿಮ್ಮ ಲಿಂಗಕ್ಕು ಶಿವಪೂಜ್ಯ ಮಾಡಿ ಗುರುವೆ
ನಿಮ್ಮ ಲಿಂಗಕ್ಕು ಶಿವಪೂಜ್ಯ ಮಾಡಿ ಗುರುವೆ ಅಂದುದ ಕೇಳಿ
ಅವ್ರು ಹುಸುನೆಗಿಯ ಸ್ವಾಮಿ ನೆಗುತಾರ.

ಅವ್ರು ಒಂದೂ ಬದುನಾಲಾಕೀ ಎಸ್ರು ಮಾಡಿ ನೀಲಮ್ಮ
ಅದು ಏಳೂ ಗಾವುದೀಗ ಗಮುಗರಿದಾ
ಏಳೂ ಗಾವುದೀಗ ಗಮುಗರಿದಾಡುಗೆಯ ದುಡುಗೀ
ಅವ್ರಾ ಬಸುವರಾಯರ ತಾವ್ಕ ತೆರಳವಾರಾ.

ಕೇಳಿ ಕೇಳಿ ಬಸುರಾಯ್ರಾ ಸತ್ತುವಂತ ಬಸುರಾಯ್ರಾ
ನಿಮ್ಮ ಕಂಡಾಯ್ಕ ಶಿವಪೂಜ್ಯಾ ಮಾಡಿ ಬನ್ನೀ
ನೀಲಮ್ಮಾಡಿದು ಮಾತಾ ಕೇಳವ್ರ ಬಸುರಾಯ್ರು
ಅವ್ರು ಹುಸುನಗೆಯ ಸ್ವಾಮಿ ನೆಗುತವರಾ.

ಆ ಜಳ್ಳು ಬತ್ತದಲ್ಲಿ ಅಕ್ಕಿ ಆಗಿರೋದು ನಿಜವಾ ?
ನೀನು ಶರಣರುಗ ಅಡಿಗ್ಯಾದುಡುಗಿರೋದು ನಿಜವಾ ?

ನೀವು ಹಾಸ್ಯಾವ ಆಡುಬ್ಯಾಡಿ ಅಂಕಾರುಗಾರ ಬಸುರಾಯ್ರ
ನಿಮ್ಮ ಲಿಂಗಕ್ಕ ಶಿವಪೂಜ್ಯಾ ಮಾಡಿಬನೀ.

ಜಳ್ಳು ಬತ್ತಾದಲ್ಲಿ ಅಕ್ಕಾಗಿರುವದು ನಿಜವ ?
ನೀನ ಶರಣರನಡುಗೇಯ ದುಡಗಿರುವಾದು ನಿಜವ ?
ನೀವು ಹಾಸ್ಯಾವು ಮಾಡುಬ್ಯಾಡಿ ಅಂಕಾರುಗಾರು ಬಸುರಾಯ್ರು
ನಮ್ಮ ಶರಣರಗ ಟೇಮಾಯ್ತು ಬನ್ನಿ ಗುರುವೆ.

ಮಡದಿ ಆಡೀದು ಮಾತ ಕೇಳವರೆ ಬಸುರಾಯ್ರು
ಅವ್ರು ಮೊಕುಮಜ್ಜಣ ಸ್ವಾಮಿ ಮಾಡುತಾರ
ಬಾರೀಯ ಕಂಡಾಯ ಬಲುದಲ್ಲಿ ಹಿಡುಕೊಂಡು
ಅವ್ರು ಅಡುಗ ಮನುಗ ಸ್ವಾಮಿ ತೆರುಳವರ.

ಸತ್ತುವಂತಾಡಿದ ಮಾತಾ ಕೇಳವರೆ ಬಸುರಾಯ್ರು
ಅವ್ರು ಬಾರೀ ಕಂಡಾಯ ಬಲದಲ್ಲೀ
ಬಾರೀ ಕಂಡಾಯ ಬಲದಲ್ಲಿ ಇರುಸುಕಂಡೂ
ಅವ್ರು ಅನ್ನದು ರಾಸ್ಯಾದು ತಾವ್ಕ ತೆರುಳವರಾ.

ಅನ್ನುದು ರಾಸ್ಯಾನೋಡೀ ಸಂತೋಸ ಪಡುತವರಾ
ಅವ್ರು ಅನ್ನದು ರಾಸ್ಯವ್ಕ ತೆರಿಯಾ ಬಣ್ಣ ಬುಟ್ಟು
ಅವ್ರು ಅನ್ನದು ರಾಸ್ಯಾಕೆ ತೆರಿಯಾಬಣ್ಣವ ಬುಟ್ಟು
ಅವ್ರು ಲಿಂಗ ಪೂಜ್ಯಕೆ ಸ್ವಾಮೀ ಹೊರುಟವರಾ.

ಅನ್ನೂದು ರಾಸ್ಯ ನೋಡಿ ಹೆಬ್ಬಾಳ ಪಡುತಾವರಲ್ಲಿ
ಅನ್ನೊದು ರಾಸ್ಯಕ ತೆರಿಯ ಬಣ್ಣ ಬುಟ್ಟಾರು
ಅನ್ನೊದು ರಾಸ್ಯಕ ತೆರಿಯ ಬಣ್ಣವ ಬುಟ್ಟು
ಅವ್ರು ಬಾರಿ ಕಂಡಾಯ ಇರುಸವರ

ಕೈಕಾಲು ಮೊಕುವ ತೊಳದು ಮೈಗೆಲ್ಲ ಬಸುಮಂಗವ್ಹಾಕಿ
ಅವ್ರು ಲಿಂಗಪೂಜೆಗು ಸ್ವಾಮಿ ತೆರುಳವರ
ಅವ್ರು ಲಿಂಗ ಪೂಜೆಗು ಸ್ವಾಮಿ ಬಂದವರ ಬಸುರಾಯ್ರ
ಅವ್ರು ನೂರೊಂದು ಪುಸುಮ್ಯ ಕರುದವರ.
ತ್ವಾಟಾದಲ್ಹುಡುವಾದು ನೀಟಾಗಿ ಬೆಳಿವಾದು
ನೀ ಊಟುಕ ಮುಂದಾಗಿ ಬರುವೊ - ಬಾಳೆ ಎಲೆಯ
ನೀ ಬಂದ್ಹೋಗು ಬಸುರಾಯ್ರ ಶಿವುಪೂಜಗ.

ಲೆಂಕಾದಲುಡುವಾದು ಅಂಕದಲ್ಲಿ ಬೆಳೆವಾದು
ಶಿವುಪೂಜುಗ ಮುಂದಾಗಿ ಬರುವಾದು
ಶಿವುಪೂಜುಗ ಮುಂದಾಗಿ ಬರುವ ಬಿಲ್ಲಪತ್ರದ್ಹೂವ
ನೀ ಬಂದ್ಹೋಗು ಬಸುರಾಯ್ರ ಶಿವುಪೂಜಗ.

ಲಿಂಗ ಪೂಜಕೆ ಸ್ವಾಮಿ ಹೊರುಟವರೆ ಬಸುರಾಯ್ರು
ಅವರು ನೂರೊಂದು ಕುಸುಮ್ಯ ಕರುದವರಾ.

ತ್ವಾಟಾದಲ್ಲುಡುವಾದೂ ನೀಟವಾಗಿ ಬೆಳಿಯಾದೂ
(ಈ) ಊಟಕ್ಕೂ ಮುಂದಾಗಿ ಬರುವೋದು
ಊಟಕ್ಕೂ ಮುಂದಾಗಿ ಬರುವೋ ಬಾಳೆಯೆಲಿಯ
ನೀ ಬಂದೋಗು ಬಸುರಾಯ್ರಾ ಶಿವುಪೂಜಾ.

ಅಂಕದಲ್ಲುಡುವೋದು ಅಂಕದಲ್ಲಿ ಬೆಳಿಯಾದೂ
ಈ ಶಿವಪೂಜಕು ಮುಂದಾಗಿ ಬರವೋದು
ಈ ಶಿವಪೂಜಕು ಮುಂದಾಗಿ ಬರವಾ ಬಿಲ್ಪತ್ರೆದ್ಹೂವಾ
ನೀ ಬಂದೋಗು ಬಸುರಾಯ್ರಾ ಶಿವುಪೂಜಾ.

ಮಾಳಾದಲುಡುವೋದು ಮಾಳಾದಲ್ಲಿ ಬೆಳಿಯಾದು
ನೀ ಎಲ್ಲಾ ಶಾಸ್ತ್ರಾಕೂ ಸಲುವೋದು
ಎಲ್ಲಾ ಶಾಸ್ತ್ರಾಕೂ ಸಲುವೋ ಗರುಕೇಯ ಪತ್ರ್ಯಾ
ನೀ ಬಂದೋಗು ಬಸುರಾಯ್ರಾ ಶಿವಪೂಜ.

ನೀಳದಲ್ಲಿ ಉಡುವೋದು ಸಸಿವಾರದಲ್ಲಿ ಬೆಳಿಯೋದು
ನೀ ಮುತ್ತೈದೆರ ತಲಿಯಲ್ಲಿ ಮೆರಿಯಾದು
ಮುತ್ತೈದೆರ ತಲಿಯಲ್ಲಿ ಮೆರಿಯಾ ಮಲ್ಲಿಗೆ ಹೂವಾ
ನೀ ಬರುಬೇಕು ಬಸುರಾಯ್ರಾ ಶಿವಪೂಜಾ.

ಗಂಗಾ ಕರೆಯಲ್ಲಿ ತುಂಬಿ ವಾಲಾಡೀದ
ನೀ ಮುತ್ತೈದೇರು ನೆರಿಯಾಗಿ ಕೆದುರಾದ
ನೀ ಮುತ್ತೈದೇರು ನೆರಿಯಾಗಿ ಕೆದುರಾದ ಶಾಮಂತಿಗ್ಹೂವ
ನೀ ಬಂದ್ಹೋಗು ಬಸುರಾಯ್ರ ಶಿವುಪೂಜೆಗೆ

ತ್ವಾಟಾದಲ್ಹುಡುವಾದು ತ್ವಾಟದಲ್ಲಿ ಬೆಳೆವಾದು
ಏಳು ಗಾವುದೀಗೆ ಗಮಗರಿವಾದು ಸುದ್ದಿ

ಏಳು ಗಾವುದೀಗ ಗಮುಗರಿವಾದು ಪಚ್ಚೆತೆನಿಯ
ನೀ ಬರುಬೇಕು ಬಸುರಾಯ್ರ ಶಿವಪೂಜುಗೆ.

ತ್ವಾಟಾದಲ್ಲುಡುವಾದೂ ತ್ವಾಟಾದಲ್ಲಿ ಬೆಳಿಯಾದು
ನೀ ಮುತ್ತೈದರ ನೆರಿಯಾಗಿ ಕೆದುರಾದೂ
ಮುತ್ತೈದೆರ ನೆರಿಯಾಗಿ ಕೆದರೋ ಸಾಮಂತಿಗ್ಹೂವಾ
ನೀ ಬಂದೋಗು ಬಸುರಾಯ್ರಾ ಶಿವುಪೂಜಾ.

ತ್ವಾಟದಲ್ಲುಡುವಾದೂ ತ್ವಾಟಾದಲ್ಲಿ ಬೆಳಿಯಾದೂ
ನೀ ಮುತ್ತೈದೆರ ತಲಿಯಲ್ಲಿ ಮೆರಿಯಾದೂ
ಮುತ್ತೈದೆರ ತಲಿಯಲ್ಲಿ ಮೆರಿಯೋ ಸಂಪಿಗೆ ಹೂವಾ
ನೀ ಬಂದೋಗು ಬಸುರಾಯ್ರಾ ಶಿವಪೂಜಾ.

ಮೂಗೂರು ಮುಲ್ಲೆಹೂವಾ* ಮುಡಿವಾಳ ಪಚ್ಚೆತೆನಿಯ
ಈ ಜಾಜಿ ಜವನಾಗಳೇ ನೀವು ಬರಾಬೇಕು.

ಓಣೆಲ್ಲಿ ಹುಡುವೋದೂ ಓಣೇಲಿ ಬೆಳಿಯೋದು
ನೀ ಓಣೇಲೀಚರಿ ತಿರುಗಾದೂ
ಓಣೇಲೀಚರಿ ತಿರುಗೋ ಲಕ್ಕಿಯ ಪತ್ರ್ಯಾ
ನೀ ಬರಬೇಕು ಬಸುರಾಯ್ರ ಶಿವಪೂಜಾ.

ಕಾಡಲ್ಲುಡುವಾದು ಕಾಡಲ್ಲಿ ಬೆಳಿಯಾದು
ನೀ ಸೂರ್ಯದೇವನಾಗಿ ತಿರುಗಾದೂ
ಸೂರ್ಯದೇವನ್ನಾಗೀ ತಿರುಗಾ ಸೂರ್ಯಕಾಂತಿ ಹೂವಾ
ನೀ ಬರುಬೇಕು ಬಸರಾಯ್ರ ಶಿವುಪೂಜಾ.

ನೀನು ಗಂಗೆ ಕರೆಯಲ್ಲಿ ತುಂಬಿ ವಾಲಾಡಾದಾ
ಏಳೂ ಸುತ್ತಿನ ಗಣುಗಲ್ಯಾ
ಏಳೂ ಸುತ್ತಿನ ಗಮುಗರಿಯೋ ಗಣುಗಲ್ಯಾ
ನೀ ಬಂದೋಗು ಬಸುರಾಯ್ರಾ ಶಿವುಪೂಜಾ.

---

* ಮೈಸೂರು ಜಿಲ್ಲೆ ಮೂಗೂರಿನಲ್ಲಿ ಬಿಡುವ ಮೊಲ್ಲೆಯ ಒಂದು ಜಾತಿ. ಅತಿ ಸುವಾಸನಾಯುಕ್ತ ನವಿರಾದ ಹೂ ಇದು.

ಕಾಡಲ್ಲುಡುವಾದು ಕಾಡಲ್ಲಿ ಬೆಳೆಯೋದು
ನೀ ಶನಿವಾರದ್ದಿನ ಸಲವೋದು
ನೀ ಶನಿವಾರದ್ದಿನ ಸಲುವೋ ತುಳಸಿಯ ಗಿಡುವಾ
ಬಂದೋಗು ಬಸುರಾಯ್ರಾ ಶಿವಪೂಜಾ.

ಬಂದಾ ಪುಸ್ಮಾಗಳಾ ಅಂಗೈಲಿ ಹಿಡುಕೊಂಡು
ಅವ್ರು ತಾಳೇಯ ಪುಸುಮ್ಯಾ ಕರುದಾರೂ.

ಇಂಬೀಯ ಹೂವಂಗಾ ತುಂಬೀದ ಮೈಯವಳಾ
ನೀನು ಗಂಗೆ ಕರೆಯಲ್ಲಿ ವಾಲಾಡವಳಾ
ಗಂಗೆ ಕರಿಯಲ್ಲಿ ವಾಲಾಡೋ ತಾಳೆಹೂವಾ
ನೀ ಬರುಬೇಕು ಬಸುರಾಯ್ರಾ ಶಿವುಪೂಜಾ.

ನಾನು ಸುಮ್ಮಾನೆ ಕರುದಾರೆ ಸುಮ್ನನೆ ಬರುವವಳಲ್ಲ
ನಂಗೆ ವಲೇರ ಹೊನ್ನಯ್ನಾ ವಾದ್ಯಬೇಕು
ನಂಗೆ ವಾಲಾರ್ಹೊನ್ನಯ್ನಾ ವಾದ್ಯ ಬೇಕು ಬಸುರಾಯ್ರ
ಈ ಮಡುವಾಳ ಮಾಚಯ್ನ ಮಡಿಬೇಕು.

ನಿಮ್ಮ ತಾಳ ತಂಬೂರಿ ಕೈಪೆಂಜು ಬಂದಾರ
ನಾ ವಾಲಾಡಿ ಬರವೇನೋ ಗುರುಮಠುಕ
ಅವ್ರು ತಾಳೆಹೂವಿನು ಮಾತ ಕೇಳ್ಯವರೆ ಬಸುರಾಯ್ರು
ಅವ್ರು ಹುಸಿ ನಗೆಯ ಸ್ವಾಮಿ ನೆಗುತವರ.

ನಾನು ಕರದಾ ಪುಸ್ಮವೆಲ್ಲಾ ಅಂಗೈಲಿ ಬಂದವ
ಈ ತಾಳೆಹೂವಿನ ಆಂಕಾರ ನೋಡುದ್ಯಾ
ನೀನು ಹಳ್ಳಾದಲ್ಲುಡುವೋಗು ಮುಳ್ಳಾಗಿ ಬೆಳಿವೋಗು
ಈ ಮಲ್ಲಯ್ಯ ದೇವ್ರಿಗೆ ಮರೆಯಾಗು.

ನಿನ್ನ ನಾಲಿಗೂವಾಸಿಗುಳಿ ಮುಡಿಲ್ಹೋಗು
ನಿನ್ನ ನಾಲಿಗೂವಾಸಿಗುಳ ಮುಡಿಯಾಲಿ ತಾಳೆಹೂವಾ
ಮುಡಿದೋರಿಗೆ ಮೂರುದಿನ ತಲೆನೋವು

ಮುಡಿದೋರಿಗೆ ಮೂರುದಿನ ತಲಿಯ ನೋವು ಬರಲಿ ಹೋಗಮ್ಮ
ನೀನು ಬ್ರಾಹ್ಮಣ್ರ ಬೀದಿಲ್ಲಿ ಮೆರಿಹೋಗು.

ಅವ್ರು, ತಾಳೆಯ ಹೂವಿಗ ಸಾಪಕೊಟ್ರು ಬಸುವಯ್ಯ
ಅವ್ರು, ಬಂದಾ ಪೂಸ್ಮಾದಲ್ಲಿ ಲಿಂಗುಪೂಜ್ಯಾ
ಬಂದಾ ಪುಸ್ಮಾದಲೀ ಲಿಂಗುಪೂಜ್ಯಾ ಮಾಡಿಕಂಡೂ
ಅವ್ರು, ಮಡದಿ ನೀಲಮ್ಮುನ ಕರದಾರೂ.

ಕೇಳು ಕೇಳು ನನ್ನ ಸತ್ತುವಂತ ನೀಲೆಣ್ಣೆ
ನೀನು ಶರಣರುಗೆ ಅಡುಗ್ಯಾದುಡುಗಿದ್ಯಾ ?
ನೀನು ಶರಣರುಗೆ ಅಡುಗ್ಯಾದುಡುಗಿದೆಯಾ ಎಲಹೆಣ್ಣೆ
ಅವ್ರ ಊಟಕ್ಕೆ ಈಗ ಬಡುಸಮ್ಮಾ.

ಅವ್ರು, ಬಸುವರಾಯರ ಮಾತ ಹಸಿಯವ್ರು ನೀಲಮ್ಮ ಕೇಳಿ
ಅವ್ರು, ನಡುವೀಗೆ ನಡುಕಟ್ಟ ಉಡುತವರ
ನಡುವಿಗೆ ನಡುಕಟ್ಟಾಕಿ ಬಾಯಿಗೆ ಬಾಯಿಕಟ್ಟೂಡಿ
ಅವ್ರು, ಚಿನ್ನದ ಗಿಂಡೀಲಿ ಪನ್ನೀರ ತುಂಬೀ

ಅವರು ಚಿನ್ನದ ಗಿಂಡೀಲಿ ಪನ್ನೀರ ತುಂಬಿಕಂಡು
ಅವ್ರು, ಎಲ್ಲಾರ ಪಾದವ ತೊಳಿದವರ.

ಒಕ್ಕುಳಕ್ಕಿ ಹಾಕಿ ಒಂದು ಬದನೆ ಎಸ್ರು ಮಾಡಿ
ಲಕ್ಷದ ಮೇಲೆ ತೊಂಬತ್ತಾರೂ
ಲಕ್ಷದ ಮೇಲ ತೊಂಬತ್ತಾರು ಗಣಂಗಳುಗ
ಅವ್ರು, ಊಟ ನೀಲಮ್ಮ ಬಡುಸುತವರ.

ಅವ್ರು, ಊಟ ನೀಲಮ್ಮ ಬಡುಸಿ ಮಿಕ್ಕಿದಲನ್ಯಾ
ಅವ್ರು, ಕಲ್ಲುಬಂಡಿ ಕಟ್ಟಿ ಕೈಲಾಸ್ಕ
ಅವರು ಕಲ್ಲು ಬಂಡಿ ಕಟ್ಟಿ ಕೈಲಾಸಕ ಕಳುಗವರ
ಅವ್ರು, ಎಚ್ಚಳದ ಮಾತಾ ಆಡುತವರಾ.
ಕೇಳಿ ಕೇಳೀ ನಮ್ಮಾ ಸತ್ತುವಂತ ಬಸುರಾಯ್ರಾ
ಈಗ್ಯಾದ್ರೂ ನಮ ಸತ್ಯ ಮೆಚ್ಚುತಯ್ಯಾ
ನಾನೇ ಹೆಚ್ಚು ಅಂತ ಹಿಗ್ಗಿ ಮೆರೆಯಲು ಬೇಡ
ನಿನುಗಿಂತೆಚ್ಚಿನ ಪತ್ರುವಂತ್ರೂ

ನಿನಗಿಂತೆಚ್ಚಿನ ಸತ್ತುವಂತರು ಅವರೆಣ್ಣೇ
ನಾನು ಬಿನ್ನಾಕೆ ಅವ್ರು ಮನಗ ಹೋಗುತಿವನೀ

ಬಿನ್ನ್ಯಾಕೆ ಅವ್ರು ಮನಗ ಹೋಗಿ ಬರುವನುಗಂಟ
ನೀನು ಹಸ್ತು ಹಲ್ಲಸುಲಿದು ಮೀದು ಮಡಿಉಟ್ಟು

ನೀನು ಮಡಿಯಾ ಉಟ್ಟು ಕಲ್ಯಾಣ ಸುಂಗಾರ ಮಾಡಿ
ನಾ ಬರುವೋಗಂಟಾ ಹೆಣ್ಣೇ ತ್ರವಸಿರೂ.

ಅವ್ರು ಮಡದಿ ನೀಲವ್ವ ಬುದ್ಧಿಹೇಳಿ ಬಸುರಾಯ್ರು
ಅವ್ರು ಬಿನ್ನ್ಯಾಕ ಸ್ವಾಮಿ ತೆರುಳವರಾ
ಬಿನ್ನ್ಯಾಕೆ ಬಸುರಾಯ್ರು ಬರುವಾಗ ಅವರಲ್ಲೀ
ಅವ್ರು ಏನೇನು ಗ್ಯಾಪುನೆಯ ಇಡುತವರಾ.

ನನ್ನ ಮಡುದಿ ನೀಲವ್ನ ಮಕ್ಕಳ ಫಲ ತತ್ತೀನಂದೇ
ನಾನು ಯಾವ ರೀತ್ಯಾಗಿ ಫಲಕೊಡಬೇಕು ?

ನಾನು ಕೈಯಲ್ಲಿ ತಕ್ಕಂಡೋದ್ರ ಕಳ್ಳ ಅನ್ನುತಾರಲ್ಲಾ
ನಾನು ಕ್ವಾರಣ್ಯ ಕೇಳಿದುರ ತಿರುಕಲನ್ನುತಾರಾ
ನಾನು ಬಾಯಲ್ಲಿ ತಕ್ಕಂಡ್ರ ಎಂಜುಲಾಗುತದೆ ಶಿವನೇ
ನಾನು ಹ್ಯಾಗೆ ಮಕ್ಕಳ ಫಲವ ತಕ್ಕೊಂಡೋಗಬೇಕು ?

ಅವ್ರು ಕಕ್ಕಯ್ನೋರಾ ಮನುಗೆ ಬಿನ್ನಾಕೋಗಾ ವತ್ತಿನಲ್ಲಿ
ಅವು ಕಟ್ಟೆರ ಸಾಲಿಟ್ಟು ಹೊರಟಾವ್ನೋ
ಹರಳಯ್ನೋರಾ ಮನುಗ ಬಿನ್ನಕ್ಕೋಗಾವತ್ತಿನಲ್ಲಿ
ಆ ನುಚ್ಚೆರ ಸಾಲಿಟ್ಟು ಹೊರುಟಾವ್ನೋ.

ಕೇಳಿ ಕೇಳಿ ನಮ್ಮಾ ಸತ್ತುವಂತ ಎರುಗಳಾ
ಅವ್ರ ಮಿಕ್ಕಿದ ಪರುಸಾದವಾ ತರಾಬೇಕು
ನೀವು ಹರಳಯ್ನೋರ ಮನೆಯಾಗ್ ಆದಂತ ಪರುಸಾದುವ
ನನ್ನ ಸತ್ತುವಂತೆಗ್ ಮಕ್ಕಳ ಫಲವ ಕೊಡಬೇಕು.
ಅವ್ರು ಕಟ್ಟೆರುಗ ನುಚ್ಚೆರುಗ ಬುದ್ದಿ ಹೇಳಿ ಬಸುರಾಯ್ರು
ಅವ್ರು ಬಿನ್ನ್ಯಾಕ ಸ್ವಾಮಿ ಹೊರುಟವರಾ
ಕಟ್ಟೆರುಗ ನುಚ್ಚೆರುಗ ಬುದ್ದಿ ಹೇಳಿ ಬಸುರಾಯ್ರು
ಅವ್ರು ಬಿನ್ನಾಕ್ಹರುಳಯ್ನ ಮನುಗ ಹೊರುಟವರಾ.

ಕಕ್ಕಯ್ಯುರುಳಯ್ನ ಮನ್ಲಿ ಬಿನ್ನಮಾಡಿ ಬಂದವರಾ
ಅವ್ರು ಕಟ್ಟೀರು, ನುಚ್ಚೆರುವ ಕಾದವರಾ
ಕಟ್ಟಿರು ನುಚ್ಚಿರುವ ಕಂಡವ್ರೆ ಬಸುರಾಯ್ರು
ಅವರು ಪಟ್ಟೆವಸ್ತ್ರಾವ ಬಿಚ್ಚಿ ಹಾಸುತವರೇ.

ಚಿಕ್ಕಲ್ಲೂರು ಬೀದೀಲಿ ಮೂಡಾಲಂಕಕ್ಕೆ ಬಂದೂ
ಅವ್ರು ಪಟ್ಟೆವಸ್ತ್ರ ಹಾಸಿ ಕಾದವರಾ
ಬಂದಂತಾ ಎರುಗಳಾ ಕಂಡವರೆ ಬಸುರಾಯ್ರು
ಅವ್ರು ಕರವೆತ್ತಿ ಕೈಯ ಮುಗುದವರಾ.

ಬಂದಂತಾ ಎರುಗಳೂ ಪಟ್ಟೆವಸ್ತ್ರಾಕೆ ಬಂದ್ರೂ
ಅವ್ರು ತಂದಿರುವ ಪರುಸಾದವಾ ಬುಡುತವ
ಬುಟ್ಟಂತ ಪರುಸಾದುವಾ ಎತ್ತಿ ಹೊಸುಗಂಟಲ್ಲಾಕೀ
ಅವ್ರು ಬರುತಾರಾ ಬಸುರಾಯ್ರು ಗುರುಮಠುಕಾ.

ಕೇಳು ಕೇಳು ನಮ್ಮ ಸತ್ತುವಂತ ನೀಲೆಣ್ಣೆ
ನಾನು ಮಕ್ಕಳ ಫಲವಾ ತಕ್ಕಂಡು ಬಂದಿವನಿ
ನಾನು ಮಕ್ಕಳ ಫಲವಾ ತಕ್ಕಂಡು ಬಂದಿವನಿ
ನಾವು ಕಪ್ಪಡಿ ಕಾವೇರುಗಾ ಹೋಗಬೇಕೂ.

ಕಪ್ಪಡಿಯ ಹೊಳಿಯಲ್ಲಿ ಕಾವೇರಿ ತದಿಯಲ್ಲಿ
ನಾವು ತಣ್ಣೀರು ಸ್ತಾನಾ ಮಾಡಾಬೇಕು
ತಣ್ಣೀರು ಸ್ತಾನ ಮಾಡಿ ಒದ್ದೆ ಬಟ್ಟೆಲ್ಲಿ ಬರಬೇಕು
ನಾನು ತಂದಿರುವ ಪರುಸಾದವ ಊಟ ಮಾಡಬೇಕು.

ನಾನು ತಂದಿರುವ ಪರುಸಾದುವ ಸಲಿಸಿದರ ಎಲ ಹೆಣ್ಣೆ
ನಿನಗೆ ಅಲ್ಲೀ ಮಕ್ಕಳ ಫಲವುಂಟು
ಹಾಗಂದು ಬಸುರಾಯ್ರು ತಂದಿರುವ ಪರುಸಾದುವಾ
ಅವ್ರ ಉರಿಯಾ ಗದ್ದಿಗ್ಗೆ ಸ್ವಾಮಿ ಇರುಸವರಾ.
ಅವ್ರ ಉರಿಯ ಗದ್ದಿಗ್ಗೆ ಸ್ವಾಮಿ ಇರುಸವರೆ ಬಸುರಾಯ್ರು
ಅವ್ರು ಸಾನಾದಕೊಳುಕೆ ಹೊರುಟವರಾ
ಅವ್ರು ತಾಳಾ ತಂಬೂರಿ ಕೈಪೆಂಜು ಸಯವಾಗೀ
ಅವ್ರು ಸ್ತಾನಾಕ ಸ್ವಾಮಿ ತೆರುಳವರಾ.

ಅವರು ಸತ್ತುವಂತು ಬಸುರಾಯ್ರು ಸ್ತಾನಾಕೋಯ್ತವರೆಂದೂ
ಈ ಮಡುವಾಳು ಸೆಟ್ಯೋರ ಮಡಿಬಂದೋ
ಸತ್ತುವಂತು ಬಸುರಾಯ್ರು ಸ್ತಾನಾಕೋಯ್ತವರಂದೂ
ಈ ವಾಲಾರೊನ್ನಯ್ನಾ ವಾದ್ಯ ಬಂದೋ

ಎಂದೂ ಇಲ್ಲದ ಬಸುರಾಯ್ರು ಇಂದ ಸ್ತಾನಾಕೊಯ್ತಾರೆಂದೂ
ಅವ್ರ ಹವಳಾದ ಗುಡಾರ ಅರಳ್ಯಾವ
ಸತ್ತುವಂತೆ ನೀಲಮ್ಮ ಸ್ತಾನಾಕ್ಕೋಯ್ತವರಂದೂ
ಅಲ್ಲಿ ಏನೇನು ನೆರುಳಾಗಿ ಹೊರುಟಾವೂ ?

ಸತ್ತುವಂತೆ ನೀಲಮ್ಮ ಸ್ತಾನಕ್ಕೋಗೋ ಹೊತ್ತಿನಲ್ಲಿ
ಅಲ್ಲಿ ಜಾಜಿವನುಗಳು ನೆರುಳಾದೋ
ಸತ್ತುವಂತು ಬಸುರಾಯ್ರು ಸ್ತಾನಕ್ಕೋಗಾ ಹೊತ್ತಿನಲ್ಲಿ
ಅಲ್ಲಿ ಸಂಪೀಗೆ ವನುಗಳು ನೆರುಳಾದೋ.

ಎಂದೂ ಇಲ್ಲದ ನೀಲಮ್ಮ ಇಂದು ಸ್ತಾನಕೆ ಬತ್ತವರೆಂದೂ
ಆ ಹೊನ್ನುತ್ತದಲ್ಲಿರುವೋ ಎಳುನಾಗೂ
ಹೊನ್ನುತ್ತದಲ್ಲಿರುವ ಎಳುನಾಗು ಸೆಡೆಯೆತ್ತಿನೋಡೀ
ನಮ್ಮ ಸತ್ತುವಂತರು ಸ್ತಾನಕ್ಕೆ ಬತ್ತವರೆ.

ಈ ಸತ್ತುವಂತರು ಸ್ತಾನಕ್ಕೆ ಬತ್ತವರೆ ಶಿವಗುರುವೆ
ಅವ್ರು ಕಲ್ಲುನು ಮ್ಯಾಲೆ ಸೀರ್‍ಯಾ ಬಗೆಯಬಾರದೂ
ಅವ್ರು ಕಲ್ಲುನು ಮ್ಯಾಲೆ ಸೀರ್‍ಯಾ ಒಗುದಾರ ನೀಲಮ್ಮ
ನಮ್ಮ ಎಲ್ಲಾ ನರ್ಹುಳುಗಳುಗ ಪಾಪವುಂಟೂ.

ನಮ್ಮ ಎಲ್ಲಾ ನರಹುಳುಗಳಿಗೆ ಪಾಪವುಂಟುಲನ್ನುತೇಳಿ
ಆ ಹೊನ್ನುತ್ತದಲ್ಲಿರುವೋ ಎಳುನಾಗೂ
ಅವ್ರ ಸ್ತಾನಾದ ಹೊಳೆಗೋಗೀ ಕಲ್ಲುನೆಲ್ಲ ಮಾಯಮಾಡೀ
ಏಳೂ ಸುತ್ತಾ ಸುತ್ತೀ ಏಳೂ ತಲೆಯೆತ್ತೀ
ಅವ್ರು ಏಳು ಸುತ್ತಾ ಸುತ್ತೀ ಏಳೂ ತಲೆ ಸೆಡೆಯೆತ್ತೀ
ಅವುರ್ಗೆ ಒಗಿಯಾ ಕಲ್ಲೂನಾಗೀ ಒರುಗವನಾ.
ಅವ್ರು ಸತ್ತುವಂತು ನೀಲಮ್ಮ ಸ್ತಾನದ ಕೊಳದಲ್ಲಿ ಇಳದೂ
ಅವ್ರ ಸೆಡೆಯಾ ಮ್ಯಾಲಾ ಸೀರ್‍ಯಾ ಒಗುದವರಾ
ಅವ್ರು ಸೆಡೆಯಾ ಮೇಲೆ ಮಡಿಯಾ ಮಾಡವರ ನೀಲಮ್ಮ
ಅವ್ರ ನಾದೂನಿ ನಾಗಮ್ಮ ಬೆದರಿದ್ರೂ.

ಯಾವ್ಹೂ ಕಾಲಾದಿಂದಾ ಅತ್ತಿಗು ಸ್ತಾನಕೋಗಲಿಲ್ಲಾ
ಇದೇನು ಕಾಣ್ಯಲ್ಲಾ ಹೊಸುಮಾತೂ ?

ನಮ್ಮ ಅಣ್ಣಯ್ನ ಗುರುಮಠುಕ ಹೋಗುಬೇಕು ಅನ್ನುತೇಳಿ
ಅವ್ರು ಏಕ್ಕನೆದ್ದು ತಾಯಿ ಸಾಗಿ ಬರುತವರಾ.

ಸತ್ತುವಂತು ನಾಗಮ್ಮ ಬಂದವಳ ಗುರುಮಠುಕ
ಅವ್ರ ಕಲ್ಲಾಣನೆಲ್ಲಾ ರಜ ಹೊಡದೂ.
ಅವ್ರ ಕಲ್ಲಾಣನೆಲ್ಲಾ ರಜ ಹೊಡದು ಸುಂಗರಿಸೀ
ಅವ್ರು ಮುತ್ತೀನ ರಂಗೋಲ್ಯಾ ಅರಳ್ಯವರಾ.

ಅವ್ಹು ಗುರುಮಠಾನೆಲ್ಲಾ ಸುಂಗಾರ ಮಾಡ್ಯವಳಾ
ಅವ್ರ ಅಣ್ಣಯ್ನ ಉರಿಯಾ ಗದ್ದಿಗ್ಗ ತೆರಳವರಾ.
ಅವ್ರ ಉರಿಯಾಗದ್ದಿಗು ತಾವ್ಹಾ ಬಂದವಳ ನಾಗಮ್ಮ
ಅವ್ರ ಗುರುಮಠಾವೆಲ್ಲ ಗಮಗರಿದಾದೋ.

ಅವ್ರು ಹರುಳಯ್ನವರಾ ಮನೆಯಾ ತಂದಂತಾ ಪರುಸಾದವಾ
ಅವ್ರ ಅರುಮನಾ ಎಲ್ಲಾ ಗಮಗರುದೋ.

ಆ ಕಾಲದಿಂದಾ ಇಲ್ಲೀ ಏನೂ ಗವಲಿತ್ತಿಲ್ಲಾ
ಇದೇನು ಕಾಣ್ಯಾಲ್ಲಾ ಹೊಸುಗಮನಾ ?
ಅವ್ರಣ್ಣಯ್ ತಂದಿರುವಾ ಅನ್ನ ಬಿಚ್ಚಿನೋಡುತವಳ
ಅವುಳ್ಗ ಅಲ್ಲೀ ತಾಯ್ಗ ಗ್ಯಾನವಾಯ್ತೂ.

ಇವ್ರು ಯಾವ್ಹೂ ಕಾಲಾದಿಂದಾ ಬಿನ್ಯಾಕೋಗೂನಿಲ್ಲಾ
ಇದು ನಮ್ಮಣ್ಣಯ್ ತಂದಿರುವೋ ಅನ್ನ ನನಗೇ ಕಾಣೇ
ನಂಗೇ ಅಣ್ಣಯ್ ತಂದಿರುವೋ ಅನ್ನ ಅನ್ನುತೇಳುತವಳಾ
ಅವ್ರ ಲಿಂಗಕ್ಕು ಶಿವುಪೂಜ್ಯಾ ಮಾಡುತವಳಾ.
ಲಿಂಗಕ್ಕ ಶಿವಪೂಜ್ಯಾ ಮಾಡವಳೆ ನಾಗಮ್ಮ
ಅವ್ರು ಎಳುಬಾಳೆ ಎಲಿಯ ತಗುದವಳಾ
ಎಳುಬಾಳೆ ಎಲಿ ಹಾಸೀ ತಂದಿರುವ ಹೊಸುಗಂಟಬಿಚ್ಚಿ
ಅವ್ರು ಹರುಳಯ್ನವರ ಮನೆಯ ಅನ್ನ ಸಲುಸುತವಳಾ.

ಹರಳಯ್ನವರಾ ಮನೆಯಾಲಾದಂತಾ ಪರುಸಾದುವಾ
ಅವ ಸತ್ತುವಂತು ನಾಗಮ್ಮ ಊಟಮಾಡುತವರಾ

ಸತ್ತುವಂತು ನಾಗಮ್ಮ ಊಟಮಾಡಿ ಮಠದಲ್ಲೀ
ಅವ್ರು ಮೋಕ್ಷವಾಗಿ ತಾಯಿ ಒರುಗವಳಾ.

ತನ್ನಾ ಮೋಕ್ಷಾವಾ ತಾನೇ ತಾಳಿಕಂಡವಳಾ
ತಾನೆದ್ದು ಸ್ವಾಕಾವ ಮಾಡುತವಳಾ
ನಮ್ಮ ಅತ್ತೀಗು ನೀಲವ್ನ ಅಂತಾ ಮಕ್ಕಳ ಫಲತೆದಿದ್ರೂ
ನಾನು ತಿಳಿಯಾನಿಲ್ಲಾ ಶಿವನೇ ಸಲುಸಿದೀ.

ನಮ್ಮ ಅಣ್ಣಯ್ಯ ಓಂದಾರ ಅನ್ನುತವರ ಆಡುತವರ
ಅವ್ರು ಬರುವ್ಹೋಗಂಟಾ ನಾನೂ ಬಿಟ್ಹೋಗಬೇಕೂ
ಹಾಗೆಂದು ನಾಗಮ್ಮ ಎದ್ದೂ ದುಕ್ಕವ ಮಾಡೀ
ಅವ್ರ ಗುರುಮಠ ಬಿಟ್ಟೂ ಹೊರಗೋಗುತವಳಾ.

ಅವ್ರ ಗುರುಮಠ ಬಿಟ್ಟೂ ಬಂದವರು ನಾಗಮ್ಮಾ
ಅವ್ನ ಉರಿಯಾಗದ್ದಿಗು ಮೇಲ ಒರುಗವಳಾ
ಅವ್ರಣ್ಣಯ್ಯ ಬಸುವಯ್ಯನವರು ಅತ್ತಿಗು ನೀಲಮ್ಮನವರು
ಅವ್ರು ಒದ್ದೆಬಟ್ಟೆಲ್ಲಿ ತೆರಳವರಾ.

ಅವ್ರು ಒದ್ದೆ ಬಟ್ಟೆಲಿ ತೆರಳವರೆ ನೀಲಮ್ಮ
ಅವ್ರು ತಂದಿರುವ ಪರುಸಾದುವ ಹುಡುಕುತವರೆ
ಅವ್ರು ತಂದಿರುವ ಪರುಸಾದುವ ಹುಡುಕವರೆ ಬಸುರಾಯ್ರು
ಎಲ್ಲಿ ಮಾಯವಾಯ್ತೂಲಂತ ಕೇಳುತವರಾ.

ಕೇಳು ಕೇಳು ನನ್ನ ಹುಟ್ಟು ಮನುಷಿ ನೀಲೆಣ್ಣೆ
ನಾವು ಸತ್ತೀಕುರು ಕಾಣೆ ಫಲವಿಲ್ಲ
ನಾವು ಸತ್ತೀಕುರು ಹೊಟ್ಟೆಲ್ಲಿ ಫಲವಿಲ್ಲ ಎಲೆಹೆಣ್ಣೆ
ನಾವು ತಂದಿರುವ ಪರುಸಾದುವೇ ಮಾಯವಾಯ್ತು.

ಮಕ್ಕಳಾ ಗ್ನಾನಾ ಮರಿಯಲೆ ಎಲೆ ಹೆಣ್ಣೆ
ನಮ್ಗೆ ಸತ್ತೀಕರ ಹೊಟ್ಟೆಲ್ಲಿ ಶಿಶುವಿಲ್ಲ
ಹಾಗಂದು ಬಸುರಾಯ್ರು ಬುದ್ಧಿಹೇಳಿ ನೀಲವ್ನ
ಅವ್ರು ಏನಂತ ಸ್ವಾಮಿ ಕೇಳುತವರ

ಮಕ್ಕಳಿಂದಾ ಹಾಡಿ ಮೂರು ತಿಂಗಳಾಗೋಯ್ತು
ನಾನು ಲೋಕ ಚಂಚಾರಿ ಹೋಯ್ತಿವನಿ

ಲೋಕ ಚಂಚಾರಿ ಹೋಯ್ತಿವನಿ ಎಲ ಹೆಣ್ಣೆ
ನಾನು ಬರುವದಿಂದಿಗ ಮೂರು ತಿಂಗಾ.

ಹಾಗಂದು ಬಸುರಾಯ್ರು ಬುದ್ಧಿ ಹೇಳಿ ನೀಲವ್ಗ
ಅವ್ರು ಲೋಕ ಚಂಚಾರಿ ಹೊರುಟವರಾ.

ಲೋಕ ಚಂಚಾರಿ ಹೋಗಿ ಮೂರು ತಿಂಗಾ ತುಂಬೇ ಹೋಯ್ತು
ಅವ್ರು ಗುರುಮಠುಕ ಸ್ವಾಮಿ ತೆರುಳವರ
ಅವ್ರ ಗುರುಮಠುಕ ಬಸುರಾಯ್ರು ಬಂದೂ ಕೂತುಗಂಡವರ
ಅವ್ರ ಕಲ್ಯಾಣವೆಲ್ಲ ನೋಡುತವರ.

ಕೇಳು ಕೇಳು ನನ್ನ ಸತ್ತುವಂತೆ ಎಲೆ ಹೆಣ್ಣೆ
ನಮ್ಮ ಗುರುಮಠಕೆ ಬಂದಿದ್ದವರ ಗುರುತೇಳು ?
ನಮ್ಮ ಗುರುಮಠಾನೆಲ್ಲಾ ಸುಂಗಾರ ಮಾಡಿದವರ್‍ಯಾರ ?
(ಈ) ರಂಗೋಲಿ ಅರಳಿದ್ದೋ ಅವ್ರ ಗುರುತೇಳೂ.

ಅನ್ನುಬೇಡಿ ಬಸುರಾಯರ ಆಡುಬೇಡಿ ಬಸುರಾಯರ
ನನ್ನ ನಾದೂನಿ ನಾಗವ್ವ ಬಂದೋಗವಳಾ
ನನ್ನ ನಾದೂನಿ ನಾಗವ್ವಳಂದ್ರ ಎಚ್ಚಾಳ ನಿನಗೈತಾ
ಅವ್ನ ಮುತ್ತಿನು ಮುಂದಲೆ ಹಿಡಿದು ಇಲ್ಲಿಗೆ ಎಳತತ್ತಾ.

ನನ್ನ ಮಡುದಿಗಾ ಅಂತಾ ಮಕ್ಕಳಾಫಲ ತಂದಿದ್ದಿ
ಅವ ತಿಳಿಯದೇ ಮುಂಡೆ ಊಟ ಮಾಡಬಹುದಾ ?
ಅನ್ನುಬೇಡಿ ಬಸುರಾಯ್ರಾ ಆಡುಬೇಡಿ ಬಸುರಾಯ್ರಾ
ಯ್ಯಾರ್‍ದ್ಹೊಟ್ಟಿಲಾದರೇನ ಫಲವಾಗುಲೀ.
ನನ್ನ ಸತ್ತುವಂತು ನಾಗವ್ವ ಜರಿಯಬ್ಯಾಡಿ ಬಸುರಾಯ್ರಾ
ನನ್ನ ನಾದೂನಿ ನಾಗವ್ಗೇ ಫಲಕೊಡಲೀ.

ನೀನೇನೇ ಹೇಳಿದುರೂ ಕೇಳಲಾರಿ ನಾಗಮ್ಮನಾ
ಒಂದರುಗಳುಗೆ ಬಿಡದೇ ಇಲ್ಲಿಗೆ ಎಳತತ್ತಾ.
ಹಾಗಂದಾ ಮಾತಾ ಕೇಳವರೆ ನೀಲಮ್ಮಾ
ಅವ್ನ ನಾದುನಿ ನಾಗವ್ವ ತಾವ್ಕ ತೆರುಳವರಾ.

ಕೇಳು ಕೇಳು ನಾನು ಏನಂತ ಏಳುಸಲಿ ?
ಇವ ನಿದ್ರಾದಲ್ಲಿ ತಾಯಿ ಒರಗವಳೇ

ಎಂದೂ ಇಲ್ದೆ ಕಲ್ಲಾಣದಲ್ಲಿ ಇಂದೊಬ್ಬ ಮಗನಾದಂತಾ
ಅವ್ರ ಅತ್ತೇ ನೀಲವ್ವ ಎಚ್ಚಾಳ.

ಅವ್ರತ್ತೇ ನೀಲವ್ವ ಎಚ್ಚಾಳ ಪಡುತವಳ
ಅವ್ವ ಸಂತೋಷದಲ್ಲಿ ತಾಯಿ ಒರಗುತವಳಾ
ನನ್ನ ನಾದೂನಿ ನಾಗವ್ವ ಏಳು ತಿಂಗ ತುಂಬಿಬಂತೂ
ಅವಳ್ಗೆ ಬೇಕಾದ ಬವಕೆಯ ಮಾಡಾಬೇಕೂ.

ನಾರೂ ಈರದ ಕಾಯಿ ನಾರು ತೆಗದೀಡಾಡೀ
ಆ ತುಪ್ಪಾದಲ್ಲಿ ತಾಯೀ ಹದಗೂಡೀ
ಆ ತುಪ್ಪದಲ್ಲಿ ನೀಲಮ್ಮ ಹದಗೂಡಿದು ತಾಳದವಾ
ನಮ್ಮ ನಾದೂನಿ ನಾಗವ್ವ ಬವಕೆಯಾ.

ಪುಟ್ಟಾಗುಂಬಳ ಕಾಯೀ ತೊಟ್ಟು ತೆಗದೀಡಾಡೀ
ಒಳ್ಳೆಣ್ಣೆಯಲ್ಲಿ ಹದಗೂಡೀ
ಬೆಳ್ಳಣ್ಣೆಯಲ್ಲಿ ಹದಗೂಡಿದು ತಾಳದವಾ
ನನ್ನ ನಾದುನಿ ನಾಗವ್ಗೆ ಬವಕೇಯಾ.

ಕೇಳಿ ಕೇಳಿ ನಮ್ಮ ಸತ್ತುವಂತ ಬಸುರಾಯ್ರ
ನನ್ನ ನಾದೂನಿ ನಾಗವ್ವ ಬೆಮ್ನುನುಸಿ
ಅವಳ್ಗೆ ಒಂಬತ್ತು ತಿಂಗಾ ತುಂಬಿಬಂತು ಬಸುರಾಯ್ರಾ
ಅವಳ್ಗೆ ಗರಿಯಾಸೀರೆ ಸ್ವಾಮಿ ಉಡುಸಬೇಕು.

ಏಳು ಜನ ಗೌಡೀರಾ ಕರೆಯಿಸು ಎಲಹೆಣ್ಣೇ
ನಮ್ಮ ಗುರುಮಠನೆಲ್ಲಾ ಸುಂಗುರುಸು
ನಮ್ಮ ಗುರುಮಠನೆಲ್ಲಾ ಸುಂಗಾರ ಮಾಡಬೇಕು
ನಮ್ಮ ಕಲ್ಯಾಣವೆಲ್ಲಾ ರಜ ಹೊಡೆದೂ.
ಏಳು ಜನ ಗೌಡೀರಾ ಕರೆಯಿಸಿ ನೀಲಮ್ಮ
ಅವ ಕಲ್ಯಾಣನೆಲ್ಲಾ ಸುಂಗುರುಸೀ
ಅವುಳ್ಗೆ ತಾನಾ ಮಡಿಯಾ ಮಾಡೀ ಬೇಕಾದ ಒಡವೇಯ ಧರುಸೀ
ಅವರೇಳು ಜನ ಗೌಡೀರ ಕರೆಯಿಸೀ

ಸತ್ತುವಂತು ನಾಗಮ್ಮ ಬೆಮ್ಮನುಸಿ ಎನ್ನುತೇಳಿ
ಐದ್ದನ ಮುತ್ತೈದೇರ ಕರಿದವಳಾ.

ಅವುಳ್ಗೆ ಮಂಡೆ ಮಾಸಿಲ್ಲ ಮೈಯಿನ್ನು ನೆರೆದಿಲ್ಲಾ
ಅವ ಏಳೂ ವರುಸದ ಎಳುಬಾಲೆ
ಅವ ಏಳೂ ವರುಸದ ಎಳುಬಾಲೆ ತಂಗಮ್ಮ
ಅವಳ್ಗೆ ಬೇಕಾದ ಒಡವ್ಯಾ ಧರುಸೆಣ್ಣೆ.

ನನ್ನ ತಂಗಿ ನಾಗಮ್ಮನಾ ಸುಂಗಾರ ಮಾಡಬೇಕು
ನಮ್ಮ ಕಲ್ಯಾಣದಲ್ಲರುಗಳುಗೆ ತಿರುಗಾಡಿಸು
ಅವ ನರ್ಛುಳುನಾ ಸಬುತ ಕೇಳನಿಲ್ಲ ನಾಗಮ್ಮ.
ಹರುಳಯವ್ನರಾ ಮನಿಯಾ ಅನ್ನಕಾ

ಅವರು ಹರುಳಯ್ಯಾನವರ ಮನಿಯಾಗಾದಾಂತ ಪರುಸಾದುಕ
ನಮ್ಮ ತಂಗಿ ನಾಗಮ್ಮ ಬೆಮ್ಮನುಸೀ
ನನ್ನ ತಂಗಿ ನಾಗವ್ವ ಸೀರೆ ಉಡುಸಾದು ಆಯ್ತು
ನಮ್ಮ ಕಲ್ಲಾಣದಲ್ಲಿರುಗಳುಗೆ ತಿರಿಗಾಡಿಸು.

ಅವ್ವ ಅಂದಾಚಂದಾವ ನೋಡೀ ತಿರುಗಾಡೋ ಬಾವವ ನೋಡೀ
ನನ್ನ ತಂಗೀ ನಾಗಮ್ಮನಾ ಚೆಂದ ನೋಡಬೇಕೂ.
ಹಾಗಂದಾ ಮಾತಾ ಕೇಳವರ ನೀಲಮ್ಮ
ಅವ್ರು ಮಾಲಂಗಿ ಮರಳಾ ತರುಸವರಾ.

ಮಾಲಂಗಿ ಮರುಳಾ* ತರುಸವರ ನೀಲಮ್ಮ
ಅವ್ರ ಕಲ್ಯಾಣದಲ್ಲಿ ತಾಯಿ ಚೆಲ್ಲಿಸವರೇ
ಕಲ್ಯಾಣದಲ್ಲಿ ತಾಯಿ ಚೆಲ್ಲಿಸುವರೆ ನೀಲಮ್ಮ
ಅವ್ರ ನಾದೂನಿ ನಾಗವ್ನ ಬಲಗೈಯಾ.

ಅವ್ರ ನಾದೂನಿ ನಾಗವ್ನ ಬಲಗೈಯಾ ಹಿಡಿಕಂಡು
ಅವ್ರ ಕಲ್ಲಾಣನೆಲ್ಲಾ ತಿರುಗಾಡುಸವರೇ
ಅವ್ರ ಕಲ್ಯಾಣದಲ್ಲರುಗಳುಗೆ ತಿರುಗಾಡೋ ಹೊತ್ತೀನಲ್ಲಿ
ಅವ್ರಣ್ಣಯ್ಯ ಬಸುವಯ್ಯನವರು ಏನನ್ನುತವರಾ.

ನನ್ನ ತಂಗೀ ಭಾವ ನೋಡೋ ಅವ್ವ ತೋಳಿನ ಚಂದವ ನೋಡೋ
ನನ್ನ ತಂಗೀ ನಾಗಮ್ನ ಕಣ್ಣಿನ ಭಾವ ನೋಡೋ

---

* ಮಾಲಂಗಿಯ ಕಾವೇರಿ ದಡದ ಮರಳು ಹೆಚ್ಚು ಸಣ್ಣಗೆ, ನುಣುಪಾಗಿದ್ದು ಕಾಲಿಗೆ ಒತ್ತುವುದಿಲ್ಲ. ಬೆಳ್ಳಗಿದ್ದು ನೋಡಲೂ ಚಂದ.

ಅವ್ನ ಕಣ್ಣೀನ ಭಾವ ನೋಡೋ ಅವ್ನ ಕಾಲೀನ ಚಂದವ ನೋಡೋ
ನಿಮ್ಮ ಕಲ್ಯಾಣದಲ್ಲಿ ಇಂತಾ ಮಕ್ಕಳುಂಟೇ ?

ಅಯ್ಯಾ ಇಂಬೀಯ ಹೂನಂಗಾ ತುಂಬಿದಾ ಬೆಮ್ಮನುಸೀ
ನೀವು ಅನ್ಯಾಯಕಾರು ಬಸುರಾಯ್ರಾ ಜರುದಾರ್‍ಯಾ
ಅವ್ರು ಗಂಡಾ-ಹೆಂಡಾರು ಮಾತಾಡೋ ಮಾತುಕೇಳೀ
ಆ ಕೊಂಡುಕಾರು ಬಿಜ್ಜಳ ನೋಡುತವನಾ.

ಕಿಂಡೀಯ ಗೂಡುಗಾಣೇ ಕಂಡವನೆ ನಾಗಮ್ಮನಾ
ಅವ ತೊಡಿಯ ಕುಟ್ಟೀ ಕಾಕಾಹೊಡೆಯುತಾನಾ
ನಾನು ಭೂಮಿಗೆ ಹಿರಿಯಾಂವಾ ಭೂಲೋಕ್ಕೆ ದೊಡ್ಡಾಂವಾ
ನಾನು ಸತ್ತುವಂತಾಲಂತಾ ಹಿಗ್ಗೀ ಮೆರೆಯುತಿದ್ದಾ.

ನಾನು ಸತ್ತುವಂತಾಲಂತ ಹಿಗ್ಗೀ ಮೆರೆಯುತಿದ್ದಾ
ಅವಾ ಬಂದಾ ಪುಂಡುಗಾರರ ತಲೆಹಿಡದೂ
ಅವಾ ಬಂದಾ ಪುಂಡುಗಾರರ ತಂಗೀಗ ತಲೆಹಿಡದೂ
ಈ ಕಲ್ಯಾಣದಲ್ಲೀ ಅವನ ತಂಗೀ ಕಳ್ಳುಬಸುರೀ

ನೂರೊಂದ್ಹಳ್ಳೀ ನ್ಯಾಯ ಸೇರಬೇಕು ಕುಲದವರಾ
ಅವ್ನ ತಂಗೀ ನ್ಯಾಯಕ್ಕೆ ಕರೀಬೇಕು.

ಚಿಕ್ಕಲ್ಲೂರು ಬೀದೀಲ್ಲಿ ಮೂಡಾಲಂಕಾದಲ್ಲಿ
ಅವ್ನ ಕರತಂದು ನ್ಯಾಯಕ್ಕ ನಿಲುಸಬೇಕೂ
ಅವ ಕೊಂಡುಕಾರ ಮಂಚಣ್ಣ ಕುಲಕು ಬಿಜ್ಜಳದೊರಿಯೇ
ಅವ ಊರೂರಿಗೂ ಡಮ್ಮು ಹೊಡಿಯುತಾನ.
ಊರೂರಿಗೂ ಎಲ್ಲಾ ಅವ್ನು ಕಾಗದವ ಕಳುಗುತಾನೇ
ಈ ಸ್ವಾಮಾರು ದಿನ ನ್ಯಾಯ ಭರ್ತಿ ಮಾಡುತವನಾ.
ಚಿಕ್ಕಲ್ಲೂರು ಬೀದ್ಯಲ್ಲಿ ಮಂದಾದ ಕಟ್ಟೇಯ ಒಳಗಾ
ನೂರೊಂದ್ಹಳ್ಳೀ ನ್ಯಾಯ ಸೇರುಸವನಾ
ನೂರೊಂದ್ಹಳ್ಳೀ ನ್ಯಾಯಾ ಸೇರುಸೀ ಬಿಜ್ಜಳ ದೊರಿಯೇ
ಅವ ಕುಲದಲ್ಲೇನಂತಾ ಕೇಳುತವನಾ ?

ಕೇಳ್ರಯ್ಯಾ ಶರುಣಾರಾ ಕೇಳ್ರಯ್ಯಾ ಕುಲದವರಾ
ಅವ್ನುಯಾವ ಸತ್ಯ ಹೇಳುದ್ರೂ ನೀವು ಕೇಳಾಬೇಡೀ.

ಅವ್ನ ಯಾವ ಸತ್ಯಹೇಳಿದ್ರೂನೂ ಕೇಳಬೇಡಿ ಕೇಳಿರಯ್ಯಾ
ಅವ್ನ ತಂಗಿ ಬಂದಲ್ದೆ ನ್ಯಾಯಾ ತೀರೋದಿಲ್ಲಾ.

ಕುಲದ ಮಧ್ಯದಲ್ಲಿ ನಿಂತವನೆ ಬಿಜ್ಜಳ
ಬಸವರಾಯ್ರುಗೆ ಕಾಗದ ಬರುದವನೇ
ಬಸವ ರಾಯುರುಗೆ ಕಾಗದ ಕಳುಗವನಾ
ಅವರು ನೋಡವರೆ ಬಸುರಾಯ್ರು ಕಾಗುಜವಾ.

ಅವ್ರು ಬಂದಾ ಕಾಗುದುವಾ ನಿಂತೋದಿ ಬಸುರಾಯ್ರೂ
ಅವ್ರುಗ್ಗೆ ಕುಂದ್ದೋಯ್ತೋ ಸ್ವಾಮಿ ಕಲಿಮುಕ.
ನಾನು ಎಷ್ಟೇ ಸತ್ತೀಕುನಾದ್ರಾ ಫಲವೇನು ಶಿವಗುರುವೇ
ನಾನು ಹ್ಯಾಗೋಗಿ ಕುಲುಕ ನಿಲ್ಲಬೇಕೂ ?

ಇವ್ರೊಬ್ಬ ತಂಗಿ ಹುಟ್ಟುಲಾಗಿ ಹೆಣ್ಣುಪ್ರಾಣಿ
(ನಾ) ಸತ್ತುವಂತ ನಾನು ಕುಲಕೆ ಹೋಗಬೇಕೂ
ಬಸವರಾಯ್ರ ಮಾತ ಹಸಿಯವ್ರು ನೀಲಮ್ಮ ಕೇಳಿ
ನೀವು ಅಂಜುಬ್ಯಾಡಿ ಸ್ವಾಮೀ ಕುಲದಲ್ಲೀ.

ಅಂಜುಬ್ಯಾಡಿ ಬಸುರಾಯ್ರಾ ಹೆದರಬ್ಯಾಡಿ ಕುಲದಲ್ಲೀ
ನೀನು ಸತ್ಯಾವ ಬುಡುಬ್ಯಾಡಿ ಸುಳ್ಳಾಡುಬ್ಯಾಡಿ
ಹರಳಯ್ನೋರ ಮನಿಯಾಲಾದಂತಾ ಪರುಸಾದುವಾ
ನನ್ನ ಮಡುದೀಗೆ ಮಕ್ಕಳ ಫಲವ ತಂದಿದ್ದೀ.

ನನ್ನ ಮಡುದೀಗೆ ಮಕ್ಕಳ ಫಲವ ತಂದಿದ್ದೀ ಕುಲದವರಾ
ತಿಳಿಯಾನಿಲ್ಲ ನನು ತಂಗಿ ಊಟ ಮಾಡೀ
ಅವ ತಿಳಿಯಾನಿಲ್ಲ ನನು ತಂಗಿ ಊಟ ಮಾಡಿ ಕುಲದವರಾ
ಅವ ಅನ್ನಕೆ ಸತ್ಯವಾಗಲೂ ಬೆಮ್ಮನಸಿ ಅನ್ನಿ.
ಅನ್ನಕೆ ಸತ್ಯವಾಗಲೂ ಬೆಮ್ಮನುಸಿ ಅನ್ನಿರಯ್ಯಾ
ನಿಮ್ಮ ಮಾತನ್ನು ಒಪ್ಪುದೇರೇ ನನ್ನ ಬರಮಾಡಿ
ನಿಮ್ಮ ಮಾತನ್ನು ಒಪ್ಪುದೇರಾ ಬರುಮಾಡಿ ಬಸುರಾಯ್ರಾ
ನನ್ನ ನಾದೂನಿ ನಾಗವ್ವಾ ನಾ ಗೆಲ್ಲುತೀನೀ.

ಅವ್ರು ನೀಲಮ್ಮಾಡಿದು ಮಾತಾ ಕೇಳವರೆ ಬಸುರಾಯ್ರು
ಅವರು ಸ್ತಾನಾ ಮಡಿಯಾ ಸ್ವಾಮೀ ಮಾಡುತವರಾ

ಅವರು ಸ್ತಾನಾ ಮಡಿಯಾಮಾಡೀ ಸೂಟು ಪೇಟವ ಧರಿಸಿ
ಅವರು ಸತ್ಯವಂತರು ನ್ಯಾಯಕ್ಕ ತೆರುಳವರಾ.

ಸತ್ಯವಂತು ಬಸುರಾಯ್ರು ಸತ್ಯಕ್ಕೋಗಾ ವತ್ತಿನಲ್ಲೀ
(ಈ) ಮಡುವಾಳು ಸಟ್ಯೋರ ಮಡಿ ಬಂದೋ.
ಆ ಸತ್ಯವಂತ ಬಸುರಾಯ್ರು ಸತ್ಯಕ್ಕೋಗಾ ವತ್ತಿನಲ್ಲೀ
ಈ ವಾಲಾರ್ದ್ಹೊನ್ನಯ್ಯಾ ವಾದ್ಯ ಬಂದೋ.

ಎಂದೂ ಇಲ್ಲದ ಬಸುರಾಯ್ರು ಸತ್ಯಕ್ಕೋಯ್ತವರಂದೂ
ಅಲ್ಲಿ ಹವಳಾದ ಗುಡಾರ ಅರಳ್ಯಾವಾ.
ಅವ್ರು ಸತ್ಯವಂತ ಬಸುರಾಯ್ರು ಸತ್ಯಕ್ಕೋಗಾ ವತ್ತಿನಲ್ಲೀ
ಅವು ಜಾಜೀ ಮಲ್ಲಿಗೆ ಗಿಡ ನೆರಳಾದೋ.

ಎಂದೂ ಇಲ್ಲದ ಬಸುರಾಯ್ರು ಸತ್ಯಕ್ಕೋಯ್ತವರಂದೂ
ಅಲ್ಲಿ ಹವಳಾದ ಗುಡಾರ ಅರಳ್ಯಾವಾ.
ಅವ್ರು ಸತ್ಯವಂತ ಬಸುರಾಯ್ರು ಸತ್ಯಕ್ಕೋಗಾ ವತ್ತಿನಲ್ಲೀ
ಅವ್ರು ಜಾಜೀ ಮಲ್ಲಿಗೆ ಗಿಡ ನೆರಳಾದೋ.

ಎಂದೂ ಇಲ್ಲದ ಬಸುರಾಯ್ರು ಸತ್ಯಕ್ಕೋಯ್ತವರಂದೂ
ಅಲ್ಲಿ ಮುತ್ತಿನ ಗುಡಾರ ಅರಳ್ಯಾವಾ.
ಸತ್ಯವಂತರು ಬರುವಾಗ ಕುಲದಲ್ಲಿ ಬಿಜ್ಜಳ ನೋಡಿ
ಅವ ಮೊರ ಮೊರದೋಡಾಡುತವನಾ ಕುಲದಲ್ಲೀ.
ಕೇಳ್ಯಯ್ಯಾ ಶರುಣರಾ ಕೇಳ್ಯಯ್ಯಾ ಕುಲದವರಾ
ಆ ತಲೆಹಿಡುಕಾ ಬರುವಾ ಬೆಡುಗಾ ನೋಡೀ
ಆ ತಲೆಹಿಡುಕ ಬರುವಾ ಬೆಡುಗ ನೋಡಿ ಕುಲದವರಾ
ನೀವ್ಯಾವ ಸತ್ಯ ಹೇಳುದ್ರೂ ಒಪ್ಪಬ್ಯಾಡಿ.

ಅವನ್ಯಾವ ಸತ್ಯ ಹೇಳುದ್ರೂ ಒಪ್ಪಬ್ಯಾಡಿ ಕುಲದವರಾ
ಅವನ ತಂಗಿ ಮುಂದಲೆ ಹಿಡದು ಎಳತರಿಸಿವಿನೀ
ಸತ್ತುವಂತು ಬಸುರಾಯ್ರು ಸತ್ಯಾದಲ್ಲಿ ಬಂದು ನಿಂತೂ
ಅವ್ರು ಯಾರ್‍ಯಾರು ಶರುಣಾರಾ ನೆನಿದವರಾ.

ವಾಲಾದ್ಹೊನ್ನಯ್ಯ ಶರುಣಾ ಮಾದಾರಿ ಚನ್ನಯ್ಯ ಶರುಣಾ
(ಈ) ಮಡುವಾಳು ಮಾಚಯ್ಯಾ ಘನ ಶರುಣಾ

ಕುರುಬಾರ ಬೀರಯ್ಯ ಶರುಣ ಕುಂಬಾರ ಗುಂಡಯ್ಯ ಶರುಣಾ
(ಈ) ಒಕ್ಕಲುಗೇರಿಯ ಮುದ್ದೇಗೌಡ್ರೂ

ಒಕ್ಕಲುಗೇರಿಯ ಮುದ್ದೇ ಗೌಡ್ರು ನೀವು ಶರುಣಾ
ನೀವು ಯಾರ್‍ಯಾರೂ ನನು ತಂಗೀಗೆ ಹೊಣೆಯಾಗೀ
ನೀವು ಯಾರ್‍ಯಾರೂ ತಂಗೀಗೆ ಹೊಣೆಯಾಗಿ ಕುಲದಲ್ಲೀ
ಅವ್ವ ಹೊಟ್ಟೆಯಲ್ಲಿ ಹುಟ್ಟುತವನೇ ಚಿಕ್ಕ ಅಳಿಯ ಬಸುವಾ.

ಅವ್ವ ಹೊಟ್ಟೀಲಿ ಹುಟ್ಟುತವನೇ ಚಿಕ್ಕಚೆನ್ನುಬಸವರಾಯ್ರು
ನಾ ಹನ್ನೆರಡು ಜಿನದಾ ಮಗನಾ ನಿಮಗೆ ಕೊಡುತೀನಿ.
ಅವಳಾ ಹನ್ನೆರಡು ಜಿನುದಾ ಮಗನಾ ಕೇಳ್ಯಪ್ಪಾ ಶರುಣಾರಾ
ನಂಗೆ ಹೊಣೆಯಾದವರಟ್ಟೀಗ ಅಟ್ಟುತಿವನೀ.

ಬಸವರಾಯರು ಮಾತಾ ಕೇಳಿದರೂ ಮುದ್ದೇಗೌಡ್ರು
ನೀವಂಜುಬ್ಯಾಡಿ ಸ್ವಾಮಿ ಬಸುವಣ್ಣಾ
ಅಂಜುಬ್ಯಾಡಿ ಬಸುವಯ್ಯಾ ಹೆದರುಬ್ಯಾಡಿ ಕುಲದಲ್ಲೀ
ನಿಮ್ಮ ತಂಗೀಯ ನ್ಯಾಯದಲ್ಲೀ ನಾನವನಯ್ಯಾ.

ಹಾಗಂದ ಮಾತಿಗೆ ಧೈರ್ಯವಾಯ್ತು ಬಸುರಾಯ್ರಗ
ಅವ್ರು ಕುಲದಲ್ಲಿ ಸ್ವಾಮಿ ಏನನ್ನುತವರಾ.
ಕೇಳ್ಯಪ್ಪ ಶರುಣರೇ ಕೇಳ್ಯಪ್ಪ ಕುಲದವರಾ
ನನ್ನ ಯಾವ ಕಾರಣಕ್ಕ ಇಲ್ಲಿ ಕರಿದಾರೀ ?
ನೀವು ಯಾವ ಕಾರಣಕಂದ್ರ ನಾವೇನ್ಹೇಳವು ಗುರುವೇ ?
ನಿಮ್ಮ ತಂಗಿ ಕದ್ದವನಾ ನಮಗೇಳೀ
ಅಯ್ಯಾ ನಿಮ್ಮಾಣೆ ನನ್ನಾಣೆ ಶಿವನಾಣೆ ಕುಲದವರಾ
ಅವ ಅನ್ನಕ್ಕೆ ಸತ್ಯವಾಗಲೂ ಬೆಮ್ಮನುಸ್ಯಯ್ಯಾ.

ನನ್ನ ಎಡತೀ ನೀಲವ್ವಗ ಮಕ್ಕಳ ಫಲತಂದಿದ್ದೀ
ಅವ ತಿಳಿಯಾನಿಲ್ಲ ನನ ತಂಗಿ ಊಟಾಮಾಡಿ
ಅವ ತಿಳಿಯಾನಿಲ್ಲ ನನು ತಂಗಿ ಊಟ ಮಾಡೀ ಕುಲದವರಾ
ಅವ ಅನ್ನಕ್ಕೆ ಸತ್ಯವಾಗಲೂ ಬೆಮ್ಮನುಸ್ಯಯ್ಯಾ.

ಬಸುವರಾಯರ ಮಾತಾ ಬಿಜ್ಜಳ ಕೇಳಿಕೊಂಡು
ಅವ ಮೊರ ಮೊರದೋಡಾಡುತವನಾ ಕುಲದಲ್ಲೀ

ಕೇಳ್ಯಪ್ಪಾ ಕುಲದವರಾ ಕೇಳ್ಯಪ್ಪಾ ಶರುಣಾರಾ
ನಮ್ಮ ಹೆಡುತೀರೀಗೂ ಈ ಅನ್ನಾ ಕೊಡುಸಯ್ಯಾ.

ನಮ್ಮ ಹೆಡುತೀರಿಗೂ ಈ ಅನ್ನ ಕೊಡುಸ್ರಯ್ಯ ಕುಲದವರಾ
ಅವ್ರನ್ನಕ್ಕೆ ಬಸುರಾದರೆ ಟೆಸ್ಟು ಮಾಡುತೀವೀ.

ಅವ್ರು ಅಕ್ಕ ನಾಗಮ್ಮ ಕಾಣೋ ಸತ್ವಂತಿ ಕಾಣಯ್ಯಾ
ನಿಮ್ಮ ಹೆಡತೀರು ಅನ್ನಕ್ಕೆ ಬಸುರಿ ಆಗೋದು ನಿಜುವಯ್ಯಾ.
ಅವ ಸತ್ವಂತಿ ಆದಾರಾ ಅವ್ಳ ಸತ್ಯಾವ ನೋಡುತೀನೀ
ನಿನ್ನ ತಂಗಿ ಬಂದಲ್ದೆ ನ್ಯಾಯ ತೀರೋದಿಲ್ಲಾ.

ನನ್ನ ತಂಗೀ ನಾಗವ್ವ ರೂಪಸ್ಥಗಿತ್ತಿ ಕುಲುದವ್ರಾ
ನಿಮ್ಮ ದಮ್ಮಯ್ಯಲನ್ನುತಿವನೀ ಅವ್ಳ ಕರೀಬ್ಯಾಡೀ.
ನೀವು ಏನು ಸತ್ಯ ಹೇಳುದ್ರೂ ಒಪ್ಪೋದಿಲ್ಲ ಕುಲದವರೂ
ನಿನ್ನ ತಂಗಿ ಬಂದ್ಯಲ್ಲಾದೆ ನ್ಯಾಯ ತೀರೋದಿಲ್ಲಾ.

ಆಗ ಕೊಂಡುಕಾರ ಮಂಚಣ್ಣ ಕುಲಕು ಬಿಜ್ಜಳ ದೊರಿಯೇ
ಅವ ಕುಲದಲ್ಲಿ ನಾಗವ್ಗ ಕಾಗುಜು ಕಳುಗವನಾ
ಕುಲದಲ್ಲಿ ನಾಗವ್ಗ ಕಾಗುಜುವ ಕಳುಗವನಾ
ಅವ್ರ ಅತ್ತೀಗು ನೀಲಮ್ಮ ಓದುತವರಾ.

ಅವ ಬಂದಾ ಕಾಗದವಾನಿಂದು ಓದೀ ಅತ್ತೀಗಮ್ಮಾ
ಅವ್ಳ ನಾದುನಿ ನಾಗವ್ಗ ಧೈರ್ಯ ಕೊಡುತವಳಾ.
ನೀವ್ ಅಂಜುಬೇಡಿ ನಾದಾನಿ ಹೆದ್ರುಬೇಡಿ ನಾಗಮ್ಮಾ
ನೀವ್ ಅಂಜಾದೇ ಕುಲಕ ಹೋಗಬೇಕು.

ನಾನು ಏಳು ವರುಷಾದ ಎಳುಬಾಲೆ ಅತ್ತೀಗಮ್ಮಾ
ನಂಗೆ ಭಯವಾಗುತಾದಮ್ಮಾ ಹ್ಯಾಗೆ ಹೋಗಲಮ್ಮಾ ?
ಸತ್ತುವಂತುನಾಗಮ್ಮಾ ಹೆದ್ರುಬ್ಯಾಡ ನಾದಾನಿ
ನಿನ್ಗೆ ಹೇಳಿದ ಸತ್ಯಾವು ನೀರಾಗುಲ್ಯಮ್ಮಾ.

ಸತ್ತುವಂತು ನಾಗಮ್ಮ ಸುಂಗಾರ ಮಾಡಿಕೊಂಡು
ಅವ್ರು ಮಂದಾದ ಕಟ್ಟಿಗೆ ತೆರುಳವರಾ.

ಅವ್ವ ಬರುವಾ ನಾಗಮ್ಮನಾ ನಿಂತು ನೋಡಿ ಬಿಜ್ಜುಳಾ
ಅವ ಕುಲುಕುಲನೆ ಸ್ವಾಮಿ ನಗುತವನೇ.

ಕೇಳ್ಯಪ್ಪ ಶರುಣರಾ ಕೇಳ್ರಯ್ಯಾ ಕುಲುದವರಾ
ಆ ಕಳ್ಳಬಸುರಿ ಬರುವಾ ಬೆಡಗುನೋಡೀ !
ಅವ್ವ ಬೆಡುಗೀಗೆ ತಕ್ಕಾಗಿ ಕೊಡುತೀನಿ ಕೇಳಿರಯ್ಯಾ.
ನೀವ್ಯಾರೂ ಅವ್ವುಗು ಇಲ್ಲಿ ಸಾಯಮಾಡುಬ್ಯಾಡಿ.

ಸತ್ತುವಂತು ನಾಗಮ್ಮ ಕುಲುದಲ್ಲಿ ಬಂದವರಾ
ಅವ್ರು ಏನಂತ ತಾಯೀ ಕೇಳುತವರಾ.
ಕೇಳ್ಯಪ್ಪಾ ಶರುಣರೇ ಕೇಳ್ಯಪ್ಪ ಕುಲುದವರಾ
ನನ್ನ ಯಾವ ಕಾರಣಕೆ ಕರುದೀರೀ ?

ಹರುಳಯ್ಯನವರಾ ಮನೆಯಾಲಾದಂತಾ ಪರುಸಾದಕ
ನಾನಕ್ಕ ನಾಗಮ್ಮ ಬೆಮ್ಮನುಸೇ
ನಾನಕ್ಕ ನಾಗಮ್ಮ ಬೆಮ್ಮನುಷಿ ಕುಲದವರಾ
ಈ ಮಾತನ್ನು ಒಪ್ಪುದೇರಾ ಯಾವ್ದಾನ ಸತ್ಯ ಹೇಳೀ.

ಕೇಳ್ಯಪ್ಪ ಶರುಣರಾ ಕೇಳ್ಯಪ್ಪ ಕುಲದವರಾ
ಅವ ಆಡಿದಾ ಮಾತಾ ನಿಮಗೆ ನ್ಯಾಯವಯ್ಯಾ ?
ಅವ ಸತ್ತವಂತಿ ಅಂದುಳಲ್ಲಾ ಅನ್ನಕ್ಕೆ ಬೆಮ್ಮನುಸ್ಯಂದಾ
ನಾ ಹೇಳಿದು ಸತ್ಯಾ ಇಲ್ಲಿ ಮಾಡಾಬೇಕೂ.
ಅವ ಅನ್ನಕ್ಕೆ ಸತ್ಯವಾಗಾಲೂ ಬೆಮ್ಮನುಸಿ ಆದಾರಾ
ಈ ಒಣಕಲ್ಲಿ ಬಳುನಾರಾ ತೆಗೀಬೇಕು
ಕೇಳ್ಯಪ್ಪ ಶರುಣಾರಾ ಬಿಜ್ಜುಳಾಡಿದ ಮಾತಾ
ಈ ಒಣಮರುದಲ್ಲಿ ನಾರು ಬರುವೋದು ನಿಜವಾ ?

ನಾಗಮ್ಮಾಡಿದು ಮಾತ್ಗ ಉತ್ರ ಏನನ್ನುತವನಾ ?
ಅವ ಗಂಡಾನಿಲ್ಲದು ಬಸುರಿ ನಿಜವಯ್ಯಾ?
ಅವ ಸತ್ಯವಂತಿಯಾದುರಾ ಅನ್ನಕ್ಕೆ ಬೆಮ್ಮನುಸ್ಯಾದ್ರ
ಈ ಒನಕಲ್ಲಿ ಅವ್ವು ಸತ್ಯಾ ತೋರಬೇಕೂ.

ಕೊಂಡುಕಾರು ಮಂಚಣ್ಣ ಕುಲಕು ಬಿಜ್ಜಳು ದೊರಿಯೇ
ಅವ ಒನಕೆ ತಂದು ಕುಲಕಾ ಇಡುತವನಾ

ಸತ್ತುವಂತು ನಾಗಮ್ಮ ಬಂದವಳು ಕುಲವಿನ್ನು
ಅವ ಹತ್ತೂ ಬೆರುಳಲ್ಲೀ ಶರುಣಂದಾ.

ನಮ್ಮ ಅಣ್ಣಯ್ ಬಸುವಯ್ನ ಪಾದಾ ಅತ್ತಿಗು ನೀಲಮ್ನ ಪಾದ
ಈ ಕುಲುದಾ ಶರುಣರು ಪಾದಾ ಗತಿಯೆಂದೂ.
ಈ ಕುಲುದಾ ಶರುಣರು ಪಾದಾ ಗತಿಯೆಂದೂ ನಾಗಮ್ಮಾ
ಅವ ಬರುಬರುನೇ ನಾರಾ ಎಳದಿಟ್ಟಾ.

ಕೇಳ್ಯಪ್ಪಾ ಶರುಣಾರಾ ಕೇಳ್ಯಯ್ಯ ಕುಲದವರಾ
ಈಗ್ಯಾರೂ ನನುಸತ್ಯ ಮೆಚ್ಚೀತಯ್ಯಾ ?

ಇವ ಗಾಡನೊಂದೀಗಾಡೀ ಮೋಡೀ ಸಾಧ್ಯ ಕಲುತವಳಾ
ಇವ ಮಾಟಾ ನಾಗತಿ ನಮಗ ಒಪ್ಪುನಿಲ್ಲಾ
ಅವ ಸತ್ತುವಂತಿಯಾದರೇ ಅನ್ನಕ್ಕೆ ಬೆಮ್ಮನುಸ್ಯಾದ್ರಾ
ಅವ ಚೂಜೀಯ ಹಿಂದುಗಾಣೆ ನುಗ್ಗುಬೇಕೂ.

ಕೇಳ್ಯಪ್ಪಾ ಶರುಣರಾ ಕೇಳ್ಯಪ್ಪಾ ಕುಲದವರಾ
ಈ ಬಿಜ್ಜುಳಾಡಿದ ಮಾತೂ ಒಪ್ಪುತಯ್ಯಾ ?
ಈ ಚೂಜೀಯ ಹಿಂದುಗಾಣೆ ದಾರ ಬರುವೋದೆ ಕಷ್ಟ
ನಾ ಒಂಬತ್ತು ತಿಂಗಳ ಬೆಮ್ಮನುಷೀ.

ನಾನೊಂಬತ್ತು ತಿಂಗಳ ಬೆಮ್ನನುಸಿ ಕುಲದವರಾ
ಈ ಹಿಂದೂಗಾಡೆ ನುಗ್ಗುಬಹುದಾ ?
ಗಂಡನುಳ್ಳವರ ಹೆಣ್ಣೀ ಬೆಮ್ಮನುಸಿ ಅನ್ನಾದೇ ಕಷ್ಟಾ
ನೀ ಅನ್ನಕ್ಕೆ ಬೆಮ್ಮನುಸ್ಯಂತಾ ಅನ್ನಬಹುದಾ ?

ನೀನು ಅನ್ನಕ್ಕೆ ಬೆಮ್ಮನುಸ್ಯಂತಾ ಅಂದಲ್ಯಾ ಕುಲದಲ್ಲೀ
ನಿನ್ನ ಸತ್ಯವಾ ಇಲ್ಲಿ ತೋರುಮತ್ತಾ.
ಕೊಂಡುಕಾರು ಮಂಚಣ್ಣ ಕುಲಕು ಬಿಜ್ಜಳು ದೊರಿಯೇ
ಅವ ಚೂಜೀ ತಂದೂ ಕುಲಕ ನೆಡುತವನಾ.

ಅವ ಅಂಜಿತಾ ಅಳುಕೀತಾ ಬಂದವಳ ನಾಗಮ್ಮ
ಅವ ಹತ್ತೂ ಬೆರುಳಲ್ಲೀ ಶರುಣಂದಾ

ನಾನು ನರ್ಸ್ಬಳುನಾ ಸಬುತಾ ಕಾಣದಿಲ್ಲಾ ಶಿವ ಗುರುವೇ
ನಾನು ಅನ್ನಕ್ಕೆ ಸತ್ಯವಾಗಲೂ ಬೆಮ್ಮನುಸ್ಯಯ್ಯಾ.

ನಾ ಸತ್ಯವಂತಿ ಆದರಾ ಅನ್ನಕ್ಕೆ ಬೆಮ್ಮನುಸ್ಯಾದ್ರಾ
ಈ ಬಗ್ಗಾನ ಬಾಯಿಬಿಟ್ಟು ಗೆಲುಸಮ್ಮಾ
ಅವ ಹತ್ತೂ ಬೆರುಳಲ್ಲೀ ಶರುಣಂದೂ ನಾಗಮ್ಮಾ
ಅವ ಚೂಜೀ ಹಿಂದೂಗಾಣೆ ನುಗ್ಗೀಬಂದಾ.

ಚೂಜೀಯ ಹಿಂದೂಗಾಣೆ ನುಗ್ಗಿಬಂದ್ರೂ ನಾಗಮ್ಮಾ
(ಈ) ಒಪ್ಪೀತಾ ಸ್ವಾಮೀ ಕುಲದವರಾ ?
ಇವ ಗಾಡಾನೊಂದೀಗಾಡಿ ಮೋಡಿಸಾಧ್ಯ ಕಲುತವಳಾ
ಈ ಸತ್ಯಾವೂ ನಮುಗೆ ಒಪ್ಪನಿಲ್ಲಾ.

ಈ ಸತ್ಯಾವು ನಮುಗ ಒಪ್ಪನಿಲ್ಲಾ ಕುಲದವರಾ
ನಾನು ಇನ್ನೊಂದು ಸತ್ಯ ಹೇಳುತಿವನೀ
ಇವ ಸತ್ತುವಂತಿಯಾದರೇ ಅನ್ನಕ್ಕೆ ಬೆಮ್ಮನುಸ್ಯಾದ್ರ
ಅವ ಒಣ ಮರುಳಲ್ಲಿ ಹರುವೆಯಾ ಮಾಡಾಬೇಕು.

ಅವ ಮರುಳೀನ್ಹರುವ್ಯಾ ಮಾಡೀ ನಾಗುರಾ ಸಿಂಬೀಯ ಮಡುಸೀ
ನೀರಿಲ್ದ ಕೆರಿಯಲ್ಲಿ ನೀರಾ ತರಬೇಕು.
ಅವ ನೀರಿಲ್ಲದ ಕೆರಿಯಲ್ಲಿ ನೀರು ತಂದ್ರ ಕುಲಕಿನ್ನು
ಅವ್ಳ ಅನ್ನಕ್ಕೆ ಸತ್ಯವಾಗಲೂ ಬೆಮ್ಮನುಸಿ ಅನುತ್ತೀವೀ

ಬಿಜ್ಜಳಾಡಿದು ಮಾತ ಕೇಳವರೆ ನಾಗಮ್ಮ
ಈ ಬಿಜ್ಜಳುನಾ ಮಾತು ನಿಮಗೊಪ್ಪೀತಯ್ಯಾ ?
ಹಸಿಯಾ ಮಣ್ಣೀನಲ್ಲೀ ಗುಂಬಾ ಮಾಡೋದೆ ಕಷ್ಟಾ
ನಾ ಒಣ ಮರಳಿನಲ್ಲಿ ಗುಂಬ್ಯಾ ಮಾಡಾದು ನಿಜವ್ಯಾ ?
ಅಯ್ಯಾ ನೀರಿರುವಾ ಕೆರಿಯಲ್ಲೀ ನೀರನ್ನು ಮೊಗಿಯೋದೇ ಕಷ್ಟಾ
ನಾನು ನೀರಿಲ್ಲದ ಕೆರಿಯಲ್ಲಿ ನೀರನ್ನು ತರುವೋದು ನಿಜವಾ ?
ಅಯ್ಯಾ ಸತ್ತಹಾವನ್ನು ನೋಡೋದು ಭಯವಾಗುತದೆ ನನಗಯ್ಯಾ
ನಾನು ಜೀವಾದ್ಹಾವಿನು ಸಿಂಬ್ಯಾ ತರುವೋದು ನಿಜವಾ ?

ಅಯ್ಯಾ ಕೇಳ್ರಯ್ಯಾ ಶರುಣಾರಾ ಹೇಳಿದ ಮಾತನ್ನೂ ನೀವು
ನಾನು ಅನ್ನಕ್ಕೆ ಬಸುರಿ ಅಂತಾ ಅವ ಹ್ಯಾಗೆ ಹೇಳಿದಾ ?

ನಾನು ಅನ್ನಕ್ಕೆ ಬಸುರಿ ಅಂತ ಸತ್ಯವ ಮಾತಾಡುದ್ಯಲ್ಲಾ
ಅವಳಾ ಸತ್ಯವಾ ಕುಲದಲ್ಲೀ ನೀವ್ ಕೇಳೀ ಸ್ವಾಮೀ.

ಅಮ್ಮಾ ಯಾವ ಸತ್ಯ ಹೇಳುದ್ರೂ ಕೇಳ್ಹೋದಿಲ್ಲ ನಾಗಮ್ಮ
ಈ ಸತ್ಯಾವ ನೀ ಇಲ್ಲೀ ಮಾಡಾಬೇಕೂ
ಸತ್ತುವಂತೆ ಮುಂದು ಮುಂದೆ ಅವ್ರತ್ತಿಗೆ ಹಿಂದೆ ಹಿಂದಾ
ಅವ್ರು ಮಾಲಂಗಿ ಮರಳೀಗೆ ತೆರುಳವರಾ.

ಅವ್ರು ಮಾಲಂಗಿ ಮರುಳನ್ನು ಗುಡ್ಸಿ ಗುಡ್ಡವ ಮಾಡಿ
ಅವ ಹತ್ತು ಬೆರುಳಲ್ಲಿ ಶರುಣಂದಾ
ಅವ ಸತ್ತುವಂತಿ ಆದರೇ ಅನ್ನಕ್ಕೆ ಬೆಮ್ಮನುಸ್ಯಾದ್ರೆ
ಇಲ್ಲಿ ಮಾಯಾದ್ದರುವೆ ನಮಗೆ ಬರಬೇಕೂ.

ಅವ ಸತ್ಯವಂತಾಡಿದು ಮಾತಾ ಕೇಳಿದರು ಭೂಮುತಾಯಿ
ಅವಳ್ಗೆ ಮಾಯಾದ್ದರುವೇ ಮಾಡೀ ಕಳುಗವರಾ.
ಅವ ಬಂದಂತಾ ಆ ಹರುವ್ಯಾ ಹತ್ತು ಬೆರಳಲ್ಲಿ ಶರುಣಂದು
ಅವ ಬಲಗೈಲಿ ತಾಯಿ ತೆಗೆದವಳಾ.

ಮರುಳೀನ್ದರುವೇ ತೆಗದೂ ಬಲಗೈಲಿ ಹಿಡಕಂಡೂ
ಅವರು ಮಂದದಕಟ್ಟೀಗೆ ತೆರುಳವರಾ
ಅವರ ಮಂದದಕಟ್ಟೆಲ್ಲಿ ಒಂದ್ಹನಿ ನೀರೂವೇ ಇಲ್ಲಾ
ಅವ ಅರುವೆಯಾ ಮಡುಗಿ ಅಳುತವರಾ.
ಅಯ್ಯಾ ಹಕ್ಕಿ ಕುಡಿಯುವಷ್ಟಾದರೂ ನೀರಿಲ್ಲ ಅತ್ತಿಗಮ್ಮ
ನಾ ಒಂದ್ದರುವಿ ನೀರೆಲ್ಲಿಂದ ತುಂಬಲ್ಯಮ್ಮಾ ?
ನನ್ನ ನಾದೂನಿ ನಾಗಮ್ಮ ಅನ್ನಕ್ಕೆ ಬೆಮ್ಮನುಸ್ಯಾದ್ರಾ
ಈ ಮಂದದ ಕಟ್ಟೆ ತುಂಬಿ ತೆರೆ ಒಡೇಲಿ.

ಅವರಿಬ್ಬರಾಡಿದು ಶೋಕ ಗಂಗಮ್ಮನಿಗರುವಾಗೀ
ಆ ಮಂದದ ಕಟ್ಟೀ ತುಂಬೀ ತೆರೆ ಒಡುದಾ
ನೀರಿಲ್ಲುದು ಕೆರಿಯಲ್ಲಿ ನೀರು ತುಂಬಿ ನಾಗಮ್ಮ
ಅವ ಹೊನ್ನುಹುತ್ತದು ತಾವ್ಕ ತೆರುಳವರಾ.

ಅವ ಹೊನ್ನುಹುತ್ತದ ತಾವ್ಕ ತೆರುಳವರಾ ನಾಗಮ್ಮ
ಅವ ಏನನ್ನುತ್ತಾ ತಾಯಿ ಬೇಡುತವಳಾ

ನೀನು ಬಾಯ್ಬಿಟ್ಟು ಮೊರೀಬೇಡ ಸೆಡೆನೆತ್ತಿ ಆಡುಬೇಡ
ನನಗೆ ಭಯವಾಗುತದೆ ಕೇಳು ನಾಗೇಂದ್ರಾ.

ನೀನು ಸಿಂಬೀಯ ಸುತ್ತುವಾಗ ಮೂರು ಸುತ್ತ ಸುತ್ತೀಗಂಡು
ನನ್ನ ನೆತ್ತೀ ಮಸ್ತುಕಕ ತೆರುಳಯ್ಯಾ
ಅವ ಮರಳೀನ್ಹರುವೆಯ ಮಾಡಿ ಹಾವೀನ ಸಿಂಬೀಯ ಮಡುಸಿ
ಅವ ನೀರು ತಂದೂ ತಾಯೀ ಮಡುಗುತವಳಾ.

ಕೇಳ್ಯಪ್ಪ ಶರುಣರೇ ಕೇಳ್ಯಯ್ಯಾ ಕುಲುದವರ
ಈಗ್ಯಾದ್ರೂ ನನು ಸತ್ಯ ಮೆಚ್ಚೀತಯ್ಯಾ ?
ಇವು ಯಾವ ಸತ್ಯಕೂ ಶಿವನೇ ಒಪ್ಪೋದಿಲ್ಲ ಕೇಳಿರಯ್ಯಾ
ನಾನಿನ್ನೊಂದು ಸತ್ಯ ಹೇಳುತಿವನೀ.

ನಾವು ಕುಲುದಾ ಮಧ್ಯದಲ್ಲೀ ಒಲೆಹೂಡಿ ಕುಲುದವರಾ
ನಾವು ತುಪ್ಪನಾ ತರುಸೀ ಕುಪ್ಪುರಿಕ್ಯಾ
ನಾವು ಏಳು ಖಂಡಿಗೊಳ್ಳೆಣ್ಣೆ ಏಳು ಖಂಡಿಗಾ ತುಪ್ಪಾ
ಈ ಕುಲದಲ್ಲಿ ಏಳು ಮಳ್ಳಾ ಮಳ್ಳುಸುತೀವಿ.

ಅವ ಅನ್ನಕ್ಕೆ ಸತ್ಯವಾಗಲೂ ಬೆಮ್ಮನುಸಿ ಆದಾರಾ
ಆ ಕುಪ್ಪುರುಕಾವಾ ಮುಳುಗಿ ಬರಬೇಕೂ.
ಕೊಂಡುಕಾರು ಮಂಚಣ್ಣ ಕುಲಕು ಬಿಜ್ಜಳು ದೊರಿಯೇ
ಆ ಕುಲದಲ್ಲಿ ಒಲೆಹೂಡಿ ಮಡುಗವನಾ.
ಕುಲುದಲ್ಲಿ ಒಲನೂಡಿ ಕುಪ್ಪುರಿಕ ಮಡಗವನಾ
ಆ ಒಳ್ಳೆಣ್ಣೆ ತುಪ್ಪಾ ಮಡುಗವನಾ
ಒಳ್ಳೆಣ್ಣೆ ತುಪ್ಪಾ ಕುಪ್ಪುರಿಕ್ಕ ಉಯ್ಯುತವನಾ
ಅವಾ ಸೀಗೇ ಸಿರಿಗಂಧ ಇಕ್ಕಿ ಮಳ್ಳಸವನಾ.

ನೀವ್ ಅಂಜುಬ್ಯಾಡಿ ತಂಗೀ ಹೆದರುಬೇಡಿ ಕುಲದಲ್ಲೀ
ಅಮ್ಮಾ ನಾನಿದ್ದ ಮ್ಯಾಲೆ ಭಯವ್ಯಾಕಾ ?
ಹಾಗಂದು ನಾಗವ್ವ ಧೈರ್ಯವಾಯ್ತು ಬರುತವಳಾ
ಅವ ಕುಪ್ಪುರುಕಾ ದಂಡ್ಯಾಕ ತೆರುಳವರಾ.

ನಮ್ಮ ಅಣ್ಣಯ್ ಬಸವಯ್ನು ಪಾದಾ ಅತ್ತಿಗು ನೀಲಮ್ಮ ಪಾದಾ
ಈ ಶರುಣಾರಾ ಪಾದಾ ಗತಿಯೆಂದೂ

ಈ ಶರುಣಾರಾ ಪಾದಾ ಗತಿಯೆಂದು ನಾಗಮ್ಮ
ಅವ ಮಂಡೆ ಬಿಚ್ಚಿ ಕುಲುಕ ಬುಡುತವಳ

ಮಂಡೆ ಬಿಟ್ಟ ಕುಲುಕ ಬಿಟ್ಟವಳು ನಾಗಮ್ಮಾ
ಅವ ಏನಂತಾ ತಾಯೀ ಮುಳುಗುತವಳಾ ?
ನಾವು ಇಬ್ಬರು ಒಡಬುಟ್ಟು ಇದ್ದುವಲ್ಲಾ ಅಣ್ಣಯ್ಯಾ
ನೀವು ಒಬ್ಬಾರೆ ಕುಲದಲ್ಲಿ ತಬ್ಬುಲ್ಯಾದ್ರಾ ?

ಮಳ್ಳುವ ಕುಪ್ಪುರಿಕಿಂದ ಬರವೋದು ನಿಜುವಯ್ಯಾ
ನಿನ್ನ ಕುಲುದಲ್ಲೀ ತಂಗ್ಯಾ ಕೊಲ್ಲುದ್ಯಣ್ಣಾ ?
ಹಾಗಂದ ಮಾತಾ ಕೇಳ್ಯವರೆ ಬಸುರಾಯ್ರು
ಅವ್ರು ಕುಲುದಲ್ಲೀ ಸ್ವಾಮೀ ಕಣ್ಣೀರಾಕುತವರಾ.

ಅಯ್ಯೋ ಒಂದೇ ಜಲ್ಮಾಕೊಂದೇ ಎಷ್ಟೇ ಪಾಪವು ಶಿವನೇ
ನಾನು ಎರಡು ಜೀವದಾ ಬೆಮ್ಮನುಸೇ
ಎರಡು ಜೀವದಾ ಬೆಮ್ಮನುಸಿ ನಾಗಮ್ಮನಾ
ಅನ್ನಾಯಕಾರ ಕುಲುದಲ್ಲೀ ಅವ್ವ ಕೊಲ್ಲಬಹುದಾ ?

ಬಸವರಾಯರ ಮಾತಾ ಬಿಜ್ಜಳದೊರೆಯವ್ನು ಕೇಳೀ
ಅವ ಕುಲದಲ್ಲಿ ಓಡಾಡೀ ನಗುತವನಾ
ನನ್ನ ತಂಗೀ ನಾಗಮ್ಮ ಸತ್ತುವಂತೆ ಅನ್ನುತಿದ್ದಾ
ಈ ಕುಪ್ಪುರಕೆ ಒಳಗೆ ಬಿರುದ್ಹೋದಾ.
ಕುಪ್ಪುರಿಕೇ ಒಳಗಾ ಬಿರಿದ್ಹೋದಾ ಕುಲದವರಾ
ಅವ್ಳಿಗೆ ಸೀಗೆ ಸಿರಿಗಂಧ್ಯಾ ತರಿಯಾವೇಳಿ.

ಅವ್ಳಿಗೆ ಸೀಗೆ ಸಿರಿಗಂಧಾ ತರಿದು ಕುಲದಲ್ಲಿ ಚಟ್ಟಾ ಕಟ್ಟೀ
ಅವ್ವ ಕುಲುದಲ್ಲಿ ಇಲ್ಲೀ ವಾಮು ಮಾಡಾಣೇಳಿ
ಅವ ಬಿಜ್ಜುಳಾಡಿದ ಮಾತಾ ಕೇಳ್ಯವರೆ ಬಸುರಾಯ್ರು
ಅವ್ರು ಕುಲುದಲ್ಲೀ ಸ್ವಾಮೀ ಅಳುತವರಾ.

ಅಣ್ಣಯ್ಯ ಅಳುವೋದಾ ಕಣ್ಣೆತ್ತಿ ನೋಡುತವಳಾ
ಅವ ಏನನ್ನುತಾ ತಾಯೀ ನಗುತವಳಾ
ಅಂಜುಬೇಡಿ ಬಸವಣ್ಣಾ ಹೆದ್ರುಬೇಡಿ ಕುಲದಲ್ಲೀ
ನಂಗೆ ಮಂಡೆ ಮಲ್ಲಿಗೆ ಹೂವು ಬಾಡನಿಲ್ಲಾ.

ಮುಂಡೆ ಮಲ್ಲಿಗೆ ಹೂವು ಬಾಡುನಿಲ್ಲಾ ಬಸವಣ್ಣಾ
ನೀವು ಕುಲದಲ್ಲಿ ಕಣ್ಣೀರ ಕೆಡೀಬೇಡಿ
ನಾಗಮ್ಮಾಡಿದು ಮಾತಾ ಬಿಜ್ಜಳ ಕೇಳೀಕೊಂಡು
ಅವ ನೊರ್ರನೆ ಹಲ್ಲ ಕಡಿಯುತಾನೇ.

ಇವ ಯಾವು ಸತ್ಯಕ್ಕೂ ಒಪ್ಪನಿಲ್ಲ ಈ ಮುಂಡೆ
ಇವ್ಳಗೆ ತಕ್ಕಾದ ಸತ್ಯಾ ಹೇಳತೀನೀ.
ಕೇಳ್ಯಪ್ಪಾ ಶರುಣರಾ ಕೇಳ್ಯಯ್ಯಾ ಕುಲುದವರಾ
ನಾನೇಳದು ಸತ್ಯಾವ ಈಗೊಂದು ಮಾತನು.

ಏನಾ ಕೇಳುರಯ್ಯಾ ಹೇಳುತೀನಿ ಈಗೊಂದು ಮಾತಾ
ಇನ್ನು ಯಾವ ಸತ್ಯಾನೂ ಇವ್ಳುಗ ಹೇಳೋದಿಲ್ಲಾ
ಅವ್ಳು ಸತ್ತುವಂತಿಯಾದ್ರಾ ಅನ್ನಕ್ಕೆ ಬೆಮ್ಮನುಸ್ಯಾದ್ರ
ಅವ್ಳೊಟ್ಟೆಲಿರುವಾ ಮಗುವು ಮಾತಾಡಬೇಕೂ.

ಅಯ್ಯೋ ಹಟ್ಟೀಲುಟ್ಟೋ ಮಕ್ಕಾ ಹಿಟ್ಟು ತುಪ್ಪ ಉಂಡ ಮಕ್ಕ
ಅವು ಮೂರು ತಿಂಗಳಿಗೆ ಮೊಕ ನೋಡೀ
ಮೂರು ತಿಂಗುಳುಗಾ ಮೊಕವನ್ನೆ ನೋಡದು ಕಷ್ಟಾ
ನನ್ನ ಹೊಟ್ಟೇಲಿರುವಾ ಶಿಶುವು ಮಾತಾಡಾದು ನಿಜುವಾ ?

ಅಯ್ಯಾ ಗಂಡಾನುಳ್ಳೋರ ಹೆಣ್ಣೀ ಬೆಮ್ಮನಸಿ ಅನ್ನುವೋದೇ ಕಷ್ಟಾ
ನೀನು ಅನ್ನಕ್ಕೆ ಬಸುರಿ ಅಂತಾ ಕುಲದಲ್ಲಿ ಅನ್ನುಬಹುದಾ ?
ಅವ್ನು ಅನ್ನಕ್ಕೆ ಹುಟ್ಟಿರುವೋದು ಯಾವರೀತಿ ಮಗುವಾ ನೋಡವು
ಕುಲದಲ್ಲಿ ಖಾಲಿ ಮೂರು ಮಾತನಾಡಿಸೂ.

ಬಿಜ್ಜುಳಾಡಿದು ಮಾತಾ ಕೇಳವರೆ ನಾಗಮ್ಮಾ
ಅವ್ರು ಕುಲುದಾ ಮಧ್ಯಾದಲ್ಲಿ ನಿಂತುಗಂಡೂ
ನನ್ನ ಹೊಟ್ಟೆಯಲ್ಲಿ ಇರುವವನಾ ಚಿಕ್ಕವನ ಪಾಪಣ್ಣಾ
ನೀ ಕುಲದಲ್ಲಿ ಮೂರು ಮಾತ ಆಡು ಮಗವೇ.

ಅವ್ನ ತಾಯಿ ನಾಗಮ್ನ ಮಾತಾ ಕೇಳ್ಯವನೇ ಬಸುವಣ್ಣಾ
ಅವ್ರ ತಾಯಿ ಹೊಟ್ಟೆ ಒಳಗ ಗುಟುರೊಡೆದಾ.
ಕೇಳ್ಯಪ್ಪಾ ಶರುಣರಾ ಕೇಳ್ಯಯ್ಯಾ ಕಲುದವರಾ
ನಮ್ಮ ತಾಯಿ ಮಾತ್ರ ನೀವು ಮಾನಗೆಡಿಸಬೇಡಿ.

ನಾನು ಅಕ್ಕನಾಗಮ್ನ ಮಗ ಚಿಕ್ಕವ ಚೆನ್ನಬಸವರಾಯ್ರು
ಇನ್ನು ಕುಲುದಲ್ಲಿ ಸ್ವಾಮಿ ಜನ್ಮವಾಗುಬೇಕು
ನಮ್ಮ ತಾಯಿ ನಾಗಮ್ಮ ಸತ್ಯ ತೋರುತೀನಿ ಬಿಜ್ಜುಳಾ
ನಾನು ಬರುವುದಕಾ ಇಲ್ಲಿ ಅವಕಾಶವೇಳೂ.

ಕೇಳ್ಯಪ್ಪ ಶರುಣರೇ ಕೇಳ್ಯಯ್ಯಾ ಕುಲದವರಾ
ನಾ ಬಾಯ್ಗಾಗಣಿ ಬಂದಾರೆ ಜೊಲ್ಲು ಬಸವಂತಾ
ಅಯ್ಯಾ ಬಾಯ್ಗಾಗಣಿ ಬಂದಾರೇ ಜೊಲ್ಲು ಬಸವಲನ್ನುತಾರಾ
ನಾ ಮತ್ತೆಲ್ಲಿ ಬರಲೀ ಬಿಜ್ಜಳಾ ?

ಅವ್ವ ಹೊಟ್ಟೇಲಿರುವಾ ಮಗುವು ಕುಲದಲ್ಲಿ ಮಾತನಾಡುದಾಗಲೇ
ಅವ್ರು ಕುಲುವೇ ತಾವಲ್ಲಿ ನಡುಗುತಾದಾ
ನೀನು ಸತ್ಯವಂತಾನಾದಾರೇ ಅನ್ನಕ್ಕೆ ಬೆಮ್ಮನುಸ್ಯಾದ್ರಾ
ನಿಮ್ಮ ತಾಯಿ ಉಗುರುಗಾಣೀ ಜನನವಾಗೂ.

ನಾ ಉಗುರುಗಾಣಿ ಬಂದಾರ ಕೊಳಗುಬಸುವಲನ್ನುತಾರಾ
ಮತ್ತೆಲ್ಲಿ ಬರುಲೀ ಮಾವಯ್ಯಾ ?
ಕೇಳ್ಯಪ್ಪಾ ಶರುಣರೇ ಕೇಳ್ಯಯ್ಯ ಕುಲುದವರೇ
ನಾನಿನ್ನೊಂದು ಮಾತಾ ಆಡುತಿವನೀ.

ಅವ ಹರಳಯ್ನೋರ ಮನೆಯ ಅನ್ನಕ್ಕೆ ಜನನವಾಗಿದ್ದಾ
ಅವ್ರು ತಾಯಿ ಮೂಗುಗಾಣೇ ಜನನವಾಗಲೀ
ಅಯ್ಯ ಮೂಗುಗಾಣಿ ಬಂದಾರೇ ಗೊಣ್ಣೆಬಸವಲನ್ನುತವರಾ
ನಾ ಮತ್ತೆಲ್ಲಿ ಬರುಲೀ ಕುಲದವರಾ ?

ನಮ್ಮ ತಾಯಿ ಶರೀರುಕಾಣೆ ಜನನವಾದ್ರೆ ಕುಲದವರಾ
ಅವ್ರು ಮಾಡಿರೋ ಸತ್ಯಾವೆಲ್ಲಾ ಇಲ್ಲಿ ಯರ್ಥವಾಯ್ತೂ
ಕೇಳಿ ಕೇಳೀ ನಮ್ಮಾ ಸತ್ತುವಂತು ಮಾವಯ್ಯಾ
ನೀವು ಎಳುಬಾಳೆ ಎಲೆಯ ತರ್ಸುಬೇಕೂ.

ಎಳು ಬಾಳೆ ಎಲಿಯ ತರ್ಸುಬೇಕು ಮಾವಯ್ಯಾ
ಈ ಕುಲುದು ಮಧ್ಯಾದಲ್ಲಿ ಹಾಸಬೇಕು
ಕುಲುದು ಮಧ್ಯದಲ್ಲಿ ಹಾಸಬೇಕು ಮಾವಯ್ಯಾ
ನಮ್ಮ ತಾಯಿ ನಾಗವ್ವಾ ಬಲದು ಮಗ್ಗುಲಾಗಿ.

ತಾಯಿ ನಾಗವ್ವಾ ಬಲದು ಮಗ್ಗುಲಾಗಿ ಮನಗಿಸ್ಕಂಡು
ನಿಮ್ಮ ಚಿಳ್ಳುಗುರಿನಲ್ಲಿ ಅವ್ರ ಬೆನ್ನುಸೀಳೀ.
ನಿಮ್ಮ ಚಿಳ್ಳುಗುರಿನಲ್ಲಿ ಬೆನ್ನುನಾದ್ರೆ ಸೀಳಿರಯ್ಯಾ
ಅವ್ರ ಬೆನ್ನು ಮಚ್ಚಕಾಣೀ ಜನನವಾಗುತೀನೀ.

ಅವ್ರಾ ಮಾವಾನಿಗೆ ಮಾತಾ ತಿಳಿಯಿಸಿದ್ರು ಬಸುವಣ್ಣ
ಅವ್ರು ಎಳು ಬಾಳೆ ಎಲಿಯ ತರುಸವರೇ
ಅವ್ರು ಕಪ್ಪಡಿ ಕಾವೇರಿ ಎಳು ಬಾಳೆಯೆಲೆ ತಂದೂ
ಅವ್ರು ಕುಲುದೂ ಮಧ್ಯಾದಲ್ಲಿ ಹಾಸುತವರಾ.

ಕುಲುದೂ ಮಧ್ಯಾದಲ್ಲೀ ಹಾಸವರೆ ಬಸುವಣ್ಣಾ
ಅವ್ರ ಚಿಳ್ಳುಗುರುನಲ್ಲಿ ಬೆನ್ನಾ ಸೀಳುತವರಾ
ಅವ ಸ್ವಾಮಾರುದ್ದಿನ ಸೂರ್ಯಹುಟ್ಟಕು ಮೊದಲೇ
ಆ ಮಂದದು ಕಟ್ಟೆಲ್ಲಿ ಕುಲದಲ್ಲೀ.

ಅವ್ನು ನೂರೊಂದಾಗಡಿಯ ಮಧ್ಯದಲ್ಲಿ ಬಸುವಣ್ಣ
ಹುಟ್ಟವನೇ ಚಿಕ್ಕ ಚೆನ್ನುಬಸವರಾಯ್ರೂ
ಅವ ಕೆಂಡುಗಣ್ಣಿನ ಬಸುವಯ್ಯಾ ಕೇಡುಗಣ್ಣಿನು ಬಸುವಯ್ಯಾ
ಅವ ಉರಿಗಣ್ಣಿನ ಬಸುರ್‍ರ್‍ಾಯಾ ಹುಟ್ಟವರಾ.

ಅವ್ರು ಅನ್ನಾಯಕಾರ ಕುಲುದವ್ರು ಬಸುವಣ್ಣ ಹುಟ್ಟಿದುಗಳುಗೆ
ಆ ಕುಲವೇ ಕತ್ತಿ ಸ್ವಾಮೀ ಉರದೋಯ್ತೂ
ಆ ಕುಲವೇ ಕತ್ತಿಸ್ವಾಮಿ ಉರದೋಯ್ತು ಅವರಲ್ಲೀ
ಆ ಬಿಜ್ಜಳನಾ ತಲೆಯೇ ಸಿಡದೋಯ್ತೂ.

ಅವ ಜನನವಾದ ಗಳುಗೆಲ್ಲಿ ಎಳೂರು ಮಾಳಕಾಣೆ
ಅವ್ನು ಬಿದ್ದು ಓಡಾಡಿ ಬರುತವನಾ
ಅವ ಓಡಾಡೀ ಬಂದಾ ಚೆನ್ನುಬಸವರಾಯ್ರನ್ನು ತಬ್ಬಿ
ಅವ್ರಾ ದೊಡ್ಡ ಬಸವರಾಯರೂ ಮುದ್ದಾಡುತವರಾ.

ಅವ್ರು ಮುತ್ತಿಕ್ಕಿ ಮುದ್ದಾಡಿ ತಬ್ಬಿ ಓಡಾಡಿಕೊಂಡೂ
ಅವ್ರು ಎಚ್ಚಾಳ ಪಡುತವರ್ಾ ಬಸುವಣ್ಣಾ
ಅಯ್ಯಾ ಎಂದೂ ಇಲ್ಲದೆ ಕಲ್ಯಾಣದಲ್ಲಿ ಇಂದು ಒಬ್ಬ ಮಗನಾದನಂತಾ
ಅವ್ರು ಎಚ್ಚಾಳ ಪಡುತಾರಾ ಬಸುರಾಯ್ರೂ.

ಅವ್ರು ತಬ್ಬೀ ಮುದ್ದಾಡಿಕೊಂಡೂ ಅಂದ ಚಂದದತೊಟ್ಲು
ಅವ್ರು ಮುತ್ತೈದೇರ ಸ್ವಾಮಿ ಕರುದವರಾ
ಅವ್ರು ಬೆಳ್ಳಿ ತೊಟ್ಟಲ ಗೇಯ್ಸಿ ಚಿನ್ನಾದ್ಹಗ್ಗಾವ ನೇಯ್ಸಿ
ಅವುನ್ಗೆ ಸರಗೆಜ್ಜೆ ಹುರಿಗೆಜ್ಜ್ಯಾ ಹಾಕೀದ ದಿಂಬೂ.

ಅವ್ರು ಜಾಜೀಯವನದಲ್ಲಿ ಜಾಣೇರು ತೊಟ್ಟಲಕಟ್ಟೀ
ಅವ್ರ ಅಳಿಯ ಬಸುವಯ್ಯಗೆ ಜೋಜೋ
ಅವ್ರು ಸಂಪೀಗೆ ವನದಲ್ಲಿ ಕೆಂಪೀರು ತೊಟ್ಟಲ ಕಟ್ಟೀ
ನಮ್ಮ ಚಿಕ್ಕಚೆನ್ನುಬಸವರಾಯ್ರಗೆ ಜೋಜೋ

ಅಯ್ಯಾ ಮಲ್ಲಿಗೆ ವನದಲ್ಲೀ ನಲ್ಲೇರು ತೊಟ್ಟಿಲಕಟ್ಟೀ
ಅವ ನಾಗಮ್ಮನು ಮಗನಿಗಾ ಜೋಜೋ
ಅಯ್ಯಾ ಕಿತ್ತಾಲಿ ವನದಲ್ಲೀ ವಿಸ್ತ್ರೇರು ತೊಟ್ಟಲ ಕಟ್ಟೀ
ನಮ್ಮ ಚಿಕ್ಕ ಚೆನ್ನುಬಸವರಾಯ್ರಗ ಜೋಜೋ

ಅವರು ಕುಲಕೋಗುವಾಗ ತಾಯಿ ಬೆಮ್ಮನುಸಿ ನಾಗಮ್ಮ
ಅವ್ರು ಕುಲದಲ್ಲೀ ಮಗುನಾ ಪಡುದವರಾ
ಅವ್ರು ಕುಲದಲ್ಲೀ ಮಗುನಾ ಪಡುದು ಮುದ್ದಾಡಕಂಡೂ
ಅವ್ರು ವಾದ್ಯ ಸಯವಾಗಿ ತಾಯೀ ಮನೆಗೆ ಬರುತಾರಾ.

ವಾದ್ಯಾ ಸೈವಾಗೀ ಬಂದಾರು ಗುರುಮಠುಕ
ಅವುನ್ಗೆ ಹವಳಾದಾರುತಿಯಾ ಬೆಳಗೀರೋ
ಅಕ್ಕ ನಾಗಮ್ನ ಮಗ ಚಿಕ್ಕವ ಚೆನುಬಸವರಾಯ್ರಗಾ
ಅವರ್ಗ ಹವಳಾದಾರುತಿಯಾ ಬೆಳಗೀರೋ
ಎಂದು ಇಲ್ದ ಕಲ್ಯಾಣದಲ್ಲೀ ಇಂದು ಒಬ್ಬ ಮಗನಾದಲಂತಾ
ಅವುನ್ಗೆ ಮುತ್ತೀನಾರುತಿಯ ಹಿಡುದಾರೋ
ಅವರ ಅತ್ತೆ ನೀಲವ್ವ ಎಚ್ಚಾಳ ಪಡುತವಳಾ
ಅವರು ಹಿಗ್ಗೀ ಮೆರೆಯುತವರಾ ನೀಲಮ್ಮಾ.

ಅವರು ಹಿಗ್ಗೀ ಮೆರೆಯುವಾಗಾ ದೊಡ್ಡ ಬಸುರಾಯ್ರು ನೋಡೀ
ಅವ್ರು ಏನಂತಾ ಸ್ವಾಮೀ ನಗುತವರಾ
ಕೇಳು ಕೇಳು ನನ್ನ ಹುಚ್ಚು ಮನುಷಿ ನೀಲೆಣ್ಣೆ
ಅವ ನಮ್ಮ ಮಗುನಲ್ಲ ಕಾಣೇಬಸುವಣ್ಣಾ.

ಅವ ನಮ್ಮ ಮಗನಂತಾ ಹಿಗ್ಗಿ ಮೆರೆಯಲುಬೇಡಾ
ಅವ ನರಲೋಕಕ್ಕ ಹೋಗುತಾನ ಅಳಿಯ ಬಸುವಣ್ಣಾ
ಹಾಗಂದಾ ಮಾತಾ ಅತ್ತೇ ನೀಲಮ್ಮ ಕೇಳಿ
ಅವ್ರು ಏನಂತ ತಾಯಿ ದುಕ್ಕ ಮಾಡುತವರಾ.

ನನ್ನ ಅಳಿಯ ಬಸವಯ್ಯನಿಂದಾ ಕಲ್ಯಾಣೆಲ್ಲ ಮಾರುಹೋದ್ರು
ನನ್ನ ಚಿಕ್ಕ ಚೆನ್ನುಬಸುರಾಯ್ರ ನಾ ಕೊಡದಿಲ್ಲಾ.
ನೀನು ಕೊಡುವ್ದೋದಿಲ್ಲ ಅಂತ ನನ್ನೊಂದಿಗೇಳಲು ಬೇಡ
ನಾ ಕುಲುದಲ್ಲಿ ಕೊಟ್ಟ ಭಾಷೆಗೆ ಕೊಡಬೇಕು.

ಅವನ್ಗೆ ಹನ್ನೆರಡು ಜಿನವು ತುಂಬಕ್ಕುವೀ ಮೊದಲೇ
ನಾನು ಮುದ್ದೇಗೌಡ್ರ ಹಟ್ಟೀಗ ಕೊಡಬೇಕು.
ನಿಮ್ಮ ಅತ್ತಮ್ಮಾಡಿದು ಮಾತ ಹಚ್ಕೋಬೇಡ ಕೇಳಪ್ಪಾ
ನೀ ಲೋಕಚಂಚಾರಿ ಹೋಗಿ ಬರಬೇಕು.

ಕೇಳು ಕೇಳು ನನ್ನಾ ಚಿಕ್ಕ ಚೆನುಬಸುರಾಯ್ರಾ
ಅವರ್ಗೆ ಅನ್ನದ ಪಡಿಯ ಸಾರಿ ಬಾ ಮಗನೇ
ಅಯ್ಯಾ ದೊಡ್ಡೋರಿಗೆ ನೀನು ಏಡೊತ್ತಿನೂಟವ ಸಾರು
ಹಸಮಕ್ಕಳಿಗೆ ಕಂದಾ ಮೂರೊತ್ತು ಸಾರೂ.

ಅವರ್ಗೆ ಸಂದೇನು ಗೇದರುವೀ ಒಂದ್ಹಣ ಒಕ್ಕಳು ಕಂಬ್ಳ*
ನೀನಷ್ಟೊಂದು ಸಾರೀ ಬಾ ಮಗನೇ.
ಅವ್ರು ಹಾಗಂದಾ ಮಾತಾ ಕೇಳೀ ಬಂದವನಲ್ಲಾ
ಅವ ಓಡಾಡಿ ಬರುವಾಗ ಮರುತವನಾ.
ಅವ ಓಡಾಡಿ ಬರುವಾಗ ಮರುತವನ ಮಾವನ ಮಾತಾ
ಅವ ಏನಂತ ಅನ್ನದು ಪಡಿಯಾ ಸಾರುತವನಾ.
ನೀವು ಸಂದೇನೂ ಗೇದರೂವೀ ಒಂದಣ ಒಕ್ಕಳಕಂಬ್ಳ
ನೀವು ದೊಡ್ಡೋರು ಮೂರೊತ್ತು ಊಟ ಮಾಡೀ.

ದೊಡ್ಡವರೀಗ ಮೂರೊತ್ತು ಊಟ ಮಾಡಿ ಕೇಳಿರಪ್ಪಾ
ನೀವು ಆಡಾ ಮಕ್ಕಳ ಸಾರುತೀನೀ
ನೀವು ಹಾಲೂ ಕುಡಿಯುವವರಾ, ಹಸುಮಕ್ಕಳಾ ನೀವು ಕೇಳೀ
ನೀವು ಹಸ್ದಾಗ ತಗಿಯಾದೇ ಊಟಮಾಡೀ.

* ಒಕ್ಕಲು ಮಕ್ಕಳಿಗೆ ಸಂಜೆಯವರೆಗೂ ಗೇಯ್ದರೂ ಒಂದು ಹಣ ಮತ್ತು ಒಕ್ಕಳ (ಒಂದು ಕೊಳಗ) ಧಾನ್ಯವೇ ಕಂಬಳ ಅಥವಾ ಕೂಲಿ.

ಅವ್ರು ಅನ್ನದ ಪಡಿ ಸಾರೋದಕ ಬಂದವರೆ ಬಸುವಣ್ಣ
ಅವ್ರತ್ತೆ ನೀಲವ್ವ ಹುಡುಕಾಡುತವಳಾ.
ಅವ್ರು ಬರುವಾ ಕಂದಯ್ನಾ ನಿಂತು ನೋಡಿ ನಾಗಮ್ಮಾ
ಅವ ತಬ್ಬಿ ಮುದ್ದಾಡಿಕಂಡು ಅಳುತವರಾ.

ಯಾಕ ಕೇಳೀ ನೀವೂ ಬಾರೀ ಸ್ವಾಕವ ಮಾಡೀ
ನಮ್ಮ ತಾಯೀ ನಾಗವ್ವಾ ಅಳುತವರಾ.
ಕೇಳು ಕೇಳು ನನುಕಂದಾ ಹೇಳುತೀನಿ ಬಸುವಣ್ಣಾ
ನೀ ನಾಳೆ ಸ್ವಾಮಾರ ಹೋಗಬೇಕು.

ನಿನಗು ನಾಳೆ ಸ್ವಾಮಾರ್ಕ ಹನ್ನೆರಡು ಜಿನವಾಗುತ್ತಯ್ಯಾ
ನೀ ಮುದ್ದೇಗೌಡ್ರಟ್ಟೀಗ ಹೋಗಬೇಕೂ.
ಅಯ್ಯಾ ಮುದ್ದೇಗೌಡ್ರ ಅಟ್ಟೀಗ ಹೋಗು ಅಂತ ಹೇಳಿದ್ರ್ಯಲ್ಲಾ
ನನಗೆ ಸಂಬಂಧಿಕರ್‍ಯಾರಯ್ಯಾ ಗುರ್ತುಕೊಡೀ ?

ಕೇಳಿ ಕೇಳಿ ಮಾವಯ್ಯಾ ಹೇಳುತೀನಿ ಬುದ್ಧಿಮಾತ
ನಾನು ಅಕ್ಕನಾಗಮ್ಮನ ಮಗ ಸತ್ತುವಂತಾ
ನನ್ನ ಹೊಡಿಯುತಾರೋ ಮಾವಯ್ಯಾ ಉಗಿಯುತಾರೋ ಮಾವಯ್ಯಾ
ಅವ್ರು ಕಾಲೆತ್ತಿ ನನ್ನಾ ಒದಿಯುತಾರಾ.

ಹಂಗೆ ಉಗಿದವನ ಬಾಯಿನಲ್ಲಿ ಹುಳಸುರೀಲಿ ಬಸುವಣ್ಣ
ನಿನ್ನೊದ್ದವನ ಕಾಲಿಗೆ ಕ್ವಾಷ್ಟ್ಯವಾಗಲೀ.
ನನ್ನ ನರಲೋಕಕ್ಕೋಗು ಅಂತ ಹೇಳುದ್ರ್ಯಲ್ಲಾ ಮಾವಯ್ಯಾ
ನಾನು ಹಸುವಾಗುತದೆ ಅಂತೀಗ ಯಾರಿಗೇಳುಲಯ್ಯಾ ?
ನೀನು ಬಾಯಿ ಬುಟ್ಟಾಡಲು ಬೇಡಾ ಕಣ್ಣುಬಿಟ್ಟು ನೋಡುಬೇಡ
ನಿನ್ನ ಸಾಕೀದ ಒಡೆಯನೇ ನಿನಗ ತಾಯಿ ತಂದೇ
ನನ್ನ ನರಲೋಕಕ್ಕೋಗು ಅಂತ ಹೇಳುದ್ರ್ಯಲ್ಲಾ ಮಾವಯ್ಯಾ
ನನ್ನ ಒಂದಿನೂ ಬುಡತಿ ಇಲ್ದೇ ಗೇಯ್ಸುತಾರಾ.

ಅಯ್ಯ ಒಂದಿನೂ ಬುಡತಿ ಇಲ್ದೇ ಗೇಯ್ಸುದಿಲ್ಲ ಬಸುವಣ್ಣಾ
ನೀ ಹುಟ್ಟಿದಾ ವಾರಾ ಸ್ವಾಮಾರಾ
ನೀ ನುಟ್ಟಿದಾ ವಾರಾ ಸ್ವಾಮಾರಾ ಬಸುವಣ್ಣಾ
ನಿನ್ನ ಕೊಳ್ಳಿಗೂ ನೊಗಾನಾ ಮಡಗೋದಿಲ್ಲಾ.

ನನ್ನ ನರಲೋಕಕ್ಕೋಗು ಅಂತ ಹೇಳುದ್ರ್ಯಲ್ಲಾ ಮಾವಯ್ಯ
ನಾನು ಮೇದು ಮೆರಿಯೋವತ್ಗೆ ಗುರುವ್ಯಾರಾ ?
ನೀನು ಮೇದು ಮೆರಿಯೋವತ್ಗೆ ಗುರುವ್ಯಾರಾ ಬಸುವಣ್ಣ
ನಿಂಗೆ ಏಳು ಗಿಣ್ಣೀನ ಅರಕೋಲೂ.

ಯೋಳು ಗಿಣ್ಣಿನ ಅರಕೋಲೂ ಬಸುವಣ್ಣಾ
ಅಯ್ಯಾ ಮೂರೇಟೂ ನಿನುಗ ಸಲುಲಯ್ಯಾ
ಮೂರೇಟು ನಿನುಗ ಸಲುಲಯ್ಯಾ ಬಸುವಣ್ಣಾ
ಇನ್ನು ಸಂದೇನೂ ಹೊಡುದರೂವೀ ನನಗಾಗುಲಿ!

ಇನ್ನು ಸಂದೇನೂ ಹೊಡೆದರೂವೀ ನನುಗಾಗಲೀ ಬಸವಣ್ಣಾ
ನಿನ್ನ ನೊಂದಾ ಜಾಗಾವೆಲ್ಲಾ ಎಡದು ಉದುರುಲಯ್ಯಾ
ನನ್ನ ನರಲೋಕಕ್ಕೋಗುಲಂತಾ ಹೇಳುದ್ರ್ಯಲ್ಲಾ ಮಾವಯ್ಯಾ ?
ನಾನು ಸತ್ತುಕೆಟ್ಟರೆ ಗುರುವ್ಯಾರಾ ?

ನೀನು ಸತ್ತು ಕೆಟ್ಟರೆ ಕೇಳಪ್ಪ ನನು ಕಂದ
ಈ ವಾಲಾರ್ದೊನ್ನಯ್ಯಾ ಮಾದಾರೀ
ಈ ವಾಲಾರ್ದೊನ್ನಯ್ಯ ಶರುಣಾ ಮಾದರಿ ಚೆನ್ನಯ್ಯನವರು
ನಿನ್ನ ಅಳದು ಊಟವ ಮಾಡುತಾರೇ.

ನಿನ್ನ ಮೈಯ ಚರ್ಮಾ ಎಡದೂ ಕಟ್ಟಿಗೇಯ ಮಿಳಿಯಾಗಲೀ
(ಈ) ದೊಡ್ಡವ್ರು ಕಾಲೀಗ ಪಾದ್ರಾಕ್ಷಿ
ಅಯ್ಯಾ ದೊಡ್ಡವ್ರು ಕಾಲೀಗ ಪಾದ್ರಾಕ್ಷಿಯಾಗುಲಯ್ಯಾ
ನಿನ್ನ ಚರ್ಮಲ್ಲಿ ಹೊಡುದವರು ಬ್ರತುಗೆಡಲೀ.
ನಿನ್ನ ಚರ್ಮಲ್ಲಿ ಹೊಡುದವರು ಬ್ರತುಗೆಡಲಿ ಬಸುವಣ್ಣಾ
ನಿನ್ನ ಗೋಮೂತ್ರ ಕುಡಿದೂ ಮುಟ್ಟಳಿಲಯ್ಯಾ
ಅವ್ರು ಅಷ್ಟೆಲ್ಲಾ ಬುದ್ಧಿ ಕೇಳುಕೊಂಡು ಬಸುವಣ್ಣ
ಅವ್ನ ಪಟ್ಟಣನೆಲ್ಲಾ ಸುಂಗಾರ ಮಾಡೀ.

ಅಕ್ಕ ನಾಗಮ್ನ ಮಗ ಚಿಕ್ಕ ಚೆನ್ನುಬಸವರಾಯ್ರು
ಅವ್ರು ನಾಳೆ ಸೋಮಾರಾ ನರಲೋಕಕ್ಕಾ
ನಾಳೇ ಸೋಮಾರ ನರಲೋಕಕ್ಕೋಯ್ತವರಂತ
ಅವ್ರು ಊರೂರಿಗೆಲ್ಲ ಡಮಹಾಕೂಸುತವರಾ

ಅವನ್ಗೆ ಸರಗೆಜ್ಜೆ ಹುರಿಗೆಜ್ಜೆ ಕೊಂಬಿಗೆ ಹಣಸನ್ನು ಹಾಕಿ
ಅವುನ್ಗೆ ಬೇಕಾದಷ್ಟೂ ಒಡವ್ಯ ತೊಡುತವರಾ
ಬೇಕಾದಷ್ಟು ಒಡುವ್ಯಾ ತೊಡುತವರ ಬಸವಣ್ಣನಿಗಾ
ಅವನಿಗೆ ಹವಳಾದ ತ್ವಾರಣವಾ ಮುತ್ತಿನು ತ್ವಾರ್ಣ.

ವಾದ್ಯಾ ಸೈವಾಗೀ ನಡೆಮಡಿ ಸೈವಾಗಿ ಅವನೂ
ಅವ ಬೀದಿಯನ್ನೂ ಮೆರೆದೂ ಬರುತವನೇ
ನಾನು ನರಲೋಕಕ್ಕೋದಾ ಮ್ಯಾಲಾ ಇವ್ರನ್ನು ಪಡಿಯೋವ್ರ್ಯಾರಾ ?
ಇವರ ಪಡೆದು ಹೋಗುತೀನಿ ಆಜ್ಞೆಕೊಡಿ ಮಾವಾ.

ಅಯ್ಯಾ ಆದಂತೆ ಆಗುಲಯ್ಯಾ ಅವರನ್ನು ಪಡಿಮಗುನೇ
ಆ ಬಿಜ್ಜುಳುನಿಗೆ ಬುದ್ಯಾ ನೀನು ಹೇಳುಕಂದಾ.
ಅವ ಮಾಲಂಗಿ ಮರುಳನ್ನು ಪಿಡುದವನೆ ಬಸುವಣ್ಣಾ
ಆ ಕುಲವೆದ್ದು ಕೈಯಾ ಮುಗುದವರಾ.

ನಮ್ಮ ತಾಯಿಗ ಮಾಡಿದು ಶೀಕ್ಷಾ ನರ್ಜುಳುಗ ಕೊಡಬೇಡೀ
ಅವ ಸತ್ತುವಂತಿ ಯಾದದಕ ಗೆದ್ದು ಬಂದಾ.
ಸತ್ತುವಂತಿ ಯಾದದಕ ಗೆದ್ದು ಬಂದ ಕುಲದವರಾ
ನಮ್ಮ ತಾಯಿಗೆ ಕೊಟ್ಟಾ ಶೀಕ್ಷಾ ನರ್ಜುಳುಗೆ ಕೊಡುಬೇಡೀ.

ಮೂರೂ ಬೀದೀಗಾಣೇ ಮೆರದು ಬಂದ್ನಾ ಬಸುವಣ್ಣಾ
ಆ ಮುದ್ದೇಗೌಡ್ರ ಹಟ್ಟಿಯಲ್ಲಿ ನಿಂತುಗಂಡ್ನಾ.
ಅವರು ಮಗನ ಬಸುವಯ್ನ ನೋಡೀ ತಾಯಿ ನಾಗಮ್ಮನವರು
ಅವರು ತಟ್ಟಿ ಮುದ್ದಾಡುಕಂಡು ಅಳುತವರ.
ಅಯ್ಯೋ ಇಷ್ಟೆಲ್ಲ ಸತ್ಯದಲ್ಲಿ ಗೆದ್ದು ಬಂದಿ ನನು ಕಂದಾ
ನೀ ಗೇದಿಕ್ಕೋರಿಗ ನೀನು ಮಗುನಾದ್ಯಾ ?
ಆ ಮಾತು ತಾಯಮ್ಮಾ ನಿಮ್ಮ ಬಾಯಲ್ಲಿ ಬರುಬಾರದು
ನಾ ಗೇದಿಕ್ಕಿದರೇನೂ ಫಲವಿಲ್ಲಾ

ನೀವು ಸತ್ತೀಕುರಾಕಿದು ಶಾಪಾ ಶಾಸನ ತಾಯಮ್ಮನವರೇ
ನನ್ನ ನರ್ಜುಳುವೇ ಕತ್ತಿ ತಾಯೀ ಉರುದೋಯ್ತದೆ.
ನಾನು ಮುದ್ದೇಗೌಡ್ರ ಹಟ್ಟೀಗ ಹೋಯ್ತಿವನಿ ಮಾವಯ್ಯಾ
ನಮ್ಮ ತಾಯಿ ನಾಗಮ್ಮ ಜ್ವಾಪಾನಾ.

ಅವನು ಒಡವೆ ಸೈವಾಗಿ  ಹೊರಟುವನೆ ಬಸುವಣ್ಣ
ಅವರು ಹಗ್ಗುದು ಕಾಸನ್ನು ಕೇಳುತವರಾ
ಅಯ್ಯಾ ನಮ್ಮ ಮಗುನಲ್ಲಾ ನಿಮ್ಮ ಮಗ ಮುದ್ದೇಗೌಡ್ರಾ
ನನ್ನ ಮಗನ ಹಗ್ಗುದುಕಾಸ ಕೊಡಿ ಗುರುವೇ.

ಅವ ಸತ್ಯವಂತ ಬಸುವಣ್ಣ ನಮ್ಮ ಹಟ್ಟೀಗ ಬಂದವನಂತಾ
ಅವ್ರುನ್ಗೆ ಹವಳಾದಾರುತಿಯ ಬೆಳಗೀರೋ.
ಚೆಂದು ಚೆನ್ನುಬಸುರಾಯ್ರು ನಮ್ಮ ಹಟ್ಟೀಗೆ ಬಂದವರಂತಾ
ಅವನ್ಗೆ ಮುತ್ತೀನಾರತಿಯಾ ಬೆಳಗೀರೋ.

★★★★

# ೭. ಹರಳಯ್ಯ

ಹರಹರಾ ಆ ಆ...... ಗೀಯ ಗೀಯ ಗೀ ಯಾ ‖ ಪಲ್ಲವಿ ‖

ಸ್ಮರಣೆ ಮಾಡುವೇನು ನಿನ್ನಾ
ಶಿವ ಶರಣೆ ಸಂಪನ್ನಾ
ಎನಗೆ ತವಕದಿ ಕೊಡೋ ಜ್ಞಾನಾ
ಸಾವಕಾಶ ಎರಗೂವೆ ತವಚರಣಾ
ಗೀಯಗೇ ಗಾಗೀಯಗೇ ಗೀಯ ಗೀಯಾ

ಏಸೇಸು ಭಕ್ತರನ ಹುಟ್ಟಿಸುವೆ ದಿನದಿನಾ
ಎಲ್ಲರನ ಇಷ್ಟದಿಂದ ಕಾಯುವೆ ನೀನಾ
ದುಷ್ಟರ ಮರ್ದನಾ ಮಾಡಿ
ರಕ್ಷಿಸೋ ನೀ ಸರ್ವರನಾ. ‖ ಗೀಯಗೇ ‖

ಪಂಚವರ್ಣ ಪಂಚವರ್ಣ ಪಂಚರಂಗಧಾರಣಾ
ಪಂಚತತ್ವ ಕಾರಣಾ
ಪರಮ ಪಂಚಪ್ರಾಣಾ
ವಂದೀಸಿ ನಿನ್ನ ಪಂಚವರ್ಣಗಳನಾ. ‖ ಗೀಯಗೇ ‖

ಮೇರುಗಿರಿ ಶಯನಾ ಹಾರ ಉರಗಾಭರಣಾ
ಪರಂಜ್ಯೋತಿ ಪಾವನಾ
ಮಾರಮದ ಮರ್ದನಾ
ದೂರ ಮಾಡೋ ಪರಾಯ ಗುಣಗಳನಾ. ‖ ಗೀಯಗೇ ‖

ಜನರನ್ನು ರಂಜಿಸುವ ಗುಣಾ
ಭಂಡರಾದ ಗೌಡೇರನ
ಮನ್ನಿಸುವದು ಪೂರ್ಣಾ
ಸದಾಶಿವಾ ಲಿಂಗಾ ಪ್ರಸಾದ ಶರಣಾ. ‖ ಗೀಯಗ್ಗೇ ‖

---

* ಪ್ರತಿ ಪದ್ಯದ ಕೊನೆಯಲ್ಲಿ ಪಲ್ಲವಿಯನ್ನು ಹಾಡುವರು.

ಕಲ್ಯಾಣ ಪಟ್ಟಣದಲ್ಲೀ
ಬಲ್ಲ ಬಸವಾನ ಕಾಲದಲ್ಲೀ
ಕುಲಕೆ ಒಬ್ಬ ಶರಣಾರ
ಕಕ್ಕಯ್ಯ ಡೋಹರ ಚನ್ನಯ್ಯ ಮಾದರ
ಹರಳಯ್ಯ ಸಮಗಾರ ಎಂಬಾವರಾ. ॥ ಗೀಯಗೇ ॥

ಮೊಚ್ಚಗಾರ ಹರಳಯ್ಯ ಸ್ವಚ್ಛ ನಡತಿನೋಡಾ
''ಏನ್ಮಾಡಿದ್ರಪ್ಪಾ''
ಎಚ್ಚರಾದ ಕೊಡ್ಲೇ ಬಸವಣ್ಣನಾ
ಉಚ್ಚಾರ ಮಾಡೂತ ಮಚ್ಚೀಯ ಜೋಡನ್ನು
ಶುಚಿಯಿಂದಾ ಕೈಯಾರ ಮಾಡುವನಾ. ॥ ಗೀಯಗೇ ॥

ಮಾರಿಬಂದಾ ಹಣದಿಂದಾ ಜೋಳತಂದೂ
ಅಡಿಗಿಮಾಡಿ ಹೊಸ ಜಂಗಮನಾ
ಕರದು ಭಕ್ತಿಭಾವದಿಂದ ಪೂಜಿಸೀ
ಹಿಂದಿನಿಂದ ಊಟ ಮಾಡುವನಾ. ॥ ಗೀಯಗೇ ॥

ಒಂದಾನೊಂದು ದಿನ ಬೀದಿಯಲ್ಲಿ ಬಸವಾ
ತಂದೆ ಬಂದಾನಂದ ಹರಳಯ್ಯನಾ
ಮುಂದೆ ಓಡಿ ಬಂದು ಭಕ್ತಿಯಿಂದ
ಶಿರಬಾಗಿ ಬಸವಗ ಶರಣಂದನಾ. ॥ ಗೀಯಗೇ ॥

ಭಕ್ತಿ ಭಾಂಡಾರಿ ಬಸವಾ ಭಕ್ತ ಹರಳಯ್ಯಗ
'ಅವರೇನು ಮಾಡ್ತಾರಪ್ಪಾ?'
ತಿರುಗಿ, ಶರಣರಿಗೆ ಶರಣಂದನಾ
ನಿತ್ಯವಂತ ಬಸವ ಶರಣಂದ ಮಾತೀಗೆ
ಹರಳಯ್ಯ ಮನದಾಗೆ ನೊಂದಾನ. ॥ ಗೀಯಗೇ ॥

ಹರಳಯ್ಯ ತಿರುಗಿ ತಾ ಬಂದಾ
ಮಡದೀನಾ ಕರದಾ
ಆಯ್ತು ಪ್ರಮಾದ, ಬಸವ ಶರಣಂದಾ
ಬಸವ ಶರಣಂದಾ
ಒಜ್ಜಾಯಿತಾ ಬಸವಂದದಾ. ॥ ಗೀಯಗೇ ॥

ಸತಿಪತಿ ಕೂಡಿ ಇಬ್ಬರಾ
ಮಾಡ್ಯಾರ ತಯ್ಯಾರಾ
ತೊಡಿಯ ಕೊಯ್ದಾರಾ ಈ ಕರಕೊಂದೊಂದಾ
ಪಾದರಾಕ್ಷಿ ಮಾಡ್ಯಾರ ಒಂದೊಂದಾ ॥ ಗೀಯಗೇ ॥

ಇಬ್ಬರ ಚರ್ಮ ಕೂಡಿ
ಪಾದರಾಕ್ಷಿ ಮಾಡಿ
ಬಸುವನ ಅರಮನಿಗೆ ಹೊರಟಾರಾ
ಕಕ್ಕಯ್ಯ ಡೋಹರ ಚನ್ನಯ್ಯ ಮಾದಾರ
ಹರಳಯ್ಯ ಸಮಗಾರಾ ಎಂಬಾವರಾ. ॥ ಗೀಯಗೇ ॥

ಹರ ಶರುಣ ಹರುಳಯ್ಯ
ಮಚ್ಚೀಯ ಜೋಡನು
ಭಕ್ತಿಲೆ ಬಗಲಲ್ಲಿ ಹಿಡಕೊಂಡಾ
ಅರಮನಿಯೊಳಗಿರುವ
ಬಸವಾನ ಎದುರೀಗೆ
ಶಿರಬಾಗಿ ವಂದನೆ ಮಾಡಿಕೊಂಡಾ. ॥ ಗೀಯಗೇ ॥

ಉಚ್ಚೀದ ಮಚ್ಚೀಯ ಜೋಡಾನು ಇಟ್ಟೂ
ಮುಂದೇ ಇಟ್ಟು ತಾ ಬೇಡಿಕೊಂಡಾ
ಸಚ್ಚಿದಾನಂದ ಮೂರ್ತಿಯೇ ನೀನೂ
ಮೊಚ್ಚಿ ಮೆಟ್ಟು ಕೃಪೆ ಮಾಡಂದಾ. ॥ ಗೀಯಗೇ ॥

ಪರಮಾತ್ಮ ರೂಪಿ ಪರಶಿವ ಬಸವಾ
ಅಂತಃಜ್ಞಾನದಿಂದ ತಿಳಕೊಂಡಾ
ವರ ಶರಣಾರ ಚರ್ಮ ಶಿರಕಾ ಭೂಷಣಂದು
ಎತ್ತೀ ತಲಿಯ ಮ್ಯಾಲ ಇಟ್ಟುಕೊಂಡಾ. ॥ ಗೀಯಗೇ ॥

ಸತ್ಯ ಶರಣರ ಚರ್ಮ ನಿತ್ಯ ಪೂಜೀಗಿ ಯೋಗ್ಯ
ಒಯ್ದು ಜಗಲಿ ಮೇಲೆ ಇಡು ಅಂದಾ
ಮತ್ತಿಷ್ಟು ನೋವು ಹೆಚ್ಚೀಗೆ ಬಂತೆಂದು
ಹರಳಯ್ಯ ಮನದಾಗೆ ಮರುಗುಕೊಂಡಾ. ॥ ಗೀಯಗೇ ॥

ಹರಳಯ್ಯ ತಿರುಗಿ ತಾ ಹೊರಟಾನ
ಹಾದಿ ಹಿಡದಾನ
ಮನದಿ ಮಾಡೂತ ಬಸವನಾ ಧ್ಯಾನ
ಹ್ಯಾಂಗಾರ ಮುಟ್ಟಿಸಲಿ ಹೇಳಾ ? ॥ ಗೀಯಗೇ ॥

ಹಾದೀಲಿ ತರುಬಿ ಕೇಳ್ಯಾನ
ಮಧುವಯ್ಯ ಬ್ರಾಹ್ಮಣ
ಬಗಲಲ್ಲಿ ಹಿಡಿದದ್ದೇನ ಅಂದಾ
ಬಗಲಲ್ಲಿ ಏನು ಅಂತಾನ
ಆ ಬಸವನಾ ಮಚ್ಚಿ ಅಂದಾನಾ. ॥ ಗೀಯಗೇ ॥

ಮಧುವಯ್ಯ ಅಹಂಕಾರದಿಂದಾ
ಮಚ್ಚಿ ಹಿಡುದಾಂಗ
ನನಗ ಬೇಕಂತ ಅಧಿಕಾರ ತೊರಿಸ್ಯಾನಾ
ಮಚ್ಚಿಯೊಳಗೆ ಕಾಲ ಸೇರಿಸ್ಯಾನಾ. ॥ ಗೀಯಗೇ ॥

ಶರಣರ ಮಾತು ಮೀರಿ ಕಾಲಿಟ್ಟಿದ್ದಕ್ಕಾಗಿ
ಮೈಯಾಗ ಹುರುಪು ಎದ್ದೊ ಭಯಂಕರಾ
ಕಕ್ಕಯ್ಯ ಡೋಹರ ಚನ್ನಯ್ಯ ಮಾದಾರ
ಹರಳಯ್ಯ ಸಮಗಾರ ಎಂಬಾವರಾ. ॥ ಗೀಯಗೇ ॥

ಧರ್ಮಭ್ರಷ್ಟ ಬಸವ ಎಷ್ಟ ಹೇಳುವಿಯೆಂದು
ಗರ್ವದಿಂದ ಆ ಬಸವಣ್ಣನಾ
ಶರಣರಾ ಮಹಿಮಾ ತಿಳಿಯದೆ ಮಧುವಯ್ಯಾ
ನೆಲಕಬಿದ್ದು ಹೊರಳಾಡ್ಯಾನಾ. ॥ ಗೀಯಗೇ ॥

ಸರ್ವ ವೈದ್ಯರನ್ನ ಕರೆಸಿ ಕೇಳುತಾನೇ
'ಏನಂತ ಕೇಳುತಾನೆ ಅವನೂ ? '
ಯಾರು ಬಲ್ಲರು ಹುರುಪಿನಾ ಹೂರಣಾ
ಶರಣರ ಮಹಿಮಾ ತಿಳಿಯಾದೆ ಮಧುವಯ್ಯ
ನೆಲಕ ಬಿದ್ದು ಉರಳಾಡ್ಯಾನಾ. ॥ ಗೀಯಗೇ ॥

ದಾದಿಯರೆಲ್ಲಾರೂ ನೀರ ತಂದು ತಂದೂ
ಸುರಿವರು ನೂರಾರು ಕೊಡಗಳನಾ

ಬೇಸರ ಬಂದೀತು ದಾಸೀಯರೆಲ್ಲರಿಗೇ
ಮಾಡಿ ಮಾಡಿ ಉಪಚಾರವನಾ. ॥ ಗೀಯಗೇ ॥

ಧೂಳಿನಾ ನೀರನು ತಂದಾಳೆ ಒಬ್ಬಳೂ
ಬೀದೀಯ ಬಚ್ಚಲಾ ನೀರೆಲ್ಲನ
ಸುರಿಯಲು ಹುರಪೀನ ಬೇಗೆಯ ಶರೀರಾವು
ತಣ್ಣಗಾಯ್ತು ಆ ಮಧುವಯ್ಯಗಾ. ॥ ಗೀಯಗೇ ॥

ಆ ಮಧ್ಯುವಯ್ಯ ಗಾಬಾರ್‍ಯಾಗ್ಯಾನಾ ಕರೆಸಿಕೇಳ್ಯಾನಾ
ಎಲ್ಲಿವು ನೀನು ತಂದಂತಾ ನೀರಾ ? ತಂದಂತ ನೀರಾ
ತಣ್ಣಗಾತಾ ನನ್ನ ಶರೀರಾ. ॥ ಗೀಯಗೇ ॥

ಆ ಹರಳಯ್ಯ ಸಮಗಾರ ಎಂಬವರ
ಸತ್ಯಶರಣರಾ
ಜಳಕ ಮಾಡೀದ ಬಚ್ಚಲಾ ನೀರಾ
ಬಚ್ಚಲ ನೀರಾ
ಮಧುವಯ್ಯಗಾತಾ ಎಚ್ಚಾರಾ. ॥ ಗೀಯಗೇ ॥

ಮಧುವಯ್ಯ ಹರಳಯ್ನ ಕರಸಿ
ಮೇಲೆ ಕುಳ್ಳಿರಿಸಿ
ತಪ್ಪು ಕ್ಷಮೆ ಕೇಳ್ಯಾನ ಬಸವಾನಾ ಶರಣಾರಾ
ಬಸವಾನಾ ಶರಣಾರಾ. ॥ ಗೀಯಗೇ ॥

ತಪ್ಪಾತು ಮಾಡ್ರಿ ಉದ್ಧಾರಾ
ಆ ನೀತಿಯಿನ್ನ ಜಾತಿಗೇ ಮೇಲು
ಮಧುವಯ್ಯ ತಾ ತಿಳಿದಾ
ತನ್ನ ಮಗಳಿಗಿ ಮದಿವಿ ಮಾಡ್ಯಾರಾ
ಮದಿವಿ ಮಾಡ್ಯಾರಾ
ಆ ಹರಳಯ್ನಾ ಮಗನಿಗಿ ಕೊಟ್ಟಾರಾ. ॥ ಗೀಯಗೇ ॥

ಮದುವೆಯ ಮಾಡೀದಾ ಶರಣಾನ ಕರಕಂಡು
ಕ್ಷಮಿಸಬೇಕು ತಪ್ಪು ಆಗೀತದಾ
ಕಕ್ಕಯ್ಯ ಡೋಹರಾ ಚನ್ನಯ್ಯ ಮಾದಾರಾ
ಹರಳಯ್ಯ ಸಮಗಾರ ಎಂಬವರಾ. ॥ ಗೀಯಗೇ ॥

★★★★★

# ೮. ಚೆನ್ನಿಗರಾಮ

ತಂದನ್ನ ತಾನಾ ತಂದೇನಾನಾ ತಂದನ್ನತಾನಾ ॥ ಪ ॥

ಹೊಸಮಲೆ ದುರುಗಕೇ ಕಡದವನೆ ಧರಣೇಂದ್ರ
ಮಂತ್ರಿಭೂಪಾಲನ ಕರೆದಾನೋ - ತಂದನ್ನ ತಾನಾ..*
ಬಾರಯ್ಯಾ ಮಂತ್ರೀಶಾ ಬಾರಯ್ಯಾ ಇಲ್ಲೀಗೇ
ಮಗನಾ ಚೆನ್ನಿಂಗನ ಕರೆದುಬಾರೋ - ತಂದನ್ನ ತಾನಾ....
ಅಡಿಯಲ್ಲಡುಗೆಯಾ ಮನೆ ಮ್ಯಾಲೆ ಗರಡಿಯಾ ಮನೇ
ಮಲ್ಲವಿದ್ಯೇವಾ ಕಲಿಯುತಿರುವಾ - ತಂದನ್ನ ತಾನಾ...
ಮಲ್ಲಇದ್ಯೇವಾ ಕಲಿತಿರೂ ಚೆನ್ನಿಂಗುರಾಮನಾ
ಕರದು ಬರುವೋಗೋ ಮಂತ್ರೀಸನೇ ನೀನೂ
ರಾಜನಾಡಿದಾ ಮಾತಾ ಕೇಳನ್ನು ಮಂತ್ರೀಸಾ
ಚೆನ್ನಿಂಗನಾ ಒಳಿಗೆ ಬರುತಾನೇ.

ಅವನು ಚೆನ್ನಿಂಗರಾಮಾನಾ ಕರದಾನಲ್ಲೋ.
ಮಂತ್ರಿ ಆಡಿದ ಮಾತಾ ಕೇಳಿದು ಚೆನ್ನಿಂಗುರಾಮಾ
ಅಪ್ಪಿದ್ದ ಬಿಡುದಿಗೆ ಬರುತಾನೇ
ಅವ್ನು ಅಪ್ಪ ಇದ್ದ ಬಿಡದಿಗೆ ಬರುತಾನೇ.
ಎಂದೂ ಇಲ್ಲದಾ ತಂದೇ ಇಂದ್ಯಾಕೆ ಕರಸೀದೇ
ಕರಸಿದ ಪರಿಯ ಹೇಳಂದನಲ್ಲಾ
ನೀನು ಕರಸಿದ ಪರಿಯ ಹೇಳಂದನಲ್ಲಾ
ಕರಸೀದ ಕಾರಣ ಏನು ಅಂದರೆ ಕಂದಾ
ನೀನು ಹೊಸುಮಲೆ ದುರುಗಕೆ ಬರಬೇಕು
ದಂಡಿನಾ ಜತೆಯಲ್ಲಿ ಬರಬೇಕು ಎನುತೇಳಿ
ಇಲ್ಲಿಗೆ ನಿನ್ನ ಕರೆಸಿದೆನೂ.
ಹೊಸಮಲೆ ದುರುಗಕೇ ಬರಬೇಕಾದರೆ ನನಗೇ
ಬೇಕಾದ ಚೇಜಿ ಬೇಕಪ್ಪ ನನಿಗೇ
ಅವುನು ಕುದುರೇ ರಾವ್ತನಾ ಕರೆದಾನೂ

* ಪ್ರತಿ ಎರಡು ಸಾಲಿಗೊಮ್ಮೆ "ತಂದನ್ನತಾನಾ ತಂದೇನಾನಾ ತಂದನ್ನತಾನಾ" ಸೊಲ್ಲು ಹೇಳುವರು

ಕುದುರೇಯಾ ರಾವ್ತನಾ ಬೇಗಾನೆ ಕರೆದಾನೂ
ಹಿಂಡುಗು ಮೇಲಾದ ಚೇದೀಯ ತತ್ತಾ
ಅಯ್ಯಾ ಚೆನ್ನಿಂಗರಾಮನಾ ಕೈಲಿ ಕೊಡಂದನಾಗಾ
ಬರುವಂತ ಚೇದೀಯು ಇವನನ್ನ ಕಂಡರೆ
ಗಡಗಡನೆ ಒದುರಿ ನಿಂದಾವಲ್ಲಾ
ಎಡಗೈಲಿ ಕಡುವಾಣ ಬಲಗೈಲಿ ಕಡುವಾಣ ಮಡುಗವನೇ
ಬೇಕಾದ ಚೇದೀಯು ನಿನ್ನ ಲಾಯದಲ್ಲಿ ಇಲ್ಲುವಲ್ಲಾ
ರಾಜನಾಗಿ ಫಲವು ಏನಂದನಾಗಾ
ಇಷ್ಟೊಂದು ಲಾಯದಲ್ಲಿ ಬೇಕಾದ ಚೇದಿಯಿಲ್ಲ
ದೊರೆತನ ಆಳುವಾಗ ತುರುಗಕಾಯುವೇ

ರಾಮನಾಡಿದಾ ಮಾತಾ ಕೇಳಿದ ಕಂಪಿಲರಾಜಾ
ಹತ್ತೀತು ನೋಡೋ ರುದ್ದರಗ್ವಾಪಾ
ಅಯ್ಯಾ ಪರ್ತಾಪಪುರಿಯಲ್ಲಿರುವೋ ಈರಬಲ್ಲಾಳ
ಪರ್ತಾಪುರಿಯಲ್ಲಿರುವೋ ಈರಬಲ್ಲಾಳ ಚೇದಿ
ಈರಬಲ್ಲಾಳಚೇದಿ ಬೇಕಾ ನಿನಗೇ ?
ಚೇದಿಯಾ ಗೆದ್ದವ್ನ ಮದುವೆ ಆಯ್ತೀನಿ ಎನ್ನುತೇಳೀ
ನಾಲಕು ಜನವು ತಪಸವರೇ
ಮುಡಿಗೊಂಡ ರಾಯನ ಮಗಳು ಅವಳೊಬ್ಬಳಿರುವಳು
ಅವಳು ಕುರಿತು ಜಪವ ಮಾಡುವಳಯ್ಯಾ
ಜಗದೇಶ್ವರನಾ ಮಗಾ, ಮಗಳೊಬ್ಬಳಿರುವಳೇ
ಅವ ಕುರಿತು ಜಪವ ಮಾಡುವಳಯ್ಯಾ
ಮನ್ಮಥರಾಜನ ಮಗಳೊಬ್ಬಳಿರುವಳೇ
ಅವ ಕುರ್ತು ಜಪವ ಮಾಡುವಳಯ್ಯಾ
ಅಯ್ಯಾ ಪರ್ತಾಪುರಿಯ ರಾಜನ ಮಗಳೂ
ಪರ್ತಾಪುರಿಯ ರಾಜನ ಮಗಳೊಬ್ಬ
ನಾಲಕ್ಕು ಜನವೂ ತವಸಿದರೂ
ಚೇದಿಯಗೆದ್ದಿನ್ನು ನಾಲಕ್ಕು ಜನ ನೀನೂ
ನಾಕು ಜನಾವಾ ಗೆದ್ದು ಬಲ್ಲೀಯಾ ?
ನೀನು ಅಂಥಾಮಗನಾ ನೀನು
ಹುಟ್ಟಿದ್ದೆ ಅಂದ್ನಾ.
ಪರ್ತಾಪುರಿಯ ರಾಜನ್ಗೆ ಅಂಜುಕಂಡೂ
ವರ್ಷಕು ಮೂರು ಸಾವ್ರ ಪೌದಿಕೊಡುವೇ
ಆ ಪೌದೀಯಾ ನೀನೂ ಹಿಂದಿರುಗಿಸುವೆಯಾ

ಕೊಡುವಂತಾ ಪೌದೀಯಾ ಹಿಂದುರುಗುಸು ಬಲ್ಯಾ
ಅಂತಾ ಕಂದನಾ, ಮಗನೆ ನೀನೂ ?
ಅಂದಿ ಕುಂದೋಗೀ ಬೆಂದ್ಯೂ ಬೆಂಡಾಗೀ
ಹಿಂದಕ್ಕೆ ಅರುಮನಿಗೆ ಸಾಗಿದನಾಗಾ
ಅವ್ನು ಹಿಂದಿರುಗಿ ಸಾಗಿ ಬರೂತಾನೇ.

ಬರುವಂತಾ ಕಂದಯ್ನಾ ಕಂಡವ್ಳೆ ಹರಿಯಮ್ಮಾ
ಓಡೋಡಿ ಬಂದಾ ಮಗನ ಬಳುಗೇ
ಮಗನ ಕೆನ್ನೆ ಹಿಡದು ಮುತ್ತಿಕ್ಕಂಡಾಳೂ
ಎಂದೂವೆ ನೋಡಿದರೂ ಚಂದುರುನ ಕಳೆಯಲ್ಲೋ
ಕಂದ್ಯಾವಲ್ಲಪ್ಪ ನಿನ್ನ ಕಲಿಮೊಕಾ
ಮಗನೇ ಮಲ್ಲವಿದ್ಯೇವ ನೀ ಸೋತು ಬಂದೀಯಾ ?
ಇದ್ಯೇವ ಸೋಲನಿಲ್ಲಾ ಬುದ್ಧೀಯ ಸೋಲನಿಲ್ಲಾ
ಪರ್ತಾಪುರಿಗೆ ನಾನೋಗಲುಬೇಕೂ
ಅಮ್ಮಾ ಆಶೀರ್ವಾದ ಕೊಟ್ಟು ಕಳುಗಮ್ಮಾ ನನ್ನಾ.

ಧಾಟಿ ಬದಲಾವಣೆ

ಹುಟ್ಟೀದ ದಿನ ತುಂಬಿತ್ತಾ ನನು ಕಂದಾ*
ಹುಟ್ಟೀದ ದಿನ ತುಂಬಿತ್ತಾ ನಿನುಗೆ
ಪರ್ತಾಪುರಿಯಲ್ಲಿರುವಾ ಈರಬಲ್ಲಾಳ ತೇಜೀ
ಮಾಡುವ ಕಸುವ ನೋಡಿದರೆ ನೀನೂ
ನಲ್ಲೀಯ ನೀರಯ್ಯಾ ಜಲ್ಲಲ್ಲಿ ಹುಲ್ಲಯ್ಯಾ
ಆಕಾಶದಲ್ಲಿ ಕೂಡವರೆ ಚೇದಿಯಾ
ಹೆಣ್ಣುಮಕ್ಕಾಳಾ ಆಸೆಗೆ ಹೋದವ್ರು
ಹಿಂದಿರುಗಿ ಅವರು ಬರನಿಲ್ಲ ಮಗನೇ
ಹಿಂದಿರುಗಿ ಅವರು ಬರುನಿಲ್ಲ ನನ ಕಂದಾ
ನನ್ನ ಪಾಪಿ ಮಾಡಬ್ಯಾಡ ಕಂದಯ್ಯಾ ನೀನೂ
ಹನ್ನೆರ್‌ಡೊರ್ಷಾದಿಂದ ವನವಾಸವನು ಮಾಡೀ
ಈಶ್ವರುನ ವರದಿಂದ ಪಡೆದಿದ್ದೇ ನಿನ್ನಾ
ನನ್ನ ಪರದೇಸಿ ಮಾಡಿ ಹೋಗುಬ್ಯಾಡ ನೀನೂ
ಹಿಂದೆ ಬಂದರೆ ಕಂದಾ ಹಿಂಕಣ್ಣು ಎಸಿತಾದೇ
ಮುಂದೆ ಬಂದರೆ ನೋಡು ಮುಂಕಣ್ಣೆಸೆದೂ

* ಮೊದಲ ಸಾಲಿನ ಕೊನೆಗೆ ತಂದನ್ನ ತಾನಾ ಸೊಲ್ಲನ್ನು ಮುಖ್ಯಗಾಯಕಿ ಹಾಡುವಳು. ಎರಡನೇ ಸಾಲಿನ ಅಂತ್ಯದಲ್ಲಿ ತಂದನ್ನ ತಾನಾ ತಂದನ್ನ ತಾನಾ ತಂದೇನಾನಾ ತಂದನ್ನತಾನಾವನ್ನು ಹಿಮ್ಮೇಳದವರು ಹಾಡುತ್ತಾರೆ.

ಮಗನೆ ಒಂದೆ ಏಟಿಗೆ ಪ್ರಾಣ ಬಿಡುವೇ ನೀನೂ
ಈರಬಲ್ಲಾಳ ಚೇಜಿಯಾ ತರದೇ ಇದ್ದುರೆ ನನಗೇ
ಅಮ್ಮಾ ಚೆನ್ನಿಂಗುರಾಮನೆಂಬ ಹೆಸರು ಯಾಕೇ ?
ರಾಮನಾಡಿದು ಮಾತು ಕೇಳಿನ್ನು ಹರಿಯಮ್ಮಾ
ಅವ್ವು ರೋದಿಸಿ ಧರಣಿಗೆ ಒರಗೀದಾ.
ನಿಮ್ಮ ತಂದೆಯು ಬಂದು ನಿನ್ನನ್ನು ಕೇಳಿದುರೇ
ತಂದಿಗೇನುತ್ರ ಹೇಳಾಲಿ ನಾನೂ ?
ತಂದಿಗೆ ಏನಂದು ಉತ್ರಾಹೇಳಬೇಕು ತಾಯೀ
ನಿನ್ನ ತಂಗೆ ಮಗಳಾದ ಕೆಂಪಾಯಿ ಕರಕಂಡೂ
ಮಲ್ಲ ಇದ್ಯಕ ನೋಡಕೋದಾನೆಂದೂ
ತಂದಿಗುತ್ರಾವ ಹೇಳಮ್ಮ ತಾಯೀ.
ಏನು ಹೇಳಿದ್ರೂ ಕೇಳಾರೂ ಶ್ರೀ ಹರಿಯೇ ?
ಧರುಣಿಯಾದುನಲ್ಲಾ ನರಲೋಕದಲ್ಲೀ
ಆಚೆಬೀದೀಲ್ಲಿರುವ ಸೀತಾಳರಾಮಯ್ಯಾ
ಅರಮನಿಗೆ ನೀನು ಬರಬೇಕು ಎಂದಾ
ಅರುಮನಿಗೆ ನೀನು ಬರಬೇಕು ಎನುತೇಳಿ
ವಾಲೆಯ ಬರದು ಕಳುಗವ್ವೆ ಅವಳು.
ಬಂದಂತಾ ವಾಲೇಯ ಈಸುಗಂಡು ಓದೂಬುಟ್ಟೂ
ಶೀಘ್ರದಲ್ಲರುಮನೆಗೆ ಬರುತಾನೇ.
ಎಂದೂ ಇಲ್ಲದೆ ತಾಯಿ ಇಂದ್ಯಾಕೆ ಕರಸೀದೇ
ಅಮ್ಮ ಕರಸೀದಕಾರಣ ಹೇಳಂದನಲ್ಲಾ.
ಊರು ಮುಂದಿರುವಾ ಮಾದಿಗರ್ಧಂಪಾನಾ
ಕರದು ಬರುವೋಗು ರಾಮಾನೀನೂ ಎಂದಾ.

ಹರಿಯಮ್ಮಾಡಿದು ಮಾತ ಕೇಳಿನ್ನು ರಾಮಯ್ಯನವರೂ
ಅವ್ನು ಊರು ಮುಂದಕೆ ಸಾಗುತಾನೆ ಈಗಾ.
ಊರು ಮುಂದ್ಗಾಡೆ ಕುಲುಮೆಯ ಹೂಡವ್ನೇ
ಎಡಗೈಲಿ ಚಪ್ಲಿ ಹಿಡುದವ್ನೇ ರಾಜಾ
ಬಲಗೈಲಿ ರಂಪೀ ಎಡಗೈಲಿ ಚಪ್ಪಾಲೀ
ಅವ್ನು ಮುತ್ತಿನ ಚಮ್ಮಾಳಿಗೆಯ ಹೊಲಿತಿರುವಾ
ಮುತ್ತಿನ ಚೆಮ್ಮಾಳಿಗಿಯ ಹೊಲಿತಿರೋ ಮಾದಿಗಿರ್ಧಂಪಾ
ಅಪ್ಪಾ ಹರಿಯಮ್ಮ ತಾಯಿ ಬರಹೇಳಿದ ನಿನ್ನಾ
ಹೂಡಿದ ಕುಲುಮೆಯ ಅಲ್ಲಲ್ಲೆ ಮರುತವ್ನೇ
ಆ ಗಂಟೆಲ್ಲಿ ಅರಮನೆಗೆ ಬರುತವ್ನೆ ಹಂಪಾ.

ಅವ್ನು ತಾಯಿಗೆ ಶರಣುಮಾಡವ್ನೆ ಹಂಪಾ
ತಂದೆ ಇಲ್ಲಾವಲ್ಲಾ ನನ್ಯಾಕೆ ಕರಸೀದೇ ?
ಅಮ್ಮ ಏನುಕಾರಣ ಹೇಳಂದನಲ್ಲಾ ಹಂಪಾ
ಹಂಪಾ ಪರ್ತಾಪುರಿಗೆ ಅತಿರಾಮ ಕಡೆದವನೇ
ಪರ್ತಾಪುರಿಗೆ ಚೆನ್ನಿಂಗುರಾಮ ಹೊರುಟವನೇ
ಅಯ್ಯಾ ಬುದ್ಧಿಯ ಹೇಳಿ ಇರುಸಪ್ಪಾ ನೀನು.
ನಿನ್ನಾ ಮಗನ ನೀನ ಇಲ್ಲಿಯೇ ಇರಿಸಿಕೋ
ಅಮ್ಮಾ ನಾನೇ ಹೋಯ್ತೀನಿ ಪರ್ತಾಪುರಿ ಸೀಮೀಗೇ
ಪರ್ತಾಪುರಿಯಲ್ಲಿ ಈರಬಲ್ಲಾಳ ಚೇಜ್ಯಾ
ಎಳದು ಬರುವೇನೂ ತಾಯಮ್ಮ ನಾನೂ
ಈರಬಲ್ಲಾಳ ಚೇದಿ ಹಂಪಣ್ಣ ತಂದಾರೇ
ಅಮ್ಮಾ ಹಂಪ ತಂದನು ಎಂಬ ಹೆಸರಲ್ಲವಮ್ಮಾ ?
ಹಂಪ ತಂದನು ಎಂಬ ಹೆಸರಲ್ವಾ ತಾಯಮ್ಮಾ
ಅಮ್ಮಾ ನಾನು ವೋಯ್ತೀನಿ ಜತೆಒಳುಗೆ ತಾಯೀ.
ಅಯ್ಯಾ ಮಂತೂ ಕೆಟನಲ್ಲಾ ಧರೆಯ ಮ್ಯಾಲೆ ನಾನೂ
ಛಲಕೆ ಚೆನ್ನಿಂಗುರಾಮಾ ಕುಲಕೆ ಮಾದಿಗುರಂಪಾ
ನೀ ಎಲ್ಲಕ್ಕಿಂತ ಹೆಚ್ಚು ಚೆನ್ನಿಂಗರಾಮಾ
ಕುಲದೇವ್ರಾ ಕೇಳುನಿಲ್ಲಾ ಮನೆದೇವ್ರ ಕೇಳುನಿಲ್ಲಾ
ತಾಯೀ ಕುಲದೇವ್ರ ಹೆಸುರ ಹೇಳಂದುನಲ್ಲಾ
ಹೆತ್ತಯ್ಯ ಮುತ್ತಯ್ಯ ಮುರಬಾಡೆಸಿಂಗಯ್ಯಾ
ಅಪ್ಪಾ ಆದೀಯ ಕಾಣಪ್ಪಾ ಮನೆದೇವ್ರು ನಮಿಗೇ.

ಅಮ್ಮಯ್ಯಾಡಿದು ಮಾತ ಕೇಳಿದ ಚೆನ್ನಿಂಗುರಾಮಾ
ಅವ್ನು ಮುತ್ತಯ್ನ ಬಳಿಗೆ ಸಾಗಿದನಲ್ಲಾ
ಮುತ್ತಯ್ನ ಒಳಿಗೆ ಬಂದಿನ್ನು ಚೆನ್ನಿಂಗುರಾಮಾ
ಅವ್ನು ಚಂದ್ರಾಯ ಪೂಜೆ ಮಾಡಿದುನಲ್ಲಾ ಆಗಾ
ಪರ್ತಾಪುರಿಯಲ್ಲಿ ನಾನು ಸೋತು ಬಂದಾರಯ್ಯಾ
ಈ ಚಂದ್ರಾಯ ಮರದ ಕೆಳಗಾಡೆ ಬೀಳಾಲಿ
ಪರ್ತಾಪುರಿಯಲ್ಲಿ ನಾನು ಗೆದ್ದು ಬಂದಾರಯ್ಯಾ
ಚಂದ್ರಾಯ ಮೊರದು ಅಂಗೈಗೆ ಬರುಲೀ.
ನಾನ್ನೂ ನಿನ್ನ ಬಲದಲ್ಲೇ ಇವನ್ಯಲ್ಲಾ ಎನುತೇಳಿ
ಚಂದ್ರಾಯ ಮೊರದೂ ಅಂಗೈಗೆ ಬಂದೂ
ದುಕ್ಕ ಮರೆಯಮ್ಮಾ ನೀನೂ ಹೆದ್ರುಬೇಡ ತಾಯೀ
ತಾಯೀ ಮನೆದೇವ್ರು ವರವ ಕೊಟ್ಟಾದೆ ನೋಡೂ

ಕೃಷ್ಣಾ ಈಶ್ವರರ ಅಲ್ಲೀಗೆ ಕಳುಗೀಸೀ
ನಾ ಹ್ಯಾಗಿರಲಪ್ಪಾ ಅರಮನೆಯಲ್ಲಿ ಮಗನೇ
ಮೂರು ತಿಂಗಾಳ ಮೂರುದಿನ ಕಮ್ಮಿಯಾಗೀ
ಅಮ್ಮಾ ಕುಮುಟಕ್ಕೆ ಸಾಗಿಬರುತೇವಿ ನಾವೂ.
ಅರಿಷ್ಣ ಸೀಗೇಕಾಯ ಅರದವಳೇ ಹರಿಯಮ್ಮಾ
ಅಗ್ಗಣಿಯ ಇವರೀಗೇ ಕಾಯಿಸವರೇ
ಈರ್ವರಿಗೂ ನೀರಾ ಕಾಯ್ಸವಳೇ ಹರಿಯಮ್ಮಾ
ಇಬ್ಬರೂ ಶುಂಗಾರವಾಗೀದರಲ್ಲೋ
ಇಬ್ಬರ ಮೊಕಗಳಾ ದಿಟ್ಟಿಸಿ ನೋಡವಳೇ
ಇವರ್‍ಯಾರು ಎಂಬುದು ಗೊತ್ತಿಲ್ಲ ಮಗನೇ
ಮಗನಿಗೆ ಹೆಚ್ಚೀನ ಬೊಬ್ಬರಿಯಾಕೇ
ಇವರು ಈರ್ವರು ಸುಂಗಾರವಾಗಿ ಬರುತಾರೇ
ನನ್ನ ಶೋಧಾ ಇಷ್ಟೊಂದು ಆಯ್ತಲ್ಲಾ
ನಿಮ್ಮ ತಾಯಿಕೇಳೋಗು ಹಂಪಣ್ಣ ನೀನೂ.

ಅವ್ವ ತಾಯಿಬಳಿಗೀಗ ಬರುತಾನೆ ಹಂಪಾ
ಚೆನ್ನಿಂಗರಾಮಾನೂ ಪರ್ತಾಪುರಿಗೆ ಹೋಗುತಾನೇ
ಅಮ್ಮಾ ನಾನೂ ಹೋಯ್ತೀನಿ ಜೊತೆ ಒಳುಗೇ
ಅಪ್ಪಾ ಹೋಗಿ ಬರುವೋಗೋ ಕಂದಣ್ಣ ನೀನೂ
ಜಯಶೀಲರಾಗಿ ಬನ್ನೀರಪ್ಪಾ ನೀವೂ
ಜಯಶೀಲರಾಗಿ ಬನ್ನೀರಿ ಎನುತೇಳೀ
ತಾಯಿ ಆಶೀರ್ವಾದ ನೀಡವ್ಳೆ ಆಗಾ.
ಅವ್ರು ಪರ್ತಾಪುರಿಗೆ ಸಾಗಿಬರುತಾರೇ
ಹೋಗುವ ಹಾದೀಯು ದೇಶವಲ್ಲಾವಪ್ಪಾ
ನನ್ನಯ ಮಾತು ನಿನ್ನೊಳಗಿರಬೇಕೂ
ನಾನಾಡಿದ ಮಾತೂ ನಿನ್ನೊಳಗೆ ಇರಬೇಕೂ
ನಿನ್ನಯ ಮಾತು ನನ್ನೊಳಗಿರಬೇಕೂ
ಪರ್ತಾಪುರಿ ರಾಜಾ ಯಾವ ರಾಜಾನೆನ್ನುವೇ
ರಾಜನಿಗುತ್ರಾವ ಏನೇಳಬೇಕೂ ?
ರಾಜಾನ ಮಕ್ಕಳ್ಲಾ ಮಂತ್ರೀಯ ಸುತರಲ್ಲಾ
ಮಲೆತು ನಿಂತಿರುವಾ ಈರಬಲ್ಲಾಳ
ಮಲೆತುನಿಂತಿರುವ ಈರಬಲ್ಲಾಳ ಚೇಜಿಗೇ
ಕುದುರೆ ಇದ್ಯಾ ಕಲಿಸೋರು ರಾವ್ತರು ಕಾಣಯ್ಯಾ
ಇದ್ಯಾ ಕಲಿಸೂವ ಕುದುರೇಯ ರಾವ್ತಾರೂ
ಆಗಲಾ ಮಾತ ನಾವು ನುಡಿಯಾಲಬೇಕೂ

ಅವರು ಪರ್ತಾಪುರಿಗೆ ಸಾಗಿಬಂದಾರಲ್ಲಾ.
ಪರ್ತಾಪುರಿಗೆ ಬಂದಿನ್ನು ರಾಜಾರೂ
ಬಾಕಾಲ ಗೊಲ್ಲ ತಡೆದವನೆ ಇವರಾ
ಬಾಕಾಲ ಗೊಲ್ಲ ಇವರನ್ನ ತಡೆದಿನ್ನೂ
ನೀವ್ಯಾವ ಸೀಮೇಯ ದೊರೆಗಳೋ ಎಂದಾ
ದೊರೆಗಳು ನಾವಲ್ಲಾ ಮಂತ್ರೀಯೂ ನಾಮಲ್ಲಾ
ಮಲೆತು ನಿಂತಿರುವಾ ಚೇಜೀಗೆ ನಾಮೂ
ಮಲೆತೂ ನಿಂತಿರುವ ಈರಬಲ್ಲಾಳ ಚೇದಿಗೇ
ಇದ್ಯೆ ಕಲಿಸೂವ ರಾವ್ತಾರು ಕಾಣಯ್ಯಾ
ಅಯ್ಯಾ ಕುದುರೆ ರಾವ್ತಾರು ಕಾಣಯ್ಯಾ ನಾಮೂ
ಕುದುರೇಯ ರಾವ್ತಾರು ಬಂದವ್ರೆ ಎನುತೇಳೀ
ಹೋಗಿ ರಾಜರಿಗೆ ಹೇಳಿರಯ್ಯಾ ನೀಮೂ
ಅವ್ರು ಓಡುಬಂದು ರಾಜರಿಗೆ ನುಡಿದರು ಈಗಾ
ಅಂತಾ ರಾವ್ತರೂ ಇಲ್ಲಿಗೆ ಬಂದಿದ್ದುರೇ
ತಡೆಯದೆ ಬಾಕಲಾ ಬುಡರಯ್ಯಾ.
ಅವರು ರಾಜರಿಗೆ ಶರಣುಮಾಡವ್ರೆ ಈರ್ವರೂ
ಕುದುರೇಯ ರಾವ್ತರು ನಿಜವಾಗೂ ನೀಮಲ್ಲಾ
ಅಪ್ಪಾ ಯಾವ ಸೀಮೆಯ ಮಕ್ಕಳಯ್ಯಾ ನೀಮೂ ?
ಯಾವ ಸೀಮೆ ದೊರೆಯ ಮಕ್ಕಳು ನೀಮಯ್ಯಾ
ನಿಜವಾಗಿ ಹೇಳೀರಿ ರಾಜಾರೇ ನೀಮೂ.
ಕುದುರೇಯ ರಾವ್ತಾರು ನಿಜವಾಗಿ ನಾಮಯ್ಯಾ
ಹೇಳೂವೆ ಕೇಳು ರಾಜೇಂದ್ರ ನೀನೂ
ದಿಳ್ಳೀಗೆ ಹೋದೇವು ಇಲ್ಲಿಗೆ ಬಂದೇವು
ಅಲ್ಲೊಂದು ಚೇದೀಗೆ ಕಲಿಸಿದೋ ನಾಮೂ
ಅಲ್ಲೊಂದ ಚೇದೀಗೆ ಇದ್ಯೇವ ಕಲಿಸೀದೋ
ದಿಳ್ಳೀಯ ರಾಜಬೊಬ್ಬುರಿಯ ಕೊಟ್ಟವನೇ
ಹೆಚ್ಚೀನ ಬೊಬ್ಬುರೆ ಕೊಟ್ಟುವನೆ ನೋಡಂದ್ನಾ
ನಿಜುವಂತಾ ಅವನು ತಿಳಕೊಂಡಾ ರಾಜಾ
ಚೇಚೀಯ ಏರುವ ರಾಜರು ಬಂದವರೆಂದೂ
ಕಮಲೀಗೆ ಸುದ್ದಿ ಹೊರಡೀದವಲ್ಲಾಗಾ.

ಅವಳು ಸುಂಗಾರವಾದಾ ರಾಣೀ ಅರಮಲ್ಲೀ
ಸುಂಗಾರವಾಗೀ ಬಂಗಾರಬಳೆಯ ತೊಟ್ಟೂ
ಅವ್ಳು ರಾಜರ ನೋಡಕ್ಕೆ ಬರುತಾಳೇ ರಾಣೀ
ಅಯ್ಯಾ ಮುತ್ತೀನ ಹೊದುಪಾ ಹೊದ್ದವನೆ ಒಳುಸೋಗಾ

ಅಪರಂಜಿ ಬಟ್ಟ ಧರುಸವನೆ ರಾವ್ತ
ಅಯ್ಯಾ ಅಪರಂಜಿಯಾ ಬಟ್ಟಾ ಧರುಸವನೆ ದೊಡ್ಡಾರಾವ್ತಾ
ಅಮ್ಮಾ ಎಂತಾ ಚೆಲುವನು ನೋಡೇ ದಾದೀ ಇವನು
ಹತ್ತೀಯ ಗರಿಯಾ ಹೊದ್ದವನೆ ಒಳಸೋಗಾ
ಅವ್ವ ಚಿನ್ನಾದ ಬಟ್ಟಾ ಧರುಸವ್ನೇ ರಾವ್ತಾ
ಚಿನ್ನಾದ ಬಟ್ಟಾ ಧರುಸವ್ನೆ ಚಿಕ್ಕರಾವ್ತಾನೂ
ಅವನ್ಗಿಂತ ಚೆಲುವ ಇವನಮ್ಮಾ ದಾದೀ
ತಂದೆ ಕುದುರೆ ತಂಟಿಗೆ ಬುಡಬ್ಯಾಡ ಇವರಾ
ತಂದೆ ತಾವ್ಕ ಮಗಳು ಮಾತನ್ನಾಡಿದ ಮಾತಾ
ಅವನು ಚೆನ್ನಿಂಗರಾಮನ ಕಿವಿಗೆ ಹೋದೋ
ಕರುಸಯ್ಯಾ ಮತ್ತೆ ನಿನ್ನಾಯ ಚೇದೀಯಾ
ಚೇದಿ ಶೌರ್ಯವ ನೋಡಬೇಕು ಎನುತೇಳಿ
ಅಯ್ಯಾ ಚೇಜೀಯ ಈಗ ಇಳಿಸಯ್ಯಾ ನೀನೂ
ಪಟ್ಟಣದ ಜನರೆಲ್ಲಾನೆ ಬೇಗಾನೆ ಕರಸೀದಾ
ಅವ್ವ ಕಬ್ಬಿಣ ಬೋಗಾಣಿಯ ಕೆಳಗೆ ಇಳಿಸವ್ನೇ
ಕಬ್ಬಿಣದ ಬೌಗಾಣಿ ಕೆಳಗೆ ಮಡುಗವ್ರೇ
ಜಲ್ಲೆಲ್ಲಿ ಮುಸುಗ ಎತ್ತವನೇ ಹಂಪಾ

ಅಯ್ಯಾ ತಟ್ಟನೆ ನುಗ್ಗೀತಲ್ಲಾ ಈರಬಲ್ಲಾಳಾ
ಓಡೋಗೋ ಚೇದೀಯಾ ಗದ್ದಾವ ತಬ್ಬವ್ನೇ
ಚೆನ್ನಿಂಗರಾಮ ಚೇದೀ ಏರಿದನೂ
ಅಯ್ಯಾ ಚೇದಿ ಏರವ್ನೆ ಚೆನ್ನಿಂಗರಾಮಾ
ಓಡೂವಾ ಚೇದೀಯಾ ಗದ್ದವನೆ ತಬ್ಬವ್ನೇ
ಅವ್ವ ಚೆನ್ನಿಂಗರಾಮ ಏರವ್ನೆ ಚೇದೀಯಾ
ಅಯ್ಯಾ ಹಾರಿ ಹೋಯಿತು ಚೇದಿ ಗಗನಾಕೇ
ಹಾರೀತು ಚೇದೀಯೂ ಸೇರೀತು ಗಗುನಾವಾ
ಅಯ್ಯಾ ಹಾರಿಹೋಯಿತು ಚೇದಿ ಚೆನ್ನಿಂಗರಾಮಾ
ಹೋಗೂವ ಚೇದೀಯ ಕಂಡವ್ವೆ ಕಮಲಾಜಿ
ಅವ್ವ ರೋದಿಸಿ ಬಿದ್ದವಳಲ್ಲಾ ಧರಣಿಗೇ
ಒಂದಲ್ಲೊಂದು ದಿನ ಲಗ್ಗನಾಯ್ತನೆ ಎಂದೂ
ಆಸೆಯೂ ಇತ್ತೂ ಮನದಲ್ಲೀ
ಆಸೆಯೂ ಇತ್ತೂ ನನ್ನಾ ಮನದಲ್ಲೀ ದಾದೀರ್ಯಾ
ಎಂತಾ ಮೋಸವ ಮಾಡೀದಾನಿವನೂ
ಹೆಣ್ಣೀನಾ ಕಿಚ್ಚಟ್ಟಿ ಹೆಣ್ಣಿನಾ ಗೋಳಟ್ಟೀ

ಅವ್ನ ಕಡಿವಾಣ ಕಿತ್ತೂ ಕೈಯಿಗೆ ಬರಲೀ
ಅಯ್ಯಾ ಕಡುವಾಣ ಕಿತ್ತೂ ಕೈಯಿಗೆ ಬರುಲೇ.
ಬಿದ್ದಿರುವ ಮಗಳತ್ರಾ ಬಂದನಲ್ಲಾ ಕಪ್ಪತ್ತಪುರಿರಾಜಾ
ಅಮ್ಮಾ ಧರಣಿ ಬುಟ್ಟೇಳು ಕಮಲಾಜಿ ನೀನೂ
ದಿಳ್ಳಿಗೆ ಹೋಗಾಲಿ ದಿಬ್ಬಿಲ್ಲಿ ಬರಲೀ
ಅವ್ರ ಎಲ್ಲಿಗೆ ಹೋದರೂ ಬುಡುವ್ಪೋನಲ್ಲಾ ನಾನೂ.
ಭೂಮಿ ಬಿಟ್ಟು ಮೇಲಕ್ಕೆ ಕುಳಿಯಮ್ಮ ನೀನೂ
ಸುಳ್ಳುಸುಳ್ಳು ತಂದೇ ಸುಳ್ಳಯ್ಯ ನಿನುಮಾತೂ
ಅವನು ಹೋದಂತ ರಾಜ ಬರುವ್ಪೋದು ಉಂಟಾ ?
ವಾದಂತಾ ರಾಜಾನು ಹಿಂದಿರುಗುವಾದು ಉಂಟಯ್ಯಾ ?
ತಂದೇ ಸುಳ್ಳಲ್ಲವಾ ನಿನ್ನ ಮಾತು ಎಂದಾ
ಪತ್ತಾಪುರಿಯಾ ರಾಜಾ ದಂಡೆಲ್ಲಿ ನೋಡು
ದಂಡೆಲ್ಲಾ ಓಡಿಬರುತಾದೆ ಈಗಾ
ಓಡಿಬರುವಾ ದಂಡಾ ಹಿಂದಿರುಗಿ ನೋಡವ್ನೇ
ಹಂಪ ಓಡಿಬರುವಾ ದಂಡ ನೋಡಯ್ಯ ನೀನೂ
ಇವ್ನ ಕಡುವಾಣಕಿತ್ತು ಕೈಯಿಗೇ ಬಂತೂ
ಅಯ್ಯಾ ಗಡಗಡನೆ ನಡುಗುತಾನಲ್ಲಾ ಚೆನ್ನಿಂಗುರಾಮಾ
ಹೆದರ ಬ್ಯಾಡಯ್ಯಾ ನೀನೂ ಬೆಚ್ಚಬ್ಯಾಡಾ ನೀನೂ
ನಾನು ಕುದುರಿಗೆ ಕಡುವಾಣ ಹಾಕೂತೀನೀ
ಸಂದೀನ ಮೂಳೇಯ ಎಳುದವ್ನೇ ಹಂಪಣ್ಣಾ
ಅವ್ನು ಕುದುರೀಗೆ ಕಡುವಾಣ ಹೂಡಿದುನಲ್ಲಾ
ತತ್ತೀನ ಮೂಳೇಯ ಸೀಳವ್ನೆ ಹಂಪಣ್ಣಾ
ಅವ್ನು ಕುದರೀಗೆ ಬೆರಟ ಹೂಡವ್ನೇ ಹಂಪಾ
ಅಯ್ಯಾ ಚೇಜೀಯ ಮುಂದುಕ್ಕ ಹೊರಡಂದನಲ್ಲಾ
ಧರಣೀಗೆ ಚೇದೀಯ ಇಳುಸಯ್ಯಾ ಹಂಪಣ್ಣಾ.

ಈ ದಂಡಿನ ಶೌರ್ಯಾವ ನೋಡಾಲಬೇಕೂ
ನಮ್ಮಯ ಚೇದೀಯ ಕದ್ದು ಹಿಡದೋಯ್ತೀಯೇ
ನಿಮ್ಮಪ್ಪ ಹುಲ್ಲಾಕಿ ಸಾಕಿದ್ದನೇನೋ
ನಿಮ್ಮವ್ವ ನೀರೂದು ಸಾಕಿದ್ದಳೇನೋ
ಜಗಳಾಗುಬೇಕಯ್ಯಾ ಇದ್ದಾಗುಬೇಕಯ್ಯಾ
ನಿನಗೆ ಏನಾಗಬೇಕಾ ಕಂಪಿಲರಾಜಾ ?
ತಾಯೀಯ ಹೆಸರೇಳೋ ತಂದೀಯ ಹೆಸರೇಳೋ
ನಿನ್ನಯ ಪುರದ ಹೆಸರೇಳಂದನಲ್ಲಾ

ತಾಯ್ಹೆಸರು ಹರಿಯಮ್ಮ ತಂದೆಯೆಸರು ಕಂಪಿಲರಾಜ
ಅಯ್ಯಾ ನಾನೇ ಕಾಣಯ್ಯಾ ಚೆನ್ನಿಂಗುರಾಮಾ
ಈ ಮಾತ ನೀನು ಪಟ್ಟಣದಲ್ಲೇಳಿದುರೇ
ನನ್ನ ಕಮಲಾಜಿ ಮದುವೇಯ ಮಾಡುತಿದ್ದಿ ನಾನು
ಕಮಲಾಜಿ ಮದುವೇಯ ಮಾಡಿನ್ನು ರಾಜೇಂದ್ರಾ
ನಿನಗಳಿಯನಾ ಪಟ್ಟ ಮಾಡೂವೆ ನಾನೂ
ತಾಯಿ ತಂದೆ ಇಲ್ಲದೆ ಮದುವೆಯಾಗವನಲ್ಲಾ
ಅಯ್ಯಾ ಕುಮುಟು
ಅಯ್ಯಾ ಚೇದಿ ಹಿಡಕಂಡು ಬರುತಾರೆ ಇವರೂ.

ಪರ್ತಾಪುರಿಯಿಂದ ಚೆನ್ನಿಗರಾಮ ಬಂದವನೆಂದೂ
ಅವಳು ಚಿನ್ನದಾರುತಿಯ ಹಿಡುದವ್ಳೆ ತಾಯೀ
ಓಡಿ ಬರುವಾ ಚೇದೀ ನೋಡವ್ಳೆ ಹರಿಯಮ್ಮಾ
ಚೇಜಿ ಲಾಯಕ್ಕೆ ಕಟ್ಟವ್ನೆ ರಾಜಾ
ಕುದುರೇಯ ಲಾಯ್ಕೆ ಕಟ್ಟಿವ್ನೆ ಈ ಚೇದಿಯಾ
ಅವಳು ಏನಂತ ಬಿನ್ನಹ ನುಡಿದಾಳೂ
ಕದ್ದು ತಂದೀಯಪ್ಪಾ ಗೆದ್ದು ತಂದೀಯಾ ಮಗನೇ
ಅಪ್ಪಾ ಹೆಂಗೆ ತಂದ್ಯಪ್ಪಾ ಚೇದೀಯ ನೀನೂ ?
ಕದ್ದು ತರುವಾಕೆ ಅಧಮಾನು ನಾನಲ್ಲಾ
ಅಮ್ಮಾ ಗೆದ್ದು ತಂದಿವ್ನಿ ಚೇದೀಯ ನಾನೂ
ರಾಜ ಹೊಸಮಲೆ ದುರ್ಗದಿಂದ ಯಾವಾಗಾ
ಹೊಸಮಲೆ ದುರ್ಗದಿಂದ ಬಂದರು ಕಂಪಿಲುರಾಜಾ
ಅವ್ನು ಪತ್ತಾಪುರಿ ರಾಜ ಬರುತಾನೆ ಈಗಾ
ಅವ್ನು ಕಂಪಿಲರಾಜನ ಕಾಲಾಗೆ ಬಿದ್ದಾ
ಮದ್ವೆ ಆಯ್ತೀನಂದು ತವಸಿರುವ ನಾಲಕ್ಕು ಜನ
ಏನ ಮಾಡಬೇಕು ಕಂಪಿಲರಾಜ ?
ಕಂಪಿಲರಾಜನ ನೋಡವ್ನೆ ಪತ್ತಾಪುರಿ ರಾಜಾ
ಅವ್ನು ರಾಜುನ ಕಾಲಿಗೆ ಬೀಳುತಾನೆ ರಾಜಾ
ಚೇಜೀಯ ಗೆದ್ದವರ ಆಯ್ತೀನಿ ಎನುತೇಳೀ
ನಾಲಕ್ಕು ಜನ ತವಸವರಲ್ಲಾ
ಸ್ವಾಮಿ ಗತಿಯೇನಂದಾನು ಅವ್ರು ನಾಲ್ಕೂ ಜನವಾ
ನಾಲಕ್ಕು ಜನವ ಕರಸಿದು ಕಂಪಿಲುರಾಜಾ
ಇವನ್ಗೆ ಮದುವೆ ಮಾಡವ್ನೆ ಕಂಪಿಲುರಾಜಾ
ಅಯ್ಯಾ ನಾಲಕ್ಕು ಜನವು ಮದುವ್ಯಾದರಲ್ಲೋ.

★★★★

# ೯. ಸಿಂಧೂರ ಲಕ್ಷ್ಮಣ

ಹರಹಾ.......... ಆ ........ ಆ...............
ಆ......... ಗೀಯ ಗೀಯ ಗೀಯ ಗೀಯ ಗೀ || ಸೊಲ್ಲು ||

ಶ್ರೀನಾಥ ಕಾಂತ ಗಣನಾಥ ಜಾತ ಭವಶಾಂತ ತಾತ
ವೇದಾಂತ ವಾದಪ್ರಿಯ ಪೀತಪೋತ ಏಕಾಂತಚಿತ್ತ ಏಕದಂತ
ಶ್ವೇತ ವರ್ಣವಿತ್ತ ಸುತ್ತ ಸುಳಿಯುತ್ತ
ಸದ್ಯ ಆನಂತ ನಿತ್ಯಭಜಿಸುವೆನೂ.

ಬಂದವಗೆ ಶರಣ ತವ ಚರಣ ವರಣ ಸುವರ್ಣ ಕೇಶ
ಪರಿಪೂರ್ಣ ಕೃಷ್ಣ ... ಪುರಾಣ ಕರುಣ ನಿರ್ಜಾಣ
ಗುಣ ನಿರ್ಗುಣ ಸಾರ ತವಬಾಣ ಕರ್ಣ
ಗಜವದನಾ ಕರ್ಣ ಗಜವದನಾ
ಗೀಯಗಾ ಗೀಯ ಗೀಯ ಗಾ ಗೀಯ.

ಸ್ವರಮಂತ್ರ ಮಾಡಿದನು ಸ್ತೋತ್ರ
ಪರಿಪಾಲಗಾತ್ರ ಸುಪವಿತ್ರ
ನಿನ್ನ ಕ್ಷೇತ್ರ ರಾತ್ರ ನಿನ್ನ ಮಂತ್ರ ತಂತ್ರ
ಶರಶಾಸ್ತ್ರ ಮಾತ್ರ ವಿಚಿತ್ರ ಇಲಿಯ ವಾಹನಾ.

ಮರನೂರಾ ವಾಸಾ ಆ...... ಆ...........
ಮರನೂರ ವಾಸಾ ಭವತ್ರಾಸ, ಮಧುಮಾಸ
ನಾಥನಾ ಕಳಸ ಮುಡಿಯುವಾ ತಾಸು ಸರಸನಿವಾಸ
ವಾಸ ಕೈಲಾಸ ತಾನು ನಿಮ ಕೂಸಪಂತ ಹರದಾಸ
ಔಸಬ್ಯಾಡ ಮನಸ ಧ್ಯಾಸ ಅಭ್ಯಾಸ ಮಿತ್ರ
ಬಂದಿವಗೆ ಶರಣ ತವ ಚರಣವ ರಣ ಸುವರ್ಣಕೇಶ.
ಗೀಯಗಾ ಗಾಗೀಯಗಾ ಗೀಯ ಗೀಯ.

ಪರಗಾಣಿ ಜತ್ತಿ ಉಮರಾಣಿ ದೇಶಕ್ವಾಹಿನೀ
ಆಮಂದ್ಯಾಗ ........ ಧನಿಕ .........
............... ಸರಕಾರ
ಜತ್ತಿಸಂಸ್ಥಾನದಾಗೈತಿ ಸಣ್ಣ ಹಳ್ಳಿ ಸಿಂಧೂರಾ - ಗೀಯಗಾ ಗಾಗೀಯಗಾ ಗೀಯಗೀಯ
ಸಿಂಧೂರಾಗ ಲಕ್ಷ್ಮಣ ಹುಟ್ಯಾನವ್ವಾ
ಸಿಂಧೂರ ಲಕ್ಷ್ಮಣ ಹುಟ್ಯಾನ
ಬಂಟ ಅನಸ್ಯಾನ
ಕೊಟ್ಟವಾಕ್ಯನ ತಪ್ಪುವವನಲ್ಲಾ.
ಚಟ್ಟ ಹೋಗುವತನಕಾ ಹಿಡಿದ ಹಟ ಬಿಡಲಿಲ್ಲಾ. ।। ಗೀಯಗಾ।।

ಪಾಂಡವರೊಳಗೆ ಹುಟ್ಟಿದನು ಭೀಮಾ
ಚೆಲುವ ಚಂದ್ರಾಮ
ಥೇಟ್ ಹೋಳಿಕಾಮಾ
ರೂಪಾದಲ್ಲಿ ಗೌರಾ
ಎಂಥಾ ಶೂರವಂಶದಲ್ಲಿ ಹುಟ್ಟಿ ಆದ ಕರ್ಬಲಾ. ।। ಗೀಯಗಾ।।

ಸರಕಾರದ ಸೌಕರಿ ಮಾಡ್ತಿದ್ದಾ
ಗರುಡಿ ಹಾಕತಿದ್ದ
ಓಡುವಲ್ಲಿ ಮುಂದಾ
ಹಿಡಿವತಿದ್ದ ಮೊಲಾ.
ಹಿಡಿವತಿದ್ದ ಮೊಲಾ
ಗುರಿ ಓಡಿ ಹೇಳಿದರ........
ಐನೋರಿಂದ ನ್ಯಾಯ ಶುರುವಾತೂ
ಆತ ವಿಪರೀತ
ಚಾಡಿ ಹೇಳನಲ್ಲಾ.

ಆ ದಿನಾ ಲಕ್ಷ್ಮಣ ತಳ್ಳಿಮಾಡಿದನಾ
ಐಯ್ಯನವರ ಮ್ಯಾಲಾ
ಊರಿನಲ್ಲಿ ಕೆಡುಕುಮಂದಿ ಉಂಟೂ
ಮಾಡ್ರಲೀ ಕೋರ್ಟು
ನೋಡಿ ಇನ್‌ಸ್ಪೆಕ್ಟರ್ ಆದ ಬೆಂಕಿಲಾಲಾ
ನೋಡಿ ಇನ್‌ಸ್ಪೆಕ್ಟರ್ ಆದ ಬೆಂಕಿ ಲಾಲಾ.

ಕರಕರಾ ಹಲ್ಲ ತಿಂತಾನ ಲಕ್ಷುಮಾಣನ ಮ್ಯಾಲ ।। ಗೀಯಗಾ।।
ಕರಕರಾ ಹಲ್ಲತಿಂತಾನ ಲಕ್ಷುಮಾಣನ ಮ್ಯಾಲ

ಸರಕಾರದವರು ವಾರಂಟಾ ತಗದು ಇನ್ಸ್‌ಪೆಕ್ಟರ್
ಹಿಡಿಯಲಿಕೆ ಬಂದಾ ಸಿಪಾಯಿ ಹಿಂಬಾಲ
ಹಿಡಿಯಲಿಕೆ ಬಂದಾ ಸಿಪಾಯಿ ಹಿಂಬಾಲ.

ಕತ್ತಿ ಭರತಿ ಬಂದುದಾ ಜೋಡಬಾಯ ಪಿಸ್ತುಲಾ ॥ ಗೀಯಗಾ ॥
ಇನ್ಸ್‌ಪೆಕ್ಟರ ಸಿಂಧೂರಿಗೆ ಬಂದಾ
ಲಕ್ಷ್ಮಣನ ಕೈಗೆ ತೊಡಸೀದ
ಬೇಡಿ ಹಾಕಲಿಕೆ ಎದ್ದು ಹೋದಾ
ಲಕ್ಷ್ಮಣ ಹಿಂದಕೆ ಸರದಾನಾ
ಲಕ್ಷ್ಮಣ ಹಿಂದಕ ಸರದಾ ॥ ಗೀಯ ಗಾ ॥
ಅಷ್ಟೊತ್ತಿಗೆ ಬಾಳ ಬಂದಾ
ಬಾಳ ಧೈರ್ಯದಿಂದ ಹಾಕಂದಾ
ಇಷ್ಟು ಹೇಳಿ ಕಟ್ಟಿ ಇಳಿದಾನಾ ॥ ಗೀಯ ಗಾ॥

ಇಷ್ಟು ಹೇಳಿ ಹೊರುಟನಾಗಾ ಇನ್‌ಸ್ಪೆಕ್ಟರ್ ಹಿಂದಾ
ಊರ ಬಿಟ್ಟು ದೂರ ಓಡಿಬಿಟ್ಟಾ.

ಜತ್ತಿ ಸಂಸ್ಥಾನದಾಗೈತಿ ಸಣ್ಣ ಹಳ್ಳಿ ಸಿಂಧೂರಾ ॥ ಗೀಯಾ ॥
ಇಷ್ಟು ಹೇಳಿ .... ಮ್ಯಾಲ
ಇನ್‌ಸ್ಪೆಕ್ಟೆರ್ ಹಿಂಗ ಒಗಿಯುತೀನಂದಾ
ಒಗಿಯಬ್ಯಾಡಂದಾ
ಬಾಯಾಗ ಹುಲ್ಲಹಿಡದಾ*

ಪಿಸ್ತೂಲ ಒಗೆದ ಅವನ ತೊಡಿಯಾಗ
ರಾಮರಾಮ ಅಂತ ಲಕ್ಷ್ಮಣ ಬಿದ್ದ ಭೂಮಿ ಮ್ಯಾಗೆ ॥ ಗೀಯಗೀ''
ದವಾಖಾನಿಗೋದು ಹಾಕ್ಯಾರವ್ವಾ
ಆಗ ಡಾಕ್ಟರ್
ಮೆತ್ತೆಗೆ ಮಾಡ್ಯಾರ
ಎಂಟು ದಿನದಾಗ
ಓದಿಟ್ಟು ಕಷ್ಟ ನಡಿಸ್ಯಾರ ತುರಂಗದೊಳಗ.

ಖಾದ್ರಿ ಗೋಪಾಲ ನರಸ ಮೂವರಾ
ಕೂಡಿ ಮಾತಾಡ್ಯಾರ ತಮ್ಮ ಮನಿಯಾಗ ತಮ್ಮ ದುನಿಯಾಗಾ

* ಬಾಯಲ್ಲಿ ಹುಲ್ಲು ಹಿಡಿಯುವುದು ಶರಣಾಗುವುದರ ಸಂಕೇತ.

ನಾಳೆ ತುರಂಗ ಒಡದು ತರಬೇಕೆಂದು ಮಾವಗಾ
ಮರುದಿವಸ ಜತ್ತಿಗೆ ಹೋದರವ್ವಾ
ಮರುದಿವಸ ಜತ್ತಿಗೆ ಹೋದಾರು
ತುರಂಗ ಒಡದಾರೂ
ಕೂಡಿ ಹೊಂಟಾರ ನಡುವೆ ಪ್ಯಾಟ್ಯಾಗ
ಯಾವ ಗಂಡಸುಮಗಾ ಇದ್ದಾನ್
ಹಿಡಿಯಲಿಕ್ಕ ನಮಗಾ. ॥ ಗೀಯಗಾ ॥

ಇನ್‌ಸ್ಪೆಕ್ಟರ್ ಹದಿನೆಂಟು ಮಂದಿ ಸವಾರರಾ
ಹಿಡಿಯಲಿಕೆ ಹ್ವಾದ್ರ
ಗುಡ್ಡಗದ ಒಳಗಾ
ಅವರು ನಾಲ್ಕು ಮಂದಿ ಹೋಗಿ ಕುಂತಾರೊಂದು ವಾರ್‍ಯಾಗ ಗುಡ್ಡದಾ ವಾರ್‍ಯಾಗ
ಅವರಿದ್ದಲ್ಲಿ ಕುದುರಿ ಹೊಡದಾರವ್ವಾ
ಕುದುರಿ ಹೊಡದಾರ
ಗಾಬರಾಗ್ಯಾರ
ಚಿಗರಿ ಬೆದರಿದ್ಹಾಂಗ.
ಸಿಡದು ನಿಂತಾ ಮನುಷ್ಯರಾಗಾ
ಕಲ್ಲತಗಂಡ್ರು ಕೈಯಾಗಾ ॥ ಗೀಯಗಾ॥

ಕುದರೀಗಿ ಎಸ್ತಿದಾರ ಕಲ್ಲಾ
ಒಗದು ಮುದುರಿ ಕಾಲಾ
ಒಬ್ಬರೂ ನಿಂದ್ರಲಿಲ್ಲಾ ಹ್ವಾದ ಸಿಗದಾಂಗ
ಲಕ್ಷ್ಮಣ ತಿರುವಿ ಹಚ್ಚಾನ ಇನ್‌ಸ್ಪೆಕ್ಟರಗಾ
ಇನ್‌ಸ್ಪೆಕ್ಟರ್ ಲಕ್ಷ್ಮಣಗ ಹೇಳತಾನವ್ವಾ
ಇನ್‌ಸ್ಪೆಕ್ಟರ್ ಲಕ್ಷ್ಮಣಗ ಹೇಳತಾನಾ
ನಾಳೆ ಬರತೀನಿ
ಇಲ್ಲೇ ಇರು ನೀನೂ ಗುಡ್ಡದಾ ಒಳಗೆ
ನಿನ್ನ ಹಿಡಿಯದಿದ್ದರಾ ಹೆಂಗಸಂತ ಕರಿ ನನಗಾ
ಲಕ್ಷ್ಮಣ ತಿರುಗಿ ಹೇಳತಾನವ್ವಾ
ಲಕ್ಷ್ಮಣ ತಿರುಗಿ ಹೇಳತಾನ
ರಾತ್ರಿ ಬರತೀನಿ ಇಲ್ಲೇ ಇರೋ ನೀನೂ ಗುಡ್ಡದಾ ಒಳಗಾ
ಈ ಮಾತ ಸುಳ್ಳಾದ್ರ ..... ತೊಡುಬಗಲಾಗ ॥ ಗೀಯಗಾ॥

ಗುಡ್ಡ ತಿರುಗಿ ದಣದು ಬಂದಾರವ್ವಾ
ಊಟಮಾಡಿ ಸುಮ್ಮ ಮಲಗ್ಯಾರವ್ವಾ
ಖಾದ್ರ, ಗೋಪಾಳ ನರಸ ಮೂವರೂ
ಲಕ್ಷ್ಮಣ ಸಹಿತಾ ಚಾವಡಿಗೆ ಹೋದಾರೂ
ಲಕ್ಷ್ಮಣ ಸಹಿತಾ ಚಾವಡಿಗೆ ಹೋದಾರವ್ವಾ ‖ ಗೀಯಗಾ‖
ಒಬ್ಬ ಸಿಪಾಯಿ ಮೀಸಿ ಬೋಳಸ್ಯಾರೂ
ಕುದ್ರಿ ಬಾಲ, ಕಿವಿಯ ಕೋದಾರವ್ವಾ
ಇನ್‌ಸ್ಪೆಕ್ಟರನ ಎಬ್ರಿಸಿ ಕುಂಡಿಸ್ಯಾರು
ಹೋಗಿ ಬರ್ತೀವಿ ಹುಷಾರು ಅಂದಾರೂ
ಹೋಗಿ ಬರ್ತಿವಿ ಹುಷಾರು ಅಂದಾರವ್ವಾ ‖ ಗೀಯಗಾ‖

ಆ ಆ .................. ಆ..... ಆ.........
ಕತ್ತಿ ಬಳಸಿಬಂದು ಬಿದ್ದು ಒಂದಾಳ.... ಸಿಂಧೂರ ಬಿದ್ದಾನ ...........
ಪರಾರಿ ಆದಾರ ನಾಲ್ಕು ಮಂದಿ ಅವರಾ

ಜತ್ತಿ ಸಂಸ್ಥಾನದಾಗೈತಿ ಸಣ್ಣಹಳ್ಳಿ ಸಿಂಧೂರಾ ‖ ಗೀಯ ಗಾ‖
........ ಇವನ್ಯಾವ ಗುಂಡ್ಗೇ ಒದರಾವಾ
ಬಜಾರ ಕಟ್ಯಾಗ
ಬಂದು ಕೂಡ್ಯಾರು
ಜಿಗಣಿ ಬಿದರಿ ಊರಾ ದರೋಡಿ ಅವರು ಮಾರ್‍ಯಾರವ್ವಾ
ಬಬಲೇಶ್ವರ ಮುಂದೆ ಸಾರ್‍ವಾಡಾ
.......... ಮಾಡ್ಯಾರ
ಅಲ್ಲಿ ಒಬ್ಬ ಚೆಲುವ ಮಾಹಿತಿ ಕಳುವಿಗನ್ನವರು....
ಕೈ ಕಾಲಕಟ್ಟಿ ಅಲ್ಲಿ ಎಂಟ ದಿವಸ ಇಟ್ಟಾರವ್ವಾ
ಒಬ್ಬಾತ .... ಇಲ್ಲೆ ಇರತಾನವ್ವಾ
ಸಾರವಾಡ ಬಿಟ್ಟಾರು
ಕಾಖಂಡಿಕಿ ವಸ್ತಿ ಮಾಡ್ಯಾರೂ
ವಿಜಾಪೂರದಿಂದ ಪೋಲೀಸರು ಬಂದೂ ಮುತ್ಯಾರವ್ವ
ತ್ವಾಟದೊಳಗೆ ಮಲಗಿದಾರ ಉಂಡಾ
ಪೋಲೀಸರ ದಂಡಾ
ಹಾಕತಾರ ಗುಂಡಾ
ಎದ್ದು ಕೂತಾರವ್ವಾ
ಬಾಕೀದವರು ಸಿಡದುಹೋದಾರು
ನರಸ್ನ ಹಿಡಿದಾರವ್ವಾ

ಗುಡ್ಯಾಗ ಸಿಟ್ಟು ಬಂತಲ್ಲಾ
ಕವಣಿಗೆ ಹಾಕಿ ಕಲ್ಲಾ
ಒಗದು ಮುರದು ಕಾಲಾ
ಒಬ್ರೂನೂ ನಿಂದ್ರಲಿಲ್ಲ ಹ್ವಾದ್ರ ಸಿಗದ್ಹಾಂಗ
ಮುಂದು .... ಕದಾ ಮುಚ್ಚಾರವ್ವಾ ॥ ಗೀಯಗಾ॥
ಕಲ್ಲೀನ ಹೊಳಕಿ ಮುರಿದು ಕದಾ ಮುಚ್ಚರವ್ವಾ
ನಾಲ್ಕು ಕಡಿ ಬಾವಿ ಎಡಿಗಲ್ಲ
ಜಿಗದಿ ಗೋಪಾಲ
ಇವನ ಖಬರಿಲ್ಲ
ನಿಂತ ನೋಡ್ಯಾರೂ
ನಿಂತ ನೋಡ್ಯಾರವ್ವಾ
ಗಾಬ್ರಾಗಿ ಪೋಲೀಸರ ಕಾಲಹೋಗಿ ಕೂತಾನವ್ವಾ ॥ ಗೀಯಗಾ॥

ನರಸ್ಯಾನ ಓದು ತುರಂಗದಾಗಾ
ಇಟ್ಟು ಬೆಳಗಾವ್ಯಾಗ
ಚಿಂತಿ ಲಕ್ಷ್ಮಣಗ ಸಿಕ್ಕಲಿಲ್ಲ ಯಾರೂ
ಅಷ್ಟೊತ್ತೊಳಗ ಖಾದ್ರ ಗೋಪಾಲ ಬಂದೂ ಕೂಡ್ಯಾರವ್ವಾ
ಲಕ್ಷ್ಮಣನ ತುತ್ತು ಕಳಚಿಲ್ಲ
ಎತ್ತ ಹೋದ್ಯೋ ನರಸ ಕೋಮಲಾ
ದಿನಾ ತಿನ್ನಾವ ಕೊಬ್ಬರಿಯ ಬೆಲ್ಲಾ
ನಿನಗ್ಯಾರ ಕಡಸುತಾರ ಹಾಲಾ ॥ ಗೀಯಗಾ॥

ನಾವಷ್ಟೆ ಉಳದು ಫಲ ಇಲ್ಲಾ
ಬೇಕಂತ ಹೋಗಿ ಸಿಕ್ಕಾರಲ್ಲಾ
ಓದ ಇಟ್ಟಾರ ಬೆಳಗಾವಿ ಜೈಲಾ
ಎಂಟುದಿವಸ ಅಲ್ಲೇ ಇರಂಗಲ್ಲಾ
ತುರಂಗದೊಳಗೆ ಸಿಗದ ಬಂದರಲ್ಲಾ ॥ ಗೀಯ ಗಾ॥

...... ಹಿಂದೆ ಬಂದ ಪೋಲೀಸರು
ಹುಡುಕಿ ನೋಡ್ಯಾರ
ಸಿಗಲಿಲ್ಲರಿ ಅವರಾ
ಜತ್ತಿಸಂಸ್ಥಾನದೊಳಗೈತಿ ಸಣ್ಣಹಳ್ಳಿ ಸಿಂಧೂರಾ ॥ ಗೀಯ ಗಾ॥
ಕಂಚಿನೊಳಗೆ ಧ್ಯಾನಮಾಡ್ಯಾರವ್ವಾ
ಚನ್ನಪ್ಪ ಸಾವ್ಕಾರ

ಕೊಟ್ಟ ಅನ್ನ ನೀರಾ
ಇಟ್ಟಕೊಂಡಾನಾ
..... ಕುಬಟಗಿಯ ಊರ ದರೋಡಿ ಮಾಡ್ಯಾರವ್ವಾ
ಇನ್‌ಸ್ಪೆಕ್ಟರ್ ಅಂಕನ ಪೋರ್ಟಿಂದ
ಜಮಖಂಡಿಗಿ ಬಂದಾ
ಸರ್ಕಾರ ಕಡಿಂದ ಲಕ್ಷ್ಮಣನ ಕೊಡ್ತೀನಂದ
ಎಲಿಯ ಹಿಡದಾನವ್ವಾ
ಎಲಿ ಹಿಡದ ಸುದ್ದಿ ಲಕ್ಷ್ಮಣ ಮುಂದೆ ಕೇಳ್ಯಾನವಾ ॥ ಗೀಯಗಾ॥

ಲಕ್ಷ್ಮಣ..... ತಾನ ಇರತಾನ
ಇನ್‌ಸ್ಪೆಕ್ಟರನು ಸುದ್ದಿ ಕೇಳ್ಯಾನವಾ
ಸಂಗತೀಲೇ ಒಬ್ಬ ಸಿಪಾಯಿನ ತಗೊಂಡು ಹೋದಾನವ್ವಾ ॥ ಗೀಯಗಾ॥

ಇನ್‌ಸ್ಪೆಕ್ಟರ್ ಬರೋದು ಲಕ್ಷ್ಮಣಾ ನಿಂತು ನೋಡ್ಯಾನವ್ವಾ
ಮರಿಯಲಾದರ ಅಡಗಿ ಕೂತಾನ
ಮರಿಯಲಾದರ ಅಡಗಿ ಕೂತಾನವ್ವ
ಸಂಗತಿಲಿದ್ದ ಸಿಪಾಯಿ ಕೇಳತಾನವ್ರಾ
ಲಕ್ಷ್ಮಣ ಸಿಕ್ರ ಹೊಡಿಯೇನವ್ವ ॥ ಗೀಯಗಾ॥

ಇನ್‌ಸ್ಪೆಕ್ಟರ್ ಅಂತಾನ ''ಈಗ ಸಿಕ್ರಾ ?''
''ಏನ್ ಮಾಡ್ತಾನಂತಾ ? ''
ಕುಡಿವತೀನಿ ನೆತ್ರನಂದು ಕರಕರಾ ಹಲ್ಲತಿಂತಾನ ಹಲ್ಲತಿಂತಾನವ್ವಾ
ಇಷ್ಟಕೇಳಿ ಲಕ್ಷ್ಮಣ ಮುಂದೆ ಬಂದು ನಿಂತಾನವ್ವಾ ॥ ಗೀಯಗಾ॥

ಇಬ್ಬರಿಗಿ ತೆಕ್ಕಿಮುಕ್ಕಿ ಬಿದ್ದೋ
ಒಬ್ಬನೊಬ್ರು ಒದರಿ ಸಿಪಾಯಿ ಓಡಿಹೋದಾ
ಲಕ್ಷ್ಮಣ ಬಿದ್ದಾನ
ಎದಿಮ್ಯಾಲ ಕೂತು ಇನ್‌ಸ್ಪೆಕ್ಟರ್ ಪಿಸ್ತೂಲ ಹಿಡಿದಾನವ್ವಾ ॥ ಗೀಯಗಾ॥

ಅವಸರ ಮಾಡಿ ನರಸ್ಯಾ ಓಡಿ ಬಂದಾ
ಕೊರಳಿಗಿ ಹಗ್ಗ ಒಗದಾ
ತೆಕ್ಕಿ ತೊಡಿ ಬಡದು ನೆಲಕ ಕೆಡಿವ್ಯಾನಾ
ಕುಡಗೋಲ ತಗಂದು
ಕರಾಕರಾ ಕುದರಿ ಕೋದಾನವ್ವಾ

ತೆಲಿ ತಗಂಡು ಹ್ವಾದ್ರಾ ಸಂಗಡಾಗಾ
ಇಟ್ಟಕೊಂಡೂ ಕೂತಾರ ಚಾವಡ್ಯಾಗ
ಜತ್ತಿಗ್ ಹ್ವಾದ್ರಾ ಬೆಳಗಾಗೂದ್ರೊಳಗಾ
ತಲಿ ಕಟ್ಟಿಬಂದ್ರು ಅಗಸ್ಯಾಗಾ
ಜತ್ತಿ ಅಗಸ್ಯಾಗಾ ॥ ಗೀಯಗಾ॥

ಪೌಜು ಬಂತು ಅವರ ಕಂಡಮ್ಯಾಗಾ
ಅವ್ರು ಇದ್ರು........ ತ್ವಾಟದಾಗಾ ಗಫಾರ್
ಸುದ್ದಿ ಕೇಳಿ ಬಿಟ್ಟರಲ್ಲಾ ಜಾಗಾ
ಆಗ ಹ್ವಾದ್ರಾ ಕುಮಟಗಿಯ ಮ್ಯಾಗಾ
ಜತ್ತಿ ಸಂಸ್ಥಾನ್ದಾಗೈತಿ ಸಣ್ಣಹಳ್ಳಿ ಸಿಂಧೂರಾ ॥ ಗೀಯಗಾ॥

ಹಾದು ಹ್ವಾದ್ರಾ .... ಮ್ಯಾಲ ...........
ಹೊಳ್ಳದಾಟಿದರ ಅಲ್ಲಿಯೇ
ಬಬಲಾದಿಯು ...... ಊರಾ ॥ ಗೀಯಗಾ॥

ಮುಂದ...... ಹಂಚನಾಳ ರಬಕವಿ ಗೌಣಾಪುರ
ಗಲಗಲಿಯ ಫೌಜ ಬೆನ್ನ ಹಿಡಿದಾ
ಊರಾ ನೋಡಾರ ಕುದರಿಮ್ಯಾಗಿಂದಾ ॥ ಗೀಯ ಗಾ॥

ಗಲಗಲಿಬಸ್ಯಾ ಮಾಡ್ಯಾನಿಂದೂ
''ಏನು ಮಾಡಿದ್ನಪ್ಪ? ''
.... ಮಾಡಿದಾರತಳ್ಳಿ ಕೇರಿಯಲಿಬಂದೂ.
ಒಬ್ಬ..... ರವನ ಮನಿ ಹಗಲ ದರೋಡಿ ಮಾಡಿದಾರವ್ವಾ ॥ ಗೀಯ ಗಾ॥

ಓದು ರೂಪಾಯಿ ಐವತ್ತು ಸಾವಿರ ... ಎಣಿಸ್ಯಾರ
ದಾರಿದಾರೀಲೆ ರೂಪಾಯಿ ಚಲ್ಲಿಹೋದವು ಹೊರಳಾಡ್ಯಾವು ॥ ಗೀಯ ಗಾ॥

ನಾಯಕಗೆ ಓದು ಕೊಟ್ಟಾರವ್ವಾ
ನಾಯಕಗೆ ಓದು ಕೊಟ್ಟಾರ
ಬೆಳ್ಳಿ ಬಂಗಾರ
ಕೊಳ್ಳ ಕಂಠೀಸರಾ ಹಂತೇಲಿದ್ದದ್ದೂ
ಸೂಜಿ ಮುರುಕ ಉಳಿದದಂಗ ತುಂಬಿದಾರ ಅದ್ನ ತಂದವ್ವಾ ॥ ಗೀಯ ಗಾ॥

ಸರ್ಕಾರ ತಪಾಸು ಇಟ್ಟಾರೂ
..... ಸಾಯಬ ತಂದ ಮೋಟಾರೂ
ಐದ್ನೂರ ಮಂದಿ ಪೋಲೀಸರು
ಬಿಡದಂಗೆ ಗುಡ್ಡ ಹುಡಕ್ಯಾರೂ
ಬಿಡದಂಗೆ ಗುಡ್ಡಿ ಹುಡಕ್ಯಾರವ್ವಾ ॥ ಗೀಯ ಗಾ॥

ಆ.... ಆ....
ಬೇಗದಲಿ ಬಂದ ಪೋಲೀಸರು ಹುಡುಕಿ ನೋಡ್ಯಾರೆ ಬಿಡದೆ
ಸಿಗಲಿಲ್ಲರಿ ಅವರಾ
ಜತ್ತಿ ಸಂಸ್ಥಾನದಾಗ್ಯೆತಿ ಸಣ್ಣಹಳ್ಳಿ ಸಿಂಧೂರಾ

ಅಮೀನಗಡದಿಂದ ಬಂದರಲ್ಲಾ ತಿರಗೀ
ಗಂಗೊಳ್ಳಿ ಚಿತ್ತರಗಿ ಹೊಳಿಯ ಆಚೀಕ
ಊರ ರೊಟ್ಟಿಯ ತರಸಿ ಕೂತಾರಲ್ಲಿ ಊಟಕ್ಕ ॥ ಗೀಯ ಗಾ॥

ಸುತ್ತಲಿನ ಹಳ್ಳಿ ಜನರವ್ವಾ
ಸುತ್ತಲಿನ ಹಳ್ಳಿ ಜನರಾ
ಹೋಳಿಗಿ ಅನ್ನ ಸಾರಾ
ತಂದಕೊಟ್ಟಾರ
ಅವರ ಊಟಕಾ
ರೊಟ್ಟಿ ಕೊಟ್ಟಾವರಿಗೆ ಮತ್ತ ಕೊಟ್ಟುಹೋದ್ರ ಬದುಕ್ಕಾ ॥ ಗೀಯ ಗಾ॥

ಅನ್ನ ಕೊಟ್ಟವರಿಗೆ ಉಣಿಸಿ ತಿನಿಸಿದವರಿಗೆ -
''ಏನು ಮಾಡಿದರು ?''
ಬಾಜೂಬಂದಿ ಸರಗಿ
ವಂಕಿ ನಾಗಮುರಗಿ ಹೆಣ್ಣು ಬಳಗಾಕಾ
ಆ ಲಕ್ಷ್ಮಣನ ಹೆಸರ ನೋಡಿ ಇಲ್ಲೀ ತನಕಾ ॥ ಗೀಯ ಗಾ॥

ಆ............. ಊರಾ
ಮುಂದ್ಹೊಳಿ ಹೊಸೂರಾ
ಸೀತಿಯಾ ಮನಿಗೆ ಹೋದರಾ....
........ ಹೊತ್ತ ದರೋಡಿ ಮಾಡ್ಯರಾ ದಿನಕಾ.
ಪುರದಾಗ ಸಿದ್ದಪ್ಪ ಸಾವ್ಕಾರ ಮನಿಯ ಮುತ್ಯಾರ
ಕಂಠಿ ಎಣಿಸ್ಯಾರ ಆರಸಾವಿರ ರೊಕ್ಕಾ

ರೂಪಾಯಿ ತಗೊಂಡ ಹೋದಾರ ಹೊಳಿಯ ಆಚೆಕಾ
ಸಂಪಗಾವಿ ಸಂಗೊಳ್ಳಿ ರಾಯಣ್ಣಾ
ಮುಂಡರಗಿ ಭೀಮಣ್ಣಾ
ಪುಂಡರಿದ್ದರು ಆಗಿನಾ ಕಾಲಕಾ.

ಇಂಗ್ಲೀಷರ ದರ್ಬಾರದಾಗಾ ಆ..........
ಲಕ್ಷ್ಮಣನ ಹಂಗ
ಶೂರರಿಲ್ಲರೀ ತಿಳಿರಿ ನಿಮ್ಮ ಮನಕಾ
ಅಂತ ವೀರ ಶೂರಗ ತಿಳಿರಿ ನಿಮ್ಮ ಮನಕಾ
ಧರ್ಮದಾ ರಕ್ಷಣಾ ಮಾಡ್ಯಾರವ್
ಧರ್ಮದಾ ರಕ್ಷಣಾ ಮಾಡ್ಯಾರಾ.
ಲಕ್ಷ್ಮಣ್ಣ ಎಷ್ಟುಮಂದಿ ಅನ್ನ ಕೊಟ್ಟಾರವ್ವಾ
ಅನ್ನ ಕೊಟ್ಟವರ್ಗ ಬಂಗಾರ ಬೆಳ್ಳಿ ಕೊಟ್ಟಾರವ್ವಾ ॥ ಗೀಯ ಗಾ॥

ಅನ್ನ ನೀರ ಸಾಯೇಬ ಬಿಟ್ಟಾರವ್ವಾ
ಲಕ್ಷ್ಮಣ್ಣ ಬೆನ್ನ ಹತ್ಯಾರ ॥ ಗೀಯ ಗಾ॥
ಆ...... ಸರಕಾರಕ ತಪ್ಪಸೋದಾರೂ ಸಿಗಲಿಲ್ಲರಿ ಅವರಾ
ಜತ್ತಿ ಸಂಸ್ಥಾನದಾಗ್ಯೆತಿ ಸಣ್ಣ ಹಳ್ಳಿ ಸಿಂಧೂರಾ ॥ ಗೀಯ ಗಾ॥

ಅವ್ರ ಮ್ಯಾಲ ಮುನದು ಸಂಕರ
ನಾಲ್ಕು ಪಟ್ಟು ಪಿತೂರಿ ಮಸಲತ್ತ ಮಾಡಸ್ಯಾನವ್ವಾ
ಸೇಂದಿ ಸೆರೆಯ ಕುಡಿಯಾಕೊಳ್ಳ
ದಿನಾ ಮೊದಲು ಮಾಡಿಸ್ಯಾವವ್ವಾ
ಹುಗ್ಗೀದನ್ನ ಸೇಷ್ಗಿ ಮಾಡಿಸ್ಯಾರ
ಕುಡಿಯಾಕೋದಾರ
ತಗೊಂಡ ವಾಲಿಕಾರನ ನಾಯ್ಕ ಬಂದಾನ
ಊಟ ಮಾಡ್ಸಿ ಉಳಕಿದವರ್ನ ಊರ್ಗೆ ಕಳಿಸ್ಯಾರವ್ವಾ ॥ ಗೀಯ ಗಾ॥

ನಾಯಕ ಒಬ್ಬ ಉಳದಾನ
ಕೈಯಾಗ್ಯ ಲಾಂಟಾನ
ಲಕ್ಷ್ಮಣ್ಣ ಕೊಟ್ಟಾನವ್ವಾ
ಮೊದಲ......... ಇಟ್ಟು ವಾಲೀಕಾರ......
ಬಗಲಾಗ ಗುಂಡ ಬಡೀತಲ್ಲಾ
ಬಗಲಾಗ ಗುಂಡ ಬಡೀತೂ

ಆತ ಭೌ... ಕೇಳಾ
ನಾಯ್ಕ ಓಡಿಹೋದ
ಲಕ್ಷ್ಮಣ ಬಿದ್ದಾನು
ಲಕ್ಷ್ಮಣ ಬಿದ್ದಾನವ್ವಾ
ಮೋಸಮಾಡಿ ಅಭಿಮನ್ಯುನ ಕೊಂದಂಗಾತು ಕೌರವನೂ
ತಿಳಿಯಲ್ದೇ ಮಂದಿ ಮಾತಾಡ್ಯಾರವ್ವಾ
ಲಕ್ಷ್ಮಣ ಸತ್ತಿದಾನ.... ಅಂತಾರವ್ವಾ
ಖಾದರ ಗೋಪಾಲ ತಪ್ಪಸೋದಾರೂ
ಲಕ್ಷ್ಮಣನ ಫಾಸಿ ಕೊಟ್ಟಾರವ್ವಾ ॥ ಗೀಯ ಗಾ॥

ದೇಶದೊಳಗ ಬಿದರಿಯ ಊರು
.... ಕೊಟ್ಟ ಪಾಂಡುರಂಗ ದೇವರೂ
ಜತ್ತಿ ಸಂಸ್ಥಾನದಾಗ್ಯೆತಿ ಸಣ್ಣಹಳ್ಳಿ ಸಿಂಧೂರಾ. ॥ ಗೀಯಗಾ॥

★★★★

# ಅನುಬಂಧ

## ರಣಬೈರೇಗೌಡ

ತಂದಾನಿ ತಾನ ॥ ಪಲ್ಲವಿ ॥

ರಣ ಬೈರೇಗೌಡ ಮಾರಾಯಾ ದೊರಿಮಗಾ* - ತಂದಾನಿ ತಾನಾ
ಬೈರೇಗೌಡ್ನ ಮನಿಯಾಗೆ ಏನೇನು ಇರುವದು ? - ತಂದಾನಿ ತಾನಾ
ಬೈರೇಗೌಡ್ನ ಮನಿಯಾಗೆ ಹೊನ್ನೀನ ಕಣಜಾವ್ವೂ - ತಂದಾನಿ ತಾನಾ
ಬೈರೇಗೌಡ್ನ ಮನಿಯಾಗೆ ಬಾನಾದಾ ಸೋಲೀಗೆ. - ತಂದಾನಿ ತಾನಾ
ಬಾನಾದಾ ಸೋಲೀಗೆ ಚಿನ್ನಾದ ಸಿವುಡಂತೇ - ತಂದಾನಿ ತಾನಾ
ಬೈರೇಗೌಡ್ನ ಮನಿಯಾಗೇ ರಾಗೀಯ ಕಲ್ಲೀಗೆ - ತಂದಾನಿ ತಾನಾ
ರಾಗೀಯ ಕಲ್ಲೀಗೆ ಕೋಣಾನ ಕಟಿಕಂಡೂ - ತಂದಾನಿ ತಾನಾ
ಕೋಣಾನ ಕಟಿಕೊಂಡು ರಾಗೀಯ ಬೀಸುತಾರೇ. - ತಂದಾನಿ ತಾನಾ
ಬೈರೇಗೌಡ್ನ ಮನಿಯಾಗೆ ಏಳು ಮಂದಿ ದಾದೇರೂ - ತಂದಾನಿ ತಾನಾ
ಬೈರೇಗೌಡ್ನ ಮನಿಯಾಗೆ ಬೇಕಂಬೋ ಅನ್ನಛತ್ರಾ - ತಂದಾನಿ ತಾನಾ
ಬೇಕಂಬೋ ಅನ್ನಛತ್ರ ಬೇಕಂಬೋ ಅರವಟ್ಟಿಗೇ. - ತಂದಾನಿ ತಾನಾ

ಒಂದಾಲೊಂದೂ ದಿನಾ ಬೈರೇಗೌಡ ಬೇಟೇಗ್ಹೋದಾ
ಬೈರೇಗೌಡಾ ಬೇಟೇಗೆ ಹೋದಾರೋ ದೊರಿಗಾಳೂ
ಸಾಕ್ಷಾತ್ ಪರಮಾತ್ಮ ಜೋಗಿಯವತಾರ ತಾಳಿಕಂಡೂ.

(ಅಪೂರ್ಣ)

* ಪ್ರತಿ ಸಾಲಿನ ಕೊನೆಯಲ್ಲಿ ಪಲ್ಲವಿಯನ್ನು ಹಾಡುವರು.

# ಪಿರಿಯಾ ಪಟ್ಟಣದ ವೀರರಾಜ

ತಂದನಾನ ತಂದನಾನ
ತಾನನ ತಂದೇನ
ತಂದನಾನ ತಂದಾನನ ತಾನನ ॥ ಪಲ್ಲವಿ ॥

ಪಿರಿಯಪಟ್ಟಣ ಆಳುತಿರುವನು
ಈರ್‍ರಾಜಿ ಅರಸು
ಬಿರುನಾಡಿಗೆ ಈರ್‍ರಾಜಿ ಅರಸಲ್ಲ*

ಬಾರೊ ಬಾರೊ ಎಳೆಯ ಈರ್‍ರಾಜಿ
ಅಯ್ಯಯ್ಯೊ ಮಡದಿ
ದೇಶಹೋಗ ದಿವಸ ನೋಡ್ಹೆಣ್ಣೆ.

ದೇಶಹೋದ ಜೋಕ ನೋಡ್ಹೆಣ್ಣೆ
ಅಯ್ಯಯ್ಯೊ ಮಡದಿ
ಸೀಮೆಹೋಗೊ ತರವ ನೋಡ್ಹೆಣ್ಣೆ.

ಎತ್ತಿನ ಸ್ವಾಮಿ ರಾಶಿಗೆ ಬರಲಾಗಿ
ಅಯ್ಯಯ್ಯೊ ಮಡದಿ
ಕೆಟ್ಟು ಹೋಯ್ತು ಅರಸು ಕುಲವೆಲ್ಲಾ.

ಕೆಟ್ಟುಹೋಯ್ತು ಅರಸು ಕುಲವೆಲ್ಲಾ
ಅಯ್ಯಯ್ಯೊ ಮಡದಿ
ಬಂದೆಹೋಯ್ತು ಬಾಳ ಬಡತನ.

ಬಾಳುವಂತ ಬದುಕೊ ಕಾಲದಲಿ
ಮಾರಾಣಿ ಮಗಳೆ
ಬಾಳುವಂತ ರೀತಿ ಬರಲಿಲ್ಲ.

---

* ಪ್ರತಿ ಪದ್ಯದ ಕೊನೆಯಲ್ಲಿ ಪಲ್ಲವಿಯನ್ನು ಹಾಡುವರು.

ಎತ್ತಿನಸ್ವಾಮಿ ರಾಶಿಗೆ ಬರಲಾಗಿ
ಅಯ್ಯಯ್ಯೊ ಮಡದಿ
ಓದುವಂತ ಕುಲದವ್ರಿಲವಲ್ಲೆ.
ಮುತ್ತುನ ಕ್ವಾಟೆ ಮುರಿದುಹೋಯ್ತಲ್ಲ್ಯೆ
ಅಯ್ಯಯ್ಯೊ ಮಡದಿ
ಬಂದವ್ರಂತ ಬವಣೆಸೋರಿಲ್ಲವಲ್ಲೆ?

ಪಿರಿಯಾಪಟ್ಟಣ ಅರಸೆ ಹೋಗುವೆನು
ಆಯ್ಯಯ್ಯೊ ಬರಿಯ
ನಗುತನಗುತ ಇರಿಯಾಕ್ಕೊರಟಲ್ಲೆ.

ಬದುಕು ಹೋಗಿ ಬಾಳು ಹೋದರೆ
ಅಯ್ಯಯ್ಯೊ ಮಡದಿ
ಬಂದವ್ರಂತ ಬವಣೆಸೋರಿಲವಲ್ಲೆ ?

ಕೆಟ್ಟುಕೆಟ್ಟು ಪಟ್ಟಣಕೋದರೆ
ಅಯ್ಯಯ್ಯೊ ಮಡದಿ
ಪಟ್ಟಣ ಹಾಳಾ ಕಂಡೆ ಇಲವಲ್ಲೆ.

ಪಟ್ಟಣ ಹಾಳಾ ಕಂಡೆ ಇಲವಲ್ಲೆ
ಮಾರಾಣಿ ಮಗಳೆ
ಪಟ್ಟಣ ಕುಟ್ಟುವ ಕಾಯಂ ಇಲವಲ್ಲೆ.

ನಿನ್ನಲೂ ನೀ ತಿಳಿದೆ ಹೋದಲ್ಲೆ
ಅಯ್ಯಯ್ಯೊ ಮಡದಿ
ಮೂರ್ಖಬೋದಿ ಬಿಡದೆ ಹೋದೆಲ್ಲಾ.

ಆಂಟುಬುದ್ಧಿ ಬಿಡಲು ಇಲವಲ್ಲೆ
ಅಯ್ಯಯ್ಯೊ ಮಡದಿ
ತವರುಮನೆಯ ಹಾಸ್ಯಮಾಡಬೇಡ.

ಪತಿಯು ಆಡಿದ ಮಾತ ಕೇಳಿಕಂಡು
ಅಯ್ಯಯ್ಯೊ ಮಡದಿ
ಕಡಗಣ್ಣಲ್ಲೆ ಕಣ್ಣೀರ ಕೆಡಗವ್ಳೆ.

ಕಡೆಗಣ್ಣಲ್ಲೆ ಕಣ್ಣೀರ ಕೆಡಗವ್ಳೆ
ಮಾರಾಣಿ ಮಗಳು
ರಾಯನ ಕೊರಳ ಬಾಚಿತಬಕಂಡು.
ಅಗ್ನಿ ಒಳಗೆ ಹೋಗಿ ಬರುವೆನು
ಅಯ್ಯಯ್ಯೊ ಬರಿಯ
ಹದಿನಾರು ವರ್ಷ ಅಣ್ಣ ಇರುವನು.

ಅಪೂರ್ಣ

★★★★

## ಕೆಂಪೇಗೌಡನ ಕಾಲುಚಿಟುಗು ಕೋಲು ಪದ

ಕೋಲು ಕೋಲನ್ನ ಕೋಲೆ
ಕೋಲು ಕೋಲನ್ನ ಕೋಲು ಕೋಲೆ ॥ ಪಲ್ಲವಿ ॥

ಮಾಗುಡಿ ಕೆಂಪಣ್ಣಗೌಡ*
ಮಾತ್ನಲ್ಲಿ ಬಲುಶೂರ
ಮಾತ್ನಲ್ಲಿ ಗೆದ್ದ ಮಾಗುಡೀಯ ॥ ಪ॥

ಕಾಯಿ ಸೊಪ್ಪಾನೆ ತಿಂದು
ಮಾಗುಡಿ ಕೆಂಪಣ್ಣಗೌಡ
ಕೆಂಪೋಂಬುಧಿಯೆಂಬ ಕರೆಕಟ್ಟಿ ॥ ಪ॥

ಬಳ್ಳಿ ಸೊಪ್ಪಾನೆ ತಿಂದು
ಮಾಗುಡಿ ಕೆಂಪಣ್ಣಗೌಡ
ಹಾರೂವ್ರ ಮಲ್ಲಿ ಜೀತಮಾಡಿ ॥ ಪ॥

ಹಾರೊವ್ರ ಮಲ್ಲೆ
ಜೀತಮಾಡ್ಕ್ಯಂಬಂದ ಗೌಡ
ಏಳ ಸೇರ್ನ ಬುತ್ತಿ ಹೆಗಲಮೇಲೆ ॥ ಪ॥

ಬಾಳೀಯ ತೋಟಕ್ಕೆ
ಹೋಗ್ತಾನೆ ಕೆಂಪಣ್ಣಗೌಡ
ಭೂಮೀಗೆ ಬುತ್ತಿ ಬಿಡುತಾನೆ ॥ ಪ॥

ಭೂಮೀಗೆ ಬುತ್ತಿ
ಬಿಡ್ತಾನೆ ಕೆಂಪಣ್ಣಗೌಡ
ಎತ್ತೊ ಬೆದರ್ಯಾವೆ ಗಗನಕೆ ॥ ಪ॥

ಗಗನಕೆ ಕೆಂಪಣ್ಣಗೌಡ
ಬಾಳೀಯ ಮರದ ನೆರಳಲ್ಲಿ ॥ ಪ॥

ಬಾಳೀಯ ಮರದಾ
ನೆರಳಲ್ಲಿ ಕೆಂಪಣ್ಣಗೌಡ
ನಿದ್ದೆ ಮಾಡ್ತಾನೆ ಕೆಂಪೆಗೌಡ
ನಿದ್ದೆ ಮಾಡ್ತಾನೆ ಕೆಂಪೆಗೌಡ. ॥ ಪ॥

★★★★

* ಪ್ರತಿ ಸಾಲನ್ನೂ ಎರಡೆರಡು ಬಾರಿ ಮುಮ್ಮೇಳದವರೂ ಹಿಮ್ಮೇಳದವರೂ ಹಾಡುತ್ತಾರೆ

# ಮಾಗಡಿ ಕೆಂಪೇಗೌಡನ ಜಂಪುಕೋಲು ಪದ

ಕೋಲು ಕೋಲು
ಕೋಲು ಕೋಲಣ್ಣ ಕೋಲು ಕೋಲೆ
ಕೋಲಣ್ಣ ಕೋಲೆ
ಕೋಲು ಕೋಲಣ್ಣ ಕೋಲು ಕೋಲೆ ॥ ಪ ॥

ಆನೇಯ ಕಾಬ್ಲೀಗೆ
ಬಿಡದೀನೆ ದಾರಿ ಮಾಡಿ
ರಾಯಾ ಕೆಂಪಣ್ಣ ಬರುತಾನೆ ॥ ಪ ॥
ರಾಯಾ ಕೆಂಪಣ್ಣ ಬರೂತಾನೆ ॥ ಪ ॥

ಆನೇಯ ಕಾಬ್ಲೀಗೆ
ಬರುವಾ ಕೆಂಪಣ್ಣಗೆ
ಕೆಂಧೂಳಿವಳಗೆ
ಬರುವಾ ಕೆಂಪಣ್ಣಗೆ ॥ ಪ ॥

ಮಾಗುಡಿ ಕೆಂಪಣ್ಣ
ಬೆಂಗಳ್ಳೂರು ಪ್ಯಾಟೆಗೆ ಬಂದು
ರಂಗಾನ ಪೂಜೆ ಮಾಡಿಸೀದ ॥ ಪ ॥
ರಂಗಾನ ಪೂಜೆ ಮಾಡಿಸೀದ ॥ ಪ ॥

ರಂಗಾನ ಪೂಜೆ
ಮಾಡ್ಸಿ ಕೆಂಪೇಗೌಡ
ಧರ್ಮಾದ ಕೊಳ ಕಟ್ಟಿಸ್ತಾನೆ ॥ ಪ ॥
ಧರ್ಮಾದ ಕೊಳ ಕಟ್ಟಿಸ್ತಾನೆ ॥ ಪ ॥

ಧರ್ಮಾದ ಕೊಳವ
ಕಟ್ಸೀಗ ಶ್ರೀರಂಗ
ಸೋಮೇಶ್ವರನ ಗುಡಿಗೆ ಬಂದನೀಗ ॥ ಪ ॥
ಸೋಮೇಶ್ವರನ ಗುಡಿಗೆ ಬಂದನೀಗ ॥ ಪ ॥

ಸೋಮೇಶ್ವರನನ್ನೂ
ಗುಡಿಗೀಗ ನೆಲೆತಂದು
ರಂಗಾನ ಪೂಜೇಯ ಮಾಡಬೇಡಿ ॥ ಪ ॥
ಶ್ರೀರಂಗಾನ ಪೂಜೇಯ ಮಾಡಬೇಡಿ ॥ ಪ ॥

ಶ್ರೀರಂಗಾನ ಪೂಜೆ
ಮಾಡಬೇಡಿರೆಂದು
ಅವನೀಗ ಬೀಗ ಜಡುದಾನೆ ॥ ಪ ॥
ಅವನೀಗ ಬೀಗ ಜಡುದಾನೆ ॥ ಪ ॥

ಮಾಗುಡಿ ರಂಗನ
ಮಾಗುಡಿ ತಾನೀಗ
ಬಿಟ್ಟೂ ಬಾಗಿಲಿಗೆ ಬರೂತಾನೆ ॥ ಪ ॥
ಬಿಟ್ಟೂ ಬಾಗಿಲಿಗೆ ಬರೂತಾನೆ. ॥ ಪ ॥

★★★★

# ಅರ್ಥಕೋಶ

ಅಂಕ - ಅಂಕಣ
ಅಂಕನ ಪೋರ್ಟಂದ - ?
ಅಂಗಣ ಮುಂಗಣ - ?
ಅಂಬಾಲಿ - ಅಂಬಲಿ
ಅಗಣಿ - ಅಗಳಿ
ಅಗಸ್ಯಾಗ - ಊರು ಚಾವಡಿ
ಅಡ್ಡಮೊರಗ - ಅಡ್ಡ ಮಾರ್ಗ
ಅಡುಗೆತೆ - ನಾಶ
ಅಣ್ಣುಹೋಗಿ - ?
ಅದ್ಯಾರೋ - ಹಗೆಸಾಧಿಸುವ
ಅದುಗಿದ - ಅಪ್ಪಚ್ಚಿಯಾಗುವಂತೆ ಮೇಲೆ ಬೀಳು
ಅನ್ನುನ - ಅನ್ನುವವನನ್ನು
ಅಪಸತ್ಯ - ಅಸತ್ಯ
ಅಬ್ಬುರಸಿ - ಅರ್ಭಟಿಸಿ
ಅರಿಯಾಗಿ - ಶೂರ
ಅವಶಕುನ (ಅವಸಕನ) - ಅಪಶಕುನ
ಆಕಾಸವೇಣಿ - ಮುದ್ದುಮಗುವಿನ ವಿಶೇಷಣ ?
ಆಗೂಗಂಟ - ಆಗುವ ತನಕ
ಆಚುಗೆ - ಆಚೆಗೆ, ಹೊರಕ್ಕೆ
ಆಡು - ಮೇಕೆ
ಆನೆವಾನ - ಆನೆ ವಾಹನ
ಆವತಿ - ಆಹುತಿ
ಆವತ್ತು - ಆ ದಿನ, ಅಂದು
ಆರ - ಆಹಾರ
ಆಲ ಅಬ್ಬರಿಸು (ಆಲಬ್ಬರಿಸು) - ಆರ್ಭಟಿಸು
ಆಯುದ ಮುಸ್ತಾಪ - ಆಯುಧ ಸಾಮಗ್ರಿ
ಇಟಕತ್ತಾರೆ - ಇಟ್ಟುಕೊಳ್ಳುತ್ತಾರೆ
ಇಡುದವಳೆ - ಪುಡಿ ಮಾಡಿದ್ದಾಳೆ
ಇದ್ದ - ಯುದ್ಧ

ಇದ್ಯ - ವಿದ್ಯೆ
ಇರಂಗಲ್ಲಾ - ಇರಲಿಲ್ಲ
ಈಚರಿ - ಈ ಕಡೆಗೆ
ಈಜು ಬಾಕು - ಒಂದು ಬಗೆಯ ಬಾಕು
ಈಸಿಗಂಡು (ಈಸುಗಂಡು, ಈಸ್ಕೊಂಡು) - ಈಸಿಕೊಂಡು, ತೆಗೆದುಕೊಂಡು
ಉಕ್ಕಡ - ಸುಂಕದಕಟ್ಟೆ
ಉಚ್ಚೀದ - ಬಿಚ್ಚಿದ, ಕಳಚಿದ, ಹೊರತೆಗೆದ
ಉತ್ತರಾಸಿ - ಬಾಗಿಲ ಚೌಕಟ್ಟಿನ ಒಳಗಡೆಗೆ ಮುಂಚಾಚಿದ ಮೇಲುಭಾಗ, ಗಂಧವಟ್ಟಿಗೆ
ಉಬ್ಬುಸು - (ಸಾಮರ್ಥ್ಯಕ್ಕೆ ಮೀರಿದ್ದನ್ನು ಮಾಡುವಂತೆ) ಹುರಿದುಂಬಿಸು, ಕೈಯಲ್ಲಾಗದಿದ್ದರೂ ಆಗಬಹುದೆಂದು ಉತ್ಸಾಹತುಂಬುವುದು.
ಉರಚಿ - ?
ಉರಿಯು ಬಣ್ಣ - ಕೆಂಪು ಬಣ್ಣದ ಸೀರೆ
ಉಳಬಳಕೆ ಬರುವುದಿಲ್ಲ (ಉಳಿಬಾಳಿಕೆ) - ಉಳಿಗಾಲ ಆಗಿ ಬರುವುದಿಲ್ಲ.
ಉಳ್ಳುಸಿ - ಉರುಳಿಸಿ
ಊಡು - ಉಣಬಡಿಸು, ಕುಡಿಸು
ಎಂಟ್ದಿಸಾ - ಎಂಟು ದಿವಸ
ಎಚ್ಚಾಯಗೊಳು - ಸಂತೋಷಗೊಳ್ಳು
ಎಡವುಗಲ್ಲು - ಎಡವಿದ ಕಲ್ಲು, ಹೂತಿರುವ ನಿಧಿಯನ್ನು ಅದೃಷ್ಟವಂತನಿಗೆ ದೊರಕಿಸಿಕೊಡುತ್ತದೆಂದು ನಂಬಿರುವ ಕಲ್ಲು.
ಏಡೊತ್ತು - ಎರಡು ಹೊತ್ತು
ಎತ್ತಿನ ಸ್ವಾಮಿ - ?
ಎದವಿ (ಎಧವಿ) - ವಿಧವೆ
ಎರುಗಳಾ - ಇರುವೆಗಳಾ
ಎಲಿಹಿಡಿ - ಎಲೆಹಿಡಿ, ವೀಳ್ಯಪಡೆ, ಪಂಥಸ್ವೀಕರಿಸು
ಎಳಿಗಂಟ - ?
ಎಳುನಾಗು - ಎಳೆಯ ನಾಗರಹಾವು
ಏಕಿ ಏಕಿ (ಏಕಾಏಕಿ) - ಬೇಗ, ಒಮ್ಮೆಲೆ, ಇದ್ದಕ್ಕಿದ್ದಂತೆ
ಏಳುಸಲಿ - ಎಬ್ಬಿಸಲಿ, ಎಚ್ಚರಿಸಲಿ
ಐಸ್ವುರ್ಯ - ಐಶ್ವರ್ಯ
ಒಂಟೂರಿ - ಒಂದು ಬಗೆಯ ನಗಾರಿ
ಒಜ್ಜ - ಒಜ್ಜೆ, ಭಾರ
ಒಣುಕಲ್ಲಿ - ಒನಕೆಯಲ್ಲಿ
ಒಪ್ಪಳೆ - ಹೊಪ್ಪಳೆ
ಒಪ್ಪುದೇರೆ - ಒಪ್ಪದಿದ್ದರೆ

ಒಳುಸೋಗಾ - ?
ಓದಿಟ್ಟು - ಒಯ್ದು + ಇಟ್ಟು , ಒಯ್ದು ಇಡು
ಕಂಚಿನೊಳಗೆ - ಕನಸಿನೊಳಗೆ
ಕಂಠಿ - ಕಂಠಿರಾಯ ವರಹ, ಹಣ, ಒಂದು ನಾಣ್ಯ
ಕಕ್ಕಡ - ದಪ್ಪಬತ್ತಿಯುಳ್ಳ ದೀವಟಿಗೆ
ಕಟ್ಟೆಕಡೆಗಾಲ - ಕೊನೆಗಾಲ, ಅಂತ್ಯಗಾಲ
ಕಟ್ಟು ಚಾಕರಿ - ಅಡವಿಯಲ್ಲಿ ಸಿಗುವ ಸೊಪ್ಪು ಸೌದೆ ಹುಲ್ಲು ಪೊರಕೆಕಡ್ಡಿ ಮೊದಲಾದ ವಸ್ತುಗಳನ್ನು ಕಟ್ಟಿಕೊಂಡು ಬಂದು ಮಾರಾಟ ಮಾಡುವ ಉದ್ಯೋಗ
ಕಠಾರಿ ಕಾಳಗ - ಕಠಾರಿ ಆಯುಧದಿಂದ ಯುದ್ಧ ಮಾಡುವುದು
ಕಡಗರದ ಚೋಧಿ - ?
ಕಡುಗಾಳೊ - ಹೊರಟಳು
ಕಡುಬಾಯ - ಕಟಬಾಯಿ
ಕರ್ಣ (ಕರ್ಣ, ಗನ್ನ) - ?
ಕರ್ಣ ಇಡುವ - ಕರುಣೆಯಿಂದ ನೋಡುವ
ಕತ್ತಿ - ಬೆಂಕಿ ಹತ್ತಿ, ಬೆಂಕಿ ಬಿದ್ದು
ಕತ್ತಿ ಭರತಿ - ?
ಕಲಕಟ - ಕಲ್ಲು ಕಟ್ಟೆ
ಕಲಿಮೊಕ - ಕಳೆಯಾಗಿರುವ ಮುಖ
ಕಲಿರಂಬೊ - ಅಲಂಕರಿಸಿದ ಕಳೆಯಿಂದ ಕೂಡಿದ
ಕಲ್ಲಾಣ - ಕಲ್ಯಾಣ
ಕರಿ ಅನ್ನ - ?
ಕರಿ ಚೀಕು - ?
ಕರೆ (ಕರಿ) - ದಂಡೆ, ತೀರ
ಕಸಗೊಂಡ - ಕಿತ್ತುಕೊಂಡ
ಕಸದು - ಕಸಿದು, ಜಾರಿ
ಕಸುವ - ಕಸರತ್ತು, ಪ್ರದರ್ಶನ
ಕಾಕೋಳಿ - ಕಾಡುಕೋಳಿ
ಕಾಗೆವಾನ - ಕಾಗೆಯನ್ನು ವಾಹನವಾಗಿ ಉಳ್ಳವನು, ಶನಿ
ಕಾಯಿದೋದ - ಕಾಯದೆ ಹೋದ, ರಕ್ಷಿಸದೆ ಹೋದ
ಕಾಲುಚಾಪ - ಕಾಲಕ್ಷೇಪ
ಕಾಲುಚಿಟುಕು - ಕೋಲಾಟದ ಒಂದು ಬಗೆ
ಕ್ಯಾಣ - ಕೋಪ
ಕ್ವಾರಣ್ಯ (ಕೋರಣ್ಯ) - ಭಿಕ್ಷೆ
ಕ್ವಾಸ್ಟ್ಯ - ಕುಷ್ಠರೋಗ

ಕಿಚ್ಚಟ್ಟಿ - ಕಿಚ್ಚುತಟ್ಟಿ
ಕಿರಳು ಮರಳಲ್ಲ - ?
ಕೀಲು ಬಂದಿ - ?
ಕುಂಚಕ - ಕುಂಚಿಕೆ, ಕಿವಿ ಮುಚ್ಚುವ ಹಾಗೆ ಕಟ್ಟುವ ಕುಲಾವಿ
ಕುಂಡಿ - ಪೃಷ್ಠ
ಕುಟ್ಟುಕೂಲಿ - ಸಂಸಾರಸ್ಥರ ಮನೆಯಲ್ಲಿ ಕೊಟ್ಟಣ ಕುಟ್ಟುವುದರಿಂದ ಪಡೆಯುವ ಕೂಲಿ
ಕುಡಿಯಾರಾ - ಕುಡಿಯುವಷ್ಟಾದರೂ
ಕುಪಾರಿ - ?
ಕುಪ್ಪರಿಕೆ - ಕೊಪ್ಪರಿಗೆ
ಕುರವು - ?
ಕುಳಿಯಮ್ಮ - ಕೂರಮ್ಮ, (ಮೇಲಕ್ಕೆದ್ದು) ಕುಳಿತಿಕೊ ಅಮ್ಮ
ಕೆಂಚಿ ಜಾರಿ - ?
ಕೆಡೀಬೇಡಿ - ಕೆಡವಬೇಡಿ, ಬೀಳಿಸಬೇಡಿ
ಕ್ಷೇಮಣೆ - ಕ್ಷೇಮ
ಕೊಳಗದಂಬಿಟ್ಟು - ಕೊಳಗ + ತಂಬಿಟ್ಟು, ಕೊಳಗದ ಆಕಾರದ ತಂಬಿಟ್ಟು
ಕೊಳ್ಳಿ - ಕೊಡಲಿ, ಒಂದು ಆಯುಧ
ಕೋದಾರು - ಕೊಯ್ದರು
ಕೋರೀರು - ?
ಖಬರಿಲ್ಲ - ಸುದ್ದಿಯಿಲ್ಲ
ಖಾನೆ - ಮುಚ್ಚಳವಿರುವ ಪೆಟ್ಟಿಗೆ
ಗಂಟಾಲಕ್ಸರಕ - ಗಂಟಲ ಅಕ್ಷರಕ್ಕೆ
ಗಜ ಮುತ್ತಿನರುಮಾನೆ - ದೊಡ್ಡ ಮುತ್ತಿನಿಂದ ಅಲಂಕರಿಸಿದ ಅರಮನೆ
ಗದ್ದಲಿಸಿ - ?
ಗರಡುಮೀಸೆ - ಒಂದು ಬಗೆಯ ಮೀಸೆ
ಗರುಗಾತಿ - ಗರ್ವಿಷ್ಠೆ
ಗವಲು - ಘಮಲು, ಸುವಾಸನೆ
ಗಾಡ - ಗಾಡಿಕಾರ, ಇಂದ್ರಜಾಲಿಕ
ಗ್ನಾಪನೆ - ಜ್ಞಾಪಕ
ಗುಂಗಲ - ಒಂದು ಪ್ರದೇಶ
ಗೂಡು - (ದನಗಳನ್ನು ಕೂಡುವ) ದೊಡ್ಡಿ
ಗೂಡುಗಾಣೆ - ಗೂಡಿನಿಂದಲೇ
ಗೆದ್ದಬಲ್ಲೀಯ - ಗೆದ್ದು ಬರುತ್ತೀಯಾ
ಗೇದರೂವಿ - ಗೇಯ್ದರೂ
ಗೊಂಡೆರಾಜ್ಯ - ?

ಗೊರಲಕೆಮ್ಮು - ಗೂರಲು ಕೆಮ್ಮು
ಗೋಳಟ್ಟಿ - ಗೋಳು ತಟ್ಟಿ, ಗೋಳು ಅಟ್ಟಾಡಿಸಿ
ಗೌರ - ಗೌರಾಂಗ, ಗೌರವರ್ಣ
ಗೌಸನ್ನ - ?
ಗೌಳಿ - ಹಲ್ಲಿ
ಘಲ್ನೆ - ಥಟ್ಟನೆ
ಚಂದ್ರಾಯಿದ - ಚಂದ್ರಾಯುಧ, ಚಂದ್ರನ ಆಕಾರದ ಆಯುಧ
ಚಂದ್ರಾಯ ಪೂಜೆ - ಚಂದ್ರಾಯುಧಕ್ಕೆ ಮಾಡುವ ಪೂಜೆ
ಚಂದುರ - ಚಂದಿರ, ಚಂದ್ರ, ಕುಂಕುಮ
ಚರ್ಮಚಿತ್ರ - ಹುಲಿಯ ಚರ್ಮದ ಚಿತ್ರ, ವ್ಯಾಘ್ರಾಜಿನ
ಚಿಕ್ಕುಶಾಸ್ತ್ರ - ಶಕುನಗಳ ಪ್ರಕಾರ ಭವಿಷ್ಯವನ್ನು ಊಹಿಸುವ ಒಂದು ಶಾಸ್ತ್ರ
ಚಗರೀಲಿ - ಬಾನಿಯಲ್ಲಿ, ನೀರಿನ ದೊಡ್ಡ ಪಾತ್ರೆಯಲ್ಲಿ
ಚಿತುರ ಕಡೆಯೋರು - ಚಿತ್ರ ಕೆತ್ತುವವರು
ಚಿತುರುಕಲ್ಲು ದುರುಗ - ಚಿತ್ರಕಲ್ಲುದುರ್ಗ, ಚಿತ್ರದುರ್ಗ
ಚಿತುರ ಬೆಟ್ಟ - ಚಿತ್ರ ಬೆಟ್ಟ
ಚಿನುಮಯ - ಚಿನ್ಮಯ
ಚೂಚನೆ - ಸೂಚನೆ
ಚೊಂಗಾಕಿದ - ಬಿಗಿಯಾಗಿ ಕಟ್ಟಿದ್ದ
ಜಂತ - ಪನ್ನ, ಅಗಲ
ಜಂಪು ಕೋಲು - ಕೋಲಾಟದ ಒಂದು ಬಗೆ
ಜಗಳ - ಯುದ್ಧ
ಜರತಕೊಂಡು - ಸೊರಗು, ಕುಗ್ಗು, ಬಡವಾಗು
ಜಾಗಿರಿ - ಜಹಗೀರು
ಜಾಟಗಿತ್ತಿ - ಮಾಯಗಾತಿ
ಜಾನ - ಧ್ಯಾನ
ಜುಗುವೀನ - ?
ಜೂಜುವಾಲೆ - ?
ಡಮ್ಮು - ?
ತಗದು - ಕೊಂದು
ತಗ್ಗಲ್ಹುಳ್ಳಿ - ಜೊಳ್ಳು ಹುರುಳಿ, ಚೀಕಲು ಹುರುಳಿ
ತಣಗೆ - ತಣ್ಣಗೆ, ಊಟದ ತಟ್ಟೆ
ತತ್ತೀಯ - ?
ತಪಸವರೆ - ತಪಸ್ಸು ಮಾಡಿದ್ದಾರೆ
ತಪಾಸು - ಹುಡುಕು

ತರುಬಿ - ಅಡ್ಡಗಟ್ಟಿ
ತಲಗೂವಲ್ಲ - ಅಲುಗಾಡುವುದಿಲ್ಲ
ತಲೆತಗಸು - ತಲೆಯನ್ನು ತೆಗೆಯಿಸು, ತಲೆಯನ್ನು ಕತ್ತರಿಸು
ತಳವಿದ್ದು - ತಂಗಿದ್ದು
ತಳ್ಳಿ - ಫಿರ್ಯಾದು, ದೂರುಕೊಡು
ತ್ರವಸಿರು - ತಪಸ್ಸಿನಲ್ಲಿರು
ತಾಯಿತಿನಕೊಂಡೆ - ತಾಯಿಯನ್ನು ಕಳೆದುಕೊಂಡೆ
ತಾಳಿಂದಲು - ಮೊದಲಿನಿಂದಲೂ
ತಿರಕಾಬಂದು - ಭಿಕ್ಷೆಬೇಡಿ ಬಂದು
ತಿರವಕೊಂಡು - ಹಿಂದಿರುಗಿಸಿಕೊಂಡು, ಅಟ್ಟುಕೊಂಡು ಬಂದು
ತಿರುನಾಕಬುಟ್ಟ - ತಿರುವಿಹಾಕಿದ, ಅಗತೆ ಮಾಡಿದ, ಮಗುಚಿ ಹಾಕಿದ,ಮಣ್ಣನ್ನು ಅಡಿ ಮೇಲಾಗುವಂತೆ ಮಾಡಿದ.
ತಿರುಮಲೆಲ್ಲಿ - ತಿರುಮಲೆಯಲ್ಲಿ, ಶ್ರೀಮಲೆಯಲ್ಲಿ
ತಂಬಕ್ಕುವಿ - ತುಂಬುವ
ತುತ್ತುಕಳಚು - ತಿನ್ನು
ತೆಕ್ಕ ಮುಕ್ಕಿ ಬಿದ್ದು - ತೆಕ್ಕ ಮುಕ್ಕಿ ಬೀಳು, ಬಿಗಿಯಾಗಿ ಅಪ್ಪಿಕೊಳ್ಳು
ಗೊಂಬೆ ತೇರು - ಗೊಂಬೆಗಳಿಂದ ಅಲಂಕರಿಸಿದ ಚಿತ್ತಾರದ ತೇರು
ತೊರಸಬುಟ್ಟು - ತೊರೆಯುವಂತೆ ಮಾಡಿ
ದಂಡುಕ - ಹತ್ತಿರಕ್ಕೆ
ದಸ್ತೂರಿ - ಒಂದು ಬಗೆಯ ಚೂರಿ, ಚಾಕು
ದಗಬಾಯ (ಧಗಬಾಯ) - ಬಿಟ್ಟ ಬಾಯಿ ಬಿಟ್ಟಂತೆ
ದಾವಾರುದಮ್ಮ - ?
ದಾಸಾಗೋಯ್ತು - ಕೈತಪ್ಪಿ ಹೋಯಿತು ?
ದಿಬ್ಬಿಲ್ಲಿ - ದಿಬ್ಬದಲ್ಲಿ, ದಿಬ್ಬಕ್ಕೆ
ದಿರಳಿ ಮದರಂಗಿ - ಭಯಹುಟ್ಟಿಸುವ ಪಟ್ಟಣ ?
ದುಂದವಾಗಿರು - ಹೆಚ್ಚಾಗಿರು
ದೇವುಗಿರಿ - ದೇವರಗಿರಿ, ಚಾಮುಂಡಿ ಬೆಟ್ಟ
ದೈಯ ದೈಯ ಮಾನವರು - ದೇವ ಮಾನವರು
ಧೂಪಾರ್ತಿ (ದೂಪೌರ್ತಿ) - ?
ಧೂಳಸಾಪ - ಧೂಳುಶಾಪ, ಕೋಪದಿಂದ ಧೂಳು ಎರಚಿ ಶಾಪಕೊಡುವುದು
ನಡಗಾಡ - ನಡುಕಾಡು, ಕಾಡಿನ ನಡುವೆ
ನಡಿಗೆ - ನಡುವಿಗೆ, ಸೊಂಟಕ್ಕೆ
ನತ್ತಿ - ನೆತ್ತಿ
ನನಗೀಸ - ನನಗೆ ಈಸ, ನನಗೆ ಇಷ್ಟು

ನರುಳು (ನರ್ಹುಳು) - ನರಹುಳು, ನರಮನುಷ್ಯ
ನಾಕರ ಸರಿ - ನಾಲ್ಕು ಜನರಂತೆ
ನಾಗ ಮುರಗಿ - ನಾಗರ ಹಾವಿನ ಆಕಾರದ ತೋಳಿನ ಆಭರಣ
ನಾಲಿಗೂವಾಸಿಗುಳಿ - ?
ನಿರಮಲಕೆ - ನಿರ್ವಾಣ, ಬೆತ್ತಲೆ
ನಿರಿಗೋಳು (ಗಿರಿಗೋಳು) - ನಿಡಿದಾದ ಗೋಳು, ಕಡುದುಃಖ
ನಿರುಬಂದ - ನಿರ್ಬಂಧ
ನೀರುಬಾಸೆ - ನೀರು ಭಾಷೆ, ನೀರನ್ನು ಮುಟ್ಟಿ ಪ್ರಮಾಣ ಮಾಡುವುದು
ನೀಳದಲ್ಲಿ - ?
ನೆಪ್ಪು - ನೆನಪು
ನೆರಿ - ನೆರೆ, ಒದಗು
ನೇತ್ರ - ನೆತ್ತರ, ರಕ್ತ
ನೇಮುಸಿದ - ಕೂಡಿಹಾಕಿದ
ನೋಡವು - ನೋಡೋಣ
ಪಟ ಮುತ್ತಿನರುಮನೆ - ?
ಪಡಗಡೆ - ಪಡುವಲ ಕಡೆ, ಪಶ್ಚಿಮ ದಿಕ್ಕು
ಪಣ್ಣವಾಹ - ಪುಣ್ಯಾಹ ?
ಪರ್ತಾಪಪುರಿ - ಪ್ರತಾಪ ಪುರಿ
ಪರಕಾರ - ಪ್ರಕಾರ
ಪರಾಯ - ಪ್ರಾಯ
ಪರುಧಾನಕೆ - ಪ್ರಧಾನಿ ಪಟ್ಟ
ಪರಿವಾಣ - ಹರಿವಾಣ, ತಟ್ಟೆ
ಪಾದ್ರಾಕ್ಷಿ - ಪಾದರಕ್ಷೆ, ಪಾದತ್ರಾಣ, ಚಪ್ಪಲಿ
ಪಾಪಾಸು - ಜೋಡು, ಚಪ್ಪಲಿ
ಪಾರ - ಪಹರೆ
ಪ್ರಾವ - ಪಾದ ?
ಪೌದಿ - ಕಪ್ಪ
ಫಾಸಿ - ಗಲ್ಲು ಶಿಕ್ಷೆ
ಬಂಗ (ಭಂಗ) - ಬಡತನ, ಕಷ್ಟ, ಹೀನಸ್ಥಿತಿ
ಬಂದನ - ಬಂದಿವೆ
ಬಂಟೆ - ಬಂಟ
ಬಗ್ಗಾನೆ (ಬಗ್ಗನೆ) - ಕೂಡಲೆ
ಬಡಿಗೇರೆ - ಬಡಗಿ ಕೆಲಸ ಮಾಡುವವರು, ಮರಗೆಲಸದವರು
ಬಡವಾರದ - ಒಂದು ಊರು, ಮರಗೆಲಸ ಮಾಡು ?

ಬಡಿಗಾರ್‍ರೆ - ಒಂದು ಊರು ?
ಬಡ್ಡೀಗೆ - ಕೆಳಕ್ಕೆ, ಅಡಿಗೆ
ಬದಕನೆ (ಬದಕ್ಕನೆ) - ದಡಕ್ಕನೆ, ಇದ್ದಕ್ಕಿದ್ದಂತೆ
ಬದುನಾಲಾಕಿ - ಬದನೆಕಾಯಿ ಹಾಕಿ
ಬಯ್ಲು ಮಾಡಿ - ಬಯಲು ಮಾಡಿ, ಇಲ್ಲವಾಗಿಸಿ
ಬರೆಯು - ಬರಹ
ಬಲಚಾರಕೆ - ಬಲಗಡೆಗೆ
ಬವಮ್ಮಾನ - ಬಹುಮಾನ
ಬಸಮಂಗ - ಭಸ್ಮಾಂಗ
ಬ್ರತುಗೆಡು - ವ್ರತಗೆಡು
ಬಾಂದರ್ರ - ?
ಬಾಜುಬಂದಿ - ತೋಳಿಗೆ ಧರಿಸುವ ಆಭರಣ
ಬಾಣತ್ರಿ - ಬಾಣಂತಿಯರ
ಬಾಯಾಗಹುಲ್ಲು ಹಿಡಿ - ಹುಲ್ಲುಕಚ್ಚು, ಶರಣಾಗು
ಬಾಯ್ಗಾಣೆ - ಬಾಯಿಯಿಂದ
ಬಾಲಚಿಕ್ಕಿ - ಧೂಮಕೇತು
ಬಾಸೆ - ಭಾಷೆ, ಪ್ರಮಾಣ
ಬಿನ್ಯಾಕೆ - ಬಿನ್ನಹಕ್ಕೆ
ಬಿರದುದೊಡಿಯ - ?
ಬುಡತಿ - ಬಿಡತಿ, ಬಿಡುವು
ಬೆಂಗಳಕಾಡು - ಬೆಂದಕಾಡು
ಬೆಮ್ಮನುಸಿ - ಬಿಮ್ಮನಸಿ, ಗರ್ಭಿಣಿ
ಬೆರಗ - ನಿಶ್ಚೇಷ್ಟತೆ, ಮರಗಟ್ಟು
ಬೆರಳಿ - ಬೆಳ್ಳಿ
ಬೇಡಿಕೋದೆ - ಬೇಡಿಕೊಳ್ಳದೆ
ಬೊಬ್ಬರಿಯ (ಬೊಬ್ಬರಿ, ಬೊಬ್ಬರಿಯಾಕೆ) - ?
ಭೀಮನಗ್ಗುಣೆಂದು - ಭೀಮ+ಅಪ್ಪುವಣೆ ? ಭೀಮ ಹೆಸರಿನ ಸ್ನಾನದ ನೀರು
ಭುಜಬೀಸು - ದೊಡ್ಡ ಒರಗುದಿಂಬು
ಮಂಟಿ - ಮಟ್ಟಿ, ಮಣ್ಣು, ಕೆಮ್ಮಣ್ಣು
ಮಂಡಿ ಮರೋವಬಲ - ಮಂದಿಮಾರ್ಬಲ
ಮಂತೂ - ಮತ್ತೂ, ಇನ್ನಷ್ಟು
ಮಗಿ - ಮೊಗೆ, ಮಣ್ಣಿನ ಚಿಕ್ಕಪಾತ್ರೆ
ಮಚ್ಚಿ - ಮೊಚ್ಚೆ, ಚಪ್ಪಲಿ
ಮರನೂರ - ಒಂದು ಊರು

ಮರುಗಾಗಿ - ಮರುಗಿ
ಮರಮಾಸ (ಮರುಮಾಯಸ) - ಮರೆ ಮೋಸ
ಮಸರ ಕಟಿಗೆ - ?
ಮಳ್ಳ (ಮಳ್ಳಿಸು) - ಮರಳಿಸು, ಕುದಿಸು
ಮಾನುಭಂಗ - ಕಷ್ಟ
ಮಾರದ್ಹೆಣ್ಣು - ಮಾರಿದ ಹೆಣ್ಣು ?
ಮಾರುಹೋದ್ರು - ಹಾಳಾಗು, ಬೀಳುಬಿಡು
ಮ್ಯಾಕೆ - ಮೇಕೆ, ಆಡು
ಮಾನ್ನೇವು - ಮಾನ್ಯ, ಕೊಡುಗೆ, ದಾನವಾಗಿ ನೀಡಿದ ಭೂಮಿ
ಮುಗ್ಗಲು ರಾಗಿ - ಮುಗ್ಗಿಹೋಗಿರುವ ರಾಗಿ, ಬೂಸ್ಟು ಬಂದಿರುವ ರಾಗಿ
ಮುಟ್ಟಳಿಲಿ - ಮುಟ್ಟು ಅಳಿಯಲಿ, ಶುದ್ಧಿಯಾಗಲಿ
ಮುದ್ದುರಿಕೆ - ಮುದ್ರಿಕೆ
ಮುರವಾಡೆ ಸಿಂಗಯ್ಯ - ಒಬ್ಬ ದೇವತೆ
ಮೂಡಲಂಕಾದಲ್ಲಿ - ಮೂಡಲ ಅಂಕಣದಲ್ಲಿ
ಮೂರ್ತ ಮಾಡಕೊಂಡು - ಮುಹೂರ್ತ ಮಾಡಿಕೊಂಡು, ಕುಳಿತುಕೊಂಡು
ಮಿಂಚಿಸು - ಮೇಲಾಗು
ಮಿಕ್ಕದಲನ್ವಾ - ಮಿಕ್ಕದ ಅನ್ನವನ್ನು, ಉಳಿದ ಅನ್ನವನ್ನು
ಮೆಚ್ಚುತಯ್ಯಾ - ಮೆಚ್ಚಿಕೆಯಾಯಿತೇ
ಮೇಗಾಯಿ - ಮಾಗಾಯಿ ಆಭರಣ
ಮೇಟುಗತ್ತಿ - ಒಂದು ಬಗೆಯ ಆಯುಧ
ಮೇಲು ದೀವಟಿಗೆ - ಇಂದಿನ ಲಕ್ಷ ದೀಪೋತ್ಸವದಂತಹ ವೈಭವಪೂರ್ಣ ದೀಪಗಳ ಸೇವೆ
ಮೇಲು ಮಡಿ - ಮೇಲು ಮಹಡಿ
ಮೊಕ ಬೋಜಣ - ಮುಖ ಮಜ್ಜನ, ಮುಖ ತೊಳೆದು
ಮೊಗ - ಮಗು
ಮೊನುಗಾರ - ವೀರ
ಯರ್ಥ - ವ್ಯರ್ಥ
ಯಾಲಂಕ - ಯಲಹಂಕ
ರಂಪೆ - ಹೊಲೆಯುವ ಸಾಧನ
ರಣ ಮ್ಯಾಳ - ಯುದ್ಧ ಭೂಮಿ
ರಾಮನಗ್ಗಣಿ - ರಾಮನ ಹೆಸರಿನಲ್ಲಿ ಬಳಸಿದ ಸ್ನಾನದ ನೀರು
ರಾಮರೈತ - ಅಧಿಕ ರಕ್ತ ಬರುವಂತೆ ಮೈಕೈ ಪರಚಿಕೊಂಡು
ರಾವ್ತ (ರಾವುತ) - ಕುದುರೆ ಸವಾರ
ಲಾಂಟಾನ - ಲ್ಯಾಂಟ್ರಿನ್, ದೀಪ
ಲಾಲುಬತ್ತಿ - ?

ಲಾಳಮುಂಡಿಗೆ - ಬಾಗಿಲನ್ನು ಭದ್ರಪಡಿಸಲು ಬಳಸುವ ಅಗುಳಿ, ತಾಳು
ವಂಕಿ - ತೋಳಿನ ಆಭರಣ
ವಕುನಾವಾ - ವಾಕ್ಯವನ್ನು, ಮಾತನ್ನು
ವತ್ತು - ಹೊತ್ತು, ವೇಳೆ
ವಯ್ಯೋಗದ - ವಯಸ್ಸು ಆಗದ
ವಯ್ಯೋಗದ ಕಾಲ (ವಯಸೋಗದ ಕಾಲ) - ವೈಶಾಖ ಮಾಸದ ಕಡು ಬೇಸಗೆಯ ಕಾಲ
ವಸ್ತು - ಪ್ರಾಣ
ವಾಜಗಲೆ - ಭಾಗವಾಗಲಿ
ವಾಮ - ಹೋಮ
ವಾರೆಯಾಗಿ (ವಾರ‍್ಯಾಗಿ) - ಪಕ್ಕಕ್ಕೆ, ಮರೆಯಾಗಿ
ವಾಲಿಕಾರ - ಓಲೆಕಾರ, ಸರಕಾರದ ಒಬ್ಬ ನೌಕರ
ವಿದ್ಯು - ಯುದ್ಧ
ಸಂಚರಣೆ - ?
ಸಂದಿ - ಜಾಗ, ದಾರಿ
ಸಂದೀನ - ಸೇರಿಕೊಂಡಿರುವ
ಸಂಬಳಗೇರಿ - ಸಂಬಳ ಪಡೆಯುವವರು ವಾಸವಾಗಿರುವ ಕೇರಿ
ಸಗತಿ - ಶಕ್ತಿ
ಸಗಳಿಕಟ್ಟೆ - ಸೆಗಣಿಕಟ್ಟೆ
ಸತ್ತೀಕರು - ಸಾತ್ವಿಕರು, ಸತ್ಯವಂತರು
ಸಮುನೆ - ಸಮನಾಗಿ
ಸಯನಾಗಿ - ಸಹಿತವಾಗಿ
ಸರಗಿ - ಸರಿಗೆ, ಒಂದು ಆಭರಣ
ಸರಪ - ಸರ್ಪ
ಸರಳೆಮ್ಮೆ - ಉತ್ತಮ ಜಾತಿಯ ಎಮ್ಮೆ
ಸರಿಬೋಜುಗಲ್ಲು - ಸರಿಹೊಂದುವ ಬೋದಿಗೆ ಕಲ್ಲು
ಸರುಮುರು - ?
ಸರುನೂರು ಬಳಾ - ?
ಸಲಾಮುಹೊಡೆ - ನಮಸ್ಕಾರ ಮಾಡು
ಸಲ್ಲುಸಕೊಂಡು - ಸೇವಿಸಿಕೊಂಡು
ಸವಡು - ?
ಸಸಿವಾರ - ?
ಸಾಕಾರ - ಸಹಕಾರ
ಸಾಯ - ಸಹಾಯ
ಸಾಲುಗ - ಸಾಲಾಗಿ

ಸ್ವಾಕ - ಶೋಕ
ಸ್ವಾಮಾರು - ಸೋಮವಾರ
ಸಿರಸ - ಶಿರಸ್ಸನ್ನು, ತಲೆಯನ್ನು
ಸೀವಳ - ?
ಸುಟ್ಟ ಸುಕ್ರವಾರ - ಸುಟ್ಟ ಶುಕ್ರವಾರ
ಸುಟು ಸುಡನೆ - ಸೀದುಹೋಗು, ಸುಟ್ಟುಹೋಗು,
ಸುಟ್ಟು ಸುಳದು ಹೋಯಿತು - ತೋಟ ಸೀದು ಹೋಯಿತು, ಬಾಡಿಹೋಯಿತು
ಸುಣ್ಣಚ್ಚಿ - ಸುಣ್ಣ ಹಚ್ಚಿ, ಸುಣ್ಣ ಸವರಿ
ಸುದಾ - ಕೂಡ
ಸುರುವನ್ನೆ - ಸುರಹೊನ್ನೆ
ಸುರುಸಾಂತಗೆ - ಸುರಸೇವಂತಿಗೆ
ಸುಳುಸುಟ್ಟಿಹೋಗು - ಸುಳಿಸುಟ್ಟುಹೋಗು
ಸೂರದೇವ - ಸೂರ್ಯದೇವ
ಸೆಲ್ಲೆ ಉತ್ತಂಸ - ಮೇಲು ಮುಸುಕು, ತಲೆಯ ಮೇಲೆ ಹಾಕಿಕೊಳ್ಳುವ ಬಟ್ಟೆ
ಸೇತು - ಸ್ವತ್ತು
ಸೈತ - ಸಹಿತ
ಸೈನಿಕ್ಕು - ಸಹಿಮಾಡು
ಸೈವಾಗಿ - ಸಹಿತ
ಸೊಲ್ಲು - ಮಾತು
ಹಕ್ಕೆಂಡು - ಹಾಕಿಕೊಂಡು
ಹಡದಿ - ಅಡವಿ
ಹಂಡೆಹೋಯ್ತು - ಹರಡಿ ಹೋಯಿತು, ಚೆಲ್ಲಿತು.
ಹಡೆ - ಹೆರು, ಜನ್ಮಕೊಡು
ಹರುಳು - ಅರಳಿಸು, ಬಿಡಿಸು
ಹಲ್ಲುತಿನ್ನು - ಹಲ್ಲುಕಡಿ, ಸಿಟ್ಟಿಗೇಳು
ಹಸರಕಟಗೆಯವರು - ಅರಮನೆ ಸಿಬ್ಬಂದಿಯ ಒಂದು ವರ್ಗ
ಹಾಗಲಿ - ?
ಹಾಲುಬಾಸೆ - ಹಾಲುಭಾಷೆ, ಹಾಲುಮುಟ್ಟಿ ಪ್ರಮಾಣಮಾಡುವುದು
ಹಾಸುನಾಡೆ - ಹಾಸುನಡೆ, ದಿಂಡುಗೆಡೆ, ಕಾಲಿನ ಮೇಲೆ ಬೀಳು
ಹಾಸವಾಸಿ - ಸಾಷ್ಟಾಂಗ ನಮಸ್ಕಾರ ಮಾಡಿ
ಹಾಳೂಟ್ಟು - ?
ಹಿಂಕಣ್ಣು - ಹಿಂದಕ್ಕೆ ಚಿಮ್ಮು
ಹಿಂಡಿನ ಜಗಳ - ಗುಂಪಿನ ಜಗಳ, ಗುಂಪು ಯುದ್ಧ
ಹುರುಪು - ಬೊಬ್ಬೆ, ಗಂಧೆ

ಹುಳ್ಳಿ ಕಳ್ಳೆ - ಹುರುಳಿಕಡಲೆ
ಹೆಬ್ಬೂರ - ಹೆಬ್ಬಾರೆ
ಹೊಚ್ಚು - ಮುಚ್ಚು
ಹೊಡಗಾಯಿ - ಹೊಡೆಗಾಯಿ, ಹೊಡೆದ ತೆಂಗಿನ ಕಾಯಿ
ಹೊಡೆಗೊಡಲಿ - ಹೊಡೆಯುವ ಕೊಡಲಿ, ಕತ್ತರಿಸಲು ಬಳಸುವ ಕೊಡಲಿ
ಹೊದುಪಾ - ಹೊದಿಕೆ
ಹೊಳಕಿ ಮುರಿದು - ?

ಸಿದ್ಧತೆ : **ಪ್ರೊ॥ ಡಿ. ಲಿಂಗಯ್ಯ**
ಸಹಾಯ : **ಶ್ರೀಮತಿ ಸರ್ವಮಂಗಳ**

*****

ಪ್ರಸ್ತುತ 'ಚಾರಿತ್ರಿಕ ಜನಪದ ಕಥನ ಕಾವ್ಯಗಳು' ಗ್ರಂಥದಲ್ಲಿ ಚಾರಿತ್ರಿಕ ವ್ಯಕ್ತಿ, ಘಟನೆಗಳು ಪ್ರಧಾನವಾಗಿವೆ. ಇವು ಜನಪದ ಗಾಯಕರ ಕಲ್ಪನಾ ವಿಹಾರದಲ್ಲಿ ಮರುಹುಟ್ಟು ಪಡೆದುಕೊಂಡಿವೆ; ಜನಸಾಮಾನ್ಯರ ಗ್ರಹಿಕೆಗೆ ಹತ್ತಿರವಾಗಿ ಮೆಚ್ಚುಗೆ ಪಡೆದಿವೆ; ಇತಿಹಾಸದ ಪುನಾರಚನೆಗೆ ಆಕರವಾಗಿವೆ; ತೌಲನಿಕ ಅಧ್ಯಯನಕ್ಕೆ ಇಂಬಾಗಿವೆ. ರಾಜ್ಯದ ಬೇರೆ ಬೇರೆ ಪ್ರದೇಶಗಳನ್ನು ಪ್ರತಿನಿಧಿಸುವ ಈ ಸುದೀರ್ಘ ಕಥನಕಾವ್ಯಗಳಲ್ಲಿ ಜನಪದ ಆಶಯಗಳು ದಟ್ಟವಾಗಿವೆ.
ಸಾಮಾನ್ಯ ಓದುಗರಿಗೂ ತಲುಪಬೇಕೆಂಬ ಸದುದ್ದೇಶದಿಂದ ಸ್ಥೂಲವಾದ ಕಥಾ ಸಾರಾಂಶವನ್ನೂ ವಿವರವಾದ ಅರ್ಥಕೋಶವನನ್ನೂ ಗಾಯಕರ ಪರಿಚಯವನ್ನೂ ಕೊಟ್ಟಿದೆ. ನಮ್ಮ ಸಾಂಸ್ಕೃತಿಕ ಅಧ್ಯಯನಕ್ಕೂ ಇವು ಆಕರವಾಗುತ್ತವೆ. ಈ ಸಂಗ್ರಹದಲ್ಲಿ ಒಂಬತ್ತು ದೀರ್ಘ ಕಥಾನಕಗಳು, ನಾಲ್ಕು ಕಿರು ಗೀತೆಗಳು ಸೇರಿವೆ.

ಪ್ರೊ. ಡಿ. ಲಿಂಗಯ್ಯ


ಕರ್ನಾಟಕ ಜಾನಪದ ಪರಿಷತ್ತು

ಜಾನಪದ ಸಿರಿಭುವನ
ನಂ.1, ಜಲದರ್ಶಿನಿ ಬಡಾವಣೆ,
ಎಂ. ಎಸ್. ರಾಮಯ್ಯ ಆಸ್ಪತೆ ಮಹಾದ್ವಾರದ ಹತ್ತಿರ,
ಹೊಸ ಬಿ ಇ ಎಲ್ ರಸ್ತೆ, ಬೆಂಗಳೂರು-5600054
ದೂರವಾಣಿ: 080-23605033 email:janapadaparishath@hotmail.com